# ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ

(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ)

---

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಮಹಾಪ್ರಬಂಧ


ಸಂಶೋಧಕರು

**ಶಿವಾನಂದ ಎಚ್. ಬಂಟನೂರ**

ಮಾರ್ಗದರ್ಶಕರು

**ಡಾ. ಎಸ್. ಸಿ. ಪಾಟೀಲ**





ಶಿಲ್ಪ ಮತ್ತು ವರ್ಣಚಿತ್ರ ಕಲಾ ವಿಭಾಗ

**ಲಲಿತಕಲಾ ನಿಕಾಯ**

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**ವಿದ್ಯಾರಣ್ಯ - ೫೮೩ ೨೭೬.**

**೨೦೦೨**

62

# ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ

( ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ )

---

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಮಹಾಪ್ರಬಂಧ


ಸಂಶೋಧಕರು

**ಶಿವಾನಂದ ಎಚ್. ಬಂಟನೂರ**

ಮಾರ್ಗದರ್ಶಕರು

**ಡಾ. ಎಸ್. ಸಿ. ಪಾಟೀಲ**

ಪ್ರವಾಚಕರು ಮತ್ತು ಮುಖ್ಯಸ್ಥರು

ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ





**ಲಲಿತಕಲಾ ನಿಕಾಯ**

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**ವಿದ್ಯಾರಣ್ಯ - ೫೮೩ ೨೭೬.**

**೨೦೦೨**

# ಪ್ರಮಾಣ ಪತ್ರ

**ಶಿವಾನಂದ ಎಚ್. ಬಂಟನೂರ** ಇವರು ಬರೆದು ಸಾದರಪಡಿಸಿದ **"ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ"** ( ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ ) ಎಂಬ ವಿಷಯದ ಕುರಿತ ಈ ಮಹಾ ಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಅವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗದಲ್ಲಿ ಸಂಶೋಧನೆ ನಡೆಸಿ ಈ ಮಹಾ ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಈ ಸಂಶೋಧನ ಮಹಾಪ್ರಬಂಧವನ್ನು ಇಡಿಯಾಗಿ ಇಲ್ಲವೆ, ಬಿಡಿಯಾಗಿ ಮೊದಲು ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ಪ್ರಮಾಣಪತ್ರ ನೀಡಿರುತ್ತೇನೆ.

ದಿನಾಂಕ : ೨೦-೫-೨೦೦೭

ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಶಾಖೆ : ಬನಶಂಕರಿ - ಬಾದಾಮಿ.

( ಡಾ. ಎಸ್.ಸಿ. ಪಾಟೀಲ )
ಮಾರ್ಗದರ್ಶಕರು.

# ಘೋಷಣಾ ಪತ್ರ

"**ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ** " ( ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ ) ಎಂಬ ಶಿರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ **ಡಾ. ಎಸ್.ಸಿ. ಪಾಟೀಲ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ವೊದಲು ಬೇರಾವುದೇ ಪದವಿಗಾಗಲಿ, ಇಲ್ಲವೆ ಇತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತೇನೆ.

ದಿನಾಂಕ : 20.5.02.
ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಶಾಖೆ : ಬನಶಂಕರಿ - ಬಾದಾಮಿ.

**( ಶಿವಾನಂದ ಎಚ್. ಬಂಟನೂರ )**
ಸಂಶೋಧನ ವಿದ್ಯಾರ್ಥಿ

[illegible]

[illegible]

[illegible]

# ಅರಿಕೆ

ನಾನು ಮೂಲತಃ ಸೃಜನಶೀಲ ಮನೋಧರ್ಮದ ವಿದ್ಯಾರ್ಥಿ. ಚಿತ್ರ ಹಾಗೂ ಶಿಲ್ಪಗಳನ್ನು ರಚಿಸುವುದು, ಕಲಾಪ್ರದರ್ಶನಗಳಲ್ಲಿ ಭಾಗವಹಿಸುವುದು ಜೊತೆಗೆ ಕಲಾ ವಿಮರ್ಶೆಗಳನ್ನು ಬರೆದು ಪ್ರಕಟಿಸುವುದು ನನ್ನ ಮೂಲ ಆಸಕ್ತಿಗಳು. ಈ ಆಸಕ್ತಿಗಳು ನನ್ನಲ್ಲಿ ಚಿಗುರೊಡೆದದ್ದು ಧಾರವಾಡದ ಸಾಂಸ್ಕೃತಿಕ ಪರಿಸರದಲ್ಲಿ. ೧೯೮೬ರಲ್ಲಿ ನಾನು ಪ್ರಥಮ ಬಾರಿಗೆ ಧಾರವಾಡಕ್ಕೆ ಓದಲು ಕಾಲಿಟ್ಟಾಗ ನನ್ನನ್ನು ಆಕರ್ಷಿಸಿದವುಗಳೆಂದರೆ ಚಿತ್ರಕಲೆ ಮತ್ತು ಸಾಹಿತ್ಯ ಕ್ಷೇತ್ರಗಳು. ಹೀಗಾಗಿ ನನ್ನ ವ್ಯಾಸಂಗವು ಈ ಎರಡೂ ಕ್ಷೇತ್ರಗಳಲ್ಲಿ ಮುಂದುವರೆಯಿತು. ಕರ್ನಾಟಕ ಕಾಲೇಜಿನಿಂದ ಸಾಹಿತ್ಯದಲ್ಲಿ ಪದವಿ ಮುಗಿದ ಮೇಲೆ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿ ಅಧ್ಯಯನವನ್ನು ಮುಂದುವರೆಸಿದೆನು. ನಂತರ ೧೯೯೦ ರಲ್ಲಿ ಬೆಂಗಳೂರಿನ ಕೆನ್ ಕಲಾಶಾಲೆ ಸೇರಿ ಕಲೆಯ ಉನ್ನತ ಅಧ್ಯಯನದಲ್ಲಿ ತೊಡಗಿದೆನು. ಹಿರಿಯ ಕಲಾವಿದ ಆರ್.ಎಂ. ಹಡಪದರವರ ಮಾರ್ಗದರ್ಶನದಲ್ಲಿ ಚಿತ್ರಕಲೆ ಓದುತ್ತಿರುವಾಗಲೇ ಶಿಲ್ಪರಚನೆಯ ಗೀಳೂ ಬಲಗೊಂಡಿತು. ೧೯೯೧ ರಲ್ಲಿ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ನನ್ನ ಶಿಲ್ಪಗಳ ಪ್ರದರ್ಶನವೂ ಏರ್ಪಟ್ಟಿತು. ಮುಂದೆ ಶಿಲ್ಪಿಯಾಗಿಯೇ ಹೆಚ್ಚು ಗುರುತಿಸಿಕೊಳ್ಳುವಂತಾಯಿತು. ಧಾರವಾಡದಲ್ಲಿ ಗೆಳೆಯರೊಂದಿಗೆ ಸೇರಿ ಸೃಜನ ಕಲಾ ಸಂಸ್ಥೆಯನ್ನು ಹುಟ್ಟು ಹಾಕಿ ದೃಶ್ಯಕಲಾ ಕಾಲೇಜೊಂದನ್ನು ಆರಂಭಿಸಿ ಐದು ವರ್ಷ ಉಪನ್ಯಾಸಕನಾಗಿ ಸೇವೆ ಸಲ್ಲಿಸಿದ್ದೂ ಆಯಿತು. ಈ ಹಂತದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನೂ ಮುಗಿಸಿದೆ.

ಇಷ್ಟೆಲ್ಲಾ ಅವಸ್ಥಾಂತರಗಳ ಉದ್ದಕ್ಕೂ ನನ್ನ ಬೆಳವಣಿಗೆಯ ಹಿಂದಿದ್ದು ಗಮನಿಸುತ್ತ ಬಂದವರು ಡಾ. ಎಸ್.ಸಿ. ಪಾಟೀಲರು. ಯೋಗಾಯೋಗವೆನ್ನಬೇಕು, ಡಾ. ಪಾಟೀಲರು ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದಲ್ಲಿ ರೀಡರ್ ಆಗಿ ಇದೇ ಸಂದರ್ಭದಲ್ಲಿ ನೇಮಕಗೊಂಡರು. ಆಮೇಲೆ ಸಂಶೋಧನೆಯತ್ತ ನನ್ನನ್ನು ಸೆಳೆದುಕೊಂಡರು. ನನಗೆ ಮಾರ್ಗದರ್ಶಕರೂ ಆದರು.

ಅಕಡೆಮಿಕ್ ಕಲಾ ಶಿಕ್ಷಣ ಪಡೆದೂ ಸಮಕಾಲೀನ ಸೃಜನಶೀಲ ಕಲಾ ಕೃಷಿಯಲ್ಲಿ ತೊಡಗಿಕೊಂಡಿದ್ದವನು ನಾನು. ಹೀಗಾಗಿ ಆರಂಭದಲ್ಲಿ ಈ ಪ್ರಬಂಧದ ವಿಷಯದಲ್ಲಿ ನನಗೆ ಒಲವು ಮೂಡಿರಲಿಲ್ಲ. ಹಿಂದಿನ ಕುಲಪತಿಗಳಾಗಿದ್ದ ಡಾ. ಎಂ.ಎಂ. ಕಲಬುರ್ಗಿಯವರಲ್ಲಿ ಹೋಗಿ ವಿಷಯ ಬದಲಿಸಿಕೊಳ್ಳುವುದಾಗಿ ವಿನಂತಿಸಿಕೊಂಡಿದ್ದೆ. ಅವರೂ ಸಮ್ಮತಿಸಿದ್ದರು. ಆದರೆ, ಮಾರ್ಗದರ್ಶಕರಾದ ಡಾ. ಎಸ್.ಸಿ. ಪಾಟೀಲರು ಅದಕ್ಕೆ ಒಪ್ಪಲಿಲ್ಲ. ಅಲಕ್ಷಿತವಾದ ಈ ಕ್ಷೇತ್ರದ ಅಧ್ಯಯನ ತುಂಬ ಮಹತ್ವದ್ದು ಎಂದು ಹೇಳಿ ನನ್ನನ್ನು ಅಧ್ಯಯನಕ್ಕೆ ಮತ್ತೆ ತೊಡಗಿಸಿದರು. ಅಧ್ಯಯನದುದ್ದಕ್ಕೂ ಅಪಾರವಾದ ತಾಳ್ಮೆಯನ್ನು ನನ್ನಲ್ಲಿ ತುಂಬಿ ತಾವೂ ತಾಳ್ಮೆಯನ್ನು ತೋರಿದ್ದಾರೆ. ಅವರಿಗೆ ಮೊದಲು ನನ್ನ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

[illegible]

[illegible]

[illegible]

[illegible]

ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಎಚ್.ಜೆ. ಲಕ್ಕಪ್ಪಗೌಡ ಅವರು ನನ್ನ ಅಧ್ಯಯನಕ್ಕೆ ಹೆಚ್ಚಿನ ಒಲವು ತೋರಿ ಈ ಮಹಾ ಪ್ರಬಂಧದ ಸಲ್ಲಿಕೆಗೆ ವಿಶೇಷವಾಗಿ ಪ್ರೋತ್ಸಾಹಿಸಿದ್ದಾರೆ. ಅವರಿಗೆ ನನ್ನ ಅನಂತ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಕೆ.ವಿ. ನಾರಾಯಣ ಅವರು ನನ್ನ ಅಧ್ಯಯನದ ಪ್ರಗತಿಯ ಬಗ್ಗೆ ಆಗಾಗ ವಿಚಾರಿಸುತ್ತ ನನ್ನನ್ನು ತುಂಬಾ ಪ್ರೀತಿ ವಿಶ್ವಾಸಗಳಿಂದ ಕಂಡಿದ್ದಾರೆ. ಅವರ ಸಹಾಯ ಸಹಕಾರಗಳನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಅಲ್ಲದೆ ಅಧ್ಯಯನಾಂಗದ ನಿರ್ದೇಶಕರು ಮತ್ತು ಬುಡಕಟ್ಟು ಅಧ್ಯಯನದ ಪ್ರಾಧ್ಯಾಪಕರು ಹಾಗೂ ಆತ್ಮೀಯರು ಆದ ಡಾ. ಹಿ.ಚಿ. ಬೋರಲಿಂಗಯ್ಯ ಅವರೊಂದಿಗೆ ಚರ್ಚಿಸಿ ಹಲವಾರು ರೀತಿಯಲ್ಲಿ ಸಹಾಯ ಪಡೆದಿದ್ದೇನೆ. ಅವರಿಗೆ ನನ್ನ ಅನಂತ ಕೃತಜ್ಞತೆಗಳು. ಹಾಗೆಯೇ ಹಿಂದಿನ ಕುಲಸಚಿವರಾದ ಪ್ರೊ. ಮಲ್ಲೆಪುರಂ ಜಿ. ವೆಂಕಟೇಶ ಅವರಿಗೂ ನನ್ನ ಕೃತಜ್ಞತೆಗಳು. ಮತ್ತು ಲಲಿತಕಲಾ ನಿಕಾಯದ ಡೀನ್ ಪ್ರೊ. ಹನುಮಣ್ಣ ನಾಯಕ ದೊರೆ ಅವರು ನನಗೆ ಹಲವಾರು ರೀತಿಯಲ್ಲಿ ಸಹಕಾರ ನೀಡಿದ್ದಾರೆ, ಅವರಿಗೂ ನನ್ನ ಅನಂತ ಕೃತಜ್ಞತೆಗಳು ಸಲ್ಲುತ್ತವೆ. ಅಲ್ಲದೆ ವಿಶ್ವವಿದ್ಯಾಲಯದ ಎಲ್ಲ ಅಧ್ಯಾಪಕ ವೃಂದದವರ ನೆರವನ್ನು ಪ್ರೀತಿಯಿಂದ ನೆನೆಯುತ್ತೇನೆ. ಮತ್ತು ಅಧ್ಯಯನದುದ್ದಕ್ಕೂ ನನಗೆ ಶಿಷ್ಯವೇತನ ಹಾಗೂ ಗ್ರಂಥಾಲಯದ ನೆರವು ನೀಡಿ ಸಹಕರಿಸಿದ ಕನ್ನಡ ವಿಶ್ವವಿದ್ಯಾಲಯಕ್ಕೆ ನನ್ನ ಅನಂತ ಪ್ರಣಾಮಗಳು ಸಲ್ಲುತ್ತವೆ.

ನನಗೆ ವಿದ್ಯೆ ನೀಡಿದ ಗೋಲಗೇರಿಯ ಶ್ರೀ ಗೊಲ್ಲಾಳೇಶ್ವರ ಸಂಸ್ಥೆ, ಸಿಂದಗಿಯ ಆರ್.ಡಿ. ಪಾಟೀಲ ಮಹಾವಿದ್ಯಾಲಯ, ಧಾರವಾಡದ ಕರ್ನಾಟಕ ಮಹಾವಿದ್ಯಾಲಯ, ಭಾರತೀಯ ಕಲಾ ಕೇಂದ್ರ, ಕರ್ನಾಟಕ ವಿಶ್ವವಿದ್ಯಾಲಯ, ಬೆಂಗಳೂರಿನ ಕೆನ್ ಕಲಾಶಾಲೆ, ಗುಲಬರ್ಗಾದ ಶರಣ ಬಸವೇಶ್ವರ ಲಲಿತಕಲಾ ಸ್ನಾತಕೋತ್ತರ ಕೇಂದ್ರ, ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆ ಮತ್ತು ಗುಲಬರ್ಗಾ ವಿಶ್ವವಿದ್ಯಾಲಯ ಮುಂತಾದ ಸಂಸ್ಥೆಗಳನ್ನು ಪ್ರೀತಿಯಿಂದ ಸ್ಮರಿಸುತ್ತೇನೆ. ಧಾರವಾಡದ ಮುರಘಾಮಠ, ಬೆಂಗಳೂರಿನ ತೋಟದಪ್ಪ ವಿದ್ಯಾರ್ಥಿ ನಿಲಯಗಳು ಅನ್ನ-ಆಶ್ರಯಗಳನ್ನು ನೀಡಿ ಪೋಷಿಸಿವೆ. ಅವುಗಳಿಗೆ ಋಣಿಯಾಗಿದ್ದೇನೆ.

ಪ್ರಸ್ತುತ ಸಂಶೋಧನೆ ಕ್ಷೇತ್ರೀಯ ಅಧ್ಯಯನ, ಹೀಗಾಗಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ನಾನು ಕ್ಷೇತ್ರ ಕಾರ್ಯ ಕೈಗೊಂಡಾಗ ಅನೇಕರು ಮಾಹಿತಿಗಳನ್ನು ನೀಡಿ ಉಪಕರಿಸಿದ್ದಾರೆ. ಅವರ ಮಾಹಿತಿಯ ಮೂಲವೇ ಈ ಸಂಶೋಧನೆಯ ಮೂಲ ಸಂಪತ್ತಾಗಿದೆ. ಅವರೆಲ್ಲರಿಗೂ ನಾನು ಕೃತಜ್ಞತೆಗಳನ್ನು ಸಲ್ಲಿಸದೆ ಇರಲಾರೆ.

ನನ್ನ ಕಲಾ ಗುರುಗಳು ಮತ್ತು ನಾಡಿನ ಖ್ಯಾತ ಕಲಾವಿದರುಗಳಾದ ಡಾ. ಆರ್.ಎಂ. ಹಡಪದ, ಪ್ರೊ. ಜೆ.ಎಸ್. ಖಂಡೇರಾವ್, ಅಧ್ಯಯನಕ್ಕೆ ನೈತಿಕ ಸ್ಥೈರ್ಯ ನೀಡಿ ಸಹಕರಿಸಿದ ಪ್ರೊ. ವ್ಹಿ.ಜಿ. ಅಂದಾನಿ ಅವರುಗಳು, ಸಾಹಿತ್ಯದ ಗುರುಗಳಾದ ಪ್ರೊ. ಬಿ. ವ್ಹಿ. ಗುಂಜೆಟ್ಟಿ, ನನ್ನ ಹಿತೈಷಿಗಳಾದ

ಡಾ. ಎಸ್. ರಾಜಶೇಖರ, ಡಾ. ಬಿ.ಆರ್. ಹಿರೇಮಠ, ಡಾ. ಸಂಪಿಗೆ ತೋಂಟದಾರ್ಯ, ಪ್ರೊ. ವ್ಹಿ.ಜಿ. ಮಾರೀಹಾಳ, ಪ್ರೊ. ಎಂ.ಎಚ್. ಕೃಷ್ಣಯ್ಯ, ಡಾ. ವೀರಣ್ಣ ರಾಜೂರ, ಡಾ. ಎ. ಮುರಿಗೆಪ್ಪ, ಡಾ. ಬಿ.ಕೆ. ಹಿರೇಮಠ, ಪ್ರಿ. ವ್ಹಿ.ಬಿ. ಹಿರೇಗೌಡರ, ಡಾ. ಶೀಲಾಕಾಂತ ಪತ್ತಾರ ಅಲ್ಲದೆ, ನನ್ನ ಶ್ರೇಯಸ್ಸನ್ನು ಬಯಸಿದ ಪೂಜ್ಯ ಗುರುಗಳಾದ ನಿಂಗನಗೌಡ ಪಾಟೀಲ, ಖೈನೂರ. ಬಂಡಾಯ ಸಾಹಿತಿ ಡಾ. ಸಿದ್ಧನಗೌಡ ಪಾಟೀಲ, ಪ್ರೊ. ಶಿವಾನಂದ ಶೆಟ್ಟರ, ರೇಖಾ ಚಿತ್ರ ಬರೆದು ಕೊಟ್ಟ ಪ್ರೊ. ಎಂ.ಆರ್. ಬಾಳೀಕಾಯಿ, ಹಣಕಾಸಿನ ನೆರವು ನೀಡಿದ ಮಾವನವರಾದ ಮೇಲಗಿರಿಯಪ್ಪ ತೇಲಿ, ಅಕ್ಕಲಕೋಟ ಹಾಗೂ ಗೆಳೆಯರಾದ ಆನಂದ ಪೂಜಾರ ಅವರಿಗೆ ವಂದನೆಗಳು.

ಅಧ್ಯಯನದಲ್ಲಿ ನೆರವು ನೀಡಿದ ಸಹೋದರ ಮಹೇಶ ಬಂಟನೂರ, ಗೆಳೆಯರಾದ ಉಮೇಶ ಹಿರೇಮಠ, ಕೆ.ಕೆ. ಮಕಾಳಿ, ಸುಭಾಷ ಕಮ್ಮಾರ, ಎಂ.ಆಯ್. ಬಾರಾವಲಿ, ಶರಣು ಮೈನಾಳ, ಸ್ನೇಹಿತರಾದ ಸಿದ್ದು ಹಿರೇಮಠ, ಡಾ. ಯಾದಪ್ಪ ಪರದೇಶಿ, ಲಕ್ಷ್ಮೀದೇವಿ ಗವಾಯಿ, ವಜೀರ್ ಬಾಷಾ ಬಾಗಾಯತ್, ಶಿವಪ್ರಕಾಶ ತುಕ್ಕಣ್ಣವರ, ಮಲ್ಲಿಕಾರ್ಜುನ ಸಿ. ಬಾಗೋಡಿ, ಶಶಿಕಲಾ ಹೂಗಾರ ಮುಂತಾದವರನ್ನು ಸ್ಮರಿಸದೆ ಇರಲಾರೆ.

ನನ್ನ ಬೆಳೆವಣಿಗೆಗೆ ತಮ್ಮ ಜೀವ ಸವೆಸಿದ ತಾಯಿ ಶಾಂತಾಬಾಯಿ, ತಂದೆ ಶ್ರೀ ಹನಮಂತರಾಯ, ಚಿಕ್ಕಮ್ಮ ಶಕುಂತಲಾ ಬಿ. ಮಸಳಿ, ಆರ್ಥಿಕವಾಗಿ ಸದಾ ನನ್ನ ಬೆನ್ನೆಲುಬಾಗಿರುವ ಅಣ್ಣ ಕಾರ್ಗಿಲ್ ಯೋಧ ಅಣ್ಣಾರಾಯ ಅಲ್ಲದೆ ತಮ್ಮಂದಿರಾದ ಅಮೃತ, ಶ್ರೀಮಂತ, ತಂಗಿ ಸುಲೋಚನಾ ಹಾಗೂ ನನ್ನ ಬಾಳ ಸಂಗಾತಿ ಅಲಕಾ ಅವರೆಲ್ಲರ ಋಣವನ್ನು ತೀರಿಸಲು ಸಾಧ್ಯವೇ ? ಅವರನ್ನು ನೆನೆಸಿಕೊಳ್ಳುವುದರಲ್ಲೇ ಪರಮ ಸಂತೋಷ ಅಡಗಿದೆ.

ನಮ್ಮ ವಿಭಾಗದ ಸಿಬ್ಬಂದಿಗಳಾದ ಭಾಸ್ಕರ, ದೇಶಪಾಂಡೆ, ಶಿವಾನಂದ, ವಸಂತ, ಕಟ್ಟಿ, ಬಸಯ್ಯ ಹಾಗೂ ವಿದ್ಯಾರ್ಥಿಗಳಿಗೆ ಹಾಗೂ ಡಿ.ಟಿ.ಪಿ. ಮಾಡಿದ ಇಲಕಲ್ಲಿನ ಗೆಳೆಯ ಚಂದ್ರಶೇಖರ ಮಾಳಿ, ಸುಂದರವಾಗಿ ಬೈಂಡಿಂಗ್ ಮಾಡಿದ ಗೆಳೆಯ ಎಸ್. ವ್ಹಿ. ಪಾಟೀಲ ಹಾಗೂ ಪರೋಕ್ಷ-ಅಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ವಂದನೆಗಳು.

**- ಶಿವಾನಂದ ಎಚ್. ಬಂಟನೂರ**

## ಪರಿವಿಡಿ

ಅಧ್ಯಾಯ : ಒಂದು

# ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನ

ಸಂಸ್ಕೃತಿ ಎನ್ನುವುದು ಸಮೂಹ ಸಮ್ಮತ ಜೀವನ ಪದ್ಧತಿಯಾಗಿದೆ. ಮಾನವ ಕುಲದ ಇಂತಹ ಜೀವನ ಪದ್ಧತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಸಂಸ್ಕೃತಿ ಯಾವುದೇ ಒಬ್ಬ ವ್ಯಕ್ತಿಯ ಸ್ವಂತ ಆಸ್ತಿಯಲ್ಲ. ಅದು ಜನಪದಕ್ಕೆ ಸೇರುವಂತಹುದು. ಹೀಗಾಗಿ ಸಂಸ್ಕೃತಿ ಸಮಷ್ಠಿಯ ಸ್ವತ್ತು ಎನಿಸಿಕೊಳ್ಳುತ್ತದೆ. ಜನಪದ ಕಲೆಯೆನ್ನುವುದು ಇಂಥ ಸಂಸ್ಕೃತಿಯ ಒಂದು ಅಂಶವಾಗಿದೆ[೧] ಎಂಬ ಮಾತು ಅರ್ಥಪೂರ್ಣವಾದುದಾಗಿದೆ.

ದೈನಂದಿನ ಬದುಕು ಹಸನಾಗಿ ಸಾಗುವಂತೆ ಒಂದು ಸೂತ್ರದಲ್ಲಿ ಯಾವುದು ಬಂಧಿಸಿದೆಯೋ ಅದು ಧರ್ಮ,[೨] ಈ ಧರ್ಮ ಪ್ರಜ್ಞೆಯ ಹಿನ್ನೆಲೆಯಲ್ಲಿ ಹಲವಾರು ಆಚಾರ, ವಿಚಾರ, ಸಂಪ್ರದಾಯ, ನಂಬಿಕೆ, ಮೌಲ್ಯಗಳು ಹುಟ್ಟಿಕೊಂಡಿವೆ. ಅನುಸರಣೆ, ಆಚರಣೆಯ ಸಂದರ್ಭದಲ್ಲಿ ಮನುಷ್ಯನ ಕ್ರಿಯಾಶೀಲ ಮನಸ್ಸು ಹಲವಾರು ರೀತಿಯ ಸೃಜನಶೀಲ ಸೃಷ್ಟಿಕ್ರಿಯೆಯಲ್ಲಿ ತೊಡಗಿಕೊಂಡಿದೆ. ಇದರ ಫಲಶೃತಿಯಾಗಿ ಅನೇಕ ಕಲೆಗಳು ಹುಟ್ಟಿಕೊಂಡಿವೆ. ಲಲಿತ ಕಲೆಗಳಾದ ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ, ನೃತ್ಯ, ನಾಟಕ, ವಾಸ್ತು ಕಲೆಗಳು ವಿಶೇಷವಾಗಿ ಸಂಸ್ಕೃತಿಯ ವೈಭವದ ಕುರುಹುಗಳಾಗಿ ಬೆಳೆದು ಬಂದಿವೆ.

ಮನುಷ್ಯ ತಾನಿರುವ ಸ್ಥರದಿಂದ ಬದುಕನ್ನು ಎತ್ತರಿಸಿಕೊಳ್ಳಲು, ಸುಂದರವಾಗಿರಿಸಿಕೊಳ್ಳಲು, ಜಢತ್ವದಿಂದ ಚೈತನ್ಯದೆಡೆಗೆ ಸಾಗಿ ಮಹೋನ್ನತಿಯನ್ನು ಸಾಧಿಸಲು ನಿರಂತರ ಪ್ರಯತ್ನ ಮಾಡುತ್ತಲೇ ಬಂದಿದ್ದಾನೆ. ಅವನು ಪರಿಶ್ರಮದಿಂದ ರೂಢಿಸಿಕೊಂಡು ಬಂದ ಈ ಕಲೆಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಮುಖ್ಯವಾಗಿ ಜನಪದ ಮತ್ತು ಶಿಷ್ಟಪದವೆಂದು ವಿಂಗಡನೆ ಮಾಡಿ ಅಧ್ಯಯನ ಮಾಡಬೇಕು. ಶಿಷ್ಟಾಚಾರಗಳ ಚೌಕಟ್ಟಿನಲ್ಲಿ, ನಿಸರ್ಗದ ಬದುಕನ್ನು ನಡೆಸಿಕೊಂಡು ಬಂದ ನಗರ ಜನತೆಯ ಕಲೆ ಶಿಷ್ಟಪದ ಕಲೆ ಎನಿಸಿದರೆ, ನಿಸರ್ಗ ಸಹಜವಾದ ಬದುಕನ್ನು ನಡೆಸಿಕೊಂಡು ಬಂದ ಗ್ರಾಮೀಣ ಜನತೆಯ ಕಲೆ ಜನಪದ ಕಲೆ ಎನಿಸುತ್ತದೆ.

ಜನಪದ ಕಲೆಗಳು ಮುಖ್ಯವಾಗಿ ಧಾರ್ಮಿಕ ಹಿನ್ನೆಲೆಯಲ್ಲಿ ಬೆಳೆದು ಬಂದಂಥವುಗಳು. ಅವುಗಳ ಕೊಡುಗೆ ತುಂಬ ಮೌಲಿಕವಾದುದಾಗಿದೆ.

---

೧. ಡಾ. ಬಿ.ಆರ್. ಹಿರೇಮಠ : ಕರ್ನಾಟಕದ ಜನಪದ ಕಲೆಗಳು, ಕರ್ನಾಟಕ ಭಾರತಿ : ೧೨-೪, ಪುಟ - ೬೯

೨. ಡಾ. ಎಸ್.ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ - ೩

[illegible]

[illegible]

[illegible]

[illegible]

[illegible]

ನಮ್ಮ ಪರಂಪರೆಯ ನೈಜ ಬೇರುಗಳು ಹುದುಗಿರುವುದು ಜನಪದ ನೆಲದಲ್ಲಿ. ಆಧುನಿಕತೆಯ ಬೆಡಗು ಬಿನ್ನಾಣಗಳಿಗೆ ಪಕ್ಕಾದ ನಗರ ಪದದಲ್ಲಿ ಆ ಪರಂಪರೆಯ ಪರಿಸ್ಕೃತ ಇಲ್ಲವೆ ಕೃತಕ ರೂಪವೇ ನಮಗೆ ಕಂಡೀತು.[೩] ಮತ್ತು ಜಾನಪದವು ಮೂಲತಃ ಜನತೆಯ ಒಡೆತನಕ್ಕೆ ಅಧೀನವಾದ ಜನತೆಯಿಂದ ಹುಟ್ಟಿದ ಮತ್ತು ಜನತೆಗಾಗಿ ಇರುವ ಸೊತ್ತು[೪] ಎನ್ನುವ ಡಾ. ಬಿ.ಬಿ. ಹೆಂಡಿಯವರ ಮಾತಿನಲ್ಲಿ ಸತ್ಯಾಂಶವಿದೆ.

ನಗರ ನಿಯಂತ್ರಿತ ಜನಾಂಗಕ್ಕಿಂತ ನಿಸರ್ಗ ನಿಯಂತ್ರಿತ ಜನಾಂಗದಲ್ಲಿ ಮಾನವನ ಪ್ರಾಕೃತಿಕ ಪ್ರಜ್ಞೆಗಳು ದಟ್ಟವಾಗಿ ನೆಲೆ ನಿಂತಿರುತ್ತವೆ. ಇಂಥ ಜನಾಂಗವೇ ಜನಪದ[೫] ಎನ್ನುತ್ತ ಡಾ. ಎಂ.ಎಂ. ಕಲಬುರ್ಗಿಯವರು, ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ಜಾನಪದಕ್ಕೆ ಪ್ರಮುಖ ಸ್ಥಾನ ಕಲ್ಪಿಸಬೇಕೆಂಬುದನ್ನು ಒತ್ತಿ ಹೇಳಿದ್ದಾರೆ. ವಾಸ್ತವವಾಗಿ ಜನಪದರು ಯಾವುದನ್ನು ಬದುಕಿದರೋ ಅದನ್ನು ಹಾಡಿದರು ಮತ್ತು ಅದನ್ನು ಮುಂದಿನ ಪೀಳಿಗೆಯ ಆಚರಣೆಗೂ ವಸ್ತು ಮಾಡಿದರು. ಈ ಆಚರಣೆಯ ಗರ್ಭದಲ್ಲಿ ಗ್ರಾಮೀಣ ಜನತೆಯ ಬದುಕು ನೂರಾರು ಕಲೆಗಳ ಹುಟ್ಟಿಗೆ ಕಾರಣವಾಯಿತು. ತಮಗೆ ಚಂದ ಕಂಡಂತೆ ಮನಸ್ಸು ಮುದಗೊಳ್ಳುವಂತೆ ಜನಪದರು ತಮ್ಮದೇ ಆದ ಕಲಾ ಬದುಕು ಬದುಕುವಾಗ, ಅವರಿಟ್ಟ ಹೆಜ್ಜೆಗಳು ನಿಶ್ಚಿತ ರೂಪ ತಾಳಿ, ಶಿಷ್ಟರಲ್ಲಿ ಆಕರ್ಷಕವಾಗಿ ಗಟ್ಟಿಗೊಂಡವು. ಆಯಾ ಪ್ರದೇಶದ ಆಯಾ ಜನಾಂಗಗಳು ತಮ್ಮ ಮನೋಭಿರುಚಿಗೆ ಒಳಪಟ್ಟ ಮತ, ಧರ್ಮ, ಸಂಪ್ರದಾಯಗಳ ಪ್ರಭಾವದ ಹಿನ್ನೆಲೆಯಲ್ಲಿ ಭೌಗೋಳಿಕ ಪರಿಸರವನ್ನು ಅವಲಂಭಿಸಿ ಕಲೆಗಳನ್ನು ಸೃಷ್ಟಿಸಿಕೊಂಡು, ಕಣ್ಣಿನಿಂದ ಕಣ್ಣಿಗೆ, ಕಿವಿಯಿಂದ ಕಿವಿಗೆ, ಹೆಜ್ಜೆಯಿಂದ ಹೆಜ್ಜೆಗೆ, ಕೆಲವು ಸಲ ಅನಿಶ್ಚಿತವಾಗಿ ಯಾವ ಕಟ್ಟು ಕಟ್ಟಳೆಗೂ ಒಳಗಾಗದೆ ಮೌಕಿಕ ಆಚರಣೆಯ ಸಂಪ್ರದಾಯ ರೂಪದಲ್ಲಿ ಹೆಚ್ಚಾಗಿ ಬೆಳೆದು ಬಂದಿದೆ.

ಕರ್ನಾಟಕದ ನೆಲವಂತೂ ಜನಪದ ಕಲೆಗಳ ಆಗರವಾಗಿದೆ. ಪ್ರಾದಿಮ ಕಾಲದಲ್ಲಿ ರೂಪುಗೊಂಡಿರಬಹುದಾದ ಕಲೆಯ ಕಾಲದ ಪ್ರಶ್ನೆಗಿಂತ ನಮ್ಮ ನಾಡಿನ ಸಂಸ್ಕೃತಿಗೆ ಜನಪದ ಕಲೆ ಜನರ ಬದುಕಿನ ಆತ್ಮವಾಗಿ, ಜೀವವಾಗಿ ಹೇಗೆ ಜೀವಂತವಾಗಿಅಸ್ತಿತ್ವವನ್ನು ನೀಡಿದೆ ಎಂಬುದರ ಅಧ್ಯಯನ ಅವಶ್ಯವಾಗಿದೆ. ಈಗಾಗಲೇ ಅನೇಕ ವಿದ್ವಾಂಸರು ಜಾನಪದದ ವಿವಿಧ ಕ್ಷೇತ್ರಗಳಲ್ಲಿ ಅಧ್ಯನ ನಡೆಸಿದ್ದಾರೆ. ಜನಪದ ಕಲೆ ಅರ್ಥಾರ್ಥ ಜನಪದ ಜೀವನವೇನೋ ಎಂಬಷ್ಟು ಅವಿನಾಭಾವ ಸಂಬಂಧ ಹೊಂದಿರುವುದರಿಂದ ಅನೇಕ ವಿಷಯಗಳು ಅಧ್ಯಯನಕ್ಕೆ ಸಾಮಗ್ರಿಯಾಗಿ ನಮ್ಮ ಮುಂದಿವೆ. ಒಂದೊಂದು ಜನಪದ ಕಲೆಯೂ ನೂರಾರು ವಿಷಯ ಸಾಮಗ್ರಿಗಳಿಂದ ಕೂಡಿ ಅಧ್ಯಯನಕ್ಕೆ ಆಹ್ವಾನ ಒಡ್ಡುತ್ತವೆ. ಆದ್ದರಿಂದ ಸ್ಪಷ್ಟ ಸ್ವರೂಪದೊಂದಿಗೆ ಜನಪದ ಕಲೆಯ ಅಧ್ಯಯನ ಇಂದಿನ ತುರ್ತು ಅಗತ್ಯವಾಗಿದೆ ಎನ್ನುತ್ತಾರೆ ಡಾ. ಎಸ್.ಸಿ. ಪಾಟೀಲ[೬] ಅವರು. ಈ ಹಿನ್ನೆಲೆಯಲ್ಲಿ ಪ್ರಸ್ತುತವಾಗಬಲ್ಲ ಜನಪದರ ನೂರಾರು

---

೩. ಡಾ. ಎಸ್.ಎಂ. ವೃಷಬೇಂದ್ರಸ್ವಾಮಿ : (ಸಂ) : ಜನಪದ ಸಾಹಿತ್ಯ ದರ್ಶನ, ಭಾಗ -೧೦, ಪುಟ -೧

೪. ...... ಅದೇ ...... ಪುಟ -೨

೫. ಡಾ. ಎಂ.ಎಂ. ಕಲಬುರ್ಗಿ : ಉತ್ತರ ಕರ್ನಾಟಕದ ಜನಪದ ಸಾಹಿತ್ಯ, ಪುಟ - ೩

೬. ಡಾ. ಎಸ್.ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ - ೫

ಕಲೆಗಳಲ್ಲಿ ಪ್ರಧಾನವಾದ ಆದರೆ ಸಮಗ್ರವಾಗಿ ಅಧ್ಯಯನಕ್ಕೆ ಒಳಪಡದೇ ಇರುವ ಜನಪದ ಶಿಲ್ಪಕಲೆಯ ತಲಸ್ಪರ್ಶಿಯಾದ ಅಧ್ಯಯನವನ್ನು ಇಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಸಂಸ್ಕೃತಿಯೊಂದರ ಅಧ್ಯಯನಕ್ಕೆ ಇರುವ ಆಕರಗಳಲ್ಲಿ ಜನಪದ ಶಿಲ್ಪಕಲೆಗೂ ಒಂದು ವಿಶಿಷ್ಟ ಸ್ಥಾನವಿದೆ. ಶಿಲ್ಪಕಲೆಯ ಮುಖಾಂತರ ವ್ಯಕ್ತಿ ತನ್ನ ಸಂಸ್ಕೃತಿಯನ್ನು ಹೇಗೆ ಅಭಿವ್ಯಕ್ತಿ ಮಾಧ್ಯಮದಲ್ಲಿ ಅನಾವರಣಗೊಳಿಸಿದ್ದಾನೆ ಎಂಬುದನ್ನು ಅಥವಾಶಿಲ್ಪಕಲೆ ಇತರ ಆಕರಗಳಿಗಿಂತ ಬೇರೆಯಾಗಿ ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ಪುನರ್ರಚಿಸಲು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಬಹುದಾಗಿದೆ. ಜನಪದ ಪರಂಪರೆಯನ್ನು ಅರ್ಥಪೂರ್ಣವಾಗಿ ಶೋಧಿಸುವ ದಿಸೆಯಲ್ಲಿ ಜನಪದ ಶಿಲ್ಪಕಲೆಯಂತಹ ಅಧ್ಯಯನಗಳ ಪಾತ್ರವು ತುಂಬ ಮಹತ್ವದ್ದಾಗಿದೆ. ನಮ್ಮ ದೇಶೀ ಪರಂಪರೆ, ಸಂಸ್ಕೃತಿ, ಸಾಹಿತ್ಯ, ಚರಿತ್ರೆ ಇತ್ಯಾದಿ ಈ ಸಂದರ್ಭದಲ್ಲಿ ಇಂತಹ ಅಧ್ಯಯನ ಗಮನಾರ್ಹವಾಗುತ್ತದೆ. ಸ್ಥಳೀಯ ಪಾರಂಪರಿಕ ದೇಶೀ ಜ್ಞಾನ ಸಂಪತ್ತನ್ನು ಅದರ ಉತ್ಪಾದಕ ಗುಣವನ್ನು ಮತ್ತು ಸೃಜನಾತ್ಮಕ ನೆಲೆಗಳನ್ನು ಶೋಧಿಸುತ್ತಿರುವ ಇವತ್ತಿನ ಸಂದರ್ಭದಲ್ಲಿ ಜನಪದ ಶಿಲ್ಪಕಲೆಯಂತಹ ಅಧ್ಯಯನಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಪ್ರಾಪ್ತವಾಗುತ್ತದೆ.

ಜನಪದ ಶಿಲ್ಪಕಲೆ ವೃತ್ತಿ, ಧರ್ಮ ಮತ್ತು ಸೌಂದರ್ಯಮೂಲದ ನೆಲೆಯಲ್ಲಿ ವಿವಿಧ ಮಾಧ್ಯಮಗಳಲ್ಲಿ ಪ್ರಮುಖವಾಗಿ ಆಕಾರ ಪಡೆದರೂ ಅದು ಗ್ರಾಮೀಣ ಬದುಕನ್ನು ಪ್ರತಿಬಿಂಬಿಸುವ ಒಂದು ವಿಶಿಷ್ಟ ಶಿಲ್ಪ ಸಂಪ್ರದಾಯವೇ ಆಗಿದೆ. ಜನಪದ ಶಿಲ್ಪಗಳ ಹಿಂದೆ ಧಾರ್ಮಿಕ ಸಂಪ್ರದಾಯಗಳು, ಪ್ರಕೃತಿಯ ಶಕ್ತಿಮೂಲಗಳು, ಮನುಷ್ಯನ ಸುಪ್ತಶಕ್ತಿಗಳು ಅಡಗಿಕೊಂಡಿದ್ದು ಜನಪದ ಶಿಲ್ಪಗಳ ಅಧ್ಯಯನವೆಂದರೆ ಜನಪದ ಜೀವನದ ಅಧ್ಯಯನವೇ ಆಗಿದೆ. ಜನಪದ ಬದುಕಿನ ವಿಧಿ ಕ್ರಿಯೆಗಳಲ್ಲಿ ಈ ಶಿಲ್ಪಗಳ ಮೂಲಕ ಆಕಾರ ಪಡೆದಿವೆ. ನೋಡುವ ಕಣ್ಣಿಗೆ ಹಬ್ಬವನ್ನುಂಟು ಮಾಡುವ, ಭಯವನ್ನು ಹುಟ್ಟಿಸುವ ಸರ್ವಭಾವನೆಗಳನ್ನೂ ಈ ಜನಪದ ಶಿಲ್ಪಕಲೆ ಒಳಗೊಂಡಿದೆ. ವಿವಿಧ ಹಂತಗಳಲ್ಲಿ ಬಾಳುವ ಮನುಷ್ಯನ ಬದುಕು ಅದರಲ್ಲಿಯೂ ಜನಪದರ ಬದುಕು ತಮಗರಿವಿಲ್ಲದೆಯೇ ಈ ಶಿಲ್ಪಕಲೆಯನ್ನು ಹೇಗೆ ರೂಢಿಸಿಕೊಂಡರೆಂಬುದನ್ನು ತಿಳಿದುಕೊಳ್ಳುವುದು ಪ್ರಸ್ತುತ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ. ಒಂದೊಂದು ಶಿಲ್ಪವೂ ಒಂದೊಂದು ಸಂಪ್ರದಾಯವಾಗಿ, ಬದುಕಿನುದ್ದದ ಇತಿಹಾಸವನ್ನು ತಿಳಿಸಿಕೊಡುವುದರಿಂದ ಇದು ಜನಪದ ಶಿಲ್ಪಕಲೆಯ ಇತಿಹಾಸವೂ ಆಗಬಲ್ಲದು. ಹೀಗೆ ಪಾರಂಪರಿಕವಾಗಿ ಜನಪದ ಜೀವನದಲ್ಲಿ ಹಾಸು ಹೊಕ್ಕಾಗಿರುವ ಶಿಲ್ಪಕಲೆಯ ಒಟ್ಟು ಅಂಶಗಳ ಕಡೆಗೆ ಗಮನಹರಿಸುವುದು ಈ ಅಧ್ಯಯನದ ಪ್ರಮುಖ ಉದ್ದೇಶವೂ ಆಗಿದೆ.

ನಮ್ಮ ನಾಡು ಶಿಲ್ಪಕಲೆಯ ಬೀಡಾಗಿದೆ. ಈ ಮೂಲತಃ ಈ ಶಿಲ್ಪ ಪರಂಪರೆ ದೇಶೀ ನೆಲೆಯಲ್ಲಿ ಹುಟ್ಟಿ ಶಿಷ್ಟದ ನೆಲೆಯಲ್ಲಿ ಮೈಚಾಚಿಕೊಂಡು ವೈವಿಧ್ಯಮಯ ರೀತಿಯಲ್ಲಿ ಬೆಳವಣಿಗೆ ಹೊಂದಿದೆ. ಗ್ರಾಮೀಣ ಜನತೆ ದೇಶೀ ನೆಲೆಯಲ್ಲಿ ತಮ್ಮದೇ ಆದ ರೀತಿಯಲ್ಲಿ ಶಿಲ್ಪಗಳನ್ನು ರಚಿಸುವುದರ ಮೂಲಕ

ಕಲಾವಿದರಾಗಿ, ಶಿಲ್ಪಗಳನ್ನು ಮಾಡಿಸುವುದರ ಮೂಲಕ ಪೋಷಕರಾಗಿ ಜನಪದ ಶಿಲ್ಪಕಲಾ ಪರಂಪರೆಯನ್ನು ಇಂದಿಗೂ ಜೀವಂತವಾಗಿರಿಸಿದ್ದಾರೆ. ಈ ಅಧ್ಯಯನವು ಪಾರಂಪರಿಕ ಮತ್ತು ಪ್ರಾದೇಶಿಕ ವೈವಿಧ್ಯತೆಗಳ ಹಿನ್ನೆಲೆಯಲ್ಲಿ ವೈಜ್ಞಾನಿಕವಾಗಿ ರೂಪಿಸುವುದಾಗಿದೆ. ಪ್ರಸ್ತುತ ಸಂದರ್ಭದಲ್ಲಿ ನಮ್ಮ ಎರವಲು ತಿಳುವಳಿಕೆಗಳಿಂದ ದೇಶೀ ಜ್ಞಾನ-ಶಾಖೆಗಳ ಅಂತರಂಗವನ್ನು ಮತ್ತು ಪ್ರಾಯೋಗಿಕವಾಗಿ ಮಾಡುತ್ತಾ ಅವುಗಳ ಹಲವು ಬಗೆಯ ಗುಣಾತ್ಮಕವಾದ ಸಾಧ್ಯತೆಗಳನ್ನು ಕಂಡುಕೊಳ್ಳುವುದಾಗಿದೆ. ಅದಕ್ಕಾಗಿ ದೇಶೀ ಪರಂಪರಯ ಇಂತಹ ಅಧ್ಯಯನಗಳು ಅಗತ್ಯವಾಗುತ್ತವೆ. ನಮ್ಮ ಗ್ರಾಮೀಣ ಪರಂಪರೆಯನ್ನು, ಸಂಸ್ಕೃತಿಯನ್ನು ಹೊರಗಿನ ಪ್ರಭಾವಗಳಿಂದ ರಕ್ಷಿಸುವ, ಅವುಗಳನ್ನು ಒಂದೆಡೆ ದಾಖಲಿಸುವ, ಸಂಗ್ರಹಿಸುವ ದಿಸೆಯಲ್ಲಿ ಇಂತಹ ಅಧ್ಯಯನಗಳು ಅವಶ್ಯಕವಾಗುತ್ತವೆ.

ಕರ್ನಾಟಕದ ಜನಪದ ಶಿಲ್ಪಗಳಲ್ಲಿ ಗ್ರಾಮೀಣರ ವೈವಿಧ್ಯಮಯ ಬದುಕು ಹೇಗೆ ರೂಪುಗೊಂಡಿದೆ ಮತ್ತು ನಮ್ಮ ದೇಶೀ ಜಾನಪದ ಪರಂಪರೆಗೆ ಹೊಸ ಪರಿಪ್ರೇಕ್ಷ್ಯೆಯೊಂದನ್ನು ಕಟ್ಟುವುದು ಹೇಗೆ ಸಾಧ್ಯವಾಗುತ್ತದೆ ಎಂಬುದರ ಅನ್ವೇಷಣೆಯೂ ಇದರ ಉದ್ದೇಶಗಳಲ್ಲೊಂದಾಗಿದೆ. ಜೊತೆಗೆ ಕಲಾ ನಿರ್ಮಾತೃಗಳು, ಪೋಷಕರು ಅಲ್ಲದೆ ರಚನಾ ವಿಧಿ ವಿಧಾನ ಮುಂತಾದ ಅಂಶಗಳ ಕುರಿತು ವಿಶೇಷವಾಗಿ ಗಮನ ಹರಿಸಲಾಗುತ್ತದೆ.

ಕರ್ನಾಟಕದ ಜನಪದ ಶಿಲ್ಪಕಲೆ ಜನರ ಬದುಕೇ ಆಗಿ ಹೇಗೆ ಜೀವಂತ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ ಎಂಬುದು ಕುತೂಹಲದ ವಿಷಯವೇ ಆಗಿದೆ. ಹಾಗೆಯೇ ಇಂದು ನಗರ ಸಂಸ್ಕೃತಿಯ ಮತ್ತು ಆಧುನಿಕತೆಯ ಪ್ರಭಾವ ಗ್ರಾಮೀಣರ ಜೀವನದಲ್ಲಿ ಪ್ರವೇಶ ಮಾಡಿದೆ. ಇದರಿಂದಾಗಿ ಅನೇಕ ಜನಪದ ಕಲೆಗಳೂ ತಮ್ಮ ನೈಜ ಆವರಣವನ್ನು ಕಳೆದುಕೊಳ್ಳುತ್ತಲಿವೆ. ಅವುಗಳ ಬೇರುಗಳೂ ಸಡಿಲಗೊಳ್ಳುತ್ತಲಿವೆ. ಹಲವಾರು ಕಲೆಗಳು ಸಂಪೂರ್ಣ ಮರೆತೂ ಹೋಗಿವೆ. ಇಂತಹ ಸಂದರ್ಭದಲ್ಲಿ ಅವುಗಳ ಶೋಧನೆ, ದಾಖಲೆ ಮತ್ತು ಅಧ್ಯಯನ ಇಂದಿನ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಜನಪದ ಶಿಲ್ಪಕಲೆಯನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

ಶಿಲ್ಪಕಲೆಯೊಂದೊಡನೆ ಶಿಲೆ-ಶಿಲ್ಪಿ-ಉಳಿ-ಛಾಣಗಳ ಪ್ರತ್ಯೇಕವಾದೊಂದು ಪ್ರಪಂಚವೆಂಬ ಸಾಮಾನ್ಯ ಚಿತ್ರವೊಂದು ಕಣ್ಮುಂದೆ ನಿಲ್ಲುವುದು ಸಹಜವೇ ಆಗುತ್ತದೆ.

ಆದರೆ ಜನಪದ ಶಿಲ್ಪಕಲೆ ಈ ಎಲ್ಲ ಕಟ್ಟಳೆಗಳಿಂದ ಮುಕ್ತವಾದ, ಆದರೆ ಜನರ ಬದುಕಿನೊಂದಿಗೆ ಬೆರೆತುಕೊಂಡ ಪ್ರಪಂಚ. ಯಾಂತ್ರಿಕ ಬದುಕಿನಲ್ಲಿ ಅದರ ಮಹತ್ವ ಕಂಡು ಬರುವುದಿಲ್ಲ. ಜನಪದ ಶಿಲ್ಪಗಳು ಎಂದರೆ ಉಳಿಮುಟ್ಟದ ಪ್ರತಿಮೆಗಳಿದ್ದಂತೆ. ಅವುಗಳಲ್ಲಿ ನಯ, ನಾಜೂಕು ಕಡಿಮೆ ಇದ್ದರೂ ಅಂತಃಸತ್ವ ಹಿರಿದಾಗಿರುತ್ತದೆ. ಒಟ್ಟು ಶಿಲ್ಪಕಲೆಯನ್ನು ಸ್ಪಷ್ಟವಾಗಿ ನಾವು ಶಿಷ್ಟಪದ ಶಿಲ್ಪಕಲೆ ಹಾಗೂ ಜನಪದ ಶಿಲ್ಪಕಲೆಯೆಂದು ವಿಂಗಡಿಸಿಕೊಂಡಾಗ ಅವುಗಳ ವ್ಯತ್ಯಾಸದ ಚಿತ್ರ ಸ್ಪಷ್ಟವಾಗುತ್ತದೆ. ಶಿಷ್ಟಪದ ಶಿಲ್ಪಕಲೆಯಲ್ಲಿ ಗುರುತಿಸಲ್ಪಟ್ಟ ಸುಪ್ರಸಿದ್ಧ, ಶಾಸ್ತ್ರಶುದ್ಧ ಶಿಲ್ಪಗಾರಿಕೆ, ಸಾಂಪ್ರದಾಯಿಕ ಕಲಿಕೆ

ಇತ್ಯಾದಿಗಳಿದ್ದರೆ, ಜನಪದ ಶಿಲ್ಪಕಲೆಯಲ್ಲಿ ಎಲೆಮರೆಯ ಕಾಯಿಯಂತೆ ಬದುಕಿನ ಅಂತರಂಗ ಅವಿತುಕೊಂಡಿರುವುದನ್ನು ಗುರುತಿಸುತ್ತೇವೆ.

ಜನಪದ ಶಿಲ್ಪಕಲೆಯೆಂದರೆ ಕೇವಲ ಕಲ್ಲು ಮಣ್ಣಲ್ಲ, ಕೊರಡು ಕಬ್ಬಿಣವೂ ಅಲ್ಲ. ಧಾರ್ಮಿಕ ಸಂಪ್ರದಾಯಗಳು, ಪ್ರಕೃತಿಯ ಶಕ್ತಿಮೂಲಗಳು, ಮನುಷ್ಯನ ಸುಪ್ತ ಚೇತನಗಳು ಅಡಗಿಕೊಂಡಿರುವ, ಸೌಂದರ್ಯ ತುಂಬಿರುವ ವೃತ್ತಿಮೂಲವಾಗಿರುವ, ದೈನಂದಿನ ಬದುಕೇ ಆಗಿರುವ ಕಲೆ ಈ ಶಿಲ್ಪಕಲೆ. ಈ ಅರ್ಥದಲ್ಲಿ ಜನಪದ ಶಿಲ್ಪಕಲೆ ಅಧ್ಯಯನವೆಂದರೆ ಜನಪದ ಜೀವನದ ಅಧ್ಯಯನವೇ ಆಗಿದೆ. ಬದುಕಿನ ವಿಧಿಕ್ರಿಯೆಗಳೆಲ್ಲ ವಿವಿಧ ಮಾಧ್ಯಮಗಳಲ್ಲಿ ತೊಡಗಿ, ಶಿಲ್ಪಗಳಾಗಿ ರೂಪು ತಳೆದು ನೋಡುವ ಕಣ್ಣಿಗೆ ಹಬ್ಬವನ್ನುಂಟು ಮಾಡುವ, ಭಯವನ್ನುಂಟು ಮಾಡುವ. ಸರ್ವಭಾವನೆಗಳ ಅಧ್ಯಯನವೂ ಈ ಜನಪದ ಶಿಲ್ಪಕಲೆಯಲ್ಲಿದೆ. ವಿವಿಧ ಹಂತಗಳಲ್ಲಿ ಸಾಗುವ ಮನುಷ್ಯನ ಬದುಕು ಅದರಲ್ಲಿಯೂ ಜನಪದರ ಬದುಕು, ತಮಗೆ ಅರಿವಿಲ್ಲದೆ ಶಿಲ್ಪಕಲೆಯನ್ನು ಹೇಗೆ ರೂಢಿಸಿಕೊಂಡರೆಂಬುದನ್ನು ತಿಳಿದುಕೊಳ್ಳುವುದು ಪ್ರಸ್ತುತ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ. ಜನಪದರ ಬದುಕಿನಲ್ಲಿ ಯಾವುದಕ್ಕೂ ಕೊರತೆಯೆಂಬುದಿಲ್ಲ. ಕೊರತೆಯುಂಟಾದರೆ ಅವರಿಗೆ ಅಪಶಕುನ. ಅವರದು ಬರೀ ಆಚರಣೆಯಲ್ಲ ಹಾಗೇ ಬದುಕುತ್ತಾರೆ ಕೂಡ.[೭]

ಜನಪದರು ಬದುಕನ್ನು ಹೇಗೆ ಅಪ್ಪಿಕೊಂಡಿದ್ದಾರೆ, ಅವರ ಕ್ರಿಯೆಗಳು ಹೇಗೆ ಗಟ್ಟಿಗೊಂಡಿರುತ್ತವೆ! ಅನೂಚಾನವಾಗಿ ಆಚರಿಸಿಕೊಂಡು ಬಂದಿರುವ ಅವರ ಕಲೆಗಾರಿಕೆ ಹೇಗೆ ಬದುಕೇ ಆಗಿದೆಯೆಂಬುದನ್ನು ಜನಪದ ಶಿಲ್ಪಕಲೆಯಲ್ಲಿ ಅರಿಯಬಹುದಾಗಿದೆ. ಈ ದೃಷ್ಟಿಯಿಂದ ಜನಪದ ಶಿಲ್ಪಕಲೆಯು ಜನಪದರ ಬದುಕೇ ಆಗಿದೆ. ಜನಪದರಿಂದ ಜನಪದರಿಗಾಗಿ ಸೃಷ್ಟಿಗೊಂಡ ಜಾನಪದ ಶಿಲ್ಪಗಳು ಜನಪದರ ಬದುಕಿನುದ್ದಕ್ಕೂ ನಡೆವ ವಿವಿಧ ಚಟುವಟಿಕೆಗಳಲ್ಲಿ ಸೃಷ್ಟಿಗೊಂಡಿವೆ. ಬಿಡುವಿನ ಸಂದರ್ಭದಲ್ಲಿ, ಕೆಲಸದ ಸಂದರ್ಭದಲ್ಲಿ ರಾಶಿಯ ಸಂದರ್ಭದಲ್ಲಿ, ಸಮೃದ್ಧಿ, ಸುಗ್ಗಿಯ ಸಂದರ್ಭದಲ್ಲಿ, ರಾಶಿಯ ಸಂದರ್ಭದಲ್ಲಿ ಹಾಗೆಯೇ ಮದುವೆ, ಶೋಭನಗಳ ಸಂದರ್ಭದಲ್ಲಿ, ಹೋಳಿ, ನಾಗ ಪಂಚಮಿ ಮುಂತಾದ ಹರ್ಷದ ಹಬ್ಬ-ತ್ಸವಗಳ ಸಂಭ್ರಮಗಳ ಸಂದರ್ಭಗಳಲ್ಲಿ ಜನಪದ ಶಿಲ್ಪಗಳು ಒಟ್ಟು ಆಚರಣೆಯ ಕೇಂದ್ರವಾಗಿ ಸೃಷ್ಟಿಗೊಂಡಿದೆ. ವಿವಿಧ ಪ್ರದೇಶಗಳಲ್ಲಿ ಪ್ರಚಲಿತವಿರುವ ವಿವಿಧ ಆಚರಣೆಗಳಲ್ಲಿ ಇರುವ ಸಂಪ್ರದಾಯಗಳು ಹುಟ್ಟುಹಾಕಿರುವ ಶಿಲ್ಪಗಳು ನೀಡುವ ಬದುಕಿನ ಹಿನ್ನೆಲೆಯನ್ನು ಅರಿತುಕೊಳ್ಳುವುದೂ ಇಲ್ಲಿ ಮಹತ್ವದ್ದಾಗುತ್ತದೆ. ಒಂದೊಂದು ಶಿಲ್ಪವೂ ಒಂದೊಂದು ಸಂಪ್ರದಾಯವಾಗಿ, ಬದುಕಿನುದ್ದದ ಇತಿಹಾಸವನ್ನು ತಿಳಿಸಿ ಕೊಡುವುದರಿಂದ ಇದು ಜನಪದ ಶಿಲ್ಪಕಲೆಯ ಇತಿಹಾಸವೂ ಹೌದೆನ್ನಬಹುದು. ಇದು ಜನಪದ ಶಿಲ್ಪಕಲೆಯ ಇತಿಹಾಸವೂ ಹೌದೆನ್ನಬಹುದು. ಪಾರಂಪರಿಕವಾಗಿ ಜನಪದ ಜೀವನದಲ್ಲಿ ಜನಪದ ಶಿಲ್ಪಕಲೆ ಹಾಸು ಹೊಕ್ಕಾಗಿ ಬೆಳೆದಿರುವುದರಿಂದ ಆ ಶಿಲ್ಪಕಲೆಯು ಎಲ್ಲ ಆಯಾಮಗಳ ಕಡೆಗೆ

---

೭. ಡಾ. ಎಸ್.ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ -೫

ಗಮನ ಸೆಳೆಯುವುದೂ ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಈ ಎಲ್ಲ ಬಗೆಯ ಕಾರಣಗಳಿಂದ ಇಂತಹ ಅಧ್ಯಯನ ಅತ್ಯಂತ ಪ್ರಸ್ತುತವಾಗಿದೆ.

ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ರಚನೆಗೆನೆರವಾಗುವ ಆಕರ ಸಾಮಗ್ರಿಗಳಲ್ಲಿ ಜನಪದ ಶಿಲ್ಪಗಳು ಪ್ರಮುಖವಾದವುಗಳು. ನಮ್ಮ ಹಿಂದಿನವರ ಜೀವನ ಶೈಲಿಗೆ ಸಾಕ್ಷಿಯಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಈ ಶಿಲ್ಪಗಳು ಹೇರಳವಾಗಿ ದೊರೆಯುತ್ತವೆ.

ವಾಸ್ತವವಾಗಿ, ಒಂದು ನಾಡು ಎಂದರೆ ಅದನ್ನು ಆಳಿದ ರಾಜರು ಮಾತ್ರವಲ್ಲ, ಅಲ್ಲಿ ಬದುಕಿದ್ದ ಜನ[೮] ಹೀಗೆ ಬದುಕಿದ್ದರು, ಬದುಕಿರುವ ಜನರ ಬದುಕಿನ ಒಂದು ಗಣನೀಯ ಭಾಗ ಈ ಜನಪದ ಶಿಲ್ಪಗಳ ಪ್ರಪಂಚ. ಈಚೆಗೆ ಇತಿಹಾಸವನ್ನು ನೋಡುವ ದೃಷ್ಟಿಯೂ ಗಮನಾರ್ಹವಾಗಿ ಬದಲಾವಣೆ ಪಡೆದುಕೊಂಡಿದೆ. ಇತಿಹಾಸ ರಚನೆಯ ಆಕರಗಳನ್ನು ಹೊಸರೀತಿಯಿಂದ ನೋಡುವ ದೃಷ್ಟಿ ಬೆಳೆದಿದೆ. ರಾಜಕೀಯ ಇತಿಹಾಸವನ್ನು ಬಿಟ್ಟು-ಸಾಂಸ್ಕೃತಿಕ ಇತಿಹಾಸ ರಚನೆಯ ಮಾರ್ಗವನ್ನು ಅನುಸರಿಸಲಾಗುತ್ತಿದೆ. ನಮ್ಮ ಜನರ ದಿನನಿತ್ಯದ ಬದುಕನ್ನು, ಅವರ ಸಂಪ್ರದಾಯ, ಆಚರಣೆ, ರೀತಿ, ನೀತಿಗಳನ್ನು ಅವರ ಬದುಕನ್ನು ವಿವಿಧ ಮಗ್ಗುಲುಗಳಿಂದ ಅಧ್ಯಯನ ಮಾಡುವ ಅಗತ್ಯ ಇನ್ನೂ ತೀವ್ರಗೊಳ್ಳಬೇಕಾಗಿದೆ. ಈ ಅಧ್ಯಯನದಿಂದ ನಮಗೆ ಪರಿಚಯವೇ ಇಲ್ಲದಿದ್ದ ನಮ್ಮ ನಾಡಿನ ಜನಪದರ ಜೀವನ ಶೈಲಿಯ ಅಧ್ಯಯನಕ್ಕೆ ಅವಶ್ಯವೆನಿಸುವ ಅಮೂಲ್ಯ ಭಂಡಾರವನ್ನು ಶೋಧಿಸುವುದು ಇಲ್ಲಿನ ಅಧ್ಯಯನದ ಅಗತ್ಯಗಳಲ್ಲಿ ಒಂದಾಗಿದೆ ಎಂದೇ ಹೇಳಬೇಕಾಗುತ್ತದೆ.

ಈ ದಿಸೆಯಲ್ಲಿ ಈಗಾಗಲೇ ಅನೇಕರು ಜಾನಪದ ಕಲೆಯ ವಿವಿಧ ಪ್ರಕಾರಗಳಲ್ಲಿ ಅನೇಕರ ಅಧ್ಯಯನ ಮಾಡಿದ್ದಾರೆ. ಮಾಡುತ್ತಲಿದ್ದಾರೆ. ಆದರೆ ಜನಪದರ ನೂರಾರು ಕಲೆಗಳಲ್ಲಿ ಪ್ರಧಾನವಾದ ಜನಪದ ದೃಶ್ಯಕಲೆಗಳಲ್ಲಿ ಒಂದಾದ ಜನಪದ ಶಿಲ್ಪಕಲೆಯ ಕುರಿತಾದ ಅಧ್ಯಯನ ಇಲ್ಲಿಯವರೆಗೆ ನಡೆಯದೇ ಇರುವುದನ್ನು ಗಮನಿಸಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

## ಅಧ್ಯಯನದ ಸ್ವರೂಪ

ಶಿಲ್ಪಕಲೆ ಮಾನವನ ಮೂಲ ಸಂವೇದನೆಗಳಿಗೆ ತೀರ ಹತ್ತಿರವಾದ ಕಲೆಗಳಲ್ಲಿ ಒಂದು ಮನುಷ್ಯನ ಬದುಕಿನಷ್ಟೇ ವೈವಿಧ್ಯಮಯವಾದುದು. ಮನುಷ್ಯ ತನ್ನ ಅನುಭವಗಳಿಗೆ ರೂಪಗಳನ್ನು ನೀಡಿದ್ದು, ಆಕಾರಗಳನ್ನು ಕೊಟ್ಟದ್ದು, ಬಣ್ಣ ಬಳೆದು ಜೀವ ತುಂಬಿದ್ದು ಇಂಥ ಶಿಲ್ಪಗಳ ಮೂಲಕವೇ. ಜನಪದರ ಅನುಭವ, ಕಲಾಪರಂಪರೆ, ಹೃದಯ ಶ್ರೀಮಂತಿಕೆ, ಸಂಸ್ಕಾರಗಳು ಈ ಶಿಲ್ಪಕಲೆಯಲ್ಲಿ ಅರಳಿ ನಿಂತಿರುವುದನ್ನು ಕಾಣುತ್ತೇವೆ. ಕೆಲವು ಜನಪದ ಶಿಲ್ಪಗಳು ಸಾಮಾನ್ಯವಾಗಿ ಆಯಾ ಪ್ರದೇಶದ ಜನಾಂಗಿಕ, ಧಾರ್ಮಿಕ ಹಿನ್ನೆಲೆಯನ್ನು ಭೌಗೋಳಿಕ ಪರಿಸರವನ್ನು ಅವಲಂಭಿಸಿ ರೂಪು ಪಡೆದಂತೆ ತೋರುತ್ತವೆ.

---

೮. ಡಾ. ಡಿ.ವ್ಹಿ. ಪರಮಶಿವಮೂರ್ತಿ : ಕನ್ನಡ ಶಾಸನಶಿಲ್ಪ, ಪುಟ -೧

ಹೀಗಾಗಿ ಜನಪದ ಶಿಲ್ಪಗಳದ್ದೇ ಒಂದು ಪ್ರತ್ಯೇಕ ಪ್ರಪಂಚವಾಗಿದೆ. ಅವುಗಳ ವೈವಿಧ್ಯತೆ, ಮಾಧ್ಯಮ, ತಯಾರಿಕೆ, ಮೈವಳಿಕೆ, ಬಳಕೆ, ಆರಾಧನೆ, ವಿಧಿಕ್ರಿಯೆಗಳು, ಅಂತಿಮವಾಗಿ ವಿಸರ್ಜನೆ ಎಲ್ಲವೂ ಕಲಾತ್ಮಕ ಅಭಿವ್ಯಕ್ತಿಯಿಂದ ಕೂಡಿರುತ್ತವೆ. ಪ್ರಯೋಜನದೊಂದಿಗೆ ಶಿಲ್ಪಕಲೆಯೂ ಅನಿರ್ಭಂದಿತವಾಗಿ ಬಳಕೆಯಾಗುವುದು ಜನಪದದಲ್ಲಿಯೇ ಎಂದರೆ ಅತಿಶಯೋಕ್ತಿಯಾಗಲಾರದು ಆಧುನಿಕ ಕಲೆಯಲ್ಲಿ ಕಂಡು ಬರುವ ಮುಕ್ತ ಕಸುಬುಗಾರಿಕೆಗೆ ಪ್ರೇರಣೆ ಜನಪದ ಚಿತ್ರ, ಶಿಲ್ಪಗಳೇ ಆಗಿವೆ. ಕರ್ನಾಟಕದ ಅದರಲ್ಲೂ ಉತ್ತರ ಕರ್ನಾಟಕದ ಹಬ್ಬ-ಹರಿದಿನಗಳಲ್ಲಿ ರೂಪಗೊಳ್ಳುವ ಜನಪದ ಶಿಲ್ಪಗಳ ಕುರಿತ ವಿವರವಾದ ಅಧ್ಯಯನ ಇಲ್ಲಿದೆ. ಅಲ್ಲದೆ ಕಲೆ ಎಂದರೇನು? ಕಲೆಯ ಉಗಮ ಮತ್ತು ವಿಕಾಸಗಳನ್ನು ಕುರಿತು ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಸ್ಥೂಲವಾಗಿ ಚರ್ಚೆ ಮಾಡಲಾಗಿದೆ. ಕಲೆಯ ರೂಪ ನಿಷ್ಪತ್ತಿ, ಕಲೆಯನ್ನು ಅರ್ಥೈಸುವಿಕೆ, ಅರವತ್ನಾಲ್ಕು ಕಲೆಗಳು, ಅವುಗಳಲ್ಲಿ ವಿಶೇಷ ಮಹತ್ವ ಪಡೆದ ಲಲಿತ ಕಲೆಗಳು, ಲಲಿತ ಕಲೆಗಳಲ್ಲಿ ಒಂದು ವಿಭಾಗವಾದ ದೃಶ್ಯಕಲೆ, ದೃಶ್ಯಕಲೆಯ ಪ್ರಧಾನವಾದ ಎರಡು ಪ್ರಕಾರಗಳಲ್ಲಿ ಒಂದಾದ ಶಿಲ್ಪಕಲೆ, ಅದು ಸರ್ವ ಕಲೆಗಳಲ್ಲಿ ಶ್ರೇಷ್ಟವೆನಿಸಿದ ಕಲೆ ಎಂಬುದರ ಕುರಿತಾಗಿರುವ ಪ್ರಾಚೀನ ಉಲ್ಲೇಖಗಳ ವಿವೇಚನೆಯನ್ನು ಮಾಡಲಾಗಿದೆ.

ಶಿಷ್ಟಪದ ಶಿಲ್ಪಕಲೆ ಮತ್ತು ಜನಪದ ಶಿಲ್ಪಕಲೆಯ ಸ್ವರೂಪ, ಲಕ್ಷಣ, ಇವುಗಳ ಪರಸ್ಪರ ಸಂಬಂಧ, ವಿವರಣೆಯೊಂದಿಗೆ ಜನಪದ ಶಿಲ್ಪಕಲೆಯ ಮುಂದುವರೆದ ರೂಪವಾಗಿ ಶಿಷ್ಟಪದ ಶಿಲ್ಪಕಲೆಯ ಬೆಳವಣಿಗೆ ಇತ್ಯಾದಿ ವಿವರಿಸಲಾಗಿದೆ. ಇಷ್ಟಲ್ಲದೆ ಜನಪದ ಶಿಲ್ಪಕಲೆಯ ಪ್ರಾರಂಭಿಕ ಹೆಜ್ಜೆಗಳನ್ನು ಮತ್ತು ಕರ್ನಾಟಕದ ಪ್ರಾಗೈತಿಹಾಸಿಕ ಕಾಲಕ್ಕೆ ಸೇರಿದ ಪ್ರಾಣಿ-ಪಕ್ಷಿ-ಮಡಿಕೆ-ಕುಡಿಕೆಗಳ ಮೇಲೆ ದೊರೆತ ಉಬ್ಬು ಶಿಲ್ಪಾಧಾರಿತ ನಡೆದ ಸಂಶೋಧನೆಗಳನ್ನು ಸಮೀಕ್ಷೆಯ ಮೂಲಕ ಗುರುತಿಸಲಾಗಿದೆಯಲ್ಲದೆ, ಉತ್ಖನನದಲ್ಲಿ ದೊರೆತ ವಸ್ತು ಸಂಗ್ರಹಲಾಯಗಳಲ್ಲಿ ಸಂಗ್ರಹಿಸಿರುವ ಶಿಲ್ಪಗಳು ಹಾಗೇಯೇ ಮನೆ, ಮಠ, ಅರಮನೆ, ದೇವಾಲಯ ಮುಂತಾದ ಸ್ಥಳಗಳಲ್ಲಿ ದೊರೆತ ಜನಪದ ಶಿಲ್ಪಗಳು ಮತ್ತು ಸಾಹಿತ್ಯ, ಇತಿಹಾಸ ಮುಂತಾದ ಕೃತಿಗಳಲ್ಲಿ ಪ್ರಾಸಂಗಿಕವಾಗಿ ಸಿಗುವ ಶಿಲ್ಪಕಲೆಯ ಉಲ್ಲೇಖಗಳ ಪ್ರಸ್ತಾಪವಿರುವುದನ್ನು ಇಲ್ಲಿ ಗಮನಿಸಲಾಗಿದೆ. ಜೊತೆಗೆ ಜನಪದರ ಆಚರಣೆಯ ಹಿನ್ನೆಲೆಯಲ್ಲಿಯೇ ಹುಟ್ಟಿಕೊಂಡು ಇಂದು ಸಂಪೂರ್ಣವಾಗಿ ಶಿಷ್ಟರೂಪಕ್ಕೆ ತಿರುಗಿರುವ ಶಿಲ್ಪಗಳದ್ದೇ ಒಂದು ವಿಶೇಷ ಬಗೆಯಾಗಿದೆ. ಹೀಗೆ ಆಚರಣೆ, ಆರಾಧನೆಗಲ ಕೇಂದ್ರಗಳಾಗಿರುವ ಅನೇಕ ಗ್ರಾಮ ದೇವತೆಗಲ ಶಿಲ್ಪಗಳೂ ಮೂಲತಃ ಜನಪದ ಶಿಲ್ಪಗಳೇ ಆಗಿದ್ದು ಕ್ರಮೇಣ ಶಿಷ್ಟ ಕ್ರಮಕ್ಕೆ ಒಳಪಟ್ಟಿವೆ ಎಂಬ ವಿಷಯದ ಚರ್ಚೆ ಇಲ್ಲಿದೆ. ಇಂಥ ಶಿಲ್ಪಗಳನ್ನು ಶಿಷ್ಟ ಜನಪದ ಶಿಲ್ಪಗಳೆಂದು ಕರೆಯಬೇಕೆಂದು ಡಾ. ಎಸ್.ಸಿ. ಪಾಟೀಲರು ಸೂಚಿಸುತ್ತಾರೆ. ಈ ವಿಷಯ ಕುರಿತು ಆಯಾ ಅಧ್ಯಾಯಗಳಲ್ಲಿ ಪ್ರಾಸಂಗಿಕವಾಗಿ ಚರ್ಚಿಸಲಾಗಿದೆ.

ಇನ್ನು ಅಧ್ಯಯನದ ಶಿಸ್ತಿನ ದೃಷ್ಟಿಯಿಂದ ಜನಪದ ಶಿಲ್ಪಕಲೆಯ ವರ್ಗೀಕರಣದ ಅವಶ್ಯಕತೆಯನ್ನು ಹೇಳುತ್ತ ಪ್ರಸ್ತುತ ಅಧ್ಯಯನವನ್ನು ಎಂಟು ಅಧ್ಯಾಯಗಳಾಗಿ ವರ್ಗೀಕರಿಸಲಾಗಿದೆ. ಆ ಎಂಟೂ ಅಧ್ಯಾಯಗಳು ಹೀಗಿವೆ.

ಅಧ್ಯಾಯ ಒಂದು : ಅಧ್ಯಯನದ ಉದ್ದೇಶ, ಸ್ವರೂಪವಿಧಾನ ಹಾಗೂ ಇದುವರೆಗೆ ನಡೆದ ಅಧ್ಯಯನಗಳು. ಅಧ್ಯಾಯ ಎರಡು : ಜನಪದ ಶಿಲ್ಪಕಲೆ ಮತ್ತು ಶಿಷ್ಟಪದ ಶಿಲ್ಪಕಲೆ, ವೈಲಕ್ಷಣಗಳು ಮತ್ತು ವರ್ಗೀಕರಣ. ಅಧ್ಯಾಯ ಮೂರು : ಮಣ್ಣಿನ ಮಾಧ್ಯಮದ ಜನಪದ ಶಿಲ್ಪಕಲೆ. ಅಧ್ಯಾಯ ನಾಲ್ಕು : ಮರದ ಮಾಧ್ಯಮದ ಜನಪದ ಶಿಲ್ಪಕಲೆ. ಅಧ್ಯಾಯ ಐದು : ಶಿಲಾ ಮಾಧ್ಯಮದ ಜನಪದ ಶಿಲ್ಪಕಲೆ. ಅಧ್ಯಾಯ ಆರು : ಲೋಹ ಮಾಧ್ಯಮದ ಜನಪದ ಶಿಲ್ಪಕಲೆ. ಅಧ್ಯಾಯ ಏಳು : ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಕಲೆ. ಅಧ್ಯಾಯ ಎಂಟು : ಸಮಾರೋಪ.

ಹೀಗೆ ಅಧ್ಯಯನದ ಅನುಕೂಲಕ್ಕಾಗಿ ಮಾಡಿಕೊಂಡಿರುವ ಈ ಎಂಟು ಅಧ್ಯಾಯಗಳಲ್ಲಿ ಮೊದಲಿನ ಎರಡು ಹಾಗೂ ಕೊನೆಯ ಒಂದು ಅಧ್ಯಾಯಗಳನ್ನು ಹೊರತು ಪಡಿಸಿ, ಉಳಿದೈದು ಅಧ್ಯಾಯಗಳನ್ನು ಜನಪದ ಶಿಲ್ಪಕಲೆಯು ಬೆಳೆದು ಬಂದ ಮಾಧ್ಯಗಳನ್ನು ಗಮನಿಸಿ ಮಾಧ್ಯಮಗಳಿಗನುಗುಣವಾಗಿ ವಿಂಗಡಿಸಿಕೊಳ್ಳಲಾಗಿದೆ.

## ಅಧ್ಯಯನದ ವಿಧಾನ

ಈ ಮಹಾಪ್ರಬಂಧದ ರಚನೆಗೆ ಮುಖ್ಯವಾಗಿ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ. ೧. ಮೂಲ ಆಕರ ಸಾಮಗ್ರಿ (Primary Sources) ೨. ಆನುಷಂಗಿಕ ಆಕರ ಸಾಮಗ್ರಿ (Secondary Sources), ಈ ಎರಡೂ ಮೂಲಗಳಿಂದ ವಿಷಯ ಸಂಗ್ರಹ ಮಾಡಲಾಗಿದೆ. ಇವುಗಳನ್ನು ಹೀಗೆ ವಿಂಗಡಿಸಬಹುದು.

### ೧. ಮೂಲ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದುದು ಕ್ಷೇತ್ರ ಕಾರ್ಯ (Field Work) ಪ್ರಸ್ತುತ ಅಧ್ಯಯನದಲ್ಲಿ ಕ್ಷೇತ್ರ ಕಾರ್ಯ ಅತ್ಯಂತ ಮಹತ್ವಪೂರ್ಣವಾದುದಾಗಿದೆ. ಕ್ಷೇತ್ರ ಕಾರ್ಯವಿಲ್ಲದೆ ಜಾನಪದ ದೃಶ್ಯಕಲೆಯ ಅಧ್ಯಯನ ಸಾಧ್ಯವಿಲ್ಲ. ಕ್ಷೇತ್ರವೇ ಈ ಅಧ್ಯಯನದ ಆಕರ ಮತ್ತು ಕ್ಷೇತ್ರಾಧ್ಯಯನವೇ ಇದರ ಗುರಿ ಎಂದರೆ ತಪ್ಪಾಗದು. ಈ ಕ್ಷೇತ್ರ ಕಾರ್ಯ ಅ. ಸಂದರ್ಶನ ಆ. ಸಂಭಾಷಣೆ ಇ. ಧ್ವನಿಮುದ್ರಣ ಈ. ಛಾಯಾಚಿತ್ರಣ ಉ. ಶಿಲ್ಪಗಳ ರಚನೆಗೆ ಬಳಸಲಾಗುವ ಮಾಧ್ಯಮಗಳ ವಿವರಣೆ ಊ. ಸಂಗ್ರಹಿತ ವಿಷಯದ ಪಟ್ಟಿಕೆಗಳನ್ನು ಸಿದ್ಧಪಡಿಸುವಿಕೆ ; ಹೀಗೆ ವಿವಿಧ ಸ್ವರೂಪದಲ್ಲಿರುತ್ತದೆ.

ಇವುಗಳನ್ನು ಹೀಗೆ ವಿವರಿಸಬಹುದು :

**ಅ. ಸಂದರ್ಶನ :** ಉತ್ತರ ಕರ್ನಾಟಕದ ಅಧ್ಯಯನದ ಕ್ಷೇತ್ರಗಳನ್ನು ಜಿಲ್ಲಾವಾರುಗಳಾಗಿ ವಿಂಗಡಿಸಿಕೊಂಡು ಜಿಲ್ಲಾ ಸ್ಥಳಕ್ಕೆ ಬೇಟಿ ಕೊಡುವುದು, ಜಿಲ್ಲೆಯ ಸಮಗ್ರ ಪರಿಚಯಕ್ಕಾಗಿ ಪ್ರಮುಖವಾದ

ತಾಲೂಕು ಘಟಕಗಳನ್ನು ಮಾಡಿಕೊಂಡು ಈ ತಾಲೂಕುಗಳನ್ನು ಪ್ರತಿನಿಧಿಸುವ ಊರುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಹೀಗೆ ಆಯ್ಕೆ ಮಾಡಿಕೊಂಡ ಊರು, ಮನೆ, ಅರಮನೆ, ಗುರುಮನೆ, ದೇವಾಲಯ, ಗವಿಗಳನ್ನು ಸಂದರ್ಶಿಸಿ ಶಿಲ್ಪಕಲೆಗೆ ಸಂಬಂಧಿಸಿದ ವಿಷಯ ಸಂಗ್ರಹಿಸಲಾಗಿದೆ.

ಕೆಲವೊಮ್ಮೆ ವಿಶಿಷ್ಟವಾದ ವಿಧಿ-ವಿಧಾನಗಳನ್ನು ಮುಖತಃ ತಿಳಿಯಲು ಆಚರಣೆಗೆ ಸೀಮಿತಗೊಂಡ ದಿನಗಳಂದೇ ಸಂದರ್ಶಿಸಬೇಕಾಗುತ್ತಿತ್ತು. ಏಕೆಂದರೆ ಪ್ರದೇಶದಿಂದ ಪ್ರದೇಶಕ್ಕೆ ಆಚರಣೆ, ನಂಬಿಕೆಗಳು, ಶಿಲ್ಪನಿರ್ಮಿತಿಗೆ ಬಳಸುವ ಮಾಧ್ಯಮಗಳು ಎಷ್ಟೋ ವೇಳೆ ಭಿನ್ನವಾಗಿರುವುದು, ಈ ಬಗೆಯ ಸಂದರ್ಶನದ ಮೂಲಕ ತಿಳಿಯಲು ಸಹಾಯಕವಾಗಿದೆ. ಹೀಗಾಗಿ ಜನಪದ ಶಿಲ್ಪಕಲೆಯ ಅಧ್ಯಯನಕ್ಕೆ ಸಂದರ್ಶನ ಅತ್ಯಂತ ಅಗತ್ಯವಾದುದಾಗಿದೆ.

**ಆ. ಸಂಭಾಷಣೆ :** ಜಾನಪದ ಮೌಖಿಕ ಮೂಲದ್ದೂ ಹೌದು. ಹೀಗಾಗಿ ಶಿಲ್ಪಕಲೆಯ ಹಿಂದೆ ಇರುವ ಜನಪದ ಬದುಕು ಎಂತಹುದು ಎಂಬುದನ್ನು ಸಂದರ್ಶಿಸಿದ ಗ್ರಾಮೀಣರಿಂದ ತಿಳಿದುಕೊಳ್ಳಲಾಗಿದೆ. ಶಿಲ್ಪಗಳ ಸೃಷ್ಟಿಯ ಹಿಂದೆ ಅಡಗಿರುವ ಕಥೆ, ಐತಿಹ್ಯ, ಹಾಡುಗಳನ್ನು ಹೇಳುವ ಜನಪದರನ್ನು ಮಾತಿಗೆಳೆದು ಅಧ್ಯಯನದ ವಿಷಯವನ್ನು ಅವರ ಮನಸ್ಸಿಗೆ ಮುಟ್ಟಿಸಿ, ತಟ್ಟಿಸಿ ಚರ್ಚೆಯ ಮೂಲಕ ವಿಷಯ ಸಂಗ್ರಹಿಸಿಕೊಳ್ಳಲಾಗಿದೆ. ಅಲ್ಲದೆ ವಿವಿಧ ಮಾಧ್ಯಮದ ವೃತ್ತಿಕಾರಕ ಶಿಲ್ಪಿಗಳ ಮೂಲಕ ಶಿಲ್ಪಕಲೆಗೆ ಬಳಸುವ ಮಾಧ್ಯಮ, ರಚನಾ ಕ್ರಮ, ಮಾರಾಟ ಮತ್ತು ಶಿಲ್ಪಗಳ ಮಾರಾಟದ ಹಿಂದಿರುವ ನಂಬಿಕೆ ಇತ್ಯಾದಿಗಳನ್ನು ಸಂಭಾಷಣೆಯ ಮೂಲಕ ದಾಖಲಿಸಿಕೊಂಡು ಬರೆಯಲಾಗಿದೆ.

**ಇ. ಧ್ವನಿಮುದ್ರಣ :** ಜನಪದ ಶಿಲ್ಪಕಲೆಯನ್ನು ಸಂಪ್ರದಾಯಗಳಿಂದ ಹೊರತು ಪಡಿಸುವುದು ಅಸಾಧ್ಯವಾದುದು. ಜನಪದ ಶಿಲ್ಪ ರಚನಾ ವಿನ್ಯಾಸ, ಪ್ರಮಾಣಗಳು, ಮಾಧ್ಯಮಗಳು, ಸಂದರ್ಭಗಳು ಯಾವ ಸ್ವರೂಪದ್ದೇ ಇರಲಿ, ಅವುಗಳ ಹಿಂದೆ ನೂರಾರು ಹಾಡು, ಗಾದೆ, ಒಗಟು, ನಂಬಿಕೆ, ಐತಿಹ್ಯಗಳು ಅಡಗಿದ್ದು ಇಂಪಾದ ಧ್ವನಿಯ ನೂರಾರು ವೈವಿಧ್ಯಮಯ ಹಾಡುಗಳಿಗೆ ಶಿಲ್ಪಗಳು ಕೇಂದ್ರಗಳಾಗಿ ಪಾತ್ರ ವಹಿಸಿರುವವು. ಸಂಪ್ರದಾಯ ಮುಖಿ ಆಚರಣೆಗೆ ಹಾಡುಗಳೇ ಮುಖ್ಯ ಭಾಗವಾಗಿವೆ. ಗುಳ್ಳವ್ವನ ಹಾಡು, ಸೀಗಮ್ಮನ ಹಾಡು, ಗೌರಮ್ಮನ ಹಾಡು, ಜೋಕುಮಾರನ ಹಾಡು, ಕಾಮಣ್ಣನ ಹಾಡು, ಮಣ್ಣಿನ ಬಸವನ ಹಾಡು, ಗುರ್ಜಿಯ ಹಾಡು, ಚೆಂಗೈವ್ವನ ಹಾಡು ಇಂತಹ ಹಾಡುಗಳನ್ನು ಧ್ವನಿ ಮುದ್ರಿಸಿಕೊಂಡು ಅನಂತರ ಅವುಗಳ ವಸ್ತು ವಿಷಯಗಳನ್ನು ವಿವೇಚಿಸಿ ಬರಹಕ್ಕಿಳಿಸಲಾಗಿದೆ.

**ಈ. ಛಾಯಾಚಿತ್ರಣ :** ಈ ಅಧ್ಯಯನವು ಜನಪದ ಶಿಲ್ಪಕಲೆ ಕೇಂದ್ರೀಕೃತವಾದುದು. ಅದಕ್ಕಾಗಿ ಅಗತ್ಯವೆನಿಸಿದ ನೂರಾರು ಶಿಲ್ಪಗಳನ್ನು ಛಾಯಾಚಿತ್ರಗಳಲ್ಲಿ ಸೆರೆಹಿಡಿದುಕೊಳ್ಳಲಾಗಿದೆ. ಅವು ಮಣ್ಣೆತ್ತುಗಳಿರಬಹುದು, ಜೋಕುಮಾರ, ಕಾಮಣ್ಣನ ಶಿಲ್ಪಗಳಾಗಿರಬಹುದು, ದ್ಯಾಮವ್ವ, ದುರುಗಮ್ಮ, ಮರಗಮ್ಮ ಮುಂತಾದ ಗ್ರಾಮ ದೇವತಾ ಶಿಲ್ಪಗಳಿರಬಹುದು, ಜಾತ್ರೆಯ ಸಂದರ್ಭಗಳಲ್ಲಿ ರಚಿಸಲ್ಪಟ್ಟು ಮಾರಲ್ಪಡುವ ಸಗಣಿಯ ಗೊಂಬೆ, ಶರಣೆ ಚೆಂಗೈವ್ವನಂತಹ ಶಿಲ್ಪಗಳಿರಬಹುದು, ಇಂತಹ ಶಿಲ್ಪಗಳಿಗಾಗಿ

ಕೆಲವು ಸಲ ನಿಗಧಿತ ದಿನಗಳನ್ನು ಗುರುತಿಟ್ಟುಕೊಂಡು ಹೋಗಬೇಕಾಗುತ್ತಿತ್ತು. ಹಬ್ಬ ಹರಿದಿನಗಳಲ್ಲೇ ಕೆಲವು ಶಿಲ್ಪಗಳು ಲಭ್ಯವಾಗುತ್ತಿದ್ದವು. ಇನ್ನು ಕೆಲವು ಸಲ ವಸ್ತು ಸಂಗ್ರಹಾಲಯಗಳಿಗೆ ಹೋಗಿ ವೀರ ಮರಣ, ಮಾಸ್ತಿ, ಆತ್ಮ ಬಲಿದಾನದಂತಹ ಶಿಲ್ಪಗಳನ್ನು ಅಧ್ಯಯನ ಮಾಡಿ ಅಗತ್ಯ ಕಂಡವುಗಳನ್ನು ಛಾಯಾಚಿತ್ರಣ ಮಾಡಿಕೊಂಡು ಬರಬೇಕಾಯಿತು. ಕೀಲುಗೊಂಬೆಗಳು, ಬಣ್ಣದ ಪಲ್ಲಕ್ಕಿಗಳು, ಸೂತ್ರದ ಗೊಂಬೆಗಳು, ಹರಕೆ ಶಿಲ್ಪಗಳು, ಗೌರಮ್ಮನ ಶಿಲ್ಪಗಳು, ದ್ಯಾಮವ್ವನ ಶಿಲ್ಪಗಳು, ಕಿಸಗಾಲು ಗೊಂಬೆಗಳು, ಸಗಣಿ-ಹಿಟ್ಟು ಮುಂತಾದ ಮಾಧ್ಯಮಗಳ ಶಿಲ್ಪಕೃತಿಗಳ ಛಾಯಾಗ್ರಹಣಕ್ಕಾಗಿ ಮನೆ, ಮಠ, ವಸ್ತು ಸಂಗ್ರಹಾಲಯ, ದೇವಸ್ಥಾನಗಳಿಗೆ ಊರೂರು, ಹಳ್ಳಿ-ಹಳ್ಳಿಗೆ ತಿರುಗಿ ಸಂದರ್ಶನ ಮಾಡಲಾಯಿತು. ಮತ್ತೆ ಕೆಲವು ಸಲ ವೈಯಕ್ತಿಕವಾಗಿ ಶಿಲ್ಪಗಳನ್ನು ಸಂಗ್ರಹಿಸಿದವರ ಸಹಾಯವನ್ನೂ ಇಲ್ಲಿ ಪಡೆದುಕೊಳ್ಳಲಾಗಿದೆ. ಸಂದರ್ಶನ, ಸಂಭಾಷಣೆ ಮತ್ತು ಛಾಯಾಚಿತ್ರಣವೆಂಬ ಮೂರು ಅಂಶಗಳು ಈ ವಸ್ತುಸಂಗ್ರಹಾಲಯದ ವಿಷಯದಲ್ಲಿ ಪ್ರಮುಖವಾಗಿವೆ.

**ಉ. ಪ್ರತಿ ಮಾಡುವಿಕೆ :** ಶಿಲ್ಪಗಳ ಛಾಯಾಚಿತ್ರಗಳು ಅಗತ್ಯವಿಲ್ಲವೆಂದಾಗ ಇಲ್ಲವೆ ಛಾಯಾಚಿತ್ರಣಕ್ಕೆ ತೊಡಕುಂಟಾದಾಗ ಅಥವಾ ಬೇಡವೆನಿಸಿದಾಗ ಅಂಥ ಕಡೆ ಸ್ವತಃ ಆ ಶಿಲ್ಪಗಳ ರೇಖಾಚಿತ್ರಗಳನ್ನು ಬರೆದುಕೊಳ್ಳಲಾಗಿದೆ.

**ಊ. ಸಂಗ್ರಹಿತ ವಿಷಯದ ಪಟ್ಟಿಕೆಗಳನ್ನು ಸಿದ್ಧಪಡಿಸುವಿಕೆ :** ಕ್ಷೇತ್ರ ಕಾರ್ಯದ ಅನುಭವವೇದ್ಯ, ಶಿಲ್ಪವೇದ್ಯ ವಿವರಗಳನ್ನು ಅಭ್ಯಾಸಕ್ಕೆ-ಬರವಣಿಗೆಗೆ ಅನುಕೂಲವಾಗುವಂತೆ ಪಟ್ಟಿಕೆಗಳನ್ನು ಟಿಪ್ಪಣಿ ಮಾಡಿಕೊಂಡು ಪ್ರಬಂಧಕ್ಕೆ ಅವಶ್ಯವಾದ ವಿಷಯ ಸಂಗ್ರಹಿಸಿಕೊಳ್ಳಲಾಗಿದೆ.

### ೨. ಆನುಷಂಗಿಕ ಆಕರ ಸಾಮಗ್ರಿ

ಪ್ರಕಟಿತ-ಅಪ್ರಕಟಿತ ಸಾಹಿತ್ಯ ಕೃತಿಗಳು, ಶಾಸನ ಸಂಪುಟಗಳು, ಪಿಎಚ್.ಡಿ. ಮಹಾಪ್ರಬಂಧಗಳು, ನಿಘಂಟು, ವಿಶ್ವಕೋಶ, ಗೆಜೆಟಿಯರ್‌ಗಳು, ಪುಸ್ತಕಗಳು, ದೇಶೀ ಭಾಷೆಗೆ ಅನುವಾದಿಸಿದ ಅನುವಾದ ಗ್ರಂಥಗಳು ಇವೆಲ್ಲ ಶಿಲ್ಪಕಲಾ ಅಧ್ಯಯನಕ್ಕೆ ಆನುಷಂಗಿಕ ಆಕರ ಸಾಮಗ್ರಿಯಾಗಿ ಬಳಸಿಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದ ವಿಷಯದ ಸಂಗ್ರಹಕ್ಕೆ ಕ್ಷೇತ್ರ ಕಾರ್ಯದ ಸಮಗ್ರ ಮಾಹಿತಿಗಳನ್ನು ಪಟ್ಟಿಕೆಗಳಲ್ಲಿ ಸಂಗ್ರಹಿಸಿಕೊಂಡಂತೆ ಆನುಷಂಗಿಕ ವಿವರಗಳನ್ನು ಒಂದೊಂದು ವಿಷಯಕ್ಕೊಂದರಂತೆ ಹಾಗೆಯೇ ಜಿಲ್ಲಾವಾರು ಮಾಹಿತಿ ದೊರೆಯುವಂತೆ ಬೇರೆ ಬೇರೆ ಉಪಪಟ್ಟಿಕೆಗಳಲ್ಲಿ ಟಿಪ್ಪಣಿಸಿಕೊಂಡು ಈ ಮಹಾಪ್ರಬಂಧವನ್ನು ಕಟ್ಟಲಾಗಿದೆ.

### ಅಧ್ಯಾಯಗಳ ಸಂಕ್ಷಿಪ್ತ ವಿವರ

**ಅಧ್ಯಾಯ ಒಂದು :** ಈ ಅಧ್ಯಾಯದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದ ಜನಪದ

ಶಿಲ್ಪಕಲೆಯ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನಗಳ ಕುರಿತು ಚರ್ಚಿಸುವುದರೊಂದಿಗೆ ಈ ಅಧ್ಯಯನಕ್ಕೆ ಬೇಕಾಗುವ ಆಕರ ಸಾಮಗ್ರಿಗಳ ಕುರಿತಾದ ವಿವರಣೆಯನ್ನು ನೀಡಲಾಗಿದೆ. ಜೊತೆಗೆ ಈ ಕ್ಷೇತ್ರದಲ್ಲಿ ಇದುವರೆಗೆ ನಡೆದ ಅಧ್ಯಯನಗಳನ್ನು ಅವಲೋಕಿಸಲಾಗಿದೆ.

**ಅಧ್ಯಾಯ ಎರಡು :** ಇದರಲ್ಲಿ ಕಲೆಯ ಅರ್ಥ, ಸ್ವರೂಪ, ಕಲೆಯ ವಿಧಗಳು, ದೃಶ್ಯಕಲೆ, ಶಿಲ್ಪಕಲೆ, ದುಂಡು ಶಿಲ್ಪ ಹಾಗೂ ಉಬ್ಬು ಶಿಲ್ಪ, ಶಿಲ್ಪಕಲೆಗಳ ವಿಂಗಡಣೆ, ಶಿಷ್ಟಪದ ಶಿಲ್ಪಕಲೆ ಹಾಗೂ ಜನಪದ ಶಿಲ್ಪಕಲೆ, ಜನಪದ ಶಿಲ್ಪಕಲೆಯ ವರ್ಗೀಕರಣ ಇತ್ಯಾದಿಗಳ ಸಂಕ್ಷಿಪ್ತ ವಿವರಣೆಗಳೊಂದಿಗೆ ಜನಪದ ಶಿಲ್ಪಕಲೆ ಮತ್ತು ಶಿಷ್ಟಪದ ಶಿಲ್ಪಕಲೆಯ ವೈಲಕ್ಷಣಗಳನ್ನು ಹೇಳುತ್ತ ಶಿಷ್ಟಪದ ಶಿಲ್ಪಕಲೆಗೆ ಜನಪದ ಶಿಲ್ಪಕಲೆಯೇ ಮೂಲವೆಂಬ ವಿವರಣೆ ನೀಡಲಾಗಿದೆ. ಮತ್ತು ಪ್ರಮುಖವಾಗಿ ಜನಪದ ಶಿಲ್ಪಕಲೆಯ ವೈಶಿಷ್ಟ್ಯ ಹಾಗೂ ಲಕ್ಷಣ ಇತ್ಯಾದಿಗಳ ಕುರಿತಾದ ವಿವೇಚನೆ ಮಾಡಲಾಗಿದೆ. ಜೊತೆಗೆ ಜನಪದ ಶಿಲ್ಪಕಲೆಯ ವರ್ಗೀಕರಣದ ಮಹತ್ವವನ್ನು ಹೇಳುತ್ತ ಜನಪದ ಶಿಲ್ಪಗಳು ರಚನೆಗೊಂಡ ಮಾಧ್ಯಮಗಳಿಗನುಗುಣವಾಗಿ ವರ್ಗೀಕರಣ ಮಾಡಿ ಅಧ್ಯಯನ ಮಾಡಲಾಗಿದೆ.

**ಅಧ್ಯಾಯ ಮೂರು :** ಇದರಲ್ಲಿ ಮಣ್ಣಿನ ಮಾಧ್ಯಮದ ಜನಪದ ಶಿಲ್ಪಕಲೆಯನ್ನು ಕುರಿತದ್ದಾಗಿದೆ. ಮಡಕೆಯ ಮಾಡುವರೆ ಮಣ್ಣೇ ಮೊದಲು ಎಂಬಂತೆ, ಶಿಲ್ಪ ರಚನೆಯೂ ಮಣ್ಣಿನಿಂದಲೇ ಮೊದಲುಗೊಂಡಿರಬೇಕು. ಕಾಲಕ್ರಮದಲ್ಲಿ ಅದು ಇತರ ಮಾಧ್ಯಮಗಳಲ್ಲೂ ಸೃಷ್ಟಿಗೊಂಡಿರಬೇಕು ಎಂಬುದನ್ನು ಪ್ರತಿಪಾದಿಸುತ್ತ ಪ್ರಸ್ತುತ ಮಣ್ಣಿನ ಮಾಧ್ಯಮದ ಜನಪದ ಶಿಲ್ಪಕಲೆಯು ಪ್ರಧಾನವಾಗಿ ಧರ್ಮಮೂಲವಾಗಿಯೇ ಕಂಡು ಬರುವದರಿಂದ ಮಣ್ಣಿನ ಮಾಧ್ಯಮದ ಜನಪದ ಶಿಲ್ಪಕಲೆಯನ್ನು ಧರ್ಮಮೂಲ ಜನಪದ ಶಿಲ್ಪಕಲೆಯೆಂದು ಕರೆದು ಅಧ್ಯಯನ ಮಾಡಲಾಗಿದೆಯಲ್ಲದೆ, ಅದರಲ್ಲಿ ಮತ್ತೆ ಉಪವಿಂಗಡಣೆ ಮಾಡಿಕೊಂಡು ಮಣ್ಣೆತ್ತು, ಕೋಟೆ ಬಸವ, ಅರಳೆಲೆ ಬಸವ, ಹುತ್ತಪ್ಪ, ಗುಳ್ಳವ್ವ, ಶಿರಿಯಾಳ ಶೆಟ್ಟಿ, ಜೋಕುಮಾರ, ಗುರ್ಜಿ, ಸೀಗಮ್ಮ ಇಂತಹ ಹಲವಾರು ಜನಪದ ಶಿಲ್ಪಗಳನ್ನು ಕುರಿತು ಅವುಗಳ ಮಾಧ್ಯಮ, ರಚನೆ ಮತ್ತು ಆಚರಣೆಗಳ ಹಿನ್ನಲೆಯಲ್ಲಿ ಅಧ್ಯಯನ ಮಾಡಲಾಗಿದೆ.

**ಅಧ್ಯಾಯ ನಾಲ್ಕು :** ಈ ಅಧ್ಯಾಯವು ಮರದ ಮಾಧ್ಯಮದ ಜನಪದ ಶಿಲ್ಪಕಲೆಯನ್ನು ಕುರಿತದ್ದಾಗಿದೆ. ಈ ಮಾಧ್ಯಮದ ಜನಪದ ಶಿಲ್ಪಗಳ ಬೆಳವಣಿಗೆ ತೇಜೋಹಾರಿಯಾಗಿದೆ. ನಮ್ಮ ಜನಪದ ಶಿಲ್ಪಕಲೆ ವಿಶೇಷವಾಗಿ ಮರದ ಮಾಧ್ಯಮದಲ್ಲೇ ಅರಳಿರುವುದನ್ನು ಕಾಣಬಹುದಾಗಿದೆ. ಈ ಮಾಧ್ಯಮದ ಜನಪದ ಶಿಲ್ಪಕಲೆಯು ಸೌಂದರ್ಯ ಪ್ರಜ್ಞೆ, ಧಾರ್ಮಿಕ ಹಿನ್ನಲೆ ಹಾಗೂ ವೃತ್ತಿಯ ಹಿನ್ನೆಲೆಯಲ್ಲಿ ಬೆಳೆದು ಬಂದುದರಿಂದ ಸೌಂದರ್ಯ ಮೂಲ ಜನಪದ ಶಿಲ್ಪಕಲೆ, ಧರ್ಮಮೂಲ ಜನಪದ ಶಿಲ್ಪಕಲೆ ಹಾಗೂ ವೃತ್ತಿಮೂಲ ಜನಪದ ಶಿಲ್ಪಕಲೆ ಎಂದು ವಿಭಾಗಿಸಿಕೊಳ್ಳಲಾಗಿದೆಯಲ್ಲದೆ ಅವುಗಳಲ್ಲಿ ಉಪವಿಂಗಡಣೆಗಳನ್ನು ಮಾಡಿಕೊಂಡು ದುರ್ಗಮ್ಮ, ಚೌಡಮ್ಮ, ಮರಗಮ್ಮ, ಗೌರಮ್ಮ ಅಲ್ಲದೆ ಚೆಂದಾಳ ಗೊಂಬೆ, ಕೀಲು ಗೊಂಬೆ, ಮುಖವಾಡಗಳು ಇಂತಹ ಹಲವಾರು ಜನಪದ ಶಿಲ್ಪಗಳನ್ನು ಕುರಿತು ಅವುಗಳ

ಮಾಧ್ಯಮ, ರಚನೆ, ಆಚರಣೆಗಳೊಂದಿಗೆ ಅವುಗಳು ಉಂಟು ಮಾಡುವ ದೃಶ್ಯಾತ್ಮಕ ಪರಿಣಾಮಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

**ಅಧ್ಯಾಯ ಐದು :** ಈ ಅಧ್ಯಾಯವು ಶಿಲಾಮಾಧ್ಯಮದ ಜನಪದ ಶಿಲ್ಪಕಲೆ ಕುರಿತಾಗಿದೆ. ಶಿಲ್ಪಗಳನ್ನು ಶಾಶ್ವತವಾಗಿ ಉಳಿಸಿಕೊಳ್ಳಬೇಕೆಂಬ ಅರಿವು ಮೂಡಿದಾಗ ಮನುಷ್ಯನು ಶಿಲ್ಪ ರಚನೆಗೆ ಶಿಲಾ ಮಾಧ್ಯಮವನ್ನು ಆಯ್ಕೆ ಮಾಡಿಕೊಂಡಿರಬೇಕು. ಶಿಲಾ ಮಾಧ್ಯಮದ ಜನಪದ ಶಿಲ್ಪಕಲೆ ಪ್ರಧಾನವಾಗಿ ಧಾರ್ಮಿಕ ಹಿನ್ನೆಲೆಯಲ್ಲಿ ಬೆಳೆದು ಬಂದುದರಿಂದ ಅದನ್ನು ಧರ್ಮಮೂಲದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಅಲ್ಲದೆ ಮತ್ತೆ ಅದರಲ್ಲಿ ಉಪವಿಂಗಡಣೆಗಳನ್ನು ಮಾಡಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಆರಾಧನೆ, ಆಚರಣೆಗಳ ಹಿನ್ನೆಲೆಯಲ್ಲಿ ಅನೇಕ ಶಿಲಾ ಶಿಲ್ಪಗಳು ಹುಟ್ಟಿಕೊಂಡಿವೆ. ನೂರಾರು ಗ್ರಾಮ ದೇವತಾ ಶಿಲ್ಪಗಳು ಈ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಟ್ಟಿವೆ. ಅಲ್ಲದೆ ವೀರ ಮರಣ, ಸಮಾಧಿ ಬಲಿದಾನ ಇತ್ಯಾದಿ ಶಿಲ್ಪಗಳನ್ನು ಈ ಅಧ್ಯಾಯದಲ್ಲಿ ಗಮನಿಸಿ ಅಧ್ಯಯನ ಮಾಡಲಾಗಿದೆ.

**ಅಧ್ಯಾಯ ಆರು :** ಈ ಅಧ್ಯಾಯವು ಲೋಹ ಮಾಧ್ಯಮದ ಜನಪದ ಶಿಲ್ಪಕಲೆಯನ್ನು ಕುರಿತಾಗಿದೆ. ಲೋಹ ಮಾಧ್ಯಮದ ಜನಪದ ಶಿಲ್ಪಕಲೆಯು ಸೌಂದರ್ಯ, ಧರ್ಮ ಹಾಗೂ ವೃತ್ತಿಯ ಹಿನ್ನೆಲೆಯಲ್ಲಿ ಬೆಳೆದು ಬಂದುದರಿಂದ ಲೋಹ ಮಾಧ್ಯಮದ ಜನಪದ ಶಿಲ್ಪಕಲೆಯನ್ನು ಸೌಂದರ್ಯಮೂಲ ಜನಪದ ಶಿಲ್ಪಕಲೆ, ಧರ್ಮಮೂಲ ಜನಪದ ಶಿಲ್ಪಕಲೆ ಮತ್ತು ವೃತ್ತಿಮೂಲ ಜನಪದ ಶಿಲ್ಪಕಲೆ ಎಂದು ಪ್ರಧಾನವಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಮತ್ತೆ ಇವುಗಳಲ್ಲಿ ಉಪವಿಂಗಡಣೆಗಳನ್ನು ಮಾಡಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಜೊತೆಗೆ ಎರಕ ಹೊಯ್ಯುವ ಹಾಗೂ ಲೋಹದ ಹಾಳೆಯಿಂದ ಶಿಲ್ಪ ರಚಿಸುವ ವಿಧಾನ ಇತ್ಯಾದಿ ತಾಂತ್ರಿಕ ಅಂಶಗಳನ್ನು ವಿವರಿಸಲಾಗಿದೆ.

**ಅಧ್ಯಾಯ ಏಳು :** ಈ ಅಧ್ಯಾಯವು ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಕಲೆ ಕುರಿತಾದುದು. ಈ ಅಧ್ಯಾಯದಲ್ಲಿ ವಿವಿಧ ಬಗೆಯ ಮಾಧ್ಯಮಗಳಲ್ಲಿ ಸೃಷ್ಟಿಯಾದ ಶಿಲ್ಪಗಳನ್ನು ಸೌಂದರ್ಯಮೂಲ ಜನಪದ ಶಿಲ್ಪಕಲೆ, ಧರ್ಮಮೂಲ ಜನಪದ ಶಿಲ್ಪಕಲೆ ಮತ್ತು ವೃತ್ತಿಮೂಲ ಜನಪದ ಶಿಲ್ಪಕಲೆ ಎಂದು ಕರೆದು ಅವುಗಳಲ್ಲಿ ಮತ್ತೆ ಉಪವಿಂಗಡಣೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಮುಖ್ಯವಾಗಿ ನಮ್ಮ ಜನಪದರು ಆಚರಿಸುವ ಹಬ್ಬ ಹರಿದಿನಗಳಂತಹ ಸಂದರ್ಭಗಳಲ್ಲಿ ಕೆಲವು ವಿಶಿಷ್ಟ ಮಾಧ್ಯಮಗಳಲ್ಲಿ ಶಿಲ್ಪಗಳು ರಚಿಸಲ್ಪಡುತ್ತವೆ. ಮುಖ್ಯವಾಗಿ ತೊಗಲು ಗೊಂಬೆ, ಕಿಸಗಾಲು ಗೊಂಬೆ, ಬೂದಗಾಮ, ಹಟ್ಟಿ ಹಬ್ಬದ ಪಾಂಡವರು, ಕಂಬಿ, ದೃಷ್ಟಿ ಗೊಂಬೆ, ಅರಿಷಿಣ ಗೌರಮ್ಮ ಮುಂತಾದ ಇಂತಹ ಶಿಲ್ಪಗಳಲ್ಲದೆ ಹಿಟ್ಟು, ಬೆಲ್ಲ, ಸಕ್ಕರೆ, ಬೆಂಡು, ಉಸುಗು ಮುಂತಾದ ವಿವಿಧ ಮಾಧ್ಯಮಗಳಲ್ಲಿನ ಜನಪದ ಶಿಲ್ಪಗಳನ್ನು ಹಾಗೂ ಅವುಗಳ ರಚನಾ ಕ್ರಮ, ದೃಶ್ಯಾತ್ಮಕ ಪರಿಣಾಮ ಮುಂತಾದವುಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

**ಅಧ್ಯಾಯ ಎಂಟು :** ಸಮಾರೋಪ. ಇದರಲ್ಲಿ ಮಣ್ಣು, ಮರ, ಶಿಲೆ, ಲೋಹ ಮತ್ತು ಸಂಕೀರ್ಣ ಎಂದು ಮಾಧ್ಯಮಗಳಿಗನುಗುಣವಾಗಿ ಮಾಡಿದ ಅಧ್ಯಯನದ ಸಂಕ್ಷಿಪ್ತ ಸಮಾಲೋಚನೆ ಇದೆ. ಹಾಗೂ ಪ್ರಸ್ತುತ ಅಧ್ಯಯನದಿಂದ ಹೊರಬಂದ ಏಳೂ ಅಧ್ಯಾಯಗಳ ಒಟ್ಟು ಫಲಿತಗಳು ಹಾಗೂ ಪ್ರಮುಖ ಸಂಗತಿಗಳ ಸಮೀಕ್ಷೆ ಈ ಕೊನೆಯ ಅಧ್ಯಾಯದಲ್ಲಿರುತ್ತದೆ.

ಪ್ರಸ್ತುತ ಅಧ್ಯಯನಕ್ಕಾಗಿ ಉತ್ತರ ಕರ್ನಾಟಕದ (ಕಾರವಾರ ಜಿಲ್ಲೆಯೊಂದನ್ನು ಹೊರತು ಪಡಿಸಿ) ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಗದಗ, ಧಾರವಾಡ, ಹಾವೇರಿ, ಕೊಪ್ಪಳ, ಗುಲಬರ್ಗಾ, ಬಳ್ಳಾರಿ, ರಾಯಚೂರು ಮತ್ತು ಬೀದರ ಪ್ರದೇಶಗಳನ್ನು ಮಾತ್ರ ಪರಿಗಣಿಸಿ ಕ್ಷೇತ್ರ ಕಾರ್ಯ ಕೈಗೊಂಡು ವಿಷಯ ಸಂಗ್ರಹಿಸಲಾಗಿದೆ. ಇಲ್ಲಿ ಆಯ್ಕೆ ಮಾಡಿದ ಕಲೆಯ ದೃಷ್ಟಿಯಿಂದ ತೀರ ಪ್ರಮುಖವೆನಿಸುವ ಶಿಲ್ಪಗಳ ಮಾದರಿಗಳನ್ನು ಮುಖ್ಯವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಹೀಗಾಗಿ ಇದೊಂದು ಅತ್ಯಂತ ಸ್ಥೂಲವಾದ ಹಾಗೂ ಪ್ರಾತಿನಿಧಿಕವಾದ ಅಧ್ಯಯನವಾಗಿದೆ. ಈ ಪ್ರದೇಶಗಳಿಗೇ ಈ ಅಧ್ಯಯನ ಸೀಮಿತವಾಗಿದ್ದರೂ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿರುವ ಜನಪದ ಶಿಲ್ಪಕಲೆಯ ಅಂಶಗಳನ್ನು ಕೆಲವು ಸಲ ಪೂರಕವಾಗಿಯೂ, ತೌಲನಿಕವಾಗಿಯೂ ಇಲ್ಲಿ ಪ್ರಾಸಂಗಿಕವಾಗಿ ಗಣನೆಗೆ ತಗೆದುಕೊಳ್ಳಲಾಗಿದೆ. ಇದಲ್ಲದೆ ವಿವಿಧ ರಾಜ್ಯ ಮತ್ತು ದೇಶಗಳಲ್ಲಿ ಪ್ರಚಲಿತವಿರುವ ಜನಪದ ಶಿಲ್ಪಕಲೆಯನ್ನು ಕುರಿತ ಅಂಶಗಳನ್ನು ಅಗತ್ಯ ಕಂಡಲ್ಲಿ ಪ್ರಸ್ತಾಪಿಸಲಾಗಿದೆ. ಇದು ಈ ಮಹಾಪ್ರಬಂಧದ ಒಟ್ಟು ಸ್ವರೂಪವಾಗಿದೆ.

## ಇದುವರೆಗೆ ನಡೆದ ಅಧ್ಯಯನಗಳು

ಕನ್ನಡದಲ್ಲಿ ಜಾನಪದ ಸಾಹಿತ್ಯ ಕುರಿತು ಈಗಾಗಲೇ ವಿಪುಲವಾದ ಸಂಶೋಧನೆ ನಡೆದಿದೆ. ಆದರೆ ಜಾನಪದ ದೃಶ್ಯಕಲೆಯ ಒಂದು ಪ್ರಮುಖ ಪ್ರಕಾರವಾದ ಜನಪದ ಶಿಲ್ಪಕಲೆಯ ಕುರಿತು ಗಮನಾರ್ಹ ಅಧ್ಯಯನಗಳು ಆಗಿಲ್ಲ. ಅಲ್ಲಲ್ಲಿ ಕೆಲವು ಸಣ್ಣ ಪುಟ್ಟ ಬಿಡಿ ಲೇಖನಗಳು, ಪುಸ್ತಕಗಳು ಪ್ರಕಟಗೊಂಡಿವೆಯಾದರೂ ಅವು ಜನಪದ ಶಿಲ್ಪಗಳ ಕುರಿತು ಸಮಗ್ರವಾದ ದೃಶ್ಯಾತ್ಮಕ ಅಧ್ಯಯನ ಮಾಡಿದವುಗಳಲ್ಲ.

ಸಂಶೋಧಕರು ಇದುವರೆಗೆ ಜನಪದ ಆಚರಣೆ, ಹಾಡು, ಒಗಟು, ಗಾದೆ, ಸಂಪ್ರದಾಯ, ಉಡುಗೆ-ತೊಡುಗೆ, ಸಾಹಿತ್ಯ ಹಾಗೂ ಜನಪದ ಪ್ರದರ್ಶನ ಕಲೆಗಳಾದ ದೊಡ್ಡಾಟ, ಬಯಲಾಟ, ಗೊಂಬೆಯಾಟದ ಕಲೆಗಳ ಕುರಿತು ಅಧ್ಯಯನ ಮಾಡಿದ್ದಾರೆ. ಅಲ್ಲದೆ ಹಬ್ಬ-ಹರಿದಿನ, ಜಾತ್ರೆ-ಉತ್ಸವಾದಿಗಳು, ಅವುಗಳ ಆಚರಣೆ, ಹಿನ್ನೆಲೆ, ನಂಬಿಕೆಗಳ ಕುರಿತೂ ಸಾಕಷ್ಟು ಅಧ್ಯಯನ ಮಾಡಿದ್ದಾರೆ. ಆದರೆ, ಜನಪದ ದೃಶ್ಯಕಲೆಯ ಬಗ್ಗೆ ಅದರಲ್ಲೂ ಶಿಲ್ಪಕಲೆಯ ಕುರಿತು ಅದರ ವಿವಿಧ ಮಾಧ್ಯಮಗಳು, ರಚನೆ, ಸ್ವರೂಪ, ವೈವಿಧ್ಯ, ಪರಿಣಾಮ ಇತ್ಯಾದಿ ದೃಶ್ಯಾತ್ಮಕ ಅಧ್ಯಯನ ಗಮನಾರ್ಹ ರೀತಿಯಲ್ಲಿ ನಡೆದಿಲ್ಲವೆಂದೇ ಹೇಳಬೇಕಾಗುತ್ತದೆ. ಹಾಗೆಂದರೂ ಕೆಲವು ವಿದ್ವಾಂಸರು ತಮ್ಮ ಅಧ್ಯಯನದ

ಪರಿಮಿತಿಯಲ್ಲಿ ಜನಪದ ಶಿಲ್ಪಗಳನ್ನು ಕುರಿತು ಅಲ್ಲಲ್ಲಿ ಆಂಶಿಕವಾಗಿ ಅಧ್ಯಯನ ಮಾಡಿದ್ದು ಕಂಡುಬರುತ್ತದೆ.

ಡಾ. ಬಿ.ಎಸ್. ಗದ್ದಿಗಿಮಠರ[೯] 'ಕನ್ನಡ ಜಾನಪದ ಗೀತಗಳು' ಮಹಾಪ್ರಬಂಧದಲ್ಲಿ ಮೊದಲ ಬಾರಿಗೆ ಜನಪದ ಶಿಲ್ಪಗಳನ್ನು ಕುರಿತು ಪರಿಚಯಾತ್ಮಕವಾಗಿ ಅಧ್ಯಯನ ಮಾಡಲಾಗಿದೆ. ಅನಂತರ ಶಾಸನಗಳ ಅಧ್ಯಯನದ ಸಂದರ್ಭದಲ್ಲಿ ಶಿಲಾ ಮಾಧ್ಯಮದ ಜನಪದ ಶಿಲ್ಪಗಳನ್ನು ಪ್ರಾಸಂಗಿಕವಾಗಿ ಅಧ್ಯಯನ ಮಾಡಿದಂತಹ ಗ್ರಂಥಗಳೆಂದರೆ, ಡಾ. ಬಿ.ಆರ್. ಹಿರೇಮಠರ[೧೦] 'ವೀರಗಲ್ಲುಗಳು,' ಡಾ. ಎಚ್.ಆರ್. ರಘುನಾಥ ಭಟ್ಟರ 'ಕರ್ನಾಟಕ ಶಾಸನ ಕಲೆ,'[೧೧] ಪುಸ್ತಕಗಳು. ಎಸ್.ಕೆ. ರಾಮಚಂದ್ರರಾವ್ ಅವರ 'ಮೂರ್ತಿಶಿಲ್ಪ' ನೆಲೆ ಹಿನ್ನೆಲೆ[೧೨]ಯು ಶಿಲ್ಪಕಲೆಯ ಉಗಮ ಹಾಗೂ ವಿಕಾಸಗಳೊಂದಿಗೆ ಮಾಧ್ಯಮ ಮತ್ತು ಅವುಗಳ ವ್ಯಾಪ್ತಿ ಇತ್ಯಾದಿ ವಿಷಯಗಳನ್ನು ಐತಿಹಾಸಿಕವಾಗಿ ವಿಶ್ಲೇಶಿಸಿದುದಾಗಿದೆ. ಡಾ. ಎ.ವ್ಹಿ. ಪಾಟೀಲರ 'ಉತ್ತರ ಕರ್ನಾಟಕದ ಜನಪದ ಕಲೆ ಮತ್ತು ವಿಧಿಕ್ರಿಯೆ'[೧೩] ಎಂಬ ಅಪ್ರಕಟಿತ ಮಹಾಪ್ರಬಂಧದಲ್ಲಿ ಅನೇಕ ಗ್ರಾಮ ದೇವತಾ ಶಿಲ್ಪಗಳ ರಚನೆ, ಆಚರಣೆ ಮತ್ತು ವಿಧಿಕ್ರಿಯೆಗಳ ಬಗ್ಗೆ ವಿವರಣೆಯಿದೆ. ಡಾ. ಸಿದ್ಧಲಿಂಗಯ್ಯ ಅವರ 'ಗ್ರಾಮದೇವತೆಗಳು'[೧೪] ಮಹಾಪ್ರಬಂಧದಲ್ಲಿ ನೂರಾರು ಗ್ರಾಮ ದೇವತೆಗಳ ಹುಟ್ಟು, ಅವುಗಳ ಹುಟ್ಟಿನ ಹಿಂದೆ ಅಡಗಿರುವ ನಂಬಿಕೆ, ಐತಿಹ್ಯಗಳೊಂದಿಗೆ ದೇವತಾಶಿಲ್ಪಗಳ ರೂಪ, ಅಲಂಕಾರಗಳನ್ನು ಹೇಳುತ್ತ ಅವುಗಳ ವ್ಯಾಪ್ತಿ ಮತ್ತು ಸ್ಥಾನ ಮಹತ್ವ ಇತ್ಯಾದಿ ವಿಷಯಗಳನ್ನು ಸವಿಸ್ತಾರವಾಗಿ ಚರ್ಚಿಸಲಾಗಿದೆ. ಡಾ. ಆರ್. ಶೇಷಶಾಸ್ತ್ರಿಯವರ 'ಕರ್ನಾಟಕದ ವೀರಗಲ್ಲುಗಳು,'[೧೫] ಡಾ. ಎಂ. ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,'[೧೬] ಡಾ. ಎಂ.ಎಂ. ಕಲಬುರ್ಗಿಯವರ 'ಸಮಾಧಿ-ಬಲಿಧಾನ-ವೀರಮರಣ ಸ್ಮಾರಕಗಳು,'[೧೭] ಡಾ. ಚೆನ್ನಕ್ಕ ಯಲಿಗಾರರ 'ಮಾಸ್ತಿ ಕಲ್ಲುಗಳು'[೧೮] ಮುಂತಾದ ಗ್ರಂಥಗಳಲ್ಲಿ ಶಿಲಾ ಮಾಧ್ಯಮದ ಶಿಲ್ಪಗಳ ಬಗ್ಗೆ ಸ್ವಲ್ಪ ಮಟ್ಟಿನ ಚರ್ಚೆಯಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಕಟಿಸಿದ 'ಶಿಲ್ಪಕಲಾ ಪ್ರಪಂಚ'[೧೯]ದಲ್ಲೂ ಶಿಲ್ಪಕಲೆಯ ಕುರಿತು ವಿದ್ವಾಂಸರ ಕೆಲವು ಲೇಖನಗಳಿವೆ. ಯಾವುದೇ ಬಗೆಯ ಶಿಲ್ಪಕಲೆಯನ್ನು ತಿಳಿದುಕೊಳ್ಳುವವರಿಗೆ, ಅಧ್ಯಯನ ಮಾಡುವವರಿಗೆ ಇದೊಂದು ಪ್ರಮುಖ ಆಕರ

---

೯. ಡಾ. ಬಿ.ಎಸ್. ಗದ್ದಿಗಿಮಠ : ಕನ್ನಡ ಜಾನಪದ ಗೀತೆಗಳು, ೧೯೫೪
೧೦. ಡಾ. ಬಿ.ಆರ್. ಹಿರೇಮಠ : ವೀರಗಲ್ಲುಗಳು, ೧೯೭೬
೧೧. ಡಾ. ಎಚ್.ಆರ್. ರಘುನಾಥ ಭಟ್ : ಕರ್ನಾಟಕ ಶಾಸನ ಕಲೆ, ೧೯೭೭
೧೨. ಎಸ್.ಕೆ. ರಾಮಚಂದ್ರರಾವ್ : ಮೂರ್ತಿಶಿಲ್ಪ : ನೆಲೆ-ಹಿನ್ನೆಲೆ, ೧೯೮೧
೧೩. ಡಾ. ಎ.ವ್ಹಿ. ಪಾಟೀಲ : ಉತ್ತರ ಕರ್ನಾಟಕದ ಜನಪದ ಕಲೆ ಮತ್ತು ವಿಧಿಕ್ರಿಯೆಗಳು (ಅಪ್ರಕಟಿತ), ೧೯೮೧
೧೪. ಡಾ. ಸಿದ್ಧಲಿಂಗಯ್ಯ : ಗ್ರಾಮ ದೇವತೆಗಳು, ೧೯೮೯
೧೫. ಡಾ. ಆರ್. ಶೇಷ ಶಾಸ್ತ್ರಿ : ಕರ್ನಾಟಕದ ವೀರಗಲ್ಲುಗಳು, ೧೯೮೨
೧೬. ಡಾ. ಎಂ. ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯನ, ೧೯೬೬
೧೭. ಡಾ. ಎಂ.ಎಂ. ಕಲಬುರ್ಗಿ : ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೧೯೮೦
೧೮. ಡಾ. ಚೆನ್ನಕ್ಕ ಯಲಿಗಾರ : ಮಾಸ್ತಿ ಕಲ್ಲುಗಳು,೧೯೭೭
೧೯. ಪಿ.ಆರ್. ತಿಪ್ಪೇಸ್ವಾಮಿ (ಸಂ) : ಶಿಲ್ಪಕಲಾ ಪ್ರಪಂಚ, ೧೯೯೩

ಗ್ರಂಥವಾಗಿದೆ. ಜನಪದ ಶಿಲ್ಪಕಲೆಗೆ ಸಂಬಂಧಿಸಿದ ಒಂದು ಲೇಖನವೂ ಇದರಲ್ಲಿದೆ. ಡಾ. ಎಸ್.ಸಿ. ಪಾಟೀಲರ 'ಕರ್ನಾಟಕ ಜನಪದ ಚಿತ್ರಕಲೆ' [೨೦] ಮಹಾಪ್ರಬಂಧದಲ್ಲಿ ಜನಪದ ಚಿತ್ರಕಲೆಯನ್ನು ಅಧ್ಯಯನ ಮಾಡುವಾಗ ಪ್ರಾಸಂಗಿಕವಾಗಿ ಜನಪದ ಶಿಲ್ಪಕಲೆಯ ಬಗ್ಗೆಯೂ ಸಾಕಷ್ಟು ವಿಷಯಗಳನ್ನು ಹೇಳಲಾಗಿದೆ.

ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಚಲುವರಾಜುರವರ 'ಹಂಪಿ ಜಾನಪದ' [೨೧] ಪುಸ್ತಕದಲ್ಲೂ ಜನಪದ ಶಿಲ್ಪಗಳು ಹಾಗೂ ಆ ಶಿಲ್ಪಗಳ ಹಿಂದಿನ ಐತಿಹ್ಯಗಳ ಬಗ್ಗೆ ಸಾಕಷ್ಟು ಮಾಹಿತಿ ದೊರೆಯುತ್ತದೆ. ಡಾ. ಎಂ. ಚಿದಾನಂದಮೂರ್ತಿಯವರ 'ಗ್ರಾಮೀಣ' [೨೨] ದಲ್ಲೂ ಅನೇಕ ವಿಷಯಗಳು ಜನಪದ ಶಿಲ್ಪಗಳ ಕುರಿತಾಗಿವೆ. ರಾಜೇಸಾಬ್ ಛಪ್ಪರಬಂದ್ ಅವರ 'ಬಿಜಾಪುರ ಜಾತ್ರೆಗಳು' [೨೩] ಎಂಬ ಅಪ್ರಕಟಿತ ಮಹಾಪ್ರಬಂಧದಲ್ಲೂ ಜನಪದ ಶಿಲ್ಪಗಳು ಹಾಗೂ ಅವುಗಳ ಹಿಂದಿರುವ ಅನೇಕ ಅಂಶಗಳ ಸಂಗ್ರಹವಿದೆ. ಅರವಿಂದ ಮಾಲಗಿತ್ತಿಯವರ 'ಜಾನಪದ ವ್ಯಾಸಂಗ' [೨೪] ಡಾ. ಚೆನ್ನಕ್ಕ ಯಲಿಗಾರರ ಶಾಸನಗಳಲ್ಲಿ 'ಕರ್ನಾಟಕದ ಸ್ತ್ರೀಸಮಾಜ' [೨೫] ಮಹಾಪ್ರಬಂಧ, ಡಾ. ಬಿ.ಎಸ್. ಶೇಠೆಯವರ ಕರ್ನಾಟಕದಲ್ಲಿ 'ಸತಿ ಪದ್ಧತಿ,' [೨೬] ಬಸವರಾಜ ಕಲ್ಗುಡಿಯವರ 'ಮಾಸ್ತಿ ಪರಂಪರೆ,' [೨೭] ಡಾ. ಎಂ.ಎಂ. ಕಲಬುರ್ಗಿಯವರ 'ಮಾರ್ಗ, ಸಂಪುಟ -೨,' [೨೮] ಜೀ. ಶಂ. ಪರಮಶಿವಯ್ಯ ಅವರು ಸಂಪಾದಿಸಿದ 'ಕರ್ನಾಟಕ ಜಾನಪದ ಸಮೀಕ್ಷೆ' [೨೯] ಮುಂತಾದ ಗ್ರಂಥಗಳು ಜನಪದರ ಸಂಪ್ರದಾಯ, ನಂಬಿಕೆ, ಮೌಲ್ಯಗಳು ಇತ್ಯಾದಿಗಳನ್ನು ಒಳಗೊಂಡಿರುವುದರೊಂದಿಗೆ ಪ್ರಾಸಂಗಿಕವಾಗಿ ಶಿಲ್ಪವಿನ್ಯಾಸ, ಕೆತ್ತನೆ, ತಾಂತ್ರಿಕ ಅಂಶಗಳು ಮುಂತಾದ ವಿಷಯಗಳನ್ನು ತಕ್ಕ ಮಟ್ಟಿಗೆ ಚರ್ಚಿಸಿದವುಗಳಾಗಿವೆ. ಡಾ. ಅ.ಲ. ನರಸಿಂಹನ್ ಅವರ ಮಹಾಪ್ರಬಂಧ 'ಭಿತ್ತಿ ಚಿತ್ರ ಪರಂಪರೆ' [೩೦] ಯಲ್ಲೂ ಅಲ್ಲಲ್ಲಿ ಜನಪದ ಶಿಲ್ಪಗಳ ಕುರಿತು ಪರಿಚಯವಿದೆ. ಡಾ. ಚೆನ್ನಣ್ಣ ವಾಲೀಕಾರರ 'ಹೈದರಾಬಾದ್-ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ ಮಹಾಪ್ರಬಂಧದಲ್ಲಿ' [೩೧] ಸ್ತ್ರೀಗ್ರಾಮ ದೇವತೆಗಳ ಕುರಿತು ಹಲವಾರು ವಿಷಯಗಳ ಚರ್ಚೆಯಿದೆ. ದೇವತಾಶಿಲ್ಪಗಳ ರಚನೆ, ಮಾಧ್ಯಮ, ವೈಶಿಷ್ಟ್ಯ, ರಚನಕಾರರು ಇತ್ಯಾದಿ ವಿಷಯಗಳ ವಿವರಣೆಯೂ ಇದರಲ್ಲಿದೆ. ಡಾ. ಎಸ್.ಸಿ. ಪಾಟೀಲ ಅವರ 'ಆಚರಣೆಯಲ್ಲಿ ಜನಪದ ವಾಸ್ತು,

---

೨೦. ಡಾ. ಎಸ್.ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ೧೯೯೩

೨೧. ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಚೆಲುವರಾಜು (ಸಂ) :ಹಂಪಿ ಜಾನಪದ, ೧೯೯೬

೨೨. ಡಾ. ಎಂ. ಚಿದಾನಂದಮೂರ್ತಿ : ಗ್ರಾಮೀಣ, ೧೯೭೭

೨೩. ರಾಜೇಸಾಬ್ ಇ. ಚಪ್ಪರಬಂದ : ಬಿಜಾಪುರ ಜಿಲ್ಲೆಯ ಜಾತ್ರೆಗಳು, ೧೯೯೮

೨೪. ಅರವಿಂದ ಮಾಲಗತ್ತಿ : ಜಾನಪದ ವ್ಯಾಸಂಗ, ೧೯೮೫

೨೫. ಡಾ. ಚೆನ್ನಕ್ಕ ಎಲಿಗಾರ : ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ೧೯೯೦

೨೬. ಡಾ. ಬಿ.ಎಸ್. ಶೇಠೆ : ಕರ್ನಾಟಕದಲ್ಲಿ ಸತಿ-ಪದ್ಧತಿ, ೧೯೮೯

೨೭. ಡಾ. ಬಸವರಾಜ ಕಲ್ಗುಡಿ : ಮಾಸ್ತಿ ಪರಂಪರೆ

೨೮. ಡಾ. ಎಂ.ಎಂ. ಕಲಬುರ್ಗಿ : ಮಾರ್ಗ, ಸಂಪುಟ-೨-೧೯

೨೯. ಜೀ.ಶಂ. ಪರಮಶಿವಯ್ಯ (ಸಂ) : ಕರ್ನಾಟಕದ ಜಾನಪದ ಸಮೀಕ್ಷೆ, ೧೯೯೦

೩೦. ಡಾ. ಅ.ಲ. ನರಸಿಂಹನ್ : ಕರ್ನಾಟಕ ಭಿತ್ತಿ ಚಿತ್ರ ಪರಂಪರೆ, ೧೯೯೮

೩೧. ಡಾ. ಚೆನ್ನಣ್ಣ ವಾಲೀಕಾರ : ಹೈದರಾಬಾದ್ ಕರ್ನಾಟಕದ ಗ್ರಾಮ ದೇವತೆಗಳ ಜಾನಪದೀಯ ಅಧ್ಯಯನ, ೧೯೯೮

[illegible]

[illegible]

ಶಿಲ್ಪಗಳು'[೩೨] ಕಿರು ಪುಸ್ತಕದಲ್ಲಿ ವಿವಿಧ ಮಾಧ್ಯಮದ ಜನಪದ ಶಿಲ್ಪಗಳ ಕುರಿತು ಅಧ್ಯಯನ ಮಾಡಲಾಗಿದೆ. ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ 'ಜನಪದ ಕಲೆಗಳ ಕೋಶ'[೩೩] ದಲ್ಲಿ ಕೆಲವು ಜನಪದ ಶಿಲ್ಪಗಳ ಕುರಿತು ಅನೇಕ ವಿಷಯಗಳು ಪ್ರಸ್ತಾಪಿಸಲ್ಪಟ್ಟಿವೆ ಮಾತ್ರವಲ್ಲದೆ ಶಿಲ್ಪಗಳ ಐತಿಹಾಸಿಕ ಮಹತ್ವ, ಪ್ರಾದೇಶಿಕ ಭಿನ್ನತೆ, ವೈಶಿಷ್ಟ್ಯ, ನಂಬಿಕೆ, ಆಚರಣೆ ಇತ್ಯಾದಿ ವಿಷಯಗಳನ್ನು ವಿವರಿಸಲಾಗಿದೆ. ಡಾ. ವೀರೇಶ ಬಡಿಗೇರರ 'ಗುಳ್ಳವ್ವ ಆಚರಣೆ- ವಿಶ್ಲೇಷಣೆ'[೩೪] ಕಿರು ಪುಸ್ತಕದಲ್ಲಿ ಉತ್ತರ ಕರ್ನಾಟಕದಲ್ಲಿ ಆಚರಿಸಲ್ಪಡುವ ಜನಪದರ ದೇವತೆ ಗುಳ್ಳವ್ವ ಶಿಲ್ಪ ಹಾಗೂ ಅದರ ಮಾಧ್ಯಮ ಮತ್ತು ರಚನೆ, ಅಲಂಕಾರಗಳ ಕುರಿತೂ ಸಾಕಷ್ಟು ವಿಶ್ಲೇಷಣೆ ಇದೆ.

ಡಾ. ಡಿ.ವ್ಹಿ. ಪರಮಶಿವಮೂರ್ತಿಯವರ 'ಕನ್ನಡ ಶಾಸನ ಶಿಲ್ಪ'[೩೫] ವು ಶಿಲಾಮಾಧ್ಯಮದ ಜನಪದ ಶಿಲ್ಪಗಳ ಕುರಿತು ವಿಶೇಷವಾಗಿ ಅಧ್ಯಯನ ಮಾಡಿದ ಗ್ರಂಥವಾಗಿದೆ. ಈ ಬಗೆಯಲ್ಲಿ ಶಿಲ್ಪಗಳ ದೃಶ್ಯಾತ್ಮಕ ಅಧ್ಯಯನ ಕನ್ನಡದಲ್ಲೇ ಮೊದಲು ಎನ್ನಬೇಕು. ಇದರಲ್ಲಿ ಶಾಸನಶಿಲ್ಪಗಳ ತಲಸ್ಪರ್ಶಿಯಾದ ಅಧ್ಯಯನವನ್ನೇ ಮಾಡಲಾಗಿದೆಯೆಂದರೆ ತಪ್ಪಲ್ಲ. ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ 'ಕರಕುಶಲ ಕಲೆಗಳ ಕೋಶ'[೩೬] ದಲ್ಲೂ ಜನಪದ ಶಿಲ್ಪಗಳ ಕುರಿತು ಕೆಲವು ಲೇಖನಗಳು ಬಂದಿವೆ. ಡಾ. ಬಿ.ಪಿ. ಪಾಟೀಲರ 'ಉತ್ತರ ಕರ್ನಾಟಕದ ಗ್ರಾಮ ದೇವತೆಗಳು'[೩೭] ಮಹಾಪ್ರಬಂಧದಲ್ಲೂ ಅನೇಕ ದೇವತಾ ಶಿಲ್ಪಗಳ ಕುರಿತು ಅವುಗಳ ರಚನೆ, ಮಾಧ್ಯಮದ ಹಿನ್ನೆಲೆಯಲ್ಲಿ ಹಲವು ವಿಷಯಗಳು ಪ್ರಾಸಂಗಿಕವಾಗಿ ಪ್ರಸ್ತಾಪಗೊಂಡಿವೆ. ಡಾ. ಸಿ. ಮಹದೇವ ಅವರ ಬಳ್ಳಾರಿ ಜಿಲ್ಲೆಯ ಮರದ ವಾಸ್ತು[೩೮] ಕಿರು ಪುಸ್ತಕದಲ್ಲಿ ಮರದ ಮಾಧ್ಯಮದ ಜನಪದ ಶಿಲ್ಪಗಳ ಕುರಿತಾಗಿ ಮಾಡಿದ ಸಂಕ್ಷಿಪ್ತ ಅಧ್ಯಯನವೇ ಆಗಿದೆ. ಇವುಗಳಲ್ಲದೇ ಜಾನಪದ ಜಗತ್ತು, ಉದಯವಾಣಿ ಪ್ರಜಾವಾಣಿ, ದೀಪಾವಳಿ ವಿಶೇಷಾಂಕ ಸಂಚಿಕೆಗಳಲ್ಲಿ, ತರಂಗ, ಸುದಾ, ಕರ್ಮವೀರ, ಸಾಧನೆ, ಕರ್ನಾಟಕ ಭಾರತಿ, ವಿಜಯ ಕರ್ನಾಟಕ, ಕನ್ನಡ ಪ್ರಭ, ಜನಪದ ಮುಂತಾದ ಪತ್ರಿಕೆಗಳಲ್ಲೂ ಜನಪದ ಶಿಲ್ಪಗಳ ಕುರಿತಾಗಿ ಆಗಾಗ ಅನೇಕ ವಿಷಯಗಳು ಪ್ರಕಟಗೊಂಡಿವೆ. ಆದರೆ ಈ ಎಲ್ಲವುಗಳೂ ಪ್ರಾಸಂಗಿಕವಾಗಿ ಜನಪದ ಶಿಲ್ಪಕಲೆಯ ಕುರಿತು ವಿಷಯವನ್ನು ಪ್ರಸ್ತಾಪಿಸಿವೆಯೇ ಹೊರತು ಸಮಗ್ರವಾದ ಅಧ್ಯಯನ ಮಾಡಿರುವುದಿಲ್ಲ. ಇದನ್ನು ಗಮನಿಸಿ ಪ್ರಸ್ತುತ ಕರ್ನಾಟಕದ ಜನಪದ ಶಿಲ್ಪಕಲೆ ಎಂಬ ಮಹಾಪ್ರಬಂಧವನ್ನು ವಿಶೇಷವಾಗಿ ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ ಆಯ್ಕೆ ಮಾಡಿದ ಶಿಲ್ಪಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿ ರೂಪಿಸಲಾಗಿದೆ.

---

೩೨. ಡಾ. ಎಸ್.ಸಿ. ಪಾಟೀಲ : ಆಚರಣೆಯಲ್ಲಿ ಜನಪದ ವಾಸ್ತು ಶಿಲ್ಪಗಳು, ೧೯೯೮

೩೩. ಪ್ರೊ. ಹಿ.ಚಿ. ಬೋರಲಿಂಗಯ್ಯ (ಸಂ) : ಕರ್ನಾಟಕ ಜನಪದ ಕಲೆಗಳ ಕೋಶ, ೧೯೯೬

೩೪. ಡಾ. ವೀರೇಶ ಬಡಿಗೇರ : ಗುಳ್ಳವ್ವ-ಆಚರಣೆ, ವಿಶ್ಲೇಷಣೆ, ೧೯೯೯

೩೫. ಡಾ. ಡಿ.ವಿ. ಪರಮಶಿವಮೂರ್ತಿ, ಕನ್ನಡ ಶಾಸನ ಶಿಲ್ಪ, ೧೯೯೯

೩೬. ಡಾ. ಕರೀಗೌಡ ಬೀಚನಹಳ್ಳಿ (ಸಂ) : ಕರಕುಶಲ ಕಲೆಗಳ ಕೋಶ, ೨೦೦೦

೩೭. ಡಾ. ಬಿ.ಪಿ. ಪಾಟೀಲ : ಉತ್ತರ ಕರ್ನಾಟಕದ ಗ್ರಾಮ ದೇವತೆಗಳು, ೧೯೯೨

೩೮. ಡಾ. ಸಿ. ಮಹದೇವ : ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ೨೦೦೦

ಅಧ್ಯಾಯ : ಎರಡು

# ಜನಪದ ಶಿಲ್ಪಕಲೆ ಮತ್ತು ಶಿಷ್ಟಪದ ಶಿಲ್ಪಕಲೆ ; ವೈಲಕ್ಷಣಗಳು - ವರ್ಗೀಕರಣ

## ಕಲೆಯ ಅರ್ಥ, ಸ್ವರೂಪ

ಕಲೆ ಶಬ್ದವು ನಮ್ಮ ದೇಶದ ಸಾಂಸ್ಕೃತಿಕ ಚರಿತ್ರೆಯಲ್ಲಿ ಬಹಳ ಹಿಂದಿನಿಂದಲೇ ಬಳಕೆಯಾಗಿರುವುದು ಕಂಡುಬರುತ್ತದೆ. ಸಂಸ್ಕೃತದ ಕಲಾ ಕನ್ನಡದಲ್ಲಿ ಕಲೆ ಆಗಿದೆ. ಕಲಾ ಶಬ್ದಕ್ಕೆ ಚೂರು, ಚಲುವು, ಚಂದಿರನೊಂದಂಶ, ಕದಿರ, ಚತುರತೆ, ಲಲಿತಕಲೆ ಎಂದೂ; ಗತಿ, ನಡೆ, ಅರ್ಥ, ಜ್ಞಾನ, ತಿಳುವಳಿಕೆ ಎಂದೂ ಅರ್ಥಗಳಿವೆ. ಕಲೆ ಶಬ್ದವು ಇಂಗ್ಲೀಷಿನ Art ಎಂಬುದಕ್ಕೆ ಸಂವಾದಿಯಾಗಿ ಇಂದು ಬಳಸಲ್ಪಡುತ್ತಿದೆ.

ನಿಜವಾದ ಅರ್ಥದಲ್ಲಿ ಕಲೆ ಎಂದರೇನು ? ಅದರ ಸ್ವರೂಪವೇನು ? ಎಂಬುದರ ಕುರಿತು ಹಿಂದಿನಿಂದಲೂ ಅನೇಕ ದಾರ್ಶನಿಕರು, ಚಿಂತಕರು ಚರ್ಚಿಸುತ್ತಲೇ ಬಂದಿದ್ದಾರೆ. ಆದರೆ ಯಾರೊಬ್ಬರ ಚಿಂತನೆಯೂ ಇದೇ ಆತ್ಯಂತಿಕವೆಂಬಂತಿಲ್ಲ. ಕಾರಣ ಕಲೆ ಎಂದರೇನು ? ಎಂಬುದು ಬಹುಶಃ ಜೀವನವೆಂದರೇನು ? ಎಂಬ ಪ್ರಶ್ನೆಯಷ್ಟೇ ಗಹನವಾದುದು. ಏಕೆಂದರೆ ಕಲೆಗೆ ಅನೇಕ ಆಯಾಮಗಳಿವೆ. ಅನೇಕ ದಿಕ್ಕುಗಳಿವೆ. ಅನೇಕ ಉದ್ದೇಶ ಹಾಗೂ ವೈಶಿಷ್ಟ್ಯತೆಗಳಿವೆ. ಈ ವೈವಿಧ್ಯತೆಗಳ ಹಿನ್ನೆಲೆಯಲ್ಲಿ ಕಲೆಯ ಅರ್ಥ ಅಡಗಿದೆ. ಕಲೆಯು ಸೌಂದರ್ಯವನ್ನು ಸೃಷ್ಟಿಸುತ್ತದೆ. ಅವ್ಯಕ್ತವನ್ನು ವ್ಯಕ್ತಗೊಳಿಸುತ್ತದೆ. ಮನುಷ್ಯನನ್ನು ಸುಸಂಸ್ಕೃತಗೊಳಿಸುತ್ತದೆ. ಮನಸ್ಸಿಗೆ ಆನಂದವನ್ನು ನೀಡುತ್ತದೆ. ಇತ್ಯಾದಿಯಾಗಿ ಕಲೆಯನ್ನು ಅದರ ಮಹತ್ವವನ್ನು ಬಹಳ ಹಿಂದಿನಿಂದಲೂ ವರ್ಣಿಸುತ್ತ ಬರಲಾಗಿದೆ.

ಮಾನವನು ಆದಿಯಿಂದಲೂ ತನ್ನ ಸುತ್ತಲಿನ ಪ್ರಕೃತಿಯನ್ನು ನೋಡಿ, ತನ್ನಲ್ಲಿ ಉಂಟಾದ ಆನಂದವನ್ನು ಕಲೆಗಳ ಮೂಲಕ ವ್ಯಕ್ತಪಡಿಸುತ್ತ ಬಂದಿರುವನು. ಹೀಗಾಗಿ ಕಲೆಗಳು ಮನುಷ್ಯನ ಸೌಂದರ್ಯಾನುಭವದ ಪ್ರತಿಬಿಂಬಗಳು[೧] ಎಂಬ ಅಭಿಪ್ರಾಯಗಳೂ ಮೂಡಿ ಬಂದಿವೆ. ಕಲೆಯು ಕಲ್ಪನೆಯ ಸಾರ, ಅದು ಒಂದು ಅತೀಂದ್ರಿಯಾನುಭವ ಅಥವಾ ಇವೆರಡರ ಸಮ್ಮಿಶ್ರಣ ಎಂಬಂತೆ ಪರಿಗಣಿಸಲ್ಪಟ್ಟದ್ದೂ ಇದೆ. ಈ ಅರ್ಥವೇ ಬರುವಂತೆ ಆದರ್ಶವಾದ ಮತ್ತು ಪರಿಪೂರ್ಣವಾದ ಸೌಂದರ್ಯವೇ ಕಲೆ. ಸಾಮಾನ್ಯ ವಸ್ತುಗಳ ಅಚಂಚಲವಾದ ದೈವಿಕ ಮಾತೃಕೆಯೇ ಕಲೆ[೨] ಎಂಬ ವ್ಯಾಖ್ಯಾನಗಳೂ ಪ್ರಾಧಾನ್ಯತೆ ಪಡೆದದ್ದಿದೆ. ಆದರೆ ಈ ಮಾತುಗಳಾವವೂ ಕಲೆಯ ವಿಷಯವಾಗಿ ಯಾವ ನಿರ್ದಿಷ್ಟ ಅಭಿಪ್ರಾಯವನ್ನೂ ವ್ಯಕ್ತಪಡಿಸುವುದಿಲ್ಲ.

---

೧. Lio Tolstoy : What is Art? ; P. 90 fn

೨. ಪಿ.ಆರ್. ತಿಪ್ಪೇಸ್ವಾಮಿ : ಚಿತ್ರಕಲಾ ಪ್ರಪಂಚ, ಪುಟ -೧

[illegible]

[illegible]

[illegible]

[illegible]

ಯಾವುದು ತಾಟಸ್ಥ್ಯ ಚಿಂತನೆಯಲ್ಲಿ ಆನಂದವನ್ನು ಕೊಡಬಲ್ಲುದೋ ಅದೇ ಕಲೆ ಎಂದು ಇಮ್ಯಾನ್ಯುಯಲ್ ಕೌಂಟ್, ಮಾನವನ ಚಿತ್ತರಂಗ ದಿಗ್ದರ್ಶನವೇ ಕಲೆ ಎಂದು ಹೆಗಲ್, ನಿಸರ್ಗದ ರಸಘಟ್ಟಿಯೇ ಕಲೆ ಎಂದು ಬಾಲ್‌ಜಾಕ್, ಜೀವನ ದರ್ಶನ ಮಾಡಿಸುವುದೇ ಕಲೆ ಎಂದು ಹ್ಯಾವ್‌ಲಾಕ್ ಇಲ್ಲೀಸ್, [೩] ಕಲೆಯು ಪ್ರಕೃತಿಯ ಪುನರ್ ಸೃಷ್ಟಿಯಾಗಿದೆ ಎಂದು ಬೌಮ್ ಗಾರ್ಟನ್, ಕಲೆಯು ಬಾಹ್ಯ ಪ್ರಭಾವಗಳ ಅಭಿವ್ಯಕ್ತಿಯಾಗಿದೆ ಎಂದು ಕ್ರೋಚೆ, ಕಲೆಯು ಆತ್ಮಾಭಿವ್ಯಕ್ತಿಯಾಗಿದೆ ಎಂದು ಫ್ರೆಡರಿಕ್ ನೀತ್ಸೆ, ಕಲೆಯು ಈಶ್ವರನ ಸೃಷ್ಟಿ ಕುರಿತು ಮನುಷ್ಯನ ಪರಮಾನಂದದ ಅಭಿವ್ಯಕ್ತಿಯೂ ಹೌದು ಎಂದು ರಸ್ಕಿನ್, ಕಲೆಯು ಒಂದು ಕ್ರೀಡೆಯೇ ಆಗಿದೆ ಎಂದು ಹರ್ಬರ್ಟ್ ರೀಡ್ [೪] ಮುಂತಾದ ಪಾಶ್ಚಾತ್ಯ ಕಲಾ ಚಿಂತಕರು ಕಲೆಯ ಬಗೆಗೆ ವ್ಯಾಖ್ಯಾನಗಳನ್ನು ನೀಡಿದ್ದಾರೆ.

ಭಾರತದಲ್ಲಿ ವೇದಗಳ ಕಾಲದಿಂದಲೇ ಕಲೆಯ ಬಗೆಗೆ ಚಿಂತನೆ ನಡೆದು ಬಂದಿದೆ. ಕಲೆ ಎಂಬ ಶಬ್ದ ಪ್ರಪ್ರಥಮವಾಗಿ ಋಗ್ವೇದದಲ್ಲಿ ಪ್ರಯೋಗಗೊಂಡಿದ್ದು [೫] ತಿಳಿಯುತ್ತದೆ.

ಬ್ರಹ್ಮ ಸೂತ್ರದಲ್ಲಿ -ಯಾವುದು ಅಂತರಂಗದ ಭಾವನೆಗಳನ್ನು ಕಲಾತ್ಮಕವಾಗಿ ಅಭಿವ್ಯಕ್ತಿಗೊಳಿಸುತ್ತದೆಯೋ ಅದು ಕಲೆ ಎಂದು ವ್ಯಾಖ್ಯಾನವಿದೆ. ಅಭಿನವ ಗುಪ್ತನು ಅಭಿವ್ಯಕ್ತಿ ಹಾಗೂ ಧ್ವನಿ ರಸಾನುಭೂತಿಯ ಸ್ವರೂಪ ಕಾವ್ಯ(ಕಲೆ)ದ ಗುರಿಯಾಗಿದೆ [೬] ಎಂದಿದ್ದಾನೆ. ಕಲೆ ಮಾನವನ ಜೀವನ ಸಂಪತ್ತನ್ನು ತೆರೆದು ತೋರುತ್ತದೆ ಎಂದು ರವೀಂದ್ರನಾಥ ಟ್ಯಾಗೋರ್ [೭] ಅಭಿಪ್ರಾಯ ಪಟ್ಟಿದ್ದಾರೆ. ಯಾವ ಅಭಿವ್ಯಕ್ತಿಯಲ್ಲಿ ಅಂತರಂಗದ ಭಾವನೆಗಳು ಕಲ್ಪನಾಶೀಲವಾಗಿ ಪ್ರಕಟಗೊಳ್ಳುತ್ತವೆಯೋ ಅದೇ ಕಲೆ ಎಂದು ಡಾ. ಶ್ಯಾಮಸುಂದರ ದಾಸ, ಆಳವಾದ ಪರಿವೀಕ್ಷಣೆ, ಪರಿಗಣನೆ, ಚಿಂತನೆ ಹಾಗೂ ಸ್ಪಷ್ಟ ಅಭಿವ್ಯಕ್ತಿಯ ಗುಣಲಕ್ಷಣಗಳಿಂದ ಕೂಡಿದ ಮಾನವೀಯ ಪ್ರಕ್ರಿಯೆಯೇ ಕಲೆ ಎಂದು ಕೆ.ಸಿ. ಪಾಂಡೆ, ಈಶ್ವರನ ಸೃಜನ ಶಕ್ತಿಯ ಒಂದು ಲಘು ರೂಪವು ನಮ್ಮ ಅರಿವಿಗೆ ದಕ್ಕುವಂತೆ ಮಾಡುವುದೇ ಕಲೆಯಾಗಿದೆ ಎಂದು ಜಯಶಂಕರ ಪ್ರಸಾದ, ಒಂದು ಕೃತ್ರಿಮದ ನಿರ್ಮಾಣಕ್ಕಾಗಿ ಶಾರೀರಿಕ ಹಾಗೂ ಮಾನಸಿಕ ಕೌಶಲ್ಯದ ಪ್ರಯೋಗವೇ ಕಲೆಯಾಗಿದೆ ಎಂದು ಭೋಲಾನಾಥ ತಿವಾರಿ ಮುಂತಾದವರ [೮] ಹೇಳಿಕೆಗಳಾಗಿವೆ. ನಿರಾಕಾರವು ಸಾಕಾರವಾಗುವುದು ಕಲೆ, ಇಡಿಯಾದುದು ಬಿಡಿಯಾಗಿ ಬೆಡಗ ಬೀರುವುದು ಕಲೆ. ಕಲೆ ಸ್ಥೂಲವಾಗಿದ್ದಂತೆ ಸೂಕ್ಷ್ಮವೂ ಆಗಿದೆ. ಪ್ರವೃತ್ತಿ ಪರವಾಗಿದ್ದಂತೆ ನಿವೃತ್ತಿಪರವೂ ಆಗಿದೆ. ರೂಪದಲ್ಲಿ, ಪ್ರಕಾಶದಲ್ಲಿ ಕಲೆ ಸ್ಥೂಲವಾಗಿ ತೋರುತ್ತದೆ. ಸರಳತೆಯಲ್ಲಿ, ಕೋಮಲತೆಯಲ್ಲಿ ಕಲೆಯಿದೆ. ಅಕೃತ್ರಿಮ

---

೩. ಅ.ನ.ಕೃ. : ಚಿತ್ರಕಲೆ, ಪುಟ -೧೨೭

೪. ಮೂಲ ಹಿಂದಿ : ಡಾ. ಮಮತಾ ಚತುರ್ವೇದಿ, ಅನು. ಡಾ. ಕಾಶೀನಾಥ ಅಂಬಲಿಗೆ : ಸೌಂದರ್ಯ ಶಾಸ್ತ್ರ, ಪುಟ -೮

೫. ..... ಅದೇ ....., ಪುಟ - ೯

೬. ..... ಅದೇ .....

೭. ರವೀಂದ್ರನಾಥ ಟ್ಯಾಗೋರ : ಕಲೆಯ ಅರ್ಥ, ಅನು. ಎಚ್.ಎಸ್. ಶ್ರೀಮತಿ, ಪುಟ -೨

೮. ಮೂಲ ಹಿಂದಿ : ಡಾ. ಮಮತಾ ಚತುರ್ವೇದಿ, ಅನು. ಡಾ. ಕಾಶೀನಾಥ ಅಂಬಲಿಗೆ : ಸೌಂದರ್ಯ ಶಾಸ್ತ್ರ, ಪುಟ -೧೦

ಕಲೆಯು(ನಿಸರ್ಗ) ಇರುವಂತೆ ಕೃತ್ರಿಮ ಕಲೆಯೂ ಉಂಟು. ಒಂದರೊಳಗೆ ಇನ್ನೊಂದು ಸೇರಿ ಬೇರೊಂದು ಬಗೆಯ ಬಣ್ಣ ಬಂದಲ್ಲಿ ಕಲೆಯೆನಿಸುತ್ತದೆ[೯] ಎಂದು ಜ.ಚ.ನಿ. ಹೇಳುತ್ತಾರೆ.

ಹೀಗೆ ಸೌಂದರ್ಯ, ಪ್ರಕೃತಿ ಮತ್ತು ದೇವರು ಇತ್ಯಾದಿ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಕಲೆಯ ಕುರಿತು ಪಾಶ್ಚಾತ್ಯ ಹಾಗೂ ಭಾರತೀಯ ಚಿಂತನೆಗಳು ಹರಿದು ಬಂದಿವೆ. ಈ ಪರಿಕಲ್ಪನೆಗಳಿಂದ ಮುಕ್ತವಾಗಿಯೂ ಕಲೆಯ ಅರ್ಥವನ್ನು ಇನ್ನಷ್ಟು ಸ್ಪಷ್ಟಗೊಳಿಸುವ ನಿಟ್ಟಿನಲ್ಲಿ ಕೆಲವು ವ್ಯಾಖ್ಯಾನಗಳು ಬಂದಿದ್ದು, ಅವು ಹೀಗಿವೆ.

ಕಲೆಯು ಪ್ರಾಣಿಸಾಮ್ರಾಜ್ಯದಲ್ಲಿ ಉದ್ಭವಿಸುವ ಮತ್ತು ಲೈಂಗಿಕ ಅಪೇಕ್ಷೆ ಹಾಗೂ ಕ್ರೀಡಾ ಪ್ರವೃತ್ತಿಯಿಂದ ಹೊಮ್ಮುವ ಒಂದು ಚಟುವಟಿಕೆ ಎಂದು ಪಿಲ್ಲರ್, ಡಾರ್ವಿನ್, ಸ್ಪೆನ್ಸರ್ ಮುಂತಾದವರು; ಕಲೆ ನರಮಂಡಲದ ಸಂತೋಷಕರ ಉದ್ರೇಕದೊಡಗೂಡಿದ್ದು ಎಂದು, ಗ್ರೌಂಡ್, ಅಲೆನ್ ಕಲೆಯು ರೇಖೆ, ವರ್ಣ, ಚಲನೆ, ಸ್ವನ ಅಥವಾ ಶಬ್ಧಗಳ ಮೂಲಕ ಮಾನವ ಭಾವಗಳ ಭಾಹ್ಯಾಭಿವ್ಯಕ್ತಿ ಎಂದು ವೆರನ್, ಕಲೆ ಉತ್ಪಾದಕನಿಗೆ ಕ್ರಿಯಾತ್ಮಕ ಸಂತೋಷವನ್ನು ಕೊಡಲು ಉದ್ದಿಷ್ಟವಾದ, ಅಷ್ಟೇ ಅಲ್ಲದೆ ಹಲವಾರು ಜನ ಪ್ರೇಕ್ಷಕರಿಗೆ ಅಥವಾ ಶ್ರೋತೃ ಗಳಿಗೆ ಸಂತೋಷಕರ ಪ್ರಭಾವ ಮುದ್ರೆಯನ್ನುಂಟು ಮಾಡುವ ಯಾವುದೇ ಶಾಶ್ವತ ವಸ್ತುವಿನ ಅಥವಾ ತಾತ್ಕಾಲಿಕ ಕ್ರಿಯೆಯ ಉತ್ಪಾದನೆ ; ಇದರಿಂದ ನಿಷ್ಪನ್ನವಾಗುವ ಯಾವುದೇ ವೈಯಕ್ತಿಕ ಪ್ರಯೋಜನದಿಂದ ಸಂಪೂರ್ಣ ಬೇರೆಯಾದದ್ದು ಈ ಸಂತೋಷ.[೧೦] ಈ ಎಲ್ಲ ವ್ಯಾಖ್ಯಾನಗಳು ಸೌಂದರ್ಯಕಲ್ಪನೆಯನ್ನು ಅವಲಂಭಿಸಿದ ಆಧ್ಯಾತ್ಮಿಕ ಲಕ್ಷಣೀಕರಣಗಳಿಗಿಂತ ಬೇರೆಯಾಗದವುಗಳಾಗಿದ್ದರೂ ನಿಜವಾದ ಪ್ರಕೃತ ವಿಷಯವಾದ ಕಲೆಯನ್ನು ಬಿಟ್ಟು, ಕಲೆಯ ಪ್ರಯೋಜನ, ಕಲೆಯ ನಿಷ್ಪತ್ತಿ ಇತ್ಯಾದಿಗಳನ್ನು ಕುರಿತವುಗಳಾಗಿರುವುದರಿಂದ ಇವೆಲ್ಲವೂ ಅಸಮರ್ಪಕವೆಂದು ಟಾಲ್‌ಸ್ಟಾಯ್ ಗಣಿಸುತ್ತಾನೆ. ಮುಂದುವರೆದು ಕಲೆಯನ್ನು ಸರಿಯಾಗಿ ಲಕ್ಷಣಿಸಬೇಕಾದರೆ ಅದನ್ನು ಸಂತೋಷಸಾಧನವನ್ನಾಗಿ ಪರಿಗಣಿಸುವುದನ್ನು ನಿಲ್ಲಿಸಿ ಮಾನವ ಜೀವನದ ವಿಧಿಗಳಲ್ಲೊಂದು ಎಂಬುದಾಗಿ ಪರಿಗಣಿಸುವುದು ಮೊದಲು ಅವಶ್ಯ. ಈ ದಿಸೆಯಲ್ಲಿ ನೋಡಿದಾಗ, ಕಲೆ ಮನುಷ್ಯ-ಮನುಷ್ಯನ ನಡುವಣ ಸಂಸರ್ಗ ಸಾಧನಗಳಲ್ಲಿ ಒಂದೆಂಬುದು ನಮ್ಮ ಗಮನಕ್ಕೆ ಬರದೇ ಇರದು[೧೧] ಎಂದು ಹೇಳುತ್ತಾ ಕಲೆಯನ್ನು ಹೀಗೆ ವ್ಯಾಖ್ಯಾನಿಸುತ್ತಾನೆ; ಅನುಭವಿಸಿ ಆಗಿರುವ ಭಾವವನ್ನು ಒಬ್ಬಾತ ತನ್ನಲ್ಲಿ ಎಚ್ಚರಿಸಿಕೊಂಡು ಅದನ್ನು ಚಲನೆ, ರೇಖೆ, ಬಣ್ಣ, ನಾದ, ಆಕೃತಿ ಅಥವಾ ಶಬ್ಧಗಳ ಮೂಲಕ ಅಭಿವ್ಯಕ್ತಗೊಳಿಸಿ, ಆ ಭಾವವನ್ನು ಇನ್ನೊಬ್ಬನೆಡೆಗೆ ಪ್ರವಹಿಸಿದಾಗ ಎರಡನೆಯವನಲ್ಲೂ ಮೂಲದ ಭಾವನೆ ಸ್ಪುರಿಸುವಂತೆ ಮಾಡುವುದೇ ಕಲೆಯ ಕೆಲಸ.[೧೨] ಈ ವ್ಯಾಖ್ಯಾನವು ಇಂದು ಹೆಚ್ಚು ಸಮ್ಮತಿಯನ್ನು ಪಡೆದುದಾಗಿದೆ.

---

೯. ಡಾ. ಜ.ಚ.ನಿ. : ಕಳೆ - ಕಲೆ, ಪುಟ -೫೧

೧೦. ಲಿಯೋ ಟಾಲ್‌ಸ್ಟಾಯ್ : ಕಲೆ ಎಂದರೇನು ? ಅನು. ಸಿ.ಪಿ.ಕೆ. ಪುಟ -೪೦

೧೧. ..... ಅದೇ....., ಪುಟ -೪೧

೧೨. ..... ಅದೇ.....

ತೀ.ನಂ.ಶ್ರೀಯವರು ಹೇಳಿರುವಂತೆ ಕಾವ್ಯ ಎಂದರೆ ಏನು ಎಂದು ಅನುಭವಕ್ಕೆ ಗೊತ್ತು. ಅದನ್ನು ಬಾಯಿ ಮಾತಿನಲ್ಲಿ ವಿವರಿಸುವುದು ಕಷ್ಟ. ಅದರ ಎಲ್ಲ ಲಕ್ಷಣಗಳನ್ನು ಒಂದು ಸೂತ್ರ ರೂಪದಲ್ಲಿ ಹೇಳಲು ಆಗುವುದಿಲ್ಲ [೧೩] ಎಂಬ ಈ ಮಾತು ಯಾವುದೇ ಪ್ರಕಾರದ ಕಲೆಗೂ ಅನ್ವಯಿಸಿ ಹೇಳಬಹುದಾದರೂ ಅಧ್ಯಯನದ ದೃಷ್ಟಿಯಿಂದ ಕಲೆಯ ಅರ್ಥವನ್ನು ಹೇಳುವುದಾದರೆ - ಕಲೆಯನ್ನು ಕುರಿತು ನೂರಾರು ವ್ಯಾಖ್ಯಾನಗಳು ಹುಟ್ಟಿಕೊಂಡಿದ್ದರೂ ಅದರ ಅರ್ಥವನ್ನು ಸಮಗ್ರವಾಗಿ ಕಟ್ಟಿಕೊಡಲಾಗದಂತಹ ಪದ ಮಹತ್ವವುಳ್ಳದ್ದು, ಶಬ್ಧ ಶಕ್ತಿಯನ್ನು ಮೀರಿದ್ದು ಎನ್ನಬಹುದು. ಮನುಷ್ಯನ ಕರ್ತೃತ್ವದ ಕುಲುಮೆಯಲ್ಲಿ ಯಾವುದೋ ಒಂದು ಕಾಲಕ್ಕೆ ವ್ಯಕ್ತಿ ಪ್ರತಿಭೆಯಿಂದ ಆವಿಷ್ಕಾರವಾಗಿ, ಹೊಸ ಶೋಧವಾಗಿ [೧೪] ಬದುಕನ್ನು ಸುಂದರಗೊಳಿಸಲು ಹುಟ್ಟಿ ಬಂದಿದೆ. ಮನುಷ್ಯನ ಈ ಬಗೆಯ ಕಲಾತ್ಮಕ ಚಟುವಟಿಕೆಯನ್ನು ಕಲೆ ಎಂದು ಕರೆಯಬಹುದಾಗಿದೆ.

## ಕಲೆಯ ಉಗಮ - ವಿಕಾಸ

ನಿಸರ್ಗದೊಡನೆ ನಿಸರ್ಗವಾಗಿ ಮನುಷ್ಯ ಬದುಕತೊಡಗಿದಾಗ ಉಂಟಾದ ಆಯಾಸ, ಭಯ, ಆನಂದ, ಉತ್ಸಾಹದ ಪ್ರತೀಕವಾಗಿ ನೂರಾರು ಚಟುವಟಿಕೆಗಳು ಕಾಲಕ್ರಮೇಣ ರೂಢಿಗೆ ಬಂದವು. ಆ ಒಟ್ಟು ಚಟುವಟಿಕೆಗಳನ್ನು ಕಲೆ ಎಂಬ ಪದದ ವ್ಯಾಪ್ತಿಯಲ್ಲಿ ವಿದ್ವಾಂಸರು ಗಮನಿಸಿದ್ದಾರೆ. ಸಮಾಜ ಶಾಸ್ತ್ರಜ್ಞರು ಕಲೆಯ ಉಗಮವನ್ನು ಮಾನವನ ಸಾಮಾಜಿಕ ಜೀವನದ ವಿಕಾಸದಲ್ಲಿ ಕಂಡರೆ, ಮನಶಾಸ್ತ್ರಜ್ಞರು ಕಲೆಯ ಉಗಮವನ್ನು ಮಾನವನ ಮನಸ್ಸಿನಲ್ಲಿ ಕಂಡುಹಿಡಿಯುತ್ತಾರೆ. ಅಂದರೆ , ಮನಸ್ಸಿನ ಸೂಕ್ಷ್ಮ ಚಲನವಲನಗಳ ಅಭಿವ್ಯಕ್ತಿಯೇ ಕಲೆ ಎಂದು ಅವರು ಅದನ್ನು ಅಳೆಯುತ್ತಾರೆ. ಅರ್ಥಾರ್ಥ ಅದು ಒಂದು ಮನಸ್ಸಿನಲ್ಲಿ ಉಗಮಿಸಿ, ಇನ್ನೊಂದು ಮನಸ್ಸನ್ನು ತುಂಬುವುದು. ಹಾಗೆಯೇ ಇತಿಹಾಸಕಾರರು, ತಾತ್ವಿಕರು, ರಾಜಕಾರಣಿಗಳು ಇವರೆಲ್ಲರೂ ತಮ್ಮ ತಮ್ಮ ದೃಷ್ಟಿಯಿಂದ ಕಲೆಯ ಪರಿಯನ್ನು ಕಂಡು ಹಿಡಿಯುವ ಪ್ರಯತ್ನ ಮಾಡಿದ್ದಾರೆ. [೧೫] ಎಲ್ಲ ಅಭಿಪ್ರಾಯಗಳನ್ನು ಸಂಗ್ರಹಿಸಿ ಹೇಳುವುದಾದರೆ, ಕಲೆ ಮನುಷ್ಯನೊಟ್ಟಿಗೇ ಬೆಳೆದುಬಂದ ಚಟುವಟಿಕೆಯಾಗಿದ್ದು ಅದು ಮನುಷ್ಯ ಜನ್ಮದಷ್ಟೇ ಅವನು ಹುಟ್ಟು ಹಾಕಿದ ಈ ಕಲೆಯ ರಹಸ್ಯ ಕೂಡ ಕಲೆಯ ಉಗಮ - ವಿಕಾಸದ ಬಗೆಗೆ ಸ್ವಲ್ಪ ಚರ್ಚಿಸಿ ಸಮೀಪ ಹೋಗಬಹುದೇ ಹೊರತು ಖಚಿತತೆ ಸಾಧ್ಯವಾಗಲಾರದೆಂದೇ ಹೇಳಬಹುದು.

ಡಾ. ಶಿವರಾಮ ಕಾರಂತರು ಹೇಳುವಂತೆ [೧೬] ಜೀವನದ ಬಹುದಿನಗಳಲ್ಲಿ ನಡೆಯುವ ಅನೇಕಾನೇಕ ಘಟನೆಗಳು, ನೋಟಗಳು, ಸಂಭಾಷಣೆಗಳು, ಪರಿಚಯಗಳು ಮನದಲ್ಲಿ ಅಳಿಸಲಾರದ

---

೧೩. ತಿ.ನಂ.ಶ್ರೀಕಂಠಯ್ಯ : ಭಾರತೀಯ ಕಾವ್ಯ ಮೀಮಾಂಸೆ, ಪುಟ -೧೧೭

೧೪. ಡಾ. ಎಸ್.ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ -೧೩

೧೫. ಡಾ. ವಿ.ಕೃ. ಗೋಕಾಕ : ಕಲೆಯ ನೆಲೆ, ಪುಟ -೧

೧೬. ಡಾ. ಶಿವರಾಮ ಕಾರಂತ : ಕಲೆಯ ದರ್ಶನ, ಪುಟ -೨

[illegible]

ಮುದ್ರಿಕೆಯನ್ನೊತ್ತುವುದುಂಟು. ಬಹುಕಾಲದ ಮೇಲೆಯೂ ಇವುಗಳ ಸ್ಮರಣೆ ಅಳಿಯದೆ ಉಳಿಯುವುದೂ ಉಂಟು. ಸುಪ್ತವಾದ ಇಂಥ ಸ್ಮರಣೆಗಳು, ಭಾವನೆಗಳು ಪ್ರಕಟವಾಗಲು ಬಯಸುವುದುಂಟು. ಪ್ರಕಟಣೆಗಾಗಿ ಹಂಬಲಿಸುವ ಅನುಭವಗಳ ಆಕಾಂಕ್ಷೆಯೇ ಕಲೆಯ ಸೃಷ್ಟಿಗೆ ಕಾರಣವಾಗುತ್ತವೆ. ಮನಸ್ಸಿನ ಈ ಹೊರೆಯನ್ನು ತೃಪ್ತಿಕರವಾದ ದಾರಿಯಲ್ಲಿ ಮನುಷ್ಯ ಇಳುಹುವುದಕ್ಕೆ ಮಾಡುವಂಥ ವಿಚಿತ್ರ ಸೃಷ್ಟಿಯಾಗಿ ಕಲೆ ಹೊರ ಹೊಮ್ಮುತ್ತದೆ. ಈ ವಿವರಣೆ ಅತ್ಯಂತ ಅರ್ಥಪೂರ್ಣವಾಗಿ ತೋರುತ್ತದೆ. ಆದಿ ಕಾಲದಿಂದ ಮಾನವನು ಮೂಕವಿಸ್ಮಿತನನ್ನಾಗಿ ಮಾಡುತ್ತ ಬಂದ ವಿಚಿತ್ರಮಯ ಜಗತ್‌ಸೃಷ್ಟಿ ಅವನ ಪಾಲಿಗೆ ಬಿಡಿಸಲಾಗದ ಒಗಟಾಗಿದೆ. ಆದಿ ಮಾನವನಿಗಿಂತಲೂ ಭೂಮ್ಯಾಕಾಶಗಳಲ್ಲಿ ತೋರಿಬಂದ ವೈಚಿತ್ರ್ಯಗಳು ಆತನಲ್ಲಿ ಉಂಟುಮಾಡುವ ಸಂತೋಷ, ಭೀತಿಗಳು ಆತನು ವಿಚಾರಶೀಲನಾಗಲು ಕಾರಣವಾದವು. ನಿಸರ್ಗದಲ್ಲಿ ಒಂದು ಕ್ರಮಬದ್ಧತೆ ಇರುವುದನ್ನು ಮನುಷ್ಯ ಅರಿತಾಗಿನಿಂದ ಈ ಎಲ್ಲವೂ ಇಷ್ಟೊಂದು ಕ್ರಮಬದ್ಧವಾಗಿ ಹೇಗೆ ನಡೆಯುತ್ತವೆ ? ಈ ಕ್ರಮಬದ್ಧತೆಗೆ ಕಾರಣರಾರು ? ಹೀಗೆ ರೂಪಿಸಿದಾತ ಯಾರು ? ಎಲ್ಲಿದ್ದಾನೆ ? ಇತ್ಯಾದಿಯಾಗಿ ಹಾಕಿಕೊಂಡ ಪ್ರಶ್ನೆಗಳಿಗೆ ಪೂರಕವಾಗಿ ದೇವ-ದೈವ, ಭೂತ-ಪ್ರೇತಾದಿಗಳನ್ನು ಕಲ್ಪಿಸಿಕೊಂಡನು. ತನ್ನ ಸಮಾಧಾನಕ್ಕಾಗಿ ಸ್ವಾರ್ಥದ ಸುಖಕ್ಕಾಗಿ, ದುಃಖದ ಪ್ರತೀಕಾರಕ್ಕಾಗಿ ಹುಟ್ಟಿಸಿಕೊಂಡ ಅನೇಕ ಚಟುವಟಿಕೆಗಳೇ ಕಲೆಗಳಾಗಿ ಮಾರ್ಪಟ್ಟವು.

ಧರ್ಮದ ಚೌಕಟ್ಟಿನಲ್ಲಿ ರೂಢಿಗೆ ಬಂದ ಇಂಥ ಧಾರ್ಮಿಕ ಆಚರಣೆಗಳು ಕಲೆಯ ರೂಪ ತಾಳಿ ಸಂಪ್ರದಾಯಗಳಾಗಿ ಬೆಳೆದವು. ಧಾರ್ಮಿಕ ಸಂಪ್ರದಾಯಗಳ ಪ್ರಭಾವಕ್ಕೆ ಸಿಲುಕಿ ದೇವರ ಆರಾಧನೆಗೆ ತೊಡಗಿ, ದೇವರನ್ನು ಸ್ತುತಿಸಲು, ನಲಿಸಲು, ದೇವರ ಕಣ್ಣಿಗೆ ಹಬ್ಬವನ್ನುಂಟು ಮಾಡಲು ಸಾಹಿತ್ಯ, ನೃತ್ಯ, ಅಲಂಕಾರದಂತಹ ಕಲೆಗಳು ಹುಟ್ಟಿ ಬಂದವು. ಹೀಗಾಗಿ ಕಲೆಯ ಉಗಮವನ್ನು ಧಾರ್ಮಿಕ ಆಚರಣೆ ಮತ್ತು ದೈವದ ಆರಾಧನೆಯ ಹಿನ್ನೆಲೆಯಲ್ಲಿ ಕಂಡುಕೊಳ್ಳಬೇಕಾಗುತ್ತದೆ. ಇದು ಮನುಷ್ಯನ ಬದುಕಿನ ಅಂತರಂಗವಾದರೆ, ಭಾಹ್ಯರಂಗದಲ್ಲಿ ಸೌಂದರ್ಯದ ದೃಷ್ಟಿಕೋನ ಮುಖ್ಯ ಪಾತ್ರ ವಹಿಸುತ್ತದೆ. ಅನ್ನ, ವಸ್ತ್ರ, ವಸತಿ, ಬಳಕೆಯ ವಸ್ತು, ಉಪಕರಣಾದಿಗಳಲ್ಲೆ ಸೌಂದರ್ಯವನ್ನು ಕಾಣುವ ಪ್ರವೃತ್ತಿಯಿಂದಾಗಿ ಕಲೆ ಹುಟ್ಟಿ, ಪ್ರವೇಶ ಪಡೆದು ವಿಕಾಸಗೊಳ್ಳುವಂತಾಯಿತು.

ಯಾವುದೇ ಅನುಭವಗಳು ಶಬ್ದಗಳ ಮೂಲಕ ಸ್ಪಷ್ಟಗೊಂಡಾಗ ಸಾಹಿತ್ಯವಾಗಿ, ಅಭಿನಯನದ ಮೂಲಕ ಮೂಡಿಬಂದಾಗ ನೃತ್ಯವಾಗಿ, ರೇಖೆ, ಬಣ್ಣಗಳ ಮೂಲಕ ಅರಳಿದಾಗ ಚಿತ್ರಕಲೆಯಾಗಿ, ಕಲ್ಲು, ಮಣ್ಣು ಮುಂತಾದ ಜಡವಸ್ತುಗಳ ಮೂಲಕ ಪ್ರವಹಿಸಿದಾಗಗ ಶಿಲ್ಪಕಲೆಯಾಗಿ ರೂಪ ತಳೆದವು. [೧೭] ಹೀಗೆ ಬದುಕಿನ ಅನುಭವವೇ ಕಲೆಗಳಿಗೆ ಮೂಲದ್ರವ್ಯವಾಗಿ ಈ ಕಲೆಗಳೇ ಸಾಂಸ್ಕೃತಿಕ ಬದುಕಿನ ಜೀವಂತ ಸಾಕ್ಷಿಗಳಾಗಿ ಬೆಳೆದು ನಿಂತವು.


---

೧೭. ಶಿವಾನಂದ ಎಚ್. ಬಂಟನೂರ (ಸಂ) : ದೃಶ್ಯಕಲಾ ಮೀಮಾಂಸೆ, ಸಂಪುಟ -೧, ಪುಟ -೨೮

## ಕಲೆಯ ವಿಧಗಳು

ಮನುಷ್ಯನ ಬದುಕಿನೊಟ್ಟಿಗೇ ಕಲೆಗಳೂ ವಿಕಾಸ ಹೊಂದಿವೆ. ನಮ್ಮ ಪೂರ್ವಜರು ಹುಟ್ಟಿನಿಂದ ಸಾವಿನವರೆಗೆ ಹಲವಾರು ಬಗೆಯ ಕಲೆಗಳನ್ನು ರೂಢಿಸಿಕೊಂಡು, ರಕ್ಷಿಸಿಕೊಂಡು ಬಂದಿರುವುದು ನಮ್ಮ ಸಂಸ್ಕೃತಿಯ ಬೆಳವಣಿಗೆಯನ್ನು ಅವಲೋಕಿಸುವ ಯಾರಿಗೇ ಆಗಲಿ ವಿಹಿತವಾಗುತ್ತದೆ. ಹೀಗಾಗಿ ಜೀವನದ ವಿಕಾಸವೆಂದರೇ ಕಲೆಯ ವಿಕಾಸ ; ಕಲೆಯ ವಿಕಾಸವೆಂದರೇ ಜೀವನದ ವಿಕಾಸ ಎಂದೇ ಅರ್ಥ.[೧೮] ಮುಖ್ಯವಾಗಿ ಈ ಕಲೆಗಳನ್ನು ಲಲಿತಕಲೆ ( Fine Arts ) ಮತ್ತು ಕುಶಲಕಲೆ ( Usefull Arts or Crafts ) ಎಂದು ವಿಭಾಗಿಸುತ್ತಾರೆ. ಸಾಮಾನ್ಯವಾಗಿ ಲಲಿತಕಲೆಯನ್ನು ಶುದ್ಧ ಕಲೆಯೆಂದೂ ಕರೆಯುವುದು ರೂಢಿಯಲ್ಲಿದೆ. ಕಾವ್ಯ, ಸಂಗೀತ, ನೃತ್ಯ, ಚಿತ್ರ, ಶಿಲ್ಪ ಮುಂತಾದ ಕಲೆಗಳನ್ನು ಲಲಿತಕಲೆಗಳೆಂದು ಕರೆದರೆ, ಕಮ್ಮಾರ, ಕುಂಬಾರ, ಬಡಿಗ, ನೇಕಾರ ಇಂತಹವರಿಂದ ಕಲಾತ್ಮಕ ವಸ್ತುಗಳು ಪ್ರಾಯೋಜನಿಕ ದೃಷ್ಟಿಯಿಂದ ತಯಾರಿಸಲ್ಪಡುವುದರಿಂದ ಇವಕ್ಕೆ ಕುಶಲಕಲೆಗಳೆಂದು ಕರೆಯಲಾಗುವುದು. ಇನ್ನೊಂದು ಬಗೆಯಲ್ಲಿ ಹೇಳುವುದಾದರೆ, ಭಾವ ಪ್ರಧಾನವಾಗಿ ಸೃಷ್ಟಿಗೊಂಡು ಮನಸ್ಸಿಗೆ ಆನಂದವನ್ನು ನೀಡಬಲ್ಲ ಕಲೆಗಳು ಲಲಿತಕಲೆಗಳೆನಿಸಿದರೆ, ವೃತ್ತಿಗೆ ಬೆನ್ನೆಲುಬಾಗಿ ಕೌಶಲ್ಯ ಪ್ರಧಾನವಾಗಿ ಅಲಂಕಾರಿಕವಾಗಿ ರಚನೆಗೊಳ್ಳುವ ವೃತ್ತಿಮೂಲ ಕಸುಬುದಾರರ ಕಲೆಗಳು ಕುಶಲ ಕಲೆಗಳೆನಿಸುತ್ತವೆ.

ಡಾ. ಎಸ್.ಸಿ. ಪಾಟೀಲರು ಕಲೆಗಳನ್ನು ಈ ಕೆಳಗಿನಂತೆ ಸಂಕ್ಷಿಪ್ತವಾಗಿ ಮತ್ತು ಅಷ್ಟೇ ವಿಶಾಲ ದೃಷ್ಟಿಕೋನದ ಹಿನ್ನೆಲೆಯಲ್ಲಿ ವಿಂಗಡಿಸುತ್ತಾರೆ.[೧೯]




೧೮. ಡಾ. ಎಸ್.ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ -೧೮

೧೯. ..... ಅದೇ .....

[illegible]


[illegible]

[illegible]

[illegible]

ಮುಂದುವರೆದು ಅವರು ಈ ರೀತಿ ವಿವರಿಸುತ್ತಾರೆ. ಈ ರೇಖಾಚಿತ್ರಗಳಲ್ಲಿ ಮಾಡಿರುವ ವಿಂಗಡಣೆ ಕೆಲವು ಸಲ ಸಂಕೀರ್ಣವಾಗುವ ಸಾಧ್ಯತೆ ಇದೆ.[೨೦] ಉದಾ: ಪ್ರಯೋಜನ ಮೂಲ ಕುಶಲ ಕಲೆಯು ವೃತ್ತಿ ಮೂಲವನ್ನೂ ಒಳಗೊಂಡಿದ್ದರೆ, ಸೌಂದರ್ಯ ಮೂಲ ಕುಶಲಕಲೆಯು ಪ್ರವೃತ್ತಿಯನ್ನು ಸೂಚಿಸುತ್ತದೆ. ಕೆಲವು ಸಲ ಪ್ರವೃತ್ತಿಯು ಸೌಂದರ್ಯದೊಂದಿಗೆ ಪ್ರಯೋಜನವನ್ನು ಪಡೆಯುವ ಸಂಕೀರ್ಣತೆಗೆ ಒಳಗಾಗಬಹುದು. ಕಣ್ಣಿನಿಂದ ನೋಡಿ ಆನಂದ ಪಡುವ ದೃಶ್ಯಕಲೆಯಲ್ಲಿ ಕಿವಿಯಿಂದ ಕೇಳಿ ಆನಂದಿಸುವ ಶ್ರಾವ್ಯವೂ ಒಳಗೊಳ್ಳವುದುಂಟು.

ಒಟ್ಟಾರೆ ಅಧ್ಯಯನದ ದೃಷ್ಟಿಯಿಂದ ಹೀಗೆ ಈ ಲಲಿತಕಲೆಗಳನ್ನು ವಿಂಗಡಿಸಬಹುದು.




ಮೇಲಿನ ವಿಂಗಡಣೆಯೂ ಗೊಂದಲಮುಕ್ತವೆಂದಲ್ಲ. ಚಿತ್ರ-ಶಿಲ್ಪಕಲೆಗಳನ್ನು ನೋಡುವುದರ ಮೂಲಕ ಗ್ರಹಿಸುವದರಿಂದ ಅವು ದೃಶ್ಯಕಲೆಗಳು. ನಾಟಕ, ನೃತ್ಯಗಳಲ್ಲಿ ಅಭಿನಯವನ್ನು ನೋಡುವುದರ ಮೂಲಕ ಮಾತ್ರವಲ್ಲದೆ, ಕೇಳುವುದೂ ಇರುತ್ತದೆ. ಹೀಗಾಗಿ ಅವು ದೃಕ್‌ಶ್ರಾವ್ಯ ಕಲೆಗಳೆನಿಸುತ್ತವೆ. ಕೇವಲ ಶ್ರಾವ್ಯ ಮೂಲ ಕಲೆಯೆನಿಸುವ ಸಂಗೀತದಲ್ಲಿ ಸಂಗೀತಗಾರನ ಧ್ವನಿ ತರಂಗಗಳಲ್ಲದೆ ಮನುಷ್ಯ ನಿರ್ಮಿತ ವಾದ್ಯಗಳಿಂದಲೂ ಧ್ವನಿ ತರಂಗಗಳನ್ನು ಹೊರಡಿಸಿ ಕೇಳುವುದು ಮುಖ್ಯವಾಗುತ್ತದೆ. ಹೀಗಾಗಿ ಸಂಗೀತ ಅಪ್ಪಟ ಶ್ರಾವ್ಯ ಕಲೆಯಾಗುತ್ತದೆ. ಆದರೆ ಶಾಬ್ಧಿಕ ಕಲೆಯಾಗಿರುವ ಸಾಹಿತ್ಯ ಎಷ್ಟೋ ವೇಳೆ ನಾಟಕ ಮತ್ತು ಸಂಗೀತಗಳಲ್ಲಿ ಬೆರೆತಿರುತ್ತದೆ. ಹೀಗಾಗಿ ಎಷ್ಟೋ ವೇಳೆ ಸಾಹಿತ್ಯ ಶ್ರಾವ್ಯಕಲೆಯಂತೆ ಗ್ರಾಸವಾಗುತ್ತದೆ. ಮುಖ್ಯವಾಗಿ ಸಾಹಿತ್ಯ ಶಾಬ್ಧಿಕವಾಗಿರುತ್ತದೆ. ಶಬ್ಧಗಳಿಗೆ ನಿರ್ಧಿಷ್ಟ ಅರ್ಥಗಳಿರುತ್ತವೆ. ಅರ್ಥವಿಲ್ಲದ ಶಬ್ಧಗಳ ಹೆಣಿಕೆ ಸಾಹಿತ್ಯವಾಗಲಾರದು. ಒಂದು ಶಬ್ಧವನ್ನು ಕೇಳಿದ ಕೂಡಲೇ ಅದಕ್ಕೆ ಈ ಈ ಅರ್ಥವೆಂದು ರೂಢಿಯಲ್ಲಿ ಬೆಳೆದು ಬಂದಿರುತ್ತದೆ. ಹೀಗಾಗಿ ಶಬ್ಧಗಳನ್ನು ಓದುವುದರಿಂದ ದೃಶ್ಯಕಲೆ ಎಂದಾಗಲೀ, ಕೇಳುವುದರಿಂದ ಶ್ರಾವ್ಯಕಲೆಯೆಂದಾಗಲೀ ಭಾವಿಸಬಾರದು. ಇಲ್ಲಿ ಮುಖ್ಯವಾಗುವುದು ಶಬ್ಧಾರ್ಥಗಳು.

---

೨೦. ಡಾ. ಎಸ್.ಸಿ. ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ, ಪುಟ -೧೮

ಈ ಶಬ್ಧಗಳ ಹಿಂದಿರುವ ಅರ್ಥಗಳನ್ನು ಗ್ರಹಿಸುವುದರ ಮೂಲಕ ನಮ್ಮ ಮನಸ್ಸು, ಹೃದಯಗಳು ಸಾಹಿತ್ಯವನ್ನು ಶಾಬ್ಧಿಕ ಕಲೆಯೆಂದು ತಿಳಿಯಬೇಕು. ಯಾವುದೇ ಶಿಷ್ಟಪದ ಲಲಿತ ಕಲೆಗಳು ಮೂಲತಃ ಜನಪದ ಲಲಿತ ಕಲೆಗಳ ವಲಯದಿಂದಲೇ ವಿಕಸಿತಗೊಂಡಿರುವುದರಿಂದ, ಪ್ರಸ್ತುತ ಜನಪದ ಶಿಲ್ಪಕಲೆ ಕುರಿತ ಅಧ್ಯಯನವನ್ನು ಜನಪದ ಮೂಲದ ಲಲಿತಕಲೆಗಳಲ್ಲಿ ಒಂದು ಎಂದೇ ಹೇಳಿ ಅಧ್ಯಯನ ಮಾಡಬಹುದಾಗಿದೆ.

ಲಲಿತಕಲೆಗಳನ್ನು ಕಾಲಬದ್ಧ ( Temporal ) ಹಾಗೂ ದೇಶಬದ್ಧ ( Spatial ) [೨೧] ಎಂದು ಎರಡು ವಿಭಾಗಗಳಾಗಿ ಗುರುತಿಸುವ ಪರಿಪಾಠವೂ ಇದೆ. ಸಾಮಾನ್ಯವಾಗಿ ಸಂಗೀತ ಮತ್ತು ನಾಟಕಗಳನ್ನು ಕಾಲಬದ್ಧ ಕಲೆಗಳು ಎಂದೂ, ಚಿತ್ರ ಹಾಗೂ ಶಿಲ್ಪಗಳನ್ನು ದೇಶಬದ್ಧ ಕಲೆಗಳು ಎಂದು ಹೇಳಲಾಗುವುದು. ಸಂಗೀತ, ನಾಟಕದಂತಹ ಕಲೆಗಳಲ್ಲಿ ಕಾಲದ ಗತಿ ಇರುತ್ತದೆ. ಅಂದರೆ ಇವುಗಳಲ್ಲಿ ಚಲನೆಯಿದ್ದು, ಕಥೆ ಅಥವಾ ಘಟನೆಗಳು ಅನುಕ್ರಮವಾಗಿ ಸಾಗುವ ಕ್ರಿಯೆ ಇರುತ್ತದೆ. ಇಲ್ಲಿ ಒಂದು ಹಾಡನ್ನು ಕೇಳುವಾಗ ಅಥವಾ ಪುಸ್ತಕವನ್ನು ಓದುವಾಗ ಅಲ್ಲಿ ನಿರೂಪಿಸಿದ ಸಂಗತಿಗಳು ಮೂಡಿದ ನಂತರ ಕ್ರಮೇಣ ಮಾಯವಾಗುತ್ತ ಹೋಗುತ್ತವೆ. ಮುಂದೆ ಹಾಡು ಸಾಗಿದಂತೆ ಅಥವಾ ಪುಸ್ತಕದ ಓದು ಸಾಗಿದಂತೆ ಹಿಂದಿನ ಘಟನೆಗಳು ತಕ್ಷಣಕ್ಕೆ ನಮ್ಮ ಮುಂದೆ ಇರುವುದಿಲ್ಲ. ಅಂತೆಯೇ ಅವು ಕಾಲಬದ್ಧ ಕಲೆಗಳು. ಚಿತ್ರ, ಶಿಲ್ಪಕಲೆಗಳು ಒಂದು ನಿಶ್ಚಿತ ಸ್ಥಳವನ್ನು ಶಾಶ್ವತವಾಗಿ ಆವರಿಸಿ, ಸ್ಥಿರವಾಗಿರುವ ಕಲೆಗಳಾದುದರಿಂದ ಇವು ದೇಶಬದ್ಧ ಕಲೆಗಳಾಗುತ್ತವೆ. ಇಲ್ಲಿ ಚಲನೆಯಿರುವುದಿಲ್ಲ. ಮತ್ತು ಈ ಕಲೆಗಳಲ್ಲಿ ಅನುಕ್ರಮವಾದ ಕ್ರಿಯೆ ಇರುವುದಿಲ್ಲ. ಕ್ಷಣದಿಂದ ಕ್ಷಣಕ್ಕೆ ಒಂದು ಘಟನೆಯಿಂದ ಇನ್ನೊಂದು ಘಟನೆಗೆ ಸಾಗುವ ಕಾಲದ ಕ್ರಿಯೆ ಇರುವುದಿಲ್ಲ. ಚಿತ್ರ ಅಥವಾ ಶಿಲ್ಪಕಲೆಯಲ್ಲಿ ಕಲಾಕೃತಿ ಪೂರ್ತಿಯಾಗಿ ಒಮ್ಮೆಲೇ ನಮ್ಮ ನೋಟಕ್ಕೆ ಸಿಗುತ್ತದೆ. ಇದು ಒಂದೊಂದು ಭಾಗವಾಗಿ ಪರಿಶೀಲನೆಗೆ ಸಿಗುವುದಾದರೂ ರಸಾನುಭವದ ದೃಷ್ಟಿಯಿಂದ ಸಮಗ್ರ ಕೃತಿ ನಮ್ಮ ಮುಂದೆ ಇರುತ್ತದೆ. ಆದ್ದರಿಂದ ಇವು ದೇಶಬದ್ಧ ಕಲೆಗಳೆಂದು ಹೇಳುತ್ತಾರೆ. ಆದರೆ ಈ ವಿವರಣೆ ಕಲಾಸ್ವಾದನ ಕ್ರಿಯೆಗೆ ಸಂಬಂಧಿಸಿದ್ದು ಮಾಧ್ಯಮ ಸೃಷ್ಟಿ ಕ್ರಿಯೆ ಇತ್ಯಾದಿ ಅಂಶಗಳನ್ನು ಗಣನೆಗೆ ತೆಗೆದುಕೊಂಡಂತೆ ಅನಿಸುವುದಿಲ್ಲ. ಹೀಗಾಗಿ ಈ ಕ್ರಮವು ತೃಪ್ತಿಕರವೆಂದು ಎನಿಸುವುದಿಲ್ಲ. ಒಟ್ಟಾರೆ ಲಲಿತ ಕಲೆಗಳಲ್ಲಿ ಒಂದು ವಿಭಾಗ ಅಥವಾ ಅಂಗ ದೃಶ್ಯಕಲೆ ಎನ್ನಬಹುದು. ಕೇವಲ ನೋಡುವುದರ ಮೂಲಕ ಆಸ್ವಾದನೆ ಮಾಡಲು ಸಾದ್ಯವಾಗುವ ಕಲೆಗಳನ್ನು ದೃಶ್ಯಕಲೆಗಳೆಂದು ಕರೆಯಲಾಗುವುದು. ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಮುಖ್ಯವಾಗಿ ಚಿತ್ರಕಲೆ ಮತ್ತು ಶಿಲ್ಪಕಲೆಗಳು ಈ ಪ್ರಕಾರದವುಗಳು.

ಚಿತ್ರಕಲೆ ಎಂದರೇನು ? ಶಿಲ್ಪಕಲೆ ಎಂದರೇನು ? ಎಂಬುದರ ಕುರಿತು ಪ್ರಾಚೀನರಿಂದಲೂ ಜಿಜ್ಞಾಸೆ ಬೆಳೆದು ಬಂದಿದ್ದು, ಅವೆಲ್ಲ ಅಭಿಪ್ರಾಯಗಳನ್ನು ಇಲ್ಲಿ ಚರ್ಚಿಸದೇ, ಒಂದು ಸೂತ್ರ ರೂಪದಲ್ಲಿ ಹೀಗೆ ಹೇಳಬಹುದು.

---

೨೧. ಪ್ರೊ. ಎಂ.ಎಚ್. ಕೃಷ್ಣಯ್ಯ : ಚರ್ಚೆಯಲ್ಲಿ ; ಬೆಂಗಳೂರು

[illegible]

೧. ಚಿತ್ರಕಲೆಯೆಂದರೆ ಸಾಮಾನ್ಯವಾಗಿ ಕಲಾವಿದನೋರ್ವನ ಭಾವನೆಗಳು ರೇಖೆ, ಬಣ್ಣಗಳ ಮೂಲಕ ಪ್ರವಹಿಸಿ ರೂಪ, ಆಕಾರಗಳಾಗಿ, ಒಂದು ಅವಕಾಶದ ಮೇಲೆ ಮೈತಳೆಯುವುದು ಅಥವಾ ಮೂರ್ತಗೊಳ್ಳುವುದು ಎಂದು ವ್ಯಾಖ್ಯಾನಿಸಬಹುದು.

೨. ಶಿಲ್ಪಕಲೆಯೆಂದರೆ, ಕಲಾವಿದನೋರ್ವನ ಭಾವನೆಗಳು ಕಲ್ಲು, ಮಣ್ಣಿನಂತಹ ವಿವಿಧ ವಸ್ತುಗಳ ಮೂಲಕ ಪ್ರವಹಿಸಿ ತ್ರಿಮಾನದ ( Three Dimensional ) ಆಕೃತಿಗಳಾಗಿ ರೂಪುಗೊಳ್ಳುವುದು. ಈ ಬಗೆಯ ಭಾವನೆಗಳು ಯಾವುದೇ ವಿಷಯವನ್ನು ಕುರಿತವುಗಳಾಗಿರಬಹುದು.

## ಶಿಲ್ಪಕಲೆ

ಶಿಲ್ಪ ಎನ್ನುವ ಮಾತು ಮೊದಲು ಬಹಳ ವ್ಯಾಪಕವಾದ ಅರ್ಥವನ್ನು ಪಡೆದಿತ್ತು. ವೇದದಲ್ಲಿ ಸಮಸ್ತ ಸೃಷ್ಟಿಯೆಲ್ಲವೂ [೨೨] ಶಿಲ್ಪವೆಂದು ಹೇಳಲಾಗಿದೆ. ಪ್ರಸಿದ್ಧವಾದ ಅರವತ್ತನಾಲ್ಕು ಕಲೆಗಳಿಗೆಲ್ಲಾ ಶಿಲ್ಪ ಎನ್ನುವ ಹೆಸರು ಆಗ ಅನ್ವಯವಾಗುತ್ತಿತ್ತು. [೨೩] ಕಾಲಕ್ರಮೇಣ ಈ ಪದದ ವ್ಯಾಪ್ತಿ ಪರಿಮಿತಗೊಂಡು ಶಿಲ್ಪವೆಂದರೆ ಮೂರ್ತಿಗಳ ನಿರ್ಮಾಣ ಎಂಬ ಅರ್ಥ ಬೆಳೆದುಬಂದಿತಾದರೂ ಅದು ವಾಸ್ತುವಿನ ಒಂದು ಅಂಗವೆಂಬಂತೆ ಬಳಕೆಯಾಗಿ ವಾಸ್ತುಶಿಲ್ಪ ಎಂದು ಬಳಸುತ್ತ ಬರಲಾಯಿತು. ಹೀಗಾಗಿ ವಾಸ್ತು ಶಿಲ್ಪ - ಶಿಲ್ಪ ಎಂಬುವ ಪದಗಳು ಹೆಚ್ಚು ಸಂಕೀರ್ಣಗೊಂಡವು. ವಾಸ್ತು ಎಂದರೆ ವಾಸದ ಕಟ್ಟಡಗಳು ಎಂದೂ, ವಾಸ್ತುಶಿಲ್ಪ ಎಂದರೆ ದೇವಾಲಯ ಕಟ್ಟಡಗಳೆಂದೂ, ಶಿಲ್ಪ ಎಂದರೆ ದೇವತಾ ಮೂರ್ತಿಗಳು ಎಂಬ ಅರ್ಥಗಳಲ್ಲಿ ಈ ಶಬ್ಧಗಳನ್ನು ಬಳಸುತ್ತಾ ಬರಲಾಗಿದೆ. ಇದೇ ಅರ್ಥದಲ್ಲಿ ಇಂದಿಗೂ ಕೂಡ ಬಳಸಲಾಗುತ್ತಿದೆ. ಆದರೆ ಈ ವಾಸ್ತುಶಿಲ್ಪ ಎಂಬ ಶಬ್ಧ ಎಷ್ಟೋ ವೇಳೆ ಗೊಂದಲಕ್ಕೆ ಎಡೆ ಮಾಡುತ್ತದೆ. ಒಂದು ಕಟ್ಟಡವಿರಲಿ ಅಥವಾ ದೇವಾಲಯವೇ ಆಗಿರಲಿ ಇಲ್ಲಿ ವಾಸ್ತು ಯಾವುದು, ಶಿಲ್ಪ ಯಾವುದು ಎಂದು ವಿಂಗಡಿಸುವುದು ಕಷ್ಟವಾಗುತ್ತದೆ. ಅಂದರೆ ಇಡೀ ದೇವಾಲಯ ವಾಸ್ತುವೇ ಒಂದು ಶಿಲ್ಪವೆಂಬಂತೆ ಅರ್ಥ ಕೊಡುತ್ತದೆ. ಆದ್ದರಿಂದ ಈ ಬಗೆಯ ಗೊಂದಲದ ನಿವಾರಣೆಗಾಗಿ ನಾವು ಈ ಕೆಳಗಿನಂತೆ ಆ ಶಬ್ಧಗಳನ್ನು ಬಳಸುವುದು ಉಚಿತವೆನಿಸುತ್ತದೆ. ಸಾಮಾನ್ಯವಾಗಿ ವಾಸಕ್ಕೆ ಮತ್ತಿತರ ಉಪಯೋಗಕ್ಕೆ ಕಟ್ಟಿದ ಮನೆ ಇತ್ಯಾದಿಗಳನ್ನು ವಾಸ್ತು(Architecture)ಗಳೆಂದೂ, ದೇವಾಲಯ ಕಟ್ಟಡಗಳನ್ನು ದೇವಾಲಯ ವಾಸ್ತುಕಲೆ ( Temple Architectural Art ) ಎಂದೂ, ಮೂರ್ತಿ ಶಿಲ್ಪಗಳನ್ನು ಶಿಲ್ಪಕಲೆ ( Sculptural Art ) ಎಂದೂ ಕರೆದರೆ ಹೆಚ್ಚು ಸೂಕ್ತವೆನಿಸುತ್ತದೆ.[೨೪] ಎಷ್ಟೋ ವೇಳೆ ದೇವಾಲಯಗಳ ಕಟ್ಟಡಗಳಲ್ಲಿ ಅಳವಡಿಸಲ್ಪಟ್ಟ ಶಿಲ್ಪಗಳಿಂದಾಗಿ ಇದರಲ್ಲಿ ವಾಸ್ತು ಎಂದು ಯಾವುದನ್ನು ಕರೆಯ ಬೇಕು ! ಶಿಲ್ಪವೆಂದು ಯಾವುದನ್ನು ಕರೆಯಬೇಕು ! ಎಂಬ ಗೊಂದಲವುಂಟಾಗಿ ಪ್ರಾಚೀನರು ವಾಸ್ತುಶಿಲ್ಪವೆಂದೇ ಕರೆದರೆಂದು ತೋರುತ್ತದೆ.

---

೨೨. ಜಿ. ಜ್ಞಾನಾನಂದ (ಸಂ) : ಕಾಶ್ಯಪ ಶಿಲ್ಪ ಶಾಸ್ತ್ರಂ, ಉತ್ತರಾರ್ಧ, ಪುಟ - III

೨೩. ಡಾ. ಎಚ್. ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ -೫೨೬

೨೪. ಇಂಗ್ಲೀಷಿನಲ್ಲಿ ಈ ಸ್ಪಷ್ಟತೆಯಿದೆ

ಈ ಗೊಂದಲ ನಿವಾರಣೆಗಾಗಿ ನಾವು ಇಲ್ಲಿ ದೇವಾಲಯ ವಾಸ್ತುವಿನ ಒಂದು ಅಂಗವಾಗಿ ಶಿಲ್ಪಗಳು ಅಳವಡಿಸಲ್ಪಟ್ಟರೆ ಅದನ್ನು ವಾಸ್ತು ಕಲೆ ಎಂದೂ, ಶಿಲ್ಪಗಳು ಸ್ವತಂತ್ರವಾಗಿ ಪ್ರತಿಷ್ಠಾಪಿತವಾದವುಗಳಾಗಿದ್ದರೆ ಅವನ್ನು ಒಟ್ಟಾಗಿ ಶಿಲ್ಪಕಲೆ ಎಂದು ಕರೆಯುವುದು ಸೂಕ್ತವೆಂದು ತೋರುತ್ತದೆ. [೨೫]

ಪ್ರಾಚೀನರು ಅಧಿಕ ಮನ್ನಣೆ ನೀಡುತ್ತ ಬಂದಿರುವ ವಿವಿಧ ಕಲೆಗಳಲ್ಲಿ ಶಿಲ್ಪಕಲೆಯೂ ಒಂದು. ಮಾನವನು ಕಲ್ಲು, ಕೊರಡು, ಮಣ್ಣಿನಂತಹ ವಸ್ತುಗಳಿಗೆ ತನ್ನದೇ ಆದ ರೂಪ ನೀಡಿ, ಆಕಾರ ಕೊಟ್ಟು ನೋಡಿ ಸಂತೋಷಪಡಲು ಎಂದು ಆರಂಭಿಸಿದನೋ ಅಂದೇ ಶಿಲ್ಪಕಲೆ ಹುಟ್ಟಿಕೊಂಡಿತು ಎಂದು ಹೇಳಬಹುದು. ಶಿಲ್ಪ ಎಂದರೆ ಕೌಶಲ್ಯದೊಂದಿಗೆ ಮಿಳಿತವಾದ ಕರ್ಮ [೨೬] ಎಂದು ವೇದ ವಾಙ್ಮಯದಲ್ಲಿ ಉಲ್ಲೇಖವಿದೆ. ಸಮಸ್ಕೃತದ ಪ್ರಾಚಿನ ಗ್ರಂಥಗಳಲ್ಲಿ ಶಿಲ್ಪ ಶಬ್ಧವನ್ನು ಕಲಾಕೌಶಲ ಎಂಬ ಅರ್ಥದಲ್ಲಿ ಬಳಸಲಾಗಿದೆ. ಅಗ್ನಿ ಪುರಾಣದಲ್ಲಿ ಒಂದು ಸಹಸ್ರ ಶಿಲ್ಪಗಳನ್ನು ಸೂಚಿಸಲಾಗಿದೆ. ಮತ್ತು ಅವುಗಳನ್ನು ಜೀವನೋಪಾಯದ ಮಾಧ್ಯಮಗಳು ಎಂದೂ ಹೇಳಲಾಗಿದೆ. ಈ ಪುರಾಣ ಗ್ರಂಥಗಳಲ್ಲಿ ಶಿಲ್ಪದ್ದೇ ಒಂದು ಅಂಗ ಚಿತ್ರಕಲೆಯೆಂದು ತಿಳಿದು, ಅದರ ವಿವೇಚನೆ ಮಾಡಲಾಗಿದೆ. [೨೭] ಮಾನಸಾರ [೨೮] ಗ್ರಂಥದಲ್ಲಿ ಶಿಲ್ಪ ನಿರ್ಮಾತೃಗಳ ಬಗ್ಗೆ ಹೇಳಲಾಗಿದೆ. ಐತಿಹಾಸಿಕ ಗ್ರಂಥಗಳಾದ ಹರ್ಷ ಚರಿತ, ರಾಜ ತರಂಗಿಣಿಗಳಲ್ಲಿಯೂ ಶಿಲ್ಪಶಾಸ್ತ್ರದ ಕುರಿತು ಚರ್ಚೆಯಿದೆ. ಜ್ಯೋತಿಷ್ಯ ಮತ್ತು ಖಗೋಳ ಶಾಸ್ತ್ರ ಗ್ರಂಥಗಳಲ್ಲಿಯೂ ಶಿಲ್ಪದ ವಿಷಯಗಳು ಉಕ್ತವಾಗಿವೆ. ಉದ್ಗ್ರಂಥಗಳಾದ ಲೀಲಾವತಿ ಮೊದಲಾದವುಗಳಲ್ಲಿ ಶಿಲ್ಪಶಾಸ್ತ್ರದ ಬಹಳಷ್ಟು ಅಂಶಗಳು ಉಕ್ತವಾಗಿವೆ. [೨೯] ಯಾಸ್ಕನ ನಿರುಕ್ತ ಹಾಗೂ ಅಮರ ಕೋಶದಲ್ಲೂ ಶಿಲ್ಪದ ಕುರಿತು ಅನೇಕ ವಿಷಯಗಳು ಬರುತ್ತವೆ. [೩೦]

ಪಾಣಿನಿಯ ಅಷ್ಟಾಧ್ಯಾಯಿ (ಕ್ರಿ.ಪೂ. ೫೦೦)ಯಲ್ಲಿ ಶಿಲ್ಪವನ್ನು ಚಾರು (ಲಲಿತ) ಮತ್ತು ಕಾ(ಉದ್ಯೋಗ) ಈ ಎರಡೂ ವಿಷಯಕ್ಕಾಗಿ ಬಳಸಲಾಗುತ್ತಿತ್ತು ಎಂದು ಹೇಳಲಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಶಿಲ್ಪಿಗಳ (ಕಾರುಕ) ಹೆಸರುಗಳನ್ನು, ಅವರ ಕಾರ್ಯಸೂಚಿಯನ್ನು ಕೊಡಲಾಗಿದೆ. ಅರಾಹಮಹಿರನ ಬೃಹತ್ ಸಂಹಿತೆಯಲ್ಲಿ ವಾಸ್ತು ಮತ್ತು ಶಿಲ್ಪಕಲೆಯ ಕುರಿತು ವಿವೇಚನೆ ಮಾಡಲಾಗಿದೆ.[೩೧] ಶಿಲ್ಪ ಎಂಬ ಮಾತಿಗೆ ಬೆರಗನ್ನುಂಟು ಮಾಡುವ ಕೈಕೆಲಸ (ಆಶ್ಚರ್ಯಕರಂ ಕರ್ಮ ಕರ್ಮೇತಿ ಹಸ್ತಯೋ)[೩೨] ಎಂದು ಹೇಳಲಾಗಿದೆ. ಸಂಸ್ಕೃತದ ಶಿಲ್ಪ ಎಂಬ ಶಬ್ಧ ಶೀಲ ಸಮಧೌ ಎನ್ನುವ ಧಾತುವಿನಿಂದ ಒದಗಿ

---

೨೫. ಇದರಲ್ಲಿ ದೇವತಾಶಿಲ್ಪಗಳೊಂದಿಗೆ ಪ್ರಾಣಿ, ಪಕ್ಷಿ, ಮನುಷ್ಯರ ಶಿಲ್ಪಗಳೂ ಒಳಗೊಳ್ಳುತ್ತವೆ

೨೬. ಪಿ.ಆರ್. ತಿಪ್ಪೇಸ್ವಾಮಿ (ಸಂ) : ಶಿಲ್ಪಕಲಾ ಪ್ರಪಂಚ, ಪುಟ -೧,೨

೨೭. ..... ಅದೇ .....

೨೮. ಡಾ. ಎಚ್. ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ -೫೨೭

೨೯. ಪಿ.ಆರ್. ತಿಪ್ಪೇಸ್ವಾಮಿ (ಸಂ) : ಶಿಲ್ಪಕಲಾ ಪ್ರಪಂಚ, ಪುಟ -೩೦

೩೦. ..... ಅದೇ ....., ಪುಟ -೩೫

೩೧. ..... ಅದೇ .....

೩೨. ..... ಅದೇ .....

[illegible]

ಬಂದುದೆಂದೂ ಮನಸ್ಸಿನ ಏಕಾಗ್ರತೆ, ಏಕಾತನತೆಗಳಿಂದ ಹೊರಬಂದುದೆಲ್ಲ ಶಿಲ್ಪವೆಂದೂ [೩೩] ಒಂದು ನಿವರ್ಚನವಿದೆ.

> ನಾನಾ ವಿಧಾನಂ ವಸ್ತೂನಾಂ ಯಂತ್ರಾಣಾಂ ಕಲ್ಪಸಂಪದಾವಮ್ ।
> ಧಾತೂನಾ ಸಾಧನಾಂ ಚವಸ್ತೂನಾಂ ಶಿಲ್ಪ ಸಂಜ್ಞಿತಮ್ ॥

ಅಂದರೆ ನಾನಾ ಪ್ರಕಾರದ ವಸ್ತುಗಳು, ಯಂತ್ರಗಳು, ಯುಕ್ತಿ, ಪ್ರಯುಕ್ತಿಗಳು, ಧಾತು, ಸಾಧನ, ಕೃತ್ರಿಮ ಪದಾರ್ಥ ಮತ್ತು ಮಂದಿರ ಮೊದಲಾದವಕ್ಕೆ ಶಿಲ್ಪವೆನ್ನುತ್ತಾರೆ ಎಂದು ಭೃಗವು ಶಿಲ್ಪದ ಲಕ್ಷಣ ನೀಡಿದ್ದಾನೆ. [೩೪]

ನಮ್ಮ ಜನಪದರಿಗೆ ಶಿಲ್ಪ ನಿರ್ಮಾಣ ಕೇವಲ ಮನರಂಜನೆಯ ಕಲೆಯಲ್ಲ. ಅದು ಶಿಲ್ಪಿಯ ಕರಕೌಶಲ್ಯದಿಂದ ಮೂಡಿಬಂದ ಕೃತಿಮಾತ್ರವೂ ಅಲ್ಲ. ಭಕ್ತರ, ಭಾವುಕರ ಆನಂದದಾಯಿಯಾಗಬಹುದಾದ ಮೂರ್ತಿ. ಅವರ ಭಾವನೆಯನ್ನು ಜನ್ಮ ಜನ್ಮಾಂತರಗಳ ಪುಣ್ಯ-ಪಾಪಗಳ ಫಲವನ್ನು ಹೊಂದಿದುದಾಗಿರುತ್ತದೆ.

ಶಿಲ್ಪವನ್ನು ಚಿತ್ರ, ಚಿತ್ರಾರ್ಧ ಮತ್ತು ಚಿತ್ರಾಭಾಸ ಎಂದು ಪ್ರಾಚೀನರು ವರ್ಗೀಕರಸಿದ್ದಾರೆ. [೩೫] ಚಿತ್ರ ಎಂದರೆ ಶಿಲ್ಪಗಳು ದುಂಡಾಗಿದ್ದು ಎಲ್ಲಾ ಅವಯವಗಳನ್ನು ಪೂರ್ತಿಯಾಗಿ ಕಡೆದಿದ್ದು ( Round ) ಎಂದೂ ಅರ್ಥ. ಚಿತ್ರಾರ್ಧ ಎಂದರೆ ಶಿಲ್ಪ ಪೂರ್ಣವಾಗಿ ಚಿತ್ರವಲ್ಲದ ರೂಪು, ರೇಖೆಯ ಸೂಕ್ಷ್ಮತೆ ಇರುವ ಶಿಲ್ಪಗಳು. ಇವು ಉಬ್ಬು ಶಿಲ್ಪಗಳು ( Figures in Half Relief ). ಚಿತ್ರಾಭಾಸವೆಂದರೆ, ಗೋಡೆ, ವಸ್ತ್ರ ಇವುಗಳ ಮೇಲೆ ಚಿತ್ರಿತವಾದವುಗಳು ಎಂದು ಅರ್ಥ. ಅಂದರೆ ಇಂದು ನಾವು ಯಾವುದನ್ನು ಶಿಲ್ಪವೆಂದು ಕರೆಯುತ್ತೇವೆಯೋ ಅದನ್ನೇ ಪ್ರಾಚೀನರು ಚಿತ್ರ ಎಂದು ಕರೆದಿದ್ದಾರೆ. ಈ ಚಿತ್ರ ಮತ್ತು ಚಿತ್ರಾರ್ಧಗಳನ್ನು ಮಣ್ಣು, ಕಲ್ಲು, ಇಟ್ಟಿಗೆ, ಲೋಹ ಇತ್ಯಾದಿಗಳಿಂದ ರೂಪಿಸಿರಬಹುದೆಂದೂ ಮತ್ತು ಹೊಂದುವಂತಹ ಬಣ್ಣ ಹಾಕಿ ಇನ್ನೂ ಸುಂದರಗೊಳಿಸಬಹುದೆಂದೂ ಶ್ರೀ ಕುಮಾರನ ಚಿತ್ರ ಲಕ್ಷಣ ಹೇಳುತ್ತದೆ. [೩೬]

ಇಂದು ನಾವು ಚಿತ್ರಕಲೆ ಎಂದು ಯಾವುದನ್ನು ಕರೆಯುತ್ತೇವೆಯೋ ಅದನ್ನು ಪ್ರಾಚೀನರು ಚಿತ್ರಾಭಾಸ ಎಂದು ಏಕೆ ಕರೆದರೆಂಬುದನ್ನು ಚರ್ಚಿಸಬಹುದು. ಆಭಾಸ ಎಂದರೆ ಬ್ರಾಂತಿ, ತಪ್ಪು ತಿಳುವಳಿಕೆ, ಸಾದೃಶ್ಯ, ಪ್ರತಿಬಿಂಬ ಎಂಬ ಅರ್ಥಗಳಿವೆ. ಪ್ರಾಯಶಃ ನೆರಳು ಬೆಳಕಿನಿಂದ ಕೂಡಿದ ಚಿತ್ರವು ಬಣ್ಣ ಹಾಕಿದ ನೈಜ ಪ್ರಮಾಣದ ಶಿಲ್ಪವನ್ನು ಹೋಲುವಂತೆ ಭಾಸವಾಗುತ್ತಿದ್ದರಿಂದ ಚಿತ್ರಕಲೆಗೆ ಚಿತ್ರಾಭಾಸವೆಂದು

---

೩೩. ಜಿ. ಜ್ಞಾನಾನಂದ : ಶಿಲ್ಪವಿದ್ಯಾ ರಹಸ್ಯೋಪನಿಷತ್ತು, ಪುಟ - VII
೩೪. ಶ್ರೀಧರ ಭಾಸ್ಕರ ವರ್ಣೆಕರ : ಭಾರತೀಯ ವಿದ್ಯೆ, ಪುಟ -೧೨೧
೩೫. ಪಿ.ಆರ್. ತಿಪ್ಪೇಸ್ವಾಮಿ (ಸಂ) : ಶಿಲ್ಪಕಲಾ ಪ್ರಪಂಚ, ಪುಟ -೧೪೭
೩೬. ..... ಅದೇ ....., ಪುಟ -೧೪೮

[illegible]

ಕರೆದಿರಬಹುದು. ತಾಂತ್ರಿಕ ದೃಷ್ಟಿಯಿಂದ ಶಿಲ್ಪವನ್ನು ದುಂಡು ಶಿಲ್ಪ ( Round Sculpture ) ಹಾಗೂ ಉಬ್ಬು ಶಿಲ್ಪ ( Relief Sculpture ) ಎಂದು ವಿಭಾಗಿಸಿ ನಾವು ನೋಡಬಹುದಾಗಿದೆ.

## ದುಂಡು ಶಿಲ್ಪ ಹಾಗೂ ಉಬ್ಬು ಶಿಲ್ಪ

ಶಿಲ್ಪ ( Sculpture ) ಹಾಗೂ ಉಬ್ಬು ಶಿಲ್ಪ ( Relief Sculpture ) ಕುರಿತು ಡಾ. ಶಿವರಾಮ ಕಾರಂತರು ಈ ವಿಷಯಗಳಿಗೆ ಬರವಣಿಗೆ ದುರ್ಬಲ ಮಾಧ್ಯಮ. ಏನು ಹೇಳುವುದಿದ್ದರೂ ಹೇಳುವ ಒಡವೆಯನ್ನು ಕಣ್ಣ ಮುಂದಿರಿಸಿ, ಚರ್ಚಿಸಿ ವಿಶ್ಲೇಷಿಸಿ ತಿಳಿಸಬೇಕಾದ ಕೆಲಸ ಎಂದಿದ್ದಾರೆ.[೩೭] ಈ ಮಾತು ಗಮನಾರ್ಹವಾದುದು. ಏಕೆಂದರೆ ಮೂಲತಃ ದೃಶ್ಯ ಮಾಧ್ಯಮವಾದ ಇವುಗಳನ್ನು ಕಣ್ಣಿನಿಂದ ನೋಡಿ ತಿಳಿಯಬೇಕೇ ವಿನಃ ಶಾಬ್ದಿಕ ಮಾಧ್ಯಮಗಳಲ್ಲಿ ಅವುಗಳ ವಿವರಣೆ, ವ್ಯಾಖ್ಯಾನ ಪರಿಪೂರ್ಣವೆನಿಸಲಾರದು ಅಂದೇ ಹೇಳಬೇಕು. ಶಿಲ್ಪ ಅಥವಾ ದುಂಡು ಶಿಲ್ಪವು ಒಂದು ಸ್ವತಂತ್ರವಾದ ಕೃತಿಯಾಗಿದ್ದು, ಅದಕ್ಕೆ ತನ್ನದೇ ಆದ ಹೊರಮೈ ಇರುತ್ತದೆ. ಹೀಗಾಗಿ ಶಿಲ್ಪ ಎಂಬುದು ನಾಲ್ಕೂ ದಿಕ್ಕುಗಳಿಂದ ನೋಡಬಹುದಾದ ನಿರ್ಮಾಣಕ್ಕೆ ಹೇಳುವ ಮಾತು. [೩೮] ಇದನ್ನು ಯಾವ ಬದಿಯಲ್ಲಿ ನಿಂತು ವಿವಿಧ ಮುಖಗಳನ್ನು ಪರಿಚಯ ಮಾಡಿಕೊಳ್ಳಬಹುದು. ಅಥವಾ ಅದನ್ನೇ ಯಾವ ಕಡೆಗೆ ಬೇಕಾದರೂ ತಿರುಗಿಸಿ ನೋಡಬಹುದು. ಹೀಗೆ ನಾಲ್ಕೆಂಟು ಕಡೆಗಳಿಂದ ತಿರುಗಿಸಿ ನೋಡಬಹುದಾದ ಶಿಲ್ಪವನ್ನು ದುಂಡು ಶಿಲ್ಪವೆಂದು ಕರೆಯುತ್ತಾರೆ.[೩೯] ಇದನ್ನೇ ಪೂರ್ಣ ಶಿಲ್ಪ ಎಂದೂ ಹೇಳಬಹುದು. ಈ ಪೂರ್ಣ ಅಥವಾ ದುಂಡು ಶಿಲ್ಪ ತೀರ ದುಂಡಾಗಿಯೇ ಇರಬೇಕೆಂದೇನೂ ಇಲ್ಲ. ಯಾವ ಆಕಾರದ್ದೂ ಆಗಿರಬಹುದು.

ಇನ್ನೊಂದು ಬಗೆಯ ಶಿಲ್ಪವನ್ನು ಉಬ್ಬು ಶಿಲ್ಪ ಅಥವಾ ಅರ್ಧ ಶಿಲ್ಪ ಎನ್ನುವರು. ಇದು ದುಂಡು ಶಿಲ್ಪ ಅಥವಾ ಪೂರ್ಣ ಶಿಲ್ಪದಂತಿರದೇ ಹಿನ್ನೆಲೆಗೆ ಅಂಟಿಕೊಂಡಿರುತ್ತದೆ. ಕಲಾಕೋಶದಲ್ಲಿ ಒಂದು ರೂಪು ಹಿನ್ನೆಲೆಯಿಂದ ಸ್ವಲ್ಪ ಮಾತ್ರ ಎದ್ದಿರುವಂತೆ ಮಾಡುವುದು ಉಬ್ಬು ಶಿಲ್ಪದ ತಂತ್ರ. ಅಂದರೆ ಹಿಂಬಾಗದ ಕೆತ್ತನೆ ಇರುವುದಿಲ್ಲ [೪೦] ಎಂಬ ವಿವರಣೆ ನೀಡಲಾಗಿದೆ. ಒಂದು ಶಿಲ್ಪ ಚಪ್ಪಟೆಯಾದ ಹಿನ್ನೆಲೆಯ ಮೇಲೆ ಮುಂದಕ್ಕೆ ಉಬ್ಬಿ ಕಾಣುವಂತಿದ್ದರೆ ಅದನ್ನು ಉಬ್ಬು ಶಿಲ್ಪ ಎಂದು ಕರೆಯಬಹುದು. ಒಟ್ಟಿನಲ್ಲಿ ಮಾಧ್ಯಮ ಯಾವುದೇ ಇರಲಿ ಹಿನ್ನೆಲೆಯಿಂದ ಮುಂದಕ್ಕೆ ಉಬ್ಬಿ ನಿಂತಂತೆ ಕಾಣುವ ಎಲ್ಲ ಶಿಲ್ಪಗಳನ್ನು ಉಬ್ಬ ಶಿಲ್ಪಗಳೂ, ಉಬ್ಬು ಶಿಲ್ಪವೆಂದು ತಿಳಿಯಬೇಕು. ಇದನ್ನು ಎದುರಿನಲ್ಲಿ ನಿಂತು ನೋಡಬಹುದೇ ಹೊರತು ದುಂಡು ಶಿಲ್ಪವನ್ನು ನೋಡುವಂತೆ ಎಲ್ಲ ಬದಿಗಳಿಂದಲೂ ಎಲ್ಲ ಮೈಗಳನ್ನು ನೋಡಲು ಸಾಧ್ಯವಿಲ್ಲ. ಉಬ್ಬ ಶಿಲ್ಪವನ್ನು ಹಿನ್ನೆಲೆಯಿಂದ ತೀರ ಮುಂದಕ್ಕೆ ಚಾಚಿರುವಂತೆಯೂ ಕೆತ್ತಲಾಗುವುದಿಲ್ಲ. ಕೈಗಳು, ಆಯುಧಗಳು

---

೩೭. ಡಾ. ಶಿವರಾಮ ಕಾರಂತ : ಚಾಳುಕ್ಯ ವಾಸ್ತು ಶಿಲ್ಪ, ಪುಟ - XII

೩೮. ಡಾ. ಶಿವರಾಮ ಕಾರಂತ : ಕಲಾ ಪ್ರಪಂಚ, ಪುಟ -೯೧

೩೯. ಡಾ. ಶಿವರಾಮ ಕಾರಂತ : ಚಿತ್ರ, ವಾಸ್ತು ಕಲೆಗಳು, ಪುಟ -೧೭

೪೦. ಎನ್. ವಿಶ್ವರೂಪಾಚಾರ : ಕಲಾಕೋಶ, ಪುಟ -೯೭

[illegible]

[illegible]

[illegible]

[illegible]

[illegible]

ಮುಂತಾದವು ಪೂರ್ಣವಾಗಿ ಹಿನ್ನೆಲೆಗೆ ಅಂಟಿಕೊಂಡಿರುತ್ತವೆ [೪೧] ಎಂಬುದನ್ನು ಗಮನಿಸಬೇಕು.

ಒಟ್ಟಿನಲ್ಲಿ ಪೂರ್ಣ ಶಿಲ್ಪದಲ್ಲಿ ಆ ಶಿಲ್ಪದ ಎಲ್ಲ ಮಗ್ಗಲುಗಳೂ ಕಾಣುವಂತೆ ರಚಿಸಲಾಗಿದ್ದರೆ, ಉಬ್ಬು ಶಿಲ್ಪದಲ್ಲಿ ಆ ಶಿಲ್ಪದ ಯಾವುದಾದರೂ ಒಂದು ಬದಿಯಿಂದ ಕಾಣುವಂತೆ ರಚಿಸಲಾಗಿರುತ್ತದೆ.

ಇನ್ನು ಶಿಲ್ಪ ರಚನೆಗೆ ಸಂಬಂಧಿಸಿದಂತೆ ವಿಚಾರಿಸುವುದಾದರೆ, ಶಿಲ್ಪ ರಚನೆಯು ಮುಖ್ಯವಾಗಿ ನಾಲ್ಕೈದು ಬಗೆಯಲ್ಲಿ ನಡೆಯುತ್ತದೆ. ★ ಕೆತ್ತಿ ತಗೆಯುವುದು, ★ ಮೆತ್ತಿ ಇಲ್ಲವೆ ಒತ್ತಿ ತಗೆಯುವುದು, ★ ಎರಕ ಹೊಯ್ಯುವುದು ಹಾಗೂ ★ ಹಲವು ವಸ್ತುಗಳನ್ನು ಜೋಡಿಸಿ ಅಂಟಿಸುವುದು. ಇವುಗಳಿಗೆ ಮಣ್ಣು, ಮರ, ಲೋಹ ಅಲ್ಲದೆ ಗಾರೆ, ಸಗಣಿ, ಹಿಟ್ಟು ಮುಂತಾದವುಗಳು ಮಾಧ್ಯಮಗಳಾಗುತ್ತವೆ. [೪೨]

★ **ಕೆತ್ತಿ ತಗೆಯುವುದು :** ಸಾಮಾನ್ಯವಾಗಿ ಮರ ಹಾಗೂ ಶಿಲಾ ಮಾಧ್ಯಮದ ಶಿಲ್ಪಗಳನ್ನು ಕೆತ್ತಿ ತಗೆಯುವ ಕ್ರಮದಿಂದ ರೂಪಿಸಲಾಗುತ್ತದೆ. ಅದು ಉಬ್ಬು ಶಿಲ್ಪವೇ ಇರಬಹು, ದುಂಡು ಶಿಲ್ಪವೇ ಇರಬಹುದು ಕೆತ್ತಿ ತಗೆಯುವುದೇ ಇಲ್ಲಿ ಮುಖ್ಯ.

★ **ಮೆತ್ತಿ ಇಲ್ಲವೆ ಒತ್ತಿ ರೂಪಿಸುವುದು :** ಕೆಸರು, ಸಗಣಿ, ಹಿಟ್ಟು, ಮೇಣ ಇತ್ಯಾದಿ ಮಾಧ್ಯಮಗಳನ್ನು ಮೆತ್ತಿ, ಒತ್ತಿ ರೂಪಿಸುವುದು.

★ **ಎರಕ ಹೊಯ್ಯುವುದು :** ಲೋಹ ಮಾಧ್ಯಮದ ಶಿಲ್ಪಗಳನ್ನು ಎರಕ ಹೊಯ್ಯುವ ಕ್ರಮದಿಂದ ರೂಪಿಸಿದವುಗಳಾಗಿರುತ್ತವೆ.

★ **ಹಲವು ವಸ್ತುಗಳನ್ನು ಜೋಡಿಸಿ ಅಂಟಿಸುವುದು :** ಬಟ್ಟೆ, ನಾರು, ಮರದ ತುಂಡು, ಹಾಳ ಇತ್ಯಾದಿ ವಸ್ತುಗಳನ್ನು ಒಂದಕ್ಕೊಂದು ಜೋಡಿಸಿ, ಹೆಣೆದು, ಅಂಟಿಸಿ ರಚಿಸುವ ಕ್ರಮದಿಂದ ಶಿಲ್ಪ ರಚಿಸುವುದು. ಇವನ್ನು ಮಿಶ್ರ ಮಾಧ್ಯಮವೆಂದೂ ಹೇಳಬಹುದು.

## ಶಿಲ್ಪಕಲೆ ವಿಂಗಡಣೆ

ಸಾಹಿತ್ಯ, ಸಂಗೀತ ಹಾಗೂ ಇತರ ಕಲೆಗಳನ್ನು ಜನಪದ ಹಾಗೂ ಶಿಷ್ಟಪದವೆಂದು ಕರೆದು ಅಧ್ಯಯನ ಮಾಡುವ ಕ್ರಮ ಇಂದು ಪ್ರಚಲಿತದಲ್ಲಿದೆ. ಹಾಗೆಯೇ ದೃಶ್ಯ ಕಲೆಗಳಾದ ಚಿತ್ರಕಲೆ ಹಾಗೂ ಶಿಲ್ಪಕಲೆಗಳನ್ನು ಕ್ರಮವಾಗಿ ಜನಪದ ಚಿತ್ರಕಲೆ, ಜನಪದ ಶಿಲ್ಪಕಲೆ, ಶಿಷ್ಟಪದ ಶಿಲ್ಪಕಲೆ ಎಂದು ವಿಂಗಡಿಸಿಕೊಂಡು ಅಧ್ಯಯನ ಮಾಡುವುದು ಅವಶ್ಯಕವೂ, ಅರ್ಥಪೂರ್ಣವೂ ಆಗಿದೆ. ಯಾವುದೇ ಒಂದು ಕಲಾಪ್ರಕಾರದ ಸಮಗ್ರ ಅಧ್ಯಯನಕ್ಕೆ ಇಂತ ವ್ಯವಸ್ಥಿತ ವರ್ಗೀಕರಣ ತೀರ ಅಗತ್ಯವಾಗಿದೆ.

---

೪೧. ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನಶಿಲ್ಪ, ಪುಟ -೯

೪೨. ಕರ್ನಾಟಕ ಕಲಾವಾರ್ತೆ (ಸಂ) : ಕೆ.ವಿಯ ಸುಬ್ರಹ್ಮಣ್ಯಂ, ಪುಟ -೬

ಪ್ರಾಚೀನ ಕಾಲದಿಂದಲೂ ಜಗತ್ತಿನಲ್ಲಿ ಶಿಲ್ಪಕಲೆಯು ಮುಖ್ಯವಾಗಿ ಎರಡು ವಿಧವಾಗಿ ಬೆಳೆದು ಮುಂದುವರೆದುಕೊಂಡು ಬಂದಿದೆ. ಅವುಗಳಲ್ಲಿ ಒಂದನ್ನು ನಾವು ಪಾರಂಪರಿಕ, ಶಾಸ್ತ್ರೀಯ ಅಥವಾ ಸಂಪ್ರದಾಯಿಕ ಶಿಲ್ಪಕಲೆ ಎಂದು ಹೇಳಿದರೆ, ಇನ್ನೊಂದನ್ನು ಜಾನಪದ ಶಿಲ್ಪಕಲೆಯೆಂದು ಕರೆಯಬಹುದು. ಶಾಸ್ತ್ರೀಯ ಅಥವಾ ಸಂಪ್ರದಾಯಿಕ ಶಿಲ್ಪಕಲೆಯನ್ನು ಮಾರ್ಗ ಅಥವಾ ಶಿಷ್ಟಪದ ಶಿಲ್ಪಕಲೆಯೆಂದೂ ಕರೆಯಬಹುದು.

### ಶಿಷ್ಟಪದ ಶಿಲ್ಪಕಲೆ ಹಾಗೂ ಜನಪದ ಶಿಲ್ಪಕಲೆ

ಇಂದು ನಾವು ಯತೇಚ್ಛವಾಗಿ ಬಳಸುತ್ತಿರುವ ಶಿಷ್ಟ ಮತ್ತು ಜಾನಪದ ಎಂಬೆರಡು ಪದಗಳಿಗೆ ಕ್ರಮವಾಗಿ ಪ್ರಾಚೀನರು ಬಳಸಿದ ಪದಗಳೆಂದರೆ ಮಾರ್ಗ ಮತ್ತು ದೇಶಿ. ಮಾರ್ಗ ಎಂದರೆ ಪಥ ಎಂಬರ್ಥವಿದೆ. ದೇಶಿ ಎಂಬುದು ದೇಶ ಅಥವಾ ನಾಡು ಎಂಬರ್ಥದಲ್ಲಿ ಬಳಕೆಯಾಗಿದೆ. ಇವು ಲಕ್ಷಣ ಮುಕ್ತವಾದ ಸಾಮೂಹಿಕ ರಚನೆ ಎಂಬರ್ಥದಲ್ಲಿ ಕವಿಗಳಿಂದ ಬಳಕೆಗೊಂಡಿವೆ. ಮಾರ್ಗವು ಪರಿಷ್ಕೃತವಾಗಿದ್ದರೆ ದೇಶಿಯು ಅಪರಿಷ್ಕೃತವಾಗಿದ್ದು ಪ್ರಾಕೃತವಾಗಿರುತ್ತದೆ. [೪೩]

ದೇಸಿಗಿಂತ ಭಿನ್ನವಾದುದು ಮಾರ್ಗವಷ್ಟೆ. ಮಾರ್ಗ ದೇಸಿಗೆ ವಿರುದ್ಧವಾದುದಲ್ಲ ; ದೇಸಿಯು ಅಷ್ಟೊಂದು ತಿದ್ದಿದ್ದಲ್ಲ. ಸುಸಂಸ್ಕೃತವಾದುದಲ್ಲ. ಮಾರ್ಗವಾದರೋ ಪರಿಶ್ರಮ ಮತ್ತು ಸಂಸ್ಕಾರಗಳಿಂದ ತಿದ್ದಿದ್ದು, ಸುಧಾರಿಸಿದ್ದು [೪೪] ಎಂದು ಅಭಿಪ್ರಾಯ ಪಡುವ ಡಾ. ಶಿವರಾಮ ಕಾರಂತರು, ಯಾವುದೇ ಜಾನಪದ ಕಲೆ ಮಾರ್ಗ ಪದ್ಧತಿಯ ಕಲೆಗಿಂತ ನೀಚ ಇಲ್ಲವೆ ಕಡಿಮೆಯೆನಿಸಿಕೊಳ್ಳಬೇಕಾಗಿಲ್ಲ [೪೫] ಎಂದು ಪ್ರತಿಪಾದಿಸುತ್ತಾರೆ.

ಸಮಾಜ ವಿಜ್ಞಾನಿಗಳು ಶಿಷ್ಟವನ್ನು ಮಹಾಸಂಪ್ರದಾಯ ಎಂದೂ ಜಾನಪದವನ್ನು ಕಿರು ಸಂಪ್ರದಾಯ ಎಂದೂ ಕರೆಯುತ್ತಾರೆ. ಮುಂದುವರೆದು ಅವರು ಶಿಷ್ಟ ಅಥವಾ ಮಹಾಸಂಪ್ರದಾಯಕ್ಕೆ ಅಖಿಲಭಾರತ ಮಟ್ಟದ ವ್ಯಾಪಕತೆಯನ್ನು ಜನಪದಕ್ಕೆ ಅಥವಾ ಕಿರು ಸಂಪ್ರದಾಯಕ್ಕೆ ಪ್ರಾಂತೀಯ ಆಯಾಮಗಳನ್ನು ಕಲ್ಪಿಸುತ್ತಾರೆ. [೪೬] ಡಾ. ಎಂ.ಎಂ. ಕಲಬುರ್ಗಿಯವರು ಜನಪದ, ಶಿಷ್ಟಪದ ಶಬ್ದಗಳನ್ನು ಕುರಿತು ದೇಶಿಗೆ ದೇಶ ಸಂಬಂಧಿ ಎಂಬುದು ವಾಚಾರ್ಥ್ಯ. ಲಕ್ಷಣಮುಕ್ತವಾದ ರಚನೆ ಎಂಬುದು ವಿಶೇಷಾರ್ಥ. ಮಾರ್ಗಕ್ಕೆ ಪಥ ಎಂಬುದು ವಾಚ್ಯಾರ್ಥ ಎಂದು ಹೇಳುತ್ತಾರೆ. ಪ್ರಾಕೃತ ಪರಿಷ್ಕೃತವಾಗಿ ಮಾರ್ಗ ಬದುಕಬೇಕಾಯಿತು. [೪೭] ಈ ಅರ್ಥದಲ್ಲಿ ಮಾರ್ಗಕ್ಕಿಂತ ದೇಶಿಯೇ ಪ್ರಾಚೀನ ಎಂದು ಹೇಳಬಹುದು. ಮುಖ್ಯವಾಗಿ ದೇಶಿಗೆಯು ಜನರ ಸಾಮಾಜಿಕ ಚಟುವಟಿಕೆಯ ಭಾಗವಾಗಿರುವುದರಿಂದ

---

೪೩. ಜಾನಪದ ಕೈಪಿಡಿ : ಪುಟ -೩೯೭

೪೪. ಡಾ. ಶಿವರಾಮ ಕಾರಂತ : ಜಾನಪದ ಗೀತೆಗಳು, ಪುಟ -೧

೪೫. ..... ಅದೇ .....

೪೬. ಜಾನಪದ ಕೈಪಿಡಿ : ಪುಟ -೩೯೮

೪೭. ಡಾ. ಎಚ್.ಜೆ. ಲಕ್ಕಪ್ಪಗೌಡ (ಸಂ) : ಸುವರ್ಣ ಜಾನಪದ -೨, ಪುಟ -೩೫೭

ಅದರ ನಿರ್ಮಿತಿಯಲ್ಲಿ ಸೃಷ್ಟಿಯೇ ಹೌದು. ಆದರೆ ಮಾರ್ಗ ಸಂಪ್ರದಾಯದ ನಿರ್ಮಿತಿಯಲ್ಲಿ ವೈಯಕ್ತಿಕ ಏಕಾಕಿತನವೇ ಮುಖ್ಯವಾಗಿರುತ್ತದೆ. ಮೂಲತಃ ಅದೊಂದು ಬೌದ್ಧಿಕ ಚಟುವಟಿಕೆಯೂ ಆಗಿರುತ್ತದೆ. ಜನಪದ ಶಿಲ್ಪಗಳನ್ನು ರಚಿಸಿದವರು ಕಲಾವಿದರೆಂದೋ, ಶಿಲ್ಪಿಗಳೆಂದೋ ಅಂದುಕೊಂಡವರೇ ಅಲ್ಲ. ಯಾರು ಬೇಕೋ ಅವರು ತಮಗೆ ತೋಚಿದಂತೆ ಶಿಲ್ಪಿಸಿದರು. ಗುಂಪು ಸೇರಿ ರಚಿಸಿದರು. ಕೆಲವನ್ನು ಪದೇ ಪದೇ ರಚಿಸಿದರೆ, ಕೆಲವನ್ನು ವರ್ಷಕ್ಕೊಮ್ಮೆ ರಚಿಸಿದರು. ಈ ಎಲ್ಲ ವಿವರಗಳನ್ನು ಸಂಗ್ರಹಿಸಿ, ಶಿಲ್ಪಕಲೆಗೆ ಅನ್ವಯಿಸಿ ಹೇಳುವುದಾದರೆ ನಾಗರಿಕ ವರ್ಗದವರು ಪ್ರಮಾಣಬದ್ಧವಾಗಿ, ಲಕ್ಷಣಯುಕ್ತವಾಗಿ ನಿರ್ಮಿಸಿದ ಶಿಲ್ಪಕಲೆ ಶಿಷ್ಟಪದ ಶಿಲ್ಪಕಲೆ ಎನಿಸುವುದು. ಗ್ರಾಮೀಣರು ಲಕ್ಷಣಮುಕ್ತ ಅಥವಾ ತಮಗೆ ಅಂದ-ಚೆಂದ ಕಂಡಂತೆ ರಚಿಸಿಕೊಂಡ ಶಿಲ್ಪಕಲೆ ಜನಪದ ಶಿಲ್ಪಕಲೆಯಾಗಿದೆ. [೪೮]

ದೇಶಿ, ದೇಶಿಗ ಎಂಬ ಮಾತುಗಳು ಗ್ರಾಮೀಣ ಮನುಷ್ಯನನ್ನು ಕುರಿತು ಬಳಸಿದ ಮಾತುಗಳು. ಅಂಥ ದೇಶಿ ಶಿಲ್ಪಗಳು ಮಾರ್ಗ ಎಂಬುದನ್ನು ಪಥವಾಗಿ, ಪ್ರಮಾಣಬದ್ಧವಾಗಿ, ಲಕ್ಷಣಯುಕ್ತವಾಗಿ ಕಾಣುವುದರಿಂದ ಅಂತಹ ಶಿಷ್ಟ ಸಂಸ್ಕೃತಿಯ (ನಗರ) ನಾಗರಿಕರು ರಚಿಸಿದ ಶಿಲ್ಪಗಳನ್ನು ಮಾರ್ಗ ಅಥವಾ ಶಿಷ್ಟಪದ ಶಿಲ್ಪಕಲೆಯೆಂದು ಕರೆಯಬೇಕಾಗುತ್ತದೆ. ಜನಪದವು ಸಾಮಾನ್ಯ ಜನತೆಯೆಂದೂ ಶಿಷ್ಟಪದವು ಜನಸಾಮಾನ್ಯರನ್ನು ಹೊರತುಪಡಿಸಿದ ನಾಗರಿಕ ಆಚಾರ-ವಿಚಾರಗಳ ಪ್ರಬುದ್ಧ ಜನತೆಯೆಂದೂ ಸೂಚಿಸುತ್ತದೆ. [೪೯] ಸಾಹಿತ್ಯ ಮತ್ತು ಕಲೆಯ ವಿಷಯಕ್ಕೆ ಸಾಮಾನ್ಯರಿರಲಿ, ಪ್ರಬುದ್ಧ ನಾಗರಿಕರಿರಲಿ ಸಾಂಪ್ರದಾಯಿಕವಾಗಿ ಕೆಲವು ಸಲ ಈ ಜನರ ಆಚಾರ-ವಿಚಾರ, ಜೀವನ ರೀತಿ, ಅಭಿರುಚಿ ಒಂದೇ ರೀತಿಯಾಗಿರುವುದು ಕಂಡುಬರುತ್ತದೆ. ಹಾಗಾದಾಗ ಶಿಷ್ಟ ಸಂಸ್ಕೃತಿ ಮತ್ತು ಜನಪದ ಸಂಸ್ಕೃತಿ ಒಳಗೊಳಗೇ ಅಭಿನ್ನವೆಂಬಂತೆ ತೋರಿ ಬರುತ್ತವೆ. ಇದರಿಂದ ಶಿಷ್ಟ ಮತ್ತು ಜನಪದ ಶಿಲ್ಪಕಲೆಗಳೆರಡೂ ಒಂದೇ ಮೂಲದಿಂದ ಸತ್ವವನ್ನು ಪಡೆದುಕೊಂಡಿರುವುದರಿಂದ ಅವುಗಳ ಆಂತರಿಕ ರಚನೆ ಏಕರೂಪದ್ದೇ ಆಗಿರುತ್ತದೆನಿಸುತ್ತದೆ. ಶಿಷ್ಟ ಮತ್ತು ಜನಪದ ಶಿಲ್ಪಗಳೆಂಬ ವ್ಯತ್ಯಾಸ ಕೆಲವೊಮ್ಮೆ ಕೇವಲ ಹೊರಕವಚಕ್ಕೆ ಮಾತ್ರ ಸೇರಿದ್ದೆನಿಸುತ್ತದೆ. ಈ ಅರ್ಥದಲ್ಲಿ ಶಿಷ್ಟ ಮತ್ತು ಜನಪದ ಶಿಲ್ಪಗಳ ನಡುವಣ ಸಂಬಂಧವು ತುಂಬ ಸಂಕೀರ್ಣವಾದುದು ಎನಿಸುತ್ತದೆ. ಎಷ್ಟೋ ವೇಳೆ ಅವು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ನಿಂತು ಬೇರೆ ಬೇರೆ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ. ಇನ್ನೂ ಕೆಲವು ಬಾರಿ ಒಂದರೊಳಗೊಂದು ಬೆರೆತು ಯಾವುದು ಶಿಷ್ಟ, ಯಾವುದು ಜನಪದ ಎಂದು ವಿಭಜಿಸಲು ಬಾರದ ರೀತಿಯಲ್ಲಿ ಸಂಲಗ್ನಗೊಂಡಿರುತ್ತವೆ. ಇನ್ನೂ ಕೆಲವು ಬಾರಿ ಪರಸ್ಪರ ಪ್ರಚೋದಿಸಿಕೊಳ್ಳುತ್ತವೆ. ಆದರೆ ನಮ್ಮಲ್ಲಿ ಶಿಷ್ಟ ಶಿಲ್ಪ ರಚನೆಯು ಉಚ್ಚವರ್ಗದವರ ಒಡಿತದಲ್ಲಿಯೂ, ಜನಪದ ಶಿಲ್ಪಕಲೆಯು ಕೆಳವರ್ಗದವರ ಆಶ್ರಯದಲ್ಲಿಯೂ ಬೆಳೆದು ಬಂದುದರಿಂದ ಸಹಜವಾಗಿಯೇ ತಮ್ಮ ವರ್ಗ ಹಿತಾಸಕ್ತಿಯನ್ನು ಅವು ಕಾಪಾಡಿಕೊಂಡು ಬಂದಿವೆ. ಜನಪದ ಶಿಲ್ಪಗಳಿಂದ

---

೪೮. ಡಾ. ಎಸ್.ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪುಟ -೨೦

೪೯. ಡಾ. ಎಸ್.ಸಿ. ಪಾಟೀಲ : ಆಚರಣೆಯಲ್ಲಿ ಜನಪದ ವಾಸ್ತು, ಶಿಲ್ಪಗಳು, ಪುಟ -೨

[illegible]

ಪ್ರೇರಣೆ ಪಡೆದ ಶಿಷ್ಟ ಶಿಲ್ಪಕಲೆಯು ಧೋರಣೆಯಲ್ಲಿ ಜನಪದವನ್ನು ಉಪೇಕ್ಷಿಸಿರುವುದು ಮತ್ತು ಶಿಷ್ಟದಿಂದ ವಸ್ತುಗಳನ್ನು ಸ್ವೀಕರಿಸಿಯೂ ಶಿಷ್ಟವನ್ನು ಸಂಶಯದಿಂದ ನೋಡುವ ಜನಪದ ಶಿಲ್ಪಕಲೆಯೂ ಇಲ್ಲಿ ಸಮಾನಂತರ ನೆಲೆಗಳಲ್ಲಿ ಬೆಳೆದು ಬಂದದ್ದಿದೆ.

ಯಾವುದೇ ದೇಶ ಅಥವಾ ನಾಡಿನ ಜನಪದರ ಸೃಷ್ಟಿಯಲ್ಲಿ ಆ ನಾಡಿನ ಸಾಂಸ್ಕೃತಿಕ ಬದುಕು, ಆಚಾರ, ವಿಚಾರಗಳು ವ್ಯಕ್ತವಾಗುತ್ತವೆ. ಇವರು ಮಣ್ಣಿಗೆ ಹತ್ತಿರವಾಗಿ ಬದುಕುವುದರಿಂದ ಆ ನಾಡಿನ ಸಾಂಸ್ಕೃತಿಕ ಸತ್ವವನ್ನು ಮಣ್ಣಿನ ಸೊಗಡನ್ನು ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಪಡಿಸುತ್ತಾರೆ. ಶಿಷ್ಟರು ಆಯಾ ನಾಡಿನ ಮಣ್ಣಿನ ಸಂಪರ್ಕದಿಂದ ದೂರ ಇರುವುದರಿಂದ ಅವರ ಸೃಷ್ಟಿಗಳಲ್ಲಿ ಆ ನಾಡಿನ ವೈಶಿಷ್ಟ್ಯ ಅಭಿವ್ಯಕ್ತಿಗೊಳ್ಳುವುದಿಲ್ಲವೆಂದೇ ಹೇಳಬೇಕು.

ನಮ್ಮ ನಾಡಿನಲ್ಲಿ ಮಾರ್ಗ ಶಿಲ್ಪ ರಚನೆಯು ವಿಜಯನಗರ ಚಾಲುಕ್ಯ, ಹೊಯ್ಸಳ ಮುಂತಾದ ಶೈಲಿಗಳಲ್ಲಿ ಶಿಲಾಮಾಧ್ಯಮದಲ್ಲಿ ಅಭಿವ್ಯಕ್ತಿ ಪಡೆದರೆ ದೇಶೀ ಶಿಲ್ಪವು ಕಲ್ಲು, ಮರ, ಲೋಹ, ಮಣ್ಣು, ಗಾರೆ ಅಲ್ಲದೆ ಹಿಟ್ಟು, ಅರಿವೆ, ಅರಳೆ, ಸಗಣಿ ಮುಂತಾದ ಹಲವಾರು ಮಾಧ್ಯಮಗಳಲ್ಲಿ ಅಭಿವ್ಯಕ್ತಿ ಪಡೆದು ವೈವಿಧ್ಯವನ್ನೇ ಸಾಧಿಸಿದೆ. ವರ್ಷದುದ್ದಕ್ಕೂ ಬರುವ ಅನೇಕ ಹಬ್ಬ ಹರಿದಿನಗಳಲ್ಲಿ ಅವುಗಳ ಆಚರಣೆಯ ಸಂದಂರ್ಭಗಳಲ್ಲಿ ರಚಿಸಲಾಗುವ ಅನೇಕ ತರಹದ ಶಿಲ್ಪಗಳು ನಮ್ಮ ಸಂಸ್ಕೃತಿ, ಸಂಪ್ರದಾಯಗಳ ಸಂಕೀರ್ಣತೆಯನ್ನು ಹೇಳುವ ಸಂಕೇತಗಳಾಗಿ ನಿಂತಿವೆ. ಈ ಅರ್ಥದಲ್ಲಿ ಮಾರ್ಗ ಅಥವಾ ಶಿಷ್ಟ ಶಿಲ್ಪಕಲೆಗಿಂತ ಜನಪದ ಶಿಲ್ಪಕಲೆಯೇ ಹೆಚ್ಚು ವೈವಿಧ್ಯಮಯ ಎಂದು ಹೇಳಬಹುದು. ಅದು ದುಡಿಮೆಯೊಂದಿಗೂ ಸಾಹಚರ್ಯ ಸಾಧಿಸಿದೆ.

ಆದಾಗ್ಯೂ ಅನೇಕ ವೇಳೆ ಶಿಷ್ಟ ಮತ್ತು ಜನಪದ ಶಿಲ್ಪಕಲೆಗಳೆರಡೂ ಅನ್ಯೋನ್ಯವಾಗಿ ಬೆರೆತದ್ದೂ ಉಂಟು. ಶಿಷ್ಟ ಶಿಲ್ಪಕಲೆಗೆ ಜಾನಪದವನ್ನು ಕಸಿ ಮಾಡಲಾಗಿದೆ. ಇಲ್ಲವೆ, ಒಮ್ಮೊಮ್ಮೆ ಜಾನಪದವೇ ಶಿಷ್ಟ ಶಿಲ್ಪಕಲೆಯಾಗಿ ಪರಿವರ್ತನೆ ಹೊಂದಿದ್ದನ್ನು ಕಾಣುತ್ತೇವೆ. ಉದಾ:- ಮೂಲತಃ ಜಾನಪದ ಶಿಲ್ಪಗಳಾಗಿರುವ ಗಣೇಶ, ವೀರಭದ್ರ, ಕಾಳಿ, ಶಿವ-ಪಾರ್ವತಿ ಮುಂತಾದ ದೇವತಾ ಶಿಲ್ಪಗಳು ಅಲ್ಲದೆ, ನಂದಿ, ಕುದುರೆ ಇಂಥ ಮುಂತಾದ ದೇವರ ವಾಹನ ಶಿಲ್ಪಗಳು ದೃಶ್ಯಾತ್ಮಕವಾಗಿ ಶಿಷ್ಟ ಶೈಲಿಯ ಶಿಲ್ಪಗಳಾಗಿ ಮಾರ್ಪಾಡು ಹೊಂದಿವೆ. ವಾಸ್ತವತೆ ಹೀಗಿದ್ದರೂ ಜನಪದ ಶಿಲ್ಪಕಲೆಯ ಕುರಿತ ಅಧ್ಯಯನ ಇದುವರೆಗೆ ಉಪೇಕ್ಷೆಗೆ ಒಳಗಾಗಿದ್ದುದು ಕಂಡುಬರುತ್ತದೆ.

ಸಾವಿರಾರು ವರ್ಷಗಳಿಂದ ಪ್ರಖರವಾಗಿ ಸುಶಿಕ್ಷಿತರೆಲ್ಲರಿಗೂ ಪರಿಚಿತವಿರುವಂತೆ, ಶಾಸ್ತ್ರಶುದ್ಧವಾಗಿ, ಪ್ರಮಾಣಬದ್ಧವಾಗಿ, ತಾಳ-ಮಾನದ ಪ್ರಕಾರ ರಚನೆಯಾಗುತ್ತ ಜನಾಕರ್ಷಣೆಯ ಕೇಂದ್ರಗಳಾಗಿ, ಪೂಜೆ ಮತ್ತು ಯಾತ್ರಾ ಸ್ಥಳವಾಗಿ ಬಹುಕಾಲದಿಂದ ಖ್ಯಾತವಾಗಿರುವ ಶೈಲಿಯಲ್ಲಿ ರಚನೆಗೊಂಡಿರುವ ಶಿಲ್ಪಕಲೆಯಾಗಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡದ್ದು ಶಿಷ್ಟಪದ ಶಿಲ್ಪಕಲೆ. ಆದರೆ ಜನಪದ ಶಿಲ್ಪಕಲೆಯಲ್ಲಿ ಷಡಂಗವಾಗಲಿ, ತಾಳ-ಮಾನ-ಪ್ರಮಾಣಗಳಾಗಲಿ, ನಿರ್ಧಿಷ್ಟ ಶೈಲಿ, ಸಿದ್ಧಾಂತ,

ವಿನ್ಯಾಸಗಳಾಗಲಿ ಇಂತಹ ಯಾವ ಕಟ್ಟಳೆಗಳೂ ಇಲ್ಲದ ಮುಕ್ತ ರಚನೆಗಳಾಗಿವೆ. ಜನಪದ ಶಿಲ್ಪಕಲೆ ಜನಪದರ ಬದುಕೇ ಆಗಿದ್ದರಿಂದ ಅವರ ಬದುಕಿನ ಬಣ್ಣವನ್ನು ಅವರ ಶಿಲ್ಪಗಳ ಸರಳವೂ, ಸಹಜವೂ ಆದ ರೂಪ, ಆಕಾರಗಳನ್ನು ಅವರ ಮನಸ್ಸಿನ ಯಾವುದೋ ಬಗೆಯ ಆನಂದದ ಸುಂದರ ಆಕಾರವನ್ನು ಅವರ ಸಂತೋಷ, ಸಂಭ್ರಮಗಳ ನೂರಾರು ಭಾವನೆಗಳನ್ನು ಹೇಳಲು ನಿತ್ಯೋಪಯೋಗಿ ಮಾಧ್ಯಮಗಳಾದ ಮಣ್ಣು, ಸಗಣಿ, ಹಿಟ್ಟು, ಕಟ್ಟಿಗೆಗಳು ಮುಂತಾದವುಗಳು ಜನಪದರ ಶಿಲ್ಪಕಲೆಯ ಲಕ್ಷಣ, ವ್ಯಾಖ್ಯಾನಗಳನ್ನಾಗಿಸಿ ಅಧ್ಯಯನ ಮಾಡಬೇಕಿದೆ. ಶಿಷ್ಟರಲ್ಲಿಯ ಸೂಕ್ಷ್ಮಗಾರಿಕೆಯ, ಕೃತಕತೆ, ಪ್ರಮಾಣಬದ್ಧತೆಯ, ಸೌಂದರ್ಯನಿಷ್ಟತೆ ಜನಪದ ಶಿಲ್ಪಕಲೆಯಲ್ಲಿಲ್ಲ. ಜನಪದರಲ್ಲಿ ಏನಿದ್ದರೂ ಸಹಜತೆ, ಮುಗ್ಧತೆಗಳೇ ವಿಶೇಷವೆನಿಸಿವೆ.

ಶಾಸ್ತ್ರಶುದ್ಧವಾಗಿ ಪ್ರಾಚೀನರು ರೂಢಿಸಿಕೊಂಡು ಬಂದ ಶಿಷ್ಟ ದೃಶ್ಯಕಲೆಗಳಾದ ಚಿತ್ರ-ಶಿಲ್ಪಕಲೆಯ ಷಡಂಗಗಳನ್ನು ಗುರುತಿಸುವಾಗ ಇವುಗಳ ಮೂಲಕ್ಕೆ ಹೋದಂತೆ ಅದು ಜನಪದೀಯ ಮೂಲವೆಂಬ ಅಂಶ ಸ್ಪಷ್ಟವಾಗುತ್ತದೆ. ವಸ್ತುವೊಂದು ಸಿದ್ಧರೂಪಗೊಳ್ಳುವಾಗ ಕಚ್ಚಾ ಸಾಮಗ್ರಿಯಾಗಿರುವಂತೆ ಇಂದಿನ ಶಿಷ್ಟ ರೂಪಕ್ಕೆ ಮೊದಲು ಕಚ್ಚಾ ರೂಪವೊಂದು ಇದ್ದು, ಕಾಲಕ್ರಮೇಣ ಅದು ಶಿಷ್ಟದ ಶಿಸ್ತಿಗೆ ಶಾಸ್ತ್ರದ ಚೌಕಟ್ಟಿಗೆ ಒಳಪಟ್ಟಿರುವುದು ತಿಳಿದು ಬರುತ್ತದೆ. ಈ ಕಚ್ಚಾ ರೂಪವೆನ್ನುವುದು ಜನಪದರಲ್ಲಿ ಹೊಳೆಯತೊಡಗಿದ್ದುದು, ಬದುಕಿನ ವಿವಿಧ ಚಟುವಟಿಕೆಗಳ ಅಂಗವಾಗಿಯೇ ಎಂಬುದು ಗಟ್ಟಿಯಾದ ಮಾತು. ಈ ಅರ್ಥದಲ್ಲಿ ಬದುಕಿನ ಎಲ್ಲಾ ರಂಗಗಳ ವಿವಿದಾಂಗಗಳೇ ಜನಪದ ಶಿಲ್ಪಕಲೆಯ ಮುಖ್ಯ ಲಕ್ಷಣಗಳು. ಸಂಪ್ರದಾಯ, ನಂಬಿಕೆ, ಧಾರ್ಮಿಕ ಆಚರಣೆಯ ಹಿನ್ನೆಲೆಯಲ್ಲಿ ಜನಪದರಲ್ಲಿ ಮೂರ್ತರೂಪಕ್ಕೆ ತಿರುಗಿದುದೇ ಜನಪದ ಶಿಲ್ಪಕಲೆಯಾಗಿ ರೂಪ ತಳೆದಿದೆ. ಶಾಸ್ತ್ರೋಕ್ತ ಕಲಿಕೆಗೆ ಒಳಪಟ್ಟ ಶಿಷ್ಟ ಪದ ಶಿಲ್ಪಕಲೆಯ ಸ್ವರೂಪವೇ ಬೇರೆ. ಬದುಕೇ ಆಗಿರುವ ಸಹಜ ಜನಪದ ಶಿಲ್ಪಕಲೆಯೇ ಬೇರೆ. ಕಲೆಗಾಗಿ ಕಲೆ, ಆನಂದಕ್ಕಾಗಿ ಕಲೆ, ಪ್ರವೃತ್ತಿಗಾಗಿ ಕಲೆಯೆಂದು ಶಿಷ್ಟ ಪದ ಶಿಲ್ಪಕಲೆಯಲ್ಲಿ ಪರಿಭಾವಿಸಿದರೆ, ಬದುಕಿಗಾಗಿ ಪಟ್ಟ ಪಾಡೇ ಕಲೆ ಮತ್ತು ವೃತ್ತಿಗಾಗಿ ಕಲೆಯೆಂದು ಜನಪದ ಶಿಲ್ಪಕಲೆಯಲ್ಲಿ ಪರಿಭಾವಿಸಬೇಕು. ಈ ಅರ್ಥದಲ್ಲಿ ಈಗ ವಿಂಗಡಿಸಿಕೊಂಡ ಲಲಿತ ಕಲೆ ಮತ್ತು ಕುಶಲ ಕಲೆಗಳ ಮೂಲ ಸೆಲೆ ಜನಪದವೇ ಎಂದು ಹೇಳಬೇಕಾಗುತ್ತದೆ. ಪ್ರಕೃತಿ ಮತ್ತು ನಿತ್ಯ ಬದುಕು ಜನಪದ ಕಲೆಗೆ ಆಶ್ರಯ ನೀಡಿದರೆ, ಜನಪದ ಕಲೆಯಿಂದ ಶಿಷ್ಟಪದ ಕಲೆ ಭೌದ್ಧಿಕ ವಿಕಾಸ ಪಡೆದು ಬೆಳೆಯಿತೆನ್ನಬಹುದು. ಈ ಅರ್ಥದಲ್ಲಿ ಜನಪದ ಕಲೆ ಅಥವಾ ಜನಪದ ಶಿಲ್ಪಕಲೆಯ ಲಕ್ಷಣವೆಂದರೆ ಬದುಕಿನ ಲಕ್ಷಣ, ಪ್ರಕೃತಿಯ ಲಕ್ಷಣವೆಂದೇ ಅರ್ಥ.

ಜನಪದ ಶಿಲ್ಪಕಲೆಯು ಕಲಾತ್ಮಕ ಮತ್ತು ಪ್ರಯೋಜನಾತ್ಮಕ ಹಿನ್ನೆಲೆಯಲ್ಲಿ ಹೆಚ್ಚು ಪ್ರಸ್ತುತವಾಗುತ್ತದೆ. ಶಿಷ್ಟ ಶಿಲ್ಪಕಲೆಯಲ್ಲಿ ಈ ಎರಡು ಏಕ ಕಾಲಕ್ಕೆ ಅನ್ವಯವಾಗುವುದಿಲ್ಲ. ಜನಪದ ಶಿಲ್ಪಕಲೆ ಶಿಷ್ಟ ಪದ ಶಿಲ್ಪಕಲೆಯಿಂದ ತುಂಬಾ ವ್ಯತ್ಯಸ್ಥವಾಗುತ್ತದೆ. ಸಾಮಾಜಿಕ ಜೀವನದ ಒಳರಕ್ತ, ಮಾಂಸಗಳನ್ನು ಅಮೃತ ಕಲ್ಪನೆಯ ಮೂಲಕ ಜಂಗಮವಾಗುವಂತೆ ಮಾಡುವ ಸಾಮರ್ಥ್ಯ ಜನಪದ

ಶಿಲ್ಪಕಲೆಗಿದೆ. ಅದು ಸರಳ ಚೌಕಟ್ಟಿನೊಂದಿಗೆ ಮನಸ್ಸಿನ ಸ್ವಾತಂತ್ರ್ಯದೊಂದಿಗೆ ಕೆಲವು ಸಾರೆ ಸಾಮೂಹಿಕವಾಗಿ ನಿತ್ಯ ಬಳಕೆಯಲ್ಲಿ ಬಂದುದುಂಟು. ಮಣ್ಣೆತ್ತುಗಳನ್ನು ರಚಿಸಿ ಪೂಜಿಸುವುದು, ಪಾಂಡವರನ್ನು ಮಾಡಿ ಅರ್ಚಿಸುವುದು, ಗುಳ್ಳನವು ಆಚರಣೆ ಮುಂತಾದವುಗಳು ಜನಪದ ವ್ಯಕ್ತಿ ಸೃಷ್ಟಿಯಾಗಿ ಸಮಷ್ಟಿಯ ಗುಂಪಾಗಿ ವರ್ತಿಸುತ್ತವೆ. ಅಂದರೆ ಶಿಲ್ಪಕಲೆ ಆಚರಣೆಯಾಗಿ, ಸಾಂಪ್ರದಾಯವಾಗಿ ಗುಂಪಿನ ಇಲ್ಲವೆ ತಮ್ಮ ಪಾಲಿನ ಸಾಮಾಜಿಕ ಚಟುವಟಿಕೆಗಳಾಗಿ ಅರ್ಥ ಪಡೆದು ನಿಲ್ಲುತ್ತವೆ. ಶಿಷ್ಟ ಪದ ಶಿಲ್ಪಕಲೆಗೆ ಈ ಬಗೆಯ ಮಹತ್ವವಿರಲಾರದು.

ಶಿಷ್ಟಪದ ಶಿಲ್ಪಕಲೆ ಬಿಡುವಿನ ವೇಳೆ ಮತ್ತು ಅರಸೊತ್ತಿಗೆಯ ನೆರಳಿನಲ್ಲಿ ವಂಶಪಾರಂಪರ್ಯವಾದ ಮನೆತನದವರಿಂದ ಹುಟ್ಟಿದರೆ, ಜನಪದ ಶಿಲ್ಪಕಲೆ ದುಡಿಯುವ ಸಂದರ್ಭದಲ್ಲಿ ಸೃಷ್ಟಿಯಾಗಿದೆ. ನಿಸರ್ಗದ ಸಿದ್ಧರೂಪ ಅಥವಾ ರೂಪ ಪ್ರಪಂಚದ ವಸ್ತುಗಳನ್ನು, ಅವುಗಳ ಆಕಾರಗಳನ್ನು ಪ್ರಮಾಣ ಬದ್ಧತೆ ಲಕ್ಷಣಗಳನ್ನು, ಹಾವ-ಭಾವಗಳನ್ನು, ನಿರ್ಧಿಷ್ಟ ಶೈಲಿಯನ್ನು ಅಧ್ಯಯನ ಮಾಡಿ, ಅದಕ್ಕೆ ಬೇಕಾದ ಪರಿಕರಗಳನ್ನು ನಿರ್ಮಿಸಿಕೊಂಡು ಸ್ವತಂತ್ರವಾಗಿ ಮತ್ತು ಹಲವರ ಬೇಡಿಕೆಗಳಾಗಿ ಸೃಷ್ಟಿಸಿದ ಕಲಾವಿದನ ಶಿಲ್ಪಕಲೆ ಶಿಷ್ಟಪದವೆನಿಸಿದರೆ, ಅಧ್ಯಯನದ ಯಾವ ಅರಿವೂ ಇಲ್ಲದ ತಾವು ಪಡೆದ ಅನುಭವಗಳೇ ಸಹಜವಾದ ಆಕಾರ ಅಥವಾ ಮೂರ್ತ ರೂಪ ನೀಡಿದರೆ ಅದೇ ಜನಪದ ಶಿಲ್ಪಕಲೆಯಾಗುತ್ತದೆ. ಇವುಗಳಲ್ಲಿ ಒಂದು ವ್ಯಕ್ತಿಯ ಸೃಷ್ಟಿ ಎನಿಸಿದರೆ ಇನ್ನೊಂದು ಸಮಷ್ಟಿಯ ಸೃಷ್ಟಿಯಾಗಿರುತ್ತದೆ. ಹೀಗಾಗಿ ಶಿಷ್ಟಪದ ಶಿಲ್ಪಕಲೆ ಕಲ್ಲು, ಮರ, ಲೋಹ ಮುಂತಾದ ಶಾಶ್ವತವೆನಿಸುವ ಮಾಧ್ಯಮಗಳಲ್ಲಿ ರೂಪ ತಳೆದು ಉಳಿದು ಬಂದರೆ, ಜನಪದ ಶಿಲ್ಪಕಲೆ ಅನುಭವಕ್ಕೆ ಸೀಮಿತವಾಗಿ ಅಶಾಶ್ವತವಾಗಿ ಬೆಳೆದು ಬಂದಿದೆ. ಶಿಷ್ಟಪದ ಶಿಲ್ಪಕಲೆಯ ಹಿಂದೆ ಒಬ್ಬ ರಾಜನೋ, ಧರ್ಮವೋ ಇದ್ದರೆ ಜನಪದ ಶಿಲ್ಪಕಲೆಯಲ್ಲಿ ಜನಪದರ ಬದುಕೇ ದಟ್ಟವಾಗಿ ಹರಡಿರುವುದನ್ನು ಕಾಣುತ್ತೇವೆ. ಶಿಷ್ಟಪದ ಶಿಲ್ಪಕಲೆಯಲ್ಲಿ ಕಲಿಕೆಯ ಅನಿವಾರ್ಯತೆಯಿಂದ ಬೆರಳೆಣಿಕೆಯಷ್ಟು ಅಥವಾ ಇಲ್ಲವೆ ಇಲ್ಲ ಎನ್ನುವಷ್ಟು ಮಹಿಳೆಯರಿದ್ದಾರೆ. ಜನಪದ ಶಿಲ್ಪಕಲೆಯಲ್ಲಿ ಮಹಿಳೆಯರದೇ ಸಿಂಹಪಾಲು. ಜನಪದ ಶಿಲ್ಪಕಲೆ ಆಚರಣೆ ನಿಷ್ಟವಾಗಿ ಸರಳ ರೂಪದಲ್ಲಿದ್ದರೆ, ಶಿಷ್ಟಪದ ಶಿಲ್ಪಕಲೆ ಸಂಕೀರ್ಣನಿಷ್ಟವಾದ ಕ್ಲಿಷ್ಠ ರೂಪವನ್ನು ಹೊಂದಿರುತ್ತದೆ.

ಜನಪದರದ್ದು ಅವರ ತೆರೆದ ಬದುಕಿನಂತೆಯೇ ಅವರ ಶಿಲ್ಪಕಲೆಯೂ ಕೂಡ. ಜೋಕುಮಾರ, ಲಜ್ಜಾಗೌರಿ ಇತ್ಯಾದಿ ಶಿಲ್ಪಗಳಲ್ಲಿ ಗುಪ್ತಾಂಗಗಳನ್ನು ಪ್ರಧಾನವಾಗಿ ಶಿಲ್ಪಿಸಿರುವುದನ್ನು ಗಮನಿಸಿದಾಗ, ಬದುಕಿನ ವಾಸ್ತವತೆಯನ್ನೇ ತೆರೆದಿಟ್ಟ ಅನುಭವವಾಗುತ್ತದೆ. ಆದರೆ ಶಿಷ್ಟಪದ ಶಿಲ್ಪಕಲೆಯಲ್ಲಿ ಲೈಂಗಿಕಾಂಶಗಳು ಮಡಿವಂತಿಗೆಯಿಂದ ಅಭಿವ್ಯಕ್ತಿಗೊಳ್ಳುತ್ತವೆ. ಜನಪದ ಶಿಲ್ಪಕಲೆಯಲ್ಲಿ ಭಾವನಾತ್ಮಕವಾದ ರೂಪ, ಆಕಾರಗಳ ಅಲಂಕಾರದ್ದೇ ವಿಶೇಷವಾದ ಸೊಬಗು. ಶಿಷ್ಟಪದ ಶಿಲ್ಪಕಲೆಯಲ್ಲಿ ಪ್ರಮಾಣಬದ್ಧ ಅಳತೆ-ಆಕಾರ, ನಿರ್ಧಿಷ್ಟ ಶೈಲಿ, ಹಿತಮಿತ ಆಭರಣ ಅಲಂಕಾರಗಳಿಗೇ ಮಹತ್ವವಿರುತ್ತದೆ. ಜನಪದರಲ್ಲಿ ದೈನಂದಿನ ಬದುಕಿನ ವಿವರಗಳು ಶಿಲ್ಪರಚನೆಯ ಮೂಲ ವಿಷಯ, ವಸ್ತುಗಳಾಗಿದ್ದರೆ, ಶಿಷ್ಟಪದರ

ಶಿಲ್ಪಕಲೆಯಲ್ಲಿ ಪ್ರಧಾನವಾಗಿ ಬದುಕಿನ ಕೆಲ ಆಯ್ದ ಮುಖಗಳ ಅಭಿವ್ಯಕ್ತಿ ಮಾತ್ರವಿರುತ್ತದೆ.

ಜನಪದ ಶಿಲ್ಪಕಲೆಯಲ್ಲಿನ ವೈಶಿಷ್ಟ್ಯಗಳಲ್ಲಿ ವರ್ಣಗಾರಿಕೆಯೂ ಅತ್ಯಂತ ಮಹತ್ವದ್ದಾಗುತ್ತದೆ. ಶ್ರೀಮಂತವಾದ, ಆಕರ್ಷಕವಾದ ವರ್ಣಗಳು ಜನಪದರಿಗೆ ಹೆಚ್ಚು ಪ್ರೀಯವಾಗಿರುತ್ತವೆ. ಆದರೆ ಶಿಷ್ಟಪದ ಶಿಲ್ಪಕಲೆಯಲ್ಲಿ ವರ್ಣಗಳು ಹಿತ-ಮಿತವಾಗಿ, ಔಚಿತ್ಯಪೂರ್ಣವಾಗಿ ಬಳಕೆಯಾಗಿರುತ್ತವೆ. ಕೆಲವೊಮ್ಮೆ ಅಲ್ಲಿ ಬಣ್ಣ ಕಾಣಿಸುವುದೇ ಇಲ್ಲ. ಜನಪದ ಶಿಲ್ಪಕಲೆಯಲ್ಲಿನ ವರ್ಣಗಾರಿಕೆಯಲ್ಲಿ ಪ್ರಾಥಮಿಕ ವರ್ಣಗಳಾದ ನೀಲಿ, ಕೆಂಪು, ಹಳದಿಗಳಲ್ಲದೆ ಕಪ್ಪು, ಬಿಳಿ ವರ್ಣಗಳ ಬಳಕೆಯೂ ಅಧಿಕ ಪ್ರಮಾಣದಲ್ಲಿರುತ್ತದೆ. ಜನಪದ ಶಿಲ್ಪಕಲೆಯಲ್ಲಿ ಕೇಸರಿ, ಹಸಿರು, ಬಿಳಿ ಮುಂತಾದ ಸಾಂಕೇತಿಕ ಬಣ್ಣಗಳ ಬಳಕೆಯನ್ನು ಯಕ್ಷಗಾನ ಮುಖವರ್ಣಿಕೆ, ಮುಖವಾಡ, ದ್ಯಾಮವ್ವನ ಶಿಲ್ಪಗಳು, ಹರಕೆಯ ಶಿಲ್ಪಗಳು ಮುಂತಾದ ದೇವತಾ ಶಿಲ್ಪಗಳಿಗೆ ಬಳಸಿರುವುದನ್ನು ಕಾಣುತ್ತೇವೆ. ಜನಪದ ಶಿಲ್ಪಗಳ ಮೇಲಿನ ವರ್ಣಗಾರಿಕೆಯಲ್ಲಿ ಪೂರಕ ಬಣ್ಣಗಳ ಬಳಕೆ ವಿಶೇಷವಾಗಿರುತ್ತದೆ. ಜನಪದ ಶಿಲ್ಪಕಲೆಯಲ್ಲಿ ವಿರೋಧ ಬಣ್ಣಗಳು ಸಹಜವೆಂಬಂತೆ ಬಳಕೆಯಾಗಿರುತ್ತವೆ. ಕೆಂಪು, ಹಳದಿ, ಕೇಸರಿಯಂಥ ಪ್ರಖರವಾಗಿ ಕಾಣುವಂತಹ ಬಣ್ಣಗಳ ಬಳಕೆ ಜನಪದ ಶಿಲ್ಪಗಳಲ್ಲಿ ಹೆಚ್ಚು ಕಂಡುಬರುತ್ತದೆ. ಶಿಷ್ಟಪದ ಶಿಲ್ಪಕಲೆಯಲ್ಲಿ ಸೌಮ್ಯವರ್ಣಗಳೇ ವಿಶೇಷವಾಗಿ ಬಳಕೆಗೊಳ್ಳುತ್ತವೆ.

ಜನಪದರು ತಮ್ಮ ಸುತ್ತಮುತ್ತಲಿನ ನೈಸರ್ಗಿಕ ವಸ್ತುಗಳಾದ ಕಲ್ಲು, ಮಣ್ಣು, ಹೂವು, ಎಲೆ ಮುಂತಾದ ವಸ್ತುಗಳಿಂದ ಬಣ್ಣಗಳನ್ನು ತಯಾರಿಸಿಕೊಳ್ಳುತ್ತಾರೆ. ಉದಾಹರಣೆಗೆ, ಕಿನ್ನಾಳ ಗೊಂಬೆ, ಕಲಘಟಗಿ ತೊಟ್ಟಿಲು ಅಲ್ಲದೆ ಅನೇಕ ಗ್ರಾಮ ದೇವತೆಗಳಿಗೆ ಲಜಾವರ ಎಂಬ ಹೆಸರಿನ ಬಣ್ಣವನ್ನು ಬಳೆದಿರುತ್ತಾರೆ. ಈ ಬಣ್ಣವನ್ನು ತಾವೇ ತಯಾರಿಸಿಕೊಂಡಿರುತ್ತಾರೆ. ಆದರೆ ಶಿಷ್ಟಕಲಾ ಸಣಷ್ಟಿಯಲ್ಲಿ ರಾಸಾಯನಿಕ ಮೂಲದ್ರವ್ಯಗಳಿಂದ ಸಿದ್ಧವಾದ ವರ್ಣಗಳನ್ನು ಬಳಸುತ್ತಾರೆ. ಅಲ್ಲದೆ ಶಿಷ್ಟಪದ ಶಿಲ್ಪಗಳ ತಯಾರಿಕೆಯಲ್ಲಿ ಆಧುನಿಕ ಯಂತ್ರೋಪಕರಣಗಳಿಂದಾದ ಸಾಮುಗ್ರಿಗಳನ್ನು ವಿಶೇಷವಾಗಿ ಬಳಸಲಾಗುತ್ತದೆ. ಆದರೆ ಜನಪದ ಶಿಲ್ಪಕಲೆಯ ರಚನೆಗೆ ತೀರ ಸರಳವಾದ ಉಪಕರಣಗಳನ್ನು ಬಳಸಲಾಗುತ್ತದೆ. ಅನೇಕ ವೇಳೆ ಯಾವ ಉಪಕರಣದ ಬಳಕೆಯೂ ಇಲ್ಲದೆ ಜನಪದ ಶಿಲ್ಪಗಳು ರಚನೆಯಾಗುತ್ತವೆ.

ಜನಪದ ಶಿಲ್ಪಕಲೆಯ ರಚನೆಗೆ ಹಿಟ್ಟು, ಸಗಣಿ, ಸಕ್ಕರೆ, ಬೆಲ್ಲ, ಕಾಗದ, ಬೆಂಡು ಮುಂತಾದ ಅಶಾಶ್ವತವಾದ ಮಾಧ್ಯಮಗಳನ್ನೂ ಬಳಸಲಾಗುತ್ತದೆ. ಆದರೆ ಶಿಷ್ಟಪದ ಶಿಲ್ಪಕಲೆಯ ರಚನೆಗೆ ಇವುಗಳಾವವೂ ಮಾಧ್ಯಮಗಳಾಗಿ ಬಳಕೆಯಾಗುವುದಿಲ್ಲ. ಹೀಗಾಗಿ ಶಿಷ್ಟಪದ ಶಿಲ್ಪಕಲೆ ಕೆಲವೇ ಪ್ರಕಾರಗಳಾಗಿ ನಿಂತರೆ, ಜನಪದ ಶಿಲ್ಪಕಲೆ ಅನೇಕ ಪ್ರಕಾರಗಳಾಗಿ ನಿಲ್ಲುತ್ತದೆ. ಶಿಷ್ಟಪದ ಶಿಲ್ಪಕಲೆಯಲ್ಲಿ ಏನನ್ನೂ ಹೇಗೆ ನಿರ್ಮಿಸಬೇಕು ಮತ್ತು ಹೇಳಬೇಕು ಎಂಬುವುದು ಮುಖ್ಯವಾಗುತ್ತದೆ. ಜನಪದ ಶಿಲ್ಪಕಲೆಯಲ್ಲಿ ಏನನ್ನು ಹೇಳಬೇಕೆಂಬುದೇ ಮುಖ್ಯವಾಗುತ್ತದೆ.

ಶಿಷ್ಟಪದ ಶಿಲ್ಪಕಲೆಯೊಂದಿಗೆ ಶಿಲ್ಪಶಾಸ್ತ್ರ ಗ್ರಂಥಗಳು ಹಾಗೂ ಇತಿಹಾಸ ರಚನೆಯಾಗಿವೆ. ಆದರೆ ಜನಪದ ಶಿಲ್ಪಕಲೆ ಕುರಿತಂತೆ ಯಾವ ಶಾಸ್ತ್ರ ಗ್ರಂಥಗಳಾಗಲಿ, ಇತಿಹಾಸವಾಗಲೀ ರಚನೆಯಾಗಿಲ್ಲ. ಕೆಲವು ಜನಪದ ಶಿಲ್ಪಗಳನ್ನು ಆಚರಣೆಯ ನಂತರ ವಿಸರ್ಜಿಸಲಾಗುತ್ತದೆ. ಆದರೆ ಶಿಷ್ಟಪದ ಶಿಲ್ಪಗಳನ್ನು ವಿಸರ್ಜಿಸಲಾಗುವುದಿಲ್ಲ.

ಹೀಗೆ ಜನಪದ ಶಿಲ್ಪಕಲೆ ವಸ್ತು, ವಿನ್ಯಾಸ, ರಚನೆ, ಬಳಕೆಯ ಸಾಮಗ್ರಿ, ಮಾಧ್ಯಮ ಬಣ್ಣಗಾರಿಕೆ ಮೊದಲಾದವುಗಳಲ್ಲಿ ಶುದ್ಧ ಜನಪದೀಯ ಅಂಶಗಳನ್ನು ಪಡೆದುಕೊಂಡವುಗಳಾಗಿರುತ್ತವೆ. ಆದರೆ ಶಿಷ್ಟಪದ ಶಿಲ್ಪಕಲೆ ಅನೇಕ ಅಂಶಗಳಿಂದ ಭಿನ್ನವಾಗಿ ಸೃಷ್ಟಿಯಾಗಿರುತ್ತದೆ.

## ಜನಪದ ಶಿಲ್ಪಕಲೆಯ ವರ್ಗೀಕರಣ

ಜನಪದರ ಜೀವನ ಮತ್ತು ಕಲೆಗಳ ನಂಟು ಬೇರ್ಪಡಿಸಲಾಗದ ಸಾವಯವ ಸಂಬಂಧ. ಅದಕ್ಕಾಗಿಯೇ ನಮ್ಮೆಲ್ಲ ಇಂದು-ಹಿಂದುಗಳ ಇತಿಹಾಸವೆಂದರೆ ಜಾನಪದ ಕಲೆಗಳು. ಜನಪದರ ಬದುಕಿನೊಂದಿಗೆ ಪರಂಪರಾಗತವಾಗಿ ಬೆಳೆದು ಬಂದ ಜನಪದ ಕಲೆಗಳು ಆಯಾ ಪ್ರದೇಶದ ಜನತೆಯ ಸಾಂಸ್ಕೃತಿಕ ಅಧ್ಯಯನಕ್ಕೂ ಮೂಲ ಆಕಾರಗಳಾಗಿವೆ. ಡಾ. ಬಿ.ಆರ್. ಹಿರೇಮಠರು ಹೇಳುವಂತೆ ಜಾನಪದ ಕಲೆಗಳು ಮಾನವನ ಮೂಲ ಸಂವೇಧನೆಗಳಿಗೆ ತೀರ ಹತ್ತಿರವಾದವುಗಳು. ಇವು ಮಾನವನ ಜೀವನದ ವಿವಿಧ ಮುಖಗಳನ್ನು ಪರಿಚಯಿಸುವ ಮಹಾ ಸಂಪುಟಗಳು. ನಾಡಿನ ಸಂಸ್ಕೃತಿ ಹಾಗೂ ಪರಂಪರೆಯನ್ನು ಜೀವಂತವಾಗಿ ಬದುಕಿಸಿಕೊಂಡು ಬಂದ ಹಿರಿಮೆ, ಗರಿಮೆ ಇವುಗಳಿಗಿದೆ.[೫೦] ಜನಪದರ ಈ ರೀತಿಯ ಸಾಂಸ್ಕೃತಿಯೊಂದರ ಅಧ್ಯಯನ ಅತ್ಯಂತ ಮಹತ್ವದ್ದಾಗಿದೆ. ಇದರಿಂದ ಜನಪದ ಸಂಸ್ಕೃತಿ, ಸಮಾಜ ಮತ್ತು ಕಲೆಗಳಿಗಿರುವ ಸಂಬಂದದ ಪರಿಚಯವಾಗಿರುತ್ತದೆ. ಜನಪದರ ಕಲೆಗಳಿಂದ ಆಯಾ ಜನಪದ ಸಂಸ್ಕೃತಿಯನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ಯಾವ ವಿಷಯವೇ ಆಗಿರಲಿ ಅದರ ವೈಜ್ಞಾನಿಕ ವ್ಯಾಸಂಗಕ್ಕೆ ವರ್ಗೀಕರಣವೂ ಅವಶ್ಯ. ವರ್ಗೀಕರಣ ಭಾಹಿರವಾದ ಅಧ್ಯಯನ ಗೊಂದಲಕ್ಕೆ ಕಾರಣವಾಗುತ್ತದೆ. ಅದಕ್ಕಾಗಿ ಪ್ರತಿಯೊಂದು ಅಧ್ಯಯನಕ್ಕೆ ವ್ಯವಸ್ಥೆ ಮುಖ್ಯ. ವ್ಯವಸ್ಥೆಯ ಒಂದು ಮುಖ ವರ್ಗೀಕರಣ. ಜಾನಪದದಲ್ಲಿ ಕಲೆಯ ಮುಖವು ಶಾಸ್ತ್ರದ ಮುಖವೂ ಸೇರಿಕೊಂಡಿದೆ. ಕಲೆಯ ಮುಖ ಆಸ್ವಾಧನೆಗೆ ಸಂಬಂಧಿಸಿದ್ದು ಶಾಸ್ತ್ರದ ಮುಖ ಅಧ್ಯಯನಕ್ಕೆ ಸಂಬಂಧಿಸಿದುದು. [೫೧] ಜಾನಪದದ ಈ ಕಲಾತ್ಮಕ ಕ್ಷೇತ್ರದ ಒಂದು ಅಂಗ ಜಾನಪದ ಕಲಾ ವಿಭಾಗ. ಶಾಖೋಪಶಾಖೆಗಳಲ್ಲಿ ಮೈಚಾಚಿದ ಹರವು ವಿಸ್ತಾರವಾದುದು. ಅಧ್ಯಯನಕಾರರಿಗೆ ಇದೊಂದು

---

೫೦. ಡಾ. ಬಿ.ಆರ್. ಹಿರೇಮಠ : ಕರ್ನಾಟಕ ಜಾನಪದ ಕಲೆಗಳು, ಕರ್ನಾಟಕ ಭಾರತಿ, (೧೨-೪), ಪುಟ -೧೦೦

೫೧. ಡಾ. ಹಾ.ಮಾ. ನಾಯಕ : ಜಾನಪದ ಸಮೀಕ್ಷೆ, ಪುಟ -೪೦

ಕನ್ನೆನೆಲ. ಈ ಜನಪದ ಕಲಾ ವಿಭಾಗದ ಕ್ರಿಯಾತ್ಮಕ ಗುಂಪಿಗೆ ಸೇರುವ ಕಲೆಗಳಲ್ಲಿ ಜನಪದ ಶಿಲ್ಪಕಲೆಯೂ ಒಂದು ಪ್ರಮುಖ ಪ್ರಕಾರ.

ಕರ್ನಾಟಕ ಜನಪದ ಶಿಲ್ಪಕಲೆ ಅತ್ಯಂತ ಆಕರ್ಷಕ ಮತ್ತು ಶ್ರೀಮಂತವಾಗಿರುವುದಲ್ಲದೆ, ವಿಸ್ತಾರವಾದ ನೆಲೆಗಟ್ಟಿನ ಮೇಲೆ ನಿಂತಿರುವಂತಹುದಾಗಿದೆ. ಇದರ ವ್ಯವಸ್ಥಿತ ಅಧ್ಯಯನಕ್ಕಾಗಿ ವರ್ಗೀಕರಣ ತುಂಬ ಅವಶ್ಯಕವಾಗಿದೆ. ಜನಪದ ಸಾಹಿತ್ಯ ಮತ್ತು ಕಲೆಗಳ ವರ್ಗೀಕರಣ ಮಾಡಿದ ಅನೇಕ ವಿದ್ವಾಂಸರು ಜನಪದ ಶಿಲ್ಪಕಲೆಯ ವರ್ಗೀಕರಣದ ಕಡೆಗೆ ಗಮನ ಹರಿಸಿದ್ದು ಕಂಡು ಬರುವುದಿಲ್ಲ. ಆದರೆ ಜನಪದ ಕಲೆಗಳ ವರ್ಗೀಕರಣದಲ್ಲಿ ಜನಪದ ಶಿಲ್ಪಕಲೆಯನ್ನು ಗುರುತಿಸುವ ಪ್ರಯತ್ನಗಳು ನಡೆದಿವೆ. ಕೆಲವನ್ನು ಇಲ್ಲಿ ಗಮನಿಸಬಹುದು.

ಡಾ. ಬಿ.ಆರ್. ಹಿರೇಮಠರು[೫೨] ಕರ್ನಾಟಕದ ಸಮಸ್ತ ಜಾನಪದ ಕಲೆಗಳನ್ನು ನಾಲ್ಕು ರೀತಿಯಲ್ಲಿ ವರ್ಗೀಕರಿಸಿದ್ದಾರೆ.

೧. ಪ್ರಯೋಜಕ ಕಲೆಗಳು
೨. ಉಪಜೀವನದ ಕಲೆಗಳು
೩. ಉತ್ಸವದ ಕಲೆಗಳು
೪. ಉತ್ಸಾಹದ ಕಲೆಗಳು

ಮತ್ತೆ ಇವುಗಳನ್ನು ಕ್ರಮವಾಗಿ ಪುರುಷ ಮತ್ತು ಸ್ತ್ರೀ ಪ್ರಧಾನ ಕಲೆಗಳೆಂದು, ಇದರಲ್ಲಿ ಲೌಕಿಕ, ಧಾರ್ಮಿಕ, ಮನರಂಜನೆ ಧಾರ್ಮಿಕ ಕಲೆಗಳೆಂದು ಉಪ ವಿಭಾಗಗಳಲ್ಲಿ ವಿಂಗಡಿಸಿದ್ದಾರೆ.

ಡಾ. ಜಿ.ಶಂ. ಪರಮಶಿವಯ್ಯ ಅವರು [೫೩] ಜನಪದ ಕಲೆಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಿದ್ದಾರೆ.

೧. ಜನಪದ ಪ್ರದರ್ಶನಾತ್ಮಕ ಕಲೆಗಳು
೨. ಇತರ ಜನಪದ ಕಲೆಗಳು

ಮೊದಲನೆಯದರಲ್ಲಿ ಯಕ್ಷಗಾನ, ಬಯಲಾಟ, ನಾಟಕ, ಗೊಂಬೆಯಾಟಗಳು, ಜನಪದ ನೃತ್ಯ, ಮೋಡಿ ಮುಂತಾದವು ಸೇರುತ್ತವೆ. ಇಷ್ಟೇ ವೈವಿಧ್ಯಮಯವಾಗಿ ಎರಡನೆಯದರಲ್ಲಿ ಇತರ ಕಲೆಗಳೂ ತಮ್ಮ ಅಸ್ತಿತ್ವಗಳನ್ನು ಗುರುತಿಸಿಕೊಳ್ಳುತ್ತವೆ. ಅವರ ಈ ವರ್ಗೀಕರಣ ಜನಪದ ಕಲೆಗಳನ್ನು ಕುರಿತದ್ದಾದರೂ, ಜನಪದ ಶಿಲ್ಪಕಲೆಯ ರೂಪು ರೇಷೆಗಳನ್ನು ಒಳಗೊಳ್ಳುತ್ತದೆ.

ದೇ.ಜ.ಗೌ.[೫೪] ಅವರು ಜನಪದ ಕಲೆಗಳನ್ನು ನಾಲ್ಕು ರೀತಿಯಲ್ಲಿ ವಿಂಗಡಿಸಿದ್ದಾರೆ.

೧. ಉಪಯುಕ್ತ ಕಲೆಗಳು
೨. ಮತೀಯ ಕಲೆಗಳು
೩. ಅಲಂಕರಣ ಕಲೆಗಳು
೪. ಲಲಿತ ಕಲೆಗಳು

೫೨. ಡಾ. ಬಿ.ಆರ್. ಹಿರೇಮಠ : ಕರ್ನಾಟಕ ಜಾನಪದ ಕಲೆಗಳು, ಕರ್ನಾಟಕ ಭಾರತಿ, (೧೨-೪), ಪುಟ -೧೦೦

೫೩. ಡಾ. ಜಿ.ಶಂ.ಪ. : ಜನಪದ ಕಲಾವಿಹಾರ, ಪುಟ -೬

೫೪. ದೇ. ಜವರೇಗೌಡ : ಜಾನಪದ ವಾಹಿನಿ, ಪುಟ - ೪೮,೪೯

ಇವುಗಳಿಗೆ ವಿವರಣೆ ನೀಡುತ್ತ ಅವರು, ಶಿಲ್ಪಕಲೆಯನ್ನು ಲಲಿತ ಕಲೆಗಳ ಗುಂಪಿಗೆ ಸೇರಿಸುತ್ತಾರೆ. ಹಾಗೆ ನೋಡಿದರೆ ಜನಪದ ಶಿಲ್ಪಕಲೆಯು ಈ ನಾಲ್ಕು ವಿಭಾಗದಲ್ಲಿ ಕಾಣಿಸುವಂತಹದಾಗಿದೆ.

ರಾಜೇಗೌಡ ಹೊಸಹಳ್ಳಿ [೫೫]ಯವರು ಎರಡು ರೀತಿಯಲ್ಲಿ ಜನಪದ ಕಲೆಗಳನ್ನು ವರ್ಗೀಕರಿಸಿದ್ದಾರೆ.

೧. ಶ್ರಾವ್ಯ ಕಲೆಗಳು ೨. ದೃಶ್ಯ ಕಲೆಗಳು

ಶ್ರಾವ್ಯ ಕಲೆಗಳು ಧ್ವನಿ ಸಂಬಂದವಾದ ಸಾಹಿತ್ಯಗಳೆಂದೂ ನಾಟಕ, ನೃತ್ಯ, ಕುಣಿತ, ಆಟ, ಚಿತ್ರಕಲೆ ಇವೆಲ್ಲ ದೃಶ್ಯ ಕಲೆಗಳೆಂದೂ ಹೇಳುತ್ತಾರೆ. ದೃಶ್ಯ ಕಲೆಗಳಲ್ಲಿ ಇವರು ಜನಪದ ಶಿಲ್ಪಕಲೆಯನ್ನೂ ಗುರುತಿಸಿದ್ದಾರೆಂಬುದು ಮುಖ್ಯ.

ಡಾ. ನಂ. ತಪಸ್ವೀಕುಮಾರ [೫೬] ಅವರು ಜನಪದ ಕಲೆಗಳನ್ನು ಎರಡು ರೀತಿಯಲ್ಲಿ ವಿಭಾಗಿಸಿದ್ದಾರೆ.

೧. ವಾಚಿಕ ಕಲೆಗಳು ( Verbal Arts ) ೨. ಅವಾಚಿಕ ಕಲೆಗಳು ( Non Verbal Arts )

ಅವಾಚಿಕ ಕಲೆಗಳಲ್ಲಿ ಶಿಲೆ, ಮರ ಹಾಗೂ ಲೋಹದ ಕೆತ್ತನೆ, ವಾಸ್ತು ಶಿಲ್ಪ, ಮೂರ್ತಿ ಶಿಲ್ಪ, ಬಗೆ ಬಗೆಯ ಕರಕುಶಲ ಸಾಮಗ್ರಿ ನಿರ್ಮಾಣ, ಹೆಣಿಕೆ, ರಂಗವಲ್ಲಿ, ಕಸೂತಿ, ನೇಯ್ಗೆ, ಮನೆ, ಮಠಗಳ ಅಲಂಕಾರ ಇತ್ಯಾದಿಗಳನ್ನು ಹೇಳುತ್ತಾರೆ. ಅವಾಚಿಕ ಕಲೆಗಳಲ್ಲಿ ಜನಪದ ಶಿಲ್ಪಕಲೆಯ ಪ್ರಕಾರಗಳನ್ನು ಇವರು ಹೆಸರಿಸುವ ಪ್ರಯತ್ನ ಮಾಡಿದ್ದಾರೆ.

ಎಚ್.ಎಲ್. ನಾಗೇಗೌಡ [೫೭] ಅವರು ಜಾನಪದವನ್ನು ಏಳು ರೀತಿಯಲ್ಲಿ ವಿಂಗಡಿಸಿದ್ದು ಏಳನೆಯದರಲ್ಲಿ ಜನಪದ ಶಿಲ್ಪಕಲೆ, ಬಣ್ಣಗಾರಿಕೆ, ಶಿಲ್ಪಕೆತ್ತನೆ, ಅಲಂಕಾರ ಇತ್ಯಾದಿಗಳನ್ನು ಸೇರಿಸಿದ್ದಾರೆ. ಇವರು ಜನಪದ ದೃಶ್ಯಕಲಾ ಪ್ರಕಾರಗಳನ್ನು ಸ್ವತಂತ್ರವಾಗಿ ವರ್ಗೀಕರಿಸಿದ್ದಾರೆನ್ನಬಹುದು.

ಈ ಮೇಲಿನ ವಿದ್ವಾಂಸರ ವರ್ಗೀಕರಣದ ಅಭಿಪ್ರಾಯಗಳನ್ನು ಗಮನಿಸಿದಾಗ ಎರಡು ರೀತಿಯ ಅಂಶಗಳು ಸ್ಪಷ್ಟವಾಗುತ್ತವೆ. ಒಂದು ; ಜನಪದ ಕಲೆಗಳ ವರ್ಗೀಕರಣದಲ್ಲಿ ಜನಪದ ದೃಶ್ಯಕಲೆಗಳಾದ ಚಿತ್ರಕಲೆ ಮತ್ತು ಶಿಲ್ಪಕಲೆಗಳ ಅಂಶ ಪರಿಗಣಿಸಿದ್ದು, ಇನ್ನೊಂದು ; ಜನಪದ ದೃಶ್ಯಕಲೆಯಲ್ಲಿ ಬರುವ ವಿವಿಧ ಪ್ರಕಾರಗಳನ್ನು ತಮ್ಮ ಗಮನಕ್ಕೆ ಬಂದಷ್ಟು ಪಟ್ಟಿ ಮಾಡಿದ್ದುದು ವಿಶೇಷವಾಗಿ ಕಂಡುಬರುತ್ತದೆ.

ಜನಪದ ದೃಶ್ಯಕಲೆಗಳಲ್ಲಿ ಒಂದಾದ ಜನಪದ ಚಿತ್ರಕಲೆಯನ್ನೇ ವಿಶೇಷವಾಗಿ ಅಧ್ಯಯನ ಮಾಡಿದ

---

೫೫. ರಾಜೇಗೌಡ ಹೊಸಹಳ್ಳಿ : ಹಾಸನ ಜಿಲ್ಲೆಯ ಜಾನಪದ ಕಲೆಗಳು, ವಿಶ್ವ ಕನ್ನಡ - ೩, ಪುಟ -೧೪೩
೫೬. ನಂ. ತಪಸ್ವೀಕುಮಾರ : ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ, ಪುಟ -೧೯೦
೫೭. ಡಾ. ವೃಷಭೇಂದ್ರಸ್ವಾಮಿ (ಸಂ) : ಜಾನಪದ ಸಾಹಿತ್ಯ ದರ್ಶನ -೭, ಪುಟ -೨೩

ಡಾ. ಎಸ್.ಸಿ. ಪಾಟೀಲರು [೫೮] ಅದನ್ನು ಮುಖ್ಯವಾಗಿ ಮೂರು ರೀತಿಯಲ್ಲಿ ವಿಂಗಡಿಸುತ್ತಾರೆ.

೧. ಸೌಂದರ್ಯಮೂಲ ಜನಪದ ಚಿತ್ರಕಲೆ

೨. ಧರ್ಮಮೂಲ ಜನಪದ ಚಿತ್ರಕಲೆ

೩. ವೃತ್ತಿಮೂಲ ಜನಪದ ಚಿತ್ರಕಲೆ

ಇವುಗಳನ್ನು ಮತ್ತೆ ಉಪವಿಂಗಡಣೆ ಮಾಡಿ, ಅಧ್ಯಯನಕ್ಕೊಳಪಡಿಸಿದ್ದಾರೆ. ಈ ಬಗೆಯ ವಿಂಗಡಣೆ ಅತ್ಯಂತ ಸೂಕ್ತವಾಗಿದ್ದು ವಿಶಾಲವಾದ ವ್ಯಾಪ್ತಿಯಿಂದ ಕೂಡಿದೆ. ಪ್ರಸ್ತುತ ಜನಪದ ಶಿಲ್ಪಕಲೆಯ ಅಧ್ಯಯನವನ್ನೂ ಇದೇ ಮಾದರಿಯಲ್ಲಿ ಶಿಲ್ಪಕ್ಕೆ ಅನ್ವಯಿಸಿ ವರ್ಗೀಕರಿಸಿ ಅಧ್ಯಯನ ಮಾಡಬಹುದಾಗಿದೆ.

೧. ಸೌಂದರ್ಯಮೂಲ ಜನಪದ ಶಿಲ್ಪಕಲೆ

೨. ಧರ್ಮಮೂಲ ಜನಪದ ಶಿಲ್ಪಕಲೆ

೩. ವೃತ್ತಿಮೂಲ ಜನಪದ ಶಿಲ್ಪಕಲೆ

ಪ್ರಸ್ತುತ ಮಹಾ ಪ್ರಬಂಧದಲ್ಲಿ ಮಾಧ್ಯಮಕ್ಕನುಗುಣವಾಗಿ ಮಾಡಿಕೊಳ್ಳಲಾದ ಅಧ್ಯಾಯಗಳಲ್ಲಿ ಮೇಲಿನ ಈ ಮೂರೂ ಬಗೆಯ ವರ್ಗೀಕರಣಗಳು ಬರುತ್ತವೆ. ಆದರೆ ಒಂದೊಂದು ಮಾಧ್ಯಮದ ಅಧ್ಯಾಯದಲ್ಲಿ ಶಿಲ್ಪಗಳು ಬೆಳೆದು ಬಂದ ಹಿನ್ನೆಲೆಯನ್ನು ಗಮನಿಸಿ ಸೌಂದರ್ಯಮೂಲಕ್ಕೂ, ಕೆಲವು ಸಲ ಧರ್ಮಮೂಲಕ್ಕೂ, ಇನ್ನೂ ಕೆಲವು ಸಲ ವೃತ್ತಿಮೂಲಕ್ಕೂ ಮತ್ತೂ ಸೌಂದರ್ಯ, ಧರ್ಮ ಹಾಗೂ ವೃತ್ತಿ ಮೂಲ ಈ ಮೂರಕ್ಕೂ ಪ್ರಾಧಾನ್ಯತೆ ನೀಡಿ ವರ್ಗೀಕರಿಸಿ ಅಧ್ಯಯನ ಮಾಡಲಾಗಿದೆ.

---

೫೮. ಡಾ. ಎಸ್.ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ -೬೪

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಅಧ್ಯಾಯ : ಮೂರು

# ಮಣ್ಣಿನ ಮಾಧ್ಯಮದ ಜನಪದ ಶಿಲ್ಪಕಲೆ

ನಮ್ಮ ಜನಪದರಿಗೆ ಹೊನ್ನಿಗಿಂತಲೂ ಮಣ್ಣೇ ಮಿಗಿಲು. ಈ ಮಾನವ ಕಾಯ ಮಣ್ಣಿನಿಂದಲೇ ಬಂದುದು, ಮಣ್ಣಿನಲ್ಲೇ ಬದುಕುತ್ತದೆ, ಕೊನೆಗೆ ಮಣ್ಣಿನಲ್ಲೇ ಒಂದಾಗುತ್ತದೆ ಎಂಬುದು ಜನಪದರ ಉಕ್ತಿಯಾಗಿದೆ. ಹೀಗಾಗಿ ಹಳ್ಳಿಯ ರೈತರು ವರ್ಷದಲ್ಲಿ ವಿವಿಧ ರೀತಿಯ ಮಣ್ಣು ಪೂಜೆಗಳನ್ನು ಆಚರಿಸುವರು.[೧] ಜೇಷ್ಟ ಬಹುಳ ಅಮವಾಸ್ಯೆಯಂದು ಅರಳೆಲೆ ಬಸವನನ್ನು, ಆಷಾಡದಲ್ಲಿ ಗುಳ್ಳವ್ವ, ಶ್ರಾವಣ ಮಾಸದಲ್ಲಿ ಹುತ್ತಪ್ಪ ಅಥವಾ ನಾಗರ, ಬಾದ್ರಪದದಲ್ಲಿ ಗಣಪತಿ, ಬಾದ್ರಪದ ಶುದ್ಧ ಅಷ್ಟಮಿಯಲ್ಲಿ ಜೋಕುಮಾರ, ಬಾದ್ರಪದ ಅಶ್ವಿಜ ಕಾಲದಲ್ಲಿ ಗುರ್ಜಿ ಮುಂತಾದ ಮಣ್ಣಿನ ಶಿಲ್ಪಗಳನ್ನು ಪೂಜಿಸುತ್ತಾರೆ.

ಮಣ್ಣನ್ನು ನಂಬಿ ಮಣ್ಣಿಂದ ಬದುಕೇನ
ಮಣ್ಣೆನಗೆ ಮುಂದೆ ಹೊನ್ನು ಅಣ್ಣಯ್ಯ
ಮಣ್ಣೇ ಲೋಕದಲ್ಲಿ ಬೆಲೆಯಾದ್ದು

ಹೀಗೆ ಪ್ರಾಚೀನ ಕಾಲದಿಂದಲೂ ನಮ್ಮ ನಾಡಿನಲ್ಲಿ ಮಣ್ಣು ಮಹತ್ವದ ಸ್ಥಾನ ಪಡೆದಿದೆ. ದೇ. ಜ. ಗೌ. ಹೇಳುವಂತೆ ಮಣ್ಣು ಸಂಪತ್ತನ್ನು ಹೆರುವ ಜೀವಶಕ್ತಿ, ಮಣ್ಣು, ಹೊನ್ನುಗಳೆರಡೂ ರೈತನ ಪಾಲಿಗೆ ಅಭೇದ ವಸ್ತುಗಳು, ದುಡಿಯುವ ಬಾಯಿಗೆ ಮಣ್ಣೇ ಹೊನ್ನಾಗಿ ಪರಿಣಮಿಸುತ್ತದೆ.[2] ಈ ಮಾತು ಮಣ್ಣಿನ ಮಹತ್ವವನ್ನು ತಿಳಿಸುತ್ತದೆ.

ಈ ಮಣ್ಣನ್ನು ಭೂಮಿ ತಾಯಿಯೆಂದೇ ಪೂಜಿಸಲಾಗುತ್ತದೆಯಲ್ಲದೆ ಮನುಷ್ಯನ ಜೀವನದ ಉದ್ದಕ್ಕೂ ಹಾಸು ಹೊಕ್ಕಾಗಿರುವ ಹಬ್ಬ - ಹರಿದಿನಗಳಂತಹ ಸಂದರ್ಭಗಳಲ್ಲಿ ವಿವಿಧ ಆಕಾರಗಳಲ್ಲಿ ಪ್ರಾಣಿಗಳಾಗಿ, ದೇವತಾ ಮೂರ್ತಿಶಿಲ್ಪಗಳಾಗಿ ರೂಪ ತಳೆದು ಪೂಜೆಗೊಳ್ಳುತ್ತವೆ. ಹೀಗೆ ರೂಪ ತಳೆದು ಪೂಜೆಗೊಳ್ಳುವ ನೂರಾರು ಬಗೆಯ ಮಣ್ಣಿನ ಶಿಲ್ಪಗಳಲ್ಲಿ ನಮ್ಮ ಜನಪದರ ಸೌಂದರ್ಯ ಪ್ರಜ್ಞೆ ಮತ್ತು ಕಲಾವಂತಿಕೆಗಳನ್ನು ಕಾಣಬಹುದಾಗಿದೆ.

ಮಡಕೆಯ ಮಾಡುವರೆ ಮಣ್ಣೇ ಮೊದಲು ಎಂಬ ಮಾತಿನಂತೆ ಮನುಷ್ಯನಿಗೆ ಸೌಂದರ್ಯ ಪ್ರಜ್ಞೆ ಉಂಟಾಗಿ ಶಿಲ್ಪ ರಚನೆಗೆ ತೊಡಗಲು ಮಣ್ಣೇ ಮೊದಲ ಮಾಧ್ಯಮವಾಗಿ ಬಳಕೆಯಾಗಿರಲು ಸಾಧ್ಯವಿದೆ.

---

೧. ಡಾ. ಬಿ. ಎಸ್. ಗದ್ದಿಗಿಮಠ : ಕನ್ನಡ ಜಾನಪದ ಗೀತಗಳು, ಪುಟ - ೧೪೭
೨. ಡಾ.ಎಸ್. ಎಂ. ವೃಷಭೇಂದ್ರಸ್ವಾಮಿ ( ಸಂ.) : ಜಾನಪದ ಸಾಹಿತ್ಯ ದರ್ಶನ, ಭಾಗ - ೧೦, ಪುಟ - ೬೭

[illegible]

[illegible]

[illegible]

[illegible]

[illegible]

ಹರಪ್ಪ ಮತ್ತು ಮಹೇಂಜೋದಾರೋ ಗಳ ಉತ್ಖನನದಲ್ಲಿ ದೊರೆತ ಕಲಾತ್ಮಕ ಪಾತ್ರೆಗಳು, ಮಕ್ಕಳಾಟಿಕೆಗಳು, ಮುಂತಾದವು ಮಣ್ಣಿನ ಶಿಲ್ಪಗಳ ರಚನೆಯ ಪ್ರಾಚೀನತೆಯನ್ನು ಅರುಹುತ್ತವೆ.

ಮಣ್ಣಿನ ಮಾಧ್ಯಮದ ಜನಪದ ಶಿಲ್ಪಗಳು ಹೆಚ್ಚಾಗಿ ಧರ್ಮ ಹಾಗೂ ವೃತ್ತಿಯ ಹಿನ್ನೆಲೆಯಲ್ಲಿ ಬೆಳೆದು ಬಂದಿರುವದರಿಂದ ಇವುಗಳನ್ನು I. ಮಣ್ಣಿನ ಮಾಧ್ಯಮದ ಧರ್ಮ ಮೂಲ ಜನಪದ ಶಿಲ್ಪಕಲೆ ಹಾಗೂ II. ಮಣ್ಣಿನ ಮಾಧ್ಯಮದ ವೃತ್ತಿ ಮೂಲ ಜನಪದ ಶಿಲ್ಪಕಲೆಯೆಂದು ಎರಡು ರೀತಿಯಲ್ಲಿ ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ.

## I. ಮಣ್ಣಿನ ಮಾಧ್ಯಮದ ಧರ್ಮ ಮೂಲ ಜನಪದ ಶಿಲ್ಪಕಲೆ

ನಮ್ಮ ಜನಪದರ ದೈನಂದಿನ ಬದುಕು ದೇವರ ಸ್ತುತಿಯೊಂದಿಗೇ ಆರಂಭವಾಗುವಂಥದು. ಜನನದಿಂದ ಹಿಡಿದು ಮರಣದವರೆಗಿನ ಪ್ರತಿಯೊಂದು ಕ್ರಿಯೆ ಹೆಚ್ಚಾಗಿ ದೇವರ ಸಂಬಂಧವನ್ನು ಪಡೆದೇ ನಡೆಯುತ್ತಿರುತ್ತದೆ. ಅಸಹಾಯಕತೆಯನ್ನು ಮರೆಯಲು ಅವರು ದೇವರಲ್ಲಿ ಮೊರೆಹೋಗುತ್ತಾರೆ. ಬೆಳಗಾದೊಡನೆ ದೇವರ ಪೂಜೆ ಆರಂಭವಾಗುತ್ತದೆ. ಭಯ ನಿವಾರಕ, ರೋಗ ನಿರೋಧಕ, ಮುಕ್ತಿಯ ದ್ಯೋತಕ, ಮಂಗಳಕಾರಕವೆಂಬ ಭಾವನೆಗಳ ಹಿನ್ನೆಲೆಯಲ್ಲಿ ಒಲೆ, ನೆಲ, ಗೋಡೆಗಳು ಸಾರಿಸಲ್ಪಟ್ಟು ಸುಣ್ಣ, ಬಣ್ಣ, ವಿಭೂತಿ, ಕುಂಕುಮಗಳಿಂದ ಅಲಂಕೃತಗೊಂಡು ಪೂಜಿಸಲ್ಪಡುತ್ತವೆ. ಇಲ್ಲೆಲ್ಲ ಕಲಾತ್ಮಕತೆ ಅಡಗಿರುವದನ್ನು ನಾವು ಕಾಣುತ್ತೇವೆ.

ಹೀಗೆ ಧಾರ್ಮಿಕ ಹಿನ್ನೆಲೆಯಲ್ಲಿ ದೈವದ ಪರಿಕಲ್ಪನೆಯಲ್ಲಿ ಮತ್ತು ಆರಾಧನೆಯಲ್ಲಿ ಅನೇಕ ಜನಪದ ಕಲೆಗಳು ಹುಟ್ಟನ್ನು ಪಡೆದಿವೆ. ಅವೆಲ್ಲ ಕಲೆಗಳು ವರ್ಷದುದ್ದಕ್ಕೂ ಬರುವ ಹಬ್ಬ ಹರಿದಿನಗಳಲ್ಲಿ ಚಿತ್ರಗಳಾಗಿ, ಶಿಲ್ಪಗಳಾಗಿ, ಸಂಗೀತವಾಗಿ ರೂಪಗೊಂಡಿವೆ. ದೇವರ ಬಗೆಗೆ ಮಾಡಿದ ಚಿಂತನ-ಮಂಥನ ಜನಪದ ಸಾಹಿತ್ಯಕ್ಕೆ ಮೂಲವಾಗಿರುವಂತೆ, ದೇವರ ಮುಂದೆ ಮಾಡಿದ ಹಾಡು-ಕುಣಿತಗಳು ಸಂಗೀತ, ನೃತ್ಯಗಳಿಗೆ ಮೂಲವಾಗಿವೆ. ಹಾಗೆಯೇ ದೇವರುಗಳಿಗೆ ರೂಪ, ಆಕಾರಗಳನ್ನು ಮನುಷ್ಯ, ಪ್ರಾಣಿ ಇಲ್ಲವೆ ಪಕ್ಷಿಗಳ ಹಾಗೆ ನೀಡಿದಾಗ ಜನಪದ ದೇವತಾ ಶಿಲ್ಪಗಳಾಗಿ ಮೈತಳೆದಿವೆ. ಈ ಶಿಲ್ಪಗಳ ರಚನೆಗೆ ತಮಗೆ ಸುಲಭವಾಗಿ ಸಿಗುವ ಮಣ್ಣನ್ನೇ ಬಳಸಿದಾಗ, ಮಣ್ಣಿನ ಮಾಧ್ಯಮದಲ್ಲಿ ಜನಪದರ ಶಿಲ್ಪಗಳು ಹುಟ್ಟಿಕೊಂಡು ಬಂದಿವೆ.

ಹಬ್ಬ, ಜಾತ್ರೆ, ಉತ್ಸವ, ಆಚರಣೆಗಳಂತಹ ಸಂದರ್ಭಗಳಲ್ಲಿ ಧರ್ಮದ ಕ್ರಿಯಾ ವಿಧಿಗಳು ಒಂದೊಂದು ರೀತಿಯಲ್ಲಿ ಪ್ರಕಟಗೊಳ್ಳುವಂತೆ ಜನಪದ ಶಿಲ್ಪಗಳೂ ಧಾರ್ಮಿಕ ಆಶಯ-ನಂಬಿಕೆಗಳ ಹಿನ್ನೆಲೆಯಲ್ಲಿ ಅಭಿವ್ಯಕ್ತಗೊಂಡಿದ್ದರಿಂದ ಅವನ್ನು ಧರ್ಮಮೂಲ ಜನಪದ ಶಿಲ್ಪಕಲೆಯೆಂದು ಕರೆಯಲಾಗಿದೆ. ಈ ಧರ್ಮಮೂಲದ ಶಿಲ್ಪಗಳಲ್ಲಿ ದೈವಗಳ ಶಿಲ್ಪಗಳೇ ಹೆಚ್ಚಾಗಿ ಕಂಡು ಬರುವದರಿಂದ ಅವುಗಳನ್ನು ದೇವತಾ ಶಿಲ್ಪಗಳೆಂದು ಕರೆದು ಅಧ್ಯಯನ ಮಾಡಲಾಗಿದೆ.

# ಮಣ್ಣಿನ ಮಾಧ್ಯಮದ ಜನಪದ ಶಿಲ್ಪಕಲೆ

## I. ಮಣ್ಣಿನ ಮಾಧ್ಯಮದ ಧರ್ಮ ಮೂಲ ಜನಪದ ಶಿಲ್ಪಕಲೆ

### ದೇವತಾ ಶಿಲ್ಪಗಳು

- ಪುರುಷ ದೇವತಾ ಶಿಲ್ಪಗಳು
  - ಗಣೇಶನ ಶಿಲ್ಪಗಳು
  - ಜೋಕುಮಾರ ಶಿಲ್ಪಗಳು
  - ಗುರ್ಜಿಯ ಶಿಲ್ಪಗಳು
  - ಶಿರಿಯಾಳ ಶೆಟ್ಟಿಯ ಶಿಲ್ಪಗಳು
- ಸ್ತ್ರೀ ದೇವತಾ ಶಿಲ್ಪಗಳು
  - ಗುಳ್ಳವ್ವ ಶಿಲ್ಪಗಳು
  - ಚೆಂಗೈವ್ವನ ಶಿಲ್ಪಗಳು
  - ಸೀಗಮ್ಮನ ಶಿಲ್ಪಗಳು
  - ಗಜ ಲಕ್ಷ್ಮೀಯ ಶಿಲ್ಪಗಳು
  - ಅಮ್ಮನ ಶಿಲ್ಪಗಳು
- ಪ್ರಾಣಿ ದೇವತಾ ಶಿಲ್ಪಗಳು
  - ಮಣ್ಣೆತ್ತು ಶಿಲ್ಪಗಳು
  - ಕೋಟೆ ಬಸವನ ಶಿಲ್ಪಗಳು
  - ಅರಳೆಲೆ ಬಸವನ ಶಿಲ್ಪಗಳು
  - ಹುತ್ತಪ್ಪನ ಶಿಲ್ಪಗಳು
  - ತೋಪು ಹೊತ್ತ ಆನೆಯ ಶಿಲ್ಪಗಳು
  - ಆನೆಯ ಶಿಲ್ಪಗಳು
  - ಆಮೆಯ ಶಿಲ್ಪಗಳು

## II. ಮಣ್ಣಿನ ಮಾಧ್ಯಮದ ವೃತ್ತಿ ಮೂಲ ಜನಪದ ಶಿಲ್ಪಕಲೆ

### ದೇವತಾ ಶಿಲ್ಪಗಳು

- ಚಾಂಗದೇವರ ಉರುಸಿನಲ್ಲಿನ ಬೀದಿ ಶಿಲ್ಪಗಳು
- ಸೌಂದತ್ತಿ ಎಲ್ಲಮ್ಮನ ಜಾತ್ರೆಯಲ್ಲಿನ ಬೀದಿ ಶಿಲ್ಪಗಳು
  - ಪುರುಷ ದೇವತಾ ಶಿಲ್ಪಗಳು
    - ಗಣಪನ ಶಿಲ್ಪಗಳು
    - ಶಿವನ ಶಿಲ್ಪಗಳು
  - ಸ್ತ್ರೀ ದೇವತಾ ಶಿಲ್ಪಗಳು
    - ಪಾರ್ವತಿ ಶಿಲ್ಪಗಳು
    - ಲಕ್ಷ್ಮೀದೇವಿ ಶಿಲ್ಪಗಳು
  - ಪ್ರಾಣಿ ದೇವತಾ ಶಿಲ್ಪಗಳು
    - ಹುಲಿಯ ಶಿಲ್ಪಗಳು
    - ನಂದಿಯ ಶಿಲ್ಪಗಳು
    - ಹನುಮಂತನ ಶಿಲ್ಪಗಳು

# ೧. ದೇವತಾ ಶಿಲ್ಪಗಳು

ದೇವತಾ ಶಿಲ್ಪಗಳು ವೈವಿಧ್ಯಮಯವಾಗಿದ್ದು ಅವುಗಳನ್ನು ಕೆಳಗಿನಂತೆ ವಿಂಗಡಿಸಬಹುದು. ೧.೧ ಪುರುಷ ದೇವತಾ ಶಿಲ್ಪಗಳು, ೧.೨ ಸ್ತ್ರೀ ದೇವತಾ ಶಿಲ್ಪಗಳು, ೧.೩ ಪ್ರಾಣಿ ದೇವತಾ ಶಿಲ್ಪಗಳು ಎಂದು ಹೀಗೆ ದೇವತಾ ಶಿಲ್ಪಗಳನ್ನು ವಿಂಗಡಣೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

**೧.೧ ಪುರುಷ ದೇವತಾ ಶಿಲ್ಪಗಳು :** ನಮ್ಮ ಜನಪದರಿಗೆ ಸೂರ್ಯ, ಚಂದ್ರ, ಅಗ್ನಿ, ಮಳೆ, ಭೂಮಿ, ಆಕಾಶ, ವಾಯು ಏನೆಲ್ಲವೂ ತಮಗೆ ಭಯವನ್ನುಂಟುಮಾಡುವ, ಸಂತೋಷವನ್ನು ಕೊಡುವ, ನಿಸರ್ಗದ ಏನೆಲ್ಲ ಪದಾರ್ಥಗಳೂ ದೇವರುಗಳಾಗಿವೆ. ಅವುಗಳಲ್ಲಿ ಕೆಲವಕ್ಕೆ ಮನುಷ್ಯನ ರೂಪ ನೀಡಿದರೆ, ಕೆಲವೊಮ್ಮೆ ಮಹಾ ಪುರುಷರು, ಸಾಧಕರು ಶಿಲ್ಪರೂಪ ತಳೆದು ದೇವರುಗಳಾಗಿ ಪೂಜಿಸಲ್ಪಡುತ್ತಿದ್ದಾರೆ. ನಿರ್ಧರ್ಶನಕ್ಕಾಗಿ ಅ. ಗಣೇಶನ ಶಿಲ್ಪಗಳು ಆ. ಜೋಕುಮಾರನ ಶಿಲ್ಪಗಳು ಇ. ಗುರ್ಜಿಯ ಶಿಲ್ಪಗಳು ಇವುಗಳನ್ನು ನೋಡಬಹುದು.

## ಅ. ಗಣೇಶನ ಶಿಲ್ಪಗಳು

ಗಣೇಶನು ಗ್ರಾಮೀಣ ಪ್ರದೇಶಗಳಲ್ಲಿ ಬೆನಕನೆಂದೇ ಪ್ರಸಿದ್ಧನಾಗಿದ್ದಾನೆ. ಈತನು ಬೆನಕ, ಏಕದಂತ, ಲಂಬೋಧರ, ವಿಘ್ನನಿವಾರಕ, ಮೂಶಿಕವಾಹನ ಮುಂತಾಗಿ ಅನೇಕ ಹೆಸರುಗಳಿಂದ ಕರೆಯಲ್ಪಡುತ್ತಾನೆ. ಶ್ರಾವಣ ಮಾಸದ ನಂತರ ಭಾದ್ರಪದ ಮಾಸದಲ್ಲಿ ಬರುವ ಒಂದು ದೊಡ್ಡ ಜನಪದ ಸಂಪ್ರದಾಯ ಅಥವಾ ಆಚರಣೆಯೆಂದರೆ ಗಣೇಶ ಶಿಲ್ಪದ ಆಚರಣೆಯಾಗಿದೆ. ಈ ಸಂಪ್ರದಾಯದ ಆಚರಣೆ ಜನಪದಕ್ಕೆ ಮಾತ್ರ ಸೀಮಿತವಾಗದೇ ಇಂದು ಶಿಷ್ಟ ಸಂಸ್ಕೃತಿಗೂ ಹರಡಿ ನಿಂತಿದೆ.[೩]

**ರಚನೆ :** ಗಣೇಶನ ಶಿಲ್ಪದ ರಚನೆಯನ್ನು ಮೊದಮೊದಲು ಹಳ್ಳಿಗಳಲ್ಲಿ ಸಗಣಿಯಿಂದ ಮಾಡುತ್ತಿದ್ದುದಾಗಿ ತಿಳಿದು ಬರುತ್ತದೆ.[೪] ಈ ಶಿಲ್ಪದ ಆಚರಣೆ ಜನಪ್ರೀಯವಾದಂತೆ ಹಾಗೂ ಮನೋರಂಜನಾತ್ಮಕವಾದಂತೆ ಕ್ರಮೇಣ ಸಗಣಿಯ ಬದಲಾಗಿ ಮಣ್ಣಿನ ಬಳಕೆ ರೂಢಿಗೆ ಬಂದಿದೆ. ಮಣ್ಣು, ಪ್ಲಾಸ್ಟರ್ ಮುಂತಾದ ಮಾಧ್ಯಮಗಳಿಂದಲೂ ಗಣೇಶನ ಶಿಲ್ಪವನ್ನು ರಚಿಸಿ ಆಚರಿಸಲಾಗುತ್ತಿದೆ. ಇಂದು ಕರ್ನಾಟಕದಾದ್ಯಂತ ಆಚರಿಸಲಾಗುತ್ತಿರುವ ಈ ಸಂಪ್ರದಾಯ ಮೂಲತಃ ಮಹಾರಾಷ್ಟ್ರದಿಂದ ಬಂದುದೆಂದು ಹೇಳಲಾಗುತ್ತದೆ.

ಹಬ್ಬಕ್ಕೆ ಪೂರ್ವದಲ್ಲಿಯೇ ಎರಡು-ಮೂರು ತಿಂಗಳು ಮೊದಲು ಮಣ್ಣನ್ನು ತಂದು ಸಂಗ್ರಹಿಸಿ, ನೆನೆ ಹಾಕಿ ಜಿಗುಟುಮಾಡಿ, ಹಬ್ಬದ ಪೂರ್ವದಲ್ಲಿ ಬೆನಕನನ್ನು ರಚಿಸುತ್ತಾರೆ. ಪತ್ತಾರರು, ಜಿನಗಾರರು, ಬಡಿಗರು, ಕುಂಬಾರರು ಮೊದಲು ಈ ಶಿಲ್ಪವನ್ನು ಮಾಡಿ ಊರಲ್ಲಿ ಮನೆ ಮನೆಗಳಿಗೆ ಕೊಟ್ಟು

---

೩. ಡಾ. ಎಸ್.ಸಿ. ಪಾಟೀಲ : ಆಚರಣೆಯಲ್ಲಿ ಜನಪದ ಶಿಲ್ಪಗಳು, ಪುಟ - ೧೫

೪. .... ಅದೇ .....

[illegible]

ಪ್ರತಿಯಾಗಿ ಜ್ಯಾಜವನ್ನು ಪಡೆದು ಬರುತ್ತಿದ್ದರು. ಈಗ ಯಾರು ಬೇಕಾದರೂ ಈ ಶಿಲ್ಪ ರಚಿಸಬಹುದು. ಮತ್ತು ಹಣ ಕೊಟ್ಟು ಕೊಳ್ಳಬಹುದು. ಹೀಗೆ ಈ ಸಂಪ್ರದಾಯ ಶಿಷ್ಟ ಸಂಸ್ಕೃತಿಗೆ ತಿರುಗಿದೆ. ಮೊದಲು ಜನಪದರ ಗಣೇಶ ಜನಪದ ಲಕ್ಷಣಗಳನ್ನು ಹೊತ್ತು ಬರುತ್ತಿದ್ದರೆ, ಇಂದು ಶಾಸ್ತ್ರೋಕ್ತ ಪ್ರಮಾಣಬದ್ಧತೆಗೆ ಒತ್ತು ನೀಡಿ ಶಿಲ್ಪ ರಚಿಸಲಾಗುತ್ತಿದೆ. ಪೌರಾಣಿಕ ಶಕ್ತಿ ದೇವತೆಯಾದ ಗಣೇಶನ ಶಿಲ್ಪವನ್ನು ರಚಿಸಿ ಆಚರಿಸುವ ದಿನವನ್ನು ಗಣೇಶ ಚತುರ್ಥಿ ಎಂದೇ ಕರೆಯಲಾಗುತ್ತದೆ.

ಸುಮಾರು ಐದು ದಿನಗಳ ಕಾಲ ಗಣೇಶ ಶಿಲ್ಪವನ್ನು ಕುಳ್ಳಿರಿಸಿ, ಆಚರಿಸಿ ನಂತರ ವಿಸರ್ಜಿಸಲಾಗುತ್ತದೆ. ಈಚೆಗೆ ಪಟ್ಟಣಗಳಲ್ಲಿ ಒಂಭತ್ತು-ಹನ್ನೊಂದು ಇಲ್ಲವೆ ಇಪ್ಪೊಂದನೇ ದಿವಸಕ್ಕೆ ವಿಜೃಂಭಣೆಯಿಂದ ಗಣೇಶನನ್ನು ವಿಸರ್ಜನೆ ಮಾಡುವ ಕಾರ್ಯ ನಡೆಯುತ್ತಿದೆ. ಗಣೇಶನ ವಿಗ್ರಹಗಳನ್ನು ಚಿಕ್ಕ ದೊಡ್ಡ ಅನೇಕ ರೀತಿಯ ಆಕಾರಗಳಲ್ಲಿ ಸುಂದರವಾಗಿ ರಚಿಸಿ ಅವುಗಳಿಗೆ ಬಣ್ಣ ಬಳೆದಿರುವದನ್ನು ಕಾಣಬಹುದು. ಹಿಂದೆ ಗಣೇಶನ ಶಿಲ್ಪಕ್ಕೆ ಬಣ್ಣ ಬಳೆಯುತ್ತಿರಲಿಲ್ಲವೆಂಬುದು ಗಮನಾರ್ಹ. ಗಣೇಶನ ಪೂಜೆ ಭಾದ್ರಪದ ಮಾಸದಲ್ಲಿ ಬಂದರೂ ಮಣ್ಣಿನ ಪೂಜೆಯೆಂದು ಪರಿಗಣಿಸುವದಿಲ್ಲ. ಹೀಗಿದ್ದರೂ ಗಣೇಶ ಸರ್ವ ವಿಘ್ನಗಳ ನಿವಾರಕನೆಂದು ಭಾವಿಸುವರು. ಬಾದ್ರಪದ ಶುದ್ಧ ಚತುರ್ಥಿಗೆ ಬಂದ ಗಣೇಶನ ಶಿಲ್ಪ ಐದು ದಿನ ಪೂಜೆಗೊಂಡು ಅಷ್ಟಮಿಯ ದಿವಸ ವಿಸರ್ಜಿಸಲ್ಪಡುತ್ತದೆ. [೫]

ಜನಪದರಲ್ಲಿ ಗಣೇಶನ ಮಣ್ಣಿನ ಮೂರ್ತಿ ಶಿಲ್ಪದ ರಚನೆ ತುಂಬಾ ಸರಳವಾಗಿರುತ್ತದೆ. ಯಾವುದೇ ಆಡಂಬರವೆನಿಸುವ ವರ್ಣಗಾರಿಕೆ, ವಿಪರೀತ ಅಲಂಕಾರಗಳಿಲ್ಲದೆ ಪೂಜೆಗೊಳ್ಳುವ ಶಿಲ್ಪವಾಗಿದೆ.

ಕರಕಿ ಪತ್ರೀ ಕಣಗಿಲ ಹೂವು ಗಣನಾಥಾ
ಎಳ್ಳ ಹೊಲದಾಗ ಡೊಳ್ಳು ಹೊಟ್ಟೆಯ ಬೆನಕ
ಎಳ್ಳಿನುಂಡಿಯ ಪನಿವಾರ । ತಂದೀನಿ
ಎಳ್ಳಷ್ಟು ಮತಿಯ ಕೊಡು ನನಗೆ ॥ [೬]

ಎಂಬಂತಹಾ ಜನಪದರ ಹಾಡುಗಳಲ್ಲಿ ಬೆನಕ ಅಥವಾ ಗಣೇಶನ ನಿಸರ್ಗ ಸಹಜವಾದ ಆಚರಣೆ ಮತ್ತು ಆತನ ಆಕಾರ ಎರಡೂ ಇರುವದನ್ನು ಕಾಣಬಹುದು. ದೊಡ್ಡ ಹೊಟ್ಟೆ, ಉದ್ದವಾದ ಸೊಂಡಿಲಿನ ಆನೆಯ ಮುಖ, ಗಣೇಶನ ಶಿಲ್ಪದ ಹತ್ತಿರ ಆತನ ವಾಹನವಾದ ಇಲಿಯೂ ಅವಶ್ಯವಾಗಿ ರಚನೆಗೊಂಡಿರುವದು ವೈಶಿಷ್ಟ್ಯ. ಹಾಗೆಯೇ ಹೊಟ್ಟೆಗೆ ಸುತ್ತಿದ ಹಾವು ಭಕ್ಷ್ಯ ಭೋಜ್ಯಗಳು ಇವೆಲ್ಲ ಗಣೇಶನ ಪೌರಾಣಿಕ ಕಥೆಯ ಹಿನ್ನೆಲೆಯಲ್ಲಿ ರಚನೆಗೊಂಡಿರುತ್ತವೆ. ಹೀಗೆ ಶಿಲ್ಪವನ್ನು ರಚಿಸುವದು ಹಿಂದಿನಿಂದಲೂ ನಡೆದು ಬಂದ ಸಂಪ್ರದಾಯವಾಗಿದೆ.

ಧಾರವಾಡ, ಹುಬ್ಬಳ್ಳಿ, ಬೆಳಗಾವಿ, ಬಿಜಾಪುರದಂತಹ ಮಹಾನಗರಗಳಲ್ಲಿ ಇಂದು ಗಣೇಶನ

---

೫. ಡಾ. ಬಿ.ಎಸ್. ಗದ್ದಿಗಿಮಠ : ಕನ್ನಡ ಜಾನಪದ ಗೀತಗಳು, ಪುಟ - ೧೫೮
೬. ಡಾ. ಎಸ್.ಸಿ. ಪಾಟೀಲ : ಆಚರಣೆಯಲ್ಲಿ ಜನಪದ ಶಿಲ್ಪಗಳು, ಪುಟ - ೧೬

[illegible]

ಶಿಲ್ಪವನ್ನು ವರ್ಷಕೊಮ್ಮೆ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ನಲವತ್ತು-ಐವತ್ತು ಅಡಿಗಳ ಎತ್ತರದವರೆಗೂ ಗಣೇಶನ ಶಿಲ್ಪವನ್ನು ರಚಿಸಿ ಆಚರಿಸುವದನ್ನು ಕಾಣಬಹುದಾಗಿದೆಯಲ್ಲದೆ, ಈತನ ಶಿಲ್ಪವನ್ನು ತೆಂಗಿನಕಾಯಿ, ಪಾನೀಯ ಬಾಟಲಿಗಳು, ನಾಣ್ಯಗಳು ಇತ್ಯಾದಿ ಮಾಧ್ಯಮಗಳನ್ನು ಬಳಸಿಯೂ ರಚಿಸಲಾಗುತ್ತಿದೆ. ಅಲ್ಲದೆ, ಗಾಂಧಿ, ವಿವೇಕಾನಂದರಂತಹ ಮಹಾಪುರುಷರಿಗೆ ಹೋಲಿಸಿ, ರಚಿಸುವದನ್ನು ಕಾಣಬಹುದು. ಮಾತ್ರವಲ್ಲದೆ ಕಾರ್ಗಿಲ್ ಯೋಧನಾಗಿ, ರೈತನಾಗಿಯೂ ಗಣೇಶ ಸೃಷ್ಟಿಗೊಂಡಿದ್ದಾನೆ.

ಮೂಲದಲ್ಲಿ ಸಗಣಿಯಿಂದ ರಚನೆಗೊಂಡ ಗಣೇಶನ ಶಿಲ್ಪಗಳು ಕಾಲಾನಂತರದಲ್ಲಿ ಕೆಸರಿನಿಂದ ರಚನೆಗೊಂಡು ಆಚರಿಸಲ್ಪಡುತ್ತಲೇ ಇತರ ಹಲವು ಮಾಧ್ಯಮಗಳನ್ನೂ ಬಳಸಿಕೊಂಡು ರಚನೆಗೊಳ್ಳುತ್ತಿರುವವು. ಈ ರೀತಿಯಲ್ಲಿ ಗಣೇಶನ ಶಿಲ್ಪಗಳ ಹೊಸ ಬಗೆಯ ದೃಷ್ಯಾನುಭವವನ್ನು ವರ್ಷ ವರ್ಷವೂ ಅನುಭವಿಸಿ, ಆನಂದ ಪಡುವ ಜನಪದರಿಗೆ ಗಣೇಶ ಕೇವಲ ಒಬ್ಬ ದೇವರು ಮಾತ್ರವೇ ಆಗಿ ಮುಖ್ಯವಾಗದೇ ಕಲಾತ್ಮಕವಾದ ವಾತಾವರಣವೊಂದರ ಕೇಂದ್ರವಾಗಿ ಸಾವಿರಾರು ನೋಡುಗರನ್ನು ಆಕರ್ಶಿಸುವ ವಿಶಿಷ್ಟ ಶಿಲ್ಪವಾಗಿದೆ. ಗಣೇಶನ ಶಿಲ್ಪ ಇಂದಿಗೂ ಪ್ರಸ್ತುತವಾಗಿದೆ.

## ಆ. ಜೋಕುಮಾರನ ಶಿಲ್ಪಗಳು

ಕೋರೆ ಮೀಸೆ, ಗಡುತರವಾದ ಹುಬ್ಬು, ದಪ್ಪ ತುಟಿಗಳು, ಉದ್ದ ಮೂಗು, ಸಾಮಾನ್ಯ ದೇಹಾಕೃತಿಯಲ್ಲಿ ಎದ್ದು ಕಾಣುವ ಪುರುಷಾಂಗಗಳಿಂದ ಕೂಡಿದ ಒಂದು ಮಣ್ಣಿನ ಶಿಲ್ಪವೇ ಜೋಕುಮಾರನ ಶಿಲ್ಪ. ಮಧ್ಯ ಹಾಗೂ ಉತ್ತರ ಕರ್ನಾಟಕದಲ್ಲಿ ಜೋಕುಮಾರನ ಆಚರಣೆ ಹೆಚ್ಚು ಪ್ರಚಲಿತವಿದೆ. ಕೆಲ ಪ್ರದೇಶಗಳಲ್ಲಿ ಈ ಶಿಲ್ಪಕ್ಕೆ ಯಾವ ಬಣ್ಣವನ್ನು ಬಳಿಯದೆ, ಹಣೆಯ ಮೇಲೆ ನಾಮವನ್ನು ಮಾತ್ರ ಹಚ್ಚಿ, ಪಟಕಾ ಸುತ್ತಿರುತ್ತಾರೆ. ಇನ್ನು ಕೆಲವೆಡೆ ಹಳದಿ ಬಣ್ಣವನ್ನು ಹಚ್ಚಿರುತ್ತಾರೆ. ಸಗಣಿಯಿಂದ ಸಾರಿಸಿದ ಬುಟ್ಟಿಯೊಂದರಲ್ಲಿ ಕೂರಿಸಿ, ಬೇವಿನ ತಪ್ಪಲನ್ನು ಸುತ್ತಲೂ ಇಡಲಾಗಿರುತ್ತದೆ. ಬಾಯಿ ಹಾಗೂ ಕೆಲವೊಮ್ಮೆ ಪುರುಷಾಂಗಕ್ಕೆ ಬೆಣ್ಣೆ ಸವರಲಾಗಿರುತ್ತದೆ. ಸಾಮಾನ್ಯವಾಗಿ ಕುಂಬಾರರಿಂದ ತಯಾರಾಗಿರುವ ಈ ಶಿಲ್ಪವನ್ನು ಕಬ್ಬಲಿಗರು, ತಳವಾರರು, ಅಂಬಿಗರು ಎಂದು ಪರ್ಯಾಯ ಹೆಸರುಗಳಿಂದ ಕರೆಯಲ್ಪಡುವ ಗಂಗಾಮತಸ್ಥರು ಜೋಕುಮಾರನ ಈ ಶಿಲ್ಪವನ್ನು ಹೊತ್ತು ಊರಲ್ಲಿ ಏಳು ದಿನಗಳ ಕಾಲ ಮನೆ ಮನೆಗೆ ತಿರುಗಾಡುತ್ತಾರೆ. ಹೆಗಸರು ಮಾತ್ರ ಈ ಶಿಲ್ಪವನ್ನು ಹೊರುತ್ತಾರೆ. ಪ್ರತಿ ಮನೆಯಲ್ಲಿ ಜೋಕುಮಾರ ಕುಳಿತಿರುವ ಬುಟ್ಟಿಯನ್ನು ಇಟ್ಟು ಹಾಡು ಹೇಳುತ್ತಾರೆ. ಮನೆಯವರು ಜೋಳ, ಕೊಬ್ಬರಿ, ಮುಂತಾದವುಗಳನ್ನಲ್ಲದೆ, ಕುಂಚಿಗೆ, ಕುಲಾಯಿ, ಅರಿವೆಗಳನ್ನು ಕೊಟ್ಟು, ನೈವೇದ್ಯವನ್ನು ಅರ್ಪಿಸುವರು. ಬೆಣ್ಣೆಯನ್ನು ಕೊಡುವರು. ಹೀಗೆ ಏಳು ದಿನಗಳ ಆಚರಣೆಯ ನಂತರ ಆತನ ಅವಸಾನವಾಗುತ್ತದೆ. ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದಿರುವ ಈ ಆಚರಣೆಯಲ್ಲಿ ಪ್ರಾದೇಶಿಕವಾಗಿ ಕೆಲವು ಭಿನ್ನತೆಗಳೂ ಇವೆ.[೭]

೭. ಡಾ.ಎಸ್. ಎಂ. ವೃಷಭೇಂದ್ರಸ್ವಾಮಿ (ಸಂ.) : ಜಾನಪದ ಸಾಹಿತ್ಯ ದರ್ಶನ, ಭಾಗ - ೧೦, ಪುಟ- ೧೦೦



ಜೋಕುಮಾರನ ಶಿಲ್ಪ ( ಬಾದಾಮಿ)



ಜೋಕುಮಾರನ ಶಿಲ್ಪ ( ಬೀದರ ಜಿಲ್ಲೆ)

ಜೋಕುಮಾರನ ಶಿಲ್ಪವನ್ನು ನಿರ್ಮಿಸಿ ಆಚರಿಸುವ ಹಬ್ಬಕ್ಕೆ ಅನಂತನ ಹುಣ್ಣಿಮೆ, ಜೋಕುಮಾರನ ಹುಣ್ಣಿಮೆ ಅಥವಾ ಹೊಲೇರ ಹುಣ್ಣಿಮೆ ಎಂತಲೂ ಕರೆಯುವರು. ಇದನ್ನು ಭಾದ್ರಪದ ಶುದ್ಧ ನವಮಿಯಿಂದ ಪೌರ್ಣಿಮೆಯವರೆಗೆ ಅಂದರೆ ಏಳು ದಿನಗಳವರೆಗೆ ಆಚರಿಸುವರು. ಇದಕ್ಕೆ ಭಾಗವತ ಪುರಾಣ ಸಪ್ತಾಹ ಎಂದೂ ಕರೆಯುವುದುಂಟು.

ಪುರಾಣ ಕಥೆಗಳ ಪ್ರಕಾರ ಜೋಕ ಮುನಿಯ ಮಗನು ಜೋಕುಮಾರ. ಅಂದರೆ ಉಡಾಳ, ಘಟಿಂಗ ಎಂಬ ಅರ್ಥವನ್ನು ಕೊಡುತ್ತದೆ. ಕ್ರಿ.ಶ. ೧೦೪೯ರ ಶ್ರೀಧರಾಚಾರ್ಯರ ಜಾತಕ ತಿಲಕದಲ್ಲಿ ಜೋಕುಮಾರನ ಉಲ್ಲೇಖವಿರುವದರಿಂದ ಸಾವಿರ ವರ್ಷಗಳಿಂದಲೇ ಜೋಕುಮಾರನನ್ನು ಆಚರಿಸುವ ಸಂಪ್ರದಾಯವಿತ್ತೆಂದು ಹೇಳಬಹುದು. ಹಾಗೇ ಕನ್ನಡ ಸಾಹಿತ್ಯದಲ್ಲಿ ಜೋಕುಮಾರನನ್ನು ಉಲ್ಲೇಖಿಸುವ - ಬಂಧುವರ್ಮನ ಜೀವನ ಸಂಬೋಧನೆ ಕ್ರಿ.ಶ. ೧೧೫೦, ನೇಮಿಚಂದ್ರನ ನೇಮಿನಾಥ ಪುರಾಣ ಕ್ರಿ.ಶ. ೧೧೭೦, ಬ್ರಹ್ಮಶಿವನ ಸಮಯ ಪರೀಕ್ಷೆ ಕ್ರಿ.ಶ. ೧೧೮೦, ಬಸವಣ್ಣನವರ ವಚನಗಳು ಕ್ರಿ.ಶ. ೧೧೬೦, ಪಾರ್ಶ್ವ ಕವಿಯ ಪಾರ್ಶ್ವನಾಥ ಪುರಾಣ ಕ್ರಿ.ಶ.೧೨೨೦, ವಿಜಯ ದಾಸರ ಸುಳಾದಿಗಳು ಕ್ರಿ.ಶ. ೧೭೦೦, ನಾರಸಿಂಹನ ಅನುಭವ ಶಿಖಾಮಣಿ ಕ್ರಿ.ಶ. ೧೭೬೮ ಮುಂತಾದ ಕೃತಿಗಳಲ್ಲಿ ಉಲ್ಲೇಖಗೊಂಡಂತೆ ಜೋಕುಮಾರನು ಒಬ್ಬ ದೇವತೆಯ ಮಗನು. ಅಂದರೆ ಮಾರಿಯ ಮಗನು. ಅಲ್ಪಾಯುಷಿಯಾಗಿ, ಏಳು ದಿನಗಳಲ್ಲಿ ಪುಂಡಾಟಿಕೆ ಮಾಡುತ್ತ ಮೆರೆದು ಅಸು ನೀಗಿದ ಒಬ್ಬ ಜಾನಪದ ದೇವತೆಯಾಗಿದ್ದಾನೆ. ಅವನ ತಾಯಿಯು ದೇವತಾ ಸ್ತ್ರೀ ಆಗಿದ್ದರೂ ಸಹ ಅವನನ್ನು ಕಾಪಾಡದೇ ಹೋದಳೆಂದು, ಬಳಿಕ ಈತ ಕ್ಷುದ್ರ ದೇವತೆಗಳಲ್ಲಿ ಒಬ್ಬನಾದನೆಂದೂ ತಿಳಿಯಲಾಗಿದೆ.[೮]

**ಜೋಕುಮಾರನ ಶಿಲ್ಪದ ರಚನೆ :** ಹದ ಮಾಡಿದ ಮಣ್ಣನ್ನೇ ಈ ಶಿಲ್ಪದ ರಚನೆಗೆ ಬಳಸಲಾಗುತ್ತದೆ. ಸಾಮಾನ್ಯವಾಗಿ ಜಿನಗಾರರು, ಕುಂಬಾರರು ಈ ಶಿಲ್ಪವನ್ನು ತಯಾರಿಸುತ್ತಾರೆ. ರೂಪದಲ್ಲಿ ಅರ್ಜುನನಂತೆ, ಸುಂದರನೂ ಅದಕ್ಕೆ ತಕ್ಕಂತೆ ಹೊಳೆವ ದೊಡ್ಡ ಕಣ್ಣುಗಳುಳ್ಳವನೂ, ಹಳದಿ ವರ್ಣದವನೂ, ಅಗಲ ಮುಖದವನೂ ಆಗಿರುವನು. ಹಣೆಯಲ್ಲಿ ವಿಭೂತಿ, ಕುಂಕುಮ, ತಲೆಯ ಮೇಲೆ ಕಿರೀಟ ಅಥವಾ ರುಮಾಲು, ದೊಡ್ಡದಾದ ಕಲ್ಲಿ ಮೀಸೆ, ದೊಡ್ಡ ಬಾಯಿ, ದೊಡ್ಡ ಪುರುಷಾಂಗ, ಕವಡೆಗಳನ್ನು ಹಚ್ಚಿದ ಕಣ್ಣುಗಳನ್ನು ಮಾಡಿ ಬಾಯಿಗೆ ಬೆಣ್ಣೆ ಸವರಿ ಆಕರ್ಷಕವಾಗಿ ಕಾಣುವಂತೆ ಮಾಡಲಾಗಿರುತ್ತದೆ. ಸಗಣಿಯನ್ನು ಸಾರಿಸಿದ ಒಂದು ಬುಟ್ಟಿಯಲ್ಲಿ ಬೇವಿನ ತೊಪ್ಪಲು ಹಾಕಿ ಅದರ ನಡುವೆ ಕುಳ್ಳಿರಿಸಲಾಗಿರುತ್ತದೆ. ಅದರಲ್ಲಿ ಪತ್ರಿ, ಹೂಗಳನ್ನು ಇಟ್ಟು, ಎಣ್ಣೆ ಹಾಕಲು ಒಂದು ಮಣ್ಣಿನ ಮಡಕೆ ಇಡಲಾಗಿರುತ್ತದೆ. ಈ ರೀತಿಯಲ್ಲಿ ಜೋಕುಮಾರನ ಶಿಲ್ಪದ ರಚನೆ ಉತ್ತರ ಕರ್ನಾಟಕದಲ್ಲಿ ಸಾಮಾನ್ಯವಾಗಿ ಅಸ್ತಿತ್ವದಲ್ಲಿದ್ದರೂ ಪ್ರಾದೇಶಿಕವಾಗಿ ಕೆಲವು ವ್ಯತ್ಯಾಸಗಳೂ ಕಂಡುಬರುತ್ತವೆ. ಬೀದರ ಜಿಲ್ಲೆಯ ಕೆಲವೆಡೆ

---

೮. ಡಾ.ಎಸ್. ಎಂ. ವೃಷಭೇಂದ್ರಸ್ವಾಮಿ (ಸಂ.) : ಜಾನಪದ ಸಾಹಿತ್ಯ ದರ್ಶನ, ಭಾಗ - ೧೦, ಪುಟ- ೧೦೦

ಜೋಕುಮಾರನ ಮಣ್ಣಿನ ಶಿಲ್ಪದ ರಚನೆ ತೀರ ಸರಳವಾಗಿರುತ್ತದೆ. ಹದವಾದ ಮಣ್ಣನ್ನು ತ್ರಿಕೋನಾಕಾರದಲ್ಲಿ ಗೋಪುರದಂತೆ ಮಾಡಿ ಅದಕ್ಕೆ ಉದ್ದವಾದ ಮೂಗು, ತೆರೆದ ಬಾಯಿಯನ್ನು ರಚಿಸಿರುತ್ತಾರೆ. ಮೇಲ್ಗಡೆ ಮೂಗಿನ ಎರಡೂ ಬದಿಗೆ ಕವಡೆಗಳನ್ನು ಅಂಟಿಸಿ ಕಣ್ಣುಗಳನ್ನಾಗಿ ಮಾಡಿರುತ್ತಾರೆ. ತಲೆಯ ಮೇಲೆ ಚಪ್ಪಟೆಯಾದ ದುಂಡು ಗಾಲಿಯಂತೆ ಮಾಡಿ ಛತ್ರಿಯ ಹಾಗೆ ಅಂಟಿಸಲಾಗಿರುತ್ತದೆ. ಈ ಶಿಲ್ಪದ ತಲೆಗೆ ಕುಂಚಿಗೆಯನ್ನು ಹೊದಿಸಿ, ಹೂಗಳು, ಕುಂಕುಮ, ಅರಿಷಿಣಗಳಿಂದ ಒಂದು ಬಿದಿರಿನ ಬುಟ್ಟಿಯಲ್ಲಿ ಬೇವಿನ ತೊಪ್ಪಲನ್ನು ಇಟ್ಟು ಪ್ರತಿಷ್ಠಾಪಿಸಲಾಗಿರುತ್ತದೆ. ಈ ಶಿಲ್ಪಕ್ಕೆ ಮೀಸೆಯಾಗಲೀ, ಪುರುಷಾಂಗವಾಗಲೀ, ಕೈಕಾಲುಗಳಾಗಲಿ ರಚನೆಯಾಗಿರುವದಿಲ್ಲ. ಈ ಶಿಲ್ಪ ತೀರ ಸರಳವಾಗಿದ್ದು ನಮ್ಮ ಜನಪದರ ಮುಗ್ಧತೆಯ ಸಂಕೇತವಾಗಿಯೂ ತೋರುತ್ತದೆ.

ಹೀಗೆ ಪ್ರಾದೇಶಿಕವಾಗಿ ಜೋಕುಮಾರನ ಶಿಲ್ಪದ ರಚನೆಯಲ್ಲಿ ವ್ಯತ್ಯಾಸವಿದ್ದರೂ ಈ ಶಿಲ್ಪ ಕೆಸರಿನಲ್ಲೇ ಸಿದ್ಧಗೊಂಡಿರುತ್ತದೆ. ಈ ಶಿಲ್ಪವನ್ನು ಹೊತ್ತು ಊರಲ್ಲಿನ ಪ್ರತಿಯೊಂದು ಮನೆಗೆ ಹೋಗುತ್ತಾರೆ. ಮೊದಲಿಗೆ ಊರಿನ ಹಿರಿಯರ ಅಥವಾ ಗೌಡರ ಮನೆಯಲ್ಲಿ ಜೋಕುಮಾರನ ಪೂಜೆ ಮಾಡಲಾಗುತ್ತದೆ. ಅನಂತರ ಊರಲ್ಲಿನ ಇತರರ ಮನೆಗಳಿಗೆ ಹೋಗಿ ಜೋಕುಮಾರನ ಪೂಜೆ ನೆರವೇರಿಸುವರು. ಹೀಗೆ ಜೋಕುಮಾರನನ್ನು ಹೊತ್ತು ತಂದ ಹೆಂಗಸರಿಗೆ ರಾಗಿ, ಜೋಳ, ಮೆಣಸಿನಕಾಯಿ, ಹುಣಸೆಹಣ್ಣು, ರೊಟ್ಟಿ, ಉಪ್ಪು, ಕೊಬ್ಬರಿ ಮುಂತಾದವುಗಳನ್ನು ಕೊಡುವರು. ಹೀಗೆ ಏಳು ದಿನಗಳ ಕಾಲ ನಡೆಯುತ್ತದೆ.

**ಜೋಕುಮಾರನ ಶಿಲ್ಪದ ವಿಸರ್ಜನೆ :** ಏಳು ದಿನಗಳ ಕಾಲ ಮೆರೆದ ಜೋಕುಮಾರನ ಅಂತ್ಯ ಹುಣ್ಣಿಮೆಯ ದಿವಸ ನಡೆಯುವದು. ಅಂದು ಅಂದರೆ ಏಳನೆಯ ದಿನದ ರಾತ್ರಿ ಹೊಲಗೇರಿಗೆ ಜೋಕುಮಾರನ ಶಿಲ್ಪವನ್ನು ಕೊಂಡೊಯ್ದು ಒಂದು ಪ್ರಶಸ್ತ ಸ್ಥಳದಲ್ಲಿರಿಸಿ ಸುತ್ತಲೂ ಬಾರಿಯ ಮುಳ್ಳನ್ನು ಇಡುವರು. ಹೆಂಗಸರು ಹಾಡನ್ನು ಹಾಡುತ್ತ ಸುತ್ತು ಹಾಕುವರು. ಹೀಗೆ ಸುತ್ತುವಾಗ ಬಾರಿಯ ಮುಳ್ಳು ಅವರ ಸೆರಗಿಗೆ ತಾಗಲು ಜೋಕುಮಾರನೇ ತಮ್ಮ ಹೆಂಗಸರ ಸೆರಗು ಹಿಡಿದು ಎಳೆದನೆಂದು ಗಂಡಸರು ಒನಕೆಯಿಂದ ಅವನ ತಲೆ ಒಡೆಯುವರು. ನಂತರ ಅಗಸರು ಬಟ್ಟೆ ಒಗೆಯುವ ಪಡಿಯ ಮೇಲೆ ಅವನನ್ನು ಒಗೆದು ಬರುವರು. ಈ ಅವಸಾನ ಅಥವಾ ವಿಸರ್ಜನೆಯ ಆಚರಣೆಯಲ್ಲಿ ಪ್ರಾದೇಶಿಕ ಭಿನ್ನತೆಗಳೂ ಇವೆ. ಕೆಲವು ಕಡೆ ಆರು ದಿನಗಳ ಕಾಲ ಬೇರೆ, ಬೇರೆ ಓಣಿ ಹಾಗೂ ಬೇರೆ, ಬೇರೆ ಮನೆಗಳಿಗೆ ಜೋಕುಮಾರನನ್ನು ಹೊತ್ತು ಅಡ್ಡಾಡಿ, ಹಾಡುತ್ತ ಪೂಜಿಸಿ ಏಳನೆಯ ದಿನಕ್ಕೆ ಅವನ ದಿನ ಮಾಡಿ ಹಬ್ಬ ಆಚರಿಸುತ್ತಾರೆ. ಆ ದಿನವೇ ರಾತ್ರಿ ಹೊಲೆಯರ ಓಣಿಯಲ್ಲಿ ಇಟ್ಟು ಬರುತ್ತಾರೆ. ನಂತರ ಹೊಲೆಯರು ಪೂಜೆ ಮಾಡಿ ಜೋಕುಮಾರನ ಶಿಲ್ಪವನ್ನು ಎತ್ತಿ ಮಳೆ ಬೆಳೆಯ ಭವಿಷ್ಯ ಕೇಳುವರು. ಹಾಗೂ ಒನಕೆಯಿಂದ ಕುತ್ತಿಗೆಗೆ ಹೊಡೆದು ಕೊಲ್ಲುವರು. ರುಂಡವು ಅಂಗಾತ ಬಿದ್ದರೆ ದೇಶಕ್ಕೆ ಸುಖ, ಬೋರಲು ಬಿದ್ದರೆ ದುಃಖವೆಂಬುದು ಜನರ ಭಾವನೆ. ನಂತರ ಅದನ್ನು ಹಳ್ಳಕ್ಕೆ ಒಯ್ದು ಚೆಲ್ಲುವರು. ಅಲ್ಲಿ ಸತ್ತು ಮೂರು ದಿನಗಳ ವರೆಗೆ

ಜೋಕುಮಾರನು ನರಳುವದರಿಂದ ಅಗಸರು ಮೂರು ದಿನ ಅರಿವೆ ಒಗೆಯಲು ಹೋಗುವದಿಲ್ಲ.

ಬಳ್ಳಾರಿ ಜಿಲ್ಲೆಯ, ಸೊಂಡೂರು, ಕುಷ್ಟಗಿ, ಚೋರನೂರ, ಯಶವಂತನಗರ ಮುಂತಾದ ಊರುಗಳಲ್ಲಿ ಜೋಕುಮಾರನನ್ನು ರಚಿಸಿ, ಏಳೂರು ತಿರುಗುವ ಸಂಪ್ರದಾಯವಿದೆ. ಇಲ್ಲಿ ಕಪ್ಪು ಮಣ್ಣಿನಿಂದಲೇ ಜೋಕುಮಾರನ ಶಿಲ್ಪವನ್ನು ರಚಿಸುತ್ತಾರೆ[೯] ಎಂಬುದು ವಿಶೇಷವಾಗಿದೆ. ಬೆಳಗಾವಿ ಜಿಲ್ಲೆಯ ಅನೇಕ ಊರುಗಳಲ್ಲಿ ಜೋಕುಮಾರನ ಶಿಲ್ಪವನ್ನು ಕಟ್ಟಿಗೆಯಲ್ಲಿ ಮಾಡಿ ಆಚರಿಸುವ ಸಂಪ್ರದಾಯವಿರುವುದು ಕಂಡು ಬರುತ್ತದೆ.

## ಜೋಕುಮಾರನ ಕುರಿತ ಕಥೆಗಳು

**ಕಥೆ - ೧.** ಸಪ್ತರ್ಷಿಗಳಿಗೆ ಸೇವಕನಾಗಿದ್ದ ಜೋಕ ಎಂಬ ವ್ಯಕ್ತಿಯು ಅವರ ಒಪ್ಪಿಗೆ ಪಡೆದು ಭೂಲೋಕಕ್ಕೆ ಬರುತ್ತಾನೆ. ಇಲ್ಲಿ ಮಾರಿ ದೇವತೆಯಲ್ಲಿ ಪ್ರೇಮಾಂಕುರವಾಗಿ ಅವಳನ್ನು ಕೂಡುತ್ತಾನೆ. ನಂತರ ತನ್ನ ಗುರುಗಳಲ್ಲಿಗೆ ಹೋಗಿ ಕ್ಷಮೆ ಕೇಳುತ್ತಾನೆ.

ಇತ್ತ ಮಾರಿಯು, ಜೋಕಋಷಿಯಿಂದ ಬಸುರಾಗಿ ಗಂಡುಮಗುವನ್ನು ಹೆರುತ್ತಾಳೆ. ಹುಟ್ಟಿದ ಕೂಡಲೇ ಆ ಮಗು ಮಾತನಾಡತೊಡಗುತ್ತದೆ. ತಂದೆ ಯಾರೆಂದು ಕೇಳುತ್ತದೆ. ಆತ ಎಲ್ಲಿ ಹೋದನೋ ತಿಳಿಯದು ಎಂದು ತಾಯಿ ಹೇಳುತ್ತಾಳೆ.

ಇವನು ಹುಟ್ಟಿದ ದಿನವು ಭಾದ್ರಪದ ಶುದ್ಧ ಅಷ್ಟಮಿ. ಅಂದು ಈತ ತಂದೆಯನ್ನು ಹುಡುಕಿ ಹೋಗುತ್ತಿರುವಾಗ ಗಂಗಾಮತಸ್ಥರು ಗಂಗೆಯನ್ನು ಪೂಜಿಸುತ್ತಲಿರುತ್ತಾರೆ. ಇದೇ ಸಮಯದಲ್ಲಿ ಅಗಸರು ತಮ್ಮ ಕತ್ತೆಗಳನ್ನು ಕಾಯಲು ಒಬ್ಬ ಸುಂದರ ತರುಣಿ ಸುಕರ್ಣಿಕ ಎಂಬುವವಳನ್ನು ನೇಮಿಸಿರುತ್ತಾರೆ. ಕುದುರೆಯ ಮೇಲೆ ಹೊರಟಿದ್ದ ಈ ಜೋಕುಮಾರ ಅವಳನ್ನು ಪೀಡಿಸುತ್ತಾನೆ. ಅವಳು ಕೂಗಿಕೊಳ್ಳುತ್ತಾಳೆ. ಆಗ ಅಲ್ಲಿದ್ದ ಮಡಿವಾಳರೆಲ್ಲ ಓಡಿ ಬಂದು ಈತನನ್ನು ಬಡಿದು ಕೊಂದು, ಕಲ್ಲಿನ ಕೆಳಗೆ ಅವನ ಹೆಣವನ್ನಿಟ್ಟು ಹೋಗುತ್ತಾರೆ. ಮಾರಿಯ ಸಂಪರ್ಕದಿಂದ ಜೋಕುಮಾರನಿಗೆ ಸಂಭವಿಸಿದ ಶಾಪವು ಅಲ್ಲಿಗೆ ಮುಗಿಯುತ್ತದೆ. ಜೋಕ ಋಷಿ ವಂಶದಿಂದ ಹುಟ್ಟಿದ ಈ ಬಾಲಕನಿಗೆ ಜೋಕುಮಾರನೆಂದು ಹೆಸರು ಬಂದಿತು.[೧೦]

**ಕಥೆ - ೨.** ಜೋಕಋಷಿ ಮತ್ತು ಎಳೆ ಗೌರಿ ಎಂಬ ದಂಪತಿಗಳಿಗೆ ಶಿವನ ಅನುಗ್ರಹದಂತೆ ಗಂಡುಮಗು ಜನಿಸಿತು. ಈತನಿಗೆ ಕೇವಲ ಏಳು ದಿನ ಆಯಸ್ಸು. ಹುಟ್ಟಿದಾಕ್ಷಣ ಮಾತು-ನಡೆಗಳ ಶಕ್ತಿ ಬಂದಿತು[೧೧] ಎನ್ನುತ್ತಾರೆ. ಈತ ಹುಟ್ಟಿದ ಕಾಲಕ್ಕೆ ಬರಗಾಲ ಆವರಿಸಿತ್ತು. ಜನ ಕಂಗೆಟ್ಟಿದ್ದರು.

---

೯. ವಿವರ ನೀಡಿದವರು : ಬಾಸ್ಕರಾಚಾರ್ಯ, ಯಶವಂತನಗರ, ತಾ. ಸೊಂಡೂರು, ಜಿ. ಬಳ್ಳಾರಿ

೧೦. ಡಾ.ಎಸ್. ಎಂ. ವೃಷಭೇಂದ್ರಸ್ವಾಮಿ (ಸಂ) : ಜಾನಪದ ಸಾಹಿತ್ಯ ದರ್ಶನ, ಭಾಗ - ೧೦, ಪುಟ - ೧೦೨,೧೦೩.

೧೧. ಡಾ. ಎಂ. ಚಿದಾನಂದ ಮೂರ್ತಿ : ಗ್ರಾಮೀಣ, ಪುಟ - ೧೪೪

ಜೋಕುಮಾರನು ತನ್ನ ನೀಲುಗುದುರೆಯನ್ನೇರಿ ಸುತ್ತಲೂ ಸಂಚರಿಸಿ ತನ್ನ ಶಲ್ಲೆಯನ್ನು ಬೀಸಿ ಮಳೆ ತರಿಸುವನು. ಒಂದು ದಿನ ಈತ ಮಡಿವಾಳರ ಹೆಣ್ಣನ್ನು ಮೋಹಿಸಲು, ಅವಳ ತಂದೆ ಜೋಕುಮಾರನನ್ನು ಕೊಂದು, ರುಂಡವನ್ನು ಹೊಳೆಯಲ್ಲಿ ಚೆಲ್ಲುತ್ತಾನೆ. ಅಲ್ಲಿಯೇ ಇದ್ದ ಮೀನುಗಾರರು ರುಂಡವನ್ನು ಅಗಸರು ಅರಿವೆ ಒಗೆಯುವ ಕಲ್ಲಿನ ಕೆಳಗೆ ಇಟ್ಟು ಹೋಗುವರು. ಅದನ್ನು ಕಂಡ ಅಗಸರು ದೇವರೆಂದು ಪೂಜಿಸುತ್ತಾರೆ. ಅಂದಿನಿಂದ ಮಳೆ-ಬೆಳೆ ಕೊಡು ಎಂದು ಜೋಕುಮಾರನ ಹಬ್ಬ ಜಾರಿಗೆ ಬಂತೆಂದು ಹೇಳುತ್ತಾರೆ. ಭಾದ್ರಪದ ಅಷ್ಟಮಿಯ ದಿನ ಹುಟ್ಟಿ ಹುಣ್ಣಿಮೆ ದಿನ ಈತ ಸಾಯುತ್ತಾನೆ. ಅದಕ್ಕೆ ಆ ಹುಣ್ಣಿಮೆಗೆ ಜೋಕುಮಾರನ ಹುಣ್ಣಿಮೆ[೧೨] ಎನ್ನುವರು.

**ಕಥೆ - ೩.** ಜೋಕುಮಾರನ ಹಬ್ಬವು ಭಾದ್ರಪದ ಮಾಸದಲ್ಲಿ ಗೌರಿ ಹಬ್ಬದ ಬಳಿಕ ಬರುತ್ತದೆ. ಇವನಿಗಿಂತ ಮೊದಲು ಭೂಲೋಕದಲ್ಲಿ ಹುಟ್ಟಿ ಬಂದ ಗಣಪತಿಯು ತನಗೆ ಜನರಿಂದ ಮೋದಕ, ಮೃಷ್ಟಾನ್ನ ಭೋಜನವು ಸಿಕ್ಕಿತೆಂದು, ತಾನು ಆನಂದದಿಂದ ಬಂದೆನೆಂದು ತಂದೆಗೆ ಹೇಳುತ್ತಾನೆ. ಅನಂತರ ಹುಟ್ಟಿ ಬಂದ ಜೋಕುಮಾರನು ಜನರು ಮಳೆ-ಬೆಳೆ ಇಲ್ಲದೆ ಗೋಳಾಡುತ್ತಿದ್ದಾರೆಂದು ಹೇಳಿ ಅವರ ಪರವಾಗಿ ಈಶ್ವರನಲ್ಲಿ ವಿನಂತಿ ಮಾಡಿಕೊಂಡು ಮಳೆ ಸುರಿಸುತ್ತಾನೆ.[೧೩]

**ಕಥೆ - ೪.** ಜೋಕುಮಾರನು ಕಾಮದ ಸ್ವಭಾವದವನಾಗಿದ್ದು ಅವನು ಹುಟ್ಟಿದ ಕೂಡಲೇ ತನ್ನ ತಾಯಿ ಮಾರಿಯನ್ನೇ ಮೋಹಿಸಲು ಹೋಗುತ್ತಾನೆ. ಕೋಪಗೊಂಡ ಆಕೆ ಮಗನ ತಲೆಯನ್ನು ಕಡಿದಳೆಂದು[೧೪] ಜಾನಪದ ಕಥೆಯುಂಟು.

**ಕಥೆ - ೫.** ಪಾರ್ವತಿಗೆ ಐದು ಜನ ಮಕ್ಕಳು. ಅವರು ಗಣಪತಿ, ಜೋಕುಮಾರ, ಚಂದ್ರ, ಸೂರ್ಯ ಹಾಗೂ ಕಾಮ. ಇವರೆಲ್ಲ ಒಮ್ಮೆ ಶ್ರೀಮಂತನೊಬ್ಬನ ಮನೆಗೆ ಊಟಕ್ಕೆ ಆಮಂತ್ರಿತರಾಗಿರುತ್ತಾರೆ. ಊಟ ಮಾಡಿ ಮನೆಗೆ ಹಿಂತಿರುಗಿದವರಲ್ಲಿ ಗಣಪನೊಬ್ಬನೇ ತಾಯಿಗೆಂದು ತಾನುಂಡ ಮನೆಯಿಂದ ಊಟ ತಂದಿರುತ್ತಾನೆ. ಉಂಡು ಸಂತೃಪ್ತಳಾದ ತಾಯಿ ಇನ್ನುಳಿದವರು ತನ್ನನ್ನು ಮರೆತಿರುವದಕ್ಕೆ ಕೋಪಗೊಂಡು ▪ ಚಂದ್ರನಿಗೆ ತಂಪಿನಲ್ಲಿ ಹೋಗಿ ಬಾ ಎಂದು ▪ ಸೂರ್ಯನಿಗೆ ಉರಿದುಕೊಂಡು ಹೋಗಿ ಬಾ ಎಂದು ▪ ಗಣಪನಿಗೆ ಹೊಟ್ಟೆ ತುಂಬ ಮೋದಕ ತಿಂದು ಬಾ ಎಂದು ▪ ಕಾಮಣ್ಣನಿಗೆ ಹುಣ್ಣಿಮೆಯ ದಿನ ಹುಟ್ಟಿ ಮರುದಿನ ಸುಟ್ಟುಕೊಂಡು ಸಾಯಿ ಎಂದು ▪ ಜೋಕುಮಾರನಿಗೆ ಹುಟ್ಟಿದ ಏಳು ದಿನಗಳವರೆಗೆ ಬೇಕಾದ ಹಾಗೆ ಮೆರೆದು ನಂತರ ಅಗಸರ ಕಲ್ಲಿನ ಕೆಳಗೆ ತಲೆ ಒಡೆಸಿಕೊಂಡು ಸಾಯಿ ಎಂದು ಹರಕೆ ಕೊಡುವಳು.[೧೫] ಈ ರೀತಿಯಾಗಿ ಮಕ್ಕಳಿಗೆ ಹೇಳಲಾಗುವ ಜನಪದ ಕಥೆ ಇದಾಗಿದ್ದು, ಆಯಾ ಮಕ್ಕಳ

---

೧೨. ಡಾ.ಎಸ್. ಎಂ. ವೃಷಭೇಂದ್ರಸ್ವಾಮಿ (ಸಂ) : ಜಾನಪದ ಸಾಹಿತ್ಯ ದರ್ಶನ, ಭಾಗ - ೧೦, ಪುಟ - ೧೦೪

೧೩. ..... ಅದೇ ..... ಪುಟ - ೧೦೫

೧೪. ..... ಅದೇ ..... ಪುಟ - ೧೦೬

೧೫. ಡಾ.ಎಸ್. ಎಂ. ವೃಷಭೇಂದ್ರಸ್ವಾಮಿ (ಸಂ) : ಜಾನಪದ ಸಾಹಿತ್ಯ ದರ್ಶನ, ಭಾಗ - ೧೦, ಪುಟ - ೧೦೪

ಗುಣ ಸ್ವಭಾವಗಳನ್ನು ಪರಿಚಯಿಸುತ್ತದೆಂದು ಹೇಳಬಹುದು.

**ಕಥೆ - ೬.** ಜೋಕುಮಾರ ಮಳೆಯ ದೇವರು. ಗಣಪತಿಯ ಸಹೋದರ. ಪಾರ್ವತಿಯ ಮಗ. ಪಾರ್ವತಿ ಸ್ನಾನ ಮಾಡುವಾಗ ಮಣ್ಣಿನ ಬೊಂಬೆ ಮಾಡಿ ಜೀವ ತುಂಬಿ ಬಾಗಿಲು ಕಾಯಲು ನಿಲ್ಲಿಸುವಳು. ಶಿವನು ಬಂದಾಗ ಅವನಿಗೆ ಹೆದರಿ ಓಡಿ ಹೋಗಿ ಸ್ನಾನ ಮಾಡುತ್ತಿದ್ದ ತಾಯಿಯನ್ನು ಹಿಡಿದುಕೊಂಡನು. ಇದರಿಂದಾಗಿ ಸಿಟ್ಟಾದ ಪಾರ್ವತಿ ಜೋಕುಮಾರನಿಗೆ ಏಳು ದಿನಗಳ ಅಲ್ಪಾಯುಷ್ಯ ನೀಡಿದಳು. ದಿಕ್ಕೆಟ್ಟು ಓಡಿದ ಈತ ಹೊಳೆ ಬಿದ್ದು ಕೊನೆಗೆ ಬೆಸ್ತರಿಗೆ ದೊರಕಿದ. ಅವರು ಈತನನ್ನು ಸಲುಹಿದರು.[೧೬] ಹೀಗೆ ಜೋಕುಮಾರನ ಕುರಿತು ಸಾಕಷ್ಟು ಜನಪದ ಕಥೆಗಳು ಪ್ರಚಲಿತದಲ್ಲಿವೆ.

ಜೋಕುಮಾರನ ಕುರಿತು ಕೆಲವು ಜಾನಪದ ರೂಢಿ, ಸಂಪ್ರದಾಯ ಹಾಗೂ ನಂಬಿಕೆಗಳೂ ಗಮನಾರ್ಹವಾಗಿವೆ ■ ಈತ ಜನರು ಕೇಳಿದ್ದನ್ನು ದಯಪಾಲಿಸುತ್ತಾನೆ ■ ಸಂತಾನ ಇಲ್ಲದವರಿಗೆ ಸಂತಾನ ಅನುಗ್ರಹಿಸುತ್ತಾನೆ ■ ಅನೇಕ ಸ್ತ್ರೀಯರ ಮಾನಭಂಗ ಮಾಡುತ್ತಾನೆ. ■ ಮಹಾ ಪುಂಡನಿರುತ್ತಾನೆ. ■ ಬೆತ್ತಲೆ ಇರವನು ■ ಈತನಿಗೆ ಬೆಣ್ಣೆ ಬಲು ಪ್ರೀತಿ ■ ಈತನ ಆಯುಷ್ಯ ಏಳು ದಿನ ಮಾತ್ರ ■ ಜೋಕುಮಾರ ಬಹು ಕಾಮಿ, ಅವನ ಶಿಶ್ನವು ದೊಡ್ಡದು ■ ಈತನ ತಾಯಿ ಗರ್ಭಿಣಿಯಾಗಿದ್ದಾಗ ಬಯಕೆಯಿಂದ ಬೆಳ್ಳೊಳ್ಳಿಯನ್ನು ಹೆಚ್ಚಾಗಿ ತಿಂದಿದ್ದರಿಂದ ಅತಿ ಕಾಮಿಯಾದನೆಂಬ ನಂಬಿಕೆಯಿದೆ ■ ಹುಟ್ಟಿದ ಏಳು ದಿನಗಳಲ್ಲೇ ರಾಜ್ಯವಾಳಿದನು. ಎಲ್ಲ ಪಟ್ಟಣ ತಿರುಗಿದನು.

ಜೋಕುಮಾರನ ಬಾಯಿಗೆ ಹಚ್ಚಿದ ಬೆಣ್ಣೆ ಹಾಗೂ ಬೇವಿನ ಎಲೆಯನ್ನು ಕೂಡಿಸಿ ನೋವು, ಗಾಯಗಳಾದಲ್ಲಿ ಹಚ್ಚಿದರೆ ವಾಸಿಯಾಗುತ್ತದೆಂಬ ನಂಬಿಕೆಯಿದೆ. ಬಂಜೆಯರು ಜೋಕುಮಾರನ ಶಿಲ್ಪವಿರುವ ಬುಟ್ಟಿಯನ್ನೆತ್ತಿ ಭವಿಷ್ಯ ಕೇಳುವರು. ದವಸ-ಧಾನ್ಯಗಳ ಸಂಗ್ರಹವಿರುವ ಹಗೆಗಳಲ್ಲಿ ಬೇವಿನ ಎಲೆ ಹಾಕಿದರೆ ಜೋಳ ಕೆಡುವದಿಲ್ಲವಂತೆ. ಜೋಕುಮಾರನನ್ನು ಹೊರುವ ಗಂಗಾಮತಸ್ಥ ಹೆಂಗಸರು ಮೊದಲ ದಿನ ಮಾತ್ರ ಸ್ನಾನ ಮಾಡುವರು. ಅನಂತರದ ಆರು ದಿನಗಳ ಕಾಲ ಸ್ನಾನ ಮಾಡುವದಿಲ್ಲ. ಬಟ್ಟೆ ಕೂಡ ಬದಲಿಸುವದಿಲ್ಲ. ಏಳು ದಿನಗಳ ಆಚರಣೆಯ ಅವಧಿಯಲ್ಲಿ ಮಧ್ಯೆ ಜೋಕುಮಾರನ ಶಿಲ್ಪಕ್ಕೆ ಏನಾದರೂ ಊನತೆ ಉಂಟಾದರೆ ಅಪಶಕುನ, ಕೇಡುಗಾಲ ಎಂದು ತಿಳಿಯಲಾಗುವದು. ಜೋಕುಮಾರನನ್ನು ಆಚರಿಸುವ ಹುಣ್ಣಿಮೆಯನ್ನು ಬೆದೆಗಡಕ ಹುಣ್ಣಿಮೆ ಎಂದು ಕರೆಯುತ್ತಾರೆ. ಈ ಹುಣ್ಣಿಮೆಯಲ್ಲಿ ಹುಟ್ಟಿದ ಹೆಣ್ಣುಗಳು ಗರತಿಯರಾಗುವದಿಲ್ಲವೆಂಬ ನಂಬಿಕೆಯಿದೆ. ಜೋಕುಮಾರನನ್ನು ಪೂಜಿಸುವದರಿಂದ ಸಂತಾನ ಭಾಗ್ಯ ಲಭಿಸುವದೆಂದು ನಂಬುತ್ತಾರೆ.

**ನಂಬಿಕೆಗಳು :** ಪಶುಗಳನ್ನು ಕೂಡಿ ಹಾಕುವ ಕೊಟ್ಟಿಗೆ ಮುಂತಾದೆಡೆಗಳಲ್ಲಿ ತಗಣಿ, ಚಿಕ್ಕಾಡು ಆದರೆ ಮೆಣಸಿನಕಾಯಿ, ಉಪ್ಪುಗಳನ್ನು ಜೋಕುಮಾರನ ಶಿಲ್ಪಕ್ಕೆ ಅರ್ಪಿಸಿ ಅವು ನಾಶವಾಗುವಂತೆ

---

೧೬. ಡಾ.ಎಸ್. ಎಂ. ವೃಷಭೇಂದ್ರಸ್ವಾಮಿ (ಸಂ) : ಜಾನಪದ ಸಾಹಿತ್ಯ ದರ್ಶನ, ಭಾಗ - ೧೦, ಪುಟ - ೧೦೭

ಬೇಡಿಕೊಳ್ಳುವದರಿಂದ ಅವು ನಾಶವಾಗುತ್ತವೆ ಎಂಬ ನಂಬಿಕೆಯಿದೆ. ನುಚ್ಚು - ಅಂಬಲಿ ಚರಗ ಚೆಲ್ಲಿದರೆ ಹೊಲದಲ್ಲಿ ಬೆಳೆ ಹುಲುಸಾಗಿ ಬರುವದೆಂಬ ನಂಬಿಕೆಯಿದೆ.

ಗಣಪತಿ- ಜೋಕುಮಾರರ ಬಗ್ಗೆ ಕೆಲ ಸಾಮ್ಯ, ವೈಷಮ್ಯಗಳು ಇವೆ. ಗಣಪತಿಯು ಭಾದ್ರಪದ ಚೌತಿಯ ದಿನ ಬಂದು ನವಮಿಗೆ ಹೋಗುವನು. ಆದರೆ ಭಾದ್ರಪದ ಅಷ್ಟಮಿಗೆ ಜೋಕುಮಾರನು ಬಂದು ಪೌರ್ಣಿಮೆಗೆ ಅಂದರೆ ಆರನೇ ದಿನಕ್ಕೆ ಹೋಗುವನು. ಕೇವಲ ಒಂದು ದಿನ ಮಾತ್ರ ಇವರಿಬ್ಬರ ಬೆಟ್ಟಿಯಾಗುತ್ತದೆ. ಆದಿನ ಜೋಕುಮಾರನು ಎದುರು ಬಂದರೆ ಗಣಪತಿಯನ್ನು ಅರಿವೆಯಿಂದ ಮುಚ್ಚಿ ಬಿಡುವರು. ಇಲ್ಲದಿದ್ದರೆ ಜೋಕುಮಾರನ ದೃಷ್ಟಿಯಿಂದಾಗಿ ಗಣಪನ ಹೊಟ್ಟೆ ಒಡೆಯುವದೆಂಬ ನಂಬಿಕೆಯಿದೆ. ಸೊಂಡ್ಯಾ ( ಗಣಪ ), ಗೆಂಡ್ಯಾ ( ಜೋಕುಮಾರ ), ಲೊಂಡ್ಯಾ ( ಅಲಾವಿ ದೇವರು ) ಇವು ಮೂರು ಒಂದೇ ಸಮಯಕ್ಕೆ ಕೂಡುವದರಿಂದ ಅಪಶಕುನವಾಗುವುದೆಂಬ ನಂಬಿಕೆಯಿದೆ.

ಕಾಮ ಮತ್ತು ಜೋಕುಮಾರ ಇವು ಜೀವನದ ಕಾಮುಕ ಮುಖದ ಸಂಕೇತಗಳು. ಇವುಗಳಲ್ಲಿ ಕಾಮನ ಕಲ್ಪನೆ ಹೆಚ್ಚಾಗಿ ಪುರಾಣ ಸಂಬಂಧಿಯಾದರೆ, ಜೋಕುಮಾರನದು ಹೆಚ್ಚಾಗಿ ಜಾನಪದ ಸಂಬಂಧಿಯಾಗಿದೆ ಎನ್ನಬಹುದು.



**ಜೋಕುಮಾರನ ಕುರಿತು ವಿದ್ವಾಂಸರ ಅಭಿಪ್ರಾಯಗಳು :** ಡಾ. ಶಿವರಾಮ ಕಾರಂತರು ಜೋಕುಮಾರನ ಸೃಷ್ಟಿಯು ನಮ್ಮಲ್ಲಿಯ ಕೃಷಿಕರ ಕೆಲಸವನ್ನು ಕುರಿತು ಒಂದು ಸಾಂಕೇತಿಕ ರಚನೆ ಇರಬಹುದೆಂದು ಊಹಿಸುತ್ತಾರೆ.[೧೭] ಅವರ ಅಭಿಪ್ರಾಯದ ಪ್ರಕಾರ, ಜೋಕುಮಾರನ ತಂದೆ ಜೇಷ್ಠ ಮಳೆ, ತಾಯಿ ಗೌರಿ ಎನಿಸುವ ನೆಲ. ಹೀಗೆ ಹುಟ್ಟಿದ ಯುವ (ಜವೆ ಗೋಧಿ) ಗೋದಿ ಸಸಿ ಪೋಷಣೆಗೆ ಮುಂದೆಯೂ ಮಳೆ ಬೇಕಷ್ಟೆ. ಜನರು ಅಂತಹ ಭಾರೀ ಮಳೆಗಾಗಿ ಆತುರರಾಗಿರುತ್ತಾರೆ. ಜೋಕುಮಾರ ಮಳೆಯನ್ನು ತರುತ್ತಾನೆ. (ಅವರ ತಂದೆ) ಉತ್ತರ ಮಳೆ.



೧. ಜೇಷ್ಠ ಮಳೆ - ಜನನಕ್ಕೆ ಕಾರಣವಾದ ಮಳೆ ೨. ಮುಂದೆ ಮೂಲಾ ೩. ಪೂರ್ವಾಷಾಡ ೪. ಉತ್ತರಾಷಾಡ ೫. ಶ್ರಾವಣ ೬. ಪೂರ್ವ ಭಾದ್ರಪದ, ೭. ಉತ್ತರ ಭಾದ್ರಪದ

ಹೀಗೆ ಏಳು ನಕ್ಷತ್ರಗಳ ಕಾಲದ ತನಕವೂ ಮಳೆ ಬೀಳಬೇಕಾಗುತ್ತದೆ. ಜೇಷ್ಠದಲ್ಲಿ ಹುಟ್ಟಿದ ಆ ಕೂಸಿಗೆ ( ಸಸಿ ) ಮುಂದೆ ೭ X ೧೪ ದಿನಗಳ ಆಯುಷ್ಯ. (ಇಲ್ಲಿ ಒಂದೊಂದು ಮಳೆಯ ಅವಧಿ ೧೪ ದಿನಗಳೆಂಬ ಅರ್ಥ) ಕಥೆಯು ೭ ದಿನಗಳೆಂಬುದು ಮಳೆಯ ೭ ನಕ್ಷತ್ರಗಳ ಅವಧಿ. ದೀನ ದೃಷ್ಟಿ ಎಂಬ ಪದಕ್ಕೆ ನಕ್ಷತ್ರ ದೃಷ್ಟಿ ಎಂಬ ಪದವಿದೆ. ಹಾಗಿದ್ದರೆ ದಿನ ಎಂಬುದಕ್ಕೆ ನಕ್ಷತ್ರ ಎಂಬ ವಿಚಾರವು ಸ್ಪಷ್ಟವಾಗುತ್ತದೆ.

ಯುವ ಕುಮಾರ ಬೆಳೆದು ದೊಡ್ಡವನಾಗಿ ಮೆರೆಯುತ್ತಾನೆ. ಪೃಥ್ವಿ ಸಸ್ಯಶಾಲಿನಿಯಾಗಿರುತ್ತದೆ. ಊರ ಕನ್ಯೆಯರನ್ನು ಮೋಹಿಸುತ್ತಾನೆ. ನಿಜವಾಗಿ ಅವನು ಬಲವಂತದಿಂದ ತಬ್ಬಿಕೊಂಡ ಕನ್ಯೆಯ ಹೆಸರು

[illegible]

ಸುಕರ್ಣಿಕೆ. ಎಂದರೆ ಹೂವಿನ ಹೊಡೆ ಸಸ್ಯದಲ್ಲಿ ಕಾಳು ಬೆಳೆಯಬೇಕಾದರೆ ಮುಂದೆ ಪರಾಗ ವಿನಿಮಯವಾಗಬೇಕು. ಜೋಕುಮಾರನ ಭೋಗಲಾಲಸೆ ಪುಷ್ಪ ಗರ್ಭ ಪ್ರಧಾನಕ್ಕೆ ಸಂಕೇತ. ಈ ಮೊದಲೇ ಹೇಳಿದಂತೆ ಮತ್ತೊಂದು ಕಥೆಯ ಪ್ರಕಾರ ಜೋಕುಮಾರನು ತನ್ನ ತಾಯಿಯನ್ನೇ ಅಂದರೆ ಗೌರಿಯನ್ನೇ ಮೋಹಿಸುತ್ತಾನೆಂಬ ಅಂಶ ಬರುತ್ತದೆ. ಅಂದರೆ ಸಸ್ಯದಲ್ಲಿ ಕಾಳು ಬಲಿತ ಬಳಿಕ ನೇರವಾಗಿ ನೆಲದ ಮೇಲೆ ಬೀಳುತ್ತದೆ. ಹಾಗೆ ಆಗಬಾರದಲ್ಲ ! ಹಾಗೆ ಮಾಡುವದೆಂದರೆ ಜೋಕುಮಾರನನ್ನು ಕೊಂದಂತೆ. ಆದರೆ ಆ ಕಥೆಯಲ್ಲಿಯೂ ಸಹ ಅವನನ್ನು ಕೊಲ್ಲುತ್ತಾರೆ.

ಇತ್ತ ಭೂಮಿಯ ಮೇಲೆ ಬಿದ್ದ ಮಳೆನೀರು ಹಳ್ಳ ಸೇರಿ ಅಂಬಿಗರ ಮತ್ತು ಮಡಿವಾಳರ ಕೈಯಿಂದ ತಪ್ಪಿಸಿಕೊಂಡು ತಿರುಗಿ ಆಕಾಶ ಸೇರುತ್ತದೆ. ಆವಿಯಾಗಿ ಜೋಕ ತನ್ನ ಋಷಿಗಳನ್ನು ಕೂಡಿಕೊಳ್ಳುತ್ತಾನೆನ್ನುವ ತಾತ್ಪರ್ಯ ಅದು. ಜೋಕುಮಾರನ ಈ ಕಥೆಯ ಮೂಲ ಬೀಜೋತ್ಪತ್ತಿಯ ಹಬ್ಬ ಎಂಬುದಾಗಿ ನಾವು ತರ್ಕಿಸಬಹುದೆಂದು ಶಿವರಾಮ ಕಾರಂತರು ಹೇಳುತ್ತ, ಈ ಅಭಿಪ್ರಾಯ ಕೇವಲ ಕಲ್ಪನೆಯಾಗಿದೆಯೇ ಹೊರತು ಯಾವುದೇ ನಿರ್ದಿಷ್ಟವಾದ ಆದಾರಗಳಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ.[೧೮] ಜೋಕುಮಾರನ ಹಿನ್ನೆಲೆಯಲ್ಲಿರುವ ಹಲವು ಬಗೆಯ ಕಥೆಗಳ ಹಿನ್ನೆಲೆಯಲ್ಲಿ ಕಾರಂತರ ಈ ಕಾಲ್ಪನಿಕ ಅಭಿಪ್ರಾಯ ದೇವರಲ್ಲಿ ನಂಬಿಕೆಯಿಲ್ಲದ ಎಲ್ಲರೂ ಒಪ್ಪಬಹುದಾಗಿದೆ. ಇದು ಹೆಚ್ಚು ವೈಜ್ಞಾನಿಕವೂ ಎನಿಸುತ್ತದೆ.

ಡಾ. ಎಂ. ಚಿದಾನಂದ ಮೂರ್ತಿಯವರು ಅಭಿಪ್ರಾಯ ಪಡುವಂತೆ, ಶಿವಪಾರ್ವತಿಯರಿಗೆ ಗಣಪತಿಯು ಹೇಗೆ ಮಗನೋ ಹಾಗೇ ಜೋಕ ಹಾಗೂ ಎಳೆಗೌರಿಯರಿಗೆ ಜೋಕುಮಾರನೂ ಒಬ್ಬ ಮಗನು. ಅವನು ಜನತೆಯ ಆರಾಧ್ಯ ದೇವತೆಯೆಂತಲೂ, ಅವರ ಹೆಸರಿಂದ ಹಬ್ಬ ಹುಣ್ಣಿಮೆಗಳು ಬಳಕೆಯಲ್ಲಿ ಬಂದಿರಬಹುದೆಂದೂ ಊಹಿಸುತ್ತಾರೆ.

ಜೋಕುಮಾರನು ಹುಟ್ಟಿದ್ದು ಭಾದ್ರಪದ ಶುದ್ಧ ಅಷ್ಟಮಿಯ ದಿನ ಎಂಬುದಕ್ಕೆ ( ಅಂದರೆ ಅಷ್ಟಮಿಯ ಕೊಡದಲ್ಲಿ ಹುಟ್ಟಿದ್ದು ) ಆಧಾರವಾದ ಮೈಸೂರು ಪ್ರಾಚ್ಯಕೋಶಾಗಾರದ ಕೆ-೩೨೦ ಸಂಖ್ಯೆಯ ಹಸ್ತಪ್ರತಿ ಪತ್ರ ೫೨ ರ ಪ್ರಕಾರ

ಆದಿ ಮೂರುತಿ ಗುರುವೆ ಆವ ಜನ
ನಾದ ದಿನವನು ಪೇಳು ಎಂದೊಡೆ
ಭಾದ್ರಪದ ಶುದ್ಧದಲಿ ದೇವಿಯ ಅಷ್ಟಮಿಯ ಧಾರಾ ।
ಬೇಧವಿಲ್ಲದೆ ಸರ್ವಲೋಕವು
ಆದರಿಸಿ ಕಟ್ಟೀರ ಬಲಿ ಕಲಿ
ಆ ದಿವಸವೇ ಹುಟ್ಟಿ ನಡೆದನು ಭೂಪಕೇಳೆಂದಾ ॥

ಹೀಗೆ ಅವನ ಹುಟ್ಟಿನ ಬಗ್ಗೆ ತಮ್ಮ ಅಭಿಪ್ರಾಯವನ್ನು ಈ ಆಧಾರದಿಂದ ವ್ಯಕ್ತಪಡಿಸಿದ್ದಾರೆ.

---

೧೭. ಡಾ.ಎಸ್. ಎಂ. ವೃಷಭೇಂದ್ರಸ್ವಾಮಿ (ಸಂ) : ಜಾನಪದ ಸಾಹಿತ್ಯ ದರ್ಶನ, ಭಾಗ - ೧೦, ಪುಟ - ೧೧೩
೧೮. ..... ಅದೇ ..... ಪುಟ - ೧೧೪

ಜೋಕುಮಾರನ ಹಾಡುಗಳಲ್ಲಿ ಏಳು ದಿನದ ಅವನ ಜೀವನದಲ್ಲಿ ಅವನ ಜನನ, ಬಾಲ್ಯ, ಕೌಮಾರ್ಯ, ಯೌವ್ವನ, ಮದುವೆ, ನಾವು ಎಲ್ಲವನ್ನು ಸೇರಿಸಿ, ಆಡಿಸಿ, ಏಳು ದಿನ ಮೆರೆಸುವ, ಇಂದಿಗೂ ಜೀವಂತವಿರುವ ಈ ಜೋಕುಮಾರನ ಹಬ್ಬವು ಕನ್ನಡ ಜಾನಪದ ಸಾಹಿತ್ಯದಲ್ಲಿ ಬೇರೆ ಬೇರೆ ಭಾಗದಲ್ಲಿ ಬೇರೆ ಬೇರೆ ರೀತಿಯ ಕಥೆಗಳಿದ್ದರೂ, ಈ ಕಥೆಗಳ ಮೂಲ ಆಶಯ, (ಮೋಟಿಫ್) ತತ್ವ ಒಂದೇ ಆಗಿದೆ[೧೯] ಎಂಬ ನಿಲುವಿಗೆ ಬರಬಹುದಾಗಿದೆ. ಈ ಜೋಕುಮಾರನ ಶಿಲ್ಪ ಗಣೇಶನ ಶಿಲ್ಪದಷ್ಟೇ ಜನಪದರ ಜನಪ್ರೀಯ ಶಿಲ್ಪವಾಗಿ ಪ್ರತಿವರ್ಷ ಮರುಹುಟ್ಟು ಪಡೆದು ಆಚರಿಸಲ್ಪಡುವುದಾಗಿದೆ. ಆದರೆ ಅಲಂಕಾರ, ಆರಾಧನೆ ಮತ್ತು ಆಚರಣೆಯ ವಿಧಾನಗಳು ಒಂದಕ್ಕೊಂದು ಭಿನ್ನವಾಗಿವೆ.

ನಮ್ಮ ಜನಪದರ ಮಡಿವಂತಿಕೆಯ ಬದುಕಿನಲ್ಲೂ ಬೆತ್ತಲೆಯಾಗಿರುವ ಜೋಕುಮಾರನ ಶಿಲ್ಪ ನಿಜವಾಗಿಯೂ ಆಶ್ಚರ್ಯ ಹುಟ್ಟಿಸುತ್ತದೆ. ಪುರುಷಾಂಗ ಪ್ರಧಾನವಾಗಿರುವ ಈ ಶಿಲ್ಪ ಲೈಂಗಿಕ ಶಿಕ್ಷಣ ನೀಡುವ ಮಾಧ್ಯಮವಾಗಿಯೂ ಜನಪದರಲ್ಲಿ ಮುಖ್ಯವಾಗಿದೆ ಎನ್ನಬಹುದು. ಬಾಯಿಗೆ ಹಚ್ಚಿರುವ ಬೆಣ್ಣೆ, ಬೇವಿನ ತೊಪ್ಪಲು, ಕುಸುಬೆ ಕಾಳು ಇತ್ಯಾದಿಗಳಿಂದ ಅವನಿಗೆ ಮಾಡಿರುವ ಅಲಂಕಾರ, ಇವೆಲ್ಲವೂ ನಮ್ಮ ಜನಪದರಿಗೆ ಜೀವನೋತ್ಸಾಹವನ್ನು ಮನುಷ್ಯ ಜೀವಿಯ ಹುಟ್ಟು ಹಾಗೂ ಮುಂದುವರಿಕೆಗಾಗಿ ಬೇಕಾದ ಲೈಂಗಿಕಾಸಕ್ತಿಯ ಕುದುರುವಿಕೆಗೂ ಮಾಧ್ಯಮವಾಗಿ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದೆ ಎನ್ನಬೇಕು. ಈ ಶಿಲ್ಪ ರಚನೆಗೊಂಡು ಒಂದೇ ಸ್ಥಳದಲ್ಲಿ ಪ್ರತಿಷ್ಠಾಪಿತವಾಗದೇ ಊರಿನ ಪ್ರತಿ ಮನೆಗೆ ಬೇಟಿ ನೀಡಿ ಪ್ರದರ್ಶಿತವಾಗುವ ಶಿಲ್ಪವಾಗಿದೆ. ಈ ಶಿಲ್ಪ ನಮ್ಮ ಜನಪದರ ಇತರ ಶಿಲ್ಪಗಳಿಗಿಂತಲೂ ವಿಶೇಷವಾದ ಕುತೂಹಲ ಹುಟ್ಟಿಸುವ ಶಿಲ್ಪವಾಗಿದೆ.

### ಇ. ಗುರ್ಜಿಯ ಶಿಲ್ಪಗಳು

ಅಸಂಖ್ಯೆ ಜೀವರಾಶಿಗಳ ಅಸ್ತಿತ್ವಕ್ಕೆ ಕಾರಣವಾದ ಮಳೆಯು ಮೂಲಭೂತ ಅಗತ್ಯಗಳನ್ನು ಪೂರೈಸುವ ಒಂದು ಮಹತ್ವದ ದೇವತೆಯಾಗಿದೆ. ನಮ್ಮ ಜನಪದರಿಗೆ ಸಕಾಲಕ್ಕೆ ಮಳೆಯಾದರೆ ಬೆಳೆ, ಬೆಳೆಯಾದರೆ ಬದುಕು. ಆದರೆ ಮಳೆಗಾಲ ಸಮೀಪಿಸಿಯೂ ಮಳೆ ಬಾರದೇ ಹೋದರೆ ಕಂಗಾಲಾಗುವ ರೈತರು ಮಳೆರಾಯನಲ್ಲಿ ಮೊರೆ ಹೋಗುತ್ತಾರೆ. ಕೃಷಿಯನ್ನೇ ನಂಬಿದ ರೈತರು ಮಳೆಯ ಆಗಮನಕ್ಕಾಗಿ ಅನೇಕ ರೀತಿಯ ಆಚರಣೆಗಳನ್ನು ಮಾಡುತ್ತಾ ಬಂದಿದ್ದಾರೆ. ಈ ರೀತಿಯ ಆಚರಣೆಗಳು ಕರ್ನಾಟಕಾದಾದ್ಯಂತ ಪ್ರಚಲಿತವಿದ್ದು ಪ್ರದೇಶದಿಂದ ಪ್ರದೇಶಕ್ಕೆ ಕೆಲವು ವ್ಯತ್ಯಾಸಗಳೂ ಇರುವದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಗುರ್ಜಿ ಎಂದು ಕರೆಯಲ್ಪಡುವ ಮಳೆರಾಯನ ಮಣ್ಣಿನ ಶಿಲ್ಪವನ್ನು ರಚಿಸಿ ಅದರ ಮೆರವಣಿಗೆ, ಆಚರಣೆಯನ್ನು ಮಾಡುವ ಸಂಪ್ರದಾಯ ಗ್ರಾಮಾಂತರ ಪ್ರದೇಶಗಳಲ್ಲಿ ಇಂದಿಗೂ ಜೀವಂತವಾಗಿದೆ.

---

೧೯. ..... ಅದೇ ..... ಪುಟ - ೧೧೫

**ಗುರ್ಜಿಯ ಶಿಲ್ಪದ ರಚನೆ :** ಸಾಮಾನ್ಯವಾಗಿ ಭಾದ್ರಪದ, ಅಶ್ವಿನ ಮಾಸಗಳಲ್ಲಿ ಮಳೆಯು ಬಾರದಿರಲು ನಮ್ಮ ಗ್ರಾಮೀಣರು ಆಚರಿಸುವ ಕೆಲವು ಆಚರಣೆಗಳಲ್ಲಿ ಗುರ್ಜಿಯ ಶಿಲ್ಪದ ಆಚರಣೆಯ ಸಂಪ್ರದಾಯವು ಪ್ರಮುಖವಾದುದಾಗಿದೆ.

ಮಣ್ಣನ್ನು ಹದಗೊಳಿಸಿ ಮಾಡಲಾದ ಕೆಸರಿನಿಂದ ಲಿಂಗಾಕೃತಿಯ ಶಿಲ್ಪವೊಂದನ್ನು ರಚಿಸಿ ಅದರ ಮೇಲೆ ಕರಕಿಯ ಪತ್ರಿಯನ್ನು ಚುಚ್ಚಲಾಗಿರುತ್ತದೆ. ಇದಕ್ಕೆ ಗುರ್ಜಿ ಎನ್ನುತ್ತಾರೆ. ರೊಟ್ಟಿ ಸುಡುವ ಹೆಂಚನ್ನು ಬೋರಲು ಹಾಕಿ ಅದರ ಮೇಲೆ ಈ ಶಿಲ್ಪವನ್ನು ಕುಳ್ಳಿರಿಸಿ ಪೂಜಿಸುತ್ತಾರೆ.[೨೦] ಕೆಲವೆಡೆ ಈ ಗುರ್ಜಿಯನ್ನು ಸಗಣಿಯಿಂದ ಮಾಡಿರುತ್ತಾರೆ.[೨೧] ಸಗಣಿಯಿಂದ ಗುರ್ಜಿಯನ್ನು ಮಾಡುವ ಸಂಪ್ರದಾಯ ಹೆಚ್ಚಾಗಿ ದಕ್ಷಿಣ ಕರ್ನಾಟಕದಲ್ಲಿದೆ. ಲಿಂಗಾಕಾರದ ಸಗಣಿ ಅಥವಾ ಜೇಡಿಮಣ್ಣಿನ ಈ ಶಿಲ್ಪಕ್ಕೆ ಅರಿಷಿಣ, ಕುಂಕಮವಿಟ್ಟು ಕಣಗಿಲ, ಮುತ್ತುಗ, ಮಲ್ಲಿಗೆ ಮುಂತಾದ ಹೂವುಗಳಿಂದ ಅಲಂಕರಿಸಿ ಪೂಜೆ ಮಾಡುತ್ತಾರೆ. ಆಚರಣೆಯ ನಂತರ ಈ ಶಿಲ್ಪವನ್ನು ವಿಸರ್ಜಿಸುತ್ತಾರೆ. ಆದರೆ ವಿಸರ್ಜಣೆಯ ಕಾರ್ಯಕ್ರಮ ವಿಶೇಷತೆಯಿಂದೇನೂ ಕೂಡಿರುವದಿಲ್ಲ. ಹೊಳೆ-ಹಳ್ಳ ಇಲ್ಲವೆ ಬಾವಿಗೆ ಆ ಶಿಲ್ಪವನ್ನು ಎಸೆದುಬಿಡುತ್ತಾರೆ. ಇಲ್ಲವೆ ಮನೆಯ ಮಾಳಿಗೆಯ ಮೇಲೆ ಇಡುತ್ತಾರೆ.

**ಆಚರಣೆ :** ಹಲಗೆ ಅಥವಾ ಹೆಂಚಿನ ಮೇಲೆ ಪ್ರತಿಷ್ಠಾಪಿತವಾಗಿರುವ ಗುರ್ಜಿಯ ಶಿಲ್ಪವನ್ನು ತಲೆಯ ಮೇಲೆ ಹೊತ್ತು ಊರಿನ ಓಣಿ, ಮನೆ-ಮನೆಗಳಿಗೆ ತಿರುಗುತ್ತಾರೆ. ಸುಮಾರು ಎಂಟರಿಂದ ಹತ್ತು ವರ್ಷದ ಒಳಗಿರುವ ಬಾಲಕ ಇಲ್ಲವೆ ಬಾಲಕಿಯರು ಇದನ್ನು ತಲೆಯ ಮೇಲೆ ಹೊತ್ತಿರುತ್ತಾರೆ. ( ಬಾಲಕರೇ ಹೆಚ್ಚಾಗಿ ಹೊರುತ್ತಾರೆ ) ಲಂಗೂಟಿ ಇಲ್ಲವೆ ಛಡ್ಡಿ ಮಾತ್ರವೇ ದರಿಸಿದ್ದು ಬರಿ ಮೈಯಲ್ಲಿ ಇರುತ್ತಾರೆ. ಗುರ್ಜಿಹೊತ್ತ ಬಾಲಕನ ಜೊತೆ ಓಣಿಯ ಹತ್ತಾರು ಹುಡುಗರು-ಹುಡುಗಿಯರು ಜಮಾಯಿಸಿ ಹಿಂಬಾಲಿಸುತ್ತಾರೆ. ಮನೆಯ ಎದುರಿಗೆ ಬಂದ ಗುರ್ಜಿ ಶಿಲ್ಪಕ್ಕೆ ಮನೆಯ ಹೆಂಗಸರು ಹೊರ ಬಂದು ಶಿಲ್ಪದ ಸುತ್ತ ಹೆಂಚಿನ ಮೇಲೆ ನೀರು ಸುರುವುತ್ತಾರೆ.

ಗುರ್ಜಿಯ ಶಿಲ್ಪವನ್ನು ಹೊತ್ತ ಹುಡುಗ ನೀರು ಸುರುವುವಾಗ ತನ್ನ ಸುತ್ತಲೂ ನಾಲ್ಕಾರು ಸುತ್ತು ತಿರುಗುತ್ತಾನೆ. ಈ ದೃಷ್ಯ ಮಕ್ಕಳಿಗೆಲ್ಲ ರಂಜನೀಯವಾಗಿರುತ್ತದೆ. ನಂತರ ಮನೆಯವರು ತಮ್ಮ ಯೋಗ್ಯತಾನುಸಾರ ಬತ್ತ, ರಾಗಿ, ಜೋಳ ಮುಂತಾದವುಗಳನ್ನು ಕಾಣಿಕೆಯಾಗಿ ಕೊಡುತ್ತಾರೆ. ಜೊತೆಗೆ ಬಂದಿರುವ ಹುಡುಗರು ಅದನ್ನು ಸ್ವೀಕರಿಸಿ ಮುಂದಿನ ಮನೆಯತ್ತ ತೆರಳುತ್ತಾರೆ. ಹೀಗೆ ಆಚರಣೆ ಮುಂದುವರೆಯುತ್ತದೆ. ಸಾಮಾನ್ಯವಾಗಿ ಮಳೆ ಬಾರದೆ ಇರುವ ಸಂದರ್ಭದಲ್ಲಿ ಗುರ್ಜಿಯ ಶಿಲ್ಪವನ್ನು ಆಚರಿಸಲಾಗುತ್ತದೆ. ಈ ಶಿಲ್ಪವನ್ನು ರಚಿಸಿ ಆಚರಿಸಲು ಊರಿನ ಹಿರಿಯರು ಹುಡುಗರಿಗೆ ಸೂಚಿಸುತ್ತಾರೆ.

---

೨೦. ಪ್ರೊ. ಹಿ. ಚಿ. ಬೋರಲಿಂಗಯ್ಯ ( ಸಂ ) : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ - ೧೬೪
೨೧. ಡಾ. ಎಚ್.ಜೆ. ಲಕ್ಕಪ್ಪಗೌಡ ( ಸಂ ) : ಸುವರ್ಣ ಜಾನಪದ, ಪುಟ - ೬೫

[illegible]

[illegible]

[illegible]

[illegible]

ಈ ಶಿಲ್ಪದ ಆಚರಣೆ ಸಂಪೂರ್ಣವಾಗಿ ಮಕ್ಕಳ ಕೇಂದ್ರಿತವಾದುದಾಗಿರುತ್ತದೆ. ಗುರ್ಜಿಯ ಮೇಲೆ ನೀರು ಸುರಿಯುತ್ತಿರುವಾಗ ಮಕ್ಕಳು ಹಾಡು ಹೇಳುತ್ತಾರೆ. ಇದನ್ನು ಗುರ್ಜಿ ಹಾಡು ಎಂದು ಕರೆಯುತ್ತಾರೆ.

ಗುರ್ಜಿ ಗುರ್ಜಿ ಎಲ್ಯಾಡಿ ಬಂದಿ
ಹಳ್ಳ-ಕೊಳ್ಳ ತಿರುಗಾಡಿ ಬಂದೆ,
ಕಾರ ಮಳೆಯೆ ಕಪ್ಪತ ಮಳೆಯೆ
ಸುರಿ ಮಳೆಯೇ ಸುರಿ ಮಳೆಯೇ [೨೨]

ಹೀಗೆ ಹಾಡು ಹೇಳುತ್ತಾ ಗುರ್ಜಿಶಿಲ್ಪದ ಆಚರಣೆ ಮಾಡುತ್ತಾ ಊರೆಲ್ಲ ಅಡ್ಡಾಡಿ ಬಂದ ಮೇಲೆ ಮಳೆ ಬರಲೆಂದು ಆ ಗುರ್ಜಿಯ ಶಿಲ್ಪವನ್ನು ಪೂಜೆ ಮಾಡಿ ಬೇಡಿಕೊಳ್ಳುತ್ತಾರೆ. ಅನಂತರ ಆ ಶಿಲ್ಪವನ್ನು ಹೊತ್ತ ಹುಡುಗರು ಅಂದು ಮನೆಯಲ್ಲಿ ಹಬ್ಬದೂಟ ಮಾಡಿ ಗುರ್ಜಿಗೂ ನೈವೇದ್ಯ ಸಲ್ಲಿಸಿ ಗುರ್ಜಿಯ ಶಿಲ್ಪವನ್ನು ಜಲಾಶಯಕ್ಕೆ ಒಯ್ದು ವಿಸರ್ಜಿಸಿ ಬರುತ್ತಾರೆ. ಹೀಗೆ ಗುರ್ಜಿಯನ್ನು ಪೂಜಿಸಿ ಆಚರಿಸುವದರಿಂದ ಮಳೆ ಬಂದೇ ಬರುತ್ತದೆಂಬ ನಂಬಿಕೆ ಜನಪದರಲ್ಲಿದೆ.

ಹಳ್ಳಿಗಳಲ್ಲಿ ಮಳೆ ಬರದಿರುವಾಗ ಮಳೆಯನ್ನು ಬೇಡಿ ಆಚರಿಸಲಾಗುವ ಈ ಗುರ್ಜಿ ಯಾರು ? ಹೆಸರು ಹೇಗೆ ಬಂದಿರಬಹುದು ? ಅದನ್ನು ಸತ್ಕಾರದಿಂದ ಬರ ಮಾಡಿಕೊಂಡು ಪೂಜಿಸುವದು ಏಕೆ ? ಇತ್ಯಾದಿ ಪ್ರಶ್ನೆಗಳ ಮೇಲೆ ಡಾ. ಬಿ.ಎಸ್. ಗದ್ದಿಗಿಮಠರು ಬೆಳಕು ಚೆಲ್ಲುತ್ತಾರೆ. [೨೩] ಅವರ ಪ್ರಕಾರ ಹಾಡುಗಳಲ್ಲಿ ವ್ಯಕ್ತವಾದಂತೆ ೧. ಗುರ್ಜಿಯು ಕರೆಗಂಬಳಿ ಗುರುಸಿದ್ಧ ಎಂಬ ಪುಣ್ಯಪುರುಷನ ಸ್ಮಾರಕವು ೨. ಈ ಪುಣ್ಯ ಪುರುಷನು ಮುಗ್ಧ ಪಾವನ ಪುರುಷನಲ್ಲದೆ ಅವನ ಪೂಜ್ಯತೆಗೆ ನಿಸರ್ಗವೇ ತಲೆ ಬಾಗುತ್ತ ಬಂದಿದೆ ೩. ಇವನ ಕಾಲದಲ್ಲಿ ಒಮ್ಮೆ ದೊಡ್ಡ ಅನಾವೃಷ್ಟಿ ತಲೆದೋರಿದಾಗ ಅವನ ಪೂಜ್ಯತೆಯನ್ನು ಮನಗಂಡ ಜನರು ಮಳೆ ಕೊಡು ಎಂದು ಭಕ್ತಿಯಿಂದ ಕೇಳಿಕೊಂಡಿದ್ದಾರೆ ೪. ಈ ಶಿವ ಶರಣನು ಜನರ ಗೋಳನ್ನು ನೋಡಿ ತಾನು ಹೊತ್ತ ಕರೆಗಂಬಳಿಯನ್ನು ಬೀಸಲು ಮೋಡವಿಲ್ಲದ ಮುಗಿಲು ಕೂಡಲೇ ಮಳೆ ಸುರಿಸಲು ನಾಡೆಲ್ಲ ಬೆಳಸಾಯಿತು.

ಗುರ್ಜಿಯ ಶಿಲ್ಪ ಹಾಗೂ ಆಚರಣೆಯನ್ನು ನೋಡಿದರೆ ಆ ಪುಣ್ಯಪುರುಷನ ಚಿತ್ರವನ್ನು ಸಹಜವಾಗಿಯೇ ಕಲ್ಪಿಸಿಕೊಳ್ಳಬಹುದು. ಗುರ್ಜಿಯ ನೆತ್ತಿಯ ಮೇಲೆ ಕರಿಕೆಯ ಪತ್ರಿಯನ್ನು ಚುಚ್ಚುತ್ತಾರೆ. ಈ ಪತ್ರಿಯು ಪುಣ್ಯಪುರುಷನ ಪೂಜ್ಯತೆಯನ್ನು ತೋರಿಸುವದು. ಲಿಂಗದಾಕೃತಿಯ ಗುರ್ಜಿಶಿಲ್ಪವು ಆತನು ವೀರಶೈವನಿರಬಹುದೆಂದು ಸೂಚಿಸುವದು. ಬೋರಲು ಹಾಕಿದ ಹೆಂಚು ಆ ಪುಣ್ಯಪುರುಷನು ಶಿವ ಪೂಜೆಯ ಕಾಲಕ್ಕೆ ಹಾಸಿಕೊಳ್ಳುವ ಕರೆಗಂಬಳಿಯ ಗದ್ದುಗೆಯನ್ನು ಸೂಚಿಸುವದು. ಲಂಗೂಟಿ ಹಾಕಿ ಬೆತ್ತಲೆಯಾಗಿ ಗುರ್ಜಿ ಹೊರುವ ಹುಡುಗರು ಕೋಪಣದರಿಸುವ ವಿರಕ್ತ ಮೂರ್ತಿಯನ್ನು ಚಿತ್ರಿಸುವದು. ಮಕ್ಕಳು ಇದನ್ನು ಹೊರುವದರಿಂದ ಆತನ ಮುಗ್ಧ ಭಕ್ತಿಯನ್ನು ಸೂಚಿಸುತ್ತದೆ. ಈ ಎಲ್ಲ ಹೋಲಿಕೆಗಳಿಂದ

---

೨೨. ಡಾ. ಬಿ. ಎಸ್. ಗದ್ದಿಗಿಮಠ : ಕನ್ನಡ ಜಾನಪದ ಗೀತಗಳು, ಪುಟ - ೧೬೪
೨೩. ..... ಅದೇ .....      ಪುಟ - ೧೬೬

[illegible]

ಗುರ್ಜಿಯೆಂಬುದು ಆ ಪುಣ್ಯಪುರುಷನ ಮೂರ್ತಿಯೆಂದು ಹೇಳಲು ಅವಕಾಶವಿದೆ. ಹಳ್ಳಿಗಳಲ್ಲಿ ಈಗಲೂ ಜನರು ಗುರುಸಿದ್ಧನೆಂದು ಹೆಸರಿಡುತ್ತಾರೆ. ಪ್ರೀತಿಯಿಂದ ಅವನನ್ನೇ ಗುರ್ಸೀಯೆಂದು ಕರೆಯುವರು. ಹೀಗೆ ಆ ಗುರುಸಿದ್ಧ - ಗುರ್ಜಿಯಾಗಿದೆ. ಜನರು ಆ ವಿರಕ್ತನ ಸ್ಮಾರಕವನ್ನು ಮಾಡುತ್ತ ಬಂದಿರಬೇಕು. ಮಳೆ ಹೋದಾಗ ಜನರು ಅವನನ್ನು ಪೂಜಿಸಲು ತೊಡಗಿ ಲಿಂಗದಾಕಾರದ ಗುರ್ಜಿಶಿಲ್ಪವನ್ನು ಮಾಡಿ ಮಳೆ, ಬೆಳೆ, ಶಕುನವನ್ನು ಕೇಳುತ್ತಿದ್ದಾರಲ್ಲದೇ, ಹೊತ್ತು ಮನೆ-ಮನೆ ಅಡ್ಡಾಡುತ್ತ ಮಳೆ ಕೊಡು ಎಂದು ಕೇಳುವರು. ಗುರ್ಜಿ ಶಿಲ್ಪದ ಹುಟ್ಟು ಹೇಗೇ ಇರಲಿ ಕೆಸರಿನ ಲಿಂಗದಾಕೃತಿ, ಅದರ ಮೇಲೆ ಚುಚ್ಚಲಾಗಿರುವ ಹುಲ್ಲುಗರಿಕೆ, ಬೋರಲಾಗಿ ಕೆಳಮುಖವಾಗಿರುವ ಹೆಂಚು ಮತ್ತು ಅದರ ಮೇಲಿನಿಂದ ಸುರಿಯಲ್ಪಟ್ಟ ನೀರು ಹನಿ ಹನಿಯಾಗಿ ಕೆಳಗೆ ಬೀಳುವುದು ಮತ್ತು ಆ ಶಿಲ್ಪವನ್ನು ಹೊತ್ತ ಬಾಲಕ ನೀರಲ್ಲಿ ತೊಯ್ದಿರುವುದು ಅಲ್ಲದೆ ನೀರು ಸುರಿಯುವಾಗ ತನ್ನ ಸುತ್ತಲೂ ತಿರುಗುವದು ಎಲ್ಲವೂ ಭೂಮಿಯ ಮೇಲಿನ ಸಮೃದ್ಧಿಗೆ ಕಾರಣವಾಗುವ ಮಳೆಯ ಆಶಯದ ಹಿನ್ನೆಲೆಯಲ್ಲಿಯೇ ರೂಪುಗೊಂಡಿರುವುದನ್ನು ಸಂಕೇತಿಸುತ್ತವೆ.

ಅನಾವೃಷ್ಟಿಯಿಂದ ಕಂಗಾಲಾಗಿ ಆಕಾಶವನ್ನೇ ನಿರೀಕ್ಷಿಸುತ್ತಿರುವ ರೈತ ಗುರ್ಜಿ ಶಿಲ್ಪದ ಆಚರಣೆಯಲ್ಲಿ ಅದನ್ನು ಕಂಡು ಎಲ್ಲವೂ ನೀರುಮಯವಾದಂತೆ, ಆ ಹೊತ್ತು ಮಳೆ ಬಂದಂತೆ ಅಥವಾ ನಿರೀಕ್ಷೆ ಹುಸಿಯಾಗದು ಎಂಬಂತಹ ನಿರೀಕ್ಷೆಯಲ್ಲಿ ಮತ್ತೆ ಜೀವನೋತ್ಸಾಹವನ್ನು ತನ್ನಲ್ಲಿ ತುಂಬಿಕೊಳ್ಳುತ್ತಾನೆ. ಮಳೆಯ ಆಶಯದ ಹಿನ್ನೆಲೆಯಲ್ಲಿ ಆಚರಿಸಲ್ಪಡುವ ಈ ಶಿಲ್ಪ ದೊಡ್ಡವರಿಂದಲೇ ನಿರ್ದೇಶಿಸಲ್ಪಟ್ಟರೂ ಮಕ್ಕಳ ಕೇಂದ್ರಿತವಾಗಿಯೇ ಆಚರಿಸಲ್ಪಡುತ್ತದೆ. ಮನೆ ಮನೆಗೂ ಈ ಶಿಲ್ಪವನ್ನು ಹೊತ್ತೊಯ್ಯುವ ಮಕ್ಕಳ ತಂಡ ವಿಶೇಷ ಸಂತಸವನ್ನು ಅನುಭವಿಸುತ್ತದೆ. ಶಿಲ್ಪಕ್ಕೆ ನೀರು ಹೊಯ್ಯುವಾಗ ಆ ಶಿಲ್ಪ ಹೊತ್ತ ಬಾಲಕ ಸುತ್ತ ತಿರುಗುವಾಗ, ಇನ್ನುಳಿದ ಮಕ್ಕಳೆಲ್ಲ ತದೇಕ ಚಿತ್ತದಿಂದ ನೋಡುತ್ತ ಆ ದೃಶ್ಯಾನುಭವದಲ್ಲಿ ಆನಂದವನ್ನು ಹೊಂದುತ್ತಾರೆ.

## ೧.೨ ಮಣ್ಣಿನ ಮಾಧ್ಯಮದ ಸ್ತ್ರೀ ದೇವತಾ ಶಿಲ್ಪಗಳು

ಜನಪದರಿಗೆ ಹೆಣ್ಣು ಮಹತ್ವದ ವ್ಯಕ್ತಿಯಾಗಿದ್ದಾಳೆ. ಅವರು ನಿಸರ್ಗದ ಅನೇಕ ವಸ್ತುಗಳಿಗೆ ಹೆಣ್ತನವನ್ನು ಆರೋಪಿಸಿ ಅವುಗಳಲ್ಲಿ ತಾಯ್ತನವನ್ನು, ಕುರುಹೆಯನ್ನು ಕಂಡವರು. ಹೀಗಾಗಿ ಅನೇಕ ತರಹದ ರೋಗ ರುಜಿನಗಳ ನಿವಾರಕ ದೇವತೆಯಾಗಿ, ಅಲ್ಲದೆ ನಿಸರ್ಗದ ನದಿ, ಭೂಮಿ, ನೀರು, ಏನೆಲ್ಲವೂ ದೇವತೆಗಳಾಗಿ ರೂಪುಗೊಂಡಿವೆ. ಅಂಥವುಗಳಲ್ಲಿ ಕೆಲವು ಶಿಲ್ಪರೂಪ ತಳೆದು ಆಚರಿಸಲ್ಪಟ್ಟರೆ, ಇನ್ನೂ ಕೆಲವೊಮ್ಮೆ ಸ್ತ್ರೀಯರೇ ತಮ್ಮ ಭಕ್ತಿ, ಆದರ್ಶ ಇತ್ಯಾದಿ ಗುಣಗಳಿಂದ ಐತಿಹಾಸಿಕ ಮಹತ್ವವನ್ನು ಧಾರ್ಮಿಕ ಹಿನ್ನೆಲೆಯಲ್ಲಿ ಪಡೆದವರು ಜನಪದರ ದೃಷ್ಟಿಯಲ್ಲಿ ದೇವರುಗಳಾಗಿ ಶಿಲ್ಪರೂಪ ತಳೆದು ಪೂಜಿಸಲ್ಪಡುತ್ತಿರುವದು ಕುತೂಹಲದ ಸಂಗತಿಯಾಗಿ ನಮ್ಮ ಕಣ್ಣೆದುರಿಗೆ ಇದೆ. ಇಂಥ ಸ್ತ್ರೀ ದೇವತೆಗಳಲ್ಲಿ ಕೆಲವು ಕ್ಷುದ್ರ ದೇವತೆಗಳಾಗಿದ್ದರೆ, ಕೆಲವು ಆದರ್ಶಕ್ಕೆ, ಪಾವಿತ್ರ್ಯಕ್ಕೆ, ಸಂಪತ್ತಿಗೆ, ಅಮಂಗಳ ನಿವಾರಣೆಗೆ ಹೆಸರಾಗಿವೆ. ಮತ್ತೆ ಕೆಲವು ದೇವತೆಗಳು ಕಾಯಿಲೆ ನಿವಾರಣೆಯ ದೇವತೆಗಳಾಗಿ ಗಮನ ಸೆಳೆಯುತ್ತವೆ.

ಪ್ರಸ್ತುತ ಮಣ್ಣಿನ ಮಾಧ್ಯಮದ ಸ್ತ್ರೀ ದೇವತಾ ಶಿಲ್ಪಗಳಲ್ಲಿ ಅ. ಗುಳ್ಳವ್ವನ ಶಿಲ್ಪಗಳು ಆ. ಶಿವಭಕ್ತೆ ಚೆಂಗಳೆಯ ಶಿಲ್ಪಗಳು ಇ. ಸೀಗಮ್ಮನ ಶಿಲ್ಪಗಳು ಈ. ಗಜಲಕ್ಷ್ಮೀ ಶಿಲ್ಪಗಳು ಉ. ಅಮ್ಮನ ಶಿಲ್ಪಗಳು ಪ್ರಮುಖವಾಗಿ ಗಮನ ಸೆಳೆಯುತ್ತವೆ.

### ಅ. ಗುಳ್ಳವ್ವನ ಶಿಲ್ಪಗಳು

ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಆಚರಣೆಗೆ ಒಳಪಡುವ ಗುಳ್ಳವ್ವ ಒಂದು ಸ್ತ್ರೀ ದೇವತಾ ಶಿಲ್ಪ ಹೆಣ್ಣು ಮಕ್ಕಳೇ ವಿಶೇಷವಾಗಿ ಆರಾಧಿಸುವ ದೇವತೆ. ಈ ಗುಳ್ಳವ್ವ ಶಿಲ್ಪವನ್ನು ಸಾಮಾನ್ಯವಾಗಿ ಆರಾಧಿಸುವ ಜನರು ಶೂದ್ರರಾಗಿರುತ್ತಾರೆ.[೨೪] ಎಂಬ ಅಭಿಪ್ರಾಯವನ್ನು ಡಾ. ಹಿ.ಚಿ. ಬೋರಲಿಂಗಯ್ಯ ನೀಡುತ್ತಾರೆ. ಆದರೆ ಉತ್ತರ ಕರ್ನಾಟಕದುದ್ದಕ್ಕೂ ಎಲ್ಲ ಜನಾಂಗದವರು ಈ ಗುಳ್ಳವ್ವನ ಆಚರಣೆಯಲ್ಲಿ ಭಾಗವಹಿಸುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಆಷಾಡ ಮಾಸದಲ್ಲಿ ಬರುವ ಪ್ರತಿಯೊಂದು ಮಂಗಳವಾರ ಗುಳ್ಳವ್ವನ ಆಚರಣೆಯ ದಿನಗಳಾಗಿವೆ. ಗುಳ್ಳವ್ವನದು ಉತ್ತರ ಕರ್ನಾಟಕದ ವಿಶಿಷ್ಟ ಹಬ್ಬವಾಗಿದೆ. ಈ ಹಬ್ಬ ಮಣ್ಣೆತ್ತಿನ ಅಮವಾಸ್ಯೆ ಮತ್ತು ನಾಗರ ಅಮವಾಸ್ಯೆಗಳ ನಡುವಿನ ಕೊಂಡಿಯಾಗಿದೆ.

ಮಣ್ಣೆತ್ತಿನ ಅಮವಾಸ್ಯೆಯ ನಂತರ ಬರುವ ಪ್ರತಿಯೊಂದು ಮಂಗಳವಾರ ಬಾಲ ಮುತ್ತೈದೆಯರು, ಮುತ್ತೈದೆಯರು ಗುಂಪು ಗುಂಪಾಗಿ ಊರ ಮುಂದಿರುವ ಹೊಳೆ, ಹಳ್ಳ, ಕೆರೆ ಅಥವಾ ಹೊಲಗಳಿಗೆ ಹೋಗಿ ಮಣ್ಣನ್ನು ಕಡೆದು ನೀರು ಬೆರೆಸಿ ಹದಮಾಡಿ ಉಂಡೆಯಾಕಾರ ಮಾಡಿಕೊಂಡು ಅದಕ್ಕೆ ಜಾಲಿ ಹೂ, ಗುಲಗಂಜಿ ಇಲ್ಲವೆ ಕುಸುಬಿಯ ಕಾಳನ್ನು ಚುಚ್ಚಿ ಸಿಂಗರಿಸಿ ಪೂಜೆ ಮಾಡುತ್ತಾರೆ. ನಂತರ ಒಂದು ಬುಟ್ಟಿಯಲ್ಲಿ ಈ ಕೆಸರಿನುಂಡೆಯನ್ನು ಇಟ್ಟುಕೊಂಡು ಹಾಡು ಹೇಳುತ್ತಾ ಮನೆಗೆ ಬರುತ್ತಾರೆ. ಬಿಜಾಪೂರ ಮತ್ತು ಬಾಗಲಕೋಟೆಯ ಜಿಲ್ಲೆಗಳ ಪ್ರದೇಶಗಳಲ್ಲಿ ಈ ಪದ್ದತಿಯಿದ್ದರೆ, ಬೆಳಗಾವಿ ಜಿಲ್ಲೆಯ ಕಡೆ ಈ ಪದ್ದತಿಯಲ್ಲಿ ಸ್ವಲ್ಪ ಭಿನ್ನತೆಯನ್ನು ಕಾಣಬಹುದು. ಅರಲಿನ ಉಂಡೆಗಳನ್ನು ಮಾಡಿ ಅವನ್ನು ಒಂದರ ಮೇಲೊಂದರಂತೆ ಪೇರಿಸುತ್ತಾರೆ. ಮೇಲಿನ ಉಂಡೆಗೆ ಕಿವಿ, ಮೂಗು, ಬಾಯಿ, ಕಣ್ಣು ಕೊರೆದು ಹೆಣ್ಣಿನ ಮುಖದ ಆಕೃತಿ ಮಾಡುತ್ತಾರೆ. ಇದನ್ನು ತಲೆಯ ಮೇಲೆ ಹೊತ್ತು ಹೆಂಗಸರೆಲ್ಲ ಮನೆಗೆ ಬರುತ್ತಾರೆ. ಕೋಲಾಟ ಆಡುತ್ತ ಹಾಡುಗಳನ್ನು ಹೇಳುತ್ತ ಬರುವರು. ಇದಕ್ಕೆ ಗುಳ್ಳವ್ವನ ಮಣ್ಣು ತರುವುದೆಂದು ಹೇಳುತ್ತಾರೆ.

ಹೀಗೆ ಗುಳ್ಳವ್ವನ ಮಣ್ಣು ಹೊತ್ತು ಊರ ಹತ್ತಿರ ಬರುತ್ತಿದ್ದಂತೆ ಗುಳ್ಳವ್ವನ ರುಂಡ ಕಡೆಯಲು ಹೊಂಚುಹಾಕಿ ಕುಳಿತಿದ್ದ ತಳವಾರ ಇಲ್ಲವೆ ಹರಿಜನ ಹುಡುಗರು ದಾರಿಗಡ್ಡವಾಗಿ ನಿಲ್ಲುತ್ತಾರೆ. ಗುಳ್ಳವ್ವನ ತಲೆ ಕಡಿಯಬೇಡಿರೆಂದು ಹೆಂಗಳೆಯರು ಕೇಳಿಕೊಳ್ಳುತ್ತಾರೆ. ಈ ಗದ್ದಲದಲ್ಲಿ ಆಕಸ್ಮಾತ್ತಾಗಿ ಗುಳ್ಳವ್ವನ ತಲೆ ಕತ್ತರಿಸಲ್ಪಟ್ಟರೆ ಆ ಗುಳ್ಳವ್ವನನ್ನು ಹೊತ್ತ ಹುಡುಗಿಯರ ಮನೆಯಲ್ಲಿ ಮೂರು ವರ್ಷದ ವರೆಗೆ

---

೨೪. ಡಾ. ವಿರೇಶ ಬಡಿಗೇರ : ಗುಳ್ಳವ್ವ ; ಆಚರಣೆ - ವಿಶ್ಲೇಷಣೆ, ಹಿ. ಚಿ. ಬೋರಲಿಂಗಯ್ಯ ಅವರ ಮುನ್ನುಡಿ.

ನವಿಲಿನ ಗುಳ್ಳವ್ವನನ್ನು ಮಾಡುತ್ತಾರೆ. ಇಲ್ಲಿ ಗುಳ್ಳವ್ವನ ಮನುಷ್ಯಾಕಾರದ ಶಿಲ್ಪವಿರುವದಿಲ್ಲ. ಮಾಡದ ರೂಪವೇ ಗುಳ್ಳವ್ವ ಆಗಿರುತ್ತದೆ. ಅದಕ್ಕೆ ಅಪ್ತಾಗಿರಿ, ಛತ್ರಿಗಳನ್ನು ಮಾಡಿ ಚುಚ್ಚಲಾಗಿರುತ್ತದೆ. ನವಿಲಿನ ಗುಳ್ಳವ್ವ ಮಾಡಿದ್ದರೆ ಅದರ ಬಾಯಲ್ಲಿ ತಿದಿಗೆ ಅರಲಿನ ಸಣ್ಣ ಉಂಡೆಯನ್ನು ಜೋತು ಬಿಟ್ಟಿರುತ್ತಾರೆ. ನಾಲ್ಕನೆಯ ಮಂಗಳವಾರ ಗಾಲಿ ಗುಳ್ಳವ್ವ ಶಿಲ್ಪವನ್ನು ಮಾಡುತ್ತಾರೆ. ಪಡಕದ ಗುಳ್ಳವ್ವನಂತೆ ಚಕ್ಕಳಿ ಮಾಡಿ ಲಗೋರಿಯಂತೆ ಪೇರಿಸಿರುತ್ತಾರೆ. ಅರಲಿನ ಗಾಲಿಗಳನ್ನು ಮಾಡಿ ತೇರಿನಂತೆ ಉರುಳುವ ವ್ಯವಸ್ಥೆ ಮಾಡಿರುತ್ತಾರೆ. ಇದಕ್ಕೂ ಛತ್ರ, ಚಾಮರ ಮಾಡಿರುತ್ತಾರೆ. ಒಂದು ವಿಶೇಷವೇನೆಂದರೆ ಇದಕ್ಕೆ ಸೀರೆ ಉಡಿಸಿ ಕೊರಳಲ್ಲಿ ಸರ ಹಾಕಿರುತ್ತಾರೆ.

ಐದನೆಯ ಮಂಗಳವಾರದ ಗುಳ್ಳವ್ವ ಕ್ವಚಿತ್ತಾಗಿ ಬರುವಂತಹದು. ಈ ಗುಳ್ಳವ್ವನಿಗೆ ತಿರುಗಿ ಮತ್ತೆ ಕೊಂತಿ ಗುಳ್ಳವ್ವನನ್ನು ಮಾಡುತ್ತಾರೆ. ಅಥವಾ ಕುಂಬಾರ ಗುಳ್ಳವ್ವನನ್ನು ತಂದಿರುತ್ತಾರೆ. ಕುಂಬಾರರು ಈ ದಿನಗಳಲ್ಲಿ ಗುಳ್ಳವ್ವ, ಬಸವಣ್ಣಗಳನ್ನು ಬುಟ್ಟಿಯಲ್ಲಿಟ್ಟು ಊರಲ್ಲಿ ಮಾರಾಟ ಮಾಡುತ್ತಾರೆ. ಕುಂಬಾರರು ತಯಾರಿಸುವ ಇದಕ್ಕೆ ತಿಗರಿ ಗುಳ್ಳವ ಅಥವಾ ಕುಂಬಾರ ಗುಳ್ಳವ್ವ ಎಂದೂ ಕರೆಯುತ್ತಾರೆ. [೨೬]

ಈ ರೀತಿ ಕ್ರಮವಾಗಿ ಮೊದಲ ವಾರ ಕಂಬದ ಗುಳ್ಳವ್ವ, ಎರಡನೆ ವಾರ ಪಡಕದ ಗುಳ್ಳವ್ವ, ಮೂರನೇ ವಾರ ಮಾಡದ ಅಥವಾ ನವಿಲಿನಾಕಾರದ ಗುಳ್ಳವ್ವ, ನಾಲ್ಕನೇ ವಾರ ಗಾಲಿ ಗುಳ್ಳವ್ವ, ಐದನೇ ವಾರ ಕೊಂತಿ ಗುಳ್ಳವ್ವ ಅಥವಾ ಕುಂಬಾರ ಗುಳ್ಳವ್ವನನ್ನು ಕುಳ್ಳಿರಿಸುವ ಪದ್ಧತಿಯಿದೆ.

ಬೆಳಗಾವಿ ಜಿಲ್ಲೆಯ ಪ್ರದೇಶಗಳಲ್ಲಿ ಗುಳ್ಳವ ಶಿಲ್ಪದ ನಿರ್ಮಾಣ ಪದ್ಧತಿ ಇನ್ನೂ ವಿಶೇಷವಾಗಿದೆ. ಹೊಲದಿಂದ ತಂದ ಮಣ್ಣನ್ನು ಹದಮಾಡಿ ಕೆಸರಿನ ಕಂಬಗಳನ್ನು ನಿರ್ಮಿಸಿ ಮಂಟಪವನ್ನು ಹಾಕುತ್ತಾರೆ. ಅದಕ್ಕೆ ಕೋಟೆಯ ನಿರ್ಮಿತಿ [೨೭] ಎನ್ನುತ್ತಾರೆ.

**ಕೋಟೆಯ ನಿರ್ಮಿತಿ :** ಕೋಟೆ ನಿರ್ಮಿಸುವ ಮೊದಲನೆಯ ದಿನ ನೆಲವನ್ನು ಗುಡಿಸಿ ಸಾರಿಸಿರುತ್ತಾರೆ. ಅಲ್ಲಿ ದೊಡ್ಡದಾದ ಮಣೆಯೊಂದನ್ನು ಇಟ್ಟು ಅದರ ಅಧ್ಯದಲ್ಲಿ ಕೋಟೆಯ ಬಾಗಿಲನ್ನು ನಿಲ್ಲಿಸಿರುತ್ತಾರೆ. ಬಾಗಿಲಿನ ಎರಡೂ ಅಂಚಿಗೆ ಮಣ್ಣಿನ ಕಂಬಗಳನ್ನು ಅವು ಕೋಟೆಯ ಕಟ್ಟಿಗೆಯ ಬಾಗಿಲಿನಿಂದ ಬೇರ್ಪಡದಂತೆ ಬಿಗಿಯಾಗಿ ಕಟ್ಟಿರುತ್ತಾರೆ. ಬಾಗಿಲ ಮುಂದೆ ಮಣ್ಣಿನ ಹತ್ತು ಮೆಟ್ಟಿಲುಗಳನ್ನು ಮಾಡಿರುತ್ತಾರೆ. ಬಾಗಿಲಿನಲ್ಲಿ ಸ್ವಲ್ಪ ಎತ್ತರದಲ್ಲಿ ಮಣ್ಣಿನ ನಂದಿಯ ಶಿಲ್ಪವನ್ನು ಪ್ರತಿಷ್ಠಾಪಿಸಿರುತ್ತಾರೆ. ಈ ಪದ್ಧತಿಯನ್ನು ಪ್ರತಿ ಮಂಗಳವಾರ ಅನುಸರಿಸುತ್ತಾರೆ. ಒಂದನೇ ಮಂಗಳವಾರ ಒಂದೆತ್ತರ ಎರಡನೇ ಮಂಗಳವಾರ ಎರಡೆತ್ತರ ಹೀಗೆ ಐದನೇ ಮಂಗಳವಾರ ಐದೆತ್ತರದ ಬದಲಾಗಿ ದೇವರ ಭಾವಚಿತ್ರವೊಂದನ್ನು ಮಾತ್ರ ನಿಲ್ಲಿಸಿರುತ್ತಾರೆ. ಇದು ಸಾರ್ವಜನಿಕವಾಗಿ ಹಬ್ಬದ ವಾತಾವರಣವನ್ನು

---

೨೬. ಡಾ. ವಿರೇಶ ಬಡಿಗೇರ : ಗುಳ್ಳವ್ವ ; ಆಚರಣೆ - ವಿಶ್ಲೇಷಣೆ, ಪುಟ -೧೨

೨೭. ..... ಅದೇ .....

ನಿರ್ಮಿಸುವಂತಾಗಿರುತ್ತದೆ. ಎರಡೆತ್ತರ ಗುಳ್ಳವ್ವನನ್ನು ಹಾಕುವಾಗ ದ್ವಾರ ಬಾಗಿಲದ ಮೇಲೆ ಮಣೆಯನ್ನಿಟ್ಟು ಅದರ ಮೇಲೆ ಕೋಟೆ ಬಾಗಿಲನ್ನು ಇಟ್ಟು ಮಣ್ಣಿನ ಕಂಬಗಳನ್ನು ಜೋಡಿಸಿರುತ್ತಾರೆ. ಒಂದನೇ ಬಾಗಿಲದ ಸಮಾಂತರಕ್ಕೆ ಹಿಂದೆ ಒಂದು ಡಬ್ಬಿ ಅಥವಾ ಇನ್ನಿತರ ವಸ್ತುವನ್ನು ಆಸರೆಯಾಗಿ ಇಟ್ಟಿರುತ್ತಾರೆ. ಇದೇ ರೀತಿಯಾಗಿ ಮುಂದಿನ ಮೂರು, ನಾಲ್ಕು, ಐದನೇ ಗುಳ್ಳವ್ವಗಳಿಗೂ ಜೋಡಿಸಿರುತ್ತಾರೆ. ನಾಲ್ಕು ವಾರದ ಕೊನೆಯಲ್ಲಿ ಈ ಕೋಟೆಯ ಒಟ್ಟು ಎತ್ತರ ಸುಮಾರು ಐದು ಅಡಿಗಳಷ್ಟಾಗಿರುತ್ತದೆ. ಆನಿಕೆಯನ್ನು ಕೊಡುವಾಗ ತುಂಬ ಜಾಗ್ರತೆ ವಹಿಸುತ್ತಾರೆ. ಕಾರಣ ಆನಿಕೆಗಳಿಗೆ ಸ್ವಲ್ಪ ದಕ್ಕೆ ತಗುಲಿದರೆ ಗೋಪುರಾಕೃತಿಯ ಗುಳ್ಳವ್ವನ ಇಡೀ ಕೋಟೆ ಬೀಳುವ ಸಂಭವವಿರುತ್ತದೆ. ರಾಮದುರ್ಗ ಮುಂತಾದ ಕಡೆಗೆ ಕೋಟೆಯ ಹಾಗಿರುವ ಗುಳ್ಳವ್ವನ ರಚನೆ, ಆಚರಣೆ ವಿಶೇಷವಾಗಿ ಕಂಡುಬರುತ್ತದೆ. [೨೮]

**ಗುಳ್ಳವ್ವನ ಶಿಲ್ಪದ ಅಲಂಕಾರ :** ಗುಳ್ಳವ್ವನ ಶಿಲ್ಪಕ್ಕೆ ಅಲಂಕಾರ ಮಾಡುವುದೆಂದರೆ ಹೆಣ್ಣು ಮಕ್ಕಳಿಗೆ ಎಲ್ಲಿಲ್ಲದ ಖುಷಿ. ಮಕ್ಕಳಿಗೆ ಶೃಂಗಾರ ಮಾಡಿದಂತೆ. ಗುಳ್ಳವ್ವನ ತಲೆ, ಮೈಗೆಲ್ಲ ಗುಲಗಂಜಿ, ಕುಸುಬಿ ಕಾಳುಗಳನ್ನು ಸಾಲು ಸಾಲಾಗಿ ಚುಚ್ಚಿರುತ್ತಾರೆ. ಕಣ್ಣಿಗೆ ಕಣ್ಣು ಗುಡ್ಡೆಯಂತೆ ಗುಲಗಂಜಿಯ ಕಪ್ಪನ್ನು ಮುಂದೆ ಮಾಡಿ ಚುಚ್ಚಿರುತ್ತಾರೆ. ಮೂಗಿಗೆ ನತ್ತಿನಂತೆ ಕುಸುಬಿಯನ್ನು, ಗುಲಗಂಜಿಯನ್ನು ಹಚ್ಚಿರುತ್ತಾರೆ. ಹಣೆಗೆ ಕುಂಕುಮದ ತಿಲಕವನ್ನಿಟ್ಟಿರುತ್ತಾರೆ. ಕೊರಳಿಗೆ ತಾಳಿಯನ್ನು ಕಟ್ಟಿರುತ್ತಾರೆ. ಅಲ್ಲದೆ ಅರಲಿನಿಂದಲೇ ಆಭರಣ ಮಾಡಿ ಕೊರಳಲ್ಲಿ ಹಾಕಿರುತ್ತಾರೆ. ಹುಡುಗರು ಬಸವಣ್ಣನಿಗೆ ಗೆಜ್ಜೆಸರ, ಕೊಂಬಣಸು, ಹಣೆಕಟ್ಟುಗಳನ್ನು ಮಾಡಿರುತ್ತಾರೆ. ಹಾಗೇ ಹುಡುಗಿಯರು ಗುಳ್ಳವ್ವನ ಕೊರಳಸರ, ತುರುಬಿನ ಆಭರಣಗಳನ್ನು ಅರಲಿನಿಂದಲೇ ಮಾಡಿರುತ್ತಾರೆ.

ಬೆಳಗಾವಿ ಜಿಲ್ಲೆಯಲ್ಲಿ ಗುಳ್ಳವ್ವನ ವಿಶೇಷವಾದ ಅಲಂಕಾರಗಳು ಕಂಡುಬರುತ್ತವೆ. [೨೯] ಮಣ್ಣಿನ ಕಂಬಗಳ ಎರಡೂ ಬದಿಗೆ ಕುಸುಬಿಯನ್ನು ಎರಡೆರಡು ಸಾಲು ಚುಚ್ಚಿರುತ್ತಾರೆ. ನಡುವೆ ಗುಲಗಂಜಿಗಳನ್ನು ಹಚ್ಚಿರುತ್ತಾರೆ. ಅಕ್ಕಿ, ಬೇಳೆ, ಜೋಳಗಳನ್ನು ಸಹ ಹಚ್ಚಿರುತ್ತಾರೆ. ಗೋಲಾಕಾರದ ಕಂಬಗಳಿಗೆ ಬಣ್ಣದ ಹಾಳೆಗಳಿಂದ ವಿವಿಧ ನಮೂನೆಯ ಚಿತ್ತಾರಗಳನ್ನು ಕತ್ತರಿಸಿ ಹಚ್ಚಿರುತ್ತಾರೆ. ಗುಳಾವುಗಳನ್ನು ಜೋತು ಬಿಟ್ಟಿರುತ್ತಾರೆ. ಈ ಗುಳಾವುಗಳನ್ನು ಚಿಕ್ಕ ಚಿಕ್ಕ ಮಣ್ಣಿನ ಉಂಡೆಗಳನ್ನು ಮಾಡಿ, ಅದರ ಮಧ್ಯೆ ಉದ್ದವಾದ ಕೂದಲನ್ನು ಸಿಕ್ಕಿಸಿ ಬಣ್ಣದ ನೀರಿನಲ್ಲದ್ದಿ ತೂಗುಬಿಟ್ಟಿರುತ್ತಾರೆ.

**ಗೊಗ್ಗವ್ವ - ಗೊಗ್ಗಪ್ಪ ಶಿಲ್ಪಗಳು :** ಗುಳ್ಳವ್ವನ ಶಿಲ್ಪದ ಆಚರಣೆಯಲ್ಲಿ ಗೊಗ್ಗವ್ವ - ಗೊಗ್ಗಪ್ಪನ ಶಿಲ್ಪಗಳದ್ದು ಒಂದು ಮೋಜಿನ ಆಕರ್ಷಣೆಯಾಗಿರುತ್ತದೆ. ಮಣ್ಣಿನಿಂದ ಮಾಡಿದ ಮುದುಕಿಯ ಶಿಲ್ಪದ ತಲೆಗೆ ಹತ್ತಿಯನ್ನು ಕೂದಲಿನಂತೆ ಹಚ್ಚಿರುತ್ತಾರೆ. ಬಾಯಿಗೆ ಕುಸುಬೆ ಕಾಳು ಚುಚ್ಚಿ ಹಲ್ಲುಗಳಂತೆ ಮಾಡಿರುತ್ತಾರೆ. ಮೂಗಿಗೆ ಕೆಂಪು ಮೆಣಸಿನ ಕಾಯಿ ಚುಚ್ಚಿ ನತ್ತು ಮಾಡಿರುತ್ತಾರೆ. ಈ ಗೊಗ್ಗವ್ವ -

---

೨೮. ಎ. ವಿ. ಪಾಟೀಲ : ಉತ್ತರ ಕರ್ನಾಟಕದ ಜನಪದ ವಿಧಿಕ್ರಿಯೆಗಳು, (ಅಪ್ರಕಟ) ಪುಟ -೧೫೬

೨೯. ಡಾ. ವಿರೇಶ ಬಡಿಗೇರ : ಗುಳ್ಳವ್ವ ; ಆಚರಣೆ- ವಿಶ್ಲೇಷಣೆ, ಪುಟ -೧೫

ಗೊಗ್ಗಪ್ಪರ ರುಂಡಗಳನ್ನು ಕೋಲುಗಳಿಗೆ ಸಿಕ್ಕಿಸಿ ಆ ಕೋಲನ್ನು ಕೊಡದಲ್ಲಿ ಇಟ್ಟಿರುತ್ತಾರೆ. ಗೊಗ್ಗವ್ವನ ಕೊಡಕ್ಕೆ ಸೀರೆ ಉಡಿಸಿ ಆಭರಣ ಹಾಕಿರುತ್ತಾರೆ. ಗೊಗ್ಗಪ್ಪನಿಗೆ ದೋತರ ಉಡಿಸಿ, ಮೀಸೆ ಅಂಟಿಸಿರುತ್ತಾರೆ. ಮತ್ತು ಅವನ ತಲೆಗೆ ಹತ್ತಿ ಅಂಟಿಸಿರುತ್ತಾರೆ. ಈ ಎರಡೂ ಶಿಲ್ಪಗಳನ್ನು ಗುಳ್ಳವ್ವನ ಎಡಬಲದಲ್ಲಿ ಕುಳ್ಳಿರಿಸಿರುತ್ತಾರೆ. ಕೊಡವನ್ನು ಸ್ವಲ್ಪು ಅಲ್ಲಾಡಿಸಿದರೆ ಗೊಗ್ಗವ್ವ - ಗೊಗ್ಗಪ್ಪರು ರುಂಡ ಸಮೇತ ಹಿಂದೆ ಮುಂದೆ ಗೋಣು ಹಾಕಿ ನೋಡಬಂದವರನ್ನು ಸ್ವಾಗತಿಸುತ್ತವೆ. [೩೦]

**ವಿಸರ್ಜನೆ :** ಗೊಗ್ಗವ್ವ - ಗೊಗ್ಗಪ್ಪರ ಈ ಶಿಲ್ಪಗಳನ್ನು ಗುಳ್ಳವ್ವನ ಜೊತೆ ಆಡಲು ತೆಗೆದುಕೊಂಡು ಹೋಗಿ ಮಣ್ಣಲ್ಲಿ ಮುಚ್ಚಿಡುವ ಮೂಲಕ ವಿಸರ್ಜಿಸಿ ಬರುತ್ತಾರೆ. ಕೆಲವು ಪ್ರದೇಶಗಳಲ್ಲಿ ಗೊಗ್ಗವ್ವನನ್ನು ಕುಟ್ಟುವ ಕಾರ್ಯಕ್ರಮ ನಡೆಯುವದು. ಹೀಗೆ ಕುಟ್ಟುವಾಗ ವೈವಿಧ್ಯಮಯ ಹಾಡುಗಳನ್ನು ಹೇಳಲಾಗುತ್ತದೆ. ಇದು ಸ್ಪರ್ಧಾತ್ಮಕವಾಗಿ ನಡೆಯುತ್ತದೆ. [೩೧]

**ಗುಳ್ಳವ್ವನ ಶಿಲ್ಪದ ಪೂಜೆ ಮತ್ತು ನೈವೇಧ್ಯ :** ಗುಳ್ಳವ್ವನ ಶಿಲ್ಪದ ಪೂಜೆಯು ಆಕರ್ಷಕವಾಗಿರುತ್ತದೆ. ಗುಳ್ಳವ್ವನ ಮಣ್ಣಿನ ಶಿಲ್ಪಕ್ಕೆ ಅರಿಷಿಣ, ಕುಂಕುಮ, ವಿಭೂತಿ ಹಚ್ಚುತ್ತಾರೆ, ಹೂವು ಚುಚ್ಚುತ್ತಾರೆ. ಹೆಣ್ಣು ಮಕ್ಕಳೇ ಪೂಜೆ ಮಾಡುತ್ತಾರೆ. ಕೊನೆಯಲ್ಲಿ ಅರಲಿನಿಂದ ಮಾಡಿದ ಕೋಣದ ಶಿಲ್ಪವನ್ನು ಬಲಿ ಕೊಡುತ್ತಾರೆ. ಆ ಕೋಣದ ಶಿಲ್ಪದ ಹಣೆಯಲ್ಲಿ ತಗ್ಗು ಮಾಡಿ ನೀರು ಮತ್ತು ಕುಂಕುಮ ತುಂಬಿರುತ್ತಾರೆ. ಕೋಣವನ್ನು ಕಡಿದ ತಕ್ಷಣ ರಕ್ತದಂತೆ ನೀರು ಹೊರಚಿಮ್ಮುತ್ತದೆ. ನಂತರ ನೈವೇಧ್ಯ ಮಾಡುತ್ತಾರೆ.

**ಆರತಿ :** ಗುಳ್ಳವ್ವನಿಗೆ ಅರಲಿನಿಂದ ಮಾಡಿದ ಆರತಿಯನ್ನು ಮಾಡುವ ಪದ್ಧತಿ ಬಾಗಲಕೋಟೆ ಭಾಗದಲ್ಲಿದೆ. ಆರತಿ, ತಾಟು, ಪಂಚಾರತಿ, ಕಳಸ, ಕುಂಕುಮ, ಕರಡಿಗೆ, ವಿಭೂತಿ, ಕುಬಸದ ಕಣ, ಸೀರೆ, ಸೀರೆಯ ಗಳಿಗೆ ಎಲ್ಲವನ್ನೂ ಅರಲಿನಿಂದ ಮಾಡಿರುತ್ತಾರೆ. ಹತ್ತಿಯಿಂದ ಬತ್ತಿ ಮಾಡಿರುತ್ತಾರೆ. ಇನ್ನು ಕೆಲವೆಡೆ ಕಂಚಿನ ಆರತಿಯನ್ನು ಮಾಡುತ್ತಾರೆ. ಆರತಿ ಮಾಡುವಾಗ ಹಾಡು ಹೇಳುತ್ತಾರೆ.[೩೨] ಗಂಡನ ಹೆಸರು ಹೇಳುವದು ಕೇಳುವದು ನಡೆಯುತ್ತದೆ. ಇದು ಸ್ತ್ರೀ ನಿಷ್ಠ ಹಬ್ಬವೆನ್ನವಹುದು.

ಬೆಳಗಾವಿ ಜಿಲ್ಲೆಯಲ್ಲಿ ಗುಳ್ಳವ್ವ ಶಿಲ್ಪದ ರಚನೆ ಮತ್ತು ಪೂಜೆಗಳು ವಿಶೇಷವಾಗಿವೆ. ಕೋಟೆಯ ನಿರ್ಮಿತಿಯೂ ಈ ಜಿಲ್ಲೆಯಲ್ಲಿ ವಿಶೇಷವಾಗಿದೆ. ದೀಪಾವಳಿಗೆ ಮೂರು ದಿನ ಮೊದಲಿನಿಂದಲೇ ಓಣಿಗಳಲ್ಲಿ ಮಣ್ಣು ಇತರ ಮಾಧ್ಯಮಗಳಿಂದ ಕೋಟೆ ಕಟ್ಟುವಲ್ಲಿ ಮಕ್ಕಳು ತೊಡಗಿರುತ್ತಾರೆ. ಈ ಕಲೆ ಮಹಾರಾಷ್ಟ್ರದ ಗಡಿ ಭಾಗದ ಊರುಗಳಲ್ಲಿ ಹೆಚ್ಚು ಜನಪ್ರಿಯವಾಗಿದೆ.

---

೩೦. ಡಾ. ಬಿ. ಎಸ್. ಗದ್ದಿಗಿಮಠ : ಕನ್ನಡ ಜಾನಪದ ಗೀತಗಳು, ಪುಟ - ೧೫೦

೩೧. ..... ಅದೇ ..... , ಪುಟ -೧೫೧

೩೨. ಹಾಡುಗಳಿಗಾಗಿ ನೋಡಿ, ಡಾ. ಬಿ. ಎಸ್. ಗದ್ದಿಗಿಮಠ : ಕನ್ನಡ ಜಾನಪದ ಗೀತಗಳು, ಪುಟ - ೧೫೦, ೧೫೧

[illegible]

**ಗುಳ್ಳವ್ವನ ಶಿಲ್ಪದ ವಿಸರ್ಜನೆ :** ಗುಳ್ಳವ್ವನ ಶಿಲ್ಪದ ಆಚರಣೆಯ ಕೊನೆಯಲ್ಲಿ ವಿಸರ್ಜನೆಯು ನಡೆಯುತ್ತದೆ. ಈ ಶಿಲ್ಪದ ಆಚರಣೆಯಂತೆ ವಿಸರ್ಜನೆ ಕೂಡ ಪ್ರಾದೇಶಿಕ ಭಿನ್ನತೆಯನ್ನು ಹೊಂದಿದೆ. ಬಾಗಲಕೋಟೆ ಜಿಲ್ಲೆಯಲ್ಲಿ ಮೊದಲನೆ ಗುಳ್ಳವ್ವನನ್ನು ಮನೆಯ ಕುಂಬಿ, ಗಿಡ ಅಥವಾ ಹೊಲದಲ್ಲಿ ಬೆಳೆಗಳ ಬುಡದಲ್ಲಿ ಇಡುತ್ತಾರೆ. ಮಳೆ ಬರುತ್ತದೆ ಎಂಬ ನಂಬಿಕೆಯೇ ಹೀಗೆ ಮಾಡಲು ಕಾರಣವೆಂದು ಜನಪದರು ಹೇಳುತ್ತಾರೆ. ಮೂರು ಮತ್ತು ನಾಲ್ಕನೆ ಗುಳ್ಳವ್ವನನ್ನು ಆಡಲು ಗೆಳತಿಯರೆಲ್ಲ ಬುತ್ತಿ ಕಟ್ಟಿಕೊಂಡು, ಗುಳ್ಳವ್ವನನ್ನು, ಆರತಿಯನ್ನು ತೆಗೆದುಕೊಂಡು ಹಾಡು ಹೇಳುತ್ತಾ ಹೊರಡುತ್ತಾರೆ. ಹಾಡುಗಳಲ್ಲಿ ಗುಳ್ಳವ್ವನ ಬಗ್ಗೆ ಪ್ರೀತಿ ಹಾಗೂ ಅಗಲಿಕೆಯ ನೋವು ತುಂಬಿಕೊಂಡಿರುತ್ತವೆ. ಮತ್ತು ಅವಳನ್ನು ಮರು ಆಹ್ವಾನ ಕೊಡುವದು ಇವುಗಳಲ್ಲಿನ ಆಶಯವಾಗಿರುತ್ತದೆ.

ಗುಳ್ಳವ್ವನ ಶಿಲ್ಪವನ್ನು ಹೊತ್ತು ಎಲ್ಲರೂ ಊರ ಹೊರಗಿನ ತೋಟ, ವನ ಇಲ್ಲವೆ ನದಿ-ಹಳ್ಳಗಳ ದಂಡೆಗೆ ಬರುವರು. ಅಲ್ಲಿ ಗುಳ್ಳವ್ವನನ್ನು ಕೂರಿಸಿ ಪೂಜೆ ಮಾಡುವರು. ತಿನಿಸುಗಳನ್ನು ಎಡೆ ಹಿಡಿದು, ಆ ಎಡೆಯನ್ನು ತಳವಾರನಿಗೆ ಕೊಡುವರು. ಇಲ್ಲವೆ ಎಲ್ಲರೂ ತಿನ್ನುವರು. ನಂತರ ಅನೇಕ ರೀತಿಯ ಆಟಗಳನ್ನು ಎಲ್ಲರೂ ಕೂಡಿ ಆಡುವರು. ಹೆಣ್ಣು ಕೊಡುವ ಮತ್ತು ತರುವ ಆಟವಂತೂ ಮನೋಜ್ಞವಾಗಿರುತ್ತದೆ. ಈ ಆಟದಲ್ಲಿ ಎರಡು ಗುಂಪಿನವರಾಗಿ ಎದುರು-ಬದುರು ಕುಳಿತು ಹಾಡು ಹೇಳುತ್ತಾರೆ. ಕೊನೆಗೆ ಹೆಣ್ಣಿನ ಕಡೆಯವರು ಗೆಲ್ಲುತ್ತಾರೆ. ಇದಾದ ನಂತರ ಗುಳ್ಳವ್ವನ ಮರಣವಾಗುತ್ತದೆ. ಎಲ್ಲರೂ ಅಳುವರು. ಕೆಲವರು ಹಾಡು ಹೇಳಿಕೊಂಡು ನಾಟಕೀಯವಾಗಿ ಅಳುವರು.

ಬೀಳಗಿ ತಾಲೂಕಿನ ನಾಗರಾಳದಲ್ಲಿ [೩೩] ಹಾಡು ಹೇಳುತ್ತ, ಅಳುತ್ತ (ನಾಟಕೀಯವಾಗಿ) ಗುಳ್ಳವ್ವನನ್ನು ಕುಟ್ಟಿ ಕುಟ್ಟಿ ಸಾಯಿಸುವರು. ಕಾರಣವೆಂದರೆ ಆಕೆ ಪಾಪದ ಪಿಂಡವಂತೆ. ಬಾಗಲಕೋಟೆ ತಾಲೂಕಿನಲ್ಲಿ ಗೋರಿಯನ್ನು ತೋಡಿ ಮುಚ್ಚುತ್ತಾರೆ. ಹೊಳೆಯಲ್ಲಿ ಸಹ ಹಾಕುತ್ತಾರೆ. ಕೆಲವೆಡೆ ಗುಳ್ಳವ್ವ ಸತ್ತಾಗ ಗುಳ್ಳವ್ವನ ಬದಲಾಗಿ ಮನುಷ್ಯರನ್ನೇ ಕುಳ್ಳಿರಿಸಿ, ಹಾಡಿ ಚೆಂದಾ ಮಾಡುತ್ತಾರೆ. ಧಾರವಾಡ, ಬಿಜಾಪುರ, ಬೆಳಗಾವಿ ಜಿಲ್ಲೆಗಳ ಊರುಗಳಲ್ಲಿ ಈ ಪದ್ಧತಿ ಆಚರಣೆಯಲ್ಲಿದೆ. [೩೪] ಇನ್ನು ಕೆಲ ಭಾಗಗಳಲ್ಲಿ ಗುಳ್ಳವ್ವನ ವಿಸರ್ಜನೆಯ ಸಂದರ್ಭದಲ್ಲಿ ಹೆಂಗಳೆಯರೆಲ್ಲ ಸೇರಿ ಚನಮೀರಿ ಮತ್ತು ಆಕೆಯ ಗಂಡ ಮಲ್ಲೇಶಿಯರ ಆಟವಾಡುತ್ತಾರೆ. ಕೊನೆಗೆ ಚನಮೀರಿ ಸತ್ತಳೆಂದು ಅವಳ ಹೆಸರಲ್ಲಿ ಹಾಡಿಕೊಂಡು ಅಳುವ ನಟನೆ ಮಾಡುವದುಂಟು. [೩೫]

ಉತ್ತರ ಕರ್ನಾಟಕದಲ್ಲಿ ಗುಳ್ಳವ್ವನ ಶಿಲ್ಪದ ರಚನೆ ಮತ್ತು ಆಚರಣೆಯ ಸಂಪ್ರದಾಯ ಸಾರ್ವತ್ರಿಕವಾದುದಾಗಿದ್ದು, ಗುಳ್ಳವ್ವ ಕ್ಷುದ್ರ ದೇವತೆಗಳ ವರ್ಗಕ್ಕೆ ಸೇರಿದವಳಾಗಿದ್ದಾಳೆ. ಈ ಮಾತಿಗೆ

---

೩೩. ನಾಗರಾಳ : ತಾ. ಬೀಳಗಿ , ಜಿ. ಬಾಗಲಕೋಟ

೩೪. ಡಾ. ವಿರೇಶ ಬಡಿಗೇರ : ಗುಳ್ಳವ್ವ ;ಆಚರಣೆ - ವಿಶ್ಲೇಷಣೆ, ಪುಟ -೩೭

೩೫. ಡಾ. ಎಸ್. ಎಮ್. ವೃಷಭೇಂದ್ರ ಸ್ವಾಮಿ ( ಸಂ ) : ಜಾನಪದ ಸಾಹಿತ್ಯ ದರ್ಶನ, ಭಾಗ-೧೦, ಪುಟ - ೯೦

ಗುಳ್ಳವ್ವ ದೇವರಲ್ಲ, ಉಡುಕಿಗಂಡಲ್ಲ, ಒಳ್ಳೊಳ್ಳೆಯವರು ಉಳ್ಯಾಡುವಾಗ, ಗುಳ್ಳವ್ವ ಪಲ್ಲಕ್ಕೆ ಬೇಡಿದಳು ಎಂಬ ಗಾದೆಗಳು ಸಾಕ್ಷಿ.[೩೬] ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ಜನರು ಗುಳ್ಳವ್ವನನ್ನು ಆಡಿ ಪೂಜೆ ಮಾಡುತ್ತಾರೆ. ಈ ಸಂಪ್ರದಾಯವು ಕರ್ನಾಟಕ ಬಿಟ್ಟು ಮತ್ತೆ ಯಾವ ಭಾಗದಲ್ಲಿಯೂ ಆಚರಣೆಯಲ್ಲಿ ಇಲ್ಲ ಎಂದು ಡಾ. ಬಿ. ಎಸ್. ಗದ್ದಿಗಿಮಠರು ಹೇಳುತ್ತಾರೆ.[೩೭]

**ನಂಬಿಕೆ :** ಗುಳ್ಳವ್ವನ ಶಿಲ್ಪದ ನಿರ್ಮಿತಿ ಹಾಗೂ ಆಚರಣೆಯ ಉದ್ದಕ್ಕೂ ಅನೇಕ ಸಂಪ್ರದಾಯ, ಆಚರಣೆಗಳು ಕಂಡುಬರುತ್ತವೆ. ಹಾಸ್ಯ ಅಣಕಗಳು ವ್ಯಕ್ತಿ ವ್ಯಕ್ತಿಗಳ ಮಧ್ಯದ ಬಾಂಧವ್ಯ ಮುಂತಾದ ಸಾಮಾಜಿಕ ಸಂಬಂಧಗಳ ವಿವಿಧ ಮುಖಗಳು ಕಂಡುಬರುತ್ತವೆ. ಆದರೆ, ನಿರ್ಧಿಷ್ಟ ನಂಬಿಕೆಗಳಾವವು ಎಂಬುದು ತಿಳಿದು ಬರುವದಿಲ್ಲ. ಗುಳ್ಳವ್ವನನ್ನು ಬೆಳೆಯ ಕಾಳಿನ ಕುರಿತಾದ ದೇವತೆ ಎಂದು, ಮಣ್ಣಿನ ದೇವತೆಯೇ ಇವಳಾಗಿದ್ದು, ಕಾಳಿನ ದೇವಿಯ ಆಶಯ ಇದರೊಡನೆ ಬೆರಕೆಯಾಗಿರಬೇಕೆಂದು ಹೇಳುತ್ತಾರೆ.

ಜನಸಮೂಹದ ಮಧ್ಯೆ ಸಾಮೂಹಿಕವಾಗಿ ರಚನೆಗೊಳ್ಳುವ ಗುಳ್ಳವ್ವನ ಶಿಲ್ಪವು ರಚನೆ ಮತ್ತು ಆಚರಣೆ ಎರಡೂ ಆಯಾಮದ ದೃಷ್ಟಿಯಿಂದ ವಿಶಿಷ್ಟವಾಗುತ್ತದೆ. ಈ ಶಿಲ್ಪ ಮಣ್ಣಿನ ಮಾಧ್ಯಮದ ಇತರ ಶಿಲ್ಪಗಳಂತೆ ಒಂದೇ ದಿನದಲ್ಲಿ ಮತ್ತು ಒಬ್ಬನೇ ಕಲಾವಿದನಿಂದ ರಚನೆಯಾಗುವುದಿಲ್ಲ. ಇದು ಪ್ರತಿನಿತ್ಯವೂ ಹಲವರಿಂದ ಕೂಡಿದ ಗುಂಪಿನ ಸೃಷ್ಟಿಯಾಗಿ ಒಂದು ವಾರ ಕಾಲ ರಚನೆಗೊಳ್ಳುವುದು. ಇದರಿಂದಾಗಿ ಈ ಶಿಲ್ಪವು ನಿತ್ಯವೂ ಹೊಸ ರೂಪ, ಆಕಾರ, ಅಲಂಕಾರವನ್ನು ಪಡೆದು ಜನರಿಗೆ ರಂಜನೆಯನ್ನೊದಗಿಸುವಂತಹುದಾಗಿದೆ. ಇದರ ಪ್ರದರ್ಶನವೂ ಬಯಲಿನಲ್ಲೇ ಏರ್ಪಟ್ಟಿರುತ್ತದೆ. ಹೀಗಾಗಿ ಬಹುಶಃ ಗುಳ್ಳವ್ವನಂತಹ ಇಂಥ ಶಿಲ್ಪಗಳೇ ಇಂದಿನ ಪ್ರತಿಷ್ಠಾಪನಾ ಶಿಲ್ಪಗಳಂತೆ ಹಲವು ಪ್ರಯೋಗಾತ್ಮಕವಾದ ಸೃಜನಶೀಲ ಶಿಲ್ಪಗಳ ರಚನೆಗೆ ಪ್ರೇರಣೆ ನೀಡಿರಬಹುದು.

## ಆ. ಶಿವಭಕ್ತೆ ಚೆಂಗೈವ್ವನ ಶಿಲ್ಪಗಳು

ಚೆಂಗೈವ್ವ ಇದರ ಮೂಲ ರೂಪ ಚೆಂಗಳೆ. ಚೆಂಗಳೆ-ಶಿರಿಯಾಳರ[೩೮] ಶಿಲ್ಪಗಳು ಮೂಲತಃ ವ್ಯಕ್ತಿ ಶಿಲ್ಪಗಳಾಗಿವೆ. ಹನ್ನೆರಡನೆಯ ಶತಮಾನದ ಶಿವಶರಣ ಶಿರಿಯಾಳ ಶೆಟ್ಟಿ ಮತ್ತು ತನ್ನ ಭಕ್ತಿ ಪರಾಕಾಷ್ಠೆಯಿಂದ ಶಿವನನ್ನು ಸಾಕ್ಷಾತ್ಕರಿಸಿಕೊಂಡ ಭಕ್ತ ಶಿರೋಮಣಿ ಚಂಗಳೆ ಇವರ ಸ್ಮರಣೆಯಲ್ಲಿ ನಮ್ಮ ಜನಪದರು ಶ್ರಾವಣ ಮಾಸದಲ್ಲಿ ಚೆಂಗಳೆ-ಶಿರಿಯಾಳರ ಮಣ್ಣಿನ ಶಿಲ್ಪಗಳನ್ನು ರಚಿಸಿ ಪೂಜೆ ಸಲ್ಲಿಸುವ ಆಚರಣೆಯು ನಡೆಯುತ್ತದೆ. ಚಂಗಳೆಯನ್ನು ಚೆಂಗೈವ್ವ ಎಂದು ಜನಪದರು ಕರೆಯುತ್ತಾರೆ. ಈ ಶಿಲ್ಪಗಳ ಆಚರಣೆಯ ಕುರಿತು ಕೆಲವು ಕಡೆ ಶಿರಿಯಾಳ ಶೆಟ್ಟಿಯನ್ನಿಟ್ಟು ಪೂಜಿಸುವುದೆಂದೂ, ಇನ್ನೂ ಕೆಲವು

---

೩೬. ಡಾ. ಬಿ. ಎಸ್. ಗದ್ದಿಗಿಮಠ : ಕನ್ನಡ ಜಾನಪದ ಗೀತಗಳು, ಪುಟ - ೧೪೯

೩೭. ಎ. ವಿ. ಪಾಟೀಲ : ಉತ್ತರ ಕರ್ನಾಟಕದ ಜಾನಪದ ವಿಧಿಕ್ರಿಯೆಗಳು(ಅಪ್ರಕಟಿತ), ಪುಟ - ೧೫೧

೩೮. ನೋಡಿ, ಇದೇ ಮಹಾ ಪ್ರಂಥದ ಅಧ್ಯಾಯ : ನಾಲ್ಕು ; ಮರ ದ ಮಾಧ್ಯಮದ ಜನಪದ ಶಿಲ್ಪಕಲೆ, ಪುಟ - ೧೨೮



ಶಿರಿಯಾಳ ಶೆಟ್ಟಿಯ ಶಿಲ್ಪ (ಬೀದರ ಜಿಲ್ಲೆ)

ಭಾಗಗಳಲ್ಲಿ ಚಂಗಳೆವ್ವನ ಶಿಲ್ಪದ ಪೂಜೆಯೆಂದೂ ಕರೆಯುತ್ತಾರೆ. ಮಹಾರಾಷ್ಟ್ರದ ಪುಣೆಯ ಭಾಗದಲ್ಲಿ ಶಿರಾಳ ಸೇಠನ ಆಚರಣೆ ಎಂದೂ ಕರೆಯುತ್ತಾರೆ. [೩೯]

**ರಚನೆ :** ಈ ಭಕ್ತ ದಂಪತಿಗಳ ಮೂರ್ತಿ ಶಿಲ್ಪಗಳ ರಚನೆಯೂ ಮಣ್ಣಿನದು. ಕುಂಬಾರರು ಇಲ್ಲವೆ ಅಲ್ಪ ಸ್ವಲ್ಪ ಮೂರ್ತಿ ರಚನೆಯ ತಿಳುವಳಿಕೆಯುಳ್ಳವರಿಂದ ಮಾಡಿಸುತ್ತಾರೆ. ಕೆಲವು ವೇಳೆ ಆಯಾ ಮನೆಗಳಲ್ಲಿಯೇ ಹಿರಿಯರು ಮಾಡುತ್ತಾರೆ. ಶಿರಿಯಾಳನ ಶಿಲ್ಪವು ಒರಟಾಗಿಯೂ, ಚಂಗಳೆಯ ಶಿಲ್ಪವನ್ನು ನಯವಾಗಿ ತಿದ್ದಿ ತೀಡಿ ರಚಿಸಲಾಗುತ್ತದೆ. ಸ್ಥಳೀಯ ಬಣ್ಣಗಳಿಂದ ಸುಂದರಗೊಳಿಸಲಾಗಿರುತ್ತದೆ. ಶಿರಿಯಾಳ ಪುರುಷ ಶಿಲ್ಪವು ಪೇಟಾ, ನಿಲುವಂಗಿ ಹೊಂದಿದ್ದರೆ, ಚೆಂಗಳೆಯ ಶಿಲ್ಪವು ಸ್ತ್ರೀ ವೇಷ-ಬೂಷಣದಿಂದ ಅಲಂಕೃತಗೊಂಡಿರುತ್ತದೆ. ಆದರೆ ಈ ಶಿಲ್ಪಗಳ ರಚನೆ ಮತ್ತು ಸಿಂಗರಿಸುವ ಕ್ರಮದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆಗಳೂ ಇವೆ. ಬೀದರ ಮತ್ತು ಗುಲಬರ್ಗಾದ ಅನೇಕ ಊರುಗಳಲ್ಲಿ ಈ ಶಿಲ್ಪದ ಆಚರಣೆ ಹೇರಳವಾಗಿದ್ದರೂ ವಿಶೇಷವಾದ ಅಲಂಕಾರವೇನೂ ಕಂಡು ಬರುವದಿಲ್ಲ. ಚೆಂಗಳೆಯ ಶಿಲ್ಪ ಸುಂದರವಾಗಿ ರಚನೆಗೊಂಡು ಆಚರಣೆಗೊಳ್ಳಲು ಕಾರಣ ನೀಡುವ ಜನಪದ ಕಥೆಯೊಂದಿದೆ. ಶಿರಿಯಾಳನ ಹೆಂಡತಿ ಮಹಾ ಭಕ್ತಿವಂತೆ. ಇವಳ ಭಕ್ತಿಗೆ ಮೆಚ್ಚಿದ ಶಿವ ಪರೀಕ್ಷೆ ಮಾಡಲೆಂದು ಪ್ರತ್ಯಕ್ಷನಾಗಿ ಮಾರುವೇಷದಿಂದ ಬಂದು, ಇದ್ದೊಬ್ಬ ಎಳೆ ಮಗನನ್ನೇ ಕೊಂದು ಅಡುಗೆ ಮಾಡಿ ಉಣಬಡಿಸಲು ಹೇಳುತ್ತಾನೆ. ಚಂಗಳೆಯು ಇದು ಶಿವ ಪರೀಕ್ಷೆಯೇ ಇರಬೇಕೆಂದು ಬಗೆದು ಹಾಗೇ ಮಾಡುತ್ತಾಳೆ. ಶಿವನು ನಿಜ ರೂಪ ತೋರಿ ಮಗನನ್ನು ಪುನಃ ಬದುಕಿಸಿ ಕೊಟ್ಟು ಅವಳನ್ನು ಸ್ವರ್ಗಕ್ಕೆ ಬರಲು ಹೇಳಿ ಹೋಗುತ್ತಾನೆ. ಒಂದು ದಿನ ಚಂಗಳೆ ಶಿವನಲ್ಲಿಗೆ ಸ್ವರ್ಗಕ್ಕೆ ಹೋಗುತ್ತಾಳೆ. ಬಾಗಿಲಲ್ಲಿ ದೂತರು ತಡೆಯಲು ಶಿವನನ್ನು ನಿಂದಿಸುತ್ತಾಳೆ. ಕೋಪಿತನಾದ ಶಿವನು ಅವಳಿಗೆ ಶಪಿಸುತ್ತಾನೆ. ನಂತರ ತಪ್ಪಿನ ಅರಿವಾಗಿ ಚಂಗಳೆಯು ಶಿವನ ಕುರಿತು ತಪಸ್ಸು ಮಾಡಲಾಗಿ ಶಿವನು ಪ್ರತ್ಯಕ್ಷನಾಗಿ ನಿಜ ರೂಪ ತೋರಿ, ಭೂಲೋಕದಲ್ಲಿ ನಿನ್ನ ಹೆಸರು ಅಜರಾಮರವಾಗಲಿ, ನಿನ್ನ ಸುಂದರ ಮೂರ್ತಿಯನ್ನು ಮಾಡಿ ಪೂಜಿಸುವವರಿಗೆ ಅವರ ಇಷ್ಟಾರ್ಥ ಇಡೇರುತ್ತದೆ ಎಂದನಂತೆ. ಅದಕ್ಕಾಗಿಯೇ ಚಂಗಳೆ ಶಿರಿಯಾಳನಿಗಿಂತ ಸುಂದರವಾಗಿ ರೂಪಿತವಾಗುತ್ತಾಳೆ ಎಂದು ಜನಪದರು ಹೇಳುತ್ತಾರೆ.

ಸಾಮಾನ್ಯವಾಗಿ ಕೆಸರಿನಿಂದ ಕಂಬಗಳಾಕಾರದಲ್ಲಿ ನಾಲ್ಕು ಗದ್ದುಗೆಗಳನ್ನು ಮಾಡಿ ಅವುಗಳ ಮೇಲೆ ಮನುಷ್ಯಾಕೃತಿಯನ್ನು ಮಾಡಿ ಕೂಡಿಸಲಾಗಿರುತ್ತದೆ. ಇದು ಶಿರಿಯಾಳನ ಶಿಲ್ಪ. ಒರಟಾಗಿ, ಸರಳವಾದ ರಚನೆಯಾಗಿದ್ದರೂ ಸುಂದರವಾಗಿರುತ್ತದೆ. ಇದಕ್ಕೆ ಜೋಳದ ಅಳ್ಳುಗಳನ್ನು ಮೆತ್ತಲಾಗಿರುತ್ತದೆ. ಮತ್ತು ಅರ್ಧ ಇಲ್ಲವೆ ಒಂದು ಅಡಿ ಉದ್ದದ ಕಟ್ಟಿಗೆಯ ಕಡ್ಡಿಗಳನ್ನು ನಾಲ್ಕೂ ಬದಿಯಲ್ಲಿ ಚುಚ್ಚಿ ಮೇಲ್ತುದಿಯಲ್ಲಿ ಹಳದಿ ಬಣ್ಣದ ಅರಿವೆಯನ್ನು ಧ್ವಜಗಳಂತೆ ಕಟ್ಟಿರುತ್ತಾರೆ. ಕುಂಕುಮ, ವಿಭೂತಿ, ಅರಿಷಿಣಗಳಿಂದ ಶಿಲ್ಪಕ್ಕೆ ಪೂಜೆ ಮಾಡಿರುತ್ತಾರೆ.

---

೩೯. ಡಾ. ಬಿ. ಎಸ್. ಗದ್ದಿಗಿಮಠ : ಕನ್ನಡ ಜಾನಪದ ಗೀತಗಳು, ಪುಟ - ೧೫೭

ಉತ್ತರ ಕರ್ನಾಟಕದ ಇನ್ನೂ ಕೆಲವು ಭಾಗಗಳಲ್ಲಿ ಶಿರಿಯಾಳ ಶೆಟ್ಟಿಯನ್ನು, ಚಂಗಳೆಯನ್ನು ಮತ್ತು ಐದು ಮಕ್ಕಳ ಶಿಲ್ಪಗಳನ್ನು ಮಾಡಿ ಬುಟ್ಟಿಯಲ್ಲಿಟ್ಟು ಪೂಜಿಸುವ ಸಂಪ್ರದಾಯವು ಇದೆ.[೪೦] ಇದರಿಂದ ಸಂತಾನಪ್ರಾಪ್ತಿ, ಸೌಭಾಗ್ಯ, ಮತ್ತೈದೆತನ ಲಭಿಸುತ್ತದೆ ಎಂಬ ನಂಬಿಕೆಗಳು ಇವೆ. ಈ ಮೂರ್ತಿ ಶಿಲ್ಪವನ್ನು ಮರುದಿವಸ ಸರಳವಾಗಿ ಪೂಜಿಸಿ ವಿಸರ್ಜಿಸುವ ಸಂಪ್ರದಾಯವಿದೆ. ಕೆಲವು ಕಡೆ ಈ ಶಿಲ್ಪಗಳನ್ನು ಕಟ್ಟಿಗೆಯಲ್ಲಿ ಮಾಡಿಸಿಟ್ಟಿರುತ್ತಾರೆ.[೪೧] ಪ್ರತಿ ವರ್ಷವೂ ಪೂಜೆಗೆಂದು ಹೊರತೆಗೆದು ಆಚರಿಸುತ್ತಾರೆ. ಪೂಜೆಯಾದ ಮೇಲೆ ಮತ್ತೆ ಪೆಟ್ಟಿಗೆಯೊಂದರಲ್ಲಿ ಹಾಕಿ ಮನೆಯಲ್ಲಿಡುತ್ತಾರೆ. ಆದರೆ ಮಣ್ಣಿನಿಂದ ಈ ಶಿಲ್ಪಗಳನ್ನು ರಚಿಸಿ, ಆಚರಿಸಿ ವಿಸರ್ಜಿಸುವ ಸಂಪ್ರದಾಯವು ಬಹಳ ಕಡೆ ಇದೆ.

ಧಾರ್ಮಿಕ ಮನೋಭಾವದವರಾದ ನಮ್ಮ ಜನಪದರು ದೇವರ ಒಲುಮೆಗೆ ಪಾತ್ರರಾದ ಶಿವಶರಣ-ಶರಣೆಯರಂತಹ ವ್ಯಕ್ತಿತ್ವಗಳಿಗೆ ಮಾರು ಹೋಗಿದ್ದಾರೆ. ಆ ಮಹಾ ಪುರುಷರ ವ್ಯಕ್ತಿತ್ವ, ಗುಣಗಳು ಎಲ್ಲವೂ ಆದರ್ಶ ಮತ್ತು ಅನುಕರಣೀಯವಾಗಿ ತೋರಿವೆ. ಇಂಥ ಆದರ್ಶಗಳು ಜನಸಾಮಾನ್ಯರಲ್ಲಿ ಉಳಿಯಲಿ ಎಂಬ ಆಶಯದ ಹಿನ್ನೆಲೆಯಲ್ಲಿ ಶಿವ ಭಕ್ತೆ ಚೆಂಗಳೆಯ ಪ್ರತಿರೂಪದ ಶಿಲ್ಪವನ್ನು ಹುಟ್ಟು ಹಾಕಿ ವರ್ಷ ವರ್ಷವೂ ಆಚರಿಸುತ್ತ ಬಂದಿದ್ದಾರೆ. ತನ್ಮೂಲಕ ತಮ್ಮ ಬದುಕನ್ನು ಹಾಗೂ ವ್ಯಕ್ತಿತ್ವವನ್ನು ಹಸನು ಮಾಡಿಕೊಂಡು ದೈವದತ್ತ ಕೊಂಡೊಯ್ಯುವ ದಿಸೆಯಲ್ಲಿ ಈ ಆಚರಣೆಯನ್ನು ಜೀವಂತವಾಗಿ ಉಳಿಸಿಕೊಂಡು ಬಂದವರಾಗಿದ್ದಾರೆ. ಈ ಶಿಲ್ಪದ ಸರಳವಾದ ಅಲಂಕಾರ, ಚೆಲುವು ನೋಡುಗರೆಲ್ಲರಲ್ಲಿ ಆದರ್ಶ ಭಾವಗಳೊಂದಿಗೆ ಕೋಮಲ ಭಾವನೆಗಳನ್ನೂ ಹುಟ್ಟಿಸುತ್ತದೆ. ಮಹಿಳೆಯರ ಕೇಂದ್ರಿತವಾಗಿ ಆಚರಿಸಲ್ಪಡುವ ಈ ಶಿಲ್ಪವು ಸಹಜವಾಗಿಯೇ ಅವರಲ್ಲಿ ಧಾರ್ಮಿಕ ಮನೋಭಾವನೆಯನ್ನು ಮೂಡಿಸಿದೆ.

### ಇ. ಸೀಗಮ್ಮನ ಶಿಲ್ಪಗಳು

ಉತ್ತರ ಕರ್ನಾಟಕದಲ್ಲಿ ಸೀಗಿ ಹಾಗೂ ಗೌರಿ ಹುಣ್ಣಿಮೆಗಳಲ್ಲಿ ಸೀಗಮ್ಮ ಹಾಗೂ ಗೌರಮ್ಮನ ಶಿಲ್ಪಗಳ ಆಚರಣೆ ನಡೆಯುತ್ತದೆ. ಸ್ತ್ರೀಯರೇ ಇದರಲ್ಲಿ ಮುಖ್ಯ ಪಾತ್ರ ವಹಿಸುತ್ತಾರೆ. ಆದ್ದರಿಂದ ಸೀಗಿ-ಗೌರಿಗಳ ಮೂರ್ತಿ ಶಿಲ್ಪಗಳ ಆಚರಣೆ ಸ್ತ್ರೀ ಪ್ರಧಾನವಾದ ಆಚರಣೆ ಎನ್ನಬಹುದು. ಗೌರಿಯನ್ನು ಶಕ್ತಿಯೆಂದು, ಸೀಗಿಯನ್ನು ಭೂಮಿತಾಯಿ ಎಂದು ಪೂಜಿಸುವ ಸಂಪ್ರದಾಯ ನಡೆದು ಬಂದಿದೆ. ಈ ಎರಡೂ ಶಿಲ್ಪಗಳ ಹಬ್ಬದಾಚರಣೆಯಲ್ಲಿ ಭಿನ್ನತೆಯಿದ್ದರೂ ಈ ಎರಡೂ ಸಂದರ್ಭಗಳಲ್ಲಿ ಹೆಣ್ಣುಮಕ್ಕಳು ಹಾಡುವ ಹಾಡುಗಳಲ್ಲಿ ವ್ಯತ್ಯಾಸ ಕಾಣುವದಿಲ್ಲ.

'ಸೀಗಿ' ಸಂಸ್ಕೃತದ 'ಶಿಖಾ'ದ ತದ್ಭವ ರೂಪವಾಗಿದ್ದು, ಅದು ಶಿಖರ ▷ ಶಿಖಿ ▷ ಶೀಗಿ ▷ ಸೀಗಿ ಆಗಿರುವಂತಿದೆ. ಸೀಗಮ್ಮ ಶಿಲ್ಪದ ಆಕಾರವು ಶಿಖರಾಕೃತಿಯಲ್ಲಿಯೇ ರಚನೆಯಾಗಿರುವದನ್ನು

---

೪೦. ಎ. ವಿ. ಪಾಟೀಲ : ಉತ್ತರ ಕರ್ನಾಟಕ ಜಾನಪದ ವಿಧಿಕ್ರಿಯೆಗಳು, ( ಅಪ್ರಕಟಿತ ಮಹಾ ಪ್ರಬಂಧ ) ಪುಟ -೧೩೩

೪೧. ನೋಡಿ, ಇದೇ ಮಹಾ ಪ್ರಬಂಧದ ಅಧ್ಯಾಯ : ನಾಲ್ಕು ; ಮರ ಮಾಧ್ಯಮದ ಜನಪದ ಶಿಲ್ಪಕಲೆ, ಪುಟ - ೧೨೯

[illegible]

[illegible]

[illegible]

[illegible]

[illegible]

ಕಾಣಬಹುದು. ನಮ್ಮ ಪ್ರಾಚೀನ ಸಂಸ್ಕೃತಿಗಳಾದ ಹರಪ್ಪಾ-ಮೊಹೆಂಜೋದಾರೊಗಳಲ್ಲಿ ಈ ಬಗೆಯ ಆಕೃತಿಗಳು ಕಲ್ಲಿನಲ್ಲಿ, ಮಣ್ಣಿನಲ್ಲಿ ರೂಪಗೊಂಡಿದ್ದು ವ್ಯಕ್ತವಾಗುತ್ತದೆ. ಅಲ್ಲಿ ಇವು ದೇವತೆಗಳೆಂದು ಪೂಜಿಸಲ್ಪಟ್ಟ ಸಾಧ್ಯತೆ ಇದೆ ಎಂದು ಸಂಶೋಧಕರು ಹೇಳುತ್ತಾರೆ.[೪೨] ಈ ಅರ್ಥದಲ್ಲಿ ಸೀಗಮ್ಮನ ಶಿಲ್ಪದ ಆಚರಣೆ ಬಹಳ ಪ್ರಾಚೀನ ಕಾಲದಿಂದ ನಮ್ಮ ಸಂಸ್ಕೃತಿಯಲ್ಲಿ ರೂಢಿಯಲ್ಲಿತ್ತೆಂದು ಊಹಿಸಬಹುದಾಗಿದೆ.

**ಸೀಗಮ್ಮನ ಶಿಲ್ಪದ ರಚನೆ :** ಅಶ್ವಿನಿ ಶುದ್ಧ ಹುಣ್ಣಿಮೆಯೇ ಸೀಗಿ ಹುಣ್ಣಿಮೆ. ಈ ಹುಣ್ಣಿಮೆಯಲ್ಲಿ ರೈತರು ಹೊಲಗಳಲ್ಲಿ ಭೂಮಿ ತಾಯಿಗೆ ಪೂಜೆ ಮಾಡಿ ಚರಗ ಚೆಲ್ಲುವ ಸಂಪ್ರದಾಯ ಬೆಳೆದು ಬಂದಿದೆ. ಈ ಹುಣ್ಣಿಮೆಯ ಐದು ದಿನ ಮೊದಲು, ಹಿಂದೆ ಪಾಂಡವರು ಅಜ್ಞಾತವಾಸಕ್ಕೆ ಹೋದ ಸ್ಮರಣೆಗಾಗಿ ಅವರ ಹೆಸರಿನಲ್ಲಿ ಐದು ಕಲ್ಲುಗಳನ್ನು ಇಟ್ಟು ಪೂಜಿಸುವ ವಾಡಿಕೆಯೂ ಇದೆ. ಆ ಚರಗದ ಬುಟ್ಟಿಯ ತುಂಬೆಲ್ಲ ಸುಂದರವಾದ ಚಿತ್ರ ವಿನ್ಯಾಸಗಳನ್ನು ಮಾಡಿರುತ್ತಾರೆ. ಆ ಬುಟ್ಟಿಗೆ ಕಾವಿ ಬಣ್ಣ ಬಳಿದು ಅದರ ಮೇಲೆ ನಿಚ್ಚಣಿಕೆ, ಗಿಳಿ, ಹೂ ಹಣ್ಣು, ಸೂರ್ಯ ಮುಂತಾದ ಚಿತ್ರಗಳನ್ನು ಬಿಳಿಯ ಬಣ್ಣದಿಂದ ಚಿತ್ರಿಸಿರುತ್ತಾರೆ. ಇಂಥ ಬುಟ್ಟಿಗಳಲ್ಲಿ ಚರಗವನ್ನು ಹೊಲಕ್ಕೆ ಒಯ್ದು ಪೂಜೆಯಾದ ಮೇಲೆ ಚರಗವನ್ನು ಹೊಲದಲ್ಲಿ ಚೆಲ್ಲುತ್ತಾರೆ. ನಂತರ ಸೀಗಿಯನ್ನು ಮಣ್ಣಿನಿಂದ ಮಾಡಿ ಪೂಜಿಸುತ್ತಾರೆ. ಇನ್ನೂ ಕೆಲವೆಡೆ ಹೊಲದಿಂದ ಮಣ್ಣನ್ನು ಮನೆಗೆ ತಂದು ಒಂದು ಜೊತೆ ಸೀಗಿಯ ಶಿಲ್ಪಗಳನ್ನು ಮಾಡುತ್ತಾರೆ. ಇನ್ನೂ ಕೆಲವು ಪ್ರದೇಶಗಳಲ್ಲಿ ಈ ಸೀಗಮ್ಮಗಳನ್ನು ಮರದಿಂದ ಮಾಡಿಸಲಾಗಿರುತ್ತದೆ. ಈ ಸೀಗಮ್ಮ ಶಿಲ್ಪದ ವಿನ್ಯಾಸವು ಅಡಕಲ ಗಡಿಗೆಯಂತೆ ಒಂದರ ಮೇಲೊಂದರಂತೆ ಶಿಖರದ ಆಕಾರವನ್ನು ಹೊಂದಿರುತ್ತದೆ. ತಳದಲ್ಲಿ ಅಗಲವಾದ ಎತ್ತರವಾದ ವೃತ್ತಾಕಾರದ ಶಿಲಿಂಡರದಂತಿದ್ದು ಮೇಲಕ್ಕೆ ಹೋದಂತೆ ಅಡಕಲದಂತಿರುವ ಗುಂಡುಗಳು ಚಿಕ್ಕದಾಗುತ್ತ ಹೋಗುತ್ತವೆ. ಇವು ಸುಮಾರು ಐದು, ಏಳು, ಇಲ್ಲವೆ ಒಂಬತ್ತು ಹೀಗೆ ಬೆಸ ಸಂಖ್ಯೆಯ ಸುತ್ತುಗಳಿಂದ ರಚಿಸಲ್ಪಟ್ಟವುಗಳಾಗಿರುತ್ತವೆ. ತೀರ ಚಿಕ್ಕ ಅಂದರೆ ಅರ್ಧ ಅಡಿಯಿಂದ ಒಂದು ಅಡಿಯಷ್ಟು ಎತ್ತರದ ಸೀಗಮ್ಮನ ಶಿಲ್ಪಗಳನ್ನು ರಚಿಸಲಾಗಿರುತ್ತದೆ. ಈ ಶಿಲ್ಪಗಳ ಮುಂದೆ ಐದು ಸಣ್ಣ ಗಾತ್ರದ ಶಿಲ್ಪಗಳನ್ನು ಮಾಡಿ ಇಡುವದೂ ಉಂಟು. ಇವುಗಳಿಗೆ ಚೌಕಾಕಾರದ ತಳವಿನ್ಯಾಸವು ಇರುವದುಂಟು. ಇವುಗಳನ್ನೇ ಪಾಂಡವರೆಂದೂ, ಕೊಂತಿಯ (ಕುಂತಿ) ಮಕ್ಕಳೆಂದೂ ಕರೆಯುತ್ತಾರೆ. ಇವುಗಳನ್ನು ಕೆಲವರು ಕಟ್ಟಿಗೆಯಿಂದ ಮಾಡಿಸಿ ಇಟ್ಟಿರುತ್ತಾರೆ.

ಮಣ್ಣಿನ ಸೀಗಮ್ಮನ ಶಿಲ್ಪಗಳನ್ನು ಮನೆಯವರೇ ಯಾರಾದರೂ ಹೆಂಗಸರು ಮಾಡುತ್ತಾರೆ. ಗಂಡಸರೂ ರಚಿಸಿ ಕೊಟ್ಟಿರುತ್ತಾರೆ. ಆದರೆ ಮರದ ಸೀಗಮ್ಮನ ಶಿಲ್ಪವನ್ನು ಊರಲ್ಲಿಯ ಪಾಂಚಾಳರು ಮಾಡಿರುತ್ತಾರೆ. ಸಾಮಾನ್ಯವಾಗಿ ಸಿಗುವ ಜಾಲಿ, ಚಳ್ಳೆ ಮುಂತಾದ ಮರಗಳಿಂದ ಈ ಶಿಲ್ಪಗಳನ್ನು ರಚಿಸಲಾಗಿರುತ್ತದೆ. ಕೆಲವೊಮ್ಮೆ ಕೆಲವು ಊರುಗಳಲ್ಲಿ ಮಣ್ಣಿನ ಸೀಗಮ್ಮನ ಶಿಲ್ಪಗಳನ್ನು ಕುಂಬಾರರು ಮಾಡಿ ಕೊಡುತ್ತಾರೆ. ಕುಂಬಾರನ ಮನೆಯಿಂದ ಸೀಗಮ್ಮನ ಶಿಲ್ಪಗಳನ್ನು ತರುವಾಗ ಬಾಲಿಕೆಯರೆಲ್ಲ ಸೇರಿ

---

೪೨. ಡಾ. ಎಸ್.ಎಂ. ವೃಷಭೇಂದ್ರ ಸ್ವಾಮಿ (ಸಂ) : ಜಾನಪದ ಸಾಹಿತ್ಯ ದರ್ಶನ, ಭಾಗ - ೧೦, ಪುಟ - ೧೪೬

[illegible]

ಆರತಿ ಹಿಡಿದು ಹಾಡು ಹೇಳುತ್ತಾ ಮನೆಗೆ ಬರಮಾಡಿಕೊಳ್ಳುತ್ತಾರೆ. ಸೀಗಿ ಹುಣ್ಣಿಮೆಗೆ ಇನ್ನೂ ಐದು ದಿನಗಳಿರುವಾಗಲೇ ಸೀಗಮ್ಮನ ಶಿಲ್ಪವನ್ನು ತಂದು ಆಚರಿಸುತ್ತಾರೆ. ಇದಕ್ಕೆ ಸೀಗಮ್ಮನನ್ನು ಕರೆತರುವದು ಎಂದು ಹೇಳುತ್ತಾರೆ.

**ಆಚರಣೆ :** ಹುಣ್ಣಿಮೆಗೆ ಮೊದಲು ಐದು ದಿನಗಳಿರುವಾಗಲೇ ಸೀಗಮ್ಮನ ಶಿಲ್ಪಗಳನ್ನು ಕುಳ್ಳಿರಿಸಿರುತ್ತಾರೆ. ಈ ಐದೂ ದಿನಗಳಲ್ಲಿ ಸಾಯಂಕಾಲದಿಂದ ರಾತ್ರಿಯವರೆಗೆ ಯುವತಿಯರು ಓಣಿಯಲ್ಲಿ ಸೀಗಮ್ಮನನ್ನು ಕುಳ್ಳಿರಿಸಿದ ಮನೆಗಳಿಗೆ ಹೋಗಿ ಹಾಡುಗಳನ್ನು ಹಾಡುತ್ತಾರೆ. ಪ್ರತಿನಿತ್ಯವೂ ಸೀಗಮ್ಮನ ಪೂಜೆ ನಡೆಯುತ್ತದೆ. ಯುವತಿಯರು ಆರತಿಯನ್ನು ಬೆಳಗುತ್ತಾರೆ. ಪ್ರತಿ ದಿನವೂ ಮನೆಯವರು ಸೀಗಮ್ಮನ ಎಡೆಗಾಗಿ ಬೇರೆ-ಬೇರೆ ತರಹದ ಪಕ್ವಾನ್ನಗಳನ್ನು ಮಾಡಿರುತ್ತಾರಲ್ಲದೆ, ಆರತಿಗೆ ಬಂದವರಿಗೆಲ್ಲ ಹಂಚುತ್ತಾರೆ. ಹೀಗೆ ಐದು ದಿನಗಳ ಕಾಲ ಸೀಗಮ್ಮನನ್ನು ಪೂಜಿಸಿ ಐದನೆಯ ದಿನಕ್ಕೆ ಸೀಗಿಯನ್ನು ಕಳುಹಿಸುವ ಕಾರ್ಯಕ್ರಮವು ನಡೆಯುತ್ತದೆ. ಅಂದು ವಿವಿಧ ರೀತಿಯ ರುಚಿಕರವಾದ ಊಟವನ್ನು ತಗೆದುಕೊಂಡು ಕೆರೆ, ಭಾವಿ ಅಥವಾ ನದಿಗಳಂತಹ ಜಲಾಶಯಗಳ ಹತ್ತಿರ ಹೋಗಿ, ಊಟ ಮಾಡಿ ಸೀಗಿಯನ್ನು ಕಳುಹಿಸಿ ಬರುತ್ತಾರೆ. ಇನ್ನೂ ಕೆಲವೆಡೆ ಎರಡನೆಯ ದಿನ ಮುಂಜಾನೆ ರೈತರ ಹೆಣ್ಣುಮಕ್ಕಳು ಹೊಸ ಧಾನ್ಯಗಳಿಂದ ಅಡುಗೆ ಮಾಡಿ, ಕಟ್ಟಿಕೊಂಡು ಓಣಿಯ ಜನರನ್ನು ಕರೆದುಕೊಂಡು ತಮ್ಮ ಹೊಲಗಳಿಗೆ ಹೋಗುತ್ತಾರೆ. ಹೊಲದಲ್ಲಿ ಬನ್ನಿಯ ಗಿಡವಿದ್ದರೆ, ಅದರಡಿಯಲ್ಲಿ ಎಲ್ಲರೂ ಸೇರಿ ಐದು ಸಾಧಾರಣ ಗಾತ್ರದ ಕಲ್ಲುಗಳನ್ನು ಇಟ್ಟು- ಚಿಕ್ಕವುಗಳು ಪಾಂಡವರೆಂದೂ, ದೊಡ್ಡದು ಕುಂತಿಯೆಂದೂ ಭಾವಿಸಿ ಪೂಜಿಸುತ್ತಾರೆ. ಕುಂತಿ ಸಂತಾನ ದೇವತೆಯೆಂದೂ ಅವಳ ಕೃಪೆಯಿಂದ ಮಳೆ-ಬೆಳೆ ಇಮ್ಮಡಿಸುತ್ತವೆಂದೂ ನಂಬಿಕೆಯಿದೆ. ಈ ನಂಬಿಕೆಯ ಹಿನ್ನೆಲೆಯಲ್ಲಿ ಪೂಜಿಸಿಯಾದ ಮೇಲೆ ಚರಗ ಚೆಲ್ಲುತ್ತಾರೆ. ನಂತರ ಎಲ್ಲರೂ ಊಟ ಮಾಡುತ್ತಾರೆ. ಹೆಣ್ಣು ಮಕ್ಕಳು ಮನೆಯಿಂದ ಬರುವಾಗ ತಂದ ಸೀಗಮ್ಮಗಳನ್ನು ಬನ್ನಿಯ ಮರದಡಿಯಿರುವ ಕಟ್ಟೆ ಇಲ್ಲವೆ ಹೊಲದ ಯಾವುದೇ ಒಂದು ಭಾಗದಲ್ಲಿ ಇಟ್ಟು, ಪೂಜಿಸಿ ಮನೆಗೆ ಬರುತ್ತಾರೆ.

ಗೌರಮ್ಮನ ಶಿಲ್ಪವನ್ನು ಕೆಲವೆಡೆ ಮಣ್ಣಿನಿಂದ ಮಾಡಿರುತ್ತಾರಾದರೂ, ಕಟ್ಟಿಗೆಯ ಮಾಧ್ಯಮದಲ್ಲಿ ಮಾಡಿರುವದೇ ಉತ್ತರ ಕರ್ನಾಟಕದಲ್ಲೆಡೆ ಹೆಚ್ಚು ಪ್ರಚಲಿತವಿದೆ. ಗೌರಮ್ಮನ ಶಿಲ್ಪವು ಸೀಗಮ್ಮನ ಶಿಲ್ಪಕಿಂತ ಕಲಾತ್ಮಕವಾಗಿ ಸುಂದರವಾಗಿರುತ್ತದೆ[೪೩] ಎಂಬುದನ್ನು ಗಮನಿಸಬೇಕು.

## ಈ. ಗಜಲಕ್ಷ್ಮೀ ಶಿಲ್ಪಗಳು

ಸಾಮಾನ್ಯವಾಗಿ ಲಕ್ಷ್ಮೀಯನ್ನು ಪೂಜಿಸುವದು ಕರ್ನಾಟಕದೆಲ್ಲೆಡೆಗೂ ಕಂಡುಬರುತ್ತದೆ. ಆದರೆ

---

೪೩. ನೋಡಿ, ಇದೇ ಮಹಾ ಪ್ರಬಂಧದ ಅಧ್ಯಾಯ : ನಾಲ್ಕು ; ಮರದ ಮಾಧ್ಯಮದ ಜನಪದ ಶಿಲ್ಪಕಲೆ, ಗೌರಮ್ಮನ ಶಿಲ್ಪಗಳು

ರಜಪೂತ್ ಜನಾಂಗದವರ ಪರಂಪರೆಯಲ್ಲಿ ಲಕ್ಷ್ಮೀಯನ್ನು ಪೂಜಿಸಿ ಆಚರಿಸುವ ಪದ್ಧತಿ ಭಿನ್ನವಾಗಿದೆ. ಇದನ್ನು ಗಜಲಕ್ಷ್ಮೀ ಪೂಜೆ ಎಂದು ಕರೆಯುತ್ತಾರೆ. ಈ ಪೂಜೆಯನ್ನು ಅವರು ಒಂದು ವ್ರತವನ್ನಾಗಿ ಆಚರಿಸುತ್ತಾರೆ. ಅಶ್ವಿಜ ಮಾಸದ ಕೃಷ್ಣ ಪಕ್ಷ ಪ್ರತಿಪದ ಅಮವಾಸ್ಯೆಯವರೆಗೆ ಅಂದರೆ ಬರುವ ಅಷ್ಟಮಿಯ ದಿವಸದಂದು ಗಜಲಕ್ಷ್ಮೀಯನ್ನು ಭಕ್ತಿ-ವೈಭವಗಳಿಂದ ಆಚರಿಸುವ ಪದ್ಧತಿ ಹಿಂದಿನಿಂದಲೇ ಬಂದುದೆಂದು ಹಿರಿಯರು ಹೇಳುವ ಗಜಲಕ್ಷ್ಮೀ ಕಥೆಗಳಿಂದ ತಿಳಿದು ಬರುತ್ತದೆ. ಗಜ ಎಂದರೆ ಆನೆ. ಆನೆಯು ಲಕ್ಷ್ಮೀಯ ವಾಹನವಾಗಿದೆ. ಈ ಆನೆ ಬುದ್ಧಿವಂತ, ಗಂಭೀರ ಹಾಗೂ ಬಲಶಾಲಿ ಪ್ರಾಣಿಯೆನಿಸಿದೆ. ಉತ್ತರ ಭಾರತದಲ್ಲಿ ಹೆಚ್ಚಾಗಿ ಈ ಆಚರಣೆ ಕಂಡುಬರುತ್ತದೆ. ಕರ್ನಾಟಕದಲ್ಲಿರುವ ರಜಪೂತರಲ್ಲಿ ಈ ಆಚರಣೆ ಇನ್ನೂ ಜೀವಂತವಾಗಿದೆ.

**ರಚನೆ :** ರಜಪೂತರು ಅಶ್ವಿಜ ಮಾಸದ ಕೃಷ್ಣ ಪಕ್ಷ ಅಷ್ಟಮಿಯ ದಿನ ಕುಂಬಾರನ ಮನೆಯಿಂದ ಹದ ಮಾಡಿದ ಮಣ್ಣನ್ನು ತಂದು ಸರಳವಾದ ರೀತಿಯಲ್ಲಿ ಆನೆಯ ಶಿಲ್ಪವೊಂದನ್ನು ಮಾಡುತ್ತಾರೆ. ಆ ಆನೆಯ ನಾಲ್ಕೂ ಕಾಲುಗಳ ಎಡ ಮತ್ತು ಬಲಗಳಲ್ಲಿ ಒಂದೊಂದು ಕಾಲುಗಳಿಗೆ ನಾಲ್ಕು ನಾಲ್ಕರಂತೆ ದೀಪ ಹಚ್ಚಲು ಬರುವಂತೆ ಹಣತೆಯ ಆಕಾರದಲ್ಲಿರುವಂತೆ ಹದಿನಾರು ತಗ್ಗುಗಳನ್ನು ಮಾಡುತ್ತಾರೆ.[೪೪] ಹೀಗೆ ಸಿದ್ಧಗೊಂಡ ಆನೆಯ ಮೇಲೆ ಸರಳವಾಗಿ ರಚಿಸಲಾದ ಲಕ್ಷ್ಮೀಯ ಮೂರು ಶಿಲ್ಪಗಳನ್ನು ಕುಳ್ಳಿರಿಸುತ್ತಾರೆ. ಕೆಲವೊಮ್ಮೆ ಲಕ್ಷ್ಮೀಯರ ಮೂರು ಶಿಲ್ಪಗಳೊಟ್ಟಿಗೆ ಮಾವುತನನ್ನು (ಆನೆ ನಡೆಸುವವ) ಮಾಡಿ ಕುಳ್ಳಿಸಿರುಸಿರುತ್ತಾರೆ. ಹೀಗೆ ಹದಗೊಳಿಸಿದ ಮಣ್ಣಿನಿಂದ ಶಿಲ್ಪಗಳನ್ನು ರಚಿಸಿ ಒಣಗಿಸುತ್ತಾರೆ. ಒಣಗಿದ ನಂತರ ಸಂಪೂರ್ಣವಾಗಿ ಬಿಳಿಯ ಬಣ್ಣವನ್ನು ಗಜಲಕ್ಷ್ಮೀಯರ ಶಿಲ್ಪಗಳಿಗೆ ಬಳಿದು, ಅನಂತರ ವಿವಿಧ ಬಣ್ಣಗಳಿಂದ ಅಲಂಕಾರಗೊಳಿಸುತ್ತಾರೆ. ಈ ಮೂವರು ಲಕ್ಷ್ಮೀಯರೆಂದರೆ ಒಬ್ಬಳು ಗಜಲಕ್ಷ್ಮೀ, ಮತ್ತೊಬ್ಬಳು ವರ ಲಕ್ಷ್ಮೀ, ಮಗದೊಬ್ಬಳು ಮಹಾಲಕ್ಷ್ಮೀ ಎಂದು ಹೇಳುತ್ತಾರೆ. ಲಕ್ಷ್ಮೀಯರ ಸಹಿತ ಸಿದ್ಧಗೊಂಡ ಆನೆ ಮುಖ್ಯವಾಗಿ ಕೆಂಪು, ಹಳದಿ, ನೀಲಿ, ಹಸಿರು, ಗುಲಾಬಿ ಬಣ್ಣಗಳಿಂದ ಅಲಂಕೃತವಾಗಿರುತ್ತದೆ. ಕಪ್ಪು ಬಣ್ಣದಿಂದ ರೇಖಾತ್ಮಕವಾಗಿ ಕಣ್ಣು, ಕಿವಿ, ಕೇಶ, ಬಾಯಿ, ಮೂಗು ಎಲ್ಲವನ್ನೂ ರಚಿಸಿ ಸುಂದರವಾಗಿಸಿರುತ್ತಾರೆ. ಅನಂತರ ಅವುಗಳ ಪೂಜಾ ಕಾರ್ಯ ನಡೆಯುತ್ತದೆ.

**ನಂಬಿಕೆ :** ಗಜಲಕ್ಷ್ಮೀ ಪೂಜೆ ಕುರಿತು ಕಥೆಯೊಂದು ಸ್ವಾರಸ್ಯಕರವಾಗಿದೆ. ಈ ಕಥೆಯ ಪ್ರಕಾರ ಗಜಲಕ್ಷ್ಮೀಯ ಪೂಜೆ ಮಾಡುವದರಿಂದ ಧನ-ಧಾನ್ಯದಿಂದ ಸಂಪನ್ನರಾಗಿ ಸುಖ, ಸಂತೃಪ್ತಿ ದೊರೆಯುತ್ತದೆ. ಯಾರ ಪತಿಯು ಪರದೇಶಕ್ಕೆ ಹೋಗಿರುವನೋ ಅವನು ಸುರಕ್ಷಿತವಾಗಿ ಮರಳುತ್ತಾನೆ, ಸಂತಾನ ಪ್ರಾಪ್ತಿಯಾಗುತ್ತದೆ, ಅಮಂಗಳ ನಿವಾರಣೆಯಾಗುತ್ತದೆ, ಸಮಾಜದಲ್ಲಿ ಪ್ರತಿಷ್ಠೆ ಹೆಚ್ಚುತ್ತದೆ, ಇತ್ಯಾದಿ ನಂಬಿಕೆಗಳು ಇವೆ.

---

೪೪. ಮಾಹಿತಿ ನೀಡಿದವರು : ವಿಶ್ವೇಶ್ವರಿ ತಿವಾರಿ, ಗುಲಬರ್ಗಾ.

ಸೌಂದರ್ಯಾಸ್ವಾದನೆಯ ದೃಷ್ಟಿಯಿಂದಲೂ ಈ ಶಿಲ್ಪ ಗಮನಾರ್ಹವಾಗುತ್ತದೆ. ಆಕಾರದಲ್ಲಿ ಚಿಕ್ಕದಾಗಿದ್ದರೂ ಬೃಹತ್ತಾದ ಆನೆಯನ್ನು, ಚಿಕ್ಕದಾಗಿ ರಚಿಸಿರುವುದು ಎಡ-ಬಲಗಳಲ್ಲಿ ಪಣತಿಯ ಹಾಗೆ ಮಾಡಿ ದೀಪ ಬೆಳಗಿಸಿರುವುದು ಮತ್ತು ಆ ಆನೆಯ ಮೇಲೆ ಸಾಲಂಕೃತರಾಗಿ ಲಕ್ಷ್ಮೀಯ ಶಿಲ್ಪಗಳನ್ನು ಕುಳ್ಳಿರಿಸಿರುವುದೂ ಅರ್ಥಪೂರ್ಣ. ಒಂದೊಂದು ಸಂಕೇತಗಳೂ ಆಶಯದ ಹಿನ್ನೆಲೆಯಲ್ಲಿ ಇನ್ನೊಂದನ್ನು ಪ್ರತಿನಿಧಿಸುವದರಿಂದ ಬದುಕಿಗೆ ಅಸ್ತಿತ್ವವನ್ನು ಒದಗಿಸುವ ಶಕ್ತಿಯ ಪ್ರತಿರೂಪಗಳಾಗಿ ಕಂಡುಬರುತ್ತವೆ. ಈ ಶಿಲ್ಪಗಳು ಮನೆಯ ಒಳಗಡೆಯೇ ಮಹಿಳೆಯರ ಕೇಂದ್ರಿತವಾಗಿ ರಚನೆಗೊಂಡು ಆಚರಿಸಲ್ಪಡುತ್ತವೆ.

## ಉ. ಅಮ್ಮನ ಶಿಲ್ಪಗಳು

ಅಮ್ಮ ಒಂದು ಬಗೆಯ ಕಾಯಿಲೆ ದೇವತೆ. ಮಕ್ಕಳಾದಿಯಾಗಿ ದೊಡ್ಡವರಲ್ಲೂ ಕಾಣಿಸಿಕೊಳ್ಳುವ ರೋಗ. ಶಕ್ತಿ ದೇವತೆಗಳು ಕೋಪಗೊಂಡಾಗ ಈ ಕಾಯಿಲೆ ಬರುವದೆಂದು ಗ್ರಾಮೀಣರ ನಂಬಿಕೆ. ಈ ಕಾಯಿಲೆಗೆ ಬೇರೆ-ಬೇರೆ ಕಡೆಗೆ ಬೇರೆ-ಬೇರೆ ರೀತಿಯ ಹೆಸರಿದೆ. ಈ ಕಾಯಿಲೆಯ ಹೆಸರಿನಲ್ಲಿ ಮಣ್ಣಿನ ಶಿಲ್ಪವೊಂದನ್ನು ರಚಿಸಿ, ಪೂಜಿಸುವ ಸಂಪ್ರದಾಯ ರೂಢಿಯಲ್ಲಿದೆ. ಈ ಶಿಲ್ಪವನ್ನು ರಚಿಸಿ, ಆಚರಿಸಿ ವಿಸರ್ಜಿಸುವ ಒಟ್ಟಾರೆ ಸಂಪ್ರದಾಯಕ್ಕೆ ಅಮ್ಮನನ್ನು ಕಳಿಸುವದು ಎಂದು ಹೇಳುತ್ತಾರೆ. ಅಮ್ಮನನ್ನು ಕಳಿಸುವ ಪದ್ಧತಿಯೂ ಪ್ರದೇಶದಿಂದ ಪ್ರದೇಶಕ್ಕೆ ಬೇರೆ-ಬೇರೆಯಾಗಿದೆ. ಶಿವಮೊಗ್ಗ ಜಿಲ್ಲೆಯ ಕಡೆಗೆ ಹಾಗೂ ಬಳ್ಳಾರಿ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಊರವರೆಲ್ಲರೂ ಸೇರಿ ಸಾಮೂಹಿಕವಾಗಿ ಅಮ್ಮನ್ನು ಕಳುಹಿಸುವರು.

ಅಮ್ಮನ ಪೂಜೆ ಸಾಮಾನ್ಯವಾಗಿ ಮಂಗಳವಾರ ಇಲ್ಲವೆ ಶುಕ್ರವಾರ ನಡೆಯುತ್ತದೆ. ಈ ಪೂಜೆ ನಡೆಯುವ ಎರಡು, ಮೂರು ದಿನಗಳ ಮುಂಚೆಯೇ ಹಿರಿಯರ ಅಪ್ಪಣೆಯಂತೆ ತಳವಾರನು ತಮ್ಮಟೆ ಬಡಿದು ಹಬ್ಬದ ದಿನವನ್ನು ಸಾರುತ್ತಾನೆ. ಆಗ ಊರವರೆಲ್ಲ ಅಮ್ಮನ ಪೂಜೆಗೆ ಸಿದ್ಧರಾಗುತ್ತಾರೆ.

**ಅಮ್ಮನ ಶಿಲ್ಪದ ರಚನೆ :** ಸಾಂಪ್ರದಾಯಿಕ ವಿಧಿಬದ್ಧವಾದ ಆಚರಣೆಗಳನ್ನು ಮಾಡಿ ಅಮ್ಮನ ಶಿಲ್ಪ ತಯಾರಿಸಲಾಗುತ್ತದೆ. ಅಮ್ಮನ ಪೂಜೆಯ ದಿನ ಎರೆಮಣ್ಣನ್ನು ತಂದು ಎರಡು ದೇವತಾ ಶಿಲ್ಪಗಳನ್ನು ರಚಿಸುತ್ತಾರೆ. ಅವುಗಳಲ್ಲಿ ಒಂದು ಗಂಡು ಮತ್ತೊಂದು ಹೆಣ್ಣು ಶಿಲ್ಪವಾಗಿರುತ್ತವೆ. ರಚನೆಗೊಂಡ ಈ ಶಿಲ್ಪಗಳನ್ನು ಒಂದು ಮಣೆ ಅಥವಾ ಹಲಗೆಯ ಮೇಲೆ ಇಟ್ಟು ಮಾರಿ ದೇವತೆಯ ಗುಡಿಯಲ್ಲಿ ಪ್ರತಿಷ್ಠಾಪಿಸುವರು. ಈ ಶಿಲ್ಪಗಳಿಗೆ ಕಣಗಿಲೆಯ ಹೂ, ಬೇವಿನ ಸೊಪ್ಪು ಮುಡಿಸಿ ಕುಂಕುಮ ಇಟ್ಟು ಶೃಂಗರಿಸುವರು. ನಂತರ ಊರವರೆಲ್ಲ ಅಕ್ಕಿಯ ಹಿಟ್ಟಿನಿಂದ ಮಾಡಿದ ತಂಬಿಟ್ಟು ತಂದು ಒಪ್ಪಿಸುವ ಮೂಲಕ ಊರಿಗೆ ಬಂದ ಅನಿಷ್ಟ ರೋಗ ರುಜಿನಗಳು ಕಳೆಯಲಿ ಎಂದು ಹೇಳಿ ಹೋಗುತ್ತಾರೆ. ಈ ರೀತಿ ಊರವರೆಲ್ಲ ಪೂಜೆ ಸಲ್ಲಿಸಿಯಾದ ನಂತರ ಆ ಶಿಲ್ಪಗಳನ್ನು ತಮ್ಮಟೆ ವಾದ್ಯಗಳೊಂದಿಗೆ ಊರಿನಿಂದ ಹೊರಗೆ ಮೊದಲೇ ನಿರ್ಮಿಸಲಾಗಿದ್ದ ಸಣ್ಣ ಗುಡಿಸಲಿಗೆ ಕೊಂಡೊಯ್ದು ಇಡುತ್ತಾರೆ. ಮಾರನೆಯ ದಿನ

ಬೆಳಿಗ್ಗೆ ಕುರಿ, ಕೋಳಿ ಕೊಯ್ದು ಅಮ್ಮಗೆ ಬಲಿ ಕೊಡುತ್ತಾರೆ.

**ವಿಸರ್ಜನೆ :** ಇಷ್ಟೆಲ್ಲ ಆದ ಮೇಲೆ ವಾಧ್ಯ, ತಮ್ಮಟೆ ಬಾರಿಸುತ್ತ ಶಿಲ್ಪಗಳೆರಡನ್ನೂ ಹರಿಯುವ ನೀರಿನಲ್ಲಿ ವಿಸರ್ಜನೆ ಮಾಡಿ ಮನೆಗೆ ಮರಳುತ್ತಾರೆ.

ದುಃಖ-ಕಷ್ಟಗಳು, ರೋಗ-ರುಜಿನಗಳು ಯಾರಿಗೆ ತಾನೆ ಬೇಕು. ಬೇಡವಾದ ಈ ನೈಸರ್ಗಿಕವಾದ ಜಾಡ್ಯಗಳು ಮಾನವನ ಅತಿರೇಕಗಳನ್ನು ಕಂಡು, ಕೋಪಗೊಂಡು ವಿವಿಧ ಶಕ್ತಿ ದೇವತೆಗಳು ಸೃಷ್ಟಿಸಿದವುಗಳೆಂದು ಜನಪದರು ನಂಬುತ್ತಾರೆ. ಅವುಗಳಿಗೆ ತೃಪ್ತಿ ಪಡಿಸಿದರೆ ಎಲ್ಲ ರೋಗ ರುಜಿನಗಳು ಮಾಯವಾಗುತ್ತವೆ ಎಂದು ನಂಬಿ ಅಮ್ಮನಂತಹ ಶಿಲ್ಪಗಳನ್ನು ಆಚರಿಸುವ ಸಂಪ್ರದಾಯಗಳನ್ನು ರೂಡಿಸಿಕೊಂಡು ಬಂದಿದ್ದಾರೆ. ಅಮ್ಮದಂತಹ ಖಾಯಿಲೆ ದೇವತೆಗಳು ಸಾಮಾನ್ಯವಾಗಿ ಕ್ಷುದ್ರ ದೇವತೆಗಳಾಗಿರುತ್ತವೆ. ಇಂತಹ ದೇವತಾ ಶಿಲ್ಪಗಳು ಸರಳವಾದ ರಚನೆಗಳಾಗಿರುತ್ತವೆ, ಹಾಗೂ ಸೌಂದರ್ಯ ದೃಷ್ಟಿ ಗೌಣವಾಗಿರುತ್ತದೆ.

ಗಣೇಶ, ಮಣ್ಣೆತ್ತು, ಜೋಕುಮಾರ ಇಂಥ ಅನೇಕ ಶಿಲ್ಪಗಳ ಆಚರಣೆ ಮತ್ತು ವಿಸರ್ಜನೆಯಲ್ಲಿ ಆಶಿಲ್ಪಗಳಿಗೂ ಮತ್ತು ಆಚರಿಸುವ ಜನಪದರಿಗೂ ಮಧ್ಯೆ ಒಂದು ಸಾಂಗತ್ಯವೇರ್ಪಟ್ಟಿರುತ್ತದೆ. ಮತ್ತು ವಿಸರ್ಜನೆಯಲ್ಲಿ ಮರುಹುಟ್ಟು ಪಡೆದು ಬರುವ ನಿರೀಕ್ಷೆಯಿರುತ್ತದೆ. ಅದಕ್ಕಾಗಿ ವಿಸರ್ಜನೆಯಲ್ಲೂ ಒಂದು ಬಗೆಯ ಆನಂದೋತ್ಸಾಹಗಳನ್ನು ಜನಪದರು ಅನುಭವಿಸುತ್ತಾರೆ. ಆದರೆ ಅಮ್ಮನಂತಹ ಖಾಯಿಲೆ ದೇವತೆಗಲ ಆಚರಣೆಯಲ್ಲಿ ಈ ತಾದ್ಯಾತ್ಮತೆಯ ಅಂಶಗಳಾವವೂ ಇರುವುದಿಲ್ಲ.

## ೧.೩ ಮಣ್ಣಿನ ಮಾಧ್ಯಮದ ಪ್ರಾಣಿ ದೇವತಾ ಶಿಲ್ಪಗಳು

ಎತ್ತು, ಆಕಳು, ಎಮ್ಮೆ, ನಾಯಿ ಮುಂತಾದ ಅನೇಕ ಪ್ರಾಣಿಗಳು ಮನುಷ್ಯನ ಬದುಕಿಗೆ ಒಂದಲ್ಲ ಒಂದು ಬಗೆಯಲ್ಲಿ ಸಹಾಯಕವಾಗಿವೆ. ಆದ್ದರಿಂದ ಅವುಗಳೆಲ್ಲ ಪೂಜ್ಯನೀಯ ಎಂಬುದು ನಮ್ಮ ಜನಪದರ ನಂಬಿಕೆಯಾಗಿದೆ. ಹಾಗಾಗಿ ಅವರು, ಉಳುಮೆ ಮಾಡುವಲ್ಲಿ ಸಹಾಯಕವಾದ ಎತ್ತುಗಳಿಗೆ ಕೃತಜ್ಞತೆ ಸಲ್ಲಿಸುವ ದೃಷ್ಟಿಯಿಂದ ಮಣ್ಣಿನಿಂದ ಎತ್ತುಗಳನ್ನು ಮಾಡಿ ಪೂಜಿಸುವರು. ಆ ಮೂಲಕ ಅನ್ನ ನೀಡುವ ಮಣ್ಣಿಗೂ ಕೃತಜ್ಞತೆ ಸಲ್ಲಿಸಿದಂತಾಗುವುದೆಂದು ಭಾವಿಸುತ್ತಾರೆ.

ಅಲ್ಲದೆ ವಿಷಜಂತಾಗಿರುವ ಹಾವು, ಶಕ್ತಿಶಾಲಿಯಾಗಿರುವ ಆನೆ, ನಿದಾನ ಗತಿಗೆ ಹೆಸರಾದ ಆಮೆ ಮುಂತಾದ ಪ್ರಾಣಿಗಳು ಒಂದಿಲ್ಲ ಒಂದು ಧಾರ್ಮಿಕ ನಂಬಿಕೆಯ ಹಿನ್ನೆಲೆಯಲ್ಲಿ, ಉಪಯುಕ್ತತೆಯ ಹಿನ್ನೆಲೆಯಲ್ಲಿ ಉಪಕಾರಕವಾಗಿರುವುವೆಂದು ಭಾವಿಸಿದ್ದಾರೆ. ಹೀಗಾಗಿ ಅವುಗಳ ಶಿಲ್ಪಗಳನ್ನು ರಚಿಸಿ ಪೂಜಿಸುತ್ತಾ ಬಂದಿದ್ದಾರೆ ನಮ್ಮ ಗ್ರಾಮೀಣರು. ಹಾಗೆ ಶಿಲ್ಪಗಳನ್ನು ಮಣ್ಣಿನಲ್ಲಿ ರಚಿಸಿ ಪೂಜಿಸುವದರಿಂದ ಇಷ್ಟಾರ್ಥಗಳು ಸಿದ್ಧಿಸುತ್ತವೆ, ಸುಖಃ ಸಮೃದ್ಧಿಗಳು ಲಭಿಸುತ್ತವೆ ಎಂದೆಲ್ಲ ಅವರು ಭಾವಿಸಿದ್ದಾರೆ.

ಪ್ರಸ್ತುತ ವಿಭಾಗದಲ್ಲಿ ಅ. ಮಣ್ಣೆತ್ತು ಶಿಲ್ಪಗಳು, ಆ. ಕೋಟೆ ಬಸವನ ಶಿಲ್ಪಗಳು, ಇ. ಆರಳೆಲೆ ಬಸವನ ಶಿಲ್ಪಗಳು, ಈ. ಹುತ್ತಪ್ಪನ ಶಿಲ್ಪಗಳು, ಉ. ತೋಪು ಹೊತ್ತ ಆನೆಯ ಶಿಲ್ಪಗಳು, ಊ. ಆನೆಯ ಶಿಲ್ಪಗಳು, ಋ. ಆಮೆಯ ಶಿಲ್ಪಗಳು ಪ್ರಮುಖವಾಗಿ ಬರುತ್ತವೆ.

## ಅ. ಮಣ್ಣೆತ್ತು ಶಿಲ್ಪಗಳು

ಪ್ರಾಚೀನ ಕಾಲದಿಂದಲೂ ಹಬ್ಬ ಹರಿದಿನಗಳು ಜನಪದರ ಬದುಕಿನಲ್ಲಿ ಹಾಸುಹೊಕ್ಕಾಗಿವೆಯಲ್ಲದೆ ಕಟ್ಟು ನಿಟ್ಟಾಗಿ ಆಚರಿಸಿಕೊಂಡು ಬರಲಾಗಿದೆ. ಪ್ರತಿಯೊಂದು ಹುಣ್ಣಿಮೆ ಮತ್ತು ಅಮವಾಸ್ಯೆಗಳು ಒಂದಿಲ್ಲ ಒಂದು ಹೆಸರಿನ ಹಬ್ಬವಾಗಿ ಆಚರಿಸುವ ಸಂಪ್ರದಾಯ ಗ್ರಾಮೀಣರಲ್ಲಿ ಬೆಳೆದುಕೊಂಡು ಬಂದಿದೆ. ಹಬ್ಬದ ದಿನದಂದು ತಮ್ಮ ತಮ್ಮ ದೇವತೆಗಳು ಮತ್ತು ಪ್ರೀತಿಯ ಪ್ರಾಣಿಗಳ ಶಿಲ್ಪಗಳನ್ನು ಮಣ್ಣಿನಲ್ಲಿ ರಚಿಸಿ, ಪೂಜಿಸಿ ನೈವೇಧ್ಯ ಮಾಡುವ ಸಂಪ್ರದಾಯ ಅನೂಚಾನವಾಗಿ ಬೆಳೆದು ಬಂದಿದೆ. ಇಂತಹ ಹಬ್ಬಗಳಲ್ಲಿ ಒಂದಾದ ಮಣ್ಣಿನ ಅಮವಾಸ್ಯೆಯಂದು ಮಣ್ಣಿನ ಎತ್ತುಗಳನ್ನು ಮಾಡಿ ಪೂಜಿಸುವ ಸಂಪ್ರದಾಯವಿದೆ. ಈ ಸಂಪ್ರದಾಯ ಹೆಚ್ಚಾಗಿ ಉತ್ತರ ಕರ್ನಾಟಕ ಪ್ರದೇಶದಲ್ಲಿ ರೂಢಿಯಲ್ಲಿದೆ.

ಜೇಷ್ಠ ವದ್ಯ (ಬಹುಳ) ಅಮವಾಸ್ಯೆಯ ದಿನದಂದು ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಆಚರಿಸಲ್ಪಡುವ ಇದು  ಜನಪದ ಹಬ್ಬವಾಗಿದ್ದು ಮಣ್ಣೆತ್ತಿನ ಹಬ್ಬವೆಂದೇ ಪ್ರಸಿದ್ಧ. ಪಂಚಾಂಗಗಳಲ್ಲಿ ಈ ಹಬ್ಬವನ್ನು 'ಮೃತ್ತಿಕಾ ವೃಷಭ ಪೂಜಾ' ಎಂದು ಕರೆಯಲಾಗಿದೆ. ಸಕಲ ಜೀವರಾಶಿಗೆ ಅನ್ನ ಹಾಕುವ ಭೂಮಿ ತಾಯಿಯ ಮಣ್ಣಿನೊಡನೆ ಬೆರೆತು ಮಣ್ಣಾಗಿ ದುಡಿಯುವ ಬಸವಣ್ಣನಿಗೂ ತಮ್ಮ ಕೃತಜ್ಞತೆಯನ್ನು ಸೂಚಿಸಲು ರೈತರು ಆ ದಿವಸ ಮಣ್ಣಿನಿಂದಲೇ ತಯಾರಿಸಿದ ಬಸವಣ್ಣಗಳನ್ನು ಪೂಜಿಸುತ್ತಾರೆ. ಮಣ್ಣೆತ್ತು ಎಂಬ ಪದ ಪ್ರಯೋಗವು ಮೊತ್ತ ಮೊದಲು ತೋರುವದು ಹನ್ನೆರಡನೆಯ ಶತಮಾನದ ಶರಣರ ವಚನಗಳಲ್ಲಿ

> ಸದಾಚಾರವ ಕಂಡು, ಲಾಂಛನ ಪಕ್ಷವ ನೋಡದವರಿಗೆ
> ಇಹದೊಳು ಪರದೊಳು ಗತಿಯಿಲ್ಲ - ಗತಿಯಿಲ್ಲ ಕಾಣಿರೋ
> ಮಣ್ಣೆತ್ತಾದಡೇನು ? ತನ್ನೆತ್ತ ಗೆಲಬೇಕೆಂಬುದಕ್ಕೊಲಿವನು
> ನಮ್ಮ ಕೂಡಲ ಸಂಗಮ ದೇವಯ್ಯನು

ಬಸವಣ್ಣನವರ ಈ ವಚನದಿಂದ ಅವರ ಜೀವಿತ ಕಾಲದಲ್ಲಿ ಮಣ್ಣಿನಿಂದ ಎತ್ತುಗಳ ಶಿಲ್ಪವನ್ನು ಮಾಡುತ್ತಿದ್ದರೆಂದು ತಿಳಿದು ಬರುತ್ತದೆ[೪೫]★ ಮಾತ್ರವಲ್ಲದೆ, ಮಣ್ಣೆತ್ತುಗಳನ್ನು ಸಿದ್ಧಗೊಳಿಸಿ ವಿಶೇಷ ಸಂದರ್ಭಗಳಲ್ಲಿ ಪೂಜಿಸುವ ಪದ್ಧತಿ ಬಸವಣ್ಣನವರ ಕಾಲಕ್ಕಿಂತ ಮೊದಲೂ ಇದ್ದಿರಬೇಕೆಂದು ಊಹಿಸಲು

---

೪೫. ಡಾ. ಎಸ್.ಎಂ. ವೃಷಭೇಂದ್ರ ಸ್ವಾಮಿ (ಸಂ): ಜಾನಪದ ಸಾಹಿತ್ಯ ದರ್ಶನ, ಭಾಗ - ೧೦, ಪುಟ - ೬೮



ಬಣ್ಣದಿಂದ ಅಲಂಕೃತಗೊಂಡ ಮಣ್ಣೆತ್ತು ಶಿಲ್ಪಗಳು (ಗುಲಬರ್ಗಾ)



ಮಣ್ಣೆತ್ತು ಶಿಲ್ಪಗಳು (ಬೆಳಗಾವಿ ಜಿಲ್ಲೆ)

ಅವಕಾಶವಿದೆ.

ಮಣ್ಣೆತ್ತುಗಳನ್ನು ರಚಿಸಿ ಪೂಜಿಸುವ ಸಂಪ್ರದಾಯ ರೂಢಿಗೆ ಬಂದುದಕ್ಕೆ ಸಂಬಂಧಿಸಿದಂತೆ ಅನೇಕ ಬಗೆಯ ಕಥೆಗಳು ಜಾನಪದದಲ್ಲಿ ಬೆಳೆದು ಬಂದಿವೆ. ಅವೆಲ್ಲ ಅವಾಸ್ತವ ಎನಿಸುತ್ತವೆ. ಒಂದೆರಡನ್ನು ಇಲ್ಲಿ ನೋಡಬಹುದು.

**ಕಥೆ ೧.** ಜೇಷ್ಠ ವದ್ಯ ಅಮವಾಸ್ಯೆಯಂದು ತೀರಿಕೊಂಡ ತನ್ನ ಪತಿಯ ಶವದ ಹತ್ತಿರ ಮಳೆಯಿಂದ ತೊಯ್ದ ಮಣ್ಣಿನಿಂದ ಸತಿಯು ಬಸವನನ್ನು ಮಾಡಿ ಶಿವನನ್ನು ಧ್ಯಾನಿಸಲು, ಶಿವ ಪ್ರತ್ಯಕ್ಷನಾಗಿ ಪತಿಗೆ ಪ್ರಾಣದಾನ ಮಾಡಿದನು. ಅಲ್ಲದೆ ಮಗಳೇ ನೀನು ಮಾಡಿದ ಮಣ್ಣಿನ ಬಸವ ಚಿನ್ನದ ಬಸವನಾಗಿ ಪೂಜೆಗೊಳ್ಳುತ್ತ ಭಕ್ತರ ಅಭಿಲಾಷೆಯನ್ನು ಈಡೇರಿಸಲಿ ಎಂದು ಆಶೀರ್ವದಿಸಿದ.[೪೬] ಅದೇ ಕಾಲಾನಂತರದಲ್ಲಿ ಮಣ್ಣೆತ್ತಿನ ಅಮವಾಸ್ಯೆಯಾಗಿ ಮಾರ್ಪಟ್ಟಿತೆಂದು ತಿಳಿದು ಬರುತ್ತದೆ.

**ಕಥೆ ೨.** ಇದೇ ರೀತಿಯಾಗಿ ಚೆನ್ನಮ್ಮನೆಂಬ ಸಾಧ್ವಿ ಮಣ್ಣಿನ ಬಸವನನ್ನು ರಚಿಸಿ, ಪೂಜಿಸಿ ತನ್ನ ಪತಿಯ ಪ್ರಾಣವನ್ನು ಮರಳಿ ಪಡೆದಳೆಂಬ ಕಥೆಯೂ ಇದೆ.[೪೭]

ಕೆಲವು ಶಾಸನಗಳಲ್ಲಿ ಹಾಗೂ ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿ ಬಾದುಮೆ, ಬಾದುಂಬೆ ಎಂಬ ಹೆಸರಿನ ಸೀಮಾ ಸೂಚಕ ಜಾನಪದ ದೇವತೆಗಳ ವಿವರವಿದೆ. ರೈತರು ಬೆಳೆಗಳ ರಕ್ಷಣೆಗಾಗಿ ಈ ದೇವತೆಗಳನ್ನು ಪೂಜಿಸುತ್ತಿದ್ದರೆಂಬ ಅಂಶ[೪೮] ಬಹುಶಃ ಮಣ್ಣೆತ್ತಿನ ಪೂಜೆಯ ರೂಪದಲ್ಲೇ ಕಾಣಿಸಿಕೊಳ್ಳುವ ಇದು ಭೂದೇವಿಯ ಪೂಜೆಯೇ ಆಗಿರುವದರಿಂದ ಮಣ್ಣಿನೊಡನೆ ಮಣ್ಣಾಗಿ ತನ್ನೊಡನೆ ದುಡಿದು ವಿಶ್ರಾಂತಿ ಪಡೆಯುವ ಬಸವಣ್ಣಗಳು ಮತ್ತು ಮಣ್ಣಿಗೂ ಇರುವ ಸಂಬಂಧವನ್ನು ನೆನೆದು ರೈತ ತನ್ನ ಹೊಲದ ಮಣ್ಣನ್ನೇ ಎತ್ತಿಕೊಂಡು ಬಸವಣ್ಣಗಳನ್ನು ರಚಿಸಿ, ಪೂಜೆಗೈದು ಮಣ್ಣಿನ ಮೂಲಕ ತನ್ನ ಎತ್ತುಗಳಿಗೂ, ಎತ್ತುಗಳ ಮೂಲಕ ಮಣ್ಣಿಗೂ ತನ್ನ ಕೃತಜ್ಞತೆಯನ್ನು ತೋರುತ್ತಾನೆ. ಈ ದೃಷ್ಟಿಯಿಂದ ಮಣ್ಣೆತ್ತಿನ ಪೂಜೆಯು ವಿಶೇಷವಾಗಿ ಮಣ್ಣು ಹಾಗೂ ಎತ್ತುಗಳ ಕೃತಜ್ಞತೆಯ ಸೂಚಕವಾಗಿ ನಡೆವ ಪೂಜೆ. ಇದು ಸಾಂಪ್ರದಾಯಿಕವಾದ ಜನಪದೀಯ ಪೂಜೆಯಾಗಿದೆ. ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಮಣ್ಣೆತ್ತು ಶಿಲ್ಪಗಳ ರಚನೆ, ಆಚರಣೆ, ಪೂಜೆ ಹಾಗೂ ವಿಸರ್ಜನೆ ಸರ್ವೇಸಾಮಾನ್ಯವಾಗಿ ಕಂಡು ಬರುತ್ತದೆ.

**ಮಣ್ಣೆತ್ತು ಶಿಲ್ಪಗಳ ರಚನೆ :** ಅಮವಾಸ್ಯೆಯ ದಿನದಂದು ಪ್ರತಿಯೊಬ್ಬ ರೈತರ ಮನೆಯಲ್ಲೂ ಮಣ್ಣೆತ್ತುಗಳನ್ನು ತಯಾರಿಸಿ ಪೂಜಿಸುತ್ತಾರೆ. ಅಂದು ಮುಂಜಾನೆ ಊರ ಮುಂದಿನ ಹೊಲ ಇಲ್ಲವೆ ಕೆರೆ, ಹಳ್ಳ, ಹೊಳೆಯಿಂದ ಜಿಗುಟಾದ ಮಣ್ಣು ತರುತ್ತಾರೆ. ಕೆಲವೆಡೆ ಊರ ಸಮೀಪವಿರುವ ಹುತ್ತಿನ ಗುಡ್ಡೆಗೆ

---

೪೬. ..... ಅದೇ ..... ಪುಟ - ೭೦
೪೭. ..... ಅದೇ .....
೪೮. ..... ಅದೇ ..... ಪುಟ -೭೧

ಹೋಗಿ ಪೂಜಿಸಿ ಮಣ್ಣು ತರುತ್ತಾರೆ. ಹಾಗೆ ತಂದ ಮಣ್ಣಿನಿಂದ ಎರಡೆರಡು ಎತ್ತುಗಳನ್ನು ರಚಿಸುತ್ತಾರೆ. ಸಾಮಾನ್ಯವಾಗಿ ಚಿಕ್ಕವರೂ, ದೊಡ್ಡವರೂ ಎತ್ತುಗಳನ್ನು ಮಾಡುತ್ತಾರೆ. ಕೆಲವು ಊರುಗಳಲ್ಲಿ ಕುಂಬಾರರ ಮನೆಯವರು ಎತ್ತುಗಳನ್ನು ಮಾಡಿ ಊರವರೆಲ್ಲರಿಗೂ ಕೊಡುತ್ತಾರೆ. ಗುಲಬರ್ಗಾ ಭಾಗದಲ್ಲಿ ಎತ್ತುಗಳಿಗೆ ವೈವಿಧ್ಯಮಯ ಬಣ್ಣವನ್ನು ಲೇಪನ ಮಾಡಿ ಸಿಂಗರಿಸಿ ಮಾರಾಟ ಮಾಡುವ ಸಂಪ್ರದಾಯ ರೂಢಿಯಲ್ಲಿದೆ. ಎತ್ತುಗಳ ಕಣ್ಣುಗಳು ಎದ್ದು ಕಾಣುವಂತೆ, ಗುಲಗಂಜಿ ಬೀಜಗಳನ್ನು, ಜೋಳದ ಕಾಳುಗಳನ್ನು ಅಂಟಿಸುತ್ತಾರೆ. ಕೊಂಬುಗಳಿಗೆ ಕಾಗದದ ಕೊಂಬಣಸು ಮಾಡಿ ಸಿಕ್ಕಿಸುತ್ತಾರೆ. ಎತ್ತುಗಳ ಮೈಗೆ ಕೆಲವರು ಜೂಲ ತೊಡಿಸುತ್ತಾರೆ. ಹೊಳೆ, ಹಳ್ಳಗಳಲ್ಲಿ ಸಿಗುವ ಚಿಕ್ಕ ಆಕೃತಿಯ ಶಂಖ, ಚಿಪ್ಪುಗಳನ್ನು ಒಂದು ದಾರದಲ್ಲಿ ಪೋಣಿಸಿ, ಗೆಜ್ಜೆ ಸರದಂತೆ ಮಾಡಿ ಕೊರಳಲ್ಲಿ ಹಾಕುತ್ತಾರೆ.

ಹೀಗೆ ಸಿಂಗರಿಸಿದ ಎತ್ತುಗಳನ್ನು ನಡುಮನೆಯಲ್ಲಿ ಒಂದು ಹಸಿಮಣೆಯ ಮೇಲಾಗಲಿ ಅಥವಾ ಮಂಟಪದಲ್ಲಾಗಲಿ ಇಲ್ಲವೆ ದೇವರ ಜಗುಲಿಯ ಮೇಲಾಗಲಿ ಇರಿಸುತ್ತಾರೆ. ಅವುಗಳ ಮುಂದೆ ಮೇವು ತಿನ್ನುವ ಗೋದಲಿಯನ್ನು ಮಾಡಿ ಇಡುತ್ತಾರೆ. ನಂತರ ಅವುಗಳನ್ನು ವಿಧಿವತ್ತಾಗಿ ಪೂಜೆ ಮಾಡುತ್ತಾರೆ. ಕುಂಕುಮ, ವಿಭೂತಿ ಹಚ್ಚಿ ಕಾಯಿ ಒಡೆಯುತ್ತಾರೆ. ಹುಡುಗಿಯರು ಆ ಎತ್ತುಗಳಿಗೆ ಆರತಿ ಬೆಳಗುತ್ತಾರೆ. ನಂತರ ಕರಿಗಡಬು, ಹೋಳಿಗೆ, ಅನ್ನ, ತುಪ್ಪ, ಕಿಚಡಿ ಮುಂತಾಗಿ ಅಂದು ಮನೆಯಲ್ಲಿ ಮಾಡಿದ ಸಿಹಿ ಅಡುಗೆಗಳನ್ನು ಎತ್ತುಗಳಿಗೆ ಎಡೆ ತೋರಿಸುವರು. ಮತ್ತು ಆ ಎಡೆಯನ್ನು ತಿನ್ನಲೆಂದು ರಚಿಸಲಾದ ಗೋದಲಿಯಲ್ಲಿ ಪದಾರ್ಥದ ಒಂದಷ್ಟು ಭಾಗವನ್ನು ಹಾಕುವರು. ಹೀಗೆ ಮಕ್ಕಳಾದಿಯಾಗಿ ಮನೆಯವರೆಲ್ಲರೂ ಎತ್ತುಗಳನ್ನು ಪೂಜಿಸಿ ಸಂತೋಷಪಡುವರು.

ಬೆಳವಲದ ಕೆಲವು ಊರುಗಳಲ್ಲಿ ಊರಿನ ಹಿರಿಯ ಮಠದಲ್ಲಿ ಮಣ್ಣಿನ ಬಸವನನ್ನು ಇಡುವ ಪದ್ಧತಿಯುಂಟು. ಊರಿನ ಹೆಂಗೆಳೆಯರೆಲ್ಲ ಅಲ್ಲಿ ಸೇರಿ ಆರತಿ ಮಾಡಿ ಬಸವನ ಮೇಲೆ ಹಾಡು ಹೇಳುತ್ತ ಕೋಲಾಟ ಆಡುವದು ರೂಢಿಯಲ್ಲಿದೆ[೪೯] ಎಂಬುದು ತಿಳಿಯುತ್ತದೆ.

ಮಣ್ಣೆತ್ತಿನ ಅಮವಾಸ್ಯೆಯಿಂದ ಮೊದಲ್ಗೊಂಡು ಮುಂಬರುವ ನಾಗರ ಅಮವಾಸ್ಯೆಯ ವರೆಗಿನ ಅವಧಿಯಲ್ಲಿ ಬರುವ ಎಲ್ಲ ಸೋಮವಾರಗಳನ್ನು, ಕೆಲವೆಡೆ ಮಂಗಲವಾರಗಳನ್ನು ಮಣ್ಣೆತ್ತಿನ ಪೂಜೆಗೇ ಮೀಸಲಾದ ದಿನಗಳೆಂದು ಪರಿಗಣಿಸುತ್ತಾರೆ. ಆ ದಿನಗಳಂದು ಮಣ್ಣೆತ್ತುಗಳ ಪೂಜೆ ನಡೆಯುತ್ತದೆ. ನೆಲೋಗಿಯಲ್ಲಿ[೫೦] ಒಂದೂವರೆ ಅಡಿ ಎತ್ತರದ ಮಣ್ಣಿನ ಎತ್ತುಗಳ ಶಿಲ್ಪಗಳು ನೋಡಲು ಸಿಗುತ್ತವೆ.

**ಹೆಂಡಿ ಮಲ್ಲವ್ವನ ಶಿಲ್ಪಗಳು :** ಕೆಲವು ಊರುಗಳಲ್ಲಿ ಒಂದು ಜೊತೆ ಮಣ್ಣೆತ್ತು ಶಿಲ್ಪಗಳೊಂದಿಗೆ ಒಂದು ಹೆಣ್ಣು ಗೊಂಬೆ ಶಿಲ್ಪವನ್ನು ಮಾಡಿ ನಿಲ್ಲಿಸಿರಲಾಗಿರುತ್ತದೆ. ಇದನ್ನು ಹೆಂಡಿ ಮಲ್ಲವ್ವ ಎಂದೇ ಕರೆಯುತ್ತಾರೆ. ತಲೆಯ ಮೇಲೆ ಬುಟ್ಟಿ ಹೊತ್ತು ನಿಂತಿರುವ ಈಕೆಯ ಕೆಲಸವೇನೆಂದರೆ, ಎತ್ತುಗಳ ಸೆಗಣಿ

---

೪೯. ಡಾ. ಎಸ್.ಎಂ. ವೃಷಭೇಂದ್ರ ಸ್ವಾಮಿ (ಸಂ) : ಜಾನಪದ ಸಾಹಿತ್ಯ ದರ್ಶನ, ಭಾಗ - ೧೦, ಪುಟ - ೭೧

೫೦. ನೆಲೋಗಿ : ತಾ. ಜೇವರ್ಗಿ, ಜಿ. ಗುಲಬರ್ಗಾ. ದಿ. ಬಸವರಾಜ ಬಿಲ್ಲಾಡ ಅವರ ಮನೆಯಲ್ಲಿ.

ಎತ್ತುವದು. ಈ ಶಿಲ್ಪ ನಿಜ ಎತ್ತುಗಳ ಕೊಟ್ಟಿಗೆಯನ್ನು ಸದಾ ಸ್ವಚ್ಛವಾಗಿಡುವುದರ ಸಂಕೇತವಾಗಿದೆಯನ್ನಬಹುದು. ಗುಲಬರ್ಗಾ ಪ್ರದೇಶದ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಮಣ್ಣೆತ್ತು ಶಿಲ್ಪಗಳೊಂದಿಗೆ ಹೆಂಡಿ ಮಲ್ಲವ್ವನ ಶಿಲ್ಪವನ್ನೂ ರಚಿಸಲಾಗಿರುತ್ತದೆ. ಇದೂ ಕೂಡ ಮಣ್ಣಿನ ಶಿಲ್ಪವೇ ಆಗಿರುತ್ತದೆಯೆಂದು ಬೇರೆ ಹೇಳಬೇಕಾಗಿಲ್ಲ.

**ನಿಷೇಧಗಳು :** ಒಂಟಿಯಾದ ಮಣ್ಣೆತ್ತು ಶಿಲ್ಪವನ್ನು ಯಾರೂ ಪೂಜಿಸುವುದಿಲ್ಲ. ಹಿಂದುಯೇತರ ಜನಾಂಗಗಳಲ್ಲಿ ಈ ಪದ್ಧತಿ ಬಹುಶಃ ಕಂಡು ಬರುವದಿಲ್ಲ. ಮದುವೆಯಾದವರ ಮನೆಯಲ್ಲಿ ಆ ವರ್ಷ ಮಣ್ಣೆತ್ತುಗಳನ್ನು ಪೂಜಿಸುವಂತಿಲ್ಲ.

**ಮಣ್ಣೆತ್ತು ಶಿಲ್ಪಗಳ ರಚನೆ : ಹೊಸ ರೀತಿ :** ಗ್ರಾಮೀಣ ಮೂಲದ ಮಣ್ಣೆತ್ತು ಶಿಲ್ಪಗಳ ಆಚರಣೆ, ಇಂದಿನ ನಗರ ಪ್ರದೇಶಗಳಲ್ಲೂ ಕೆಲವು ಕುಟುಂಬಗಳಲ್ಲಿ ಕಂಡು ಬರುತ್ತದೆ. ಹೀಗೆ ನಗರ ಪ್ರದೇಶಗಳಲ್ಲಿ ಮಣ್ಣೆತ್ತು ಶಿಲ್ಪಗಳನ್ನು ಪೂಜಿಸುವವರಿಗಾಗಿ ಆಕರ್ಷಕ ರೀತಿಯಲ್ಲಿ ಮಣ್ಣೆತ್ತುಗಳನ್ನು ರಚಿಸಿ ಮಾರಾಟ ಮಾಡುವದನ್ನು ವೃತ್ತಿಯಾಗಿ ಕೆಲವರು ಮಾಡಿಕೊಂಡಿದ್ದಾರೆ. ಅತೀ ಶೀಘ್ರದಲ್ಲಿ ಬಹು ಸಂಖ್ಯೆಯಲ್ಲಿ ಈ ಶಿಲ್ಪಗಳನ್ನು ರಚಿಸುವದರೊಂದಿಗೆ ಅವುಗಳನ್ನು ಆಕರ್ಷಕವಾಗಿ ಕಾಣುವಂತೆ ಮಾಡುವದು ಇಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಇವರು ಸಾಮಾನ್ಯವಾಗಿ ಮಣ್ಣೆತ್ತು ಶಿಲ್ಪಗಳ ರಚನೆಗೆ ವಿವಿಧ ತರಹದ ಪಡಿಯಚ್ಚುಗಳನ್ನು ಉಪಯೋಗಿಸುತ್ತಾರೆ. ಇದರಿಂದಾಗಿ ಒಂದೇ ಆಕಾರ ಮತ್ತು ಅಳತೆಯ ಮಣ್ಣೆತ್ತುಗಳು ತಯಾರಾಗುತ್ತವೆ. ಪ್ಲಾಸ್ಟರಿನಲ್ಲಿ ಮಾಡಿಕೊಳ್ಳಲಾದ ಅಚ್ಚಿನಲ್ಲಿ ಸಂಜೀರಾ ಪೌಡರನ್ನು ಸಿಂಪಡಿಸಿ ಮೊದಲೇ ಹದ ಮಾಡಿದ ಮಣ್ಣನ್ನು ಅಚ್ಚಿನಲ್ಲಿ ತುಂಬಿ, ಒತ್ತಿ ಕರಡು ಶಿಲ್ಪಗಳನ್ನು ತಯಾರಿಸಿಕೊಂಡು ನಂತರ ಅವುಗಳಿಗೆ ಪೂರ್ಣರೂಪ ಕೊಟ್ಟು ನೆರಳಲ್ಲಿ ಒಣಗಿಸುತ್ತಾರೆ. ಹಬ್ಬಕ್ಕೆ ಎರಡು-ಮೂರು ತಿಂಗಳು ಮೊದಲೇ ಇವುಗಳ ತಯಾರಿ ನಡೆದಿರುತ್ತದೆ. [೫೧]

**ಬಣ್ಣಗಾರಿಕೆ :** ಹೀಗೆ ತಯಾರಾದ ನೂರಾರು ಮಣ್ಣೆತ್ತು ಶಿಲ್ಪಗಳಿಗೆ ಮೊದಲು ಬಿಳಿಯ ಬಣ್ಣವನ್ನು ಬಳೆಯಲಾಗುತ್ತದೆ. ನಂತರ ಕೆಂಪು, ಹಳದಿ, ನೀಲಿ, ಗುಲಾಬಿ, ಹಸಿರು ಹೀಗೆ ವಿವಿಧ ಬಣ್ಣಗಳನ್ನು ಹಚ್ಚಿ ಅಲಂಕಾರ ಮಾಡುತ್ತಾರೆ. ಆ ಮೇಲೆ ಕಪ್ಪು ಬಣ್ಣದಿಂದ ಕಣ್ಣು, ಕಿವಿ, ಬಾಯಿ, ಮೂಗುದಾರಗಳನ್ನು ಕುಂಚದಿಂದ ರೇಖಾತ್ಮಕವಾಗಿ ರಚಿಸುತ್ತಾರೆ. ಈ ರೀತಿಯ ಬಣ್ಣಗಾರಿಕೆ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುವದಿಲ್ಲ.

**ನಂಬಿಕೆಗಳು :** ಮಣ್ಣೆತ್ತು ಶಿಲ್ಪಗಳನ್ನು ರಚಿಸಿ ಪೂಜಿಸುವ ಆಚರಣೆ ಏಕೆ ರೂಢಿಗೆ ಬಂದಿದೆ

---

೫೧. ★ ಗುಲಬರ್ಗಾದ ದಶರಥ ಎಂಬುವವರು ಈ ಬಗೆಯ ಮಣ್ಣೆತ್ತು ಶಿಲ್ಪಗಳನ್ನು ರಚಿಸಿ ಮಾರಾಟ ಮಾಡುವವರಲ್ಲಿ ಪ್ರಸಿದ್ಧರು.

★ ಗುಲಬರ್ಗಾದ ರಾಣೋಜಿ ಕುಂಬಾರ ಇವರು ಪ್ರತಿ ವರ್ಷ 500ಕ್ಕೂ ಹೆಚ್ಚು ಮಣ್ಣೆತ್ತು ಶಿಲ್ಪಗಳನ್ನು ಮಾಡಿ ಮಾರಾಟ ಮಾಡುತ್ತಾರೆ.

★ ಗುಲಬರ್ಗಾದ ಗುಂಡಪ್ಪ ಕುಂಬಾರ ಇವರು 700ಕ್ಕೂ ಹೆಚ್ಚು ಮಣ್ಣೆತ್ತು ಶಿಲ್ಪಗಳನ್ನು ರಚಿಸಿ ಮಾರಾಟ ಮಾಡುತ್ತಾರೆ.

ಎಂಬುದಕ್ಕೆ ಕೆಲವು ನಂಬಿಕೆಗಳು ಹೀಗೆ ಹೇಳುತ್ತವೆ.

ಒಮ್ಮೆ ಅಮವಾಸ್ಯೆಯಂದು ಊರಿನಲ್ಲಿರುವ ಎತ್ತುಗಳು ಬಹುಸಂಖ್ಯೆಯಲ್ಲಿ ಮರಣ ಹೊಂದಿದವು ಇದರಿಂದ ಆತಂಕಕ್ಕೀಡಾದ ರೈತರು, ಎತ್ತುಗಳು ಸಾವನ್ನಪ್ಪದಿರಲೆಂದು ಆ ದಿನದಂದು ಮಣ್ಣಿನ ಎತ್ತುಗಳನ್ನು ಮಾಡಿ ದೇವರ ಜಗುಲಿಯ ಮೇಲಿಟ್ಟು ಪೂಜಿಸುವುದನ್ನು ರೂಢಿಗೆ ತಂದರೆಂದು ಕೆಲವೆಡೆ ಗ್ರಾಮೀಣರು ಹೇಳುತ್ತಾರೆ. ಇನ್ನೂ ಕೆಲವರ ಪ್ರಕಾರ ಹಿಂದೆ ಪಶುಬಲಿ ಕೊಡುವ ಸಂಪ್ರದಾಯವಿತ್ತು. ಕ್ರಮೇಣ ಜೀವಂತ ಪಶು ಬಲಿಗೆ ಬದಲಾಗಿ, ಮಣ್ಣೆತ್ತು ಶಿಲ್ಪಗಳನ್ನು ಮಾಡಿ ಬಲಿ ಕೊಡುವ ಪದ್ಧತಿಯು ಆಚರಣೆಗೆ ಬಂದಿತು. ಅದು ಕಾಲಾನಂತರದಲ್ಲಿ ಅನೇಕ ಮಾರ್ಪಾಡು ಪಡೆದುಕೊಂಡಿತು.

**ಮಣ್ಣೆತ್ತು ಶಿಲ್ಪಗಳ ವಿಸರ್ಜನೆ :** ಮಣ್ಣೆತ್ತು ಶಿಲ್ಪಗಳ ವಿಸರ್ಜನೆ ಉತ್ತರ ಕರ್ನಾಟಕದಲ್ಲಿ ಮುಖ್ಯವಾಗಿ ಮೂರು ಬಗೆಯಲ್ಲಿ ನಡೆಯುವದು ಕಂಡು ಬರುತ್ತದೆ.

೧. ಮನೆಯ ಜಗುಲಿಯ ಮೇಲೆ ಪೂಜೆಗೊಂಡ ಮಣ್ಣೆತ್ತುಗಳನ್ನು ಮರುದಿವಸ ಕರಿಯ ದಿನವೆಂದು ಅಂದು ಸಾಯಂಕಾಲ ಓಣಿಯ ಎಲ್ಲ ಹುಡುಗರು ತಂತಮ್ಮ ಮಣ್ಣೆತ್ತುಗಳನ್ನು ಊರ ಗುಡಿ ಅಥವಾ ಚಾವಡಿಯಲ್ಲಿ ಒಂದೆಡೆ ಸೇರಿಸಿ, ಮಣೆಗಳ ಮೇಲೆ ಸಾಲಾಗಿರಿಸಿ, ಪೂಜೆ ಮಾಡಿ, ತಲೆಯ ಮೇಲೆ ಹೊತ್ತು ಬೀದಿಗಳಲ್ಲಿ ಮೆರೆಸುತ್ತಾರೆ. ನಂತರ ಊರ ಸಮೀಪವಿರುವ ಹಳ್ಳ, ಹೊಳೆ, ಭಾವಿಗಳಿಗೆ ಹಾಕುತ್ತಾರೆ. ಕೆಲವೆಡೆ ಕರಿ ಹರಿಯುವ ಕಾರ್ಯಕ್ರಮ ಮಾಡಿ ನೀರಿನಲ್ಲಿ ವಿಸರ್ಜಿಸುತ್ತಾರೆ. ಬಿಜಾಪುರ, ಗುಲಬರ್ಗಾ, ಬೆಳಗಾವಿ ಭಾಗದ ಗ್ರಾಮೀಣ ಪ್ರದೇಶಗಳಲ್ಲಿ ಈ ಪದ್ಧತಿ ರೂಢಿಯಲ್ಲಿದೆ.

೨. ಇನ್ನೂ ಕೆಲವು ಊರುಗಳಲ್ಲಿ ಪೂಜೆಗೊಂಡ ಮಣ್ಣಿನ ಎಲ್ಲ ಬಸವಣ್ಣ ಶಿಲ್ಪಗಳನ್ನು ಒಟ್ಟುಗೂಡಿಸಿ ಪೂಜಿಸಿ, ಮೆರೆಸಿ, ಹಾಡು ಹೇಳಿ, ಶ್ರಾವಣ ಪಂಚಮಿಯ ಮೂರನೆಯ ದಿನ - ಬೆಳೆಗಳಿಂದ ತುಂಬಿರುವ ಹೊಲಗಳಿಗೆ ತಂದು ಅಲ್ಲಿ ಬನ್ನಿ, ಇಲ್ಲವೆ ಆರಿಯ ಗಿಡ ಅಥವಾ ಇನ್ನಾವುದೋ ಗಿಡದ ಅಡಿಯಲ್ಲಿ ಕುಳ್ಳಿರಿಸಿ ಪೂಜೆ ಮಾಡಿ ಎಡೆಯನ್ನು ಬೆಳೆತುಂಬಿದ ಹೊಲದ ತುಂಬೆಲ್ಲ ಚರಗ ಚೆಲ್ಲುವರು. ಬೆಳೆ ಹುಲುಸಾಗಿ ಬರುವದೆಂಬ ನಂಬಿಕೆಯೇ ಚರಗ ಚೆಲ್ಲುವುದರ ಉದ್ದೇಶವಾಗಿ ತೋರುತ್ತದೆ.

೩. ಪೂಜೆಗೊಂಡ ಮಣ್ಣೆತ್ತು ಶಿಲ್ಪಗಳನ್ನು ಆಷಾಡ ಬಹುಳ ಅಮವಾಸ್ಯೆಯಂದು ಅಂದರೆ, ಕೊನೆಯ ಗುಳ್ಳವ್ವನ ಪೂಜೆ ಮುಗಿದ ದಿನ ಹಳ್ಳಿಯ ಹೆಂಗಸರೆಲ್ಲ ಕೂಡಿ ಅರಳೆಲೆ ಬಸವನನ್ನು ಕಳಿಸಿ ಕೊಡುವ ಸಂಪ್ರದಾಯ ಉಂಟು. ಅಂದು ಹೆಂಗಸರೆಲ್ಲ ಊರ ಹತ್ತಿರದ ಜಲಾಶಯಕ್ಕಾಗಲಿ, ಅಥವಾ ವನಕ್ಕಾಗಲೀ ಹೋಗಿ ಬಸವನ ಪೂಜೆ ಮಾಡಿ, ಬನದ ಊಟ ಉಂಡು ನಲಿಯುವರು. ಸಾಮಾನ್ಯವಾಗಿ ಇದಕ್ಕೆ ಅಲ್ಲೀಕೇರಿ ಎಂದು ಕರೆಯುವದುಂಟು. ಮಣ್ಣೆತ್ತಿನ ಅಮವಾಸ್ಯೆಗೆ ಏಳು ದಿನ ಮೊದಲು ಹಬ್ಬಕ್ಕಾಗಿ ಬಂದ ಗೌರಮ್ಮ ತನ್ನನ್ನು ಕರೆಯಲು ಬಂದ ಮೈದುನನಾದ ಅಲ್ಲೀಬಸಪ್ಪನೊಡನೆ ಪಂಚಮಿಯಾದ ಏಳು ದಿನಗಳ ಮೇಲೆ ಮತ್ತೆ ತನ್ನ ಪತಿಗೃಹಕ್ಕೆ ಹೋಗುತ್ತಾಳೆ ಎಂಬ ನಂಬಿಕೆಯಿದೆ. ಈ ಹಿನ್ನೆಲೆಯಲ್ಲಿ

ಅಲ್ಲಿಯ ಬಸಪ್ಪನ್ನ
ಅಲ್ಲಿಟ್ಟು ಇಲ್ಲಿಟ್ಟು
ಕಲ್ಲ ಮೇಲಿಟ್ಟು ಕೈಬಿಟ್ಟು ಕೋಲು ಕೋಲೆನ್ನ ಕೋಲ

ಎಂದು ಹಾಡುತ್ತ ಅಲ್ಲಿ ತಾವು ಪೂಜಿಸಿದ ಬಸವಣ್ಣನ ಶಿಲ್ಪಗಳನ್ನು ವಿಸರ್ಜಿಸಿ ಮನೆಗೆ ಬರುತ್ತಾರೆ. [೫೨]

ಸಾಮಾನ್ಯವಾಗಿ ಉತ್ತರ ಕರ್ನಾಟಕದ ಭಾಗದಲ್ಲಿ ಪ್ರಚಲಿತವಿರುವ ಈ ಮಣ್ಣೆತ್ತು ಶಿಲ್ಪಗಳ ಪೂಜೆ ನೆರೆಯ ಆಂದ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲೂ ಕಂಡುಬರುತ್ತದೆ. ಆಂದ್ರ ಪ್ರದೇಶದ ಗಡಿ ಜಿಲ್ಲೆಗಳಾದ ಕರ್ನೂಲು ಹಾಗೂ ಅನಂತಪುರ ಜಿಲ್ಲೆಗಳಲ್ಲಿ ಮಣ್ಣಿನ ಎತ್ತುಗಳ ಶಿಲ್ಪಗಳೊಂದಿಗೆ ಅರಿಷಿಣ ಪುಡಿಯ ಎರಡು ಮುದ್ದೆಗಳನ್ನು ಮಾಡಿರಿಸಿ ಅವುಗಳನ್ನು ಶಿವ-ಗೌರಿಯರೆಂದು ಭಾವಿಸಿ ಪೂಜಿಸುವದು ರೂಢಿಯಲ್ಲಿದೆ. ಆಷಾಢ ಮಾಸದಲ್ಲಿ ಗೌರಿಯನ್ನು ತರುವ ಪದ್ಧತಿಯಿರುವದರಿಂದ ಅದನ್ನು ಆಷಾಢಗೌರಿ ಎಂದು ಕರೆಯುವುದೇ ವಾಡಿಕೆ. ಕಾರಣ ಮಗಳನ್ನು ಕರೆತರುವ ಬಸವಣ್ಣಗಳನ್ನು ಮುಂಗಡವಾಗಿಯೇ ಕೃತಜ್ಞತೆಯನ್ನು ಅರ್ಪಿಸುವ ಸಂಪ್ರದಾಯ ರೂಢಿಗತವಾಗಿ ಬಂದಿರಬೇಕು. ಈ ಮಣ್ಣೆತ್ತಿನ ಅಮವಾಸ್ಯೆಗೆ ತೆಲುಗಿನಲ್ಲಿ ಎದ್ದುಲ ಅಮವಾಸ್ಯೆ ಎಂದು ಕರೆಯಲಾಗುತ್ತದೆ.

ಮಹಾರಾಷ್ಟ್ರದ ಗಡಿಭಾಗದ ಕೊಲ್ಹಾಪುರ, ಸೊಲ್ಲಾಪುರ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಮಣ್ಣೆತ್ತಿನ ಪೂಜೆಯಿರುವದು ಕಂಡು ಬರುತ್ತದೆ. ಇಲ್ಲಿ ಪೋಳಾಸಣ ಎಂದು (ಎತ್ತಿನ ಹಬ್ಬ) ಕರೆಯಲಾಗುತ್ತದೆ.[53] ಈ ಪೋಳಸಣವು ನಮ್ಮಲ್ಲಿ ಜರುಗುವ ಕಾರಹುಣ್ಣಿಮೆಯ ಹಾಗೂ ಮಣ್ಣೆತ್ತಿನ ಅಮವಾಸ್ಯೆಯ ಎರಡೂ ಅಂಶಗಳನ್ನು ಒಳಗೊಂಡಿದೆ. ಅಂದು ಜೀವಂತ ಎತ್ತುಗಳನ್ನೇ ಪೂಜಿಸಿದರೆ, ಎತ್ತುಗಳು ಇಲ್ಲದವರು ಮಣ್ಣೆತ್ತು ಶಿಲ್ಪಗಳನ್ನು ಮಾಡಿ, ಪೂಜಿಸಿ ವಿಸರ್ಜಿಸುತ್ತಾರೆ.

ಮಣ್ಣಿಗೆ ಹಾಗೂ ಮಣ್ಣನ್ನು ಉಳುಮೆ ಮಾಡುವ ಎತ್ತುಗಳಿಗೆ ಕೃತಜ್ಞತೆ ಸಲ್ಲಿಸುವ ನಿಟ್ಟಿನಲ್ಲಿ ಮಾಡಲಾಗುವ ಮಣ್ಣೆತ್ತುಗಳ ಆಚರಣೆಯಲ್ಲಿ ನಮ್ಮ ಹಳ್ಳಿಗರೆಲ್ಲರೂ ಆನಂದ ಪಡುತ್ತಾರೆ. ಚಿಕ್ಕವರೂ ದೊಡ್ಡವರಾದಿಯಾಗಿ ಮಣ್ಣೆತ್ತುಗಳನ್ನು ಮಾಡುವುದರ ಮೂಲಕ ಸಂತೋಷಪಡುತ್ತಾರೆ. ಅವರ ರಚನೆ ಪ್ರಮಾಣಬದ್ಧವಾಗಿಯೇ ಇರಬೇಕೆಂದೇನೂ ಇಲ್ಲ. ಭಾವನಾತ್ಮಕವಾಗಿ ಒಂದಿಷ್ಟು ಕೆಸರಿನ ಮುದ್ದೆಯೂ ಎತ್ತಾಗಿ ಕಾಣಿಸುತ್ತದೆ. ಆದರೂ ಉತ್ತಮವಾಗಿ ರಚಿಸುವವರಿಗೆ ಪ್ರಶಂಶೆ ಪ್ರೋತ್ಸಾಹಗಳು ದೊರೆಯುತ್ತವೆ. ಹಳ್ಳಿಯಲ್ಲಿಯ ಪ್ರತಿಯೊಂದು ಮಗವೂ ಸ್ವತಃ ಕೆಸರನ್ನು ಒತ್ತಿ, ಮೆತ್ತಿ ಮಣ್ಣೆತ್ತನ್ನು ರೂಪಿಸುವುದರಲ್ಲಿ ತೊಡಗಿಕೊಳ್ಳುದರಿಂದ ಮತ್ತು ತನ್ನ, ತಾನು ರಚಿಸಿದ ಎತ್ತುಗಳನ್ನು ಇತರರ ರಚನೆಗಳೊಂದಿಗೆ ಹೋಲಿಸಿ ನೋಡಿ ಹಿಗ್ಗುವುದು, ಚರ್ಚಿಸುವುದು ಇತ್ಯಾದಿಗಳಲ್ಲಿ ಮಕ್ಕಳ ಸೌಂದರ್ಯ ಪ್ರಜ್ಞೆ, ಸೃಜನಶೀಲತೆ, ಕಲಾವಂತಿಕೆಗಳಿಗೆ ಚಾಲನೆ ದೊರೆಯುವುದನ್ನು ಕಾಣುತ್ತೇವೆ. ಇಲ್ಲಿ ಮಕ್ಕಳದೇ ಆದ ಕಲಾ ಪ್ರಶಂಶೆ,

---

೫೨. ಡಾ. ಎಸ್.ಎಂ. ವೃಷಭೇಂದ್ರ ಸ್ವಾಮಿ (ಸಂ) : ಜಾನಪದ ಸಾಹಿತ್ಯ ದರ್ಶನ, ಭಾಗ - ೧೦, ಪುಟ - ೭೫
೫೩. ಮಾಹಿತಿ ನೀಡಿದವರು : ಶ್ರೀ ಮೇಲಗಿರೆಪ್ಪ ತೇಲಿ, ವಯಸ್ಸು - 65, ಊರು ಅಕ್ಕಲಕೋಟೆ, ತಾ. ಜಿ. ಸೋಲಾಪುರ.

ಮೆಚ್ಚುಗೆ ಮತ್ತು ವಿಮರ್ಶಾ ಗುಣಗಳನ್ನೂ ಕಾಣಬಹುದಾಗಿದೆ.

### ಆ. ಕೋಟೆ ಬಸವನ ಶಿಲ್ಪಗಳು

ದೀಪಾವಳಿಯ ದಿನದಂದು ದಕ್ಷಿಣ ಕರ್ನಾಟಕದ ಕೆಲವೆಡೆ ಹೆಣ್ಣುಮಕ್ಕಳೆಲ್ಲ ಸೇರಿ ಕೋಟೆ ಬಸವನನ್ನು ರಚಿಸಿ, ಪೂಜೆ ಮಾಡಿ ಹಾಡು ಹೇಳುತ್ತಾರೆ.[೫೪] ಆಯಾ ಓಣಿಯ ಹುಡುಗಿಯರೆಲ್ಲಾ ಒಂದು ಮನೆಯಲ್ಲಿ ಸೇರಿ, ಗದ್ದುಗೆ ಮಾಡಿ ಬಸವನ ಮಣ್ಣಿನ ಶಿಲ್ಪವನ್ನಿಟ್ಟು ಹೂ ಪತ್ರಿಗಳಿಂದ ಪೂಜಿಸಿ, ಹಣ್ಣು ಕಾಯಿ ಒಡೆದು, ಹಾಲು, ಬೆಲ್ಲ, ಚಿಗಳಿ, ತಂಬಿಟ್ಟು ನೈವೇಧ್ಯ ಮಾಡಿ ಕಡಲೆ, ಮಂಡಕ್ಕಿ ಫಳಾರ ಮಾಡುವರು. ಇಡೀ ರಾತ್ರಿ ಹಾಡು ಹೇಳುತ್ತ ಕೋಲಾಟವಾಡುತ್ತ ಬಸವನ ಶಿಲ್ಪವನ್ನು ಎರಡು-ಮೂರು ಸಾರೆ ಕೆರೆಗೆ ಒಯ್ದು ನೀರು ಕುಡಿಸಿಕೊಂಡು ಬರುವರು. ಹೀಗೆ ಒಂದು ರಾತ್ರಿ ಕಳೆದರೆ, ಮತ್ತೊಂದು ದಿವಸ ಐದು ದೀಪಗಳನ್ನು ಹಿಡಿದುಕೊಂಡು ಮನೆ-ಮನೆಗೆ ಹಾಡು ಹೇಳುತ್ತ ಹೋಗುವರು. ಈ ಹಾಡುಗಳು ಆಯಾ ಮನೆಯ ಗರತಿಯ ಜಿಪುಣತೆ, ಧಾರಾಳತನ, ನೀತಿ ಮತ್ತು ಪ್ರೇಮತ್ವಗಳನ್ನು ಕುರಿತವುಗಳಾಗಿರುತ್ತವೆ.

### ಇ. ಅರಳೆಲೆ ಬಸವನ ಶಿಲ್ಪಗಳು

ಬಸವಣ್ಣ ರೈತರ ಆರಾಧ್ಯ ದೈವ. ಅವನನ್ನು ನಮ್ಮ ಗ್ರಾಮೀಣರು ಅನೇಕ ರೀತಿಯಲ್ಲಿ ಪೂಜಿಸುತ್ತಾರೆ. ಹೀಗೆ ಪೂಜಿಸಿ ಕೃತಜ್ಞತೆ ಸಲ್ಲಿಸಲಾಗುವ ಆಚರಣೆಗಳಲ್ಲಿ ಅರಳೆಲೆ ಬಸವನ ಶಿಲ್ಪದ ಪೂಜೆಯೂ ಒಂದು.

**ರಚನೆ :** ವಿಶೇಷವಾಗಿ ಗ್ರಾಮದ ಹುಡುಗಿಯರೆಲ್ಲ ಸೇರಿ ಸೀಗಿ ಹುಣ್ಣಿಮೆಯಂದು ಸಂಪ್ರದಾಯದಂತೆ ಚರಗದೂಟ ಮಾಡಿ, ಹೊಲದಿಂದ ಮನೆಯೆಡೆಗೆ ಮರಳಿ ಬರುವಾಗ ಅರಲು ತರುವ ಸಂಪ್ರದಾಯವಿದೆ. ಆ ಅರಲು ಅಥವಾ ಮಣ್ಣಿನಿಂದ ಕುಳಿತ ಭಂಗಿಯ ಬಸವಣ್ಣನ ಮೂರ್ತಿಯೊಂದನ್ನು ಮಾಡುತ್ತಾರೆ. ಈ ಬಸವಣ್ಣನನ್ನು ಕೂರಿಸಲೆಂದೇ ಸಿದ್ಧವಾದ ಮಂಟಪದಲ್ಲಿ ಈ ಬಸವನ ಶಿಲ್ಪವನ್ನು ಪ್ರತಿಷ್ಠಾಪಿಸಿ, ಪತ್ರಿ ಪುಷ್ಪಗಳಿಂದ ಪೂಜಿಸುವ ಸಂಪ್ರದಾಯವಿದೆ. ಇದರ ಆಚರಣೆಯಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಕೆಲವು ಭಿನ್ನತೆಗಳೂ ಇವೆ. ಕೆಲವೆಡೆ ಹುಡುಗಿಯರೆಲ್ಲರು ಮಂಗಳಾರತಿಯೊಂದಿಗೆ ಊದಿಸುತ್ತ, ಬಾರಿಸುತ್ತ ಜಲಾಶಯದ ಹತ್ತಿರದ ಮಣ್ಣನ್ನು ತರುವದು ರೂಢಿಯಲ್ಲಿದೆ. ಇದನ್ನೇ ವಿಶೇಷವಾಗಿ ಆಚರಿಸಲಾಗುತ್ತದೆ. ಇದಕ್ಕೆ ಅರಲು ಅಥವಾ ಮಳಲು ತರುವದು ಎಂದು ಕರೆಯುತ್ತಾರೆ. ಬಾಗಲಕೋಟೆ, ಬಿಜಾಪುರ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಈ ಆಚರಣೆ ಹೇರಳವಾಗಿದ್ದು ಆ ಕಡೆಗೆ ಇದನ್ನು ಅರಳೆಲೆ ಬಸವನ ಮೂರ್ತಿ ಶಿಲ್ಪದ ಆಚರಣೆಯೆಂದೇ ಕರೆಯುತ್ತಾರೆ.

**ಅರಳೆಲೆ ಬಸವ-ಮಣ್ಣೆತ್ತುಗಳು :** ಮಣ್ಣೆತ್ತಿನ ಅಮವಾಸ್ಯೆಯಂದು ಸಾಮಾನ್ಯವಾಗಿ ಎಲ್ಲ

---

೫೪. ಡಾ. ಎಸ್.ಎಂ. ವೃಷಭೇಂದ್ರ ಸ್ವಾಮಿ (ಸಂ) : ಜಾನಪದ ಸಾಹಿತ್ಯ ದರ್ಶನ, ಭಾಗ - ೧೦, ಪುಟ - ೧೪೨

ಹಳ್ಳಿಗಳಲ್ಲಿ ಎಲ್ಲರ ಮನೆಗಳಲ್ಲಿ ಮಣ್ಣಿನಿಂದ ಮಾಡಿದ ಎತ್ತುಗಳ ಮೂರ್ತಿ ಶಿಲ್ಪಗಳನ್ನು ಜಗುಲಿಯ ಮೇಲಿಟ್ಟು ಪೂಜಿಸುವ ಆಚರಣೆಯು ಸಾಮಾನ್ಯವಾದುದಾಗಿದೆ.[೫೫] ಆದರೆ ಅರಳೆಲೆ ಬಸವನ ಶಿಲ್ಪದ ಆಚರಣೆ ಮಣ್ಣೆತ್ತಿನ ಶಿಲ್ಪಗಳ ಆಚರಣೆಗಿಂತ ಅನೇಕ ವಿಧಗಳಲ್ಲಿ ಭಿನ್ನವಾಗಿರುತ್ತದೆ. ಮಣ್ಣೆತ್ತುಗಳನ್ನು ಒಂಟಿಯಾಗಿ ಪೂಜೆ ಮಾಡುವದಿಲ್ಲ. ಆದರೆ ಅರಳೆಲೆ ಬಸವನ ಶಿಲ್ಪವನ್ನು ಒಂಟಿ ಶಿಲ್ಪವನ್ನೇ ಮಾಡಿ ಪೂಜಿಸಲಾಗುತ್ತದೆ. ಅಲ್ಲದೆ ಮಣ್ಣೆತ್ತು ಶಿಲ್ಪಗಳ ಆಚರಣೆ ಬಾಲಕರ ಕೇಂದ್ರಿತ ಹಬ್ಬದಾಚರಣೆಯಾದರೆ, ಅರಳೆಲೆ ಬಸವನ ಶಿಲ್ಪದ ಆಚರಣೆ ಬಾಲಿಕೆಯರ ಕೇಂದ್ರಿತವಾದ ಹಬ್ಬದಾಚರಣೆಯಾಗಿದೆ.

ಉತ್ತರ ಕರ್ನಾಟಕದ ಭಾಗದಲ್ಲಿ ಈ ಶಿಲ್ಪದ ಆಚರಣೆಯ ಸಂದರ್ಭದಲ್ಲಿ ಹೇಳಲಾಗುವ ಹಾಡುಗಳನ್ನು ಅರಳೆಲೆ ಬಸವನ ಹಾಡುಗಳೆಂದು ಕರೆಯಲಾಗುತ್ತದೆ. ದಕ್ಷಿಣ ಕರ್ನಾಟಕ ಭಾಗದಲ್ಲೂ ಈ ಶಿಲ್ಪದ ಆಚರಣೆ ಇದ್ದು ಆ ಭಾಗಗಳಲ್ಲಿ ಹೇಳಲಾಗುವ ಹಾಡುಗಳಿಗೆ ಬಸವನ ಅಷ್ಟಮಿಯ ಹಾಡುಗಳು ಎಂದು ಕರೆಯುತ್ತಾರೆ.[೫೬]

ಉತ್ತರ ಕರ್ನಾಟಕದ ಕೆಲವೆಡೆ ಊರುಗಳ ಓಣಿಯಲ್ಲಿ ಎರಡರಿಂದ ಮೂರು ಅಡಿ ಎತ್ತರದವರೆಗಿನ ದೊಡ್ಡದಾದ ಕುಳಿತ ಭಂಗಿಯ ಮಣ್ಣಿನ ಬಸವಣ್ಣನ ಶಿಲ್ಪವನ್ನು ಮಾಡಿ ಸಾಮೂಹಿಕವಾಗಿ ಪೂಜಿಸುವ ಆಚರಣೆಯಿದೆ. ಓಣಿ-ಓಣಿಗಳಲ್ಲಿ ವಿವಿಧ ನಮೂನೆಯ ಬಸವಣ್ಣನ ಮೂರ್ತಿ ಶಿಲ್ಪಗಳು ಕಲಾತ್ಮಕವಾಗಿ ರಚನೆಗೊಂಡು ಪೂಜಿಸಲ್ಪಡುತ್ತವೆ.

ಸಾಮಾನ್ಯವಾಗಿ ಅನಿಶ್ಚಿತವಾದ ಮಳೆಯ ಆಶ್ರಯದಲ್ಲಿ ಬೆಳೆ ತೆಗೆದು ಬದುಕಬೇಕಾಗಿರುವ ರೈತಾಪಿ ಜನರಿಗೆ ವರ್ಷದ ಮುಖ್ಯ ಕಾಲಾವಧಿ, ಭಿತ್ತಿ ಬೆಳೆದು ಸುಗ್ಗಿ ಮಾಡುವವರೆಗಿನದು. ಮಳೆಗಾಲದ ಜೊತೆ ಪ್ರಾರಂಭವಾಗುವ ಕೃಷಿ ಚಟುವಟುಕೆಗಳು ಚಳಿಗಾಲದಲ್ಲಿ ಮುಂದುವರೆದು ಬೇಸಿಗೆ ಬರುವ ಹೊತ್ತಿಗೆ ಮುಗಿಯುತ್ತವೆ. ಈ ಕಾಲಾವಧಿಯಲ್ಲಿಯೇ ಜನಪದರು ಹೆಚ್ಚಿನ ಹಬ್ಬ ಹರಿದಿನಗಳನ್ನು ಆಚರಿಸುವರು ಈ ಸಂದರ್ಭದಲ್ಲಿ ಬರುವ ಅತಿವೃಷ್ಟಿ, ಅನಾವೃಷ್ಟಿ, ಬೆಳೆಗಳು ಹಾಗೂ ದನಗಳಿಗೆ ತಗುಲುವು ರೋಗ-ರುಜಿನಗಳು ಎಲ್ಲವುಗಳನ್ನು ಎದುರಿಸಿ ಜೀವನೋತ್ಸಾಹವನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕು. ಈ ಮೂಲಭೂತ ವಾಸ್ತವಾಶಯಗಳ ಹಿನ್ನೆಲೆಯ ತನಗೆ ಉಪಕಾರಕವಾದ ಎತ್ತು, ಆಕಳು, ಹೋರಿ ಮುಂತಾದ ಪ್ರಾಣಿಗಳನ್ನು ಮಣ್ಣೆತ್ತುಗಳಾಗಿ, ಕೋಟೆ ಬಸವ, ಅರಳಲೆಬಸವ ಮುಂತಾಗಿ ರಚಿಸಿ ಆಚರಿಸಿ, ಅವುಗಳಿಗೆ ಕೃಜ್ಞತೆ ಸಲ್ಲಿಸುವ ಮೂಲಕ ತಾನೂ ಕೃತಜ್ಞನಾಗುವುದನ್ನು ರೂಢಿಸಿಕೊಂಡು ಬಂದಿರುವನು.

**ಈ. ಹುತ್ತಪ್ಪನ ಶಿಲ್ಪಗಳು**

---

೫೫. ನೋಡಿ, ಇದೇ ಮಹಾ ಪ್ರಬಂಧದ ಅಧ್ಯಾಯ : ಮೂರು ; ಮಣ್ಣಿನ ಮಾಧ್ಯಮದ ಜನಪದ ಶಿಲ್ಪಕಲೆ, ಪುಟ - ೩೫

೫೬. ಡಾ. ಎಚ್.ಜೆ. ಲಕ್ಕಪ್ಪಗೌಡ ಮತ್ತು ಡಾ. ಪುರುಷೋತ್ತಮ ಬಿಳಿಮಲೆ ( ಸಂ ) : ಜಾನಪದ ಕೈಪಿಡಿ, ಪುಟ - ೫೯

ಪ್ರಾಚೀನ ಕಾಲದಿಂದಲೂ ನಮ್ಮ ಗ್ರಾಮೀಣರು ನಾಗ ಪೂಜೆಗೆ ವಿಶೇಷ ಮಹತ್ವ ಕೊಟ್ಟುಕೊಂಡು ಬಂದಿದ್ದಾರೆ. ಕಾರಣ ಶ್ರೀ ವಿಷ್ಣುವು ಶೇಷಶಾಯಿ, ಶಿವನು ಸರ್ಪಭೂಷಣ, ಭೂಮಿಯನ್ನು ಹೊತ್ತವನು ಆದಿ ಶೇಷ, ಗಣಪತಿಯ ಹೊಟ್ಟೆಯ ನಡುಕಟ್ಟು ಕೂಡ ನಾಗದೇವನಲ್ಲವೆ ?

ನಮ್ಮ ಗ್ರಾಮೀಣರು ಅನೇಕ ವರ್ಷಗಳಿಂದ ಆಚರಿಸಿಕೊಂಡು ಬಂದ ಹಬ್ಬಗಳಲ್ಲಿ ನಾಗರ ಪಂಚಮಿಯೂ ಒಂದು. ಇದು ಸ್ತ್ರೀಯರು ಆಚರಿಸುವ ಬಹು ದೊಡ್ಡ ಹಬ್ಬ. ಈ ಹಬ್ಬದ ಆಚರಣೆಯ ಸಂದರ್ಭದಲ್ಲಿ ಹುತ್ತಪ್ಪನಿಗೆ ಪೂಜೆ ಸಲ್ಲಿಸಿ ಹಾಲು ಹೊಯ್ಯುವ ಸಂಪ್ರದಾಯ ನಡೆದುಕೊಂಡು ಬಂದಿದೆ. ದ್ರಾವಿಡರಿಂದ ಪ್ರಾರಂಭವಾದ ನಾಗಪೂಜಾ ಪದ್ಧತಿ ಆರ್ಯ ದ್ರಾವಿಡ ಸಂಸ್ಕೃತಿ ಸಾಕಾರಗೊಂಡ ಮೇಲೆ ಸಾರ್ವತ್ರಿಕವೆನಿಸಿತು[೫೭] ಎಂದು ಹೇಳಲಾಗುತ್ತದೆ. ಹೀಗಾಗಿ ಹಿಂದಿನಿಂದಲೂ ನಾಗಪೂಜೆಗೆ ವಿಶೇಷ ಮಹತ್ವ ಕೊಡುತ್ತ ಬರಲಾಗಿದೆ.

**ಪೌರಾಣಿಕ ಹಿನ್ನೆಲೆ :** ಒಮ್ಮೆ ನಾಗರಾಜನಾದ ತಕ್ಷಕನು ಪರೀಕ್ಷಿತ ರಾಜನನ್ನು ಕಟ್ಟಿ ಕೊಲ್ಲಲು, ಆತನ ಮಗ ಜನಮೇಜಯನು ನಾಗವಂಶವನ್ನೇ ನಿರ್ಮೂಲನಗೊಳಿಸಲು ಸರ್ಪಯಾಗವನ್ನು ಕೈಕೊಂಡನು. ತಕ್ಷಕನು ದೇವೇಂದ್ರನ ಮೊರೆ ಹೊಕ್ಕಿದ್ದರಿಂದ ಋತ್ವಿಜನ ಮಂತ್ರಾಹ್ವಾನದ ಪರಿಣಾಮವಾಗಲಿಲ್ಲ. ಬಳಿಕ ಇಂದ್ರ ಸಹಿತ ತಕ್ಷಕನನ್ನು ಆಹ್ವಾನಿಸಿದ್ದರಿಂದ ಗಾಬರಿಗೊಂಡ ಇಂದ್ರ, ತಕ್ಷಕರಿಬ್ಬರೂ ಆಸ್ತಿಕ ಮುನಿಯನ್ನು ಮೊರೆ ಹೊಕ್ಕರು. ತಂದೆ ಆರ್ಯಪುರುಷ, ತಾಯಿ ನಾಗಕನ್ಯೆಯಲ್ಲಿ ಜನ್ಮ ತಳೆದ ಆಸ್ತಿಕನ ಮಧ್ಯಸ್ಥಿಕೆಯಿಂದ ತಕ್ಷಕನು ತನ್ನ ವಿಷ ಹೀರಿಕೊಂಡು ಪರೀಕ್ಷಿತ ರಾಜನನ್ನು ಬದುಕಿಸಿದನೆಂದು, ಆದರಿಂದ ಜನಮೇಜಯನ ಸಿಟ್ಟು ಇಳಿಯಿತೆಂದು ಕಥೆಯಿದೆ.[೫೮] ಅಂದಿನಿಂದ ಆರ್ಯರು ನಾಗನನ್ನು ಮನ್ನಿಸಿ ನಾಗಪೂಜೆಗೆ ಮನ್ನಣೆ ಕೊಟ್ಟರು. ಅದರಿಂದ ಇಂದಿಗೂ ಆಸ್ತಿಕ ಮುನಿಯ ಹೆಸರು ಬರೆದಿರುವಲ್ಲಿ ಹಾವುಗಳು ಬರಲಾರವೆಂಬುದಾಗಿ ಜನಪದರಲ್ಲಿ ನಂಬಿಕೆ ಇದೆ.

ಭಾರತದ ಎಲ್ಲ ಭಾಗಗಳಲ್ಲೂ ನಾಗನಿಗೆ ಪ್ರಾಧಾನ್ಯತೆಯಿದೆ. ಪ್ರಾಚೀನ ಅರಸು ಮನೆತನಗಳು ನಾಗನಿಗೆ ಗೌರವ ನೀಡಿವೆ. ಕ್ರಿ. ಶ. ೩ ನೆಯ ಶತಮಾನದಲ್ಲಿ ಚಟುವಂಶದ ಶಿವಸ್ಕಂಧ ನಾಗಶ್ರೀಯಿಂದ ರಚಿತವಾದ ನಾಗ ಪ್ರತಿಮೆ ಅಂದಿನ ಕಾಲದ ನಾಗದೇವನ ಮಹತ್ವಕ್ಕೆ ಸಾಕ್ಷಿಯೆನಿಸಿದೆ. ನಾಗನಿಕಾ, ನಾಗಮಾಲಿಕಾ, ನಾಗಶ್ರೀ ಎಂಬ ಸ್ತ್ರೀ ನಾಮಗಳು ಅಂದಿನ ನಾಗೋಪಾಸನೆಯನ್ನು ಸೂಚಿಸುವಂತಿವೆ. ಇಂದು ಸಂಪ್ರದಾಯದಲ್ಲಿ ವಿಭಿನ್ನತೆ ಕಂಡು ಬಂದರೂ ನಾಗ ಪೂಜೆಗೆ ಪ್ರಾಮುಖ್ಯತೆಯಿದೆ[೫೯] ಎಂಬುದನ್ನು ಗಮನಿಸಬೇಕು. ಶ್ರಾವಣ ಶುದ್ಧ ಪಂಚಮಿಯ ದಿನವೇ ಈ ಹಬ್ಬ ಕೈಕೊಳ್ಳುವದಕ್ಕೆ ನಿರ್ಧಿಷ್ಟವಾದ ಕಾರಣ ತಿಳಿಯದೇ ಹೋದರೂ ಜನಪದ ಕಥೆಯೊಂದು ಈ ಬಗೆಗೆ ಹೇಳುತ್ತದೆ.

---

೫೭. ಡಾ. ಎಸ್.ಎಂ. ವೃಷಭೇಂದ್ರ ಸ್ವಾಮಿ (ಸಂ): ಜಾನಪದ ಸಾಹಿತ್ಯ ದರ್ಶನ, ಭಾಗ - ೧೦, ಪುಟ - ೯೦

೫೮. ..... ಅದೇ ..... ಪುಟ -೯೧

೫೯. ..... ಅದೇ .....

ಒಕ್ಕಲಿಗನೊಬ್ಬ ರಂಟೆ ಹೊಡೆಯುತ್ತಿದ್ದಾಗ ಕುಡದ ಬಾಯಿಗೆ ಸಿಕ್ಕು ಹಾವಿನ ಮರಿಗಳೆಲ್ಲ ಸತ್ತು ಹೋದದ್ದರಿಂದ ತಾಯಿ ಹಾವು ರೊಚ್ಚಿಗೆದ್ದು ಅಂದಿನ ರಾತ್ರಿ ಆ ಒಕ್ಕಲಿಗನ ಮನೆಯ ಮಂದಿಯನ್ನೆಲ್ಲ ಕಚ್ಚಿ ಕೊಂದು ಹಾಕಿದರೂ ಅದರ ರೋಷ ಶಮನವಾಗದೆ ದೂರದಲ್ಲಿ ಅತ್ತೆಯ ಮನೆಯಲ್ಲಿದ್ದ ಆ ಒಕ್ಕಲಿಗನ ಮಗಳನ್ನು ಕೊಲ್ಲಲು ಅತ್ತ ಹೊರಟಿತಂತೆ. ಅದೇ ಹೊತ್ತಿಗೆ ಒಕ್ಕಲಿಗನ ಮಗಳು ಮಣ್ಣಿನ ಹಾವನ್ನು ಮಾಡಿ ಹಾಲೆರೆಯುತ್ತಿದ್ದುದನ್ನು ಕಂಡ ನಾಗಿಣಿ ಶಾಂತವಾಗಿ ತಾನು ಒಕ್ಕಲಿಗನ ಮನೆಯಲ್ಲಿ ಮಾಡಿದ ಕೇಡನ್ನು ಆಕೆಗೆ ತಿಳಿಸಿತು. ಚಿಂತಾಕ್ರಾಂತಳಾದ ಆಕೆ ತನ್ನವರನ್ನೆಲ್ಲ ಬದುಕಿಸೆಂದು ಕೇಳಿಕೊಂಡಳು. ನಾಗಿಣಿಯಲ್ಲಿ ಕರುಣೆ ಹುಟ್ಟಿಕೊಂಡಿತು. ಮರಳಿ ಬಂದು ಎಲ್ಲರ ವಿಷವನ್ನು ಹೀರಿ ಬದುಕಿಸಿತು. ಅಂದಿನಿಂದ ಅವರೆಲ್ಲ ನಾಗಿಣಿಯನ್ನು ಪೂಜಿಸುತ್ತ ಬಂದರೆಂಬ ಕಥೆಯಿದೆ. ಅಂದಿನ ದಿನ ಶ್ರಾವಣ ಶುದ್ಧ ಚೌತಿಯಾದ್ದರಿಂದ ಆ ದಿನವನ್ನು ನಾಗಚೌತಿ ಎಂಬ ಹೆಸರಿನಿಂದ ಕರೆಯುತ್ತ ಬಂದುದೇ ನಾಗಪೂಜೆಗೂ ಕಾರಣವೆನಿಸಿತು.[೬೦]

**ಹುತ್ತಪ್ಪ ಶಿಲ್ಪದ ರಚನೆ :** ನಾಗಚೌತಿಯಂದು ನಾಗನನ್ನು ಪೂಜಿಸುವರು. ಅಂದು ಮಣ್ಣಿನಲ್ಲಿ ನಾಗಪ್ಪನ ಅಥವಾ ಹುತ್ತಪ್ಪನ ಶಿಲ್ಪವನ್ನು ರಚಿಸಿ ಪೂಜಿಸಲಾಗುತ್ತದೆ. ಆದರೆ ನಾಗಪ್ಪ ಅಥವಾ ಹುತ್ತಪ್ಪನ ಶಿಲ್ಪದ ರಚನೆಯಲ್ಲಿ ಪ್ರಾದೇಶಿಕವಾಗಿ ಕೆಲವು ವ್ಯತ್ಯಾಸಗಳೂ ಕಂಡು ಬರುತ್ತವೆ.

೧. ಸಾಮಾನ್ಯವಾಗಿ ನಾಗಚೌತಿಯ ದಿನ ಊರಲ್ಲಿನ ಪ್ರತಿಯೊಂದು ಮನೆಯವರು ಸಮೀಪದ ಹುತ್ತವಿದ್ದಲ್ಲಿಗೆ ಹೋಗಿ ಹುತ್ತನ್ನು ಪೂಜಿಸಿ ಅದೇ ಹುತ್ತಿನ ಮಣ್ಣನ್ನು ತೆಗೆದುಕೊಂಡು ಬಂದು ನಾಗಪ್ಪನ ಶಿಲ್ಪವನ್ನು ರಚಿಸಿವರು. ಈ ಶಿಲ್ಪವನ್ನು ಕುಂಬಳ ಎಲೆಯಿಲ್ಲಿಟ್ಟು ಹೊಸ ಮಡಕೆಯೊಂದರಲ್ಲಿ ಪ್ರತಿಷ್ಠಾಪಿಸುವರು. ನಂತರ ಹೂ, ಕೇದಗೆ ಹೂ, ಅರಿಷಿಣ ಹಚ್ಚಿದ ನೂಲು, ಕೊಕ್ಕಾಬತ್ತಿ, ಕೋಡ ಬತ್ತಿ ಹಾಕಿ ಶೃಂಗರಿಸುವರು. ಉಂಡಿ, ಉಸುಳು, ನಾಗದೇವತೆಗೆ ಎಡೆ ಮಾಡಿ ನಮಿಸುವರು. ಮನೆಮಂದಿಯೆಲ್ಲ ಕರಕಿ ಪತ್ರಿಯಿಂದ ಹುಲ್ಲು ನಾಗದೇವನಿಗೆ ಹಾಲು ಎರೆಯುತ್ತ ದೇವರ ಪಾಲು, ದಿಂಡರ ಪಾಲು, ಗುರು ಹಿರಿಯರ ಪಾಲು, ತಂದೆ ತಾಯಿಯರ ಪಾಲು, ತಮ್ಮ ಪಾಲು, ಸಮಸ್ತ ಬಳಗದ ಪಾಲು ಎಂದು ಮುಂತಾಗಿ ಸಮರ್ಪಣೆ ಮಾಡುವರು. ಕೊನೆಗೆ ಆರತಿ ಬೆಳಗಿ, ಕಾಯಿ, ಒಡೆದು ಎಡೆ ಹಿಡಿಯುವರು.

೨. ಇನ್ನೂ ಕೆಲವೆಡೆ ಊರಿನ ಪ್ರತಿಯೊಂದು ಮನೆಯಲ್ಲಿ ಪುಟ್ಟದಾದ ಹುತ್ತಪ್ಪನನ್ನು ಮಾಡಿ ಪೂಜಿಸುತ್ತಾರೆ. ಊರಿನ ಬಡಿಗರು, ಹೂಗಾರರು, ಊರಿನ ಹತ್ತಿರದ ಕೆರೆ, ಹಳ್ಳಗಳ ಹತ್ತಿರದ ಮಣ್ಣನ್ನು ತಂದು ನಾಗಪ್ಪನ ಶಿಲ್ಪವನ್ನು ಮಾಡಿ ಮನೆ ಮನೆಗೆ ಹಂಚುತ್ತಾರೆ. ಹೀಗೆ ನಾಗಪ್ಪನ ಶಿಲ್ಪವನ್ನು ಹಬ್ಬದ ದಿನದಂದು ಎಲ್ಲ ಮನೆಗಳಿಗೂ ಕೊಟ್ಟು ಮರು ದಿನ ಪಂಚಮಿಯಂದು ಎಳ್ಳು, ಉಂಡಿ, ದವಸ ಧಾನ್ಯ ಇಲ್ಲವೆ ಹಣವನ್ನು ಬ್ಯಾಜವಾಗಿ ಪಡೆಯುತ್ತಾರೆ.

---

೬೦. ಡಾ. ಎಸ್.ಎಂ. ವೃಷಭೇಂದ್ರ ಸ್ವಾಮಿ (ಸಂ): ಜಾನಪದ ಸಾಹಿತ್ಯ ದರ್ಶನ, ಭಾಗ - ೧೦, ಪುಟ - ೯೧

೩. ಮುಂಬೈ ಕರ್ನಾಟಕ ಭಾಗದ ಕೆಲವೆಡೆ ಊರಿನ ಕೇರಿಗಳಲ್ಲಿ ಐದು ಹೆಡೆಗಳ ದೊಡ್ಡ ಗಾತ್ರದ ಅಂದರೆ ಐದರಿಂದ ಆರು ಅಡಿ ಎತ್ತರದ ಮಣ್ಣಿನ ಹುತ್ತಪ್ಪನನ್ನು ಸಾಮೂಹಿಕವಾಗಿ ರಚನೆ ಮಾಡಿ ಪೂಜಿಸುತ್ತಾರೆ. ಆಯಾ ಓಣಿಯವರು ತಂತಮ್ಮ ಓಣಿಯ ಹುತ್ತಪ್ಪನನ್ನು ಸಾಮೂಹಿಕವಾಗಿ ಪೂಜಿಸಿ, ಹಾಲೆರೆಯುವ ಸಂಪ್ರದಾಯವಿದೆ. ಇತ್ತೀಚಿಗೆ ಕೆಲವೆಡೆ ಹುತ್ತಪ್ಪನ ಶಿಲ್ಪಕ್ಕೆ ಬಣ್ಣಗಳನ್ನು ಲೇಪನ ಮಾಡಿ ಅಲಂಕಾರಗೊಳಿಸಲಾಗುತ್ತಿದೆ. ಸೌಂದತ್ತಿಯ[೬೧] ಎಲ್ಲಮ್ಮನ ಗುಡ್ಡದಲ್ಲಿ ರಚಿಸಲಾಗುವ ಮಣ್ಣಿನ ನಾಗಪ್ಪ ಶಿಲ್ಪಗಳಿಗೆ ಈ ಬಗೆಯ ಬಣ್ಣಗಳನ್ನು ಬಳೆದು ಅಲಂಕರಿಸಲಾಗುತ್ತದೆ.

ಉತ್ತರ ಕರ್ನಾಟಕದಲ್ಲಿ ರಚನೆಗೊಳ್ಳುವ ಮಣ್ಣಿನ ಹುತ್ತಪ್ಪ ಶಿಲ್ಪಗಳನ್ನು ಪ್ರಧಾನವಾಗಿ ಎರಡು ವಿಧವಾಗಿ ವಿಂಗಡಿಸಬಹುದು. ೧. ಮನೆಯಲ್ಲಿ ಪೂಜಿಸುವ ಹುತ್ತಪ್ಪ ಶಿಲ್ಪ ೨. ಸಾರ್ವಜನಿಕವಾಗಿ ಪೂಜಿಸುವ ಹುತ್ತಪ್ಪ ಶಿಲ್ಪ. ಮನೆಯಲ್ಲಿ ಪೂಜಿಸುವ ಹುತ್ತಪ್ಪ ಶಿಲ್ಪ ಆಕಾರದಲ್ಲಿ ಸಣ್ಣದಾಗಿದ್ದರೆ, ಸಾರ್ವಜನಿಕವಾಗಿ ರಚಿಸಿ, ಪೂಜಿಸಲ್ಪಡುವ ಹುತ್ತಪ್ಪ ಶಿಲ್ಪ ಆಕಾರದಲ್ಲಿ ದೊಡ್ಡದಾಗಿರುತ್ತದೆ.

**ವಿಸರ್ಜನೆ :** ನಾಗಪ್ಪನ ಶಿಲ್ಪವನ್ನು ರಚಿಸಿದ ಮರು ದಿವಸ ಆ ದೊಡ್ಡ ಗಾತ್ರದ ಹುತ್ತಪ್ಪ ಶಿಲ್ಪವನ್ನು ವಿಸರ್ಜನೆ ಮಾಡುವ ಕಾರ್ಯ ನಡೆಯುತ್ತದೆ. ಅಂದು ನಾಗಪ್ಪನಿಗೆ ಹೂರಣ ಕುಚ್ಚಿದ ಕಡುಬಿನ ನೈವೇಧ್ಯ ಮಾಡಿ ಪೂಜಿಸಲಾಗುತ್ತದೆ. ಈ ಕಡುಬನ್ನು ಕುದಿಸಿರಬೇಕೇ ಹೊರತು ಕರಿದಿರಬಾರದು ಎಂದು ಗ್ರಾಮೀಣರು ಹೇಳುತ್ತಾರೆ. ಕೆಲವೆಡೆ ಹುತ್ತವಿದ್ದಲ್ಲಿಗೇ ಹೋಗಿ ಕೊಕ್ಕಾಬತ್ತಿ, ಕೋಡಬತ್ತಿ ಹಾಕಿ ಹುತ್ತಿಗೆ ಪೂಜೆ ಮಾಡಿ ಹಾಲೆರೆಯುವರು. ಇದು ಸಾಮೂಹಿಕವಾಗಿ ಮಾಡುವ ಪೂಜೆ. ಹೀಗೆ ಮೂರು ದಿನಗಳ ಕಾಲ ಪೂಜೆ ಮಾಡುವ ಹಬ್ಬದಲ್ಲಿ ಹಾಡುಗಳನ್ನು ಹೇಳುತ್ತಾರೆ. ಹೀಗೆ ಹೇಳುವ ಹಾಡುಗಳನ್ನು ಬೀದರ ಜಿಲ್ಲೆಯಲ್ಲಿ ಬುಲಾಯಿ ಹಾಡುಗಳೆಂದು ಕರೆಯಲಾಗುತ್ತದೆ.

ಹೀಗೆ ಹಾಡುಗಳನ್ನು ಹೇಳುತ್ತ ಪೂಜೆ ನೆರವೇರಿಸಿ ಹುತ್ತಪ್ಪನನ್ನು ಕೆಡಿಸುತ್ತಾರೆ. ಕೆಡವಲ್ಪಟ್ಟ ಹುತ್ತಪ್ಪನ ಮಣ್ಣನ್ನು ಆಯಾ ಓಣಿಯ ರೈತರು ತಂತಮ್ಮ ಹೊಲಗಳಿಗೆ ಒಯ್ದು ಚರಗದಂತೆ ಎಲ್ಲ ದಿಕ್ಕುಗಳಿಗೂ ಚೆಲ್ಲುತ್ತಾರೆ. ಇದರಿಂದ ಬೆಳೆ ಹುಲುಸಾಗಿ ಬರುತ್ತದೆ, ಫಲ ಹೆಚ್ಚುತ್ತದೆ ಎಂಬ ನಂಬಿಕೆ ರೈತರಲ್ಲಿದೆ. ಹುತ್ತಪ್ಪ ಶಿಲ್ಪದ ಆಚರಣೆಯಲ್ಲಿ ಅನೇಕ ಹಾಡು, ಜನಪದ ಕಥೆಗಳು ವಿಪುಲವಾಗಿ ಸಿಗುತ್ತವೆ.

**ನಂಬಿಕೆ :** ನಾಗಪೂಜೆ ಮಾಡಿದರೆ ಮಕ್ಕಳಾಗುತ್ತವೆ ಎಂಬ ಭಾವನೆ ಜನಪದರಲ್ಲಿದೆ.[೬೨] ಈ ಹಬ್ಬ ಸ್ತ್ರೀ ಪ್ರಧಾನವಾಗಿಯೇ ಆಚರಿಸಲ್ಪಡಬೇಕು, ಆಚರಿಸಲ್ಪಡುತ್ತದೆ. ನಾಗರ ಶಿಲ್ಪಗಳನ್ನು ಕಲ್ಲು ಇಲ್ಲವೆ ಕಂಚು ಮಾಧ್ಯಮಗಳಲ್ಲಿ ಮಾಡಿಸಿ ನಾಗರ ದೇವಸ್ಥಾನದಲ್ಲಿರಿಸುವ ಸಂಪ್ರದಾಯವೂ ಬೆಳೆದು ಬಂದಿದೆ. ಇವುಗಳನ್ನು ಹರಕೆಯ ಶಿಲ್ಪಗಳೆನ್ನಬಹುದು.[೬೩] ಹುತ್ತಪ್ಪ ಶಿಲ್ಪದ ವಿಸರ್ಜನೆಯ ನಂತರ, ಅದರ ಮಣ್ಣನ್ನು

---

೬೧. ಸೌಂದತ್ತಿ : ತಾ. ರಾಮದುರ್ಗ, ಜಿ. ಬೆಳಗಾವಿ

೬೨. ನೋಡಿ, ಇದೇ ಮಹಾಪ್ರಬಂಧದ ಅಧ್ಯಾಯ - ಐದು, ಶಿಲಾ ಮಾಧ್ಯಮದ ಜನಪದ ಕಲೆ. ನಾಗದೇವತಾ ಶಿಲ್ಪಗಳು

ಒಯ್ದು ಹೊಲಗಳಲ್ಲಿ ಚೆಲ್ಲಿದರೆ, ಬೆಳೆ ಹುಲುಸಾಗಿ ಬರುವದೆಂದು ಜನಪದರು ನಂಬುತ್ತಾರೆ. ಅದರಂತೆ ಮಾಡುತ್ತಾರೆ.

ನಾಗ ಪೂಜೆ ಬಹು ಪ್ರಾಚೀನ ಆಚರಣೆ ಎಂಬುದು ನಿರ್ವಿವಾದ. ಇಂತಹ ಆಚರಣೆಗಳ ಹಿಂದೆ ಒಂದೊಂದು ಕಾಮನೆ ಇರುವುದು ತಿಳಿಯುತ್ತದೆ. ನಮ್ಮ ಜನಪದರಿಗೆ ಯಾವುದೋ ಒಂದು ಫಲ ಬೇಕೆಂದರೆ ಅದಕ್ಕೆ ಯಾವುದೋ ಒಂದು ವ್ರತ ಅಥವಾ ಪೂಜೆ ಮಾಡಬೇಕು. ಗ್ರಾಮೀಣರು ಆಚರಿಸುವ ನಾಗರ ಪಂಚಮಿಯ ಹುತ್ತಪ್ಪನ ಪೂಜೆಯಲ್ಲಿ ಕಂಡು ಬರುತ್ತದೆ. ನಾಗ ಪೂಜೆಯನ್ನು ಹೆಣ್ಣು ಮಕ್ಕಳೇ ಮಾಡುವರು, ನಾಗನಿಗೆ ಹಾಲು ಎರೆಯುವುದು ಮತ್ತು ನಾಗ ಪೂಜೆ ಮಾಡಿದರೆ ಮಕ್ಕಳಾಗುತ್ತವೆ ಎಂದು ನಂಬುವುದು, ಇತ್ಯಾದಿಗಳ ಹಿನ್ನೆಲೆ ಗಮನಿಸಿದರೆ ನಾಗ ಅಥವಾ ಹುತ್ತಪ್ಪ ಒಂದು ಫಲದೇವತೆಯಾಗಿಯೂ, ಕೆಲವು ದೃಷ್ಟಿಯಿಂದ, ಈ ದೇವತಾ ಪೂಜೆ ಕಾಮದ ಪೂಜೆ ಅಥವಾ ಆರಾಧನೆಯಾಗಿಯೂ ತೋರುತ್ತದೆ. ಏಕೆಂದರೆ ಜಗತ್ತಿನ ಅನೇಕ ದೇಶಗಳಲ್ಲಿ ಸರ್ಪವನ್ನು ಕಾಮದ ಸಂಕೇತವಾಗಿ ಕಾಣಲಾಗಿದೆ.

ನೈಸರ್ಗಿಕವಾಗಿರುವ ಹುತ್ತವನ್ನು ಪೂಜಿಸುವುದಾಗಿರಲಿ, ಕಲ್ಲಿನಲ್ಲಿ ಕಡೆದು ರಚಿಸಿದ ನಾಗರಶಿಲ್ಪಗಳನ್ನು ಪೂಜಿಸುವುದಾಗಲಿ ಅಥವಾ ದೊಡ್ಡದಾದ ಹುತ್ತಪ್ಪನ ಶಿಲ್ಪವನ್ನು ಮಾಡಿ ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಶ್ಠಾಪಿಸಿ ಪೂಜಿಸುವುದಾಗಲಿ ಇವೆಲ್ಲ ಒಂದಲ್ಲ ಒಂದು ಬಗೆಯಲ್ಲಿ ನಮ್ಮ ಜನಪದರ ಆಶಯಗಳ ಹಿನ್ನೆಲೆಯಲ್ಲೇ ಜರುಗುತ್ತವೆ. ಕಲಾತ್ಮಕ ದೃಷ್ಟಿಯಿಂದಲೂ ಈ ಶಿಲ್ಪಗಳು ಜನಪದರ ಮನಸ್ಸಿನಲ್ಲಿ ಉಳಿದು ಬಂದಿವೆ. ವಿಶೇಷವಾಗಿ ಸಾರ್ವಜನಿಕವಾಗಿ ರಚಿಸಲಾಗುವ ಹುತ್ತಪ್ಪನ ಶಿಲ್ಪವಂತೂ ನಿಜವಾಗಿಯೂ ತನ್ನ ರೂಪ, ಆಕಾರ ಮತ್ತು ಪ್ರಮಾಣದಿಂದ ಊರ ಜನರನ್ನು ಆಕರ್ಷಿಸುವಂಥದಾಗಿರುತ್ತದೆ. ಹೀಗಾಗಿ ನಮ್ಮ ಜನಪದರಲ್ಲಿ ವರ್ಷ ವರ್ಷವೂ ಮರು ಹುಟ್ಟು ಪಡೆದು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ.

### ಉ. ತೋಪು ಹೊತ್ತ ಆನೆಯ ಶಿಲ್ಪಗಳು

ರಜಪೂತರು ಆಚರಿಸುವ ಗಜಲಕ್ಷ್ಮಿಯ ಹಾಗೆ ಮುಸ್ಲಿಮರು ಆಚರಿಸುವ ಸಂಪ್ರದಾಯದಲ್ಲೂ ತೋಪು ಹೊತ್ತ ಆನೆಯ ಶಿಲ್ಪ ಮಣ್ಣಿನಲ್ಲಿ ರಚನೆಗೊಂಡು ಆಚರಿಸಲ್ಪಡುತ್ತದೆ. ಇದನ್ನು ಶಬಾನ ಕಿ ಈದ್ ಎಂದು ಕರೆಯುತ್ತಾರೆ. ಗುಲಬರ್ಗಾದಿಂದ ಸುಮಾರು ಮೂರು ಕಿ. ಮಿ. ದೂರದಲ್ಲಿ ಆಳಂದ ರಸ್ತೆಗೆ ರಾಣೇಶಪೀರ್ ಎಂಬ ದರ್ಗಾ ಇದೆ. ಇದಕ್ಕೆ ಹಜರತ್ ರುಕ್ಮೋದ್ದೀನ್ ತೋಲಾ ಎಂತಲೂ ಕರೆಯುತ್ತಾರೆ. ಇಲ್ಲಿ ಗುರು ಹಜರತ್ ರುಕ್ಮೋದ್ದೀನ್ ತೋಲಾ ಮತ್ತು ಶಿಷ್ಯನಾದ ರಾಣೋಜಿ ಇವರ ಸಮಾಧಿಯು ಪರಸ್ಪರ ಹತ್ತಿರದಲ್ಲಿಯೇ ಇವೆ. ಇಲ್ಲಿ ಶಬಾನ್ ತಿಂಗಳ 15 ನೇ ದಿನದಂದು ಜಾತ್ರೆ ನಡೆಯುತ್ತದೆ. ಈ ಸಂದರ್ಭದಲ್ಲಿ ಮುಸ್ಲೀಮರ ಮನೆಯಲ್ಲಿ ವಿಶೇಷ ಪೂಜೆ, ಆಚರಣೆಗಳು ನಡೆಯುತ್ತವೆ. ಈ ಆಚರಣೆಯ

---

೬೩. ಡಾ. ಎಸ್.ಎಂ. ವೃಷಭೇಂದ್ರ ಸ್ವಾಮಿ (ಸಂ) : ಜಾನಪದ ಸಾಹಿತ್ಯ ದರ್ಶನ, ಭಾಗ - ೧೦, ಪುಟ -೯೫

ಕೇಂದ್ರಬಿಂದುವಾಗಿ ಈ ತೋಪು ಹೊತ್ತ ಆನೆಯ ಶಿಲ್ಪ ಗಮನ ಸೆಳೆಯುತ್ತದೆ.

**ರಚನೆ :** ಹದ ಮಾಡಿದ ಮಣ್ಣಿನಿಂದ ಒಂದು ಆನೆಯ ಶಿಲ್ಪವನ್ನು ರಚಿಸಲಾಗಿರುತ್ತದೆ. ಹಾಗೂ ಅದರ ಬೆನ್ನ ಮೇಲೆ ಒಂದು ಮಣ್ಣಿನಿಂದಲೇ ಮಾಡಿದ ತೋಪನ್ನು ಇಟ್ಟಿರುತ್ತಾರೆ. ಜೊತೆಗೆ ಮಣ್ಣಿನಿಂದಲೇ ರಚಿಸಲಾದ ದೀಪದ ಪಂಜವನ್ನು ಇಟ್ಟು ಪೂಜಿಸುತ್ತಾರೆ. ಈ ತೋಪು ಹೊತ್ತ ಆನೆಯ ಶಿಲ್ಪವನ್ನು ಮುಸ್ಲಿಮರು ಪಾಟಿ ಎಂದು ಕರೆಯುತ್ತಾರೆ. ಈ ಪಾಟಿ ಅಥವಾ ಆನೆಯ ಶಿಲ್ಪದ ನಾಲ್ಕೂ ಕಾಲುಗಳ ಮೇಲ್ಭಾಗದಲ್ಲಿ ನಾಲ್ಕು ದೀಪಗಳನ್ನು ಹಚ್ಚಲು ನಾಲ್ಕು ಹಣತೆಯಂತಹ ತಗ್ಗಿನ ಆಕಾರಗಳನ್ನು ಮಾಡಿ ಇದರಲ್ಲಿ ದೀಪ ಹೊತ್ತಿಸಿರುತ್ತಾರೆ. ಇದರ ಜೊತೆಗೆ ಇನ್ನೊಂದು ಮಣ್ಣಿನ ಶಿಲ್ಪವನ್ನು ಪಂಜಿನ ಕಂಬದಂತೆ ಮಾಡಿ ಸುತ್ತಲೂ ಹಣತೆಗಳನ್ನು ರಚಿಸಿ ದೀಪಗಳನ್ನು ಹಚ್ಚಿರುತ್ತಾರೆ. ಇದಕ್ಕೆ ಮುಸ್ಲಿಮರು ದಿಯಾ ಎಂದು ಹೇಳುತ್ತಾರೆ. ಇದು ಕೆಳಗಡೆ ಗೋಲಾಕಾರದಲ್ಲಿದ್ದು ಇದರ ಮೇಲ್ಭಾಗದಲ್ಲಿ ಐದು ಹಣತೆಗಳಿರುತ್ತವೆ. ಕೆಲವರು ಮನೆಯಲ್ಲಿಯೇ ಇವುಗಳನ್ನು ರಚಿಸಿದರೆ, ಇನ್ನೂ ಕೆಲವರು ಬಜಾರದಿಂದ ಮಾರಾಟಕ್ಕೆಂದೇ ಮಾಡಿದವುಗಳನ್ನು ಕೊಂಡು ತಂದಿರುತ್ತಾರೆ. ಇವುಗಳನ್ನು ವಿವಿಧ ಬಣ್ಣಗಳಿಂದ ಅಲಂಕರಿಸಲಾಗಿರುತ್ತದೆ.

ಈ ತೋಪು ಹೊತ್ತ ಮಣ್ಣಿನ ಆನೆ ಶಿಲ್ಪವನ್ನು ಆಚರಿಸುವ ಸಂಪ್ರದಾಯವು ಕ್ವಚಿತ್ತಾಗಿ ಕೆಲವು ಹಿಂದೂ ಕುಟುಂಬಗಳಲ್ಲೂ ಕಂಡು ಬರುತ್ತದೆ. ತಲೆಮಾರುಗಳಿಂದಲೂ ಈ ಸಂಪ್ರದಾಯ ಬೆಳೆದು ಬಂದಿದೆ. ಜಾತ್ರೆಯ ದಿನ ಪೂಜೆಗೊಳ್ಳುವ ಈ ಶಿಲ್ಪಗಳು ಎಣ್ಣೆ ದೀಪಗಳಿಂದ ಅಲಂಕೃತಗೊಂಡಿರುತ್ತವೆ. ನೈವೇಧ್ಯ, ಊದಕಡ್ಡಿ, ಲೋಬಾನ ಹಾಕಿ, ಪಟಾಕಿ ಹಾರಿಸುವದೂ ನಡೆಯುತ್ತದೆ. ಈ ತೋಪು ಹೊತ್ತ ಆನೆಯ ಶಿಲ್ಪದ ಆಚರಣೆ ಯಾವಾಗಿನಿಂದ ಆರಂಭವಾಗಿದೆ ಎಂಬುದು ತಿಳಿದು ಬರುವುದಿಲ್ಲ. ಆದರೆ ಈ ಆಚರಣೆಯ ಹಿಂದೆ ಸಮೃದ್ಧಿ ಆಶಯ ಅಡಗಿದೆ. ಆನೆ ಬಲಶಾಲಿ ಹಾಗೂ ದೊಡ್ಡ ಪ್ರಾಣಿ. ಅದರ ಬಣ್ಣವೂ ಕಪ್ಪು. ಕಪ್ಪು ಮಣ್ಣನ್ನು ಅದು ಪ್ರತಿನಿಧಿಸುತ್ತದೆ. ಅಲ್ಲದೆ ರಾಜ ವೈಭವದ ಕುರುಹೂ ಹೌದು. ತೋಪು ರಾಜ್ಯ ರಕ್ಷಣೆಯ ಸಂಕೇತ. ದೀಪ, ಬೆಳಕುಗಳು ಜ್ಞಾನ ಮತ್ತು ಆರೋಗ್ಯದ ಸಂಕೇತಗಳಾಗಿವೆ. ಈ ಎಲ್ಲವುಗಳನ್ನು ಪೂಜಿಸುವುದರಿಂದ ಆರೋಗ್ಯ, ಸಂಪತ್ತು, ಸಂತಾನ ವೃದ್ಧಿಸುತ್ತವೆ, ಬದುಕು ಸುರಕ್ಷಿತವಾಗಿರುತ್ತದೆ ಎಂಬುದೇ ಈ ಶಿಲ್ಪದ ಆಚರಣೆಯ ಹಿಂದಿರುವ ನಂಬಿಕೆಯಾಗಿ ತೋರುತ್ತದೆ.

**ವಿಸರ್ಜನೆ :** ಪೂಜೆಯಾದ ಮರುದಿನ ಈ ಮಣ್ಣಿನ ಆನೆಯ ಶಿಲ್ಪಗಳನ್ನು ಮಕ್ಕಳು ತೆಗೆದುಕೊಂಡು ಆಟವಾಡುತ್ತಾರೆ. ಇದೇ ವಿಸರ್ಜನೆಯೆನ್ನಬಹುದು.

## ಊ. ಆನೆಯಶಿಲ್ಪಗಳು

ಕಾರ್ತಿಕ ಮಾಸದ ಪೌರ್ಣಿಮೆಯಂದು ಶ್ರೀವೈಷ್ಣವರಲ್ಲಿ ಮಣ್ಣಿನ ಆನೆಯ ಶಿಲ್ಪವನ್ನು ರಚಿಸಿ,

ಪೂಜಿಸಿ ಹಬ್ಬವನ್ನಾಚರಿಸುವ ಸಂಪ್ರದಾಯವಿದೆ.

**ಪೌರಾಣಿಕ ಹಿನ್ನೆಲೆ :** ಒಮ್ಮೆ ಗಾಂಧಾರಿ ಮಣ್ಣಿನ ಆನೆ ಮಾಡಿ ಒಂದು ವ್ರತವನ್ನಾಚರಿಸಿದಳಂತೆ. ಈ ವ್ರತಕ್ಕೆ ಆಕೆ ಅನೇಕರನ್ನು ಆಹ್ವಾನಿಸಿದ್ದಳು. ಆದರೆ ಓರಗಿತ್ತಿಯಾದ ಕುಂತಿಯನ್ನು ಮಾತ್ರ ಆಹ್ವಾನಿಸಿರಲಿಲ್ಲ. ಇದರಿಂದ ಕೋಪಗೊಂಡ ಕುಂತಿ ಅರ್ಜುನನಿಂದ ದೇವಲೋಕದ ಐರಾವತವನ್ನೇ ತರಿಸಿ ಪೂಜಿಸಿದಳಂತೆ. ಈ ಹಿನ್ನೆಲೆಯಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವ ಈ ಹಬ್ಬದಂದು ವೈಷ್ಣವರು ಮಣ್ಣಿನಿಂದ ಆನೆಯ ಶಿಲ್ಪವನ್ನು ಮಾಡಿ, ಕಾರ್ತಿಕ ಮಾಸದ ಪೌರ್ಣಿಮೆಯ ಮೊದಲ ದಿನದಂದು ಪ್ರತಿಷ್ಠಾಪನೆ ಮಾಡುತ್ತಾರೆ. ಈ ಸಂದರ್ಭದಲ್ಲಿ ಸಾಕಷ್ಟು ಸಾಲು ದೀಪಗಳನ್ನು ಹಚ್ಚಿ ಇಡುವರು. ಮಣ್ಣಿನ ಆನೆಯೊಂದಿಗೆ ಬೆಳ್ಳಿ, ಕಂಚು, ಮರ ವಿವಿಧ ಮಾಧ್ಯಮಗಳಿಂದ ಮಾಡಲಾದ ಆನೆಗಳನ್ನು ಇಡುವದುಂಟು. ಈ ಪೂಜೆ ಒಟ್ಟು ಮೂರು ದಿನಗಳ ಕಾಲ ನಡೆಯುವದು. ಪ್ರತಿದಿನವೂ ಅಕ್ಕಿ, ಅಡಿಕೆ, ಬೆಲ್ಲ, ಕಬ್ಬು ಇವುಗಳನ್ನು ನೈವೇಧ್ಯ ಮಾಡುವರು. ಮೂರನೆಯ ದಿನ ಬಂಧುಗಳೆಲ್ಲ ಸೇರಿ, ಆರತಿ ಮಾಡಿ ಆನೆಯನ್ನು ನೀರಿನಲ್ಲಿ ವಿಸರ್ಜನೆ ಮಾಡುವರು. ಕುಂತಿಯು ವಿಧವೆಯಾಗಿದ್ದುಕೊಂಡು ಈ ಪೂಜೆಯನ್ನು ಆಚರಿಸಿದ್ದರಿಂದಾಗಿ ಅವಳ ಐರಾವತದ ಪೂಜೆಯ ಪರಂಪರೆ ಉಳಿದುಕೊಂಡು ಬರದೇ ಗಾಂಧಾರಿ ಮಾಡಿದ ಮಣ್ಣಿನ ಆನೆಯ ಶಿಲ್ಪದ ಪೂಜೆಯು ಇಂದಿಗೂ ಉಳಿದುಕೊಂಡು ಬಂದಿದೆ.[೬೪] ಎಂದು ಹೇಳುತ್ತಾರೆ. ಮುತ್ತೈದೆತನ ದೀರ್ಘಕಾಲ ಉಳಿಯಲಿ ಎಂಬುದೇ ಈ ಆಚರಣೆಯ ಹಿಂದಿನ ನಂಬಿಕೆಯಾಗಿದೆ.

## ಎ. ಆಮೆಯ ಶಿಲ್ಪಗಳು

ಕೋಲಾರ ಜಿಲ್ಲೆಯಲ್ಲಿ ಮುಸುಕು ಒಕ್ಕಲಿಗರು ಎಂಬ ಜನಾಂಗದ ತಾತೋರಾಯಲಿ ಗೋತ್ರದವರು ಮಣ್ಣಿನ ಆಮೆಯ ಶಿಲ್ಪವನ್ನು ರಚಿಸಿ ಪೂಜಿಸುವರು. ಆಮೆ ಅವರ ಕುಲದೇವರಂತೆ. ಪ್ರತಿ ವರ್ಷ ಯುಗಾದಿಯ ಮೂರನೆಯ ದಿನ ಇವರು ಆಮೆಯ ಶಿಲ್ಪವನ್ನು ಮಾಡಿ ಪೂಜಿಸುವರು. ಆ ದಿನ ಮನೆಯವರೆಲ್ಲ ಹೊಲಕ್ಕೆ ಹೋಗಿ, ಹೊಂಗೆ ಸೊಪ್ಪಿನಿಂದ ಸಣ್ಣ ಚಪ್ಪರವೊಂದನ್ನು ಹಾಕುವರು. ಅದರಲ್ಲಿ ಐದು ಕಲ್ಲಿನ ವಿಗ್ರಹಗಳನ್ನಿಟ್ಟು ಅದರ ಮುಂದೆ ಮಣ್ಣಿನಿಂದ ಆಮೆಯ ಶಿಲ್ಪವೊಂದನ್ನು ಮಾಡಿ ಇಡುವರು. ನಂತರ ಅದಕ್ಕೆ ಅರಿಷಿಣ, ಕುಂಕುಮ ಹಚ್ಚಿ ಹೂವಿಟ್ಟು ಪೂಜೆ ಮಾಡಿ ನಂತರ ಕೋಳಿಯೊಂದನ್ನು ಬಲಿ ಕೊಡುವರು[೬೫] ಎಂಬ ವಿಷಯ ಕುತೂಹಲಕರವಾದುದಾಗಿದೆ.

ಈ ಆಮೆಯ ಶಿಲ್ಪ ರಚಿಸಿ, ಪೂಜಿಸುವದರ ಹಿಂದನ ನಂಬಿಕೆಯೆಂದರೆ, ಆಮೆಯು ಮಳೆ ಸಮೃದ್ಧಿಯ ಸಂಕೇತವಾಗಿದೆ. ಇದನ್ನು ಪೂಜಿಸುವದರಿಂದ ಮಳೆ ಬರುವದೆಂಬ ನಂಬಿಕೆ ಇದ್ದಿರಬೇಕೆಂದು ತೋರುತ್ತದೆ.

---

೬೪. ಡಾ. ಚಂದ್ರಶೇಖರ ಕಂಬಾರ : ಕನ್ನಡ ಜನಪದ ವಿಶ್ವಕೋಶ, ಪುಟ - ೧೩೩, ೧೩೪
೬೫. ...... ಅದೇ ...... ಪುಟ - ೧೪೮

ಸಮೃದ್ಧಿಯ ಸಂಕೇತವಾಗಿದೆ. ಇದನ್ನು ಪೂಜಿಸುವದರಿಂದ ಮಳೆ ಬರುವದೆಂಬ ನಂಬಿಕೆ ಇದ್ದಿರಬೇಕೆಂದು ತೋರುತ್ತದೆ.

## II. ಮಣ್ಣಿನ ಮಾಧ್ಯಮದ ವೃತ್ತಿ ಮೂಲ ಜನಪದ ಶಿಲ್ಪ ಕಲೆ

ಮನುಷ್ಯ ಹೊಟ್ಟೆ ಪಾಡಿಗಾಗಿ ಹಲವಾರು ಬಗೆಯ ವೃತ್ತಿಗಳನ್ನು ಅವಲಂಬಿಸಿ ಬದುಕು ಸಾಗಿಸಿಕೊಂಡು ಬಂದಿದ್ದಾನೆ. ಬದುಕಿಗಾಗಿ ಅವಲಂಬಿಸಿದ ಹಲವು ವೃತ್ತಿಗಳಲ್ಲಿ ಬಿಕ್ಷೆ ಬೇಡುವುದೂ ಒಂದು ವೃತ್ತಿಯಾಗಿದೆ. ಈ ಬಿಕ್ಷೆ ಬೇಡುವ ಕ್ರಮವೂ ವಿಚಿತ್ರ ಬಗೆಯಲ್ಲಿ ಬೆಳೆದು ಬಂದಿದೆ. ಬಿಕ್ಷೆ ಬೇಡುವವರೂ ಹಲವು ಬಗೆಯ ಕಲೆಯನ್ನು ಪ್ರದರ್ಶಿಸಿ ಉಪಜೀವನವನ್ನು ಸಾಗಿಸುವದನ್ನು ಉತ್ತರ ಕರ್ನಾಟಕದಲ್ಲಿ ಕಾಣಬಹುದು. ಕೆಲವು ಬಿಕ್ಷುಕರು ಹಾಡು ಹೇಳಿ, ನೃತ್ಯ ಪ್ರದರ್ಶಿಸಿದರೆ, ಇನ್ನೂ ಕೆಲವರು ವೇಷಗಳನ್ನು ಪ್ರದರ್ಶಿಸಿ ಹೊಟ್ಟೆ ಹೊರೆಯುತ್ತಾರೆ. ಮತ್ತೆ ಕೆಲವರು ಮರಳು ಇಲ್ಲವೆ ಮಣ್ಣು ಇತ್ಯಾದಿ ಮಾಧ್ಯಮಗಳಲ್ಲಿ ಶಿಲ್ಪಕೃತಿಗಳನ್ನು ರಚಿಸಿ, ಬಣ್ಣ ಬಳೆದು ಜನರನ್ನು ಆಕರ್ಶಿಸಿ ಬಿಕ್ಷೆ ಪಡೆಯುತ್ತಾರೆ.

ಸೌಂದತ್ತಿಯ ಯಲ್ಲಮ್ಮನ ಗುಡ್ಡದಲ್ಲಿ ನಡೆಯುವ ಜಾತ್ರೆ ಹಾಗೂ ಯಮನೂರಿನ (ಬೆಣ್ಣೆಹಳ್ಳದ ಹತ್ತಿರ) ಚಾಂಗದೇವರ ಉರುಸ್ ಸಂದರ್ಭದಲ್ಲಿ ಈ ಬಗೆಯ ಮಣ್ಣಿನ ಶಿಲ್ಪಗಳು ರಚನೆಗೊಂಡಿರುತ್ತವೆ. ಬಿಕ್ಷುಕರು ಇಂಥ ಶಿಲ್ಪಗಳನ್ನು ಬೀದಿಯ ಅಕ್ಕ ಪಕ್ಕದಲ್ಲಿ ರಚಿಸಿ ಬಿಕ್ಷೆ ಬೇಡುವದನ್ನು ಕಾಣಬಹುದು. ಹಲವಾರು ವರ್ಷಗಳಿಂದ ಈ ರೀತಿಯ ಬಿಕ್ಷಾ ಪದ್ಧತಿಯು ಇಲ್ಲಿ ನಡೆದು ಬಂದಿದೆಯೆಂಬುದು ತಿಳಿದು ಬಂದಿದೆ.

### ೧. ದೇವತಾ ಶಿಲ್ಪಗಳು

ಚಾಂಗದೇವರ ಉರುಸ್ ಸಂದರ್ಭದಲ್ಲಿ ಹಾಗೂ ಸೌಂದತ್ತಿಯ ಎಲ್ಲಮ್ಮನ ಜಾತ್ರೆಯಲ್ಲಿ ದೇವಸ್ಥಾನಕ್ಕೆ ಹೋಗುವಾಗ ರಸ್ತೆಯ ಎಡಬಲಗಳಲ್ಲಿ ಮಣ್ಣಿನ ಶಿಲ್ಪಗಳು ರಚಿತವಾಗಿರುತ್ತವೆ. ಈ ಶಿಲ್ಪಗಳು ಸಾಮಾನ್ಯವಾಗಿ ದೇವತಾ ಶಿಲ್ಪಗಳಾಗಿರುತ್ತವೆ. ಈ ದೇವತಾ ಶಿಲ್ಪಗಳು ಪೌರಾಣಿಕ ಪಾತ್ರಗಳನ್ನು ಒಳಗೊಂಡಿರುತ್ತವೆ. ಅವನ್ನು ಒಟ್ಟಾಗಿಯೇ ದೇವತಾಶಿಲ್ಪಗಳೆಂದು ಇಲ್ಲಿ ಪರಿಗಣಿಸಬಹುದಾಗಿದೆ. ಈ ಶಿಲ್ಪಗಳನ್ನು

೧.೧ ಚಾಂಗದೇವರ ಉರುಸ್‌ನಲ್ಲಿಯ ಬೀದಿ ಶಿಲ್ಪಗಳು

೧.೨ ಸೌದತ್ತಿ ಎಲ್ಲಮ್ಮನ ಜಾತ್ರೆಯಲ್ಲಿನ ಬೀದಿ ಶಿಲ್ಪಗಳು ಎಂದು ವಿಂಗಡಿಸಿಕೊಳ್ಳಬಹುದಾಗಿದೆ. ಅವೆಲ್ಲವನ್ನು ಪ್ರತ್ಯೇಕವಾಗಿ ಕೆಳಗಿನಂತೆ ವಿಂಗಡಿಸಿ ನೋಡಬಹುದಾಗಿದೆ.

[illegible]

[illegible]

[illegible]

[illegible]

[illegible]

[illegible]

**೧.೧ ಚಾಂಗದೇವರ ಉರುಸ್‌ನಲ್ಲಿಯ ಬೀದಿ ಶಿಲ್ಪಗಳು :** ಯಮನೂರಿನಲ್ಲಿ[೬೬] ಚಾಂಗದೇವರ ಉರುಸ್ ನಡೆಯುತ್ತದೆ. ಹಿಂದೂ-ಮುಸ್ಲಿಂ ಭಾವೈಕ್ಯದ ಸಂಕೇತವಾಗಿರುವ ಈ ಜಾತ್ರೆ ವರ್ಷಕೊಮ್ಮೆ ನಡೆಯುತ್ತದೆ. ಈ ಸಂದರ್ಭದಲ್ಲಿ ಮಣ್ಣಿನ ಶಿಲ್ಪಗಳು ರಚನೆಗೊಂಡು ನೋಡುಗರ ಮನಸೂರೆಗೊಳ್ಳುತ್ತವೆ.

**ಶಿಲ್ಪಗಳ ರಚನೆ :** ಚಾಂಗದೇವರ ಗುಡಿಯಿಂದ ಕನಿಷ್ಠ ಒಂದು ಕಿ.ಮೀ. ಅಂತರದಲ್ಲಿ ಒಂದು ಹಳ್ಳ ಹರಿಯುತ್ತದೆ. ಈ ಹಳ್ಳಕ್ಕೆ ಬೆಣ್ಣೆ ಹಳ್ಳ ಎಂದು ಕರೆಯುತ್ತಾರೆ. ಈ ಹಳ್ಳದಲ್ಲಿ ಸ್ನಾನ ಮಾಡಿ ದೇವರ ದರ್ಶನ ಪಡೆದರೆ ರೋಗ ನಿವಾರಣೆಯಾಗುತ್ತದೆ ಎಂಬ ನಂಬಿಕೆಯಿದೆ. ಈ ನಂಬಿಕೆಯ ಹಿನ್ನೆಲೆಯಲ್ಲಿ ಯಾತ್ರಾರ್ಥಿಗಳು ಹಳ್ಳದಲ್ಲಿ ಸ್ನಾನ ಮಾಡಿ ದೇವಸ್ಥಾನಕ್ಕೆ ಬರುತ್ತಾರೆ. ಹೀಗೆ ಬರುವ ದೇವಸ್ಥಾನದ ದಾರಿಯ ಇಕ್ಕೆಲಗಳಲ್ಲಿ ಭಿಕ್ಷುಕರು ಭಿಕ್ಷೆಯ ಸಲುವಾಗಿ ಮಣ್ಣಿನ ಶಿಲ್ಪಗಳನ್ನು ರಚಿಸುತ್ತಾರೆ. ಅನೇಕ ವರ್ಷಗಳಿಂದ ಈ ಶಿಲ್ಪಗಳನ್ನು ರಚಿಸಿ ಭಿಕ್ಷೆ ಪಡೆಯುವ ಪದ್ಧತಿ ರೂಢಿಯಲ್ಲಿದ್ದು, ಮುಖ್ಯವಾಗಿ ಕುಷ್ಟರೋಗಿಗಳು, ಹೆಳವರು, ತೊನ್ನು ಹತ್ತಿದವರು ಈ ಶಿಲ್ಪಗಳ ಜೊತೆಗಿದ್ದು ಭಿಕ್ಷೆ ಪಡೆಯುತ್ತಾರೆ. ಈ ಶಿಲ್ಪಗಳನ್ನು ಕೆಲವರು ಭಿಕ್ಷುಕರೇ ರಚಿಸಿಕೊಂಡಿದ್ದರೆ, ಇನ್ನೂ ಕೆಲವರು ಬೇರೆಯವರ ಸಹಾಯ ಪಡೆದು ಅವರಿಂದ ಶಿಲ್ಪಗಳನ್ನು ಇನ್ನಷ್ಟು ಸುಂದರವಾಗಿ ರಚಿಸಿಕೊಂಡಿರುತ್ತಾರೆ. ಈ ಶಿಲ್ಪಗಳಿಗೆ ಆ ಸ್ಥಳದಲ್ಲಿಯೇ ಇರುವ ಇಲ್ಲವೆ ಬೆಣ್ಣೆ ಹಳ್ಳದ ದಡದ ಲ್ಲಿರುವ ಜಿಗುಟಾದ ಮಣ್ಣನ್ನು ತಂದು ಈ ಶಿಲ್ಪಗಳನ್ನು ರಚಿಸಿಕೊಂಡಿರುತ್ತಾರೆ. ಮುಖ್ಯವಾಗಿ ಹೊಟ್ಟೆ ಹೊರೆಯಲೆಂದೇ ಈ ಶಿಲ್ಪಗಳನ್ನು ರಚಿಸಿಸಲಾಗಿರುತ್ತದೆ. ಮತ್ತು ಜಾತ್ರೆಗೆ ಬಂದ ಯಾತ್ರಾರ್ಥಿಗಳು ಹಣವನ್ನು ಭಿಕ್ಷೆಯಾಗಿ ನೀಡುತ್ತಾರೆ ಎಂದು ಸ್ಥಳೀಯರು ಹೇಳುತ್ತಾರೆ.[೬೭] ಈ ಶಿಲ್ಪಗಳೆಂದರೆ ಮುಖ್ಯವಾಗಿ ಹನುಮಂತ, ಗಣಪ, ದೇವಿ, ಲಿಂಗ, ಬಸವಣ್ಣ ಮುಂತಾದ ಹಿಂದೂ ದೇವತೆಗಳ ಶಿಲ್ಪಗಳೇ ಆಗಿರುತ್ತವೆ. ಇಲ್ಲಿ ನೆಲದ ಮೇಲೆ ಹಾಸಿದಂತೆ ಉಬ್ಬು ಶಿಲ್ಪಗಳನ್ನು ಹಾಗೂ ನಿಲ್ಲಿಸಿದಂತಹ, ಅಥವಾ ಕುಳಿತ ಭಂಗಿಯ ಪೂರ್ಣಶಿಲ್ಪಗಳನ್ನು ರಚಿಸಲಾಗಿರುತ್ತದೆ. ಸಾಮಾನ್ಯವಾಗಿ ಈ ಶಿಲ್ಪಗಳು ಅರ್ಧದಿಂದ ರಿಂದ ಒಂದೂವರೆ ಅಡಿ ಎತ್ತರವಾಗಿರುತ್ತವೆ. ನೆಲದ ಮೇಲೆ ಹಾಸಿದಂತಹ ಶಿಲ್ಪಗಳು ಕೆಲವೊಮ್ಮೆ ಮೂರರಿಂದ ಐದು ಅಡಿಯವರೆಗೂ ಸ್ಥಳವನ್ನಾಕ್ರಮಿಸಿರುತ್ತವೆ.[೬೮]

ಈ ಶಿಲ್ಪಗಳನ್ನು ಅ. ಮಣ್ಣಿನ ಮಾಧ್ಯಮದ ಪುರುಷ ದೇವತಾ ಶಿಲ್ಪಗಳು, ಆ. ಮಣ್ಣಿನ ಮಾಧ್ಯಮದ ಸ್ತ್ರೀ ದೇವತಾ ಶಿಲ್ಪಗಳು, ಇ. ಮಣ್ಣಿನ ಮಾಧ್ಯಮದ ಪ್ರಾಣಿ ದೇವತಾ ಶಿಲ್ಪಗಳೆಂದು ವಿಂಗಡಿಸಿ ನೋಡಬಹುದಾಗಿದೆ.

---

೬೬. ಯಮನೂರ : ತಾ. ನವಲಗುಂದ, ಜಿ. ಧಾರವಾಡ

೬೭. ಮಾಹಿತಿ : ಡಾ. ಸಂಗಮೇಶ ಹಂಡಗಿ, ನಿವೃತ್ತ ಪ್ರಾಧ್ಯಾಪಕರು, ಸಾ. ನವಲಗುಂದ.

೬೮. ...... ಅದೇ ......

### ಅ. ಮಣ್ಣಿನ ಮಾಧ್ಯಮದ ಪುರುಷ ದೇವತಾ ಶಿಲ್ಪಗಳು

ಚಾಂಗದೇವರ ಉರುಸ್‌ನಲ್ಲಿ ಮಣ್ಣಿನ ಮಾಧ್ಯಮದಲ್ಲಿ ಹಲವಾರು ಪುರುಷ ದೇವತಾ ಶಿಲ್ಪಗಳು ರಚನೆಯಾಗಿರುತ್ತವೆ. ಅವುಗಳಲ್ಲಿ ಗಣಪ ಮತ್ತು ಶಿವನ ಶಿಲ್ಪಗಳನ್ನು ಗಮನಿಸಬಹುದು.

**ಗಣಪ ಮತ್ತು ಶಿವನ ಶಿಲ್ಪಗಳು :** ಚಾಂಗದೇವರ ಉರುಸ್‌ನಲ್ಲಿ ಬೆಣ್ಣೆ ಹಳ್ಳದಿಂದ ದೇವಸ್ಥಾನಕ್ಕೆ ಬರುವಾಗ ಬೀದಿಯ ಅಕ್ಕ-ಪಕ್ಕದಲ್ಲಿ ರಚಿತಗೊಂಡಿರುವ ಮಣ್ಣಿನ ಶಿಲ್ಪಗಳಲ್ಲಿ ಗಣೇಶನ ಶಿಲ್ಪ ಹಾಗೂ ಶಿವನ ಶಿಲ್ಪಗಳು ಆಕರ್ಷಕವಾಗಿ ರಚನೆಗೊಂಡಿರುತ್ತವೆ. ಮಣ್ಣಿನಲ್ಲಿ ರಚಿಸಿ ವಿವಿಧ ಬಣ್ಣಗಳನ್ನು ಬಳಿದು ಹೂಮಾಲೆ ಹಾಕಿ ಅಲಂಕರಿಸಲಾಗಿರುತ್ತದೆ. ಈ ಶಿಲ್ಪಗಳು ನೋಡುಗರಿಗೆ ಮೋಜು ನೀಡುವಂತಿರುತ್ತವೆ.

### ಆ. ಮಣ್ಣಿನ ಮಾಧ್ಯಮದ ಸ್ತ್ರೀದೇವತಾ ಶಿಲ್ಪಗಳು

ಪ್ರತಿ ವರ್ಷ ನಡೆಯುವ ಚಾಂಗದೇವರ ಉರುಸ್‌ನಲ್ಲಿ ರಚನೆಗೊಳ್ಳುವ ಮಣ್ಣಿನ ಶಿಲ್ಪಗಳಲ್ಲಿ ಪುರುಷ ದೇವತೆಗಳಂತೆ ಸ್ತ್ರೀ ದೇವತಾ ಶಿಲ್ಪಗಳೂ ರಚನೆಗೊಂಡಿರುತ್ತವೆ. ಮುಖ್ಯವಾಗಿ ಪಾರ್ವತಿ, ಲಕ್ಷ್ಮೀ, ದೇವಿ ಮುಂತಾದ ಸ್ತ್ರೀ ದೇವತಾ ಶಿಲ್ಪಗಳು ರಚನೆಗೊಂಡಿರುತ್ತವೆ. ಮಣ್ಣಿನಲ್ಲಿ ರಚಿಸಿ, ವಿವಿಧ ಬಣ್ಣಗಳಿಂದ ಅಲಂಕರಿಸಿ ಸ್ತ್ರೀಯರಂತೆ ಕಾಣುವ ಹಾಗೆ ಶೃಂಗರಿಸಲಾಗಿರುತ್ತದೆ.

### ಇ. ಮಣ್ಣಿನ ಮಾಧ್ಯಮದ ಪ್ರಾಣಿ ದೇವತಾ ಶಿಲ್ಪಗಳು

ಇಲ್ಲಿ ರಚನೆಗೊಳ್ಳುವ ಪ್ರಾಣಿ ದೇವತಾ ಶಿಲ್ಪಗಳಲ್ಲಿ ಹುಲಿ ಮತ್ತು ನಂದಿಯ ಶಿಲ್ಪಗಳು ಮುಖ್ಯವಾಗಿರುತ್ತವೆ. ಹುಲಿ ಚಾಂಗದೇವರ ವಾಹನವಾಗಿದ್ದರೆ ನಂದಿ ಯು ಶಿವನ ವಾಹನವಾಗಿದೆ. ಈ ಶಿಲ್ಪಗಳಿಗೂ ಬಣ್ಣ ಬಳೆದು ಅಲಂಕರಿಸಲಾಗಿರುತ್ತದೆ. ಇದಲ್ಲದೆ ಅಲ್ಲಲ್ಲಿ ಲಿಂಗಾಕೃತಿಯ ಶಿಲ್ಪಗಳೂ ಸೃಷ್ಟಿಗೊಂಡಿರುತ್ತವೆ. ಇಲ್ಲಿ ರಚನೆಗೊಳ್ಳುವ ಪ್ರಾಣಿದೇವತಾ ಶಿಲ್ಪಗಳಲ್ಲಿ ರಾಮ ಭಕ್ತನಾದ ಹನುಮಂತನ ಶಿಲ್ಪಗಳೂ ಪ್ರಮುಖವಾಗಿ ಕಂಡು ಬರುತ್ತವೆ.

**೧.೨ ಸೌಂದತ್ತಿ ಎಲ್ಲಮ್ಮನ ಜಾತ್ರೆಯಲ್ಲಿನ ಬೀದಿ ಶಿಲ್ಪಗಳು :** ಸೌಂದತ್ತಿಯ[೧೯]ಲ್ಲಿರುವ ಎಲ್ಲಮ್ಮನಿಂದಾಗಿ ಈ ಕ್ಷೇತ್ರ ದಕ್ಷಿಣ ಭಾರತದಲ್ಲೇ ಪ್ರಸಿದ್ಧವಾಗಿದೆ. ಈ ಎಲ್ಲಮ್ಮನಿಗೆ ಏಳು ಕೊಳ್ಳದ ಎಲ್ಲಮ್ಮ ಎಂದೂ, ರೇಣುಕಾದೇವಿ ಎಂದೂ ಕರೆಯುತ್ತಾರೆ. ಈ ರೇಣುಕೆ-ಎಲ್ಲಮ್ಮ ಇವರು ಬೇರೆ ಬೇರೆಯೇ ಇರಬಹುದೆಂದು ವಿದ್ವಾಂಸರು ತರ್ಕಿಸುತ್ತಾರೆ.[೨೦] ಜನಪದರಲ್ಲಿ ರೇಣುಕಾದೇವಿಯೇ ಎಲ್ಲಮ್ಮ. ಹೀಗಾಗಿ ರೇಣುಕಾ ಎಲ್ಲಮ್ಮ ಎಂದೂ ಜನಪದರು ಕರೆಯುತ್ತಾರೆ. ಎಲ್ಲರ ಅಮ್ಮನೇ ಎಲ್ಲಮ್ಮ. ಇಲ್ಲವೆ

---

೧೯. ಸೌಂದತ್ತಿ : ತಾ. ಜಿ. ಬೆಳಗಾವಿ

೨೦. ವಿವರಗಳಿಗೆ ನೋಡಿ, ಡಾ. ಎಂ.ಎಂ. ಕಲಬುರ್ಗಿ ( ಸಂ ) : ಜಾನಪದ ಸಾಹಿತ್ಯ ದರ್ಶನ, ಭಾಗ - ೧೧, ಪುಟ - ೨೯

ಎಲ್ಲೆ ಅಥವಾ ಗಡಿಯ ದೇವತೆಯೇ ಎಲ್ಲಮ್ಮ ಆಗಿರಬಹುದು [೭೧] ಎಂದು ಡಾ. ಎಂ. ಚಿದಾನಂದ ಮೂರ್ತಿಯವರು ತರ್ಕಿಸುತ್ತಾರೆ. ಸೌಂದತ್ತಿಯ ಹತ್ತಿರದ ಗುಡ್ಡದಲ್ಲಿ ಈಕೆಯ ದೇವಸ್ಥಾನವಿದೆ. ಗುಡ್ಡದಲ್ಲಿ ಈಕೆ ಇರುವುದರಿಂದ ಗುಡ್ಡದ ಎಲ್ಲಮ್ಮ ಎಂದೂ ಕರೆಯುತ್ತಾರೆ. ಪ್ರತಿವರ್ಷ ಬನದ ಹುಣ್ಣಿಮೆ, ಭಾರತ ಹುಣ್ಣಿಮೆಗಳಲ್ಲಿ ಗುಡ್ಡದ ಎಲ್ಲಮ್ಮನ ಜಾತ್ರೆ ಜೋರಾಗಿ ನಡೆಯುತ್ತದೆ. ವಿಶೇಷವೆಂದರೆ ಜಾತ್ರೆಯ ಸಂದರ್ಭದಲ್ಲಿ ಸೌಂದತ್ತಿಯಿಂದ ದೇವಸ್ಥಾನಕ್ಕೆ ಹೋಗುವ ಜೋಗುಳಭಾವಿ ಮಾರ್ಗದ ರಸ್ತೆಯ ಎಡಬಲಗಳಲ್ಲಿ ಮಣ್ಣಿನ ಶಿಲ್ಪಗಳು ಸೃಷ್ಟಿಗೊಂಡಿರುತ್ತವೆ. ಸುಮಾರು ಎರಡು ಕಿ. ಮೀ. ಉದ್ದದವರೆಗೂ ಈ ಶಿಲ್ಪಗಳು ಹರಡಿಕೊಂಡಿರುತ್ತವೆ. ಸೌಂದತ್ತಿಯ ಎಲ್ಲಮ್ಮನ ಕುರಿತು ಅನೇಕ ಪ್ರಬುದ್ಧ ಲೇಖನಗಳು, ಗ್ರಂಥಗಳನ್ನು ಪ್ರಕಟಿಸಿದ ವಿದ್ವಾಂಸರು ಈ ಶಿಲ್ಪಗಳ ಕುರಿತು ಯಾರೂ ಎಲ್ಲೂ ಉಲ್ಲೇಖಿಸಿದ್ದು ಕಂಡು ಬರುವದಿಲ್ಲ.

ಸೌಂದತ್ತಿಯಲ್ಲಿ ರಚನೆಗೊಳ್ಳುವ ಶಿಲ್ಪಗಳಲ್ಲಿ ಪ್ರಚಲಿತ ಕಥೆಗಳಲ್ಲಿರುವಂತೆ, ವಿಂಗಡಿಸಿ ನೋಡುವದು ಅಗತ್ಯ. ಅ. ಜಮದಗ್ನಿ-ರೇಣುಕೆ-ಪರಶುರಾಮರ ಕುರಿತ ಶಿಲ್ಪಗಳು, ಆ. ರಾಮಾಯಣ -ಮಹಾಭಾರತದ ಕೆಲವು ಪಾತ್ರಗಳ ಕುರಿತಶಿಲ್ಪಗಳು, ಇ. ಇತರ ಶಿಲ್ಪಗಳು.

**ಅ. ಜಮದಗ್ನಿ-ರೇಣುಕೆ-ಪರಶುರಾಮರ ಕುರಿತ ಶಿಲ್ಪಗಳು :** ಕಥೆಯಲ್ಲಿ ಬರುವಂತೆ, ರೇಣುಕಾ ದೇವಿ ಪತಿವ್ರತೆ. ಈಕೆ ಜಮದಗ್ನಿ ಋಷಿಯ ಹೆಂಡತಿ. ಕಟ್ಟುನಿಟ್ಟಿನ ವ್ರತಾಚರಣೆಗೆ ಹೆಸರಾದ ಜಮದಗ್ನಿಯ ನಿತ್ಯ ಕರ್ಮಗಳಿಗೆ ಬೇಕಾದ ನೀರನ್ನು ದಿನಾಲು ತರುವವಳು. ಮರಳಿನಲ್ಲಿಯೇ ಕೊಡವನ್ನು ಮಾಡಿ, ಜೀವಂತ ಸರ್ಪವನ್ನೇ ಸಿಂಬೆಯನ್ನಾಗಿ ಮಾಡಿ ತಲೆಯ ಮೇಲಿಟ್ಟುಕೊಂಡು ನೀರನ್ನು ತರುತ್ತಿದ್ದಳು. ಒಂದು ದಿನ ಅವಳ ಚಿತ್ತ ಚಂಚಲವಾದುದರಿಂದಾಗಿ ಮರಳಿನಿಂದ ಕೊಡ ನಿರ್ಮಾಣವಾಗುವದಿಲ್ಲ ಮತ್ತು ಹಾವು ಸಿಂಬೆಯಾಗುವದಿಲ್ಲ. ಅವಳು ಮರಳಿ ಆಶ್ರಮಕ್ಕೆ ಬರಲು ತಡವಾಗುತ್ತದೆ. ಇದರಿಂದ ಕೋಪಗೊಂಡ ಋಷಿ ಅವಳ ರುಂಡವನ್ನು ಕತ್ತರಿಸಲು ಮಕ್ಕಳಿಗೆ ಆಜ್ಞಾಪಿಸುತ್ತಾನೆ. ಪರಶುರಾಮ ತಾಯಿಯ ರುಂಡವನ್ನು ಚಂಡಾಡುತ್ತಾನೆ. ನಂತರ ಜಮದಗ್ನಿ ಮಗನಿಗೆ ವರ ಕೊಡುವನು. ಅದರ ಬಲದಿಂದ ಯಾಯಿಯನ್ನು ಮತ್ತೆ ಜೀವಂತಗೊಳಿಸುವನು.

ಈ ಸನ್ನಿವೇಷದ ವಿವಿಧ ರೀತಿಯ ಸಂಯೋಜನಾ ಶಿಲ್ಪಗಳು ಗುಡ್ಡದಲ್ಲಿ ಬೀದಿಯ ಅಕ್ಕಪಕ್ಕಗಳಲ್ಲಿ ಕಣ್ಮುಂದೆ ಕಟ್ಟಿದಂತೆ ರಚನೆಗೊಂಡಿರುತ್ತವೆ. ರೇಣುಕೆ ಹಾವನ್ನು ಸಿಂಬೆ ಮಾಡಿಕೊಂಡು ಮರಳಿನ ಕೊಡ ಹೊತ್ತು ತರುತ್ತಿರುವದು, ಜಮದಗ್ನಿ ನಿಂತು ಕೈಸನ್ನೆ ಮಾಡಿ ಪರಶುರಾಮನಿಗೆ ಆಜ್ಞೆ ಮಾಡುತ್ತಿರುವದು, ಪರಶುರಾಮ ಕೈಗಳಲ್ಲಿ ರಕ್ತದಿಂದ ತೊಯ್ದ ಕೊಡಲಿಯನ್ನು ಹಿಡಿದಿರುವದು, ಅಂಗಾತವಾಗಿ ಮಲಗಿದ ಮುಂಡದಿಂದ ಬೇರ್ಪಟ್ಟ ರೇಣುಕೆಯ ರುಂಡ, ಚೆಲ್ಲಾಡಿದ ರಕ್ತ ಎಲ್ಲವೂ ಸ್ತಬ್ಧ ಶಿಲ್ಪಗಳಾಗಿರುತ್ತವೆ.

---

೭೧. ವಿವರಗಳಿಗೆ ನೋಡಿ, ಡಾ. ಎಂ.ಎಂ. ಕಲಬುರ್ಗಿ ( ಸಂ ) : ಜಾನಪದ ಸಾಹಿತ್ಯ ದರ್ಶನ, ಭಾಗ - ೧೧, ಪುಟ - ೧೭೫

ಜಮದಗ್ನಿ ಮತ್ತು ಪರಶುರಾಮರು ತೊಟ್ಟಿರುವ ಅಂಗಿಗಳಿಗೆ ಹಳದಿ ಬಣ್ಣ ಹಾಗೂ ಪಂಜೆಗೆ ಬಿಳಿಯ ಬಣ್ಣ ಬಳೆದು, ಬಟ್ಟೆಯಂತೆ ಮಾಡಲಾಗಿರುತ್ತದೆ. ಅಲ್ಲದೆ ಕೊರಳಲ್ಲಿ ರುದ್ರಾಕ್ಷಿ, ತಲೆಯ ಮೇಲೆ ಜುಟ್ಟು ಹಾಗೂ ಗಡ್ಡಗಳು ಕಪ್ಪು ಬಣ್ಣದಿಂದ ಎದ್ದು ಕಾಣುವಂತೆ ಮಾಡಲಾಗಿರುತ್ತದೆ. ರೇಣುಕೆ ಬಿಳಿ ಸೀರೆಯುಟ್ಟಿರುವಂತೆ ಬಣ್ಣ ಬಳೆಯಲಾಗಿರುತ್ತದೆ.

**ಆ. ರಾಮಾಯಣ ಮಹಾಭಾರತದ ಕೆಲವು ಪಾತ್ರಗಳ ಕುರಿತ ಶಿಲ್ಪಗಳು :** ರಾಮಾಯಣದಲ್ಲಿ ಬರುವ ಗದೆಯೊಂದಿಗಿನ ಹನುಮಂತ, ಮಹಾಭಾರತದ ಬಾಲಕೃಷ್ಣನ ಶಿಲ್ಪಗಳೂ ಆಕರ್ಶಕವಾಗಿ ಇಲ್ಲಿ ರಚನೆಗೊಂಡಿರುತ್ತವೆ. ಕೈಗಳಲ್ಲಿ ಗದೆ ಹಿಡಿದು ಇನ್ನೊಂದು ಕೈಯಲ್ಲಿ ಸಂಜೀವಿನಿ ಬೆಟ್ಟ ಹಿಡಿದು ನಿಂತಿರುವ ಹನುಮ, ಗದೆಯನ್ನು ಪಕ್ಕದಲ್ಲಿರಿಸಿ ಕೈಮುಗಿದು ನಿಂತ ಹನುಮ ಹೀಗೆ ವಿವಿಧ ಭಂಗಿಗಳಲ್ಲಿ ರಚನೆಗೊಂಡಿರುತ್ತವೆ. ತಲೆಯ ಮೇಲೆ ಕಿರೀಟ, ಕಪ್ಪು ಮೈಬಣ್ಣ, ಕೆಂಪು ಬಣ್ಣದ ಚಡ್ಡಿಯಿಂದ ಹನುಮನ ಶಿಲ್ಪಗಳು ಆಕರ್ಶಕವಾಗಿರುತ್ತವೆ.

**ಬೆಣ್ಣೆ ತಿನ್ನುತ್ತಿರುವ ಬಾಲಕೃಷ್ಣನ ಶಿಲ್ಪಗಳು :** ಬೂದು ಮಿಶ್ರಿತ ನೀಲ ವರ್ಣದ ಮೈಬಣ್ಣ, ಕೆಂಪು ಬಣ್ಣದ ಅಂಗಿ ತೊಟ್ಟಿರುವ ಬಾಲಕೃಷ್ಣ ತನ್ನ ಮುಂದೆ ಬೆಣ್ಣೆಯ ಗಡಿಗೆಯನ್ನಿಟ್ಟುಕೊಂಡು ಬೆಣ್ಣೆ ತಿನ್ನುತ್ತಿರುವ ಶಿಲ್ಪಗಳು ಆಕರ್ಶಕವಾಗಿರುತ್ತವೆ.

**ಇ. ಇತರ ಶಿಲ್ಪಗಳು :** ಇತರ ಶಿಲ್ಪಗಳಲ್ಲಿ ೧. ನೃತ್ಯ ನಿರತ ಶಿವ ಪಾರ್ವತಿಯರು, ೨. ಮಲಗಿಕೊಂಡ ತ್ರಿಶೂಲ ಸಮೇತ ಶಿವ ಮತ್ತು ಚತುರ್ಭುಜ ಗಣೇಶ, ೩. ನಂದಿ, ೪. ಲಿಂಗ ಮತ್ತು ನಾಗ, ೫. ಲಿಂಗ ಮತ್ತು ಬಸವಣ್ಣ, ೬. ಮಾತಂಗಿ,[೭೨] ೭. ಲಿಂಗ ಮತ್ತು ಏಳುಹೆಡೆಯ ಶಿಲ್ಪ, ೮. ಏಕಯ್ಯ ಮತ್ತು ಜೋಗಯ್ಯ[೭೩] ಶಿಲ್ಪಗಳು ಪ್ರಮುಖವಾಗಿ ಕಂಡುಬರುತ್ತವೆ. ಈ ಎಲ್ಲ ಶಿಲ್ಪಗಳು ಹಾಗೂ ಸುತ್ತ ಮುತ್ತಲಿನ ಆವರಣ ಸಗಣಿಯಿಂದ ಸಾರಿಸಲ್ಪಟ್ಟಿರುತ್ತದೆ. ಶಿಲ್ಪಗಳಿಗೆ ಕೆಂಪು, ನೀಲಿ, ಹಳದಿ, ಬಿಳಿ ಹಾಗೂ ಕಪ್ಪು ಬಣ್ಣಗಳನ್ನು ಬಳೆದು ಅಲಂಕರಿಸಲಾಗಿರುತ್ತದೆ.

ಈ ಶಿಲ್ಪಗಳು ಎಂದಿನಿಂದ ಹೀಗೆ ರಚನೆಗೊಳ್ಳುತ್ತ ಬಂದಿವೆ ಎಂಬುದು ತಿಳಿಯುವದಿಲ್ಲ. ಆದರೆ ಕೆಲವು ಜನವರ್ಗ ಹೊಟ್ಟೆ ಪಾಡಿಗಾಗಿ ಈ ಶಿಲ್ಪಗಳನ್ನು ರಚಿಸುತ್ತಾರೆ. ಎಲ್ಲಮ್ಮನ ಗುಡ್ಡಕ್ಕೆ ಬರು ಹೋಗುವವರು ಈ ಶಿಲ್ಪಗಳೆಡೆಗೆ ಹಣವನ್ನು ಹಾಕುತ್ತಾರೆ. ಹೀಗಾಗಿ ಬಿಕ್ಷೆಯ ಕಾರಣಕ್ಕಾಗಿ ಈ ಶಿಲ್ಪಗಳು ರೂಪ ತಳೆದಿರುತ್ತವೆಯೆಂದು ಹೇಳಬಹುದಾಗಿದೆ.

ಬಿಕ್ಷೆಯೇ ಮೂಲವಾದ ಆಶಯದ ಹಿನ್ನೆಲೆಯಲ್ಲಿ ಹುಟ್ಟಿಕೊಂಡರೂ ಈ ಬೀದಿ ಶಿಲ್ಪಗಳು ವಿವಿಧ ಬಣ್ಣ, ಆಕಾರಗಳಿಂದಾಗಿ ನೋಡುಗರನ್ನು ಆಕರ್ಷಿಸುವಂತಿರುತ್ತವೆ. ಜಾತ್ರೆಯ ಸಂದರ್ಭದಲ್ಲಂತೂ ಶಿಲ್ಪ

---

೭೨. ಮಾತಂಗಿ : ಎಲ್ಲಮ್ಮನಿಗೆ ಕುಷ್ಠರೋಗ ಹತ್ತಿದಾಗ ಉಪಚರಿಸಿದಳಂತೆ

೭೩. ಏಕಯ್ಯ-ಜೋಗಯ್ಯ, ಇವರನ್ನು ಏಕನಾಥ-ಜೋಗಿನಾಥ ಎಂದೂ ಹೇಳುವರು. ಈ ಇಬ್ಬರು ಸಿದ್ಧಪುರುಷರಿಂದ ಎಲ್ಲಮ್ಮನ ರೋಗ ನಿವಾರಣೆಯಾಯಿತೆಂಬ ನಂಬಿಕೆಯಿದೆ.



ನಂದಿಯ ಶಿಲ್ಪ.




ಹುನುಮಂತನ ಶಿಲ್ಪ



ಬೆಣ್ಣೆತಿನ್ನುತ್ತಿರುವ ಬಾಲಕೃಷ್ಣನ ಬೀದಿಶಿಲ್ಪ (ಸೌಂದತ್ತಿ)




ಬೀದಿ ಶಿಲ್ಪಗಳು ([illegible])




ಗುಳ್ಳವ್ವನ ಶಿಲ್ಪ



ಗೊಗ್ಗಪ್ಪನ ಶಿಲ್ಪ.




ಗಾಣದ ದೀಪ



ಹುತ್ತಪ್ಪನ ಶಿಲ್ಪಗಳು




ನಾಗ - ನಾಗಿಣಿಯ ಶಿಲ್ಪ.






ಆನೆ ಮತ್ತು ಮಾವುತನ ಶಿಲ್ಪ.



ಗಜಲಕ್ಷ್ಮಿಯರ ಶಿಲ್ಪ.





ತೋಪು ಹೊತ್ತ ಆನೆಯ ಶಿಲ್ಪ.



ತೋಪು ಹೊತ್ತ ಆನೆ ಮತ್ತು ಪಂಜುಗಳ ಶಿಲ್ಪ.



ಪಂಜುಗಂಬದ ಶಿಲ್ಪ.

ಬೀದಿ ಎಂಬಂತೆ ಆ ಪ್ರದೇಶ ರೂಪುಗೊಂಡಿರುತ್ತದೆ. ಕೃಷ್ಣ, ಪರಶುರಾಮ, ಜಮದಗ್ನಿ, ರೇಣುಕೆ, ಶಿವ, ಪಾರ್ವತಿ, ಗಣೇಶ ಮುಂತಾದ ಪೌರಾಣಿಕ ದೇವ-ದೇವತೆಗಳ ಶಿಲ್ಪಗಳು ಅಲ್ಲದೆ ಸರ್ಪ, ಹುತ್ತ, ಮುಂತಾದ ಪ್ರಾಣಿಗಳ ಶಿಲ್ಪಗಳೂ ರಚನೆಯಾಗಿರುತ್ತವೆ. ಈ ಶಿಲ್ಪಗಳಿಗೆ ಬಯಲೇ ಕಲಾ ಗ್ಯಾಲರಿಯಾಗಿರುತ್ತದೆ. ಜಾತ್ರೆಗೆ ಬಂದ ಯಾತ್ರಿಕರು ಈ ಶಿಲ್ಪಗಳನ್ನು ಕಂಡು ಅವುಗಳ ಮೂಲಕ ಪುರಾಣದ ಪಾತ್ರಗಳನ್ನು, ಕಥೆಗಳನ್ನು ಪರಸ್ಪರರು ಚರ್ಚಿಸಿ, ಮೆಲುಕು ಹಾಕುತ್ತಾರೆ. ಕೆಲ ಕೆಲವು ಶಿಲ್ಪಗಳನ್ನು ಕೆಲ ಕೆಲವರು ಮೆಚ್ಚಿ ಹೊಗಳುತ್ತಾರೆ. ಶಿಲ್ಪ ರಚಿಸಿದವರೂ ಬಿಕ್ಷೆ ಪಡೆದು ಹೊಗಳಿಸಿಕೊಂಡು ಪ್ರಸನ್ನರಾಗುತ್ತಾರೆ. ಹೀಗೆ ಈ ಪರಂಪರೆ ಇಂದಿಗೂ ಮುಂದುವರೆದುಕೊಂಡು ಬಂದಿದೆ.

ಈ ರೀತಿಯಾಗಿ ಮಣ್ಣಿನ ಮಾಧ್ಯಮದಲ್ಲಿ ಹತ್ತು ಹಲವಾರು ಬಗೆಯ ಶಿಲ್ಪಗಳನ್ನು ಜನಪದರು ರಚಿಸಿ ಆಚರಿಸುವುದರ ಮೂಲಕ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಮುಂದುವರೆಸಿಕೊಂಡು ಬಂದವರಾಗಿದ್ದಾರೆ. ಅಮವಾಸ್ಯೆಗಿಂತ ಹುಣ್ಣಿಮೆಗೆ ಗಂಡು ದೇವರುಗಳಿಗಿಂತ ಹೆಣ್ಣು ದೇವರುಗಳಿಗೆ ನಮ್ಮ ಜನಪದರು ಒಲಿದದ್ದು ಕಂಡುಬರುತ್ತದೆ. ಗೌರಮ್ಮ, ಸೀಗಮ್ಮ, ಗುಳ್ಳವ್ವ ಇಂತಹ ಸ್ತ್ರೀ ದೇವತಾ ಶಿಲ್ಪಗಳು ಜನಪದರ ಬದುಕಿನಲ್ಲಿ ಮಹತ್ವದ ಪಾತ್ರ ವಹಿಸಿವೆ. ವರ್ಷಕ್ಕೊಮ್ಮೆ ಹುಟ್ಟಿಕೊಳ್ಳುವ ಈ ಶಿಲ್ಪಗಳು ಜಾತಿ, ಮತ, ಪಂಥಗಳನ್ನು ಮರೆಸಿ ಎಲ್ಲರನ್ನು ಒಗ್ಗೂಡಿಸಿ ಸಹಬಾಳ್ವೆ ನಡೆಸುವಂತೆ ಮಾಡಿವೆ. ಗಣೇಶ, ಜೋಕುಮಾರ, ಮಣ್ಣೆತ್ತು ಇಂತಹ ಪುರುಷ ಹಾಗೂ ಪ್ರಾಣಿ ದೇವತಾ ಶಿಲ್ಪಗಳು ನಮ್ಮ ಜನಪದರಲ್ಲಿ ವಿಶಿಷ್ಟ ರೀತಿಯಲ್ಲಿ ಇಂದಿಗೂ ಉಳಿದುಕೊಂಡು ಬಂದಿವೆ. ಈ ಎಲ್ಲ ಶಿಲ್ಪಗಳು ಶಾಶ್ವತವಾಗಿ ಒಂದು ಕಡೆ ಪ್ರತಿಷ್ಠಾಪಿತಗೊಳ್ಳದಿದ್ದರೂ ವರ್ಷ ವರ್ಷವೂ ಜನಪದರನ್ನು ನಿರೀಕ್ಷಿಸಿ, ಸ್ವಾಗತಿಸುವಂತೆ ಮಾಡುವ ಶಿಲ್ಪಗಳಾಗಿ ಅವರ ಬದುಕಿನೊಂದಿಗೆ ಬೆರೆತು ಹೋಗಿವೆ.



ಅಧ್ಯಾಯ : ನಾಲ್ಕು

# ಮರದ ಮಾಧ್ಯಮದ ಜನಪದ ಶಿಲ್ಪಕಲೆ

ಮರ ಇಲ್ಲವೆ ಕಟ್ಟಿಗೆಯನ್ನು ದಿಮ್ಮಿ, ದಾರು ಎಂದೂ ಕರೆಯಲಾಗುತ್ತದೆ. ಕಟ್ಟಿಗೆ ಅಥವಾ ಮರ ಮಾನವನ ಬದುಕಿನ ಒಂದು ಭಾಗವೇ ಆಗಿದೆ. ಅದು ಹಲವು ವಿಧಗಳಲ್ಲಿ, ಹಲವು ಉದ್ದೇಶಗಳಿಗಾಗಿ ಸಾವಿರಾರು ವರ್ಷಗಳಿಂದ ಬಳಸಲ್ಪಡುತ್ತಿದೆ. ಜನನದಿಂದ ಮೊದಲ್ಗೊಂಡು ಮರಣದವರೆಗೆ ಅದು ಮನುಷ್ಯನಿಗೆ ಪ್ರಯೋಜನಕಾರಿ. ತೊಟ್ಟಿಲು ಕಟ್ಟಿಗೆಯದು. ಶವದ ಪೆಟ್ಟಿಗೆಯೂ ಕೂಡ ಕಟ್ಟಿಗೆಯದೇ. ಈ ಕಟ್ಟಿಗೆ ಅಥವಾ ಮರದ ಬಳಕೆ ಬಹು ಪ್ರಾಚೀನವಾದುದು. ಮರದ ತೊಗಟೆ ಮನುಷ್ಯನ ಮೊದಲ ಉಡುಪಾಗಿತ್ತು. ಭಾರತದಲ್ಲಿ ಕಟ್ಟಿಗೆಯ ಕಲಾತ್ಮಕ ಬಳಕೆಯು ಸಿಂಧೂ ಸಂಸ್ಕೃತಿಯಷ್ಟು ಪ್ರಾಚೀನ. ಆಗ ಮರದ ಕಂಬ, ತೊಲೆಗಳಿಂದ ಕಟ್ಟಡ ರಚನೆಯಾಗುತ್ತಿತ್ತು. ಋಗ್ವೇದ, ಬೃಹತ್ ಸಂಹಿತೆ, ವಿಷ್ಣು ಧರ್ಮೋತ್ತರಗಳಲ್ಲಿ ಬಡಗಿ ಕಲೆಯ ಪ್ರಸ್ತಾಪವಿದೆ. ಮೌರ್ಯರ ಅರಮನೆಗಳು ಮರದಿಂದಲೇ ನಿರ್ಮಿತವಾದವುಗಳಾಗಿವೆ[೧] ಎಂದು ಹೇಳುತ್ತಾರೆ.

ಮರದ ಬಳಕೆಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಅತ್ಯಂತ ಪ್ರಾಚೀನ ಕುರುಹು ಬಳ್ಳಾರಿ ಜಿಲ್ಲೆಯಲ್ಲಿ ಲಭ್ಯವಿದೆ. ಜಿಲ್ಲೆಯ ತೆಕ್ಕಲುಕೋಟೆ ಮತ್ತು ಸಂಗನಕಲ್ಲುಗಳಲ್ಲಿ ನಡೆದ ಪುರಾತತ್ವ ಉತ್ಖನನದಿಂದ ನವ ಶಿಲಾಯುಗದ ಕಾಲದಲ್ಲಿ ವೃತ್ತಾಕಾರದ ವಾಸದ ಮನೆಗಳನ್ನು ಬಿದಿರಿನ ಕಂಬಗಳನ್ನು ಬಳಸಿ ನಿರ್ಮಿಸುತ್ತಿದ್ದ ಸಂಗತಿ ಬೆಳಕಿಗೆ ಬಂದಿದೆ. (ಕಾಲ ಕ್ರಿ.ಪೂ. ಸು೧೫೦೦) ಇದು ಮನುಷ್ಯ ತನ್ನ ನಿರ್ಧಿಷ್ಟ ಉದ್ದೇಶವೊಂದಕ್ಕೆ ಮರವನ್ನು ಬಳಸಿಕೊಂಡ ಮೊದಲ ಉದಾಹರಣೆ[೨]ಯನ್ನಬಹುದು. ಮೆಗಾಸ್ತನೀಸ್ ತನ್ನ ಬರೆಹದಲ್ಲಿ ರಾಜಧಾನಿ ಪಾಲಿಭೋಥ್ರದ (ಪಾಟಲೀಪುತ್ರ) ಗೋಡೆಗಳನ್ನು ಮರದಿಂದ ನಿರ್ಮಿಸಲಾಗಿತ್ತೆಂದು ತಿಳಿಸುತ್ತಾನೆ. ಪಾಟಲೀಪುತ್ರ ಇಂದಿನ ಬಿಹಾರದ ರಾಜಧಾನಿ ಪಾಟ್ನಾ ಆಗಿದ್ದು, ಇಲ್ಲಿ ನಡೆದ ಉತ್ಖನನಗಳು ಮೆಗಾಸ್ತನೀಸನ ಹೇಳಿಕೆಯನ್ನು ಸಮರ್ಥಿಸಿವೆ. ಉತ್ಖನನದ ಸಂದರ್ಭದಲ್ಲಿ ಅರಮನೆಗೆ ಸಂಬಂಧಿಸಿದ ಮರದ ಅವಶೇಷಗಳು ದೊರೆತಿವೆ. ಒಟ್ಟಾರೆ ಭಾರತದಲ್ಲಿ ಕ್ರಿ.ಪೂ. ೪೦೦ರಲ್ಲೇ[೩] ಕಟ್ಟಡಗಳ ರಚನೆಗೆ ಮರವನ್ನು ಬಳಸುತ್ತಿದ್ದರೆಂದು ತಿಳಿದು ಬರುತ್ತದೆ.

---

೧. ಪ್ರೊ. ಎಸ್.ಕೆ. ರಾಮಚಂದ್ರರಾವ್ : ಕರ್ನಾಟಕದ ಕಲೆಗಳು, ಮೊದಲ ಸಂಪುಟ, ಪುಟ - ೮೦

೨. ಡಾ. ಸಿ. ಮಹದೇವ : ಬಳ್ಳಾರಿ ಜಿಲ್ಲೆಯ, ಮರದ ವಾಸ್ತು, ಪುಟ-೫

೩. ಡಾ. ಸಿ. ಮಹದೇವ : ಬಳ್ಳಾರಿ ಜಿಲ್ಲೆಯ, ಮರದ ವಾಸ್ತು, ಪುಟ- ೬

ಶಿಲ್ಪಕ್ಕೆ ಮರವನ್ನು ಬಳಸುವುದು ತೀರ ಹಳೆಯ ಪದ್ಧತಿಯೇ ಆಗಿದೆ. ದೇವತೆಗಳ ಪ್ರತೀಕವಾಗಿ ಪ್ರತಿಮೆಗಳನ್ನು ಕಂಡರಿಸುವದು ಮಾನವನ ಸಂಸ್ಕೃತಿ ಮೊದಲಾದಾಗಲೇ ಕಾಣಿಸಿಕೊಳ್ಳುತ್ತದೆ.[೪] ಆದರೆ ಅಷ್ಟು ಹಳೆಯ ಮರದ ಕಲಾಕೃತಿಗಳು ನಮ್ಮ ಕಾಲದವರೆಗೆ ಉಳಿದು ಬಂದಿಲ್ಲ. ಮರ ಬಹುಕಾಲ ಉಳಿಯಲಾರದು. ಗಾಳಿ, ಮಳೆಗೆ ಕೆಡುತ್ತದೆ. ಹುಳು-ಹುಪ್ಪಟೆ ಹಿಡಿದು ಹಾಳಾಗುತ್ತದೆ, ಆದರೂ ಪ್ರಾಚೀನ ಸಂಸ್ಕೃತಿಯ ಮಾನವ ಕಲ್ಲಿನಲ್ಲಿ, ಮೂಳೆಯಲ್ಲಿ ಕೆತ್ತಲು ಮೊದಲು ಮಾಡುವ ಪೂರ್ವದಲ್ಲಿ ಮರದಲ್ಲಿಕೆತ್ತನೆ ಕೆಲಸ ಆರಂಭವಾದುದು ಸಹಜವೇ. ಮರದ ಕೆತ್ತನೆಗೆ ಬೇಕಾಗುವ ಉಳಿ ಮುಂತಾದವುಗಳನ್ನು ಅವನು ಕಲ್ಲಿನಲ್ಲೇ ಮಾಡಿಕೊಂಡ ನಿದರ್ಶನಗಳಿವೆ. ಶಿಲ್ಪಕೃತಿಗಳ ವಿವಿಧ ಅವಯವಗಳನ್ನು ಬೇರೆ ಬೇರೆಯಾಗಿ ಮಾಡಿಕೊಂಡು ಅವನ್ನೆಲ್ಲ ಒಟ್ಟಿಗೆ ಸೇರಿಸಿ ಶಿಲ್ಪಕೃತಿಯನ್ನು ಸಿದ್ಧಪಡಿಸುವ ಸೌಕರ್ಯ ಮರದಲ್ಲೇ ಹೆಚ್ಚು. ಹೀಗಾಗಿ ಮರದ ಮಾಧ್ಯಮ ಮಹತ್ವವನ್ನು ಪಡೆದುಕೊಂಡು ಬಂದಿದೆ.

ತುಳು ನಾಡಿನಲ್ಲಿ ಅತ್ಯಂತ ಪ್ರಾಚೀನ ಗೊಂಬೆಗಳು ಮರದವೇ ಹೆಚ್ಚಾಗಿವೆ. ಕೇರಳದಲ್ಲಿನ ದೇವತಾ ಮೂರ್ತಿಗಳೂ ಮರದವೇ ಆಗಿವೆ[೫]ಯೆಂಬುದನ್ನು ಇಲ್ಲಿ ಗಮನಿಸಬೇಕು. ಹಂಪೆಯಲ್ಲಿ ನಡೆದ ಉತ್ಖನನಗಳಿಂದ ಕಟ್ಟಡಗಳ ನಿರ್ಮಾಣದಲ್ಲಿ ಹೆಚ್ಚಾಗಿ ಮರವನ್ನು ಬಳಸಿರುವದು[೬] ತಿಳಿದು ಬರುತ್ತದೆ.

ಉತ್ತರ ಕರ್ನಾಟಕದಲ್ಲಿ ಹೇಳಿಕೊಳ್ಳುವಂತಹ ಯಾವುದೇ ದಟ್ಟವಾದ ಅರಣ್ಯವಿಲ್ಲ. ಆದರೂ ದೇವಾಲಯ, ಗೃಹವಾಸ್ತು ಹಾಗೂ ಕೆಲವು ಗ್ರಾಮ ದೇವತಾ ಶಿಲ್ಪಗಳನ್ನು ರಚಿಸಲು ಹೆಚ್ಚಾಗಿ ಮರವನ್ನೇ ಬಳಸಿದ್ದು ಕಾಣುತ್ತೇವೆ. ಸಾಮಾನ್ಯವಾಗಿ ಇಲ್ಲಿ ಸಿಗುವ ಬೇವು, ಗೊಬ್ಬಳಿ, ಬನ್ನಿ, ಬಾಗೆ, ಹುಣಸೆ, ಕಗ್ಗಲಿ, ಬಿಳಿಜಾಲಿ, ಕರಿಜಾಲಿ, ಕತ್ತಾಳೆ, ಚಳ್ಳೆ, ಕಳ್ಳಿ, ಈಚಲು, ಚಂಡರಿಕೆ, ಮಾವು, ಹೊಂಗೆ, ಮಳಿಗೆ, ದಿಂಡಿಗ, ನಂದಿ, ಚಿಬ್ಬಲಿ, ಹುರುಗಲ, ಸಾಗುವಾನಿ, ಹಲಸು ಮುಂತಾದ ಮರಗಳಲ್ಲಿ ಗ್ರಾಮದೇವತೆಗಳ ಪ್ರತಿಮೆಗಳು, ಮತ್ತು ವಾಹನಗಳು, ರಥಗಳು ಅಲ್ಲದೆ ಗೃಹವಾಸ್ತುಗಳು ರಚನೆಗೊಂಡಿವೆ. ಅದರಲ್ಲೂ ಬೇವಿನ ಮರವಂತೂ ಈ ಪ್ರದೇಶದ ಜನರಿಗೆ ವರದಾನವೇ ಆಗಿದೆ. ಬೇವಿನ ಮರ ಇಲ್ಲಿ ಸಮೃದ್ಧವಾಗಿ ಬೆಳೆಯುತ್ತದೆ. ಸಾಗುವಾನಿ, ಬೀಟೆ ಮರಗಳು ಕೆತ್ತನೆಗೆ ಹೆಚ್ಚು ಸೂಕ್ತವಾಗಿದ್ದರೂ ಅವೆಲ್ಲ ಇಲ್ಲಿ ಅಪರೂಪ, ಸಾಮಾನ್ಯರ ಕೈಗೆ ಎಟುಕದಂಥವು. ಹೀಗಾಗಿ ರೈತರು ತಮ್ಮ ಹೊಲಗಳಲ್ಲೇ ಬೆಳೆಯುವ ಬೇವು, ಮಾವು ಮುಂತಾದವುಗಳನ್ನೇ ಮನೆ, ದೇವಾಲಯ, ದೇವತಾ ಶಿಲ್ಪಗಳು ಇತ್ಯಾದಿಗಳ ರಚನೆಗೆ ಬಳಸಿದ್ದಾರೆ. ಬೇವಿನ ಮರವನ್ನು ಭಾರತದ ಮೂಲವಾಸಿ ಎಂದು ಕರೆಯಲಾಗಿದೆ.[೭] ಎರೆಭೂಮಿಯೇ ಹೆಚ್ಚಾಗಿರುವ ಉತ್ತರ ಕರ್ನಾಟಕದಲ್ಲಿ, ಎರೆ ಭೂಮಿಯಲ್ಲೇ ಚೆನ್ನಾಗಿ ಬೆಳೆಯುವ ಬೇವು ಸಮೃದ್ಧವಾಗಿದೆ. ಇದರ ನೆರಳು ಎಲ್ಲ

---

೪. ಪ್ರೊ. ಎಸ್.ಕೆ. ರಾಮಚಂದ್ರರಾವ್ : ಕರ್ನಾಟಕದ ಕಲೆಗಳು, ಮೊದಲ ಸಂಪುಟ, ಪುಟ - ೮೦

೫. ..... ಅದೇ .....

೬. ಡಾ. ಸಿ. ಮಹದೇವ : ಬಳ್ಳಾರಿ ಜಿಲ್ಲೆಯ, ಮರದ ವಾಸ್ತು, ಪುಟ-೭

೭. ಡಾ. ಸಿ. ಮಹದೇವ : ಬಳ್ಳಾರಿ ಜಿಲ್ಲೆಯ, ಮರದ ವಾಸ್ತು, ಪುಟ-೧೦

[illegible]

[illegible]

[illegible]

[illegible]

ಕಾಲಕ್ಕೂ ಯೋಗ್ಯ. ಬೇವು ಔಷಧೀಯ ಗುಣ ಉಳ್ಳದ್ದು. ಬೇವಿನ ಮರದ ಮನೆಯಲ್ಲಿ ವಾಸ ಮಾಡಿದರೆ ರೋಗ ಬರುವುದಿಲ್ಲವೆಂಬುದು ಜನಪದರ ನಂಬಿಕೆ. ಬೇವಿನ ಮರವನ್ನು ಹುಳ ತಿನ್ನುವದಿಲ್ಲ.

ಬೇವಿನ ಮರದಿಂದ ಹಲಗೆ, ಕಂಬ, ಬಾಗಿಲು-ದ್ವಾರ, ತೊಲೆ, ಜಂತಿಗಳನ್ನು ಮಾಡಲಾಗುತ್ತದೆ. ಅಲ್ಲದೆ, ರಥಶಿಲ್ಪ, ಪಲ್ಲಕ್ಕಿ, ಮಂಟಪ ಮುಂತಾದವುಗಳನ್ನು ಸಹ ನಿರ್ಮಿಸಲಾಗುತ್ತದೆ. ಅಲ್ಲದೆ ಬೇವಿನ ಮರವನ್ನು ಆಟಿಕೆ ಸಾಮಾನುಗಳನ್ನು ಮಾಡಲು, ಎಣ್ಣೆಗಾಣ ನಿರ್ಮಿಸಲು, ವ್ಯವಸಾಯೋಪಕರಣಗಳು ಮಾತ್ರವಲ್ಲದೆ ಗ್ರಾಮದೇವತಾ ಶಿಲ್ಪಗಳನ್ನು ಮಾಡಲು ಸಹ ಉಪಯೋಗಿಸುತ್ತಾ ಬಂದಿದ್ದಾರೆ. ತಾಳಿಕೆ ಮತ್ತು ಬಾಳಿಕೆಯಲ್ಲಿ ಬೆಲೆ ಬಾಳುವ ಮರಗಳಷ್ಟೇ ಉತ್ಕೃಷ್ಟ ಗುಣವನ್ನು ಬೇವು ಹೊಂದಿದೆ. ಹೀಗಾಗಿ ಬಯಲು ಸೀಮೆಯ ಜನರಿಗೆ ಬೇವು ಒಂದು ವರದಾನವಾಗಿದೆ.

ಬ್ಯಾಸಗಿ ದಿವಸಕ್ಕ ಬೇವಿನ ಮರ ತಂಪು
ಭೀಮಾರತಿಯೆಂಬ ಹೊಳೆ ತಂಪು । ಹಡೆದವ್ವ
ನೀ ತಂಪು ನನ್ನ ತವರೀಗೆ ॥

ನಮ್ಮ ಜನಪದರು ಹೇಳುವ ಹಾಡಿನಲ್ಲೂ ಬೇವಿನ ಮರದ ಮಹತ್ವ ವ್ಯಕ್ತವಾಗುತ್ತದೆ.

ಹೀಗೆ ಅತ್ಯಂತ ಮಹತ್ವ ಪಡೆದ ಮರದ ಮಾಧ್ಯಮದಲ್ಲಿ ನಮ್ಮ ಜನಪದರು ರಚಿಸುವ ನೂರಾರು ಶಿಲ್ಪಗಳು ಮುಖ್ಯವಾಗಿ ಸೌಂದರ್ಯ, ಧರ್ಮ, ವೃತ್ತಿಮೂಲವಾಗಿ ಬೆಳೆದು ಬಂದಿವೆ. ಅವುಗಳನ್ನು ಅಧ್ಯಯನದ ದೃಷ್ಟಿಯಿಂದ I. ಮರದ ಮಾಧ್ಯಮದ ಸೌಂದರ್ಯ ಮೂಲ ಜನಪದ ಶಿಲ್ಪಕಲೆ II. ಮರದ ಮಾಧ್ಯಮದ ಧರ್ಮಮೂಲ ಜನಪದ ಶಿಲ್ಪಕಲೆ III. ಮರದ ಮಾಧ್ಯಮದ ವೃತ್ತಿ ಮೂಲ ಜನಪದ ಶಿಲ್ಪಕಲೆ ಎಂದು ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

## I. ಮರದ ಮಾಧ್ಯಮದ ಸೌಂದರ್ಯಮೂಲ ಜನಪದ ಶಿಲ್ಪಕಲೆ

ಮನುಷ್ಯ ತನ್ನ ಬದುಕನ್ನು ಸುಂದರವಾಗಿಸಿಕೊಳ್ಳಲು ಅನೇಕ ಬಗೆಯ ಕಲೆಗಳನ್ನು ಸೃಷ್ಟಿಸಿಕೊಂಡು ಬಂದಿದ್ದಾನೆ. ತಾನು ದಿನ ನಿತ್ಯ ಉಪಯೋಗಿಸುವ ಅನೇಕ ಬಗೆಯ ವಸ್ತುಗಳಲ್ಲಿ ಕಲೆಯನ್ನು ತುಂಬಿ ಸುಂದರಗೊಳಿಸಿದ್ದಾನೆ. ಕೆಲವು ವಸ್ತುಗಳನ್ನು ಚಿತ್ರಗಳಿಂದ ಅಲಂಕರಿಸಿದರೆ, ಇನ್ನೂ ಕೆಲವು ವಸ್ತುಗಳನ್ನು ಶಿಲ್ಪಗಳ ಕೆತ್ತನೆಯಿಂದ ಸಾಲಂಕೃತಗೊಳಿಸಿದ್ದಾನೆ. ಸೌಂದರ್ಯ ಪಜ್ಞೆಯನ್ನು ಮೆರೆದಿದ್ದಾನೆ. ಸೌಂದರ್ಯ ಪ್ರಜ್ಞೆಯನ್ನೇ ಮುಖ್ಯವಾಗಿ ಕಂಡರೂ ಅದನ್ನು ಎರಡು ರೀತಿಯಲ್ಲಿ ವಿಂಗಡಿಸಿ ನೋಡಬಹುದಾಗಿದೆ.

೧. ಮರದ ಮಾಧ್ಯಮದ ಪ್ರಯೋಜನ ಮೂಲ ಜನಪದ ಶಿಲ್ಪಕಲೆ.

೨. ಮರದ ಮಾಧ್ಯಮದ ಮನರಂಜನ ಮೂಲ ಜನಪದ ಶಿಲ್ಪಕಲೆ.

[illegible]


[illegible]

[illegible]

[illegible]

[illegible]

[illegible]


ಮರದ ಮಾಧ್ಯಮದ ಜನಪದ ಶಿಲ್ಪಕಲೆ
I. ಮರದ ಮಾಧ್ಯಮದ
ಸೌಂದರ್ಯ ಮೂಲ ಶಿಲ್ಪಕಲೆ
II. ಮರದ ಮಾಧ್ಯಮದ
ಧರ್ಮ ಮೂಲ ಜನಪದ ಶಿಲ್ಪಕಲೆ
III. ಮರದ ಮಾಧ್ಯಮದ
ವೃತ್ತಿ ಮೂಲದ ಜನಪದ ಶಿಲ್ಪಕಲೆ
ದೇವತಾ ಶಿಲ್ಪಗಳು
ದೇವರ ವಾಹನ ಶಿಲ್ಪಗಳು
ಪೂರ್ಣ ಪ್ರಮಾಣದ ಶಿಲ್ಪಗಳು
ಶಿರಭಾವ ಶಿಲ್ಪಗಳು
ಪ್ರಾಣಿ ಶಿಲ್ಪಗಳು
ಪಕ್ಷಿ ಶಿಲ್ಪಗಳು
ಮರದ ಮಾಧ್ಯಮದ ಪ್ರಯೋಜನ ಮೂಲ ಜನಪದ ಶಿಲ್ಪಕಲೆ
ಮರದ ಮಾಧ್ಯಮದ ಮನರಂಜನ ಮೂಲ ಜನಪದ ಶಿಲ್ಪಕಲೆ
ಹೊತ್ತು ತಿರುಗುವವರಲ್ಲಿನ ದೇವತಾ ಶಿಲ್ಪಗಳು
ಮುಖವಾಡ ಶಿಲ್ಪಗಳು
ಕಲೆಯನ್ನೇ ವೃತ್ತಿಯಾಗಿಸಿಕೊಂಡವರಲ್ಲಿನ ಶಿಲ್ಪಗಳು
ಗೃಹ ಮತ್ತು ದೇವಾಲಯ ಉಪಕರಣಗಳಲ್ಲಿನ ಶಿಲ್ಪಗಳು
ಗೃಹ ಮತ್ತು ದೇವಾಲಯ ವಾಸ್ತುಗಳಲ್ಲಿನ ಶಿಲ್ಪಗಳು
ಕೃಷಿ ಉಪಕರಣಗಳಲ್ಲಿನ ಶಿಲ್ಪಗಳು
ಕೀಲು ಕುದುರೆ ಶಿಲ್ಪಗಳು
ಗೊಂಬೆಯಾಟದಲ್ಲಿನ ಶಿಲ್ಪಗಳು
ಮಕ್ಕಳಾಟಿಕೆಯಲ್ಲಿನ ಶಿಲ್ಪಗಳು

ಹೊಟ್ಟೆ, ಬಟ್ಟೆ, ವಸತಿ ಈ ಮೂರು ಮನುಷ್ಯನ ಬದುಕಿನ ಮೂಲಭೂತ ಅಗತ್ಯಗಳು. ಈ ಅಗತ್ಯಗಳ ಪೂರೈಕೆಗಾಗಿ ಮನುಷ್ಯನ ನಿರಂತರ ಹೋರಾಟ ನಡೆದೇ ಇರುತ್ತದೆ. ಅದೇ ಜೀವನವೆಂದು ಹೇಳಬಹುದು. ಇಂಥ ಜೀವನ ಅಪ್ಯಾಯಮಾನವೆನಿಸುವಂತೆ ಮಾರ್ಪಡಿಸಿಕೊಳ್ಳಲು ಅನೇಕ ಕಲಾತ್ಮಕ ಅಂಶಗಳನ್ನು ಮನುಷ್ಯ ತನ್ನ ಸುತ್ತಮುತ್ತಲ ವಸ್ತುಗಳಲ್ಲಿ ಮತ್ತು ತಾನು ವಾಸವಾಗಿರುವ ಮನೆಗಳು, ಅಲ್ಲದೆ ತಾನು ಆರಾಧಿಸುವ ದೇವಾಲಯ ವಾಸ್ತುಗಳಲ್ಲಿ ಕಲೆಯನ್ನು ಅಳವಡಿಸಿಕೊಂಡು ಬಂದಿರುವನು. ವಿಶೇಷವಾಗಿ ದಿನ ನಿತ್ಯ ತಾನು ಬಳಸುವ ವಸ್ತುಗಳಲ್ಲಿ ಕಲೆಯನ್ನು ತುಂಬಿ, ಸೌಂದರ್ಯವನ್ನು ಆಸ್ವಾದನೆ ಮಾಡುತ್ತಾ ಬಂದಿದ್ದಾನೆ. ಕೆಲವು ವಸ್ತು ಮತ್ತು ವಾಸ್ತುಗಳನ್ನು ಚಿತ್ರವಿನ್ಯಾಸಗಳಿಂದ ಅಲಂಕೃತಗೊಳಿಸಿದರೆ, ಇನ್ನೂ ಕೆಲ ವಸ್ತುಗಳನ್ನು ಪ್ರಾಯೋಜನಿಕ ಆಶಯವೇ ಮುಖ್ಯವಾಗಿದ್ದರೂ, ಅವುಗಳಲ್ಲಿ ಶಿಲ್ಪ-ಉಬ್ಬುಶಿಲ್ಪ ವಿನ್ಯಾಸಗಳನ್ನು ರಚಿಸಿ ಶೃಂಗಾರಮಯವಾಗಿ ಕಾಣುವಂತೆ ಮಾಡಿಕೊಂಡಿದ್ದಾನೆ.

ಮರದ ಮಾಧ್ಯಮದ ಪ್ರಯೋಜನ ಮೂಲದ ಜನಪದ ಶಿಲ್ಪಗಳಲ್ಲಿರುವ ವಸ್ತುಗಳಲ್ಲಿ

೧.೧ ಗೃಹ ಮತ್ತು ದೇವಾಲಯಗಳ ಉಪಕರಣಗಳಲ್ಲಿನ ಶಿಲ್ಪಗಳು.

೧.೨ ಗೃಹ ಮತ್ತು ದೇವಾಲಯ ವಾಸ್ತುಗಳಲ್ಲಿನ ಶಿಲ್ಪಗಳು.

೧.೩ ಕೃಷಿ ಉಪಕರಣಗಳಲ್ಲಿನ ಶಿಲ್ಪಗಳು ಎಂದು ವಿಂಗಡಿಸಿಕೊಂಡು ನೋಡಬಹುದಾಗಿದೆ.

## ೧.೧ ಗೃಹ ಮತ್ತು ದೇವಾಲಯ ಉಪಕರಣಗಳಲ್ಲಿನ ಶಿಲ್ಪಗಳು.

ನಮ್ಮ ಜನಪದರು ತಾವು ದಿನ ನಿತ್ಯ ಮನೆಯಲ್ಲಿ ಮತ್ತು ತಮ್ಮ ಆರಾಧ್ಯ ದೈವಗಳಿರುವ ದೇವಸ್ಥಾನಗಳಲ್ಲಿ ವಿವಿಧ ಬಗೆಯ ಉಪಕರಣಗಳನ್ನು ಉಪಯೋಗಿಸುತ್ತಾರೆ. ಅವು ಲೋಹ, ಕಲ್ಲು ಮತ್ತು ಮರದ ಮಾಧ್ಯಮದವುಗಳಾಗಿರುತ್ತವೆ. ಇಂಥ ಕೆಲವು ಉಪಕರಣಗಳಲ್ಲಿ ಅನೇಕ ಬಗೆಯ ಶಿಲ್ಪವಿನ್ಯಾಸಗಳನ್ನು ರಚಿಸಿರುತ್ತಾರೆ. ಅಂಥವುಗಳಲ್ಲಿ ಮರದ ಮಾಧ್ಯಮದ ಕೆಲವು ಉಪಕರಣಗಳನ್ನು ಇಲ್ಲಿ ನೋಡಬಹುದಾಗಿದೆ.

ಸಾಮಾನ್ಯವಾಗಿ ಮನೆ ಮತ್ತು ದೇವಾಲಯಗಳಲ್ಲಿ ಹಲವಾರು ಬಗೆಯ ಉಪಕರಣಗಳನ್ನು ವಿವಿಧೋದ್ದೇಶಗಳಿಗಾಗಿ ಉಪಯೋಗಿಸುತ್ತಾರೆ. ಆದರೆ ಶಿಲ್ಪಕಲಾ ವಿನ್ಯಾಸಗಳಿಂದ ಅಲಂಕೃತವಾಗಿ ಸುಂದರವಾಗಿ ಕಾಣುವ ಕೆಲವು ಮರದ ಮಾಧ್ಯಮದ ಉಪಕರಣಗಳಲ್ಲಿನ ಶಿಲ್ಪಗಳನ್ನು ಮಾದರಿಗಾಗಿ ಇಲ್ಲಿ ಅಧ್ಯಯನಕ್ಕೆ ಎತ್ತಿಕೊಳ್ಳಲಾಗಿದೆ. ಅವುಗಳೆಂದರೆ, ಅ. ವಿಭೂತಿ ಬುಟ್ಟಿಯಲ್ಲಿನ ಶಿಲ್ಪಗಳು, ಆ. ದೇವರ ಪಲ್ಲಕ್ಕಿಯಲ್ಲಿನ ಶಿಲ್ಪಗಳು, ಇ. ನಂದಿ ಧ್ವಜದ ಶಿಲ್ಪಗಳು - ಇತ್ಯಾದಿ.

[illegible]

## ಅ. ವಿಭೂತಿ ಬುಟ್ಟಿಯಲ್ಲಿನ ಶಿಲ್ಪಗಳು.

ವಿಭೂತಿ ಇರಿಸುವ ಕರಂಡಗಳನ್ನೇ ವಿಭೂತಿ ಬುಟ್ಟಿಗಳೆಂದು ಕರೆಯುತ್ತಾರೆ. ಈ ವಿಭೂತಿ ಬುಟ್ಟಿಗಳ ಆಕಾರವೇ ಒಂದು ಕಲಾತ್ಮಕ ರೂಪದ್ದಾಗಿದ್ದು, ಒಂದು ಪ್ರಾಣಿ, ಇಲ್ಲವೆ ಪಕ್ಷಿಯ ರೂಪಶಿಲ್ಪವಾಗಿರುತ್ತದೆ. ಕೆಲವೊಮ್ಮೆ ಈ ಬುಟ್ಟಿ ಅಥವಾ ಪೆಟ್ಟಿಗೆಗಳ ಬದಿ ಹಾಗೂ ಮೇಲೆ ದುಂಡು ಶಿಲ್ಪ ಹಾಗೂ ಉಬ್ಬುಶಿಲ್ಪಗಳ ಶಿಲ್ಪಗಳನ್ನು ಕೆತ್ತಲಾಗಿರುತ್ತದೆ. ಹೆಚ್ಚಾಗಿ ಶೈವ, ವೀರಶೈವ ಸಂಪ್ರದಾಯಗಳಲ್ಲಿ ಇಂಥ ಬುಟ್ಟಿಗಳನ್ನು ಕಾಣುತ್ತೇವೆ. ಇವುಗಳನ್ನು ಸಾಮಾನ್ಯವಾಗಿ ಕಡಿಮೆ ಎಂದರೆ ಮೂರು, ಹೆಚ್ಚೆಂದರೆ ನಾಲ್ಕು ಸಣ್ಣ ಚಕ್ರಗಳನ್ನು ಅಳವಡಿಸಿ ಚಲಿಸುವಂತೆ ಮಾಡಿರುತ್ತಾರೆ. ಕನಿಷ್ಠ ಅರ್ಧ ಅಡಿಯಿಂದ ಒಂದೂವರೆ ಅಡಿಯವರೆಗೂ ಇವು ಎತ್ತರವಾಗಿರುತ್ತವೆ. ಇಂಥ ಕೆಲವು ಚಲಿಸುವ ಪೆಟ್ಟಿಗೆಗಳು ಶೃಂಗಾರಕ್ಕೆ ಬಳಸುವ, ಸುಗಂಧ ದ್ರವ್ಯಗಳನ್ನು ಸಂಗ್ರಹಿಸಿಡುವ ಎತ್ತರವಾದ ಪೆಟ್ಟಿಗೆಗಳೂ ಕಂಡು ಬರುತ್ತವೆ. ಈ ಪೆಟ್ಟಿಗೆಗಳು ಸಾಮಾನ್ಯವಾಗಿ ಬಸವ, ಹಂಸ, ನವಿಲು, ರಥ, ಗಿಳಿ ಇಂಥ ವಿವಿಧ ರೂಪಾಕಾರದ ಶಿಲ್ಪಗಳಾಗಿರುತ್ತವೆ.

ಕೆಲವು ಮಾದರಿಗಳನ್ನು ನೋಡಬಹುದು.

**೧. ಗದ್ದುಗೆಯ ಮೇಲೆ ನಂದಿ ಇರುವ ವಿಭೂತಿ ಬುಟ್ಟಿ ಶಿಲ್ಪಗಳು :** ನವಲಗುಂದದ[೮] ಪಂಚಗೃಹ ಮಠದಲ್ಲಿ ಕಾಷ್ಠ ಮಾಧ್ಯಮದಲ್ಲಿರುವ ಒಂದು ವಿಭೂತಿ ಬುಟ್ಟಿ ಅತ್ಯಂತ ಕಲಾತ್ಮಕವಾಗಿದೆ. ಸುಮಾರು ೧ x ೧ ಅಡಿ ಉದ್ದಗಲದ ಚೌಕಾಕಾರದ ಹಲಗೆಯಿದ್ದು ಅದಕ್ಕೆ ನಾಲ್ಕು ಬದಿಗಳಲ್ಲಿ ನಾಲ್ಕು ಸಣ್ಣ ಚಕ್ರಗಳನ್ನು ಅಳವಡಿಸಲಾಗಿದ್ದು, ಚಲಿಸುವಂತೆ ಮಾಡಲಾಗಿದೆ. ಈ ಚೌಕಾಕಾರದ ಹಲಗೆಯ ಮದ್ಯ ಭಾಗದಲ್ಲಿ ಷಡ್‌ಭುಜಾಕೃತಿಯ ತಳಪಾಯದ ಮೇಲೆ ಎತ್ತರವಾದ ಗದ್ದುಗೆಯಂತೆ ಪಾಣೀ ಪೀಠದ ಆಕಾರದಲ್ಲಿ ಬುಟ್ಟಿಯನ್ನು ನಿರ್ಮಿಸಲಾಗಿದೆ. ಈ ಗದ್ದುಗೆಯ ಮೇಲೆ ಕುಳಿತ ಭಂಗಿಯ ನಂದಿಯ ವಿಗ್ರಹವನ್ನು ಸುಂದರವಾಗಿ ಕೆತ್ತಲಾಗಿದೆ. ಈ ನಂದಿ ಅಥವಾ ಬಸವಣ್ಣ ಶಿಲ್ಪದ ಎದುರಿಗೆ ಲಿಂಗದ ಶಿಲ್ಪವನ್ನು ರಚಿಸಲಾಗಿದೆ. ಈ ಒಟ್ಟು ಶಿಲ್ಪ ಒಂದೂವರೆ ಅಡಿ ಎತ್ತರವಾಗಿದೆ. ಒಂದು ವಿಶೇಷವೆಂದರೆ, ಗದ್ದುಗೆ ಮತ್ತು ಬಸವಣ್ಣನ ಶಿಲ್ಪವನ್ನೊಳಗೊಂಡು ಈ ಬುಟ್ಟಿ ಅಥವಾ ಪೆಟ್ಟಿಗೆಯನ್ನು ಅಖಂಡ ಮರದ ತುಂಡಿನಲ್ಲೇ ಕೆತ್ತಲಾಗಿದೆ. ಲಿಂಗವನ್ನು ಪ್ರತ್ಯೇಕವಾಗಿ ಜಂತ್ರ ಹಿಡಿದು ರಚಿಸಿ ಅಳವಡಿಸಲಾಗಿದೆ. ಗದ್ದುಗೆಯ ಮುಂದೆ ದೂಪಾರತಿಯನ್ನು ಇಡಲಾಗಿದೆ. ಗದ್ದುಗೆ ಹಾಗೂ ತಳಪಾಯವಾದ ಚೌಕಾಕೃತಿಯ ಹಲಗೆಯ ಸುತ್ತಲೂ ನಕ್ಷೆಯನ್ನು ಕೆತ್ತಲಾಗಿದೆ. ಈ ವಿಭೂತಿ ಬುಟ್ಟಿ ಬೇವಿನ ಮರದ್ದಾಗಿದೆ. ಷಡ್‌ಭುಜಾಕೃತಿಯ ಗದ್ದುಗೆಯು ರಥಶಿಲ್ಪದ ಹಾಗೆ ವಿನ್ಯಾಸವನ್ನು ಹೊಂದಿದ್ದು ಆಕರ್ಷಕವಾಗಿ ಕಾಣುತ್ತದೆ.

**೨. ನವಿಲಿನಾಕಾರದ ವಿಭೂತಿ ಬುಟ್ಟಿ ಶಿಲ್ಪಗಳು :** ಗುಲಬರ್ಗಾದ ವಸ್ತುಸಂಗ್ರಹಾಲಯದಲ್ಲಿರುವ[೯] ಒಂದು ನವಿಲಿನಾಕಾರದಲ್ಲಿರುವ ಮರದ ಮಾಧ್ಯಮದ ಈ ಶಿಲ್ಪ

೮. ನವಲಗುಂದ : ಧಾರವಾಡ ಜಿಲ್ಲೆ
೯. ವಸ್ತು ಸಂಗ್ರಹಾಲಯ : ದಿ ಐಡಿಯಲ್ ಫೈನ್ ಆರ್ಟ್ಸ್ ಸಂಸ್ಥೆ, ಗುಲಬರ್ಗಾ

[illegible]

[illegible]

[illegible]

[illegible]



ವಿಭೂತಿ ಬುಟ್ಟಿಯ ಶಿಲ್ಪ ( ಗುಲಬರ್ಗಾ )



ವಿಭೂತಿ ಬುಟ್ಟಿಯ ಶಿಲ್ಪ (ಕೀರಣಗಿ)



ವಿಭೂತಿ ಬುಟ್ಟಿಯ ಶಿಲ್ಪ ( ಪಂಚಗೃಹ ಹಿರೇಮಠ, ನವಲಗುಂದ )



ವಿಭೂತಿ ಬುಟ್ಟಿಯ ಶಿಲ್ಪ ( ಪರಹತಾಬಾದ )



ಮರದ ಶಿಲ್ಪ ಕೆತ್ತನೆಯ ಸಲಕರಣೆಗಳು

ಸುಮಾರು ಒಂದೂವರೆ ಅಡಿ ಎತ್ತರವಾಗಿದ್ದು, ಒಂದು-ಒಂದೂವರೆ ಉದ್ದಗಲ ಹೊಂದಿದೆ. ನಾಲ್ಕು ಜಂತ್ರಹಿಡಿದ ಚಕ್ರಗಳನ್ನು ಅಳವಡಿಸಲಾದ ಆಯತಾಕಾರದ ಮರದ ಹಲಗೆಯ ಮೇಲೆ ನವಿಲಿನಾಕಾರದ ಶಿಲ್ಪವನ್ನು ಅಳವಡಿಸಲಾಗಿದೆ. ಈ ಶಿಲ್ಪವನ್ನು ಅಖಂಡ ಮರದ ತುಂಡಿನಲ್ಲಿಯೇ ಶಿಲ್ಪಿಸಿ, ನಂತರ ರುಂಡ ಭಾಗ, ಮುಂಡ ಭಾಗ, ಅವುಗಳ ಮದ್ಯ ಮುಚ್ಚಳದಂತೆ ಅಳವಡಿಸಿದ ಪಕ್ಷಿಯ ಮುಂಡದಲ್ಲಿ ತಗ್ಗು ತೋಡಿ ಬುಟ್ಟಿಯನ್ನು ನಿರ್ಮಿಸಲಾಗಿದೆ. ಮುಚ್ಚಲು, ತೆರೆಯಲು ಬರುವಂತೆ ಒಳಗಡೆಗೆ ಮಳೆಯನ್ನು ಅಳವಡಿಸಲಾಗಿದೆ. ಈ ಪಕ್ಷಿ ಶಿಲ್ಪದ ಮೈಮೇಲೆ ಸುಂದರ ಕುಸುರಿ ಕೆತ್ತನೆ ಮಾಡಲಾಗಿದೆ.

**೩. ನಾಲ್ಕು ನಂದಿಗಳಿರುವ ವಿಭೂತಿ ಬುಟ್ಟಿ ಶಿಲ್ಪಗಳು :** ಇದೇ ಸಂಗ್ರಹಾಲಯದಲ್ಲಿರುವ ಇನ್ನೊಂದು[೧೦] ವಿಭೂತಿ ಬುಟ್ಟಿಯು ಮರದ್ದಾಗಿದ್ದು, ಒಂದು ಮತ್ತು ಅರ್ಧ ಅಡಿ ಉದ್ದಗಲದ ಮರದ ಹಲಗೆಯಂತೆ ರಚಿಸಿ ಅದರ ಮೇಲೆ, ಪಾಣಿ ಪೀಠದಂತೆ ಗದ್ದುಗೆ ಮಾಡಿ, ಅದರ ಮೇಲೆ ನಂದಿಯ ಶಿಲ್ಪಗಳನ್ನು ಕೆತ್ತಲಾಗಿದೆ. ಅಲ್ಲದೆ ಗದ್ದುಗೆಗೆ ಹೊಂದಿ, ತಳಪಾಯದ ಮೇಲೆ ಗದ್ದುಗೆಯ ಎರಡೂ ಬದಿಗೆ ನಾಲ್ಕು ನಂದಿಗಳನ್ನು ಕೆತ್ತಲಾಗಿದೆ. ಈ ಶಿಲ್ಪವನ್ನು ಅಖಂಡ ಮರದ ತುಂಡಿನಲ್ಲಿಯೇ ರಚಿಸಿ, ನಂತರ ಗದ್ದುಗೆಯ ಎತ್ತರದ ಮೂರನೆಯ ಒಂದು ಭಾಗದಷ್ಟು ಮೇಲ್ಭಾಗದಲ್ಲಿ ಕತ್ತರಿಸಿ, ಗದ್ದುಗೆಯ ಒಳಗಡೆ ತಗ್ಗು ತೋಡಿ ಬುಟ್ಟಿಯನ್ನು ನಿರ್ಮಿಸಲಾಗಿದೆ. ಮೂರನೆಯ ಎರಡು ಭಾಗದ ಗದ್ದುಗೆ ಬುಟ್ಟಿಯಾದರೆ, ಇನ್ನೊಂದು ಭಾಗ ಅಂದರೆ, ಮೇಲೆ ಬಸವಣ್ಣ ಶಿಲ್ಪದ ಅಕ್ಕಪಕ್ಕದಲ್ಲಿ ನಾಲ್ಕು ಚಕ್ರಗಳನ್ನು ಅಳವಡಿಸಿ ಚಲಿಸುವಂತೆ ಮಾಡಲಾಗಿದೆ.

ಈ ಬಗೆಯ ವಿಭೂತಿ ಬುಟ್ಟಿಯ ಶಿಲ್ಪಗಳು ಉತ್ತರ ಕರ್ನಾಟಕದ ಪ್ರತಿಯೊಂದು ಹಳ್ಳಿ, ಪಟ್ಟಣಗಳಲ್ಲಿ, ಮನೆ, ಮಠಗಳಲ್ಲಿ ನೋಡಲು ಸಿಗುತ್ತವೆ. ಆದರೆ, ಇತ್ತೀಚೆಗೆ ಇಂಥ ಶಿಲ್ಪಗಳನ್ನು ಮಾಡಿಸುವದರಲ್ಲಿ ಅಭಿರುಚಿ ಕಡಿಮೆಯಾಗಿದೆ.

**೪. ರಥ ಶಿಲ್ಪದಾಕಾರದ ವಿಭೂತಿ ಬುಟ್ಟಿ ಶಿಲ್ಪಗಳು :** ರಥದ ಮಾದರಿಯಲ್ಲಿ ಅನೇಕ ವಿಭೂತಿ ಬುಟ್ಟಿ ಶಿಲ್ಪಗಳು ದೊರೆಯುತ್ತವೆ. ಈ ಶಿಲ್ಪಗಳ ಸುತ್ತಲೂ ಚಿಕ್ಕ ಚಿಕ್ಕ ಆಕಾರದ ನವಿಲು, ಹಂಸ, ಗಿಳಿ, ಜಿಂಕೆ ಮುಂತಾದವುಗಳ ಶಿಲ್ಪಗಳು ಕೆತ್ತಲ್ಪಟ್ಟು ಸಾಲಂಕೃತಗೊಂಡಿರುತ್ತವೆ.

### ಆ. ದೇವರ ಪಲ್ಲಕ್ಕಿಯಲ್ಲಿನ ಶಿಲ್ಪಗಳು

ಉತ್ತರ ಕರ್ನಾಟಕದ ದೇವಾಲಯಗಳಲ್ಲಿ ಕಂಡುಬರುವ ಮರದ ಮುಖ್ಯ ರಚನೆಗಳೆಂದರೆ, ಪಲ್ಲಕ್ಕಿಗಳು. ಇವುಗಳು ಸಾಮಾನ್ಯವಾಗಿ ಐದು ಅಡಿ ಉದ್ದ, ಎರಡೂವರೆ ಅಡಿ ಅಗಲವನ್ನು ಮತ್ತು ಒಂದು ಅಡಿ ಎತ್ತರವನ್ನು ಹೊಂದಿರುತ್ತವೆ. ಈ ಪಲ್ಲಕ್ಕಿಗೆ ಸಾಮಾನ್ಯವಾಗಿ ತಳಮೈಯನ್ನು ಹೊರತುಪಡಿಸಿ ನಾಲ್ಕು ಮೈಗಳಿರುತ್ತವೆ. ಈ ನಾಲ್ಕು ಮೈಗಳನ್ನು ಒಂದು ಅಡಿ ಎತ್ತರಕ್ಕೆ ಸುತ್ತಲೂ ಮರದ ಹಲಗೆಯಿಂದ ಹೆಚ್ಚು

---

೧೦. ವಸ್ತು ಸಂಗ್ರಹಾಲಯ : ದಿ ಐಡಿಯಲ್ ಫೈನ್ ಆರ್ಟ್ಸ್ ಸಂಸ್ಥೆ, ಗುಲಬರ್ಗಾ

ಬಾಗಿಲ್ಲದ **'S'** ಅಕ್ಷರದ ಆಕಾರದಲ್ಲಿ ಬಾಗಿಸಿ, ಹೊಂದಿಸಿ ಚೌಕಟ್ಟನ್ನು ನಿರ್ಮಿಸಲಾಗಿರುತ್ತದೆ. ಈ ಪಲ್ಲಕ್ಕಿಯು ಕಡ್ಡಾಯವಾಗಿ ಆಯತಾಕಾರದಲ್ಲಿರುತ್ತದೆ. ಅಂದರೆ ಪರಸ್ಪರ ಎರಡು ತಳ ಬದಿಗಳು ಹಾಗೂ ಪರಸ್ಪರ ಎರಡು ಮೇಲು ಬದಿಗಳು ಸಮನಾಗಿರುತ್ತವೆ. ಪಲ್ಲಕ್ಕಿಯ ಎರಡೂ ಕಿರು ಬದಿಗಳ ಕಡೆಯಿಂದ ಕೆಳಗಿನಿಂದ ಮೇಲಕ್ಕೆ ಕತ್ತರಿ ಆಕಾರದಲ್ಲಿ ರಚಿಸಲ್ಪಟ್ಟ ಪಟ್ಟಿಗಳ ನಡುವೆ ಕಮಾನಿನಾಕೃತಿಯ ಮರ ಅಥವಾ ಬೊಂಬನ್ನು ಬಿಗಿಯಾಗಿ ಹಗ್ಗದಿಂದ ಕಟ್ಟಲಾಗಿರುತ್ತದೆ. ಗೋಲಗೇರಿಯ[೧೧] ಶ್ರೀ ಗೊಲ್ಲಾಳೇಶ್ವರ ದೇವಸ್ಥಾನದಲ್ಲಿರುವ ಇಂಥದೊಂದು ಪಲ್ಲಕ್ಕಿ ಸುಂದರವಾಗಿದೆ. ಈ ಪಲ್ಲಕ್ಕಿಯ ನಾಲ್ಕೂ ಬದಿಗಳಲ್ಲಿ ಹಾಗೂ ದೇವರ ಶಿಲ್ಪ ಕೂಡಿಸುವ ಹಿಂಬದಿಯಲ್ಲಿ ಸುಂದರ ಕೆತ್ತನೆಯ ಉಬ್ಬುಶಿಲ್ಪಗಳಿವೆ. ಇಂಥದೇ ಪಲ್ಲಕ್ಕಿಯನ್ನು ಆದರೆ ಸಾಧಾರಣ ರಚನೆಯದನ್ನು ಖೈನೂರಿನ[೧೨] ಶ್ರೀ ಗೊಲ್ಲಾಳೇಶ್ವರ ದೇವಸ್ಥಾನ ಹಾಗೂ ಅಮೋಘ ಸಿದ್ದೇಶ್ವರ ದೇವಸ್ಥಾನಗಳಲ್ಲೂ ಕಾಣಬಹುದು. ಕೊಟ್ಟೂರಿನ [೧೩] ಬಸವೇಶ್ವರ ದೇವಾಲಯದಲ್ಲಿರುವ ಪಲ್ಲಕ್ಕಿಯೊಂದು ಸುಮಾರು ನೂರು ವರ್ಷಗಳಿಗೂ ಹಿಂದಿನದಾಗಿದ್ದು, ಕಲಾತ್ಮಕವಾಗಿದೆ.[೧೪] ಸಾಮಾನ್ಯವಾಗಿ ಗ್ರಾಮದೇವತೆಗಳು ತಮ್ಮದೇ ಆದ ಇಂಥ ಪಲ್ಲಕ್ಕಿಗಳನ್ನು ಹೊಂದಿರುತ್ತವೆ. ಹೀಗಾಗಿ ಎಲ್ಲ ದೇವಾಲಯಗಳಲ್ಲೂ ಪಲ್ಲಕ್ಕಿಯ ಬಳಕೆಯನ್ನು ಕಾಣಬಹುದು. ಈ ಪಲ್ಲಕ್ಕಿಗಳನ್ನು ದೇವರ ಉತ್ಸವ, ಜಾತ್ರೆಗಳ ಸಂದರ್ಭಗಳಲ್ಲಿ ದೇವತಾ ಶಿಲ್ಪಗಳನ್ನು ಈ ಪಲ್ಲಕ್ಕಿಗಳಲ್ಲಿ ಇಟ್ಟು ಹೆಗಲ ಮೇಲೆ ಹೊತ್ತು ಉತ್ಸವವನ್ನು ಆಚರಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ದೊರೆಯುವ ಕೆಲವು ಪಲ್ಲಕ್ಕಿಗಳ ದಂಡಿಗೆಯ ಮುಂಬಾಗದಲ್ಲಿ ಸಿಂಹ ಅಥವಾ ಉಗ್ರನರಸಿಂಹ ಮುಖವನ್ನು ಕೆತ್ತಲಾಗಿರುತ್ತದೆ. ಈ ಶಿಲ್ಪವನ್ನು ಕೀರ್ತಿಮುಖವೆಂದೂ ಹೇಳುತ್ತಾರೆ.

ಜಾಲಿಹಾಳದ [೧೫] ರಂಗಪ್ಪ ಚಿತ್ರಗಾರ ಅವರು ಇಂಥ ಪಾಲಿಕೆಗಳನ್ನು ರಚಿಸುತ್ತಾರೆ ಮತ್ತು ಅವುಗಳಿಗೆ ಕಲಾತ್ಮಕವಾಗಿ ಬಣ್ಣವನ್ನು ಬಳೆಯುತ್ತಾರೆ. ಕೆಲವು ಬಣ್ಣಗಳನ್ನು ದೇಶೀಯವಾಗಿ ಅವರೇ ತಯಾರಿಸಿಕೊಂಡಿರುತ್ತಾರೆ.

### ಇ. ನಂದಿಧ್ವಜ ಶಿಲ್ಪಗಳು

ನಂದಿ ಧ್ವಜವನ್ನು ನಂದೀ ಕಂಬ, ನಂದೀ ಕೋಲು, ಬರಡೇ ಕಂಬ, ವ್ಯಾಸಗೋಲು, ನಂದೀಪಟ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಸದ್ಯ ಕರ್ನಾಟಕದಲ್ಲಿ ವೀರಶೈವರು, ನಾಯಕರು,ವೀರ ಮನೆತನಗಳವರು ಧಾರ್ಮಿಕ ಉತ್ಸವ, ಜಾತ್ರೆಗಳ ಸಂದರ್ಭದಲ್ಲಿ ಈ ನಂದೀ ಧ್ವಜವನ್ನು ಪ್ರದರ್ಶಿಸುತ್ತಾರೆ.

---

೧೧. ಗೋಲಗೇರಿ : ತಾ. ಸಿಂದಗಿ, ಜಿ. ಬಿಜಾಪೂರ
೧೨. ಖೈನೂರು, ತಾ. ಸಿಂದಗಿ, ಜಿ. ಬಿಜಾಪೂರ
೧೩. ಕೊಟ್ಟೂರು, ಜಿ. ಬಳ್ಳಾರಿ
೧೪. ಡಾ. ಸಿ. ಮಹದೇವ : ಬಳ್ಳಾರಿ ಜಿಲ್ಲೆಯ, ಮರದ ವಾಸ್ತು, ಪುಟ- ೩೪
೧೫. ಜಾಲಿಹಾಳ, ತಾ. ಬಾದಾಮಿ, ಜಿ. ಬಾಗಲಕೋಟ

[illegible]

ವೀರಶೈವರ ಪ್ರಕಾರ ಇದು ವೀರಭದ್ರನು ತನ್ನ ವಿರೋಧಿಯಾದ ದಕ್ಷ ಬ್ರಹ್ಮನ ಮೇಲೆ ಸಾಧಿಸಿದ ವಿಜಯದ ಸಂಕೇತವಾದರೆ, ನಾಯಕ ಜನಾಂಗದವರಿಗೆ ತಮ್ಮ ಸಾಂಸ್ಕೃತಿಕ ವೀರನಾದ ನಾಯಕನ ಹಟ್ಟಿಯ ತಿಪ್ಪೇಸ್ವಾಮಿಯ ಸಂಕೇತ [೧೬] ಎಂದು ನಂಬಲಾಗುತ್ತದೆ.

**ರಚನೆ :** ಹಲವುನಿಯಮಗಳ ಪ್ರಕಾರ ಇದನ್ನು ರಚಿಸುತ್ತಾರೆ. ಬೆಟ್ಟಕ್ಕೆ ಹೋಗಿ ಸು. ೧೮-೨೦ ಅಡಿ ಎತ್ತರದ ಗಟ್ಟಿಮುಟ್ಟಾದ ಬಿದಿರು ಕಂಬವನ್ನು ಶುಭಮುಹೂರ್ತದಲ್ಲಿ ಕಡಿದು ತಂದು, ದೇವಸ್ಥಾನದಲ್ಲಿ ಇಡಲಾಗುತ್ತದೆ. ಕೆಳಗಿನ ತಾಳುಗಂಬಕ್ಕೆ ಪುಟ್ಟ ಮಂಟಪದಂತೆ ಪೀಠವನ್ನು ರಚಿಸಲಾಗಿರುತ್ತದೆ. ಈ ಪೀಠಕ್ಕೆ ಹಿತ್ತಾಳೆ ಗಗ್ಗರವನ್ನು ಸೇರಿಸಲಾಗುತ್ತದೆ. ಕುಣಿಯುವಾಗ ಗಗ್ಗರದ ನಿಯಮಿತವಾದ ಸದ್ದು ಕೇಳಲು ಮಧುರವಾಗಿರುತ್ತದೆ. ಗಗ್ಗರದ ಮೇಲೆ ಇದೇ ರೀತಿಯಾಗಿ ಮಾಡುವ ಹಿತ್ತಾಳೆಯ ಎರಡು ಬಳೆಗಳೂ ಇರುತ್ತವೆ. ಇದನ್ನು ಕೊಳಗ ಎಂದು ಕರೆಯಲಾಗುತ್ತದೆ. ಈ ಕೊಳಗ ಮತ್ತು ಗಗ್ಗರಗಳ ನಡುವೆ ಛತ್ರಿಯಾಕಾರದ ತಗಡುಗಳ ಜಾಲರಿಯಿರುತ್ತದೆ. ಜಾಲರಿಯ ಛತ್ರಿಗೆ ಸುತ್ತಲೂ ತಗಡಿನ ಲೋಲಾಕುಗಳಿರುತ್ತವೆ. ಈ ರೀತಿಯ ಗಗ್ಗರ ಬಳೆ ಮತ್ತು ಜಾಲರಿಗಳ ಸಾಲು ಕಂಬದ ಸುಮಾರು ೧೫ ಅಡಿ ಎತ್ತರವನ್ನು ವ್ಯಾಪಿಸಿರುತ್ತದೆ. ಇವುಗಳ ಮೇಲಿನ ಭಾಗದ ಬಿದಿರಿನ್ನು ಬಣ್ಣ ಬಣ್ಣದ ಬಟ್ಟೆಗಳಿಂದ ಸುತ್ತಲಾಗಿರುತ್ತದೆ. ತುದಿಯಲ್ಲಿ ಕಾವಿ ಬಣ್ಣದ ಸಣ್ಣ ಧ್ವಜಗಳಿರುತ್ತವೆ. ತುದಿಗೆ ಪುಟ್ಟ ಛತ್ರಿ ಹಾಗೂ ಕಲಶವಿರುತ್ತದೆ. ನಂದಿ ಧ್ವಜ ಕುಣಿತವನ್ನು ಗಂಡು ಕಲೆ [೧೭] ಎಂದೇ ಕರೆಯುತ್ತಾರೆ.

## ೧.೨ ಗೃಹ ಮತ್ತು ದೇವಾಲಯ ವಾಸ್ತುಗಳಲ್ಲಿನ ಶಿಲ್ಪಗಳು

ಜನಪದ ಶೈಲಿಯಲ್ಲಿ ನಿರ್ಮಾಣಗೊಂಡ ಮನೆಗಳು, ಮಠಗಳು, ದೇವಾಲಯಗಳಲ್ಲಿ ಮರವನ್ನು ಹೇರಳವಾಗಿ ಬಳಸಿದ್ದು ಕಂಡುಬರುತ್ತದೆ. ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಬಿಜಾಪೂರ, ಬಾಗಲಕೋಟ ಹಾಗೂ ಹೈದರಾಬಾದ್ ಕರ್ನಾಟಕದ ಗುಲಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ಮನೆ ಮತ್ತು ಮಠಗಳ ನಿರ್ಮಾಣದಲ್ಲಿ ಮರವನ್ನೇ ಹೇರಳವಾಗಿ ಬಳಸಲಾಗಿದೆ. ಸಾಮಾನ್ಯವಾಗಿ ಈ ವಸ್ತುಗಳಲ್ಲಿ ಮರವನ್ನು ಕಂಬ, ತೊಲೆ, ಬಾಗಿಲು, ಬಾಗಿಲ ಚೌಕಟ್ಟು ಇತ್ಯಾದಿಗಳಿಗೆ ಬಳಸಲಾಗಿದ್ದು, ಇವುಗಳಲ್ಲಿ ಮನುಷ್ಯ, ಪ್ರಾಣಿ, ಪಕ್ಷಿ ಅಲ್ಲದೆ ದೇವಾನುದೇವತೆಗಳ ಚಿತ್ರ, ರಾಮಾಯಣ, ಮಹಾಭಾರತಗಳ ಆಗಮ, ಪುರಾಣಗಳ ಪಾತ್ರ, ಸನ್ನಿವೇಷಗಳನ್ನು ಕೆತ್ತಲಾಗಿದ್ದು, ಅವನ್ನು ಅನೇಕ ಊರುಗಳಲ್ಲಿ ಕಾಣುತ್ತೇವೆ. ಇಂದಿಗೂ ಕೂಡ ಗ್ರಾಮೀಣ ಪ್ರದೇಶಗಳಲ್ಲಿ ಈ ತರಹದ ಗೃಹ ವಾಸ್ತುಗಳು ರಚನೆಯಾಗುತ್ತಿವೆ.

**೧. ಕಂಬಗಳಲ್ಲಿನ ಶಿಲ್ಪಗಳು :** ಜನಪದ ವಾಸ್ತು ಶೈಲಿಯಲ್ಲಿ ನಿರ್ಮಾಣಗೊಂಡ ಮನೆ, ಮಠ, ದೇವಾಲಯಗಳು ಯಾವುದೇ ಆಗಿರಲಿ, ಅವುಗಳ ಮಾಳಿಗೆ ಅಥವಾ ಜಂತಿಗೆ ಆಧಾರವೆಂದರೆ ಕಂಬಗಳು. ಹಿಂದೆ ನಿರ್ಮಾಣವಾದ ಗ್ರಾಮೀಣ ವಾಸ್ತುಗಳನ್ನು ನೋಡಿದರೆ ಕಂಬವಿಲ್ಲದೇ ವಾಸ್ತುಗಳನ್ನು

೧೬. ಪ್ರೊ ಹಿ.ಚಿ. ಬೋರಲಿಂಗಯ್ಯ (ಸಂ) : ಜನಪದ ಕಲೆಗಳ ಕೋಶ, ಪುಟ-೧೮೨
೧೭. ಪ್ರೊ. ಹಿ.ಚಿ. ಬೋರಲಿಂಗಯ್ಯ (ಸಂ) : ಜನಪದ ಕಲೆಗಳ ಕೋಶ, ಪುಟ-೧೮೩

ನಿರ್ಮಿಸುವದು ಸಾಧ್ಯವೇ ಇಲ್ಲವೇನೋ ಎನ್ನುವಷ್ಟರ ಮಟ್ಟಿಗೆ ಕಂಬಗಳ ಪಾತ್ರ ಈ ವಾಸ್ತುಗಳಲ್ಲಿ ಕಂಡುಬರುತ್ತದೆ. ಇಂತಹ ಮಹತ್ವದ ಕಂಬಗಳು ಕೇವಲ ಆಧಾರ ಸ್ತಂಭ ಮಾತ್ರವಾಗಿರದೇ, ನಮ್ಮ ಜನಪದರ, ಜನಪದ ಕಲಾವಿದರ ಸೌಂದರ್ಯ ಪ್ರಜ್ಞೆಯ ದ್ಯೋತಕವಾಗಿ, ಶಿಲ್ಪ ಕೆತ್ತನೆ, ಸುಳುಹುಗಳಿಂದ ಸಾಲಂಕೃತಗೊಂಡು ರಚನೆಯಾಗಿದ್ದನ್ನು ಕಾಣಬಹುದಾಗಿದೆ. ಉತ್ತರ ಕರ್ನಾಟಕದಲ್ಲಿ ಸಾಮಾನ್ಯವಾಗಿ ಈ ಕಬಂಗಳನ್ನು ಬೇವಿನ ಮರದಿಂದಲೇ ತಯಾರಿಸಿರುತ್ತಾರೆ. ಬಡಿಗರು ಇವುಗಳನ್ನು ರಚನೆ ಮಾಡಿರುತ್ತಾರೆ. ಈ ಕಂಬಗಳು ಅಪರೂಪಕ್ಕೆ ತುಟ್ಟಿಯಾಗಿರುವ ಸಾಗವಾನಿ ಮರವನ್ನು ಬಳಸಿ ರಚಿಸಿದ್ದನ್ನು ಕಾಣಬಹುದು. ತಳಭಾಗದ ಗದ್ದುಗೆ, ಮಧ್ಯಭಾಗ, ಗಡಗಿ ಎಂದು ಕಂಬವನ್ನು ಮೂರು ಭಾಗವಾಗಿ ನೋಡಬಹುದು. ಗಡಗಿಯ ಮೇಲೆ ಬೋದ ಅದರ ಮೇಲೆ ಕಂಡೆ ಮತ್ತು ತೊಲೆಗಳು ಸೇರುತ್ತವೆ.

ಕಂಬಗಳ ಮೇಲೆ ಕಂಠಭಾಗದಲ್ಲಿ ತಲೆ ಕೆಳಗಾದ ಮಡಕೆಯಾಕಾರದಲ್ಲಿರುವದೇ ಗಡಿಗೆ. ಇದು ಕಂಬ ಮತ್ತು ಜಂತಿಯ ಭಾಗಗಳ ಮಧ್ಯೆ ಇರುತ್ತದೆ. ಇಂತಹ ಗಡಿಗೆಗಳು ಗುಂಡು ಗಡಗಿ, ತೋಡೇವುಗಡಗಿ, ಚಿಬ್ಲಿಗಡಗಿ ಮುಂತಾದ ಹೆಸರುಗಳಿಂದ ವಿಭಾಗಿಸಿ ಕರೆಯುತ್ತಾರೆ. ಬಿಜಾಪೂರ, ಗುಲಬರ್ಗಾ, ಬಾಗಲಕೋಟ ಜಿಲ್ಲೆಗಳಲ್ಲಿ ಗಡಿಗಿ ಎಂದೇ ಇದನ್ನು ಕರೆಯುತ್ತಾರೆ. ಬಳ್ಳಾರಿ ಜಿಲ್ಲೆಯ ಕಡೆ ಗಡಗ ಎಂದು ಕರೆಯುತ್ತಾರೆ. ಇಂತಹ ಗಡಿಗೆಗಳ ಮೇಲೆ ಅಲಂಕಾರಿಕ ಕೆತ್ತನೆಯ ಶಿಲ್ಪಗಳಿರುತ್ತವೆ. ಸಾಮಾನ್ಯವಾಗಿ ಗೃಹವಾಸ್ತುವಿನ ಕಂಬಗಳಲ್ಲಿ ಹೂ-ಬಳ್ಳಿ, ಪಕ್ಷಿಗಳಿಂದ ಕೂಡಿದ ಸುಳುಹುಗೆತ್ತನೆ ಇರುತ್ತದೆ. ಇವೆಲ್ಲ ದುಂಡು ಶಿಲ್ಪ ಇಲ್ಲವೆ ಬಹುಪಾಲು ಕೆತ್ತನೆ ಉಬ್ಬುಶಿಲ್ಪವಾಗಿ ಕೆತ್ತಲಾಗಿರುತ್ತದೆ.

ದೇವಾಲಯ ಮತ್ತು ಮಠಗಳ ಕಂಬಗಳಲ್ಲಿ ಸಾಮಾನ್ಯವಾಗಿ ಪಶು, ಪಕ್ಷಿ, ನಿಸರ್ಗದ ಸುಳುಹುಗಳ ಕೆತ್ತನೆಯೊಂದಿಗೆ, ಧಾರ್ಮಿಕ ವಿಷಯಕ್ಕೆ ಸಂಬಂಧಿಸಿದ ಸಂಗತಿಗಳು, ದೇವಾನು ದೇವತೆಗಳು, ಪುರಾಣ, ಆಗಮ, ರಾಮಾಯಣ, ಮಹಾಭಾರತದ ಪಾತ್ರಗಳು, ಸನ್ನಿವೇಶಗಳನ್ನು ಕೆತ್ತಿ ನಿರ್ಮಿಸಲಾಗಿರುತ್ತದೆ. ಕೊಂಬಳಿ[೧೮] ದ್ಯಾಮವ್ವನ ಪ್ರವೇಶ ಮಂಟಪದ ಬೋದಿಗೆಗಳ ಎರಡೂ ಪಾರ್ಶ್ವಗಳಲ್ಲಿ ರಾಮಾಯಣ, ಮಹಾ ಕಾವ್ಯದ ಚಿತ್ರಗಳನ್ನು, ಅಲ್ಲದೆ ಕಾಮದೇನು ಶಿಲ್ಪಗಳನ್ನು ಕೆತ್ತಲಾಗಿದೆ.[೧೯] ಈ ಕೆತ್ತನೆಯಲ್ಲಿ ಅಶೋಕ ವನದಲ್ಲಿ ಆಂಜನೇಯ ಸೀತಾದೇವಿಗೆ ಉಂಗುರ ನೀಡುತ್ತಿರುವದು, ಶ್ರೀರಾಮಚಂದ್ರನ ಸೇವೆಯಲ್ಲಿ ನಿರತನಾಗಿರುವ ಆಂಜನೇಯ ಮತ್ತು ಪೆಟ್ಟಿಗೆಯೊಳಗಿನಿಂದ ಆಭರಣಗಳನ್ನು ತೆಗೆದು ಕೊಡುತ್ತಲಿರುವ ಸುಗ್ರೀವ ಮುಂತಾದ ಶಿಲ್ಪಗಳನ್ನು ಕೆತ್ತಲಾಗಿದೆ. ಈ ಎಲ್ಲ ಮರದ ವಾಸ್ತು ಭಾಗವು ಬೇವಿನ ಮರದ್ದೇ ಆಗಿದೆ. ಇದೇ ಊರಿನ ಊರಮ್ಮನ ದೇವಾಲಯದಲ್ಲಿ ಬೋದಿಗೆ, ಪೀಠಗಳ ನಾಲ್ಕೂ ಮೂಲೆಗಳಲ್ಲಿ ಸಿಂಹ, ಪಕ್ಷಿದೇಹದ ಸಿಂಹ, ಸಿಂಹ ಮತ್ತು ಕೋತಿ, ಸಿಂಹ ಮತ್ತು ಆನೆ, ಕುದುರೆ, ಗಿಳಿ ಮುಂತಾದ ಪ್ರಾಣಿ, ಪಕ್ಷಿ ಶಿಲ್ಪಗಳನ್ನು ಕೆತ್ತಲಾಗಿದೆ.[೨೦]

---

೧೮. ಕೊಂಬಳಿ : ಜಿಲ್ಲೆ ಬಳ್ಳಾರಿ

೧೯. ಡಾ. ಸಿ. ಮಹದೇವ : ಬಳ್ಳಾರಿ ಜಿಲ್ಲೆಯ, ಮರದ ವಾಸ್ತು, ಪುಟ-೨೩

೨೦. ..... ಅದೇ .....

ನವಲಗುಂದದ ಪಂಚಗೃಹ ಹಿರೇಮಠದಲ್ಲಿ ಅತ್ಯಂತ ಕಲಾತ್ಮಕವಾದ ಮರದ ಶಿಲ್ಪಗಳನ್ನು ದೀಕ್ಷಾ ಮಂಟಪದ ಹಾಗೂ ಅದರ ಮುಂದಿನ ಪಡಸಾಲೆಯ ಕಂಬಗಳಲ್ಲಿ ಕೆತ್ತಲಾಗಿದೆ. ಇವುಗಳ ನಿರ್ಮಾಣ ಕಾಲ ನಿಖರವಾಗಿ ಗೊತ್ತಾಗುವದಿಲ್ಲ. ಸುಮಾರು ೧೫-೧೬ ನೇ ಶತಮಾನದಲ್ಲಿ ನಿರ್ಮಾಣವಾಗಿರಬಹುದೆಂದು ಮಠದ ಸ್ವಾಮಿಗಳು ಹೇಳುತ್ತಾರೆ. [೨೧] ಇಲ್ಲಿರುವ ಅಥವಾ ಈಗ ಉಳಿದಿರುವ ಆರು ಕಂಬಗಳು ಅಪರೂಪದವುಗಳಾಗಿವೆ. ಈ ಕಂಬಗಳು ಸಾಗುವಾನಿ ಮರದವುಗಳಾಗಿದ್ದು ತುಂಬ ದಪ್ಪಳತೆಯಲ್ಲಿ ರಚಿಸಿದವುಗಳಾಗಿವೆ. ಈ ಕಂಬಗಳ ನಾಲ್ಕೂ ಬದಿಯಲ್ಲಿ ಅಪರೂಪದ ಉಬ್ಬುಗೆತ್ತನೆಯ ಶಿಲ್ಪಗಳನ್ನು ರಚಿಸಲಾಗಿದೆ. ವಿಶೇಷವೆಂದರೆ, ಒಂದು ಕಂಬದಲ್ಲಿರುವ ಕಲಾತ್ಮಕ ಕೆತ್ತನೆ, ಮತ್ತೊಂದು ಕಂಬದಲ್ಲಿ ಇಲ್ಲದಿರುವದು. ಇಲ್ಲಿರುವ ಒಟ್ಟು ಆರು ಕಂಬಗಳಲ್ಲಿ ನಾಲ್ಕು ಪೂರ್ಣ ಕಂಬಗಳು ಹಾಗೂ ಎರಡು ಗೋಡೆಗೆ ಆನಿಸಿದ ಅರ್ಧ ಕಂಬಗಳಾಗಿವೆ. ಸರ್ಪ, ಪಕ್ಷಿಗಳು, ಬಲಮುರಿ ಗಣೇಶ, ಸೂರ್ಯಕಾಂತಿ ಹೂ,[೨೨] ಆನೆ, ಸಿಂಹ, ಇತ್ಯಾದಿಗಳಲ್ಲದೆ, ಚತುರ್ಮುಖ ಬ್ರಹ್ಮ, ಇತ್ಯಾದಿಗಳು ಶಿಲ್ಪದಲ್ಲಿ ಧಾಖಲೆಯಾಗಿವೆ. ಈ ಮಠ ೧೦೧ ಅಂಕಣದ್ದಾಗಿದ್ದು ಈಗ ಅದೆಲ್ಲ ಹಾಳಾಗಿ, ಉಳಿದಿದ್ದು ಸ್ವಲ್ಪ ಭಾಗವೇ ಮಾತ್ರ. ನವಲಗುಂದದ ಹತ್ತಿರದಲ್ಲೇ ಸಾಗುವಾನಿ ಮರದ ಕಾಡು ಇದ್ದಿತಂತೆ. [೨೩] ಅಲ್ಲಿಂದಲೇ ಈ ಮರಗಳನ್ನು ತಂದು ಈ ಮಠವನ್ನು ರಚಿಸಲಾಗಿದೆಯೆಂದು ಹೇಳುತ್ತಾರೆ.

೨. **ಬಾಗಿಲುವಾಡಗಳಲ್ಲಿನ ಶಿಲ್ಪಗಳು :** ಮನೆ ಮತ್ತು ಮಠಗಳ ಪ್ರವೇಶ ದ್ವಾರ ಅಥವಾ ತಲಬಾಗಿಲುಗಳಂತೂ ಉತ್ತರ ಕರ್ನಾಟಕದಲ್ಲಿ ಅದ್ಭುತ ಕಲಾತ್ಮಕ ಕೆತ್ತನೆಗಳಿಂದ ಕೂಡಿದವುಗಳಾಗಿರುತ್ತವೆ. ಅನೇಕ ಹೂಬಳ್ಳಿಗಳಲ್ಲದೆ ಲಕ್ಷ್ಮಿ, ಸರಸ್ವತಿ, ಗಣೇಶ, ಈಶ್ವರ, ಪಾರ್ವತಿ ಮುಂತಾದವುಗಳ ಉಬ್ಬು ಶಿಲ್ಪಗಳ ಕೆತ್ತನೆಯಿಂದ ಅಲಂಕೃತವಾಗಿರುತ್ತವೆ. ಬಾಗಿಲು, ಬಾಗಿಲ ಚೌಕಟ್ಟು (ಹೊಸ್ತಿಲು ಹಾಗೂ ಹಣೆ ಪಟ್ಟಿ) ಇಂಥ ಕೆತ್ತನೆಗಳಿಂದ ಅಲಂಕೃತಗೊಂಡಿರುತ್ತವೆ. ಅಲ್ಲದೆ ಬಾಗಿಲಿನ ಮೇಲೆ ಎಡ ಮತ್ತು ಬಲ ಬದಿಗಳಲ್ಲಿ ಕುದರೆಯ ಮುಖದ ದುಂಡು ಶಿಲ್ಪಗಳನ್ನು ಮಾಡಿ ಅಳವಡಿಸಲಾಗಿರುತ್ತದೆ. ಈ ಬಗೆಯ ತಲಬಾಗಿಲುಗಳ ಕಲಾತ್ಮಕ ರಚನೆ ಶತಮಾನಗಳಿಂದಲೂ ಬೆಳೆದು ಬಂದಿದೆ. ಕುದುರೆ ಶಿಲ್ಪಗಳು ಅಪ್ಪಟ ಜನಪದ ಶೈಲಿಯವುಗಳಾಗಿರುತ್ತವೆ. ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ಮನೆಯ ತಲಬಾಗಿಲಿಗೆ (ಮುಂಬಾಗಿಲು) ಇಂಥ ಕುದುರೆ ಶಿಲ್ಪಗಳನ್ನು ಕಾಣಬಹುದು. ಈ ಕುದುರೆ ಶಿಲ್ಪಗಳ ಬದಲಿಗೆ ಆನೆ ಅಥವಾ ಸಿಂಹ ಇನ್ನಾವುದೇ ಪ್ರಾಣಿಯ ಶಿಲ್ಪಗಳನ್ನು ಅಳವಡಿಸಬಾರದೆಂಬ ನಿಯಮವಿದೆ. ಕುದುರೆಗಳನ್ನು ಅಳವಡಿಸುವದರಿಂದ ಮನೆಯ ಶ್ರೀಮಂತಿಕೆ ಶಾಶ್ವತವಾಗಿ ಹೆಚ್ಚುತ್ತ ಹೋಗುತ್ತದೆಂಬ[೨೪] ನಂಬಿಕೆಯಿದೆ.

---

೨೧. ಶ್ರೀ ಷ.ಬ್ರ. ಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಪಂಚಗೃಹ ಹಿರೇಮಠ. ಸಾ. ನವಲಗುಂದ.

೨೨. ಹದಿನೇಳು, ಹದಿನೆಂಟನೆಯ ಶತಮಾನದ ಹಿಂದೆ ಸೂರ್ಯಕಾಂತಿ ಹೂ ನಮ್ಮ ದೇಶದಲ್ಲಿ ಇರಲಿಲ್ಲವೆಂದು ಹೇಳಲಾಗುತ್ತದೆ. ಆದರೆ ಶಿಲ್ಪದಲ್ಲಿ ಕೆತ್ತನೆಗೊಂಡಿರುವುದು ಕಂಡುಬರುತ್ತದೆ.

೨೩. ವಿವರ ನೀಡಿದವರು : ಡಾ. ಸಂಗಮೇಶ ಹಂಡಗಿ, ಸಾ.ನವಲಗುಂದ

೨೪. ವಿವರ ನೀಡಿದವರು : ಹಣಮಂತ್ರಾಯ ಧ. ಬಂಟನೂರ, ಸಾ.ಖೈನೂರು

೨೫. ಇಟಗಿ, ತಾ. ಬಳ್ಳಾರಿ, ಜಿ. ಬಳ್ಳಾರಿ

[illegible]

[illegible]

ಇಟಗಿಯಲ್ಲಿ [೨೫] ಮನೆಯ ಹಣೆಪಟ್ಟಿಯಲ್ಲಿ ಕಾಳಿದೇವಿ ಪ್ರತಿಮೆಯನ್ನು ಬಿಡಿಸಲಾಗಿದೆ. ಇದರ ಮೇಲಿನ ಮಿಂಚುಪಟ್ಟಿಯಲ್ಲಿ ಶಿಲ್ಪಗಳನ್ನು ಕೆತ್ತಲಾಗಿದೆ. ಇನ್ನೊಂದು ಮನೆಯ ಬಾಗಿಲಿನ ಅಡ್ಡಪಟ್ಟಿಗಳಲ್ಲಿ ಕ್ರಮವಾಗಿ ಕೆಳಗಿನಿಂದ ಶಿವ-ಪಾರ್ವತಿ, ಲತಾಬಳ್ಳಿಗಳನ್ನು, ಕಾಮಧೇನು ಶಿಲ್ಪಗಳನ್ನು ಕೆತ್ತಲಾಗಿದೆ. ಇವೆಲ್ಲ ಬೇವಿನ ಮರದಿಂದ ಮಾಡಿದವುಗಳಾಗಿವೆ. [೨೬]

ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶದ ಲಿಂಗಾಯತರ ಮನೆಗಳ ಬಾಗಿಲುವಾಡಗಳ ಮೇಲೆ ಸಾಮಾನ್ಯವಾಗಿ ಕುಳಿತ ಭಂಗಿಯ ನಂದಿ ಪ್ರತಿಮೆಗಳನ್ನು ಇಲ್ಲವೆ ಲಿಂಗದ ಉಬ್ಬು ಶಿಲ್ಪಗಳನ್ನು ಕಾಣಬಹುದು. ಬ್ರಾಹ್ಮಣರು, ಜಂಗಮರು, ಲಿಂಗಾಯತರು, ವಿಶ್ವಕರ್ಮರು, ಕಬ್ಬಿಗರು, ಉಪ್ಪಾರರು, ತಳವಾರರು ಮುಂತಾದವರು ತಂತಮ್ಮ ಧಾರ್ಮಿಕ ನಂಬಿಕೆಗಳಿಗೆ ಸಂಬಂಧಿಸಿದಂತೆ ದೈವಗಳ ಪ್ರತಿಮೆಗಳನ್ನು ಮತ್ತು ಅವುಗಳ ವಾಹನಗಳನ್ನು ಬಾಗಿಲುವಾಡ, ಅದರ ಹಣೆಪಟ್ಟಿಗಳಲ್ಲಿ ಉಬ್ಬುಶಿಲ್ಪಗಳಾಗಿ ಕೆತ್ತಿಸಲಾಗಿರುತ್ತದೆ. ಇವುಗಳೊಂದಿಗೆ ಸೂರ್ಯ, ಚಂದ್ರರನ್ನು ಶಿಲ್ಪಿಸಲಾಗಿರುತ್ತದೆ.

ಗುಲಬರ್ಗಾ ಜಿಲ್ಲೆಯ, ಕೀರಣಗಿ, [೨೭] ಇದೇ ಜಿಲ್ಲೆಯ ಜೇವರ್ಗಿ ತಾಲೂಕಿನ ಯಲಗೋಡ [೨೮] ಹಾಗೂ ನೆಲೋಗಿ [೨೯] ಮುಂತಾದ ಊರುಗಳಲ್ಲಿನ ಮನೆಗಳು ಹಾಗೂ ಸುರಪುರ ತಾಲೂಕಿನ ಹಂದ್ರಾಳದ ಗೌಡರ ಮನೆ, ಬಿಜಾಪೂರ ಜಿಲ್ಲೆಯ ಸಿಂದಗಿ ತಾಲೂಕಿನ ಖೈನೂರ [೩೦]ದ ಗೌಡರ ಮನೆ ಮುಂತಾದವುಗಳಲ್ಲಿ ಕಂಬ, ಗಡಿಗೆ, ಬೋದಿಗೆ,ತೋರಣ, ತೊಲೆ ಹಾಗೂ ತಲಬಾಗಿಲುಗಳಲ್ಲಿ ಶಿಲ್ಪಗಳ ಕೆತ್ತನೆಗಳಿವೆ. ಇವೆಲ್ಲ ಸಾಮಾನ್ಯವಾಗಿ ಬೇವಿನ ಮರದಲ್ಲೇ ಮಾಡಿದವುಗಳಾಗಿದ್ದು ಹಳೆಯ ಕಾಲದವುಗಳೂ ಆಗಿವೆ. ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಗುಲಬರ್ಗಾ, ರಾಯಚೂರು, ಬೀದರ, ಗದಗ, ಬಳ್ಳಾರಿ ಹಾಗೂ ಬಿಜಾಪೂರ ಜಿಲ್ಲೆಗಳಲ್ಲಿ ಇಂತಹ ಕಲಾತ್ಮಕ ಕೆತ್ತನೆಗಳಿಂದ ಕೂಡಿದ ಸಾವಿರಾರು ಮನೆಗಳನ್ನು ನೋಡಬಹುದಾಗಿದೆ.

ಕೊಂಗನ ಹೊಸೂರಿನ [೩೧] ಆಂಜನೇಯ ದೇವಾಲಯದ ಗರ್ಭ ಗೃಹಕ್ಕೆ ಅಳವಡಿಸಲಾದ ಮರದ ಬಾಗಿಲು ಅತ್ಯಂತ ಹಳೆಯದಾಗಿದ್ದು ಅದರ ಬಲಭಾಗದ ಬಾಗಿಲುವಾಡದ ಮೊದಲ ಪಟ್ಟಿಯ ಬುಡದಲ್ಲಿ ದ್ವಾರಪಾಲಕರ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಇದರ ಮೇಲೆ ಕ್ರಮವಾಗಿ ಕುಳಿತ ಭಂಗಿಯ ಸಿಂಹ, ವಿಷ್ಣು, ಆಂಜನೇಯ, ಋಷಿ ಮುಂತಾದವುಗಳನ್ನು ಶಿಲ್ಪಿಸಲಾಗಿದೆ. ಎಡಭಾಗದ ಪಟ್ಟಿಕೆಯ ಬುಡದಲ್ಲಿ ದ್ವಾರಪಾಲಕನ ಉಬ್ಬುಶಿಲ್ಪವಿದೆ. ಬಲಗೈಯಲ್ಲಿ ಗದೆಯಿದ್ದು, ಎಡಕ್ಕೆ ಅಭಯ ಮುದ್ರೆಯಲ್ಲಿದೆ. ಮೇಲೆ

---

೨೬. ಡಾ. ಸಿ. ಮಹದೇವ : ಬಳ್ಳಾರಿ ಜಿಲ್ಲೆಯ, ಮರದ ವಾಸ್ತು, ಪುಟ-೨೮

೨೭. ಕೀರಣಗಿ : ಭಗವಂತರಾಯ ಅಂದಾನಿಯವರ ಮನೆ

೨೮. ಯಲಗೋಡ : ದಿ. ಬಸವಂತರಾಯ ಗೌಡ ಮಾಲಿಪಾಟೀಲರ ಮನೆ

೨೯. ನೆಲೋಗಿ : ದಿ. ಬಸವರಾಜ ಬಿಲ್ಲಾಡ್ ಸಾಹುಕಾರರ ಮನೆ

೩೦. ಖೈನೂರ : ಗೌಡಪ್ಪಗೌಡ ಪಾಟೀಲ ಅವರ ಮನೆ

೩೧. ಕೊಂಗನ ಹೊಸೂರು, ತಾ. ಹರಪನಹಳ್ಳಿ, ಜಿ. ಬಳ್ಳಾರಿ

ಕ್ರಮವಾಗಿ ಸಿಂಹ, ರಾಮನಿಗೆ ಆಂಜನೇಯ ಕೈ ಮುಗಿಯುತ್ತಿರುವದು, ಆಂಜನೇಯ ತನ್ನ ಬಾಲದ ಸಹಾಯದಿಂದ ಸೀತೆಗೆ ಉಂಗುರ ನೀಡುತ್ತಿರುವದು[೩೨] ಮುಂತಾದವುಗಳನ್ನು ಉಬ್ಬುಗೆತ್ತನೆಯ ಶಿಲ್ಪಗಳಲ್ಲಿ ನಿರೂಪಿಸಲಾಗಿದೆ.

ಆಧುನಿಕತೆಯ ಪ್ರಭಾವದಿಂದಾಗಿ ಜನಪದ ಶೈಲಿಯ ವಾಸ್ತುಗಳೂ ಮತ್ತು ಇಂಥ ಮುಂಬಾಗಿಲು ಮತ್ತು ಕುದುರೆ ಅಳವಡಿಕೆಗಳು, ಅವುಗಳ ಹಿಂದಿನ ನಂಬಿಕೆಗಳೂ ಮಾಯವಾಗುತ್ತಿವೆ. ಪಟ್ಟಣ ಪ್ರದೇಶಗಳಲ್ಲಂತೂ ಇಂಥ ಬಾಗಿಲುಗಳ ನಿರ್ಮಾಣ ನಿಂತು ಹೋಗಿದೆ.

**೩. ಮಠದ ದೀಕ್ಷಾ ಮಂಟಪದಲ್ಲಿನ ಶಿಲ್ಪಗಳು :** ಧಾರವಾಡ ಜಿಲ್ಲೆಯ ನವಲಗುಂದದ ಪಂಚಗೃಹ ಹಿರೇಮಠದಲ್ಲಿ ಕಂಬಗಳಲ್ಲಿ ಮಾತ್ರವಲ್ಲದೆ, ಒಳಗಡೆ ನಿರ್ಮಿಸಲಾದ ದೀಕ್ಷಾ ಮಂಟಪದ ಮೇಲುಗಡೆಗೆ ಸಾಗುವಾನಿ ಕಟ್ಟಿಗೆಯಲ್ಲಿ ಅಷ್ಟ ದಿಕ್ಪಾಲಕರಿಂದ ಕೂಡಿದ ದೀಕ್ಷಾ ಮಂಟಪವನ್ನು ರಚಿಸಲಾಗಿದೆ. ಈ ದೀಕ್ಷಾ ಮಂಟಪವನ್ನು ಸುಮಾರು ೬೦೦ ವರ್ಷದ ಹಿಂದೆ ರಚಿಸಲಾಗಿದೆಯೆಂದು ಸ್ವಾಮಿಗಳು ಹೇಳುತ್ತಾರೆ.[೩೩] ಈ ದೀಕ್ಷಾ ಮಂಟಪದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಅಲ್ಲದೆ ರತಿ, ಕಾಮ ಮತ್ತು ಅಗಸ್ತ್ಯರನ್ನು ಕೆತ್ತಲಾಗಿದೆ. ಅಲ್ಲದೆ ದಕ್ಷಬ್ರಹ್ಮ, ವೀರಭದ್ರ, ಕಾಮ-ರತಿಯರು, ಮೂರು ಕಾಲಿನ ಬೃಂಗಿ ಮುಂತಾದ ಶಿಲ್ಪಗಳು ಜನಪದ ಶೈಲಿಯಲ್ಲಿ ಕೆತ್ತಿ ರೂಪಿಸಲಾಗಿದೆ. ಕೆಲವು ಶಿಲ್ಪಗಳ ರಚನಾ ಕ್ರಮವು ಜನಪದದಿಂದ ಶಿಷ್ಟಕ್ಕೆ ತಿರುಗಿದಂತೆ ಕಂಡುಬರುತ್ತದೆ. ಇಲ್ಲಿ ಶಿವನ ಸಭಾ ಮಂಟಪ, ನಂದಿ, ನರ್ತಕಿಯರು ಮತ್ತು ಒಂದು ಜೀವಿಯನ್ನು ಇನ್ನೊಂದು ಜೀವಿ ತಿಂದು ಬದುಕುವದೆಂಬ ಸನ್ನಿವೇಶವನ್ನು ಕೆತ್ತಲಾಗಿದೆ. ಸುತ್ತಲೂ ಸರ್ಪಗಾವಲು ಶಿಲ್ಪಗಳು, ಶಂಖಗಳು, ಜಂಗ, ಗಣೇಶ, ಅಗಸ್ತ್ಯರು ಮುಂತಾದ ಶಿಲ್ಪಗಳನ್ನು ಉಬ್ಬು ಹಾಗೂ ದುಂಡು ಶಿಲ್ಪ ತಂತ್ರಗಳಲ್ಲಿ ಖಂಡರಿಸಲಾಗಿದೆ. ಈ ಶಿಲ್ಪಗಳನ್ನು ಕೆತ್ತಿದ ಕಲಾವಿದರಾಗಲೀ, ಕೆತ್ತಿಸಿದವರಾಗಲೀ ಯಾರು ? ಅವರ ಕಾಲ ಯಾವುದು ? ಎಂಬುದು ತಿಳಿದು ಬರುವುದಿಲ್ಲ.

## ೧.೩ ಕೃಷಿ ಉಪಕರಣಗಳಲ್ಲಿನ ಶಿಲ್ಪಗಳು

ಕೃಷಿ ಪ್ರಧಾನವಾದ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ರೈತನು ಕೃಷಿ ವ್ಯವಸಾಯಕ್ಕೆ ಸಂಬಂಧಿಸಿದಂತೆ ಭೂಮಿಯನ್ನು ಉಳುಮೆ ಮಾಡಲು, ಬೀಜ ಬಿತ್ತಲು, ರಾಶಿಯನ್ನು, ಸರಕುಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸಲು, ಅನೇಕ ಉಪಕರಣ, ಸಾಧನಗಳನ್ನು ತಯಾರಿಸಿಕೊಳ್ಳುತ್ತ ಬಂದಿದ್ದಾನೆ. ಹೀಗೆ ತಯಾರಿಸಿಕೊಳ್ಳುವ ಉಪಕರಣಗಳನ್ನು ಬಳಸುವ ರೈತನಾಗಲಿ, ಅವನ್ನು ತಯಾರಿಸಿ ಕೊಡುವ ಕಲಾವಿದನಾಗಲೀ ಅವನ್ನು ಕೇವಲ ಪ್ರಯೋಜನ ಮೂಲವಾಗಿ ಕಾಣದೆ, ಅವುಗಳಲ್ಲಿ ಕಲಾತ್ಮಕ ಕೊರೆ ಚಿತ್ರಗಳನ್ನು, ಶಿಲ್ಪಗಳನ್ನು, ಉಬ್ಬುಶಿಲ್ಪಗಳನ್ನು ಕೆತ್ತಿ ರೂಪಿಸಿದನು. ತನ್ನ ಸೌಂದರ್ಯ ಪ್ರಜ್ಞೆಯನ್ನು ವ್ಯಕ್ತಪಡಿಸಿ ಆನಂದ ಪಟ್ಟನು. ಕೆಲವನ್ನು ಇಲ್ಲಿ ಗಮನಿಸಬಹುದು.

೩೨. ಡಾ. ಸಿ. ಮಹದೇವ : ಬಳ್ಳಾರಿ ಜಿಲ್ಲೆಯ, ಮರದ ವಾಸ್ತು, ಪುಟ-೨೩

೩೩. ಶ್ರೀ ಷ.ಬ್ರ. ಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಪಂಚಗೃಹ ಹಿರೇಮಠ. ಸಾ. ನವಲಗುಂದ

[illegible]

[illegible]

[illegible]

[illegible]

[illegible]

[illegible]

[illegible]

**೧. ಮಂಡಿಯಲ್ಲಿನ ಶಿಲ್ಪವಿನ್ಯಾಸಗಳು :** ರೈತನು ಹೊಲದಲ್ಲಿ ಬೀಜ ಬಿತ್ತಲು ಕೂರಿಗೆ ದಿಂಡು ಬಳಸುತ್ತಾನೆ. ಈ ಕೂರಿಗೆ ದಿಂಡಿನ ಕೋಲುಗಳ ಮೇಲೆ ಬೀಜ ಸುರುವಲು ಮರದಿಂದ ಮಾಡಲಾದ ಮಂಡಿಯನ್ನು ಬಳಸುತ್ತಾರೆ. ಈ ಮಂಡಿಯು ತುಂಬಾ ಕಲಾತ್ಮಕವಾಗಿರುತ್ತದೆ ಮಾತ್ರವಲ್ಲ, ಇದರ ಸುತ್ತಲೂ ಸೂರ್ಯ, ಚಂದ್ರ, ಬಸವಣ್ಣ, ಲಿಂಗ ಹಾಗೂ ಅನೇಕ ದೇವತಾ ಶಿಲ್ಪಗಳನ್ನು ಕೊರೆ ಚಿತ್ರಗಳಾಗಿ ಇಲ್ಲವೆ ಉಬ್ಬು ಶಿಲ್ಪಗಳಾಗಿ ರಚಿಸಲಾಗಿರುತ್ತದೆ.

**೨. ನೊಗದಲ್ಲಿನ ಶಿಲ್ಪಗಳು ವಿನ್ಯಾಸಗಳು :** ರೈತನು ಸರಕುಗಳನ್ನು ಸಾಗಿಸಲು ಬಳಸುವ ಬಂಡಿ, ಉಳುಮೆ ಮಾಡಲು, ಬೀಜ ಬಿತ್ತಲು, ರೆಂಟೆ ಹೊಡೆಯಲು ಬಳಸುವ ದಿಂಡು, ಕೂರಿಗೆ, ನೇಗಿಲು ಇವುಗಳನ್ನು ಎಳೆಯಲು ಎತ್ತುಗಳ ಹೆಗಲ ಮೇಲೆ ಇಟ್ಟು ಈ ನೊಗವನ್ನು ಬಳಸಲಾಗುತ್ತದೆ. ಈ ನೊಗದ ಮಧ್ಯದಲ್ಲಿ ಲಿಂಗ ಇಲ್ಲವೆ ನಂದಿಗಳನ್ನು, ಕೆಲವೊಂದು ನೊಗಗಳ ಮಧ್ಯದಿಂದ ಒಂದು ಅಡಿ ಅಂತರದಲ್ಲಿ ಎಡ ಮತ್ತು ಬಲಗಳಲ್ಲಿ ನೊಗದ ಮೇಲ್ಬದಿಯಲ್ಲಿ ನಂದಿಯ ಶಿಲ್ಪಗಳನ್ನು ಕೆತ್ತಿ ಸುಂದರಗೊಳಿಸಲಾಗಿದ್ದನ್ನು ಅನೇಕ ಕಡೆ ಕಾಣಬಹುದು. ಅಲ್ಲದೆ ರೈತನು ಬಳಸುವ ಬಂಡಿಯಲ್ಲಿ ಅನೇಕ ಚಿತ್ತಾರಗಳನ್ನು, ಕೊರೆಚಿತ್ರಗಳನ್ನು ಕಾಣಬಹುದು.

**೩. ಬಂಡಿಯಲ್ಲಿನ ಶಿಲ್ಪ ವಿನ್ಯಾಸಗಳು :** ನಮ್ಮ ರೈತನು ಬೆಳೆಯುವ ರಾಶಿ ಮತ್ತಿತರ ಸರಕುಗಳನ್ನು ಹೊಲಗಳಿಂದ ಮನೆಗೆ, ಮನೆಯಿಂದ ಹೊಲಕ್ಕೆ, ಇಲ್ಲವೆ ಊರಿನಿಂದ ಊರಿಗೆ ಹೋಗಿ ಬರಲು ಬಳಸುವ ವಸ್ತುವೇ ಬಂಡಿ. ಈ ಬಂಡಿಯನ್ನು ಎಳೆಯುವ ಎತ್ತುಗಳು ರೈತನ ಮಿತ್ರರೆನ್ನಬಹುದು. ಈ ಬಂಡಿಯ ನೊಗ, ತೊಟ್ಟಿಲು, ಗಾಲಿಗಳು, ತೊಟ್ಟಿಲದಿಂಡು, ಮುಂತಾದ ಭಾಗಗಳಲ್ಲಿ ನಂದಿ, ನವಿಲು, ಗಿಳಿ, ಲಕ್ಷ್ಮಿ, ಸೂರ್ಯ, ಚಂದ್ರ ಇತ್ಯಾದಿ ಶಿಲ್ಪಗಳನ್ನು ಕೊರೆ ಚಿತ್ರದಂತೆ ಇಲ್ಲವೆ ಉಬ್ಬು ಶಿಲ್ಪದಂತೆ ರಚಿಸಿ ಶೃಂಗಾರಗೊಳಿಸಲಾಗಿರುತ್ತದೆ.

**೪. ರಾಗೋಲು, ಬಾರಕೋಲು** ಇತ್ಯಾದಿ ವಸ್ತುಗಳಲ್ಲೂ ಶಿಲ್ಪವಿನ್ಯಾಸಗಳನ್ನು ಅಳವಡಿಸಿ ಸುಂದರಗೊಳಿಸಲಾಗಿರುವುದನ್ನು ಕಾಣಬಹುದು. ಈ ಉಪಕರಣಗಳು ವಿವಿಧ ವರ್ಣಗಳಿಂದಲೂ ಅಲಂಕೃತಗೊಂಡಿರುತ್ತವೆ.

ಹೀಗೆ ಮರದ ಮಾಧ್ಯಮದ ಸೌಂದರ್ಯಮೂಲದ ಜನಪದ ಶಿಲ್ಪಗಳು, ಪ್ರಯೋಜನದ ಹಿನ್ನೆಲೆಯಲ್ಲಿ ರೂಪ ತಳೆದಿದ್ದು ನಮ್ಮ ಜನಪದರ ಸೌಂದರ್ಯ ಪ್ರಜ್ಞೆಯ ದ್ಯೋತಕವಾಗಿ ಕಂಡು ಬರುತ್ತವೆ. ತಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿ ಉಪಯೋಗಿಸುವ ವಸ್ತುಗಳು ಹಾಗೂ ತಾವು ವಾಸಿಸುವ ಕಟ್ಟಡಗಳಲ್ಲಿ ಮರವನ್ನು ಹೇರಳವಾಗಿ ಉಪಯೋಗಿಸುವದರೊಂದಿಗೆ, ಅವುಗಳಲ್ಲಿ ಅನೇಕ ತರಹದ ಔಪಯೋಗಿಕ ವಸ್ತು, ಉಪಕರಣಗಳನ್ನು ಮತ್ತು ವಾಸ್ತು ವಿನ್ಯಾಸಗಳನ್ನು ತುಂಬ ಕಲಾತ್ಮಕವಾಗಿ ನಿರ್ಮಿಸಿಕೊಂಡಿರುವುದನ್ನು ಕಾಣಬಹುದು. ಗೃಹ ಮತ್ತು ದೇವಾಲಯಗಳಲ್ಲಿ ಉಪಯೋಗಿಸುವ ಉಪಕರಣಗಳಾದ ವಿಭೂತಿ ಬುಟ್ಟಿಗಳು, ದೇವರ ಪಲ್ಲಕ್ಕಿಗಳು, ನಂದಿ ಧ್ವಜಗಳು ಅಲ್ಲದೆ ಮನೆ ಮತ್ತು

[illegible]

[illegible]

[illegible]

[illegible]

[illegible]

[illegible]

[illegible]

ದೇವಾಲಯ ವಾಸ್ತು ನಿರ್ಮಾಣದಲ್ಲಿ ಕೆತ್ತಿದ ಶಿಲ್ಪಗಳು, ಬಾಗಿಲುವಾಡಗಳಲ್ಲಿ ಮತ್ತು ಕೃಷಿ ಉಪಕರಣಗಳಲ್ಲಿ ರೂಪಿಸಿದ ಕಲಾತ್ಮಕ ವಿನ್ಯಾಸಗಳಲೆಲ್ಲ ನಮ್ಮ ಜನಪದರ ಕಲಾಪ್ರೌಢಿಮೆಯನ್ನು ಕಾಣಬಹುದಾಗಿದೆ.

## ೨. ಮರದ ಮಾಧ್ಯಮದ ಮನರಂಜನ ಮೂಲ ಜನಪದ ಶಿಲ್ಪಕಲೆ

ಜನಪದ ಸಮೂಹವು ಸೌಂದರ್ಯ ಮೂಲದ ಶಿಲ್ಪಕಲೆಯನ್ನು ಪ್ರಯೋಜನದ ಹಿನ್ನೆಲೆಯಲ್ಲಿ ಬೆಳೆಸಿಕೊಂಡು ಬಂದಿರುವ ಹಾಗೆ ಮನರಂಜನೆಯ ಸಾಧನವಾಗಿಯೂ ಬಳಸಿಕೊಂಡು ಬಂದಿದೆ.

ದೈನಂದಿನ ಹೋರಾಟಮಯ ಬದುಕಿನಲ್ಲಿ ತೊಡಗಿದ ಮನಸ್ಸಿನ ಏಕತಾನತೆಯನ್ನು ತೊಡೆದು ವಿಶ್ರಾಂತಿ ನೀಡಲು, ಮನಸ್ಸಿಗೆ ರಂಜನೆ ನೀಡಿ ಉಲ್ಲಾಸಗೊಳಿಸಲು ಜನಪದರು ಹಲವಾರು ಮನರಂಜನಾತ್ಮಕ ಸಾಧನ, ಸಲಕರಣೆಗಳನ್ನು ಬಳಕೆಗೆ ತಂದುಕೊಂಡರು. ತನಗೆ ಸಂತೋಷ ಕೊಟ್ಟವುಗಳು ಇತರರಿಗೂ ಸಂತೋಷ ಕೊಡಲಿ ಎಂಬ ಉದ್ದೇಶದಿಂದ ಮನರಂಜನ ಮೂಲದ ಶಿಲ್ಪಗಳು ಹುಟ್ಟಿಕೊಂಡವೆನ್ನಬಹುದು.

ಪ್ರಾಚೀನ ಕಾಲದಿಂದಲೂ ಮನರಂಜನೆಯ ಸಲುವಾಗಿ ಅನೇಕ ಕ್ರೀಡೆಗಳು ಆಟಗಳು ಹುಟ್ಟಿ ಸಮಾಜದಲ್ಲಿ ಅಸ್ತಿತ್ವದಲ್ಲಿವೆ. ಈ ಕ್ರೀಡೆ ಅಥವಾ ಆಟಗಳನ್ನು ಪ್ರದರ್ಶನ ಕಲೆಗಳು ಎಂದೂ ಕರೆಯಬಹುದು. ಈ ಪ್ರದರ್ಶನ ಕಲೆ ಅಥವಾ ಆಟಗಳಲ್ಲಿ ಹಲವಾರು ಶಿಲ್ಪಗಳನ್ನು ಬಳಸಲಾಗುತ್ತದೆ. ಇಂಥ ಶಿಲ್ಪಗಳು ವೈವಿಧ್ಯತೆಯಿಂದ ಕೂಡಿರುತ್ತವೆ. ಈ ಶಿಲ್ಪಗಳನ್ನು ೧. ಕೀಲುಕುದುರೆ ಶಿಲ್ಪಗಳು ೨. ಗೊಂಬೆಯಾಟದಲ್ಲಿನ ಶಿಲ್ಪಗಳು ೩. ಮಕ್ಕಳ ಆಟಿಕೆಯಲ್ಲಿನ ಶಿಲ್ಪಗಳು ಎಂದು ಪ್ರಾತಿನಿಧಿಕವಾಗಿ ವಿಂಗಡಿಸಿ ನೋಡಬಹುದಾಗಿದೆ.

**೨.೧ ಕೀಲು ಕುದುರೆ ಶಿಲ್ಪಗಳು :** ಕರ್ನಾಟಕದ ಬಿಜಾಪೂರ, ಬಳ್ಳಾರಿ, ಮಂಡ್ಯ, ಮೈಸೂರು, ಬೆಂಗಳೂರು, ಕೋಲಾರ, ಕೊಡಗು ಮುಂತಾದ ಜಿಲ್ಲೆಗಳಲ್ಲಿ ಪ್ರಚಲಿತವಿರುವ ಒಂದು ಜನಪ್ರೀಯ ಕುಣಿತ ಕೀಲುಕುದುರೆ ಕುಣಿತ. ಕೊಡಗಿನಲ್ಲಿ ಇದನ್ನು ಪೊಯ್ ಕುದುರೆ ಎನ್ನುವರು. ಈ ಕಲೆ ಯಾವುದೇ ಜಾತಿಯೊಂದಕ್ಕೆ ಸೀಮಿತವಾದುದಲ್ಲ. ಕುದುರೆ ಕೋಲ ಹಾಗೂ ಮರಗಾಲು ಕುಣಿತಗಳು ಇದಕ್ಕೆ ಸಂವಾದಿಯಾದ ಕಲೆಗಳಾಗಿವೆಯೆನ್ನಬಹುದು.

**ಕೀಲು ಕುದುರೆ ಶಿಲ್ಪಗಳ ರಚನೆ :** ಕೀಲು ಕುದುರೆಯನ್ನು ಮುಖ್ಯವಾಗಿ ಬಿದಿರಿನ ದಬ್ಬೆಗಳಿಂದ ರಚಿಸಿರುತ್ತಾರೆ. ಕಾಲುಗಳನ್ನು ಮಾತ್ರ ಬಿಟ್ಟು ಉಳಿದ ಹೊಟ್ಟೆ, ಎದೆ ಮತ್ತು ಹಿಂಭಾಗವನ್ನು ಕುದುರೆಯ ಆಕಾರದಂತೆ ಬಿದಿರಿನ ತೆಳುವಾದ ದಬ್ಬೆಗಳಿಂದ ಹೆಣೆಯಲಾಗಿರುತ್ತದೆ. ಇದನ್ನು ಆಯಾ ಗ್ರಾಮದ ಕಲಾವಿದರೇ ಅಂದರೆ ಪಂಚಾಳರು, ಚಿತ್ರಗಾರರು ಮಾಡಿಕೊಡುತ್ತಾರೆ. ಕುದುರೆ ತಲೆಯನ್ನು ಕಾಗದದ

ಹಿಟ್ಟಿನಿಂದ [೩೪] ರಚಿಸಿರುತ್ತಾರೆ. ಇದರ ಒಳಭಾಗ ಟೊಳ್ಳಾಗಿರುತ್ತದೆ. ಕುಣಿಯುವಾಗ ಅದರ ನಾಲಿಗೆಯು ಮೇಲೆ ಕೆಳಗೆ ಚಲಿಸುವಂತೆ ಕೀಲನ್ನು ಅಳವಡಿಸಲಾಗಿರುತ್ತದೆ. ಹೆಸರೇ ಸೂಚಿಸುವಂತೆ ಈ ಕುದುರೆಗಳು ಕೀಲುಗಳಿಂದ ರಚಿತವಾಗಿರುತ್ತವೆ. ಕೀಲು ಕುದುರೆ ಆಡಿಸುವವನು ಕಾಲಿಗೆ ಎರಡು ಅಡಿ ಉದ್ದದ ಮರಗಾಲು ಕಟ್ಟಿಕೊಂಡಿರುತ್ತಾನೆ. ಈ ಮರದ ಕಾಲುಗಳನ್ನು ಹಗುರ ಹಾಗೂ ಗಟ್ಟಿಯಾದ ಮರದಿಂದ ಮಾಡಿದವುಗಳಾಗಿರುತ್ತವೆ. ಕುದುರೆಯ ಈ ಬಿದಿರಿನ ಆಕಾರಕ್ಕೆ ಬಣ್ಣ ಬಣ್ಣದ ಗೌನನ್ನು ಹೊದಿಸಿರುತ್ತಾರೆ. ರಾಜ ರಾಣಿಯರ ವೇಷ ಭೂಷಣಗಳನ್ನು ಧರಿಸಿದ ಕಲಾವಿದರು ಈ ಕೀಲುಕುದುರೆಯ ಬೆನ್ನಿನಲ್ಲಿ ಸೇರಿ ಹೆಗಲುಗಳಿಗೆ ಕುದುರೆಯ ದಬ್ಬೆಯ ದೇಹವನ್ನು ಬಿಗಿದುಕೊಳ್ಳುವರು, ಕೈಯಲ್ಲಿ ಲಗಾಮು ಹಿಡಿದುಕೊಂಡು ಅದರ ತಲೆ ಬಾಲಗಳನ್ನು ಆಡಿಸುತ್ತಾ ಹಿಂದು ಮುಂದು ಮಾಡಿ ಕುಣಿದಾಗ ಅದು ನೈಜ ಕುದುರೆಯ ಭಂಗಿಯಂತೆ ಕಾಣುತ್ತದೆ.

ಸಾಮಾನ್ಯವಾಗಿ ಕೀಲುಕುದುರೆ ಕಲಾವಿದರು ರಾಜ-ರಾಣಿಯರಂತೆ ಕರೀಟ, ಭುಜಕೀರ್ತಿ, ಎದೆಹಾರ, ನಡುಬಿಲ್ಲೆ, ವೀರಗಾಸೆ ಮುಂತಾದ ವೇಷ ಭೂಷಣಗಳನ್ನು ತೊಟ್ಟಿರುತ್ತಾರೆ. ಮಖಕ್ಕೆ ಬಣ್ಣ, ಕಾಲಿಗೆ ಗೆಜ್ಜೆಗಳಿರುತ್ತವೆ. ಹೆಣ್ಣು ಮತ್ತು ಗಂಡು ವೇಷಗಳು ಜೊತೆಯಲ್ಲಿ ಕುಣಿಯುವದುಂಟು. [೩೫] ಹೀಗೆ ಕುಣಿಯುವಾಗ ಈ ಕುದುರೆಗಳನ್ನು ಕುಣಿಯುವ ಕಲಾವಿದರು ತಮ್ಮ ಸೊಂಟಕ್ಕೆ ಬರುವಂತೆ ಅಳವಡಿಸಿಕೊಂಡು ಕುಣಿಯುವದರಿಂದ ಕುದುರೆಯ ಬೆನ್ನ ಮೇಲೆ ಸೊಂಟದಳತೆಯ ಜಾಗದಲ್ಲಿ ಇವರು ಸವಾರರಂತೆ ಕಾಣುತ್ತಾರೆ. ತಲೆಗೆ ಪೇಟ, ಮೈಗೆ ಅಂಗಿ ಧರಿಸಿರುತ್ತಾರೆ. ಕುದುರೆ ಕುಣಿತವನ್ನು ಒಂದು ವಿಶಿಷ್ಟ ಗಂಡು ಕಲೆ ಎಂದು ಕರೆಯುತ್ತಾರೆ. [೩೬]

ಬಿಜಾಪೂರ ಜಿಲ್ಲೆಯ ಪರಸಪ್ಪ ಮಾದರ, ಸಾರವಾಡ, ಮಹಾಲಿಂಗಪ್ಪ ವಾಲಿ, ಸಾರವಾಡ, ಚೆನ್ನಪ್ಪ ಹಣಮಂತ ಎಂಟೆತ್ತು, ಕುಂಬಾರಹಳ್ಳಿ, ಅಲ್ಲಾವುದ್ದೀನ್ ನಧಾಫ್, ಹಲಸಂಗಿ, ಶಿವಪ್ಪ ಧನಶೆಟ್ಟಿ, ನಿಡಗುಂದಿ ಇವರುಗಳು ಕೀಲು ಕುದುರೆ ಕುಣಿತದ ಕಲಾವಿದರಾಗಿದ್ದಾರೆ. [೩೭]

### ೨.೨ ಸೂತ್ರದ ಗೊಂಬೆ ಶಿಲ್ಪಗಳು

ಸುಮಾರು ಕ್ರಿ.ಪೂ. ಮೂರು ಸಾವಿರ ವರ್ಷಗಳಷ್ಟು ಹಿಂದೆಯೇ ಚೈನಾದಲ್ಲಿ ಸೂತ್ರದ ಗೊಂಬೆಗಳಿದ್ದವೆಂದು ತಿಳಿದು ಬರುತ್ತದೆ. ಇಂದಿಗೂ ಪ್ರಪಂಚದ ಹದಿನೆಂಟು ರಾಷ್ಟ್ರಗಳಲ್ಲಿ ಸೂತ್ರದ ಗೊಂಬೆ ಆಟದ ಕಲೆಯು ಪ್ರಚಲಿತವಿದೆ. ನಮ್ಮ ದೇಶದ ಪುರಾತನ ಬೌದ್ಧಗ್ರಂಥವೊಂದರಲ್ಲಿ ಸೂತ್ರದ

---

೩೪. ಕಾಗದದ ಚೂರು ಮತ್ತು ಮೆಂತೆಕಾಳುಗಳನ್ನು ನೀರಲ್ಲಿ ನೆನೆ ಹಾಕಿ ನಂತರ ರುಬ್ಬಿ ಜಿಗುಟಾದ ಪದಾರ್ಥವನ್ನು ತಯಾರಿಸಿಕೊಂಡಿರುತ್ತಾರೆ

೩೫. ಪ್ರೊ. ಹಿ.ಚಿ. ಬೋರಲಿಂಗಯ್ಯ (ಸಂ) : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ -೨೨೭,೨೨೮

೩೬. ಪ್ರಜಾವಾಣಿ ದಿನಪತ್ರಿಕೆ : ೧೧-೧೨-೧೯೯೯, ಪುಟ -೧೧

೩೭. ಡಾ. ಆರ್. ಮುನಿಸ್ವಾಮಿ : ಕರ್ನಾಟಕ ಗ್ಯಾಜೇಟೀಯರ್, ಬಿಜಾಪುರ ಜಿಲ್ಲೆ, ಪುಟ -೯೧೩

ಗೊಂಬೆಯ ಪ್ರಸ್ತಾಪವಿದೆ. ಕರ್ನಾಟಕದಲ್ಲಿ ಅಕ್ಕಮಹಾದೇವಿ, ಬಸವಣ್ಣನವರ ವಚನಗಳಲ್ಲಿ, ದಾಸ ಸಾಹಿತ್ಯದಲ್ಲಿ ಸೂತ್ರದ ಗೊಂಬೆಯ ಉಲ್ಲೇಖಗಳಿವೆ. ವಿಜಯನಗರದ ದೊರೆ ಸದಾಶಿವರಾಯ ೧೫೪೩ ನೆಯ ಏಪ್ರೀಲ್ ತಿಂಗಳ ೧೯ ನೆಯ ತಾರೀಖು ಗುರುವಾರ ದಿವಸ ರಾಮಾಯಣದ ಬೊಂಬೆಯಾಟದ ರಾಮಯ್ಯನಿಗೆ ಚಿತ್ರದುರ್ಗ ಜಿಲ್ಲೆಯ ಬಾಗೂರು ಸೀಮೆಯ ಚೆನ್ನಸಮುದ್ರ ಗ್ರಾಮವನ್ನು ದಾನ ನೀಡಿದುದರ ಬಗ್ಗೆ ಉಲ್ಲೇಖವಿದೆ.* ವಿಜಯನಗರದ ದೊರೆ ಸದಾಶಿವರಾಯ ೧೫೪೩ನೆಯ ಎಪ್ರಿಲ್ ತಿಂಗಳು ೧೯ನೆಯ ತಾರೀಖು ಗುರುವಾರ ದಿವಸ ರಾಮಾಯಣದ ಗೊಂಬೆಯಾಟದ ರಾಮಯ್ಯನಿಗೆ ಚಿತ್ರದುರ್ಗ ಜಿಲ್ಲೆಯ ಬಾಗೂರು ಸೀಮೆಯ ಚೆನ್ನಸಮುದ್ರ ಗ್ರಾಮವನ್ನು ದಾನ ನೀಡಿದುದರ ಬಗ್ಗೆ ಉಲ್ಲೇಖವಿದೆ. ಇಂದಿಗೂ ಕರ್ನಾಟಕದಲ್ಲಿ ಸೂತ್ರದ ಗೊಂಬೆಯಾಟದ ಅನೇಕ ಮೇಳಗಳು [೩೮] ಇರುವುದನ್ನು ಕಾಣಬಹುದು.

ಸಾಮಾನ್ಯವಾಗಿ ಸೂತ್ರದ ( ದಾರ ) ಸಹಾಯದಿಂದ ಆಡಿಸಲಾಗುವ ಗೊಂಬೆಯಾಟಕ್ಕೆ ಸೂತ್ರದ ಗೊಂಬೆಯಾಟವೆಂದು ಕರೆಯುತ್ತಾರೆ. ಗೊಂಬೆ ಶಿಲ್ಪಗಳನ್ನು ಸೂತ್ರದ ಗೊಂಬೆಗಳೆಂದು ಕರೆಯಲಾಗುತ್ತದೆ. ಆಟವಾಡಿಸುವವರು ತೆರೆ ಅಥವಾ ಪರದೆಯ ಮರೆಯಲ್ಲೇ ಉಳಿದು ಪ್ರದರ್ಶನ ನೀಡುವದು ಈ ಆಟದ ವೈಶಿಷ್ಠವಾಗಿದೆ. ಬಳ್ಳಾರಿ ಜಿಲ್ಲೆಯ ಹಲವಾಗಲು ಸೂತ್ರದ ಗೊಂಬೆಯಾಟಕ್ಕೆ ತುಂಬಾ ಹೆಸರಾಗಿದೆ. ಈ ಜಿಲ್ಲೆಯ ಇತರೆಡೆಗೂ ಈ ಮೇಳಗಳು ಇದ್ದವು. ಇಂದು ಹಲವಾಗಲದಲ್ಲಿ ಮಾತ್ರ ಉಳಿದುಕೊಂಡಿವೆ. ಯಕ್ಷಗಾನ ಮತ್ತು ಮೂಡಲಪಾಯದ ಅಂಶಗಳನ್ನು ಹಿತಮಿತವಾಗಿ ಬೆರೆಸಿಕೊಂಡಿರುವ ಗೊಂಬೆಯಾಟದ ಶೈಲಿ ವಿಶಿಷ್ಠವಾಗಿದೆ.

**ಸೂತ್ರದ ಗೊಂಬೆ ಶಿಲ್ಪಗಳ ರಚನೆ :** ವೇಷಭೂಷಣಗಳಿಂದ ತುಂಬ ಆಕರ್ಷಕವಾಗಿ ಕಾಣುವ ಸೂತ್ರದ ಗೊಂಬೆಗಳು ಪ್ರಧಾನವಾಗಿ ಕಟ್ಟಿಗೆಯೇ ಮಾಧ್ಯಮವಾಗಿ ಹೊಂದಿ ರಚನೆಗೊಂಡಿರುತ್ತವೆ. ಈ ಶಿಲ್ಪಗಳ ತಯಾರಿಕೆಗೆ ಬೆಳ್‌ನಂದಿ, ಕರಿಹಾಲೆ, ಉತ್ತಿಗ, ಬೂರುಗ, ಸಾಗುವಾನಿ ಮುಂತಾಗಿ ಹಗುರವಾದ ಮರಗಳನ್ನು ಬಳಸಲಾಗುತ್ತದೆ. ಈ ಸೂತ್ರದ ಗೊಂಬೆಗಳಲ್ಲಿ ಪ್ರಧಾನವಾಗಿ ೧. ಪುರುಷ ರೂಪದ ಗೊಂಬೆ ಶಿಲ್ಪಗಳು ೨. ಸ್ತ್ರೀ ರೂಪದ ಗೊಂಬೆಶಿಲ್ಪಗಳು ಎಂದು ಎರಡು ವಿಧಗಳಾಗಿ ವಿಂಗಡಿಸಬಹುದು. ಈ ಶಿಲ್ಪಗಳು ಸುಮಾರಾಗಿ ಒಂದೂವರೆಯಿಂದ ಎರಡೂವರೆ ಅಡಯವರೆಗೂ ಎತ್ತರವಾಗಿರುತ್ತವೆ. ಸ್ತ್ರೀ ಶಿಲ್ಪಗಳಿಗಿಂತ ಪುರುಷ ಶಿಲ್ಪಗಳು ಸ್ವಲ್ಪ ಎತ್ತರವಾಗಿರುತ್ತವೆ. ಈ ಗೊಂಬೆಗಳ ಕೈ, ಕಾಲು, ನಡು, ಕುತ್ತಿಗೆಗಳು ಅಲುಗಾಡುವಂತೆ ಕೀಲಿನ ವ್ಯವಸ್ಥೆ ಇರುತ್ತದೆ. ಈ ಗೊಂಬೆಗಳನ್ನು ಆಯಾ ಪಾತ್ರಗಳ ಆಕಾರಗಳಿಗನುಗುಣವಾಗಿ ಕೆತ್ತಿ ಸುಂದರವಾದ ಬಣ್ಣ ಕೊಡಲಾಗಿರುತ್ತದೆ. ಪಾತ್ರಗಳಿಗನುಗುಣವಾಗಿ ಕೆಂಪು, ನೀಲಿ, ಹಳದಿ ಮುಂತಾಗಿ ಢಾಳ ಬಣ್ಣಗಳನ್ನೇ ಬಳೆಯಲಾಗಿರುತ್ತದೆ. ಗೊಂಬೆಗಳ ಶರೀರ ಭಾಗವಾಗಿರುವ

---

★Mysore Archaeological Report - 1941, Inscription No.-3

೩೮. ಡಾ. ಎಚ್.ಜೆ. ಲಕ್ಕಪ್ಪಗೌಡ (ಸಂ) : ಸುವರ್ಣ ಜಾನಪದ, ಸಂಪುಟ -೧, ಪುಟ -೨೧೧

ಕಟ್ಟಿಗೆಯು ಕಾಣದಂತೆ ಗೊಂಬೆಗಳಿಗೆ ವೇಷಾಲಂಕಾರ ಮಾಡಲಾಗಿರುತ್ತದೆ. ಮೊದಲು ಮಾಡಬೇಕಾದ ನಿರ್ಧಾರಿತ ಶಿಲ್ಪವನ್ನು ಮರದ ತುಂಡಿನಲ್ಲಿ ಅಳತೆಗೆ ತಕ್ಕಂತೆ ಕತ್ತರಿಸಿ ಅದರಲ್ಲಿ ಅರ್ಧಭಾಗ ಮುಖದಕ್ಕೂ ಭಾಗಕ್ಕೂ, ಅರ್ಧಭಾಗ ಕಿರೀಟಕ್ಕೂ, ಕೇದಗೆ ಮುಂದಲೆಗೂ ಬಿಡಲಾಗುತ್ತದೆ. ಕಿವಿ ಆಭರಣ, ಹಣೆಪಟ್ಟಿ ಮೊದಲಾದವುಗಳನ್ನು ಅದರಲ್ಲಿಯೇ ಮಾಡಿರುತ್ತಾರೆ. ಗೊಂಬೆಗಳ ದೇಹ, ತೋಳು, ಕೈ, ತೊಡೆ, ಕಾಲು ಮುಂತಾದವುಗಳನ್ನು ಒಂದೇ ತುಂಡಿನಲ್ಲಿ ಕೆತ್ತಲಾಗುವದಿಲ್ಲ. ಇವುಗಳನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ನಿರ್ಮಿಸಲಾಗುತ್ತದೆ. ನಂತರ ಒಂದನ್ನೊಂದು ಹಗ್ಗದಿಂದ ಜೋಡಿಸಿರುತ್ತಾರೆ. ಎಲ್ಲಾ ಗೊಂಬೆ ಶಿಲ್ಪಗಳ ಕೈ, ಕಾಲು ಒಂದೇ ತೆರನಾಗಿರುವದಿಲ್ಲದಿರುವದು ವಿಶೇಷ. ಪ್ರತಿಯೊಂದು ಗೊಂಬೆ ಶಿಲ್ಪವನ್ನು ಅಷ್ಟಮಾಂಶ[೩೯] ಪದ್ಧತಿಗನುಗುಣವಾಗಿ ನಿರ್ಮಾಣ ಮಾಡಲಾಗಿರುತ್ತದೆ. ರಾಕ್ಷಸ ಗೊಂಬೆಗಳನ್ನು ವಿಕಾರವಾಗಿರುವಂತೆ ತಯಾರು ಮಾಡಿರುತ್ತಾರೆ. ಇಂತಹ ಶಿಲ್ಪಗಳಲ್ಲಿ ಮುಖಕ್ಕೆ ಹೆಚ್ಚು ಗಮನ ಕೊಟ್ಟಿರುತ್ತಾರೆ. ಕಣ್ಣುಗಳು, ಬಾಯಿ, ಮೀಸೆ, ದಾಡಿ ವಿಕಾರವಾಗಿ, ಭಯ ಹುಟ್ಟಿಸುವಂತೆ ಮುಖದ ಅಳತೆಗೆ ತಕ್ಕಂತೆ ರಚಿಸಲಾಗಿರುತ್ತದೆ. ಒಂದೇ ಮರದಲ್ಲಿ ಅದರ ಕಿರೀಟವನ್ನು ನಿರ್ಮಿಸಿರುತ್ತಾರೆ. ರಾಕ್ಷಸ ಗೊಂಬೆಗಳ ಕೈ ಕಾಲುಗಳು, ದೇಹದ ಅಳತೆಗೆ ತಕ್ಕಂತಿರುವದಿಲ್ಲ. ಕೈ ಕಾಲು ದೊಡ್ಡದಾಗಿರುತ್ತವೆ. ಇದರ ಅಂಗದಿಂದಲೇ ಭಾವ ಹುಟ್ಟಿಸಬೇಕು. ಹೀಗಾಗಿ ಅಂಗ ಭಾಷೆಯ ಗೊಂಬೆಯಾಟವೆಂತಲೂ ಈ ಕಲೆಯನ್ನು ಕರೆಯುತ್ತಾರೆ. ಉಳಿದ ಗೊಂಬೆ ಶಿಲ್ಪಗಳಿಗೆ ಸಾಧಾರಣ ಆರು ಸೂತ್ರಗಳಾದರೆ, ಇಂತಹ ಭಾರವಾದ ರಾಕ್ಷಸ ಗೊಂಬೆಗಳ ಸೂತ್ರ ಆರಕ್ಕಿಂತ ಹೆಚ್ಚು. ಇಲ್ಲಿ ಕ್ರೂರ ಪಾತ್ರಗಳಿಗೆ ಕೆಂಪು, ಹಳದಿ, ಕಪ್ಪು ಬಣ್ಣಗಳನ್ನು ಉಪಯೋಗಿಸುತ್ತಾರೆ. ಬಟ್ಟೆ ವಿನ್ಯಾಸಗಳಲ್ಲೂ ಇದೇ ಬಣ್ಣಕ್ಕೆ ಪ್ರಾಶಸ್ತ್ಯ. ವೇಶಭೂಷಣಗಳನ್ನು ಯಕ್ಷಗಾನ ವೇಶಧಾರಿಗಳಲ್ಲಿರುವಂತೆಯೇ ತಯಾರು ಮಾಡುತ್ತಾರೆ.

ಗೊಂಬೆಯಾಟದಲ್ಲಿ ಪ್ರತಿಯೊಂದು ಗೊಂಬೆಗೂ ಮುಖದ ಭಾವಕ್ಕೆ ಹೆಚ್ಚು ಆಧ್ಯತೆ. ಸ್ತ್ರೀ ವೇಷ, ಪುರುಷ ವೇಷ, ಹಾಸ್ಯ ಮೊದಲಾದವುಗಳನ್ನು ನಿರ್ಮಾಣದ ಮೊದಲ ಹಂತದಲ್ಲೇ ಆ ಪಾತ್ರದ ಭಾವ ತುಂಬುವಂತೆ ತಯಾರು ಮಾಡುತ್ತಾರೆ. ಕೃಷ್ಣನಾಗಿದ್ದಲ್ಲಿ ಆ ಪಾತ್ರದ ವೇಷ ಇತರ ವೇಷಕ್ಕಿಂತ ಭಿನ್ನವಾಗಿರುತ್ತದೆ. ಇದನ್ನು ನೀಲ ವರ್ಣದಿಂದ ಶೋಭಿಸುವಂತೆ ಮಾಡಿರುತ್ತಾರೆ. ಇಂತಹ ಗೊಂಬೆಗಳಲ್ಲಿ ಮುಖಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಲಾಗಿರುತ್ತದೆ.

ಪ್ರತಿಯೊಂದು ಗೊಂಬೆಗಳ ನಿರ್ಮಾಣದ ಮೊದಲು ಆ ಪಾತ್ರದ ರೂಪುರೇಷೆ, ಚಿತ್ರಣಗೊಂಡಿರುತ್ತದೆ. ಕೆತ್ತನೆ ಕಾರ್ಯ ಮುಗಿದ ನಂತರ ಬಿಡಿ ಭಾಗಗಳನ್ನು ಹಗ್ಗದಿಂದ ಜೋಡಿಸಿ ಗೊಂಬೆಯ ಅಸ್ತಿಪಂಜರ ಸಿದ್ಧಗೊಳಿಸಿರುತ್ತಾರೆ. ನಂತರ ಬಣ್ಣ ಬಳೆಯುತ್ತಾರೆ. ನಂತರ ಆಯಾ ಪಾತ್ರಕ್ಕೆ ತಕ್ಕಂತೆ ಆಭರಣಗಳಿಗೆ ಬೆಂಗಡೆ[೪೦] ಅಂಟಿಸುತ್ತಾರೆ. ಇಲ್ಲಿ ಮಾರುಕಟ್ಟೆಯಲ್ಲಿ ಸಿಗುವ ಅಂಟನ್ನು

೩೯. ಅಷ್ಟಮಾಂಶ : ಮುಖದ ಎಂಟು ಪಟ್ಟು
೪೦. ಚಿನ್ನದಂತೆ ಹೊಳೆಯುವ ಝರಿ ಕಾಗದ

[illegible]

[illegible]

[illegible]

[illegible]

ಉಪಯೋಗಿಸುವದಿಲ್ಲ. ಬದಲಾಗಿ ಅವರೇ ವಿಶಿಷ್ಟವಾದ ಅಂಟನ್ನು ತಯಾರು ಮಾಡಿರುತ್ತಾರೆ. ಇದನ್ನು ಹಲಸಿನ ಮೇಣ ಹಾಗೂ ಜೇನು ಮೇಣಗಳ ಮಿಶ್ರಣವನ್ನು ಬಿಸಿಮಾಡಿ ತಯಾರಿಸಿರುತ್ತಾರೆ. ಇದರಿಂದ ಬೆಂಗಡೆ ಶಾಶ್ವತವಾಗಿ ಅಂಟಿಕೊಂಡಿರುತ್ತದೆ, ಹಾಗೂ ಕಾಂತಿಯುಕ್ತವಾಗಿರುತ್ತದೆ. ಇದಾದ ನಂತರ ವಸ್ತ್ರಾಭರಣ ಹಾಗೂ ಭುಜಕೀರ್ತಿ, ಎದೆ ಕಟ್ಟು, ಸೊಂಟಪಟ್ಟಿ, ಗೆಜ್ಜೆ, ಕಾಲುಗಡಗ, ವೀರಕಸೆ ಜೋಡಿಸುತ್ತಾರೆ. ಇವುಗಳಿಂದ ಗೊಂಬೆಗಳು ತಯಾರಾಗುತ್ತವೆ. ಹಾಗೂ ಸೂತ್ರದ ಜೋಡಣೆಯಿಂದ ಪರಿಪೂರ್ಣವೆನಿಸುತ್ತವೆ.

ಎಲ್ಲಾ ಗೊಂಬೆಗಳಂತೆ ಹನುಮಂತನ ಗೊಂಬೆಗಳನ್ನು ತಯಾರು ಮಾಡುವದು ಅಷ್ಟು ಸರಳವಲ್ಲ. ಅತ್ಯಂತ ಕ್ಲಿಷ್ಟಕರ ಹಾಗೂ ಕುತೂಹಲಕಾರಿ. ಇಂತಹ ಗೊಂಬೆ ಶಿಲ್ಪಗಳಲ್ಲಿ ತಲೆ ಭಾಗ, ಕೈಕಾಲು ಮತ್ತು ಪಾದಗಳು ಮಾತ್ರ ಮರದ್ದು. ಇವುಗಳನ್ನು ದೇಹಕ್ಕೆ ದಾರದಿಂದ ಜೋಡಿಸುತ್ತಾರೆ. ಯಾಕೆಂದರೆ ಇವುಗಳ ಕೈ ಕಾಲುಗಳು ಎಲ್ಲಾ ರೀತಿಯ ಚಾಲನೆಗೆ ಸಾಧ್ಯವಾಗುವಂತೆ ರೂಪಿಸಲಾಗುತ್ತದೆ. ನಂತರ ದೇಹ ಹಾಗೂ ದಾರಗಳ ಮೇಲೆ ರೋಮದಂತೆ ಕಂಗೊಳಿಸಲು, ಗೋಣಿಚೀಲದ ದಾರಗಳನ್ನು ಅತೀ ಚಾಣಾಕ್ಷತೆಯಿಂದ ಬಳಸುತ್ತಾರೆ. ಇದು ಥಟ್ಟನೆ ನೋಡಿದರೆ ರೋಮದಂತೆ ಕಂಗೊಳಿಸುತ್ತದೆ. ಇದರಲ್ಲಿ ಶ್ರಮ ಅಧಿಕ ಹಾಗೂ ಹನುಮಂತನ ಗೊಂಬೆಶಿಲ್ಪದ ಮುಖವರ್ಣಿಕೆ ಬೇರೆ ವಿಧದ ಶಿಲ್ಪಗಳಿಗಿಂತ ಭಿನ್ನ. ಇದರ ಮೂಗು, ಬಾಯಿಯ ಭಾಗವನ್ನು ತಯಾರಿಕೆಯ ಹಂತದಲ್ಲಿ ರೂಪಕ್ಕನುಗುಣವಾಗಿ ಪೂರ್ಣಗೊಳಿಸಲ್ಪಡುತ್ತವೆ. ಹಾಗೂ ಇಂತಹ ಗೊಂಬೆಗಳಿಗೆ ಹಸಿರು ಬಣ್ಣಕ್ಕೆ ಪ್ರಾತಿನಿಧ್ಯ ಹೆಚ್ಚು. ನಂತರ ಹನುಮಾನ್ ಚಡ್ಡಿಯೊಂದಿಗೆ ಗೋಣಿಚೀಲದಿಂದ ವಿಶೇಷವಾಗಿ ತಯಾರಿಸಿದ ಬಾಲವನ್ನು ಜೋಡಿಸುತ್ತಾರೆ. ಎಲ್ಲಾ ಗೊಂಬೆಗಳಿಗಿಂತ ಇಂತಹ ಗೊಂಬೆಗಳ ತಯಾರಿ ತುಂಬಾ ಕಷ್ಟಕರ. ಆದರೆ ಇಂತಹ ಗೊಂಬೆಗಳ ಕುಣಿತ ಚಿಕ್ಕಮಕ್ಕಳಿಂದ ಹಿಡಿದು ವಯೋವೃದ್ಧರವರೆಗೆ ಎಲ್ಲರಿಗೂ ಸಂತೋಷ ಕೊಡುವಂತಹುದು.

**ಬಣ್ಣಗಾರಿಕೆ**[೪೧] : ಸೂತ್ರದ ಗೊಂಬೆಗಳಿಗೆ ಬಣ್ಣ ಬಳೆಯುವದು ಅತ್ಯಂತ ಕುತೂಹಲಕರವಾದುದು. ದೇಶೀವರ್ಣಗಳನ್ನೇ ಇವುಗಳಿಗೆ ಬಳಸುತ್ತಾರೆ. ಹರಿದಾಳ, ನೀಲಿ, ಕೆಂಪು, ಕಪ್ಪು, ಬಿಳಿ, ಹಳದಿ, ಹಸಿರು ಈ ವರ್ಣಗಳ ಜೊತೆಗೆ ಮಿನುಗುವ ವರ್ತಿ, ಗಚ್ಚಿನ ಎಣ್ಣೆ, ಅರಗು, ಜೊತೆಗೆ ಬಾಳಿಕೆ ಮತ್ತು ಹೊಳಪು ಬರುವದಕ್ಕಾಗಿ ಬೇವಿನ ಅಂಟು ಮತ್ತು ಕೋಳಿ ಮೊಟ್ಟೆಯ ಬಿಳಿ ದ್ರವವನ್ನು ಬಣ್ಣದೊಡನೆ ಬೆರೆಸುತ್ತಾರೆ.

**ನಂಬಿಕೆ :** ಸೂತ್ರದ ಗೊಂಬೆಯಾಟದ ಮೂಲ ಉದ್ದೇಶ ಮನರಂಜನೆಯೆನಿಸಿದರೂ ಈ ಆಟ ಆಡಿಸುವದರಿಂದ ಗ್ರಾಮಕ್ಕೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಬೆಳೆದು ಬಂದಿದೆ.

### ೨.೩ ಚಂದಾಳ ಗೊಂಬೆ ಶಿಲ್ಪಗಳು

---

೪೧. ಸರ್ವಾಧ್ಯಕ್ಷರ ಭಾಷಣ : ಪಿ.ಆರ್. ತಿಪ್ಪೇಸ್ವಾಮಿ, ಇಪ್ಪತ್ತೈದನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ, ಧಾರವಾಡ, ೧೯೯೯

3



ಚಂದಾಳ ಗೊಂಬೆ ಶಿಲ್ಪಗಳು ( ಐಡಿಯಲ್ ಫೈನ್ ಆರ್ಟ್ ಸಂಸ್ಥೆ, ಗುಲಬರ್ಗಾ )

ಚಿಕ್ಕಮಕ್ಕಳ ಆಟಿಕೆಗೆ ಅತ್ಯಂತ ಆಕರ್ಷಕವಾದ ಚಂದಾಳಗೊಂಬೆ ಶಿಲ್ಪಗಳು ಉತ್ತರ ಕರ್ನಾಟಕದ ಮನೆ ಮನೆಗಳಲ್ಲಿ ದೊರೆಯುತ್ತವೆ. ಪ್ರಾಚೀನ ಕಾಲದಿಂದಲೂ ಈ ಶಿಲ್ಪಗಳು ಹುಟ್ಟಿಕೊಂಡು ಬಂದಿರಬಹುದು. ಆದರೆ ಕಾಲವನ್ನು ನಿರ್ಧಿಷ್ಟವಾಗಿ ಹೇಳಲಾಗದು. ಸಾಮಾನ್ಯವಾಗಿ ಈ ಶಿಲ್ಪಗಳು ಎರಡು ಅಥವಾ ಮೂರು ಅಂಗುಲದಿಂದ ಹಿಡಿದು ಒಂದು ಅಡಿ ಎತ್ತರದವರೆಗೆ ಇರುತ್ತವೆ. ಈ ಶಿಲ್ಪಗಳು ೧೦ ರಿಂದ ೧೬ ವರ್ಷ ವಯಸ್ಸಿನೊಳಗಿನ ಮಕ್ಕಳಂತೆ ಕಂಡುಬರುತ್ತವೆ.

**ರಚನೆ :** ಚಂದಾಳ ಗೊಂಬೆ ಶಿಲ್ಪಗಳನ್ನು ಕಂದು ಮಿಶ್ರಿತ ಕಪ್ಪು ಬಣ್ಣದ ಕಟ್ಟಿಗೆಯಲ್ಲಿ ರಚಿಸಲಾಗಿರುತ್ತದೆ. ಶಬ್ಧಕೋಶದಲ್ಲಿ [೪೨] ಚಂದಾಳ ಎಂಬುದಕ್ಕೆ ಚಂದನ (ನಾ) ಎಂಬ ಅರ್ಥವಿದೆ. ಚಂದನವೆಂಬುದು ಶ್ರೀಗಂಧ ಅಥವಾ ಗಂಧದ ಮರಕ್ಕೆ ಇರುವ ಮತ್ತೊಂದು ಹೆಸರು. ಬಹುಶಃ ಮೊದಲು ಗಂಧದ ಮರದಿಂದಲೇ ಈ ಶಿಲ್ಪಗಳನ್ನು ಮಾಡುತ್ತಿದ್ದರೆಂದು ತೋರುತ್ತದೆ. ಚಂದಾಳ ಗೊಂಬೆಗಳನ್ನು ಪಂಚಾಳರು ರಚಿಸಿರುತ್ತಾರೆ. ಕೆತ್ತಿ ನಿರ್ಮಿಸಲಾಗುವ ಈ ಶಿಲ್ಪಗಳು ಆಧುನಿಕ ಶಿಲ್ಪಕಲೆಯ ಘನಾಕೃತಿ ( Qubism ) ಶೈಲಿಯನ್ನು ನೆನಪಿಸುತ್ತವೆ. ಈ ಶಿಲ್ಪಗಳ ನಿರ್ಮಿತಿಯಲ್ಲಿ ಪ್ರಮಾಣಬದ್ಧತೆಗೆ ಆಧ್ಯತೆಯಿರುವದಿಲ್ಲ. ಹೀಗಾಗಿ ಇವು ಆಚರಣಾತ್ಮಕವಾಗಿ ಹಾಗೂ ರಾಚನಿಕವಾಗಿ ಅಪ್ಪಟ ಜಾನಪದೀಯವಾಗಿರುತ್ತವೆ. ಸಾಮಾನ್ಯವಾಗಿ ತಲೆ ದೊಡ್ಡದಾಗಿಯೂ, ಕುತ್ತಿಗೆಯಿಂದ ಸೊಂಟದ ವರೆಗಿನ ದೇಹಭಾಗವು ಕಿರಿದಾಗಿಯೂ ಹಾಗೂ ಸೊಂಟಭಾಗದಿಂದ ಕಿಬ್ಬೊಟ್ಟೆಯನ್ನೊಳಗೊಂಡು ಪಾದದವರೆಗಿನ ಭಾಗ ಅದರಲ್ಲೂ ಕಾಲುಗಳು ಉದ್ದವಾಗಿಯೂ ರಚಿಸಲಾಗಿರುತ್ತದೆ. ಈ ಶಿಲ್ಪಗಳು ನಿಲ್ಲಲು ಅನುವಾಗುವಂತೆ ಕೆಳಗೆ ಗದ್ದುಗೆಯನ್ನು ನಿರ್ಮಿಸಲಾಗಿರುತ್ತದೆ. ಈ ಶಿಲ್ಪಗಳಲ್ಲಿ ಯಾವುದೇ ಅವಯವವಾಗಲೀ, ಅಥವಾ ಗದ್ದುಗೆ ಭಾಗವಾಗಲೀ ಪ್ರತ್ಯೇಕವಾಗಿ ರಚನೆಯಾಗಿರುವದಿಲ್ಲ. ಅಖಂಡ ಕಟ್ಟಿಗೆಯ ತುಂಡೊಂದರಲ್ಲೇ ಒಂದೊಂದು ಶಿಲ್ಪವನ್ನು ರಚಿಸಲಾಗಿರುತ್ತದೆ.

**ಅಲಂಕಾರ :** [೪೩] ಅಲಂಕಾರದ ದೃಷ್ಟಿಯಿಂದ ಚಂದಾಳ ಗೊಂಬೆ ಶಿಲ್ಪಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು. ೧. ಅಲಂಕೃತ ಕೆತ್ತನೆಯ ಗೊಂಬೆ ಶಿಲ್ಪಗಳು ೨. ಸರಳಗೆತ್ತನೆಯ ಗೊಂಬೆ ಶಿಲ್ಪಗಳು.

ಅಲಂಕೃತ ಕೆತ್ತನೆಯ ಗೊಂಬೆ ಶಿಲ್ಪಗಳು ಆಕಾರದಲ್ಲಿ ಸರಳಗೆತ್ತನೆಯ ಗೊಂಬೆಗಳಿಂದ ಯಾವುದೇ ರೀತಿಯಿಂದ ಭಿನ್ನವಾಗಿರುವದಿಲ್ಲ. ಸರಳಗೆತ್ತನೆಯ ಗೊಂಬೆಶಿಲ್ಪಗಳಿಗೆ ಆಭರಣವಾಗಲೀ, ವೇಷಭೂಷಣಗಳಾಗಲೀ ಕೆತ್ತನೆಯಲ್ಲಿ ತೋರಿಸುವದಿಲ್ಲ. ಆದರೆ ಅಲಂಕೃತ ಗೊಂಬೆಗಳಲ್ಲಿ ಇವನ್ನೆಲ್ಲ ಕೆತ್ತಿ, ಕೊರೆದು ತೋರಿಸಲಾಗಿರುತ್ತದೆ. ತಲೆಯ ಮೇಲೆ ಕೂದಲು ಇರುವಂತೆ ತೋರಿಸಲು ಉಳಿಯಿಂದ ಗೆರೆ ಕೊರೆಯಲಾಗಿರುತ್ತದೆ. ತಲೆಯ ಹಿಂದೆ ಒಂದು ಇಲ್ಲವೆ ಎರಡು ಹೆಳಲುಗಳನ್ನು ಮಾಡಿರುತ್ತಾರೆ. ಅವು ನೈಜ ಕೂದಲಿನ ಹೆಣಿಕೆಯಂತೆ ಕೆತ್ತಲಾಗಿರುತ್ತದೆ. ಕಣ್ಣು, ಕಿವಿ, ಮೂಗು, ಬಾಯಿಗಳ

---

೪೨. ಗುರುನಾಥ ಜೋಶಿ, ಅಶ್ವತ್ಥನಾರಾಯಣ : ಕನ್ನಡ-ಕನ್ನಡ ಶಬ್ಧಕೋಶ, ಪುಟ -೧೧೦

೪೩. ವಿಶೇಷವೆಂದರೆ ಚಂದಾಳ ಗೊಂಬೆಗಳಿಗೆ ಬಣ್ಣ ಬಳೆಯುವುದಿಲ್ಲ. ಇದಕ್ಕೆ ಕಾರಣವೂ ತಿಳಿಯುವುದಿಲ್ಲ

ಸಂಯೋಜನೆಯಿಂದ ಶಿಲ್ಪದ ಒಟ್ಟು ಮುಖಭಾವ ನಗುಮುಖವಾಗಿರುತ್ತದೆ. ಕೊರಳಲ್ಲಿ ಕಂಠಹಾರದಂತೆ ಕೆತ್ತಲಾಗಿರುತ್ತದೆ. ಎರಡೂ ಭುಜಗಳಲ್ಲಿ ಭುಜಕೀರ್ತಿಯಂತೆ ಕೆತ್ತಿ, ಗೆರೆಗಳನ್ನು ಕೊರೆದು ಅಂದವಾಗಿ ರಚಿಸಲಾಗಿರುತ್ತದೆ. ಕೆಲವೊಮ್ಮೆ ಎದೆಗೆ ಹೆಣಿಕೆಯ ಕುಪ್ಪಸದಂತೆ ರಚಿಸಿರುತ್ತಾರೆ. ಕೆಲವೊಂದು ಗೊಂಬೆ ಶಿಲ್ಪಗಳ ಕಿವಿಯಲ್ಲಿ, ಮೂಗಿನಲ್ಲಿ ಮುತ್ತು ಜೋಡಿಸಿದ ಕಿವಿಯೋಲೆ, ನತ್ತುಗಳನ್ನು ತೂತು ಕೊರೆದು ಸಿಕ್ಕಿಸಿ ಅಲಂಕರಿಸಿರುತ್ತಾರೆ.

ಅಲಂಕೃತ ಗೊಂಬೆಗಳ ಕೊರಳಲ್ಲಿ ಕಂಠಹಾರ ಕೆತ್ತಲಾಗಿರುತ್ತದೆ. ಎರಡೂ ಭುಜಗಳಲ್ಲಿ ಭುಜಕೀರ್ತಿಯನ್ನು ಮಾಡಲಾಗಿರುತ್ತದೆ. ಕೆಲವೊಮ್ಮೆ ಎದೆಗೆ ಹೆಣಿಕೆಯ ಕುಪ್ಪಸದಂತೆ ಕೆತ್ತಲಾಗಿರುತ್ತದೆ.ಎರಡೂ ತೋಳುಗಳಿಗೆ ತೋಳಬಂಧಿಯಂತೆ ಅಥವಾ ಕುಪ್ಪಸದ ಅಂಚಿನಂತೆ ಗೀರು ಕೊರೆಯಲಾಗಿರುತ್ತದೆ. ಸಾಮಾನ್ಯವಾಗಿ ಅಗಲವಾದ ಕತ್ತರಿ ಹೆಣಿಕೆಯಂತಹ ಕೆಳ ಉಡುಗೆಯ ಸೊಂಟ ಪಟ್ಟಿ ಮಾಡಲಾಗಿರುತ್ತದೆ. ಮುಂಗೈಯಲ್ಲೂ ಹಾಗೂ ಕಾಲುಗಳಲ್ಲಿ ಕಡಗ ತೊಡಿಸಿದಂತೆ ಗೆರೆ ಚಿತ್ರ ಕೊರೆಯಲಾಗಿರುತ್ತದೆ. ಸೊಂಟದಿಂದ ಕೆಳ ಉಡುಗೆಯು ಪೈಜಾಮದಂತೆ ಇರುತ್ತದೆ. ಸರಳಗೆತ್ತನೆಯ ಗೊಂಬೆ ಬೆತ್ತಲೆಯಂತೆ ಕಂಡು ಬರುತ್ತದೆ. ಅಲಂಕೃತ ಗೊಂಬೆಯೇ ಇರಲಿ, ಸರಳಗೆತ್ತನೆಯ ಗೊಂಬೆಯೇ ಇರಲಿ ಕೈ ಮತ್ತು ಕಾಲು ಬೆರಳುಗಳನ್ನು ಉಳಿಯಿಂದ ಗೀರು ಕೊರೆದು ತೋರಿಸಲಾಗಿರುತ್ತದೆ.

**ಆಚರಣೆ :** ಗ್ರಾಮೀಣ ಹುಡುಗಿಯರು ಋತುಮತಿಯರಾದ ದಿವಸದಿಂದ ಒಂಭತ್ತು ದಿವಸಗಳವರೆಗೆ ಅವಳು ಕೈಯಲ್ಲಿ ಹಿಡಿದುಕೊಳ್ಳಲು ಇಲ್ಲವೆ ಪಕ್ಕಕ್ಕೆ ಕೂಡ್ರಿಸಿಕೊಳ್ಳಲು ಈ ಗೊಂಬೆಯನ್ನು ಕೊಡುತ್ತಾರೆ. ಈ ಗೊಂಬೆಯು ಆ ಋತುಮತಿಯಾದ ಹೆಣ್ಣಿಗೆ ನೀನು ಮಗುವಿಗೆ ಜನ್ಮ ಕೊಡುವದಕ್ಕಾಗಿ ಸಮರ್ಥಳಾದೆ [೪೪] ಎಂಬುದನ್ನು ಸೂಚಿಸುವ ಸಂಕೇತವಾಗಿದೆ. ಹುಡುಗಿ ಕನ್ಯೆಯಾಗಿ ಒಂಭತ್ತು ದಿವಸಗಳ ಕಾಲ ಆ ಗೊಂಬೆಯೊಂದಿಗೆ ಏನೆಲ್ಲಾ ಕಲ್ಪನೆಗಳನ್ನು ಮಾಡಿಕೊಳ್ಳುತ್ತಾ ಅಲಂಕೃತ ಮಂಟಪದಲ್ಲಿ ಸಂತೋಷ ಪಡುತ್ತಾಳೆ. ನಿತ್ಯ ಸಂಜೆ ಓಣಿಯ ಹೆಂಗಸರು, ಯುವತಿಯರು ಸೇರಿ ಅವಳ ಮುಂದೆ ಕುಳಿತು ಹಾಡು ಹೇಳಿ ಆರತಿ ಮಾಡುವರು. ಒಂಭತ್ತನೇ ದಿವಸ ಎಬ್ಬಿಸುವಾಗ ಕೆಲವು ಹೆಣ್ಣುಮಕ್ಕಳು ಸೇರಿಕೊಂಡು ಹೊಸ ಬಟ್ಟೆಯಿಂದ ತೊಟ್ಟಿಲು ಮಾಡಿ ಅದರಲ್ಲಿ ಈ ಚೆಂದಾಳ ಗೊಂಬೆಯನ್ನು ಕೂಸಿನಂತೆ ಮಲಗಿಸಿ ತೂಗುತ್ತಾರೆ.

**ನಂಬಿಕೆ :** ಕೆಲವೊಂದು ಸ್ತ್ರೀಯರಿಗೆ ಮಕ್ಕಳು ಹುಟ್ಟುತ್ತಲೇ ಸಾಯುತ್ತಿರುತ್ತವೆ. ಅದಕ್ಕೆ ವೈಜ್ಞಾನಿಕ ಕಾರಣವಿರಬಹುದು ಇಲ್ಲವೆ ರೋಗ ರುಜಿನಗಳು ಕಾರಣವಿರಬಹುದು. ಆದರೆ ಜನಪದರು ಅದರಿಂದ ಮುಕ್ತಿ ಪಡೆಯುವ ಉದ್ದೇಶದಿಂದ ಮಕ್ಕಳು ದಕ್ಕದ ಹೆಂಗಸರಿಗೆ ಈ ಚೆಂದಾಳ ಗೊಂಬೆಯನ್ನು ಉಡಿ ತುಂಬುವ ಕಾರ್ಯಕ್ರಮ ಮಾಡುತ್ತಾರೆ. [೪೫] ಹುಟ್ಟಿದ ಮಕ್ಕಳು ಬದುಕಿಕೊಳ್ಳುತ್ತವೆ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಈ ರೀತಿ ಮಾಡುವ ಸಂಪ್ರದಾಯ ರೂಢಿಯಲ್ಲಿದೆ.

---

೪೪. ಮುಟ್ಟ ಕಂಡೆ, ಮುಡಚಟ ಕಂಡೆ
ಮುತ್ತಿನಂತ ಮಗು ಕಂಡೆ

ತೀರ ಚಿಕ್ಕ ಗಾತ್ರದ ಚೆಂದಾಳ ಗೊಂಬೆಗಳನ್ನು ಮಗುವನ್ನು ಮಲಗಿಸುವ, ತೂಗಿ ಆಡಿಸುವ ಸಲುವಾಗಿ ಮಾಡಲಾದ ತೊಟ್ಟಿಲಕ್ಕೆ ಕಟ್ಟುವ ಗುಬ್ಬಿ ಚೆಟ್ಟಿಯಲ್ಲಿ ಬಳಸುವರು. ಈ ಚೆಟ್ಟಿಯನ್ನು ಮಲಗುವ ಮಗುವಿನ ಅಭಿಮುಖವಾಗಿ ಮೇಲೆ ಕಟ್ಟುವರು.

ಚೆಂದಾಳ ಗೊಂಬೆಗಳಲ್ಲದೆ ಮಕ್ಕಳ ಆಟಿಕೆಯಲ್ಲಿ ಹಲವಾರು ಬಗೆಯ ಮರದಶಿಲ್ಪಗಳು ಬಳಸಲ್ಪಡುತ್ತವೆ. ಅವು ಕೂಸಿನ ಗೊಂಬೆ ಶಿಲ್ಪಗಳು, ಕೊಡದ ಗೊಂಬೆ ಶಿಲ್ಪಗಳು ಎಂದು ಮುಂತಾಗಿ ಇರುತ್ತವೆ. ಕೂಸಿನ ಗೊಂಬೆಶಿಲ್ಪಗಳು ಬಗಲಲ್ಲಿ ಕೂಸನ್ನು ಹೊತ್ತಿರುತ್ತವೆ. ಕೊಡದ ಗೊಂಬೆಗಳು ಬಗಲಲ್ಲಿ ಇಲ್ಲವೆ ತಲೆಯ ಮೇಲೆ ಕೊಡವನ್ನು ಹೊತ್ತವುಗಳಾಗಿರುತ್ತವೆ. ಹೀಗೆ ಮರದ ಮಾಧ್ಯಮದ ಸೌಂದರ್ಯ ಮೂಲ ಜನಪದ ಶಿಲ್ಪಕಲೆಯು ಪ್ರಯೋಜನದ ಹಿನ್ನೆಲೆಯಲ್ಲಿ ಬೆಳೆದು ಬಂದಿರುವಂತೆ, ಮನರಂಜನ ಮೂಲದ ಹಿನ್ನೆಲೆಯಲ್ಲೂ ಬೆಳೆದು ಬಂದಿದ್ದು ಗಮನಾರ್ಹವಾಗಿದೆ. ಕೀಲುಕುದುರೆ ಶಿಲ್ಪಗಳು, ಸೂತ್ರದ ಗೊಂಬೆ ಶಿಲ್ಪಗಳು ಮತ್ತು ಚೆಂದಾಳ ಗೊಂಬೆಗಳಂತಹ ಶಿಲ್ಪಗಳು ನಮ್ಮ ಜನಪದ ಸಮೂಹದ ಮಧ್ಯೆ ಪ್ರದರ್ಶನಗೊಂಡು ಅವರಿಗೆ ರಂಜನೆಯನ್ನು ನೀಡುವಲ್ಲಿ ಮಹತ್ವದ ಮಾಧ್ಯಮಗಳಾಗಿ ಪ್ರಾಮುಖ್ಯತೆಯನ್ನು ಪಡೆದಿವೆ. ತಮ್ಮ ದುಡಿಮೆಯ ಬದುಕಿನ ಬಿಡುವಿನ ವೇಳೆಯಲ್ಲಿ ಇಂಥ ಶಿಲ್ಪಗಳನ್ನು ರಚಿಸಿ ಅವುಗಳ ಪ್ರದರ್ಶನವನ್ನು ಹಮ್ಮಿಕೊಂಡು ರಂಜನೆ ಪಡೆಯುವದರೊಂದಿಗೆ ಅನೇಕ ಐತಿಹಾಸಿಕ, ಸಾಮಾಜಿಕ, ಪೌರಾಣಿಕ ಸಂಗತಿಗಳನ್ನು ಮೆಲುಕು ಹಾಕುವಂತ ಸನ್ನಿವೇಶಗಳನ್ನು ನಿರ್ಮಿಸಿಕೊಂಡು ಸುಸಂಸ್ಕೃತರಾಗುತ್ತ ಬಂದಿರುವುದನ್ನು ಕಾಣಬಹುದಾಗಿದೆ. ಚೆಂದಾಳ ಗೊಂಬೆಯಂತಹ ಶಿಲ್ಪಗಳು ಜನಪದರ ಬದುಕಿನ ಒಂದು ವಿಶಿಷ್ಟ ಆಯಾಮವನ್ನೇ ತಿಳಿಸುವಂತಹುಗಳಾಗಿವೆ.

## ೨. ಮರದ ಮಾಧ್ಯಮದ ಧರ್ಮಮೂಲ ಜನಪದ ಶಿಲ್ಪಕಲೆ

ಧರ್ಮವು ನಮ್ಮ ಜನಪದರ ಬದುಕಿನಲ್ಲಿ ಮಹತ್ವದ ಪಾತ್ರ ವಹಿಸಿದೆ. ಅವರ ಬದುಕನ್ನು ಮತ್ತು ಬದುಕಿನ ಪ್ರತಿಯೊಂದು ಆಯಾಮವನ್ನು ಧರ್ಮವೇ ಆವರಿಸಿಕೊಂಡು, ನಿಯಂತ್ರಿಸಿಕೊಂಡು ಬಂದಿದೆ ಎಂಬುದನ್ನು ಮರದ ಮಾಧ್ಯಮದ ಧರ್ಮಮೂಲ ಜನಪದ ಶಿಲ್ಪಕಲೆಯಲ್ಲಿ ತಿಳಿಯಬಹುದಾಗಿದೆ. ಮರದ ಮಾಧ್ಯಮದಲ್ಲೂ ಕೃಷಿ ಉಪಕರಣಗಳೊಂದಿಗೆ ಸಾಕು ಪ್ರಾಣಿಗಳು, ಪಕ್ಷಿಗಳು, ಬೆಳೆಗಳು ಅಲ್ಲದೆ ಗೃಹೋಪಯೋಗಿ ವಸ್ತುಗಳು ಏನೆಲ್ಲ ದೇವರುಗಳಾಗಿ, ಗ್ರಾಮ ದೇವತೆಗಳಾಗಿ ನಿರ್ಮಿಸಲ್ಪಟ್ಟು ಪೂಜೆ ಆಚರಣೆಗೆ ಒಳಗಾಗಿವೆ. ಅಂತಹ ಕೆಲವು ಶಿಲ್ಪಗಳನ್ನು ಧರ್ಮಮೂಲದ ಜನಪದ ಶಿಲ್ಪಕಲೆಯೆಂದು ಕರೆದು ಅಧ್ಯಯನ ಮಾಡಲಾಗಿದೆ.

ಈ ಮರದ ಮಾಧ್ಯಮದ ಧರ್ಮಮೂಲ ಜನಪದ ಶಿಲ್ಪಕಲೆಯನ್ನು I. ದೇವತಾ ಶಿಲ್ಪಗಳು II. ದೇವರ ವಾಹನ ಶಿಲ್ಪಗಳು ಎಂದು ಕರೆದು ಅವುಗಳಲ್ಲಿ I.೧ ಪೂರ್ಣ ಪ್ರಮಾಣದ ಶಿಲ್ಪಗಳು

---

೪೫. ಪಿ.ಆರ್. ತಿಪ್ಪೇಸ್ವಾಮಿ (ಸಂ) : ಶಿಲ್ಪಕಲಾ ಪ್ರಪಂಚ, ಪುಟ -೪೬೭

[illegible]

[illegible]

[illegible]

[illegible]

[illegible]

[illegible]

I.೨ ಶಿರಬಾವ ಶಿಲ್ಪಗಳು II.೧ ಪ್ರಾಣಿ ವಾಹನ ಶಿಲ್ಪಗಳು II.೨ ಪಕ್ಷಿ ವಾಹನ ಶಿಲ್ಪಗಳೆಂದು ವಿಂಗಡಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

## I. ಮರದ ಮಾಧ್ಯಮದ ದೇವತಾ ಶಿಲ್ಪಗಳು

ಮಾನವನು ಪ್ರಾಚೀನ ಕಾಲದಿಂದಲೇ ಹಲವಾರು ನಂಬಿಕೆಗಳ ಹಿನ್ನೆಲೆಯಲ್ಲಿ ದೇವರನ್ನು ಸೃಷ್ಟಿಸಿಕೊಂಡನು. ಅವುಗಳಿಗೆ ತನ್ನದೇ ರೂಪ, ಆಕಾರಗಳನ್ನು ಆರೋಪಿಸಿದನು. ಆ ರೂಪಗಳನ್ನು ಕಲ್ಲು, ಕಟ್ಟಿಗೆ, ಮಣ್ಣು, ಲೋಹ ಮುಂತಾದ ಮಾಧ್ಯಮಗಳಲ್ಲಿ ರೂಪಿಸಿ ಅವುಗಳಿಗೆ ವಸ್ತ್ರ, ವಡವೆಗಳನ್ನು ಉಡಿಸಿ, ತೊಡಿಸಿ ಅಲಂಕಾರ ಮಾಡಿ ಸಂತೋಷಪಡುತ್ತಾ ಬಂದಿದ್ದಾನೆ. ಸ್ತ್ರೀ ದೇವತಾ ಶಿಲ್ಪಗಳಿಗೆ, ಸ್ತ್ರೀ ವೇಷಭೂಷಣಗಳನ್ನು, ಪುರುಷ ದೇವತೆಗಳಿಗೆ ಪುರುಷ ವೇಷಭೂಷಣಗಳನ್ನು ತೊಡಿಸಿ ಆರಾಧಿಸುತ್ತ ಬಂದಿದ್ದಾನೆ. ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಈ ದೇವತಾ ಶಿಲ್ಪಗಳು ಇಂದಿಗೂ ನೋಡಲು ಸಿಗುತ್ತವೆ. ಇವುಗಳನ್ನು ಗ್ರಾಮ ದೇವತೆಗಳೆಂದೂ ಕರೆಯುತ್ತಾರೆ. ಗ್ರಾಮ ದೇವತೆಗಳನ್ನು ಪ್ರತಿಯೊಂದು ಗ್ರಾಮದಲ್ಲೂ ಕಾಣುತ್ತೇವೆ. ಮುಖ್ಯವಾಗಿ ಉತ್ತರ ಕರ್ನಾಟಕದಲ್ಲಿ ರಚಿಸಲಾಗಿರುವ ದ್ಯಾಮವ್ವ, ದುರುಗವ್ವ, ಮಾರಮ್ಮ, ದೇವಿ ಮುಂತಾದ ಸ್ತ್ರೀ ದೇವತಾ ಶಿಲ್ಪಗಳು, ಅವುಗಳ ವಾಹನಗಳು ಮರದಲ್ಲೇ ರಚನೆಯಾಗಿದ್ದು ಕಂಡುಬರುತ್ತವೆ. ಸಾಮಾನ್ಯವಾಗಿ ಈ ಪ್ರದೇಶದಲ್ಲಿ ಮಾತೃದೇವತಾರಾಧನೆ ವ್ಯಾಪಕವಾಗಿದ್ದು, ಸ್ತ್ರೀ ದೇವತಾಶಿಲ್ಪಗಳನ್ನು ಹೆಚ್ಚಾಗಿ ಕಾಣಬಹುದಾಗಿದೆ. ಮರದಿಂದ ಮಾಡಲಾಗಿರುವ ಇಂಥ ಶಿಲ್ಪಗಳು ಹೆಚ್ಚೆಂದರೆ, ನೂರು-ಇನ್ನೂರು ವರ್ಷಗಳ ಕಾಲ ಬಾಳಿಕೆ ಬರುತ್ತವೆ. ಬೆಂಕಿ, ನೀರು ಮುಂತಾದ ನಿರ್ಲಕ್ಷದಿಂದಲೂ ಮರದ ಶಿಲ್ಪಗಳು ಹಾಳಾಗುತ್ತವೆ. ಹೀಗೆ ಹಾಳಾದ ದೇವತಾ ಶಿಲ್ಪಗಳನ್ನು ನಮ್ಮ ಗ್ರಾಮೀಣರು ನೀರಿಗೆ ಹಾಕಿಯೋ ಇಲ್ಲವೆ, ದೇವಾಲಯ, ಗದ್ದುಗೆ ಮುಂತಾಗಿ ಪ್ರತಿಷ್ಠಾಪಿತ ಸ್ಥಳದಿಂದ ಬೇರೆಡೆಗೆ ಸ್ಥಳಾಂತರಿಸುವದರ ಮೂಲಕ ಅವನ್ನು ವಿಸರ್ಜಿಸಿ ಪುನಃ ಹೊಸ ಶಿಲ್ಪ ಪ್ರತಿಮೆಗಳನ್ನು ಮಾಡಿ ಪ್ರತಿಷ್ಠಾಪಿಸುವ ಪರಿಪಾಠವನ್ನು ರೂಢಿಸಿಕೊಂಡು ಬಂದಿದ್ದಾರೆ. ಹೀಗಾಗಿ ತೀರ ಹಳೆಯವು ಎನ್ನುವ ಮರದ ಪ್ರತಿಮೆಗಳು ಸಿಗುವದು ವಿರಳ. ಸ್ತ್ರೀ ಗ್ರಾಮ ದೇವತೆಗಳು ಶಕ್ತಿಯ ಪ್ರತಿರೂಪಗಳೆಂದು ನಂಬಲಾಗಿದೆ. ಗ್ರಾಮದ ಜನರಲ್ಲಿ ಭಯ, ಭಕ್ತಿ, ಗೌರವಗಳು ಮನೆ ಮಾಡಿವೆ. ಹೀಗಾಗಿ ಗ್ರಾಮದವರೆಲ್ಲ ಸೇರಿ ದೇವತೆಗಳಿಗೆ ದೇವಾಲಯಗಳನ್ನು ಹಾಗೂ ದೇವತಾ ಶಿಲ್ಪಗಳ ರಚನೆಗೆ ತಮ್ಮ ಕೈಲಾದ ಹಣಕಾಸಿನ ನೆರವನ್ನು ಭಕ್ತಿಯ ರೂಪದಲ್ಲಿ ಸಲ್ಲಿಸುತ್ತಾರೆ.

ಸಾಮಾನ್ಯವಾಗಿ ಈ ಗ್ರಾಮ ದೇವತಾ ಶಿಲ್ಪಗಳನ್ನು ವಿಶ್ವಕರ್ಮರಾದ ಬಡಿಗರು ಮಾಡುತ್ತಾರೆ. ಅಲ್ಲದೇ ಕೆಲವು ಗ್ರಾಮ ದೇವತೆಗಳ ಅರ್ಚಕರು ಬಡಿಗರರೇ ಆಗಿರುತ್ತಾರೆ. ಇಂಥಾ ದೇವತಾ ಶಿಲ್ಪಗಳನ್ನು ರಚಿಸುವ ಬಡಿಗೇರರಿಗೆ ಗ್ರಾಮಸ್ಥರಿಂದ ನಗದು ಹಣ, ಬಟ್ಟೆ, ದವಸಧಾನ್ಯಗಳು ದೊರೆಯುತ್ತವೆ. ಇತ್ತೀಚಿಗೆ ಹಣವನ್ನು ಮಾತ್ರ ಪಡೆಯುವದು ಕಂಡು ಬರುತ್ತಿದೆ.

[illegible]

[illegible]

[illegible]

[illegible]

ಮರದಿಂದ ಮಾಡಲಾಗುವ ಈ ದೇವತಾ ಶಿಲ್ಪಗಳು ವಿವಿಧ ಅಳತೆಯಲ್ಲಿರುತ್ತವೆ. ಕೆಲವು ಶಿಲ್ಪಗಳು ಪೂರ್ಣ ಪ್ರಮಾಣದ ಅವಯವಗಳು ಅಂದರೆ, ಕೈ, ಕಾಲು, ರುಂಡ, ಮುಂಡ ಎಲ್ಲವನ್ನು ಹೊಂದಿರುತ್ತವೆ. ಇನ್ನು ಕೆಲವು ಶಿಲ್ಪಗಳು ಕೇವಲ ರುಂಡ ಅಥವಾ ಮುಖ ಮಾತ್ರ ರಚನೆಗೊಂಡು ( ಮುಖವಾಡದಂತಹ ಶಿಲ್ಪಗಳು ) ಪೂಜಿಸಲ್ಪಡುತ್ತವೆ. ಕೈ ಕಾಲುಗಳನ್ನು ಹೊಂದಿರುವ ಶಿಲ್ಪಗಳು ವಿವಿಧ ಉದ್ದಗಲದ ಅಳತೆಯಲ್ಲಿದ್ದು, ಅವು ಒಂದೇ ಮರದ ತುಂಡಿನಲ್ಲಿ ರಚನೆಗೊಂಡಿರುವದಿಲ್ಲ. ಬದಲಾಗಿ, ಒಂದೊಂದು ಅವಯವವೂ ಅಂದರೆ ಕೈಗಳು, ಕಾಲುಗಳು, ರುಂಡ ಮತ್ತು ಮುಂಡ, ಅವುಗಳ ವಾಹನ, ಆಯುಧಗಳು ಮುಂತಾದವೆಲ್ಲ ಎರಡು ಇಲ್ಲವೆ ಎರಡಕ್ಕಿಂತ ಹಲವು ಬಿಡಿ ಭಾಗಗಳಾಗಿಯೇ ಪ್ರತ್ಯೇಕ ಮರದ ತುಂಡುಗಳಲ್ಲಿ ರಚನೆಗೊಂಡಿರುತ್ತವೆ. ಹೀಗೆ ಪ್ರತ್ಯೇಕವಾಗಿ ಆದರೆ ತನ್ನದೇ ಆದ ಅಳತೆಯ ಪ್ರಮಾಣಕ್ಕನುಗುಣವಾಗಿಯೇ ರಚನೆಗೊಂಡ ಶಿಲ್ಪದ ಬಿಡಿ ಭಾಗಗಳನ್ನೆಲ್ಲ ಹೊಂದಿಸಿ ಶಿಲ್ಪವನ್ನು ರಚಿಸಲಾಗಿರುತ್ತದೆ. ಸಾಮಾನ್ಯವಾಗಿ ಕೆಲವು ಶಿಲ್ಪಗಳನ್ನು ಬಾಚಿ, ಉಳಿಯಿಂದ ಕೆತ್ತಿ ಮಾಡಿದವುಗಳಾಗಿರುತ್ತವೆ. ಇವು ಸರ್ವ ಸಾಧಾರಣ ರಚನೆಯ ಶಿಲ್ಪಗಳು. ಇನ್ನೂ ಕೆಲವನ್ನು ಜಂತ್ರ-ಉಜ್ಜುಗೊರಡನ್ನು ಬಳಸಿ, ಕೈಕಾಲುಗಳನ್ನು ರಚಿಸಿಕೊಳ್ಳಲಾಗಿರುತ್ತದೆ. ಆದರಲ್ಲೇ ಇವು ಹೆಚ್ಚು ಕಾಳಜಿ ವಹಿಸಿ ಮಾಡಿದಂಥ ಶಿಲ್ಪಗಳಾಗುತ್ತವೆ.

**ಅಲಂಕಾರ :** ಹೀಗೆ ಸಿದ್ಧಗೊಂಡ ದೇವತಾ ಶಿಲ್ಪಗಳಿಗೆ ಕೆಂಪು, ಹಳದಿ, ಜಾಜ ಮೈಬಣ್ಣವಾಗಿ ಹಸಿರು, ಕೆಂಪು, ನೀಲಿಯನ್ನು ಬಣ್ಣವಾಗಿ ಬಳೆಯುತ್ತಾರೆ. ವಸ್ತ್ರಗಳಾಗಿ ನೈಜವಾದ ಸೀರೆ, ಕುಪ್ಪಸ, ಆಭರಣಗಳನ್ನು ತೊಡಿಸಿ ಅಲಂಕರಿಸಿರುತ್ತಾರೆ. ಈ ಶಿಲ್ಪಗಳು ಚೌಕ, ಇಲ್ಲವೆ ಆಯತಾಕಾರದ ಮರದ ಪೀಠವೊಂದರ ಮೇಲೆ ಅಳವಡಿಸಿ ಗುಡಿಗಳಲ್ಲಿ ಪ್ರತಿಷ್ಠಾಪಿಸಲಾಗಿರುತ್ತದೆ.

## I.೧ ಪೂರ್ಣ ಪ್ರಮಾಣದ ಶಿಲ್ಪಗಳು

ಜನಪದರ ಗ್ರಾಮ ದೇವತಾ ಶಿಲ್ಪಗಳಲ್ಲಿ ಮರದ ಮಾಧ್ಯಮದ ಕೆಲವು ಶಿಲ್ಪಗಳು ರುಂಡ, ಮುಂಡ, ಕೈ, ಕಾಲು ಎಲ್ಲ ಅವಯವಗಳಿಂದ ಪೂರ್ಣವಾಗಿರುವ ಶಿಲ್ಪಗಳಾಗಿರುತ್ತವೆ. ದ್ಯಾಮವ್ವ, ಮರಗಮ್ಮ, ದುರಗಮ್ಮ, ಗೌರಮ್ಮ ಮುಂತಾದ ಕೆಲವು ಶಿಲ್ಪಗಳನ್ನು ಇಲ್ಲಿ ಪೂರ್ಣ ಪ್ರಮಾಣದ ಶಿಲ್ಪಗಳೆಂದು ಕರೆದು ಅಧ್ಯಯನ ಮಾಡಲಾಗಿದೆ.

### ೧. ದ್ಯಾಮವ್ವನ ಶಿಲ್ಪ

ಜಾನಪದ ದೇವತೆಯಾಗಿರುವ ದ್ಯಾಮವ್ವನ ಶಿಲ್ಪಗಳು ತುಂಬ ಆಕರ್ಷಕವಾಗಿದ್ದು ಉತ್ತರ ಕರ್ನಾಟಕದಾದ್ಯಂತ ಊರು ಊರುಗಳಲ್ಲಿ ಕಂಡು ಬರುತ್ತವೆ. ಈ ದ್ಯಾಮವ್ವನ ಶಿಲ್ಪವನ್ನು ಸಾಮಾನ್ಯವಾಗಿ ಪಂಚಾಳರ ಮನೆಯಲ್ಲಿ ಪ್ರತ್ಯೇಕ ಕೊಠಡಿಯಲ್ಲಿ ಪ್ರತಿಷ್ಠಾಪಿಸಲಾಗಿರುತ್ತದೆ. ಅದೇ ದೇವಸ್ಥಾನವೂ ಆಗಿರುತ್ತದೆ. ದ್ಯಾಮವ್ವನನ್ನು ಬಿಜಾಪೂರದ ಭಾಗದಲ್ಲಿ ದೇವಿ, ದ್ಯಾಮವ್ವ ಎಂತಲೂ, ಗುಲಬರ್ಗಾ

ಭಾಗದಲ್ಲಿ ದ್ಯಾವಮ್ಮ, ದ್ಯಾಮಾಯಿ ಎಂದೂ, ರಾಯಚೂರು ಕಡೆಗೆ ದ್ಯಾಮವ್ವ ಎಂದೂ ಕರೆಯುವರು.[೪೬] ಈ ದ್ಯಾಮವ್ವ ಶಿಲ್ಪ ಉಗ್ರ ಸ್ವರೂಪವನ್ನು ಹೊಂದಿದ್ದು ಸಿಂಹ, ಹುಲಿ ಇಲ್ಲವೆ ಕುದುರೆ ಅಥವಾ ಆನೆಗಳ ಮೇಲೆ ಕುಳಿತ ಭಂಗಿಯಲ್ಲಿರುತ್ತವೆ. ಉಗ್ರ ಮುಖಭಾವ, ಅಗಲವಾದ ಕಣ್ಣು, ಕಂದು ಮಿಶ್ರಿತ ಕೆಂಪು ಮೈಬಣ್ಣ, ನೀಳವಾದ ಮೂಗು, ಉಬ್ಬಿದ ತುಟಿಗಳಿಂದ ಆಕರ್ಷಕವಾಗಿರುತ್ತದೆ. ಮೂಗು, ಕೊರಳು, ಕಿವಿ ಹಾಗೂ ನಡುವಿನಲ್ಲಿ ಆಭರಣಗಳಿರುತ್ತವೆ. ಕೈಗಳು ಬಳೆಗಳಿಂದ ಅಲಂಕೃತಗೊಂಡಿರುತ್ತವೆ. ತಲೆಯ ಮೇಲೆ ಎಲೆಯ ಬಳ್ಳಿಗಳ ಅಲಂಕಾರಿಕ ಕೆತ್ತನೆಯಿಂದ ಕೂಡಿದ ಕಿರೀಟ, ಎದುರು ನಾಗರ ಹೆಡೆ, ತಲೆಯ ಹಿಂದೆ ಚಂದ್ರಾಕಾರದ ಪ್ರಭಾವಳಿ ಹಾಗೂ ನಾಲ್ಕು, ಆರು ಅಥವಾ ಎಂಟು ಕೈಗಳು, ಆ ಕೈಗಳಲ್ಲಿ ವಿವಿಧ ಆಯುಧಗಳಿಂದ ಕೂಡಿ ಶಿಲ್ಪ ಆಕರ್ಷಕವಾಗಿರುತ್ತದೆ. ಸಾಮಾನ್ಯವಾಗಿ ಈ ಶಿಲ್ಪಗಳು ಮನುಷ್ಯಾಕೃತಿ ಮತ್ತು ಮನುಷ್ಯಾಕೃತಿಗಿಂತ ಕಡಿಮೆ ಇಲ್ಲವೆ ಹೆಚ್ಚು ಅಳತೆಯಲ್ಲಿ ನಿರ್ಮಾಣವಾಗಿರುತ್ತವೆ. ಈ ಶಿಲ್ಪಗಳು ಊರಿನಿಂದ ಊರಿಗೆ ಕೆಲವು ಭಿನ್ನ ಲಕ್ಷಣಗಳಿಂದ ಕೂಡಿರುತ್ತವೆ. ಪದ್ಮಿನಿ, ಶಂಕಿನಿ, ಹಸ್ತಿನಿ, ಚಿತ್ತಿನಿ ಮುಂತಾಗಿ ಹೆಸರಿನ ಲಕ್ಷಣಗಳಿಗನುಗುಣವಾಗಿ ರಚಿಸಲ್ಪಟ್ಟವುಗಳಾಗಿರುತ್ತವೆ. ಮಾಗಣಗೇರಿ [೪೭] ಯಲ್ಲಿರುವ ದ್ಯಾಮವ್ವ ಶಿಲ್ಪ ಕುಳಿತ ಭಂಗಿಯಲ್ಲೇ ಆರು ಅಡಿ ಎತ್ತರವಾಗಿದೆ. ಇದು ಪಂಚಾಳರ ಮನೆಯ ಆವರಣದಲ್ಲಿ ವಿಶಾಲವಾದ ಕೊಠಡಿಯಲ್ಲಿದೆ. ಇದು ಅತ್ಯಂತ ಸುಂದರವೂ ಆಗಿದ್ದು ಪದ್ಮಿನಿ ಲಕ್ಷಣದ ಶಿಲ್ಪವೆಂದು ಹೇಳುತ್ತಾರೆ. ಈ ದ್ಯಾಮವ್ವ ವಾರ್ಷಿಕ ಏಳು ಊರುಗಳನ್ನು ಸುತ್ತಿ ಬರುತ್ತಾಳೆ. ವರ್ಷೊಕೊಮ್ಮೆ ಜಾತ್ರೆ ನಡೆಯುತ್ತದೆ. ಇದೇ ರೀತಿ ಅರಳಗುಂಡಗಿ,[೪೮] ನೆಲೋಗಿ,[೪೯] ಕುಕನೂರು,[೫೦] ಯಲಗೋಡ [೫೧] ಮುಂತಾದ ಊರುಗಳಲ್ಲಿ ಅತ್ಯಂತ ಸುಂದರ, ದೊಡ್ಡ ಹಾಗೂ ಪ್ರಸಿದ್ಧ ದ್ಯಾಮವ್ವ ಶಿಲ್ಪಗಳಿವೆ. ಈ ಶಿಲ್ಪಗಳ ವಾಹನಗಳು ಸಿಂಹ ಹಾಗೂ ಹುಲಿ ಶಿಲ್ಪಗಳಾಗಿವೆ. ಈ ವಾಹನ ಶಿಲ್ಪಗಳೂ ನಿಂತ, ಮಲಗಿದ ಮತ್ತು ಕಾಲುಗಳನ್ನು ಮೇಲಕ್ಕೆತ್ತಿದ ಭಂಗಿಗಳಲ್ಲಿವೆ. ಇವುಗಳನ್ನು ಸಾಮಾನ್ಯವಾಗಿ ಹಳದಿ, ಕೆಂಪು, ನೀಲಿ, ಕಪ್ಪು ಬಣ್ಣಗಳನ್ನು ಲೇಪಿಸಿ ಅಲಂಕರಿಸಲಾಗಿದೆ. ಹೆಚ್ಚಾಗಿ ವಾಹನ ಶಿಲ್ಪಗಳಿಗೆ ಹಳದಿಯನ್ನು ಮೈಬಣ್ಣವಾಗಿ ಬಳೆಯಲಾಗಿದೆ.

ಲೋಕೂರಿನ [೫೨] ದ್ಯಾಮವ್ವ ಹಿಂದೆ ಸುತ್ತಲಿನ ೩೬೧ ಹಳ್ಳಿಗಳ ದೇವತೆಯಾಗಿದ್ದಳಂತೆ. ಈ ಎಲ್ಲ ಹಳ್ಳಿಗಳಿಗೂ ಈಕೆ ಅಡ್ಡಾಡುತ್ತದ್ದಳಂತೆ. ಈಗ 25 ಹಳ್ಳಿಗಳು ಮಾತ್ರ ಉಳಿದು, ಉಳಿದ ಊರುಗಳಲ್ಲಿ ಸ್ವತಂತ್ರ ಶಿಲ್ಪಗಳು ಪ್ರತಿಷ್ಠಾಪಿತಗೊಂಡಿವೆ. ಸಿಂಹವಾಹಿನಿಯಾದ ಈ ಶಿಲ್ಪ ಹತ್ತು ಕೈಗಳನ್ನು [೫೩] ಹೊಂದಿದೆ. ಯಮಕನ ಮರಡಿ [೫೪]ಯ ದ್ಯಾಮವ್ವ ಶಿಲ್ಪ ಭಯಂಕರ ರೂಪದ್ದಾಗಿದೆ. [೫೫] ಮುಷ್ಠಿಗೇರಿಯ [೫೬] ಆರು

೪೬. ಡಾ. ಚೆನ್ನಣ್ಣ ವಾಲೀಕಾರ : ಹೈದರಾಬಾದ ಕರ್ನಾಟಕದ ಗ್ರಾಮ ದೇವತೆಗಳ ಜಾನಪದೀಯ ಅಧ್ಯಯನ, ಪುಟ- ೮೯

೪೭. ಮಾಗಣಗೇರಿ : ತಾ. ಜೇವರ್ಗಿ, ಜಿ. ಗುಲಬರ್ಗಾ

೪೮. ಅರಳಗುಂಡಗಿ : ತಾ. ಜೇವರ್ಗಿ, ಜಿ. ಗುಲಬರ್ಗಾ

೪೯. ನೆಲೋಗಿ : ತಾ. ಜೇವರ್ಗಿ, ಜಿ. ಗುಲಬರ್ಗಾ

೫೦. ಕುಕನೂರ : ತಾ. ಜೇವರ್ಗಿ, ಜಿ. ಗುಲಬರ್ಗಾ

೫೧. ಯಲಗೋಡ : ತಾ. ಜೇವರ್ಗಿ, ಜಿ. ಗುಲಬರ್ಗಾ

೫೨. ಲೋಕುರ : ತಾ. ಜಿ. ಧಾರವಾಡ

ಕೈಗಳ ಸಿಂಹವಾಹಿನಿ ದ್ಯಾಮವ್ವ, ಸವದತ್ತಿಯ [೫೭] ಹತ್ತು ಕೈಗಳ ದ್ಯಾಮವ್ವ, ಸೌದತ್ತಿ ತಾಲೂಕಿನ ಅಂಗ್ರೇಶನಕೊಪ್ಪದ ದ್ಯಾಮವ್ವ ಶಿಲ್ಪಗಳೂ ಪ್ರಸಿದ್ಧವಾಗಿವೆ. ತೊಲಗಿ[೫೮] ಗ್ರಾಮದ ದ್ಯಾಮವ್ವ ಶಿಲ್ಪ ಮೂರು ಮುಖ ಹೊಂದಿದ್ದು ಅಪರೂಪದ ಶಿಲ್ಪವಾಗಿದೆ. ಇದು ನಿಂತ ಭಂಗಿಯಲ್ಲಿದೆ. ಹಾಗೆಯೇ ಗೋಕಾಕದ[೫೯] ಜೋಡು ದ್ಯಾಮವ್ವನ ಶಿಲ್ಪಗಳು ತಲಾ ಎಂಟು ಕೈಗಳನ್ನು ಹೊಂದಿದ್ದು ಹಿಂದೆ ಕೀರ್ತಿ ಮುಖದ ಪ್ರಭಾವಳಿ ಹೊಂದಿ ಸಿಂಹವಾಹಿನಿ ಶಿಲ್ಪಗಳಾಗಿವೆ. [೬೦] ಗುಡಗೇರಿ, [೬೧] ಕಲಘಟಗಿ, [೬೨] ಕಲಘಟಗಿ ತಾಲೂಕಿನ ಹುಲಗಿನ ಕಟ್ಟೆ ದ್ಯಾಮವ್ವ ಶಿಲ್ಪಗಳು ರೊಟ್ಟಿಗವಾಡ[೬೩] ಹಾಗೂ ವಕ್ಕುಂದದ[೬೪] ದ್ಯಾಮವ್ವ ಶಿಲ್ಪಗಳು ಪ್ರಸಿದ್ಧವಾಗಿದ್ದು ಇವು ಶಿಲಾ ಮಾಧ್ಯಮ[೬೫]ದವುಗಳಾಗಿವೆ.

**ರಚನೆ ಮತ್ತು ಬಣ್ಣಗಾರಿಕೆ :** ದ್ಯಾಮವ್ವ ಶಿಲ್ಪಗಳನ್ನು ಸಾಮಾನ್ಯವಾಗಿ ವಿಶ್ವಕರ್ಮರೇ ರಚಿಸಿರುತ್ತಾರೆ. ಉತ್ತರ ಕರ್ನಾಟಕದ ಬಯಲು ಸೀಮೆಯಲ್ಲಿ ಹೇರಳವಾಗಿ ಸಿಗುವ ಬೇವಿನ ಮರದಿಂದಲೇ ಹೆಚ್ಚಿನ ಶಿಲ್ಪಗಳು ರಚನೆಗೊಂಡಿರುತ್ತವೆ. ಅಪರೂಪಕ್ಕೆ ಬನ್ನಿ, ಮಾವು, ಮಳಿಗೆ ಮತ್ತು ಸಾಗವಾನಿ ಮರಗಳಲ್ಲಿ ರಚಿಸಲಾಗಿರುತ್ತದೆ. ದ್ಯಾಮವ್ವ ಶಿಲ್ಪದ ಮುಖ ಮಾತ್ರ ರಕ್ತ ಗಂಧಿ[೬೬]ಮರದ ಕಟ್ಟಿಗೆಯಿಂದ ರಚಿಸಿರುತ್ತಾರೆ. ಮುಖ, ಕೈಗಳು, ಕಾಲುಗಳು ಹಾಗೂ ಮುಂಡ ಭಾಗಗಳೆಲ್ಲ ಪ್ರತ್ಯೇಕ ಪ್ರತ್ಯೇಕವಾಗಿಯೇ ಅಳತೆಗೆ ತಕ್ಕಂತೆ ರಚಿಸಿಕೊಂಡು ಜೋಡಿಸಲಾಗಿರುತ್ತದೆ. ಈ ಶಿಲ್ಪ ರಚಿಸಬೇಕಾದರೆ, ಗಿಡದ ಮೇಲ್ಭಾಗವನ್ನು ಶಿರಸ್ಸಿಗೂ, ಟೊಂಗೆಗಳನ್ನು ಕೈಗಳಿಗೂ, ಕೆಳಭಾಗವನ್ನು ಕಾಲುಗಳ ರಚನೆಗೆ ಬಳಸಬೇಕೆಂಬ ನಿಯಮವಿದೆ.[೬೭] ಸಾಮಾನ್ಯವಾಗಿ ಶಿಲ್ಪಗಳ ಕೈ, ಕಾಲು ಇತ್ಯಾದಿ ಅವಯವಗಳನ್ನು ಬಾಚಿ- ಉಳಿಯಿಂದ ಕೆತ್ತಿ ಉಜ್ಜಗೊರಡಿನಿಂದ ನಯಗೊಳಿ ರಚಿಸಿದ್ದರೆ, ಕೆಲವು ಶಿಲ್ಪಗಳ ಅವಯವಗಳನ್ನು ಜಂತ್ರ ಹಿಡಿದು ನೀಳವಾಗಿ ನಯವಾಗಿ ಮಾಡಲಾಗಿರುತ್ತದೆ. ಈ ಎಲ್ಲ ಶಿಲ್ಪಗಳು ಉದ್ದಗಲಕ್ಕೆ ಸಂಬಂಧಿಸಿದಂತೆ ಅಳತೆಗಳಿರುತ್ತವೆ. ಆದರೆ ಶಾರೀರಿಕ ರಚನೆಗಳನ್ನು ( ಅನಾಟಮಿ ) ಅನುಸರಿಸಿರುವದಿಲ್ಲ. ಈ ದ್ಯಾಮವ್ವನ ಶಿಲ್ಪಗಳಿಗೆ ಇಷ್ಟೇ

---

೫೩. ಡಾ. ಎ.ವಿ. ಪಾಟೀಲ : ಉತ್ತರ ಕರ್ನಾಟಕದ ಜಾನಪದ ವಿಧಿಕ್ರಿಯೆಗಳು, (ಅಪ್ರಕಟಿತ) ಪುಟ -೩೬೦
೫೪. ಯಮಕನಮರಡಿ : ತಾ. ಹುಕ್ಕೇರಿ, ಜಿ. ಬೆಳಗಾವಿ
೫೫. ಡಾ. ಬಿ.ಪಿ. ಪಾಟೀಲ : ಉತ್ತರ ಕರ್ನಾಟಕದ ಗ್ರಾಮ ದೇವತೆಗಳು, (ಅಪ್ರಕಟಿತ) ಪುಟ -೨೭೬
೫೬. ಮುಷ್ಠಿಗೇರಿ : ತಾ. ಬಾದಾಮಿ, ಜಿ. ಬಾಗಲಕೋಟ
೫೭. ಸೌಂದತ್ತಿ : ತಾ. ಸೌಂದತ್ತಿ, ಜಿ. ಬೆಳಗಾವಿ
೫೮. ತೊಲಗಿ : ತಾ. ಖಾನಾಪುರ, ಜಿ. ಬೆಳಗಾವಿ
೫೯. ಗೋಕಾಕ : ತಾ. ಗೋಕಾಕ, ಜಿ. ಬೆಳಗಾವಿ
೬೦. ಡಾ. ಬಿ.ಪಿ. ಪಾಟೀಲ : ಉತ್ತರ ಕರ್ನಾಟಕದ ಗ್ರಾಮ ದೇವತೆಗಳು, (ಅಪ್ರಕಟಿತ) ಪುಟ -೨೭೬
೬೧. ಗುಡಗೇರಿ : ತಾ. ಕುಂದಗೋಳ, ಜಿ. ಧಾರವಾಡ
೬೨. ಕಲಘಟಗಿ : ತಾ. ಕಲಘಟಗಿ, ಜಿ. ಧಾರವಾಡ
೬೩. ಕೊಟ್ಟಿಗೆವಾಡ : ತಾ. ಜಿ. ಧಾರವಾಡ
೬೪. ಒಕ್ಕುಂದ : ತಾ. ಬೈಹೊಂಗಲ, ಜಿ. ಬೆಳಗಾವಿ
೬೫. ಡಾ. ಬಿ.ಪಿ. ಪಾಟೀಲ : ಉತ್ತರ ಕರ್ನಾಟಕದ ಗ್ರಾಮ ದೇವತೆಗಳು, (ಅಪ್ರಕಟಿತ) ಪುಟ -೨೭೭
೬೬. ರಕ್ತಗಂಧಿಯನ್ನು ರಕ್ತ ಭೂತಾಳಿ ಎಂದೂ ಕರೆಯುವರು. ಹಿಂದೆ ದ್ಯಾಮವ್ವನ ಇಡೀ ಶಿಲ್ಪವನ್ನು ಈ ಮರದಿಂದಲೇ ಮಾಡಬೇಕೆಂಬ ನಿಯಮವಿತ್ತಂತೆ. ಇತ್ತೀಚಿಗೆ ಮುಖವೊಂದನ್ನು ಮಾತ್ರ ಈ ಮರದಲ್ಲಿ ಮಾಡುವುದನ್ನು ಉಳಿಸಿಕೊಂಡು ಬರಲಾಗಿದೆ
೬೭. ಡಾ. ಎ.ವಿ. ಪಾಟೀಲ : ಉತ್ತರ ಕರ್ನಾಟಕದ ಜಾನಪದ ವಿಧಿಕ್ರಿಯೆಗಳು, (ಅಪ್ರಕಟಿತ) ಪುಟ -೩೫೮

ಕೈಗಳಿರಬೇಕೆಂಬ ನಿಯಮವಿಲ್ಲ. ಸಾಮಾನ್ಯವಾಗಿ ನಾಲ್ಕರಿಂದ ಹತ್ತು ಕೈಗಳನ್ನು ಹೊಂದಿರುವ ಶಿಲ್ಪಗಳು ಕಂಡುಬರುತ್ತವೆ. ಮಾಗಣಗೇರಿ, ಕುಕನೂರು, ಅರಳಗುಂಡಗಿಯಲ್ಲಿರುವ ದ್ಯಾಮವ್ವ ಶಿಲ್ಪಗಳಿಗೆ ತಲಾ ಎಂಟೆಂಟು ಕೈಗಳನ್ನು ಮಾಡಲಾಗಿದೆ. ಕೊಂಬಳಿಯ [೧೮] ದ್ಯಾಮವ್ವನ ಶಿಲ್ಪಕ್ಕೆ ಹತ್ತು ಕೈಗಳಿವೆ. ಕೈಗಳಲ್ಲಿ ಕ್ರಮವಾಗಿ ತ್ರಿಶೂಲ, ಚಕ್ರ, ರಕ್ತಮಯವಾದಂತಿರುವ ಚೂರಿ, ಖಡ್ಗ, ಡಮರು, ಶಂಖ, ಕಠಾರಿ ಮತ್ತು ಬಟ್ಟಲನ್ನು ಇಡಲಾಗಿದೆ. ನಾಗಾಭರಣದ ಅಲಂಕಾರವಿರುವ ಕಿರೀಟವನ್ನು ಧರಿಸಿದ್ದು ಹಿಂಭಾಗದಲ್ಲಿ ಕೀರ್ತಿಮುಖ ಸಹಿತವಾದ ಪ್ರಭಾವಳಿಯನ್ನು ಅಳವಡಿಸಲಾಗಿದೆ. [೧೯]

ಮಾಗಣಗೇರಿ ದ್ಯಾಮವ್ವನ ಕೈಯಲ್ಲಿ ಕ್ರಮವಾಗಿ ತ್ರಿಶೂಲ, ಡಮರು, ಪದ್ಮ, ಖಡ್ಗ, ಬಟ್ಟಲು, ಭರ್ಚಿ, ಶಂಖ, ಚಕ್ರಗಳಿದ್ದರೆ, ಅರಳಗುಂಡಿಯ ದ್ಯಾಮವ್ವ ಶಿಲ್ಪದ ಒಂದು ಕೈಯಲ್ಲಿ ನಾಗರ ಶಿಲ್ಪವಿದೆ. ಈ ಎಲ್ಲ ಶಿಲ್ಪಗಳಿಗೂ ಕಂದು ಮಿಶ್ರಿತ ಕೆಂಪು ಬಣ್ಣ ಬಳೆಯಲಾಗಿದೆ. ವಾಹನ ಶಿಲ್ಪಗಳು ಸಿಂಹಗಳಿದ್ದು ಅವುಗಳಿಗೆ ಹಳದಿ ಬಣ್ಣ ಬಳೆಯಲಾಗಿದೆ. ಕಪ್ಪು ಮೀಸೆ ಬರೆಯಲಾಗಿದೆ. ಮಾಗಣಗೇರಿಯ ಶಿಲ್ಪದ ಎಡ-ಬಲಕ್ಕೆ ಚಿಕ್ಕದಾದ ಎರಡು ಮಕ್ಕಳ ಶಿಲ್ಪಗಳನ್ನು ಪ್ರತಿಷ್ಠಾಪಿಸಿ ಅವುಗಳಿಗೆ ಕುಂಚಿಗೆ, ಅಂಗಿಯನ್ನು ತೊಡಿಸಲಾಗಿದೆ. ಮತ್ತು ಇವು ತಲಾ ಎರಡೆರಡು ಕೈಗಳನ್ನು ಹೊಂದಿದ್ದು ಒಂದು ಕೈಯಲ್ಲಿ ಖಡ್ಗ, ಇನ್ನೊಂದು ಕೈಯಲ್ಲಿ ಬಟ್ಟಲನ್ನು ಹೊಂದಿವೆ. ಇವುಗಳನ್ನು ಸಖಿಯರೆಂದೂ, ಕೆಲವೆಡೆ ಮಕ್ಕಳೆಂದೂ ಹೇಳುತ್ತಾರೆ. ಈ ಮಕ್ಕಳ ಕೈಗೆ ದ್ಯಾಮವ್ವನನ್ನು ನಮಸ್ಕರಿಸಲು ಬಂದವರು ಸಕ್ಕರೆ, ಬೆಲ್ಲ ಕೊಟ್ಟು ಹೋಗುತ್ತಾರೆ. ಇಲ್ಲದಿದ್ದರೆ ಮಕ್ಕಳಿದ್ದವರನ್ನು ಕಾಡುತ್ತಾಳೆಂಬ ನಂಬಿಕೆಯಿದೆ. ಸಾಮಾನ್ಯವಾಗಿ ದ್ಯಾಮವ್ವನ ಶಿಲ್ಪಗಳಿಗೆ ಹಿಂದೆ ಸುಂದರ ಪ್ರಭಾವಳಿಯಿದ್ದು ಹಳದಿ ಬಣ್ಣ ಪ್ರಧಾನವಾಗಿರುತ್ತವೆ. ಇತರ ಬಣ್ಣಗಳಿಂದ ಸುಂದರ ನಕ್ಷೆಗಳನ್ನು ಬರೆಯಲಾಗಿರುತ್ತದೆ. ಆದರೆ ನವಲಿಯ [೨೦] ದ್ಯಾಮವ್ವನ ಶಿಲ್ಪದ ಹಿಂದಿನ ಪ್ರಭಾವಳಿಯು ಕೀರ್ತಿಮುಖ ಹೊಂದಿದ್ದು, ಪಟ್ಟಿಕೆಯಲ್ಲಿ ವಿಷ್ಣುವಿನ ದಶಾವತಾರದ ಚಿತ್ರಗಳನ್ನು ಬರೆಯಲಾಗಿದೆ. ಮತ್ತು ಎಡ-ಬಲದ ಚಿಕ್ಕ ಶಿಲ್ಪಗಳನ್ನು ಆನೆಯ ಮೇಲೆ ಕೂರಿಸಲಾಗಿದೆ. ಈ ಭಾಗದಲ್ಲಿ ಚಿಕ್ಕಶಿಲ್ಪಗಳನ್ನು ಅಕ್ಕತಂಗಿಯರೆಂದೂ, ಮಕ್ಕಳೆಂದೂ, ಸಖಿಯರೆಂದೂ ಇಲ್ಲವೆ ಇಚ್ಛಾಶಕ್ತಿ, ಮಹಾಶಕ್ತಿ ಎಂದೂ ಗ್ರಾಮೀಣರು ಹೇಳುತ್ತಾರೆ. [೨೧] ಬಹುಶಃ ಪ್ರಧಾನ ದೇವತಾಶಿಲ್ಪ ಎದ್ದು ಕಾಣುವಂತೆ ಮಾಡಲು ಈ ಚಿಕ್ಕ ಶಿಲ್ಪಗಳನ್ನು ಇರಿಸಿರಬಹುದು. ಇವುಗಳನ್ನು ಕುದುರೆ, ಆನೆ, ಪೀಠ ಇಲ್ಲವೆ ನೆಲದ ಮೇಲೆ ಕೂಳ್ಳಿರಿಸಿರುತ್ತಾರೆ.

ಕಾಚಾಪುರದ [೨೨] ದ್ಯಾಮವ್ವನ ಶಿಲ್ಪವನ್ನು ಇಂಗಳ ಕಟ್ಟಿಗೆಯಲ್ಲಿ ಮಾಡಲಾಗಿದೆ. ನಿಡಗುಂದಿ[೨೩]ಯ ಆರು ಅಡಿ ಎತ್ತರದ ದ್ಯಾಮವ್ವನ ಶಿಲ್ಪ ಪ್ರಸಿದ್ಧವಾಗಿದೆ. ಮುಷ್ಠಗೇರಿಯಲ್ಲಿ ದ್ಯಾಮವ್ವನ ಶಿಲ್ಪದೊಂದಿಗೆ

---

೧೮. ಕೊಂಬಳಿ : ತಾ.ಜಿ. ಬಳ್ಳಾರಿ

೧೯. ಡಾ. ಸಿ. ಮಹದೇವ : ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ಪುಟ -೩೯

೨೦. ನವಲಿ : ತಾ. ಜಿ. ಬಳ್ಳಾರಿ

೨೧. ಡಾ. ಸಿ. ಮಹದೇವ : ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ಪುಟ -೧೧

ಕರೆಮ್ಮನ ನಾಲ್ಕು ಅಡಿ ಎತ್ತರದ ಶಿಲ್ಪವನ್ನು ಪ್ರತಿಷ್ಠಾಪಿಸಿರುತ್ತಾರೆ. ವಿಶೇಷವೆಂದರೆ, ಮುಷ್ಠಗೇರಿಯ ದ್ಯಾಮವ್ವ ಶಿಲ್ಪವನ್ನು ಪಂಚಕಾಷ್ಠಗಳಿಂದ ನಿರ್ಮಿಸಲಾಗಿದೆಯೆಂದು ಗ್ರಾಮಸ್ಥರು ಹೇಳುತ್ತಾರೆ. ಎಂಟು ಕೈಗಳಿರುವ ಈ ದ್ಯಾಮವ್ವಗೆ ಕೆಂಪು ಪ್ರಧಾನ ಬಣ್ಣವಾಗಿದ್ದರೆ, ಪಕ್ಕದ ಕರೆಮ್ಮ ಶಿಲ್ಪದ ಮೈಬಣ್ಣ ಹಳದಿಯಿದೆ. ಈ ಗ್ರಾಮ ದೇವತೆಯ ವಿಶೇಷ ಜಾತ್ರೆ ಪ್ರತಿ ೧೩ ವರ್ಷಗಳಿಗೊಮ್ಮೆ ನಡೆಯುತ್ತದೆ. ಹೊಳೆಆಲೂರಿನ[೭೪] ಸಮೀಪದ ಅಮರಗೋಳದಲ್ಲಿನ ದ್ಯಾಮವ್ವ ಸುತ್ತಲಿನ ಏಳು ಊರುಗಳ ಆರಾಧ್ಯ ದೈವವಾಗಿದ್ದಾಳೆ. ಎಲಿಮುನ್ನೊಳ್ಳಿಯಲ್ಲಿ[೭೫] ದ್ಯಾಮವ್ವ ಶಿಲ್ಪವನ್ನು ಹೆಗಲ ಮೇಲೆ ಹೊತ್ತು ಆಡಿಸುವರು. ಈ ದೇವತೆಗೆ ಇಂಗುಳಬಾ ಎಂದು ಕರೆಯುತ್ತಾರೆ.

ಹೀಗೆ ರಚನೆಯಲ್ಲಿ ಏಕತಾನತೆ ಇಲ್ಲದ ಹಾಗೂ ಶಾಸ್ತ್ರೀಯ ರಚನೆಗಳಲ್ಲದ ದ್ಯಾಮವ್ವನ ವೈವಿಧ್ಯಮಯ ಶಿಲ್ಪಗಳು ಉತ್ತರಕರ್ನಾಟಕದಾದ್ಯಂತ ಕಂಡುಬರುತ್ತವೆ. ಆಚರಣೆ ಮತ್ತು ರಚನೆ ಎರಡರಲ್ಲೂ ಅಪ್ಪಟ ಜನಪದೀಯವಾಗಿರುವ ಈ ಶಿಲ್ಪಗಳು, ಇವುಗಳ ವಾಹನಗಳು, ಪ್ರಭಾವಳಿ, ಬಣ್ಣಗಾರಿಕೆ ಎಲ್ಲದರಲ್ಲೂ ವೈವಿಧ್ಯತೆಯಿದೆ. ನೀಳವಾದ ಕೈ ಕಾಲುಗಳ ರಚನೆ ಹೊಂದಿರುವ ಈ ಶಿಲ್ಪಗಳು ಪ್ರಾಚೀನ ಕಾಲದಿಂದಲೂ ಜನಪದರ ದೈವವಾಗಿ ಆರಾಧಿಸಲ್ಪಡುತ್ತ ಬಂದಿವೆ. ಇವು ರಚನೆಯಲ್ಲಿ ವಿಜಯ ನಗರ ಕಾಲದ ರಾಯಗೋಪುರಗಳಲ್ಲಿನ ಗಾರೆ ಶಿಲ್ಪಗಳಿಂದ ಪ್ರಭಾವಿತಗೊಂಡಿವೆ ಎಂಬ ಡಾ. ಸಿ. ಮಹದೇವ ಅವರ[೭೬] ಅಭಿಪ್ರಾಯವನ್ನು ಒಪ್ಪಲು ಆಗುವುದಿಲ್ಲ. ಏಕೆಂದರೆ ವಿಜಯನಗರ ಕಾಲಕ್ಕೂ ಬಹು ಹಿಂದೆಯೇ ಈ ಗ್ರಾಮ ದೇವತಾ ಶಿಲ್ಪಗಳು ಉತ್ತರ ಕರ್ನಾಟಕದಲ್ಲಿ ಹೇರಳವಾಗಿ ಸೃಷ್ಠಿಗೊಂಡಿರುವುದನ್ನು ಗಮನಿಸಿದರೆ ಈ ಪರಂಪರೆ ವಿಜಯನಗರದ ಕಾಲಕ್ಕೂ ಹಿಂದಿನಿಂದಲೇ ಇದ್ದಿರಬಹುದೆಂದು ಹೇಳಬಹುದು.

ಬಸವನ ಬಾಗೇವಾಡಿ [೭೭] ವಡವಡಗಿ [೭೮] ತಿಳಗೋಳ [೭೯] ಊರುಗಳ ದ್ಯಾಮವ್ವ ಶಿಲ್ಪಗಳೂ ವಿಶೇಷವಾಗಿವೆ. ತಿಳಗೋಳದ ದ್ಯಾಮವ್ವ ಶಿಲ್ಪದ ವಾಹನವಾದ ಸಿಂಹದ ಕಾಲುಗಳ ಮಧ್ಯೆ ಶುಂಭ ನಿಂತಿರುವ ಶಿಲ್ಪವಿದೆ. ಉಳಿದವುಗಳೆಲ್ಲ ಸಾಮಾನ್ಯವಾಗಿವೆ.

**ದ್ಯಾಮವ್ವ ಶಿಲ್ಪದ ರಚನೆಯ ನಿಯಮಗಳು :** ದ್ಯಾಮವ್ವನ ವಾರಗಳಾದ ಮಂಗಳವಾರ ಇಲ್ಲವೆ ಶುಕ್ರವಾರ ದಿವಸ ಬಡಿಗೇರರು ಸ್ನಾನ ಮಾಡಿ, ಶುಚಿರ್ಭೂತರಾಗಿ ಮಡಿಯುಟ್ಟು ಗುಡ್ಡ ಇಲ್ಲವೆ

---

೭೨. ಕಾಚಾಪುರ : ತಾ. ಜೇವರ್ಗಿ, ಜಿ. ಗುಲಬರ್ಗಾ
೭೩. ನಿಡಗುಂದಿ : ತಾ. ಚಿಂಚೋಳಿ, ಜಿ. ಗುಲಬರ್ಗಾ
೭೪. ಹೊಳೆ ಆಲೂರು : ತಾ. ರೋಣ, ಜಿ. ಗದಗ
೭೫. ಮಾಹಿತಿ ನೀಡಿದವರು : ಎಂ.ಆರ್. ಬಾಳೀಕಾಯಿ, ಸಾ. ಧಾರವಾಡ
೭೬. ಡಾ. ಸಿ. ಮಹದೇವ : ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ಪುಟ -೪೧
೭೭. ಬಸವನ ಬಾಗೇವಾಡಿ : ತಾ. ಬಸವನ ಬಾಗೇವಾಡಿ, ಜಿ. ಬಿಜಾಪುರ
೭೮. ವಡವಡಗಿ :ತಾ. ಬಸವನ ಬಾಗೇವಾಡಿ, ಜಿ. ಬಿಜಾಪುರ
೭೯. ತಿಳಗೊಳ : ತಾ. ಸಿಂದಗಿ, ಜಿ. ಬಿಜಾಪುರ

ಕಾಡಿಗೆ ಹೋಗುವರು. ಅಲ್ಲಿಂದ ತಾವು ಮಾಡಬೇಕೆಂದಿರುವ ಶಿಲ್ಪಕ್ಕೆ ಬೇಕಾಗಿರುವ ಮರವನ್ನು ಕಡಿದು ತರುವರು. ಅದನ್ನು ನೆರಳಲ್ಲಿ ಒಣಗಿಸುವರು. ಮತ್ತೆ ಮಂಗಳವಾರ ಇಲ್ಲವೆ ಶುಕ್ರವಾರ ಸ್ನಾನ ಮಾಡಿ ಶಿಲ್ಪ ರಚನೆಯಲ್ಲಿ ತೊಡಗುವರು. ಕೆಲವು ಶಿಲ್ಪಗಳನ್ನು ಒಂದೇ ದಿನದಲ್ಲೇ ಮಾಡುವದುಂಟು. ತಯಾರಾದ ಮೂರ್ತಿಶಿಲ್ಪಗಳನ್ನು ಕುಲದೇವತೆ ಕಾಳಿಯ ಗುಡಿಯಲ್ಲಿಡುವರು. ದ್ಯಾಮವ್ವನ ಶಿಲ್ಪದ ರಚನೆಯ ಖರ್ಚು ಮಾಲಿಗೌಡ ಕೊಡುವನು. ರಚನೆಗೊಂಡ ಮೂರ್ತಿಗೆ ತಕ್ಕಂತೆ ಬಣ್ಣ ಕೊಡುವರು. ಎರಡರಿಂದ ಆರು ಅಡಿಗಳವರೆಗೆ ಇರುವ ಈ ಶಿಲ್ಪಗಳಿಗೆ ತಕ್ಕಂತೆ ವಾಹನ ಶಿಲ್ಪಗಳನ್ನು ಮಾಡುವರು. ದ್ಯಾಮವ್ವನ ಶಿಲ್ಪಕ್ಕೆ ಕ್ವಚಿತ್ತಾಗಿ ಶ್ರೀಗಂಧವನ್ನು ಬಳಸುತ್ತಾರೆ. ಉಳಿದಂತೆ ಬೇವು, ಮಾವು, ಸಾಗವಾನಿ ಮರಗಳನ್ನು ಬಳಸಲಾಗುತ್ತದೆ.

**ವಿಸರ್ಜನೆ :** ದ್ಯಾಮವ್ವ ಶಿಲ್ಪಗಳನ್ನು ತೀರ ಹಳೆಯವಾದರೆ, ಇಲ್ಲವೆ ಯಾವುದಾದರೂ ಅವಯವ ಮುಕ್ಕಾದರೆ ಇಲ್ಲವೆ ಬೆಂಕಿ ತಗುಲಿದರೆ ಮಾತ್ರ ಅವನ್ನು ಸ್ಥಳಾಂತರಿಸಿ, ಅವುಗಳ ಸ್ಥಾನದಲ್ಲಿ ಹೊಸ ಪ್ರತಿಮೆಗಳನ್ನು ಮಾಡಿಸಿ ಪ್ರತಿಷ್ಠಾಪಿಸಲಾಗುತ್ತದೆ. ಪ್ರತಿ ಮೂರು ವರ್ಷಕ್ಕೊಮ್ಮೆ ಇಲ್ಲವೆ ಐದು ವರ್ಷಕ್ಕೊಮ್ಮೆ ಪ್ರತಿಮೆಗಳಿಗೆ ಪುನಃ ಬಣ್ಣ ಬಳೆದು ಅಲಂಕರಿಸಲಾಗುತ್ತದೆ. ಕೆಲವೆಡೆ ಊರ ಹತ್ತಿರವಿರುವ ಬನ್ನಿ ಮರದ ಬುಡದಲ್ಲಿ ಅಥವಾ ಕಟ್ಟೆಯ ಮೇಲೆ ಹಳೆಯದಾದ ದ್ಯಾಮವ್ವನ ಶಿಲ್ಪವನ್ನು ಇಟ್ಟು ಬರುತ್ತಾರೆ. ಹೊಸ ಶಿಲ್ಪ ಮಾಡಿಸಿ ಮತ್ತೆ ಪ್ರತಿಷ್ಠಾಪಿಸುತ್ತಾರೆ.

ನಮ್ಮ ಜನಪದರ ಉಗ್ರ ಸ್ವರೂಪದ ಮರದ ಮಾಧ್ಯಮದ ಜನಪದ ಸ್ತ್ರೀದೇವತಾ ಶಿಲ್ಪಗಳಲ್ಲಿ ದ್ಯಾಮವ್ವನ ಶಿಲ್ಪವು ಮುಖ್ಯವಾಗಿದೆ. ಹಲವು ಆಚರಣೆಯ ಹಿನ್ನೆಲೆಯಲ್ಲಿ ಮುಖ್ಯವಾಗುವ ಈ ದೇವತಾ ಶಿಲ್ಪವು ಡಾಳವಾದ ಬಣ್ಣಗಳು ಮತ್ತು ಅಲಂಕಾರಗಳಿಂದ, ಅಲ್ಲದೆ ಕೈಯಲ್ಲಿರುವ ಖಡ್ಗ, ಶಂಖ ಇತ್ಯಾದಿ ಆಯುಧಗಳು, ಉಗ್ರ ಭಾವ ಮುಂತಾದವುಗಳಿಂದ ಕೂಡಿ ಮಕ್ಕಳಾದಿಯಾಗಿ ದೊಡ್ಡವರನ್ನೂ ಭಾವುಕರನ್ನಾಗಿಸಿ ಭಯ ಮತ್ತು ಭಕ್ತಿಯನ್ನು ಹುಟ್ಟಿಸುವಂತಹುದಾದಿದೆ. ಉತ್ಸವದಲ್ಲಿ ಈ ದ್ಯಾಮವ್ವನ ಶಿಲ್ಪವನ್ನು ಹೊತ್ತು ಜನಸಮೂಹದ ಮಧ್ಯೆ ನಡೆದರೆ ಉಗ್ರತೆ, ಗಾಂಭೀರ್ಯತೆ ಮುಂತಾದವುಗಳಿಂದ ಇಡೀ ಸಮೂಹದ ವಾತಾವರಣವೇ ಒಂದು ಬಗೆಯ ಭಯ-ಭಕ್ತಿಗಳಿಂದ ಕೂಡಿರುತ್ತದೆ.

**ದ್ಯಾಮವ್ವ ಶಿಲ್ಪದ ಜೋಡಣೆ :**[೮೦] ದ್ಯಾಮವ್ವ ಶಿಲ್ಪವನ್ನು ಬಿಡಿ ಬಿಡಿ ಭಾಗಗಳಾಗಿ ರುಂಡ, ಮುಂಡ, ಕೈಕಾಲುಗಳನ್ನು ರಚಿಸಿಕೊಂಡು ನಂತರ ಅವುಗಳನ್ನು ಜೋಡಿಸಿ ಪೂರ್ಣಪ್ರಮಾಣದಲ್ಲಿ ಶಿಲ್ಪವನ್ನು ನಿರ್ಮಿಸಲಾಗುತ್ತದೆ. ಈ ಜೋಡಣೆ ಮೂರು ರೀತಿಯಲ್ಲಿರುತ್ತದೆ. ೧. ಕೀಲು ಜೋಡಣೆ, ೨. ಕೂಲು ಜೋಡಣೆ, ೩. ಕತ್ತರಿ ಜೋಡಣೆ

---


೮೦. ವಿವರ ನೀಡಿದವರು : ಭಾಸ್ಕರಾಚಾರ್ಯ, ಸೊಂಡೂರು



ದ್ಯಾಮವ್ವನ ಶಿಲ್ಪ ( ಮುಷ್ಠಿಗೇರಿ )



ಕಿನ್ನಾಳ ಶಿಲ್ಪಗಳು ( ಬಣ್ಣಕಾಣುವ ಮೊದಲು )



ದ್ಯಾಮವ್ವನ ಶಿಲ್ಪ ( ಅರಳಗುಂಡಗಿ )



ಲಕ್ಕವ್ವನ ಶಿಲ್ಪ



ದ್ಯಾಮವ್ವನ ಶಿಲ್ಪ



ಕರೆಮ್ಮನ ಶಿಲ್ಪ ( ಮುಷ್ಟಿಗೇರಿ )



ದ್ಯಾಮವ್ವನ ಶಿಲ್ಪ ( ಮಾಗಣಗೇರಿ )



ದ್ಯಾಮವ್ವನ ಶಿಲ್ಪ ( ಅಮರಗೋಳ )

**೧. ಕೀಲು ಜೋಡಣೆ :** ತೋಳು ಮತ್ತು ಮುಂಡ, ತೊಡೆ ಮತ್ತು ಜಂಗ, ಜಂಗ ಮತ್ತು ಪಾದ ಇವುಗಳನ್ನು ಕೀಲು ಜೋಡಣೆಯಿಂದ ರಚಿಸಲಾಗಿರುತ್ತದೆ.

**೨. ಕೂಲು ಜೋಡಣೆ :** ಕುತ್ತಿಗೆ ಮತ್ತು ಮುಂಡ, ಮುಂಡ ಮತ್ತು ತೋಳು, ಮುಂಡ ಮತ್ತು ಪೀಠ ಇವುಗಳನ್ನು ಕೂಲು ಜೋಡಣೆಯಿಂದ ರಚಿಸಲಾಗಿರುತ್ತದೆ.

**೩. ಕತ್ತರಿ ಜೋಡಣೆ :** ಕೀಲು ಜೋಡಣೆ ಮತ್ತು ಕೂಲು ಜೋಡಣೆ ಈ ಎರಡೂ ವಿಧಾನಗಳು ಕತ್ತರಿ ಜೋಡಣೆಗಳಲ್ಲಿ ಮಿಳಿತಗೊಂಡಿರುತ್ತವೆ.

## ದ್ಯಾಮವ್ವ ಶಿಲ್ಪದ ರಚನೆಯ ವಿಧಾನ [೮೧]

ದ್ಯಾಮವ್ವ ಶಿಲ್ಪದ ರಚನಾ ಹಂತದಲ್ಲಿ ಮುಖ್ಯವಾಗಿ ಅ. ರುಂಡ ಮತ್ತು ಆ. ಮುಂಡಭಾಗವೆಂದು ವಿಭಾಗಿಸಬಹುದು. ಅವುಗಳಲ್ಲಿ ಮತ್ತೆ ವಿಂಗಡಣೆ ಮಾಡಿಕೊಳ್ಳಲಾಗುವದು.

**ಅ. ರುಂಡ**

- ಕಿರೀಟ
- ಮುಖ

ಕಿರೀಟ ಮತ್ತು ಮುಖದ ಭಾಗಗಳು ಮರದ ಒಂದೇ ತುಂಡಿನಲ್ಲಿ ಇರುತ್ತವೆ.

**ಆ. ಮುಂಡ**

- ಎದೆ, ಹೊಟ್ಟೆ, ಸೊಂಟ
- ಕೈಗಳು
- ಕಾಲುಗಳು

**ಕೈಗಳು**

- ತೋಳಿನಿಂದ ಮೊಳಕೈವರೆಗೆ
- ಮೊಳಕೈಯಿಂದ ಮುಂಗೈವರೆಗೆ

**ಕಾಲುಗಳು**

- ತೊಡೆ (ಸೊಂಟದಿಂದ ಮೊಳಕಾಲಿನವರೆಗೆ)
  ಮೊಳಕಾಲಿನಿಂದ ಕೀಲುಭಾಗ
- ಜಂಗ (ಮೊಳಕಾಲಿನಿಂದ ಪಾದದವರೆಗೆ)
  ಕೀಲುಭಾಗದಿಂದ ಬೆರಳ ತುದಿಯ ವರೆಗೆ

---


೮೧. ವಿವರ ನೀಡಿದವರು : ಭಾಸ್ಕರಾಚಾರ್ಯ, ಸೊಂಡೂರು

[illegible]

ಜೋಡಣೆ

ಕೀಲು ಜೋಡಣೆ — ಕೂಲು ಜೋಡಣೆ

ಕತ್ತರಿ ಜೋಡಣೆ



೧. ಮುಂಡ ಭಾಗ ೨. ಸೊಂಟ ೩. ಕೂಲು ೪. ಕೀಲು ೫. ಪೀಠ ೬. ಕತ್ತರಿ ೭. ತೋಳು ೮. ಕೀಲುಗಳು ೯. ಕೂಲು ೧೦. ಮುಂಗೈ ೧೧. ಕತ್ತರಿ ಜೋಡಣೆ ೧೨. ರಂದ್ರ

**ದ್ಯಾಮವ್ವ ಶಿಲ್ಪದ ಮುಖದ ರಚನೆ :** [೮೨] ಶಿಲ್ಪದ ಮುಖದ ರಚನೆಗೆ ಬೇಕಾದ ಅಳತೆಯ ಮರದ ತುಂಡೊಂದರಲ್ಲಿ ಅ) ಕಿರೀಟ, ಬ) ಮುಖ, ಕ) ಕತ್ತು ಹೀಗೆ ಮೂರು ಭಾಗ ಮಾಡಿಕೊಳ್ಳಲಾಗುವದು.

ಮುಖದಲ್ಲಿ ಮತ್ತೆ ಮೂರು ಭಾಗಗಳಾಗಿ ವಿಂಗಡಿಸಲಾಗುತ್ತದೆ.

ಅ) ಲಲಾಟದಿಂದ ಹಣೆಯ ಭಾಗ ಬ) ಹಣೆಯಿಂದ ಮೂಗಿನ ತುದಿ ಕ) ಮೂಗಿನ ತುದಿಯಿಂದ ಗದ್ದದವರೆಗೆ.

ಮೊದಲು ಈ ಭಾಗಗಳನ್ನು ಕೈವಾರದಿಂದ ಮಾಡಿಕೊಳ್ಳಲಾಗುವದು.

**ಕಿರೀಟ :** ಮುಖದ ಎರಡು ಭಾಗದಷ್ಟು ಕಿರೀಟವಿರುತ್ತದೆ.
ಮುಖದಲ್ಲಿ ಅಂದರೆ ಲಲಾಟದಿಂದ ( ಹಣೆಯ ಮೇಲ್ತುದಿ ) ಗದ್ದದ ಕೊನೆಯವರೆಗೆ ಮೂರು ಸಮ ಭಾಗಗಳನ್ನು ಮಾಡಲಾಗುವದು. ಅದರಲ್ಲಿ ಹಣೆ, ಮೂಗು, ಮೂಗಿನಿಂದ ಗದ್ದದ ಭಾಗಗಳು, ಮುಖದ

೮೨. ವಿವರ ನೀಡಿದವರು : ಭಾಸ್ಕರಾಚಾರ್ಯ, ಸೊಂಡೂರು

ಮೂರು ಭಾಗದ ಒಂದರಷ್ಟು ಕತ್ತು ಇರುತ್ತದೆ.

**ಶಿಲ್ಪದ ಒಟ್ಟು ಎತ್ತರ :** ೧. ಶಿಲ್ಪದ ಎತ್ತರವು ಮುಖದ ನಾಲ್ಕೂವರೆ ಪಟ್ಟು ಕುಳಿತ ಭಂಗಿ (ತಲೆಯ ಕೊನೆಯಿಂದ ಪೃಷ್ಠ ಭಾಗದವರೆಗೆ) ಇದ್ದರೆ, ೨. ಮುಖದ ಎಂಟು ಅಥವಾ ಒಂಬತ್ತು ಪಟ್ಟು ಶಿಲ್ಪದ ನಿಂತ ಭಂಗಿ (ತಲೆಯಿಂದ ಪಾದದವರೆಗೆ) ಇರುತ್ತದೆ.

## ೨. ಮರಗಮ್ಮನ ಶಿಲ್ಪಗಳು

ಮರಗಮ್ಮ ಗ್ರಾಮ ದೇವತೆಗಳಲ್ಲಿ ಒಂದು. ಮರಗಮ್ಮನನ್ನು ಮಾರಿ ಎಂದೂ ಕರೆಯುವರು. ಗುಲಬರ್ಗಾ, ಬಿಜಾಪೂರದ ಪ್ರದೇಶಗಳಲ್ಲಿ ಈ ದೇವತೆಗೆ ಮರಗಮ್ಮ, ಮರೆಮ್ಮ, ಮಾರೆಮ್ಮನೆಂದೂ, ಬೀದರ ಕಡೆಗೆ ಮರಗೆಮ್ಮನೆಂದೂ, ರಾಯಚೂರು ಜಿಲ್ಲೆಯಲ್ಲಿ ಮಾರೆಮ್ಮನೆಂದೂ ಕರೆಯುವರು.

ಮರಗಮ್ಮನ ಸೃಷ್ಠಿಯಾದದ್ದು ಸಾವಿನ ಭಯದಿಂದ ಎಂದು ಸಾಮಾನ್ಯವಾಗಿ ತಿಳಿದು ಬರುತ್ತದೆ. ಈಕೆ ಸಾವು, ನೋವುಗಳಿಂದ ರಕ್ಷಿಸುವ ದೇವತೆಯಾದ ಕಾರಣ ಎಲ್ಲ ದೇವತೆಗಳಿಗಿಂತ ಈಕೆಯನ್ನು ಕುರಿತು ಜನಪದರಲ್ಲಿ ಅನೇಕ ಬಗೆಯ ಕಥೆಗಳು[೮೩] ಹುಟ್ಟಿಕೊಂಡಿವೆ.

ಮೂಲತಃ ಮಾರಿ ಕ್ಷುದ್ರ ದೇವತೆಯಾಗಿ, ಮಹಾಮಾರಿಯಾಗಿ, ಹೆಮ್ಮಾರಿಯಾಗಿ ಭಯ ಹುಟ್ಟಿಸುವ ಭಯಂಕರ ರೋಗಗಳನ್ನು ಸೃಷ್ಟಿಸುವ ಜನ-ಜಾನುವಾರುಗಳಿಗೂ ಉಪದ್ರವ ಕೊಡುವ ಕಾಲರದಮ್ಮ, ಪ್ಲೇಗಿನಮ್ಮ, ಸಿಡುಬಿನಮ್ಮ, ದಡಾರದಮ್ಮಳಾಗಿ ಜನರ ಬೆನ್ನು ಹತ್ತಿ ಪೂಜೆ ಮಾಡಿಸಿಕೊಳ್ಳುತ್ತಿರುವ ಉಗ್ರದೇವತೆಯಾಗಿ ರೂಪಗೊಂಡಿದ್ದಾಳೆ. ಊರೊಳಗೆ ಜನರು ಸಾವು, ನೋವು ಸಂಭವಿಸಿ ಸಂಕಷ್ಟದಲ್ಲಿ ತೊಳಲಾಡುತ್ತಿರುವಾಗ, ಮಾರಮ್ಮನ ವಕ್ರದೃಷ್ಟಿ ನಮ್ಮ ಮೇಲೆ ಬಿದ್ದಿದೆ ಎಂದು ತಿಳಿದು ಹಬ್ಬ, ವ್ರತಾಚರಣೆ, ಬಲಿ, ಮೀಸಲು ಮತ್ತು ಹರಕೆ ಸಲ್ಲಿಸಿ ಅವಳನ್ನು ತೃಪ್ತಿಗೊಳಿಸುತ್ತಿದ್ದರು ನಮ್ಮ ಜನಪದರು. ಈ ಮರಗಮ್ಮನ ಪೂಜಕರು ಸಾಮಾನ್ಯವಾಗಿ ದಲಿತರಾಗಿರುತ್ತಾರೆ.

**ರಚನೆ ಒಂದು :**[೮೪] ಮರಗಮ್ಮನ ಶಿಲ್ಪವು ಸಾಮಾನ್ಯವಾಗಿ ಕಟ್ಟಿಗೆಯಿಂದ ರಚಿಸಲಾಗುತ್ತದೆ. ಈ ಶಿಲ್ಪವನ್ನು ಬಡಿಗೇರರು ಮಾಡುತ್ತಾರೆ. ಶಿಲ್ಪ ರಚಿಸಬೇಕಾದರೆ, ತಯಾರಕರು ಹೊಸ ಮರವನ್ನು ತರುವುದರಿಂದ ಹಿಡಿದು ಶಿಲ್ಪ ಮುಗಿಸುವವರೆಗೆ ಹಲವು ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸುತ್ತಾರೆ. ಈ ಮಾರೆಮ್ಮ ಅಥವಾ ಮರಗಮ್ಮನ ಶಿಲ್ಪ ರಚನೆಗೆ ಮಡ್ಡಿ ಅಥವಾ ಮಳಗಿ ಕಟ್ಟಿಗೆಯನ್ನು ಬಳಸುತ್ತಾರೆ. ಈ ಶಿಲ್ಪಗಳು ಸಾಮಾನ್ಯವಾಗಿ ಮೂರರಿಂದ ನಾಲ್ಕು ಅಡಿಯವರೆಗೆ ಎತ್ತರದವುಗಳಾಗಿರುತ್ತವೆ. ಅರಿಷಿಣ, ಕುಂಕುಮ ಹಚ್ಚಿ, ಸಾಧಾರಣ ಬಟ್ಟೆ ತೊಡಿಸಿ ಪ್ರತಿಷ್ಠಾಪಿಸಲಾಗಿರುತ್ತದೆ. ಸಾಮಾನ್ಯವಾಗಿ ಒಂದು ಮಾರಿ

---

೮೩. ವಿವರಗಳಿಗೆ ನೋಡಿರಿ : ಡಾ. ಚೆನ್ನಣ್ಣ ವಾಲೀಕಾರ : ಹೈದರಾಬಾದ್ ಕರ್ನಾಟಕದ ಗ್ರಾಮ ದೇವತೆಗಳು, ಪುಟ-೮೯, ೧೨೫

೮೪. ಶೂದ್ರರಿಂದ ಆಚರಿಸಲ್ಪಡುವ ದೇವತೆ. ಈ ಕಾರಣಕ್ಕಾಗಿ, ಮರಗಮ್ಮನ ಶಿಲ್ಪಗಳೂ ಸರಳ ರಚನೆಗಳಾಗಿರುತ್ತವೆ ಎನ್ನಬೇಕು

ಗುಡಿಯಲ್ಲಿ ಒಂದು ಜೊತೆ ಇಲ್ಲವೆ ಮೂರು ಅಥವಾ ಐದು ಶಿಲ್ಪಗಳಿರುತ್ತವೆ. ಇವೆಲ್ಲ ಕುಳಿತ, ಕೆಲವೆಡೆ ನಿಂತ ಭಂಗಿಗಳಲ್ಲಿರುತ್ತವೆ. ಎಲ್ಲ ಶಿಲ್ಪಗಳಿಗೂ ಬಂಡಾರ, ಜಾಜ ಬಳಿದು ಸಿಂಗರಿಸಲಾಗಿರುತ್ತದೆ. ಈ ಶಿಲ್ಪಗಳನ್ನು ಕೆಲವೆಡೆ ತಳವಾರರು ಜಾಲಿಯ ಮರದಿಂದ ಮಾಡಿರುತ್ತಾರೆ. ಜಾತ್ರೆ, ಉತ್ಸವದ ಸಂದರ್ಭಗಳಲ್ಲಿ ಈ ಶಿಲ್ಪಗಳನ್ನು ವಿಶೇಷ ವಸ್ತ್ರಾಲಂಕಾರಗಳಿಂದ ಸಿಂಗರಿಸಿರುತ್ತಾರೆ. ಕುಂಕುಮ, ಚಂದ್ರ, ಹೂದಂಡೆ ಮತ್ತು ಜಾಜದಿಂದ ಅಲಂಕಾರಗೊಳಿಸಿರುತ್ತಾರೆ. ಆದರೆ ಎಷ್ಟೇ ಸಿಂಗರಿಸಿದ್ದರೂ ಈ ಶಿಲ್ಪಗಳು ಸ್ಫುರದ್ರೂಪಿಯಾಗಿ ಮನಸ್ಸಿಗೆ ಆನಂದ, ಸಂತೋಷ ತರುವಂತಹ ದೃಶ್ಯಾನುಭವ ನೀಡುವದಿಲ್ಲ.

**ರಚನೆ ಎರಡು :** ಮರಗಮ್ಮನ ಶಿಲ್ಪಗಳು ೧. ಕುಳಿತ ಭಂಗಿ ೨. ನಿಂತ ಭಂಗಿ ಹೀಗೆ ಎರಡು ರೀತಿಯಲ್ಲಿರುತ್ತವೆ. ಸಾಮಾನ್ಯವಾಗಿ ಕುಳಿತ ಭಂಗಿಯ ಮರಗಮ್ಮನ ಶಿಲ್ಪಗಳೇ ಹೆಚ್ಚಾಗಿ ಕಂಡು ಬರುತ್ತವೆ. ಇವುಗಳ ರಚನೆ ಸರಳವಾಗಿರುತ್ತದೆ. ಒಂದು ಕೈಯಲ್ಲಿ (ಬಲಗೈ) ಖಡ್ಗ ಮತ್ತೊಂದು ಕೈಯಲ್ಲಿ ಬಟ್ಟಲು, ಇವು ಎಲ್ಲ ಶಿಲ್ಪಗಳಲ್ಲೂ ಸಾಮಾನ್ಯವಾಗಿ ಕಂಡುಬರುತ್ತವೆ. ರುಂಡ ಮತ್ತು ಮುಂಡ ಭಾಗವನ್ನು ಅಖಂಡ ಮರದ ತುಂಡಿನಲ್ಲಿ ಮಾಡಲಾಗಿರುತ್ತದೆ. ಆದರೆ ಕೈಗಳನ್ನು, ಕಾಲುಗಳನ್ನು ಪ್ರತ್ಯೇಕವಾಗಿ ಮಾಡಿ ಮೊಳೆ ಅಥವಾ ಕೀಲು ಹೊಡೆದು ಜೋಡಿಸಲಾಗಿರುತ್ತದೆ. ಹೆಣ್ಣು ಶಿಲ್ಪಗಳಿಗೆ ತಲೆಯ ಮೇಲೆ ಹೂದಂಡೆ ತೊಡಿಸಿದ್ದರೆ, ಪುರುಷ ಶಿಲ್ಪಕ್ಕೆ ಪೇಟ ತೊಡಿಸಿ ಕೊರಳಲ್ಲಿ ಬಿಳಿ ಬಣ್ಣದ ಶಾಲು ಹಾಗೂ ಹೂದಂಡೆಯನ್ನು ಹಾಕಲಾಗಿರುತ್ತದೆ. ಹೆಣ್ಣು ಶಿಲ್ಪಗಳಿಗೆ ಸೀರೆ, ಬಳೆ ತೊಡಿಸಿರುತ್ತಾರೆ. ಉಡಿಯಲ್ಲಿ ಹಣ್ಣುಗಳನ್ನು ಹಾಕಿರುತ್ತಾರೆ. ಕಣ್ಣುಗಳಿಗೆ ಬೆಳ್ಳಿಯ ತಗಡಿನ ಕಣ್ಣು ಬಟ್ಟುಗಳನ್ನು ಮಾಡಿರುತ್ತಾರೆ. ಈ ಶಿಲ್ಪಗಳನ್ನು ಕುರ್ಚಿಯಂತಹ ಸಾಧಾರಣವಾದ ಕಟ್ಟಿಗೆಯ ಆಸನಗಳ ಮೇಲೆ ಪ್ರತಿಷ್ಠಾಪಿಸಿರುತ್ತಾರೆ. ಗುಲಬರ್ಗಾದ ಹೊನ್ನಕೇರಣಿಗಿಯ ಮರಗಮ್ಮನ ಎರಡು ಸ್ತ್ರೀ ಮತ್ತು ಒಂದು ಪುರುಷ ಶಿಲ್ಪಗಳು ಕುಳಿತ ಭಂಗಿಯಲ್ಲಿವೆ. ಗುಲಬರ್ಗಾದ ಭೀಮಾನಗರದ ಮರಗಮ್ಮನ ಗುಡಿಯಲ್ಲಿ ೮-೧೦ ಶಿಲ್ಪಗಳು ನಿಂತ ಭಂಗಿಯಲ್ಲಿನ ಸಾಧಾರಣ ರಚನೆಳಾಗಿವೆ. ಕೈಗಳೆಲ್ಲ ಕಿತ್ತು ಹೋಗಿವೆ. ಕುಂಕುಮ ಅರಿಷಿಣಗಳಿಂದ ಪೂಜೆಗೊಂಡಿವೆ.

**ಆಚರಣೆ :** ಈ ಮಾರಿ ದೇವತೆಯ ಮುಂದೆ, ಉತ್ಸವದ ಸಂದರ್ಭಗಳಲ್ಲಿ ಕುರಿ, ಕೋಳಿಗಳನ್ನು ಬಲಿ ಕೊಡಲಾಗುತ್ತದೆ. ಕೆಲವೆಡೆ ಮಾರಿಯ ಜಾತ್ರೆಗಳು ನಡೆಯುತ್ತವೆ. ತೇರು ಎಳೆಯುವದು, ತೆಪ್ಪೋತ್ಸವ ಮಾಡುವದು ಇತ್ಯಾದಿಗಳು ಜಾತ್ರೆಯ ಮುಖ್ಯ ಆಕರ್ಷಣೆಗಳಾಗಿರುತ್ತವೆ. ಈ ಉತ್ಸವಗಳು ವರ್ಷಕ್ಕೊಮ್ಮೆ, ಮೂರು ವರ್ಷಕ್ಕೊಮ್ಮೆ, ಐದು ವರ್ಷಕ್ಕೊಮ್ಮೆ, ಒಂಭತ್ತು ವರ್ಷಕ್ಕೊಮ್ಮೆ ಇಲ್ಲವೆ ಹನ್ನೆರಡು ವರ್ಷಕ್ಕೊಮ್ಮೆ ನಡೆಯುತ್ತವೆ.

ಈ ಮರಗಮ್ಮ ಶಿಷ್ಟದೇವತೆಯಾಗಿಯೂ ಹಲವಾರು ವರುಷಗಳಿಂದ ಪೂಜೆಗೊಳ್ಳುತ್ತಲಿದ್ದಾಳೆ. ಆದರೆ, ಉತ್ತರ ಕರ್ನಾಟಕದ ಹಲವಾರು ಊರುಗಳಲ್ಲಿ, ಮಾರಿಯು ಕ್ಷುದ್ರ ದೇವತೆಯಾಗಿ, ದಲಿತರಿಂದ ಪೂಜೆಗೊಳ್ಳುತ್ತ ಅಪ್ಪಟ ಜನಪದ ದೇವತೆಯಾಗಿ ಗಮನ ಸೆಳೆಯುತ್ತಾಳೆ. ಈ ಮಾರಿಯನ್ನು ಬಿಸಿಲು ಮಾರಿ, ಗಡಿ ಮಾರಿ, ಊರು ಮಾರಿ, ಮಕ್ಕಳ ಮಾರಿ, ದನಗಳ ಮಾರಿ, ದಡಾರದಮ್ಮ ಮುಂತಾಗಿ ಜನಪದರ ಕಣ್ಣಿಗೆ

ಕಾಣಿಸಿಕೊಳ್ಳುವ ಮಾರಮ್ಮನನ್ನು ಭಕ್ತಿಯಿಂದ ಪೂಜಿಸಿ, ಆಚರಿಸಿ ಕಳುಹಿಸುತ್ತಾರೆ.[೮೫] ದನಕರುಗಳಿಗೆ ಕಾಲುಜ್ವರ, ಬಾಯಿಜ್ವರ ಬಂದು ಸಾಯುತ್ತಿದ್ದರೆ ಮರದಲ್ಲಿ ಚಿಕ್ಕದಾಗಿ ಒಂದು ಜೊತೆ ಗಂಡು ಹೆಣ್ಣು ಮೂರ್ತಿಗಳನ್ನು ಮಾಡಿ,[೮೬] ಚಿಕ್ಕ ಬಂಡಿಗಾಲಿಯ ಮೇಲೆ ಪ್ರತಿಷ್ಠಾಪಿಸಿ, ಊರಿಂದೂರಿಗೆ, ಗಡಿಯಿಂದ ಗಡಿಗೆ ಊರವರೆಲ್ಲಾ ಮಧ್ಯರಾತ್ರಿಯ ಹೊತ್ತಿನಲ್ಲಿ ಹಳೆಯ ಮೊರ, ಪೊರಕೆ, ಗಡಿಗೆ, ಪಣ ಇತ್ಯಾದಿ ವಸ್ತುಗಳೊಡನೆ, ಬಾಯಿ ಬಡಿದುಕೊಳ್ಳುತ್ತ, ಕೇಕೆ ಹಾಕುತ್ತ ಆ ಶಿಲ್ಪಗಳನ್ನು ಹೊರಗಟ್ಟಿ ತಿರುಗಿ ನೋಡದಂತೆ ಬರುತ್ತಾರೆ.

ಗ್ರಾಮೀಣ ದೇವತೆ ಮಾರಮ್ಮನ ಶಿಲ್ಪಗಳು ಚಿಕ್ಕದಾಗಿರುತ್ತವೆ. ಆದರೆ ಊರಿಗೆ ಪ್ಲೇಗು ಬಂದಾಗ ದೊಡ್ಡದಾದ ಮಾರಮ್ಮನ ಮೂರ್ತಿ ಶಿಲ್ಪಗಳನ್ನು ಮಾಡಿ, ಬಂಡಿಯಲ್ಲಿ ಮೆರಸುತ್ತಾರೆ. ಬಳಿಕ ರೋಗ ಊರು ದಾಟಲು ಸೀಮೆಯಾಚೆ ಆ ಶಿಲ್ಪಗಳನ್ನು ಬಿಟ್ಟು ಬರುವರು. ಅದಕ್ಕಾಗಿ ಅವುಗಳನ್ನು ಸೀಮೆ ಮಾರಮ್ಮ ಎನ್ನುವರು.

**ತೆಲಿಪಟರಾಯನ ಶಿಲ್ಪ :** ಇದು ಮಾರಮ್ಮನ ಮುಂದಿರುವ ಪುರುಷ ದೇವತಾ ಶಿಲ್ಪ. ಇದನ್ನು ಮಾರಮ್ಮನ ಗಂಡ ಇಲ್ಲವೆ ಸಹಾಯಕನೆಂದು ಹೇಳುವರು. ನಿಜವಾಗಿ ತೆಲಿಪಟರಾಯ ಮಾರಮ್ಮನ ಸೇವಕನಾಗಿದ್ದಾನೆ. ಆಕೆ ಹೇಳಿದ ಕೆಲಸಗಳನ್ನು ಈತ ಮಾಡುವನು[೮೭] ಎಂದು ಚೆನ್ನಣ್ಣ ವಾಲೀಕಾರರು ಅಭಿಪ್ರಾಯಪಡುತ್ತಾರೆ. ಈ ಶಿಲ್ಪವು ಮೂರರಿಂದ ಐದು ಅಡಿ ಎತ್ತರವಿರುವದು. ಇದೂ ಕೂಡ ಮಡ್ಡಿ ಅಥವಾ ಮಳಗಿ ಕಟ್ಟಿಗೆಯಿಂದ ಮಾಡಿರುವರು.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹರಡಿಕೊಂಡಿರುವ ಮರಗಮ್ಮಳನ್ನು ಮೂರು ಬಗೆಯಲ್ಲಿ ವಿಂಗಡಿಸಿ ವಿವರ ಕೊಡಬಹುದು.[೮೮] ಅ. ಊರು ಮರಗಮ್ಮ, ಬ. ಗಾಳಿಮರಗಮ್ಮ, ಕ. ಸೀಮೆ ಮರಗಮ್ಮ. ಗುಲಬರ್ಗಾ ಜಿಲ್ಲೆಯಲ್ಲಿ ಕೆಲವು ಪ್ರಸಿದ್ಧ ಮರಗಮ್ಮ ದೇವತೆಗಳಿವೆ. ಕಮಲಾನಗರ,[೮೯] ಆಲಳ್ಳಿ,[೯೦] ಚಿತ್ತಾಪೂರ, ಕೊಡದೂರು,[೯೧] ಹೊನ್ನ ಕೀರಣಗಿ[೯೨] ಮುಂತಾದ ಊರುಗಳ ಮರಗಮ್ಮ ದೇವತಾ ಶಿಲ್ಪಗಳು ಪ್ರಸಿದ್ಧವಾಗಿವೆ.

**ಕೀರಣಗಿ ಮರಗಮ್ಮ :** ಕೀರಣಗಿ ಮರಗಮ್ಮ ಇಡೀ ಜಿಲ್ಲೆಯಲ್ಲಿ ಮಾತ್ರವಲ್ಲ ಹೊರಗಿನ ಮಹಾರಾಷ್ಟ್ರದ ವರೆಗೂ ಪ್ರಸಿದ್ಧ. ಈ ದೇವಿಯ ಗುಡಿ ಊರಿನಿಂದ ಹೊರಗೆ ದೂರದಲ್ಲಿದೆ. ಈ ಗುಡಿಯಲ್ಲಿ

---

೮೫. ಡಾ. ಶಶಿಕಲಾ ಮೋಳ್ದಿ (ಸಂ) : ವಂದನೆ, ಡಾ. ಡಿ.ಬಿ. ಹೆಂಡಿ ಸಂಭಾವನಾ ಗ್ರಂಥ, ಪುಟ - ೧೨೨

೮೬. ..... ಅದೇ ....., ಪುಟ - ೧೨೩

೮೭. ಕರೀಗೌಡ ಬೀಚನಹಳ್ಳಿ (ಸಂ) : ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವ ಕೋಶ - ೨, ಪುಟ - ೧೯೮

೮೮. ಕರೀಗೌಡ ಬೀಚನಹಳ್ಳಿ (ಸಂ) : ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವ ಕೋಶ - ೨, ಪುಟ - ೧೯೯

೮೯. ಕಮಲಾನಗರ : ತಾ. ಜಿ. ಗುಲಬರ್ಗಾ

೯೦. ಆಲಳ್ಳಿ : ತಾ. ಜಿ. ಗುಲಬರ್ಗಾ

೯೧. ಕೊಡದೂರು : ತಾ. ಚಿತ್ತಾಪೂರ, ಜಿ. ಗುಲಬರ್ಗಾ

೯೨. ಹೊನ್ನ ಕೀರಣಗಿ : ತಾ. ಜಿ. ಗುಲಬರ್ಗಾ



ಮರಗಮ್ಮನ ಶಿಲ್ಪಗಳು ( ಹೊನ್ನ ಕೀರಣಗಿ )



ಗಾಳೆಮ್ಮನ ಶಿಲ್ಪಗಳು ( ಹೊಸಪೇಟೆ )

ಅಷ್ಟೇನೂ ದೊಡ್ಡವುಗಳಲ್ಲದ ಒಂದು ಜೊತೆ ಸ್ತ್ರೀ ಪುರುಷ ಶಿಲ್ಪಗಳಿವೆ. ಈ ದೇವತಾ ಶಿಲ್ಪಗಳನ್ನು ಮೊದಲು ಶ್ರೀಗಂಧದ ಮರದಲ್ಲಿ ಮಾಡಲಾಗಿತ್ತಂತೆ. ಅವು ಬೆಂಕಿ ಅಕಸ್ಮಿಕದಲ್ಲಿ ಸುಟ್ಟು ಹೋದವೆಂದೂ, ಅವುಗಳ ಬದಲಾಗಿ ಈಗ ಸಾಧಾರಣ ಮರದಿಂದ ಮಾಡಲಾದ ಸಾಧಾರಣ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆಯೆಂದೂ ಸ್ಥಳಿಕರು ಹೇಳುತ್ತಾರೆ.[೯೩] ಪ್ರತಿ ಎರಡು ವರ್ಷಕ್ಕೊಮ್ಮೆ ಬಾದಮಿ ಅಮವಾಸ್ಯೆಗೆ ಈ ಮರಗಮ್ಮನ ಜಾತ್ರೆ ನಡೆಯುತ್ತದೆ.

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಕೆಲವು ಊರುಗಳಲ್ಲಿ ಮಾರೆಮ್ಮನ ಶಿಲ್ಪಗಳು ಹೇರಳವಾಗಿ ದೊರೆಯುತ್ತವೆ. ಅವೆಂದರೆ ಕಲ್ಲೂರು, ಇಟಗಾ, ಬಲ್ಲಟಗಿ, ನಕ್ಕುಂದಿ, ಮಲಿಯಾಬಾದ, ಉಡುಮಗಲ್ಲ, ಖಾನಾಪೂರ, ಮಟಮಾರಿ ಅಲ್ಲದೆ ದೇವದುರ್ಗ ತಾಲೂಕಿನ ಕೊತ್ತದೊಡ್ಡಿ ಮುಂತಾದೆಡೆಗಳಲ್ಲಿ ಮಾರೆಮ್ಮನ ಶಿಲ್ಪಗಳಿವೆ. ಸಿಂದಗಿ ತಾಲೂಕಿನ ಯಂಕಂಚಿ, ಖೈನೂರುಗಳಲ್ಲೂ ಈ ದೇವತಾ ಶಿಲ್ಪಗಳಿವೆ.

### ೩. ಗೌರಮ್ಮನ ಶಿಲ್ಪಗಳು

ಗೌರಮ್ಮ ಜನಪದ ದೇವತೆಯಾಗಿದ್ದು, ಈಕೆ ಹೆಣ್ಣು ಮಕ್ಕಳ ಕೇಂದ್ರಿತವಾಗಿ ಆಚರಿಸಲ್ಪಡುತ್ತಾಳೆ. ಗೌರಮ್ಮ ಅಷ್ಟಮಿಯ ಗೌರಿ, ತೊಟ್ಟಿಲ ಗೌರಿ, ಮಂಗಲ ಗೌರಿ, ಸಂಪತ್ತು ಗೌರಿ, ಗಜಗೌರಿ, ಕುಂಕುಮಗೌರಿ ಹೀಗೆ ಹಲವಾರು ಹೆಸರುಗಳಿಂದ ಕರೆಯಲ್ಪಟ್ಟು ಉತ್ತರ ಕರ್ನಾಟಕಾದ್ಯಂತ ಪೂಜಿಸಲ್ಪಡುತ್ತಾಳೆ. ಸೀಗಮ್ಮ ಶಿಲ್ಪದ ಆಚರಣೆಯ ಹಾಗೇ ಗೌರಮ್ಮನ ಆಚರಣೆಯೂ ನಡೆಯುತ್ತದೆಯಾದರೂ ಕೆಲವು ಸೌಮ್ಯತೆ ಮತ್ತು ವ್ಯತ್ಯಾಸಗಳು ಕಂಡುಬರುತ್ತವೆ.

**ಆಚರಣೆ :** ಸಾಮಾನ್ಯವಾಗಿ ಗೌರಿ ಹುಣ್ಣಿಮೆಯಲ್ಲಿ ಗೌರಮ್ಮ ಶಿಲ್ಪದ ಆಚರಣೆಯು ನಡೆಯುತ್ತದೆ. ಹುಣ್ಣಿಮೆಯ ಐದು ದಿನ ಮೊದಲೇ ಹಬ್ಬದ ದಿವಸ ಹಳ್ಳಿಯ ಪ್ರತಿಯೊಂದು ಓಣಿಯ ಹೆಣ್ಣು ಮಕ್ಕಳು ಸೇರಿ ಸಂಜೆಯ ಹೊತ್ತಿನಲ್ಲಿ ಬೆಳೆದಿಂಗಳಲ್ಲಿ ಊರ ಮುಂದಿನ ಬಾವಿಗೆ ಹೋಗಿ ಪೂಜೆ ಮಾಡಿಕೊಂಡು ಹಾಡು ಹೇಳುತ್ತಾ ಬಂದು ತಮ್ಮ ತಮ್ಮ ಕೇರಿಯ ಅಂಗಳದಲ್ಲಿ ಇಲ್ಲವೆ ಮನೆಯ ಪಡಸಾಲೆಯಲ್ಲಿ ಗೌರಮ್ಮನ ಶಿಲ್ಪವನ್ನು ಪ್ರತಿಷ್ಠಾಪಿಸಿ ಪೂಜಿಸುವರು. ಅಂದಿನಿಂದ ಹುಣ್ಣಿಮೆ ಬರುವವರೆಗೆ ಹೆಣ್ಣು ಮಕ್ಕಳು ಪ್ರತಿ ನಿತ್ಯ ಗೌರಮ್ಮನಿಗೆ ದೀಪ, ಧೂಪಗಳಿಂದ ಹಾಡು ಹೇಳುತ್ತ ಪೂಜಿಸುವರು. ದಿನವೊಂದು ತರಹದ ಸಕ್ಕರೆಯ ಪ್ರಾಣಿ, ಪಕ್ಷಿಗಳ ವೈವಿಧ್ಯಮಯವಾದ ಆರತಿಗಳನ್ನು ಮಾಡಿ ಹೂಗಳನ್ನು ಗೌರಿಗೆ ಏರಿಸಿ ಆರತಿ ಬೆಳಗುವರು. ಈ ಐದೂ ದಿನಗಳ ಕಾಲ ಹೆಂಗಳೆಯರು ಸಂಜೆಯ ಹೊತ್ತು ಓಣಿಯ ಇತರರ ಮನೆ ಮನೆಗಳಿಗೆ ಹೋಗಿ ಗಂಗೆ, ಗೌರಿಯರ ಕುರಿತು ಸ್ಪರ್ಧಾತ್ಮಕವಾಗಿ ಹಾಡು ಹೇಳುತ್ತಾರೆ. ಬೆಳದಿಂಗಳಲ್ಲಿ ಕೆಲವರು ಎರಡು ಗುಂಪಾಗಿ ಗಂಗೆ-ಗೌರಿ ಆಟ ಆಡುತ್ತಾರೆ. ಕೊನೆಗೆ ಅಂದರೆ ಗೌರಿ

---

೯೩. ವಿವರ ನೀಡಿದವರು : ಮರೆಪ್ಪ ಪೂಜಾರಿ, ಹೊನ್ನ ಕೀರಣಗಿ



ಗೌರಮ್ಮನ ಶಿಲ್ಪ ( ಐಡಿಯಲ್ ಫೈನ್ ಆರ್ಟ್ ಸಂಸ್ಥೆ, ಗಲಬರ್ಗಾ )

ಹುಣ್ಣಿಮೆಯ ದಿವಸ ಆನೆ ಅಂಬಾರಿ ಕಟ್ಟಿ ಸಂಭ್ರಮ ಸಡಗರದಿಂದ ಗೌರಿಯನ್ನು ಗಂಡನ ಮನೆಗೆ ಕಳಿಸುವ ಕಾರ್ಯಕ್ರಮ ತುಂಬ ರಸವತ್ತಾಗಿ ನಡೆಯುತ್ತದೆ. ಹೊಸ ಗಡಿಗೆಗಳನ್ನು ತಂದು ಅವುಗಳ ಮೇಲೆ ವಿವಿಧ ಬಣ್ಣಗಳ ಚಿತ್ತಾರಗಳನ್ನು ಮಾಡಿರುತ್ತಾರೆ. ರಂದ್ರ ಮಾಡಿದ ಈ ಗಡಿಗೆಯೊಳಗೆ ದೀಪ ಹಚ್ಚಿಕೊಂಡು ರಾತ್ರಿ ವೇಳೆಯಲ್ಲಿ ಜಲಾಶಯಗಳಲ್ಲಿ ಬಿಡುವರು. ಇವುಗಳಿಗೆ ಹೊಂಗಡಗಳೆಂದು ಕರೆಯುತ್ತಾರೆ. ಈ ರೀತಿ ಗೌರಿಯನ್ನು ಗಂಡನ ಮನೆಗೆ ಕಳಿಸಿ ಹಾಡು ಹೇಳಿ ಆಟವಾಡುವ ಆಚರಣೆ ನಡೆಯುತ್ತದೆ.

**ಗೌರಮ್ಮನ ಶಿಲ್ಪದ ರಚನೆ :** ಮರ ಮಾಧ್ಯಮದ ಗೌರಮ್ಮನ ಶಿಲ್ಪವನ್ನು ಸಾಮಾನ್ಯವಾಗಿ ಬಡಿಗೇರರು ಮಾಡಿರುತ್ತಾರೆ. ಒಮ್ಮೆ ಮಾಡಲಾದ ಈ ಶಿಲ್ಪ ಹಲವು ವರ್ಷಗಳ ಕಾಲ ಇರುತ್ತದೆ. ಪ್ರತಿ ವರ್ಷ ಇದನ್ನೇ ಪೂಜಿಸುತ್ತಾರೆ. ಬಣ್ಣ ಮಾಸಿದರೆ ಪುನಃ ಬಣ್ಣ ಮಾಡಿಸುತ್ತಾರೆ. ಶಿಲ್ಪ ಎಲ್ಲಿಯಾದರೂ ಸ್ವಲ್ಪ ಮುಕ್ಕಾದರೆ ಅದರ ಸ್ಥಾನದಲ್ಲಿ ಹೊಸದೊಂದು ಗೌರಮ್ಮನ ಶಿಲ್ಪವನ್ನು ಮಾಡಿಸಿ ಪೂಜಿಸುತ್ತಾರೆ. ಮುಕ್ಕಾದ ಶಿಲ್ಪವನ್ನು ಪೂಜಿಸುವದಿಲ್ಲ. ಇನ್ನು ಮಣ್ಣಿನ ಮಾಧ್ಯಮದ ಗೌರಮ್ಮನನ್ನು ಕುಂಬಾರರು ಮಾಡುವರು. ಇಂಥ ಮಣ್ಣಿನ ಗೌರಮ್ಮಗಳು ಪ್ರತಿ ವರ್ಷ ಹೊಸದಾಗಿ ಸಿದ್ಧಗೊಳ್ಳುತ್ತವೆ. ಮಣ್ಣಿನ ಗೌರಮ್ಮ ಶಿಲ್ಪವನ್ನು ಅಂದಗೊಳಿಸಲು ಸುಣ್ಣ, ಬಣ್ಣವನ್ನು ಜೇಡಿ ಮಣ್ಣಿನಲ್ಲಿ ಮಿಶ್ರಣ ಮಾಡುತ್ತಾರೆ. ಈ ಮಣ್ಣಿನ ಶಿಲ್ಪವು ಮೂರಡಿಯವರೆಗೂ ಎತ್ತರ, ಒಂದಡಿ ಅಗಲದವರೆಗೂ ರಚನೆಯಾಗಿರುತ್ತದೆ. ಈ ಮೂರ್ತಿಯನ್ನು ಆಭರಣಗಳಿಂದ ಸಿಂಗರಿಸಿ ದಂಡೆ ಕಟ್ಟಿ, ಚಂದ್ರ ಕುಂಕುಮ ಹಚ್ಚಿ ಆರಾಧಿಸುವರು. ಗೌರಮ್ಮನಿಗೆ ವಿಶೇಷ ಆರತಿಯನ್ನು ಬೆಳಗುವರು. ಗೌರಿ ಹುಣ್ಣಿಮೆ ಮುಗಿದ ಬಳಿಕವೂ ಬರುವ ವರುಷದವರೆಗೆ ಈ ಶಿಲ್ಪವನ್ನು[೯೪] ಪೂಜಿಸುತ್ತಿರುತ್ತಾರೆ.

**ಗೌರಮ್ಮನಿಗೆ ಆರತಿ ಬೆಳಗುವದು :** ೧. ಬೆಂಡೆಯ ಆರತಿ ೨. ಎಕ್ಕೆ ಹೂವಿನ ಆರತಿ ೩. ಸವತಿಕಾಯಿ ಅಥವಾ ಹೀರೆಕಾಯಿ ಆರತಿ ೪. ಸಕ್ಕರೆ ಆರತಿ ಹೀಗೆ ದಿನಕ್ಕೊಂದು ಆರತಿಯನ್ನು ಬೆಳಗುವರು. ಈ ಶಿಲ್ಪಗಳು ಸುಮಾರು ಅರ್ಧ ಅಡಿಯಿಂದ ಎರಡೂವರೆ ಅಡಿಯವರೆಗೂ ಎತ್ತರವಾಗಿರುತ್ತವೆ. ಸಾಗವಾನಿ, ಹೆಬ್ಬೇವು, ನುಗ್ಗೆ, ಕಳ್ಳಿ ಇಲ್ಲವೆ ಹೆದ್ದೆ ಮರದಲ್ಲಿ ಈ ಶಿಲ್ಪಗಳನ್ನು ಕೆತ್ತಲಾಗಿರುತ್ತದೆ. ಇದರಲ್ಲಿ ಶಿವನ ಶಿಲ್ಪವು ದೊಡ್ಡದಾಗಿದ್ದು ಆತ ನಂದಿಯ ಮೇಲೆ ಇಲ್ಲವೆ, ಒಂದು ಪೀಠದ ಮೇಲೆ ಕುಳಿತ ಭಂಗಿಯಲ್ಲಿರುತ್ತದೆ. ಕುಳಿತ ಶಿವನ ಎಡತೊಡೆಯ ಮೇಲೆ ಗೌರಿಯು ಕುಳಿತ ಶಿಲ್ಪವಿರುತ್ತದೆ. ಶಿವನ ಜಡೆಯಲ್ಲಿ ಗಂಗೆಯ ಶಿಲ್ಪವನ್ನೂ ಕೆತ್ತಲಾಗಿರುತ್ತದೆ. ಕೆಲವು ಶಿಲ್ಪಗಳಲ್ಲಿ ಗಂಗೆಯ ತಲೆಯ ಮೇಲೆ ರಕ್ಷಣೆಯಂತೆ ಹೆಡೆ ಬಿಚ್ಚಿದ ನಾಗರ ಶಿಲ್ಪವನ್ನು ಕೆತ್ತಲಾಗಿರುತ್ತದೆ. ಉತ್ತರ ಕರ್ನಾಟಕದಲ್ಲಿ ದೊರೆಯುವ ಬಹುತೇಕ ಗೌರಮ್ಮ ಶಿಲ್ಪಗಳಲ್ಲಿ ಶಿವನ ಒಂದು ತೊಡೆಯ ಮೇಲೆ ಗೌರಮ್ಮ ಆಸೀನಳಾಗಿದ್ದರೆ, ಇನ್ನೊಂದು ತೊಡೆಯ ಮೇಲೆ ಶಿವ-ಗೌರಿಯರ ಮಗ ಗಣೇಶನು ಆಸೀನನಾಗಿರುತ್ತಾನೆ. ಕುಳಿತ ಶಿವನ ಬಲಗೈಯಲ್ಲಿ ತ್ರಿಶೂಲ, ಡಮರು ಕೆತ್ತಲಾಗಿದ್ದರೆ, ಇನ್ನೊಂದು ಕೈಯಿಂದ ಗೌರಿಯನ್ನು

---

೯೪. ಕರೀಗೌಡ ಬೀಚನಹಳ್ಳಿ (ಸಂ) : ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವ ಕೋಶ - ೨, ಪುಟ - ೨೦೦

ಬಳಸಿದಂತೆ, ಇಲ್ಲವೆ ಡಮರು ಹಿಡಿದಂತೆ ಕೆತ್ತಲಾಗಿರುತ್ತದೆ. ಕೊರಳಲ್ಲಿ ನಾಗಾಭರಣವಿರುತ್ತದೆ. ಹಿನ್ನೆಲೆಗೆ ಪ್ರಭಾವಳಿಯನ್ನು ಅರ್ಧ ವರ್ತುಳಾಕೃತಿಯಲ್ಲಿ ಕೆತ್ತಿರುತ್ತಾರೆ. ಈ ಪ್ರಭಾವಳಿಗೆ ಕೆಲವೆಡೆ ಕೀರ್ತಿಮುಖವನ್ನು ಅದರ ತಲೆಯ ಮೇಲೆ ನಾಗರವನ್ನು ಕೆತ್ತಲಾಗಿರುತ್ತದೆ. ಒಟ್ಟಾರೆಯಾಗಿ ಈ ಶಿಲ್ಪವನ್ನು ಗೌರಮ್ಮ ಶಿಲ್ಪವೆಂದೇ ಕರೆಯಲಾಗುತ್ತದೆ. ಈ ಶಿಲ್ಪವನ್ನು ಲಿಂಗದ ಪೀಠದ ಆಕಾರದ ಗದ್ದುಗೆಯ ಮೇಲಿರುವಂತೆ ಇಲ್ಲವೆ ನಂದಿಯ ಮೇಲೆ ಆಸೀನವಾಗಿರುವಂತೆ ಕೆತ್ತಲಾಗಿರುತ್ತದೆ.

**ಬಣ್ಣಗಾರಿಕೆ :** ಕಟ್ಟಿಗೆಯ ಗೌರಮ್ಮನ ಈ ಶಿಲ್ಪಗಳಿಗೆ ಸ್ಥಳೀಯರೇ ತಯಾರಿಸಿದ ಹಸಿರು, ಕೆಂಪು, ಹಳದಿ, ಕಪ್ಪು ಇತ್ಯಾದಿ ಬಣ್ಣಗಳನ್ನು ಹಚ್ಚಿ ಶಿಲ್ಪವನ್ನು ಇನ್ನಷ್ಟು ಸುಂದರಗೊಳಿಸಿರುತ್ತಾರೆ. ಅಖಂಡ ಮರದ ತುಂಡಿನಲ್ಲಿ ಕೆತ್ತಲಾಗಿರುವ ಗೌರಮ್ಮನ ಶಿಲ್ಪಗಳಿಗೆ ಕೆಲವೆಡೆ ಬಣ್ಣವನ್ನು ಬಳಿಯದೇ ಹಾಗೇ ಪೂಜಿಸುತ್ತಾರೆ. ಆದರೆ ಕಲಾವಿದನ ಕೆತ್ತನೆಯ ವಿನ್ಯಾಸ, ಕೌಶಲ್ಯದಿಂದಾಗಿ ಶಿಲ್ಪದ ಸೌಂದರ್ಯ ಆಕರ್ಷಕವಾಗಿರುತ್ತದೆ. ಬಣ್ಣ ಹಚ್ಚದೇ ಇರುವ ಶಿಲ್ಪಗಳಿಗೆ ಎಣ್ಣೆ ಸವರಿರುತ್ತಾರಷ್ಟೆ.

ಕೆಲವು ಊರುಗಳಲ್ಲಿ ಚೈತ್ರಮಾಸದಲ್ಲಿ ತೊಟ್ಟಿಲಲ್ಲಿ ಕುಳಿತ ಗೌರಿಯ ಸುಂದರವಾದ ಶಿಲ್ಪವನ್ನು ಇಟ್ಟು ಪೂಜಿಸುವದುಂಟು. ಇದೂ ಕೂಡ ಕಟ್ಟಿಗೆಯದೇ ಆಗಿರುತ್ತದೆ. ಮತ್ತು ಎರಡರಿಂದ ಮೂರು ಅಡಿ ಎತ್ತರವಿರುವದೂ ಉಂಟು.

ರೈತರಲ್ಲಿ ಭಾದ್ರಪದ ಮಾಸದ ಗೌರಿ, ಬ್ರಾಹ್ಮಣರಲ್ಲಿ ಜೇಷ್ಠಗೌರಿಗಳು ಪೂಜಿಸಲ್ಪಡುತ್ತವೆ. ಗಡಿಗೆಯನ್ನು ಗೌರಿಯಾಗಿ ಭಾವಿಸಿ ಕೂಡಿಸಲಾಗುತ್ತದೆ. ನೂಲಿನ ಹಾರ ಹಾಕಿ ಸಿಂಗರಿಸಿರುವ ಇದನ್ನು ಅಷ್ಟಮಿ ಎಳೆಗೌರಿಯಂದೇ ಕರೆಯುತ್ತಾರೆ. ಚೈತ್ರದ ಗೌರಿಯನ್ನು ತೊಟ್ಟಿಲಲ್ಲಿ ಕುಳ್ಳಿರಿಸಿರುವರು. ದಕ್ಷಿಣ ಕರ್ನಾಟಕದ ಭಾಗದಲ್ಲಿ ಉಯ್ಯಾಲೆ ಗೌರಿ ಎನ್ನುವರು. ಆಷಾಡದಲ್ಲಿ ಬ್ರಾಹ್ಮಣರು ದೀವಸಿ ಗೌರಿಯನ್ನು ಪೂಜಿಸುವರು. ಮದುವೆಯಾದವರು ಮಂಗಳ ಗೌರಿಯನ್ನು ಶ್ರಾವಣದಲ್ಲಿ ಪ್ರತಿ ಮಂಗಳವಾರ ಪೂಜಿಸುವರು. ನಾಲತವಾಡ ದೇಸಾಯರ ಮನೆಯಲ್ಲಿ ಸುಂದರವಾದ ಗೌರಿ ಶಿಲ್ಪವಿದ್ದು ಸುಮಾರು 300 ವರ್ಷಗಳ ಹಿಂದಿನದು[೯೫] ಎಂದು ಹೇಳಲಾಗುತ್ತದೆ.

ನಮ್ಮ ಹಳ್ಳಿಯ ಹೆಣ್ಣುಮಕ್ಕಳು ಆಚರಿಸುವ ಮರದ ಮಾಧ್ಯಮದ ಗೌರಮ್ಮನ ಶಿಲ್ಪ ವರ್ಷಕ್ಕೊಮ್ಮೆ ಆಚರಿಸಲ್ಪಟ್ಟರೂ, ವರ್ಷದುದ್ದಕ್ಕೂ ಅವರ ಮನದಲ್ಲಿ ಉಳಿದಿರುತ್ತದೆ. ಮನೆಯ ಪಡಸಾಲೆಯಲ್ಲಿ ಈ ಶಿಲ್ಪವನ್ನು ಪ್ರತಿಷ್ಠಾಪಿಸಿ, ಅಲಂಕರಿಸಿ ಪೂಜಿಸುವಾಗ ಅಲ್ಲಿ ಒಂದು ವಿಶಿಷ್ಟವಾದ ವಾತಾವರಣ ನಿರ್ಮಾಣವಾಗಿರುತ್ತದೆ. ಓಣಿಯ ಹೆಂಗಸರೆಲ್ಲ ಆ ಶಿಲ್ಪದ ಆಕಾರ, ಬಣ್ಣ, ಅಲಂಕಾರಗಳನ್ನು ಹೊಗಳಿ, ಚರ್ಚಿಸಿ, ಹಾಡುಗಳನ್ನು ಹೇಳಿ ಒಬ್ಬರಿಗೊಬ್ಬರು ಬೀಳ್ಕೊಟ್ಟು ತೆರಳುತ್ತಾರೆ. ಗೌರಮ್ಮನ ಮೇಲೆ ಭಕ್ತಿ ವಿಶ್ವಾಸಗಳನ್ನಿಟ್ಟು ಅವಳನ್ನು ನೆನೆಯುತ್ತ ತಮ್ಮ ತಮ್ಮ ಮನೆಯನ್ನು ಸೇರುತ್ತಾರೆ.

---

೯೫. ಎ.ವಿ. ಪಾಟೀಲ: ಉತ್ತರ ಕರ್ನಾಟಕದ ಜಾನಪದ ವಿಧಿಕ್ರಿಯೆಗಳು, (ಅಪ್ರಕಟಿತ) ಪುಟ - ೧೫೧



ತೊಟ್ಟಿಲ ಗೌರಮ್ಮನ ಶಿಲ್ಪ ( ರಾಯಚೂರು )



ಶಿವಗೌರಿ ಶಿಲ್ಪ ( ರಾಯಚೂರು )

## ೪. ಚೆಂಗಳೆವ್ವನ ಶಿಲ್ಪಗಳು

ಚೆಂಗಳೆಯನ್ನು ಜನಪದರು ಚೆಂಗಳೆವ್ವ, ಚೆಂಗೈವ್ವ ಎಂದು ಕರೆಯುತ್ತಾರೆ. ಈ ಚೆಂಗಳೆ ಹನ್ನೆರಡನೇ ಶತಮಾನದ ಬಸವಣ್ಣನವರ ಸಮಕಾಲೀನನಾದ ಶಿವಭಕ್ತ ಶಿರಿಯಾಳನ ಧರ್ಮಪತ್ನಿ ಎಂದು ತಿಳಿಯುತ್ತದೆ.[೯೬] ಈಕೆಯೂ ಮಹಾ ಶಿವಭಕ್ತೆ. ತನ್ನ ನಿಷ್ಕಾಮ ಭಕ್ತಿಗೆ ಹೆಸರಾದ ಈಕೆ, 'ರತಿಗಿಂತಲೂ ಚೆಲುವೆಯಾದ ನಿನ್ನ ರೂಪಚಿತ್ರವನ್ನು ಜನರು ಮಾಡಿಟ್ಟು ಪೂಜಿಸಲಿ'[೯೭] ಎಂದು ಶಿವನಿಂದ ಆಶೀರ್ವದಿಸಲ್ಪಟ್ಟಳೆಂದು ಪ್ರತೀತಿಯಿದೆ. ಆ ಕಾರಣವಾಗಿಯೇ ಇಂದಿಗೂ ಚೆಂಗಳೆ ಜನಪದರಲ್ಲಿ ಪ್ರತಿ ವರ್ಷ ಶ್ರಾವಣದಲ್ಲಿ ಪೂಜೆಗೊಳ್ಳುತ್ತಲಿದ್ದಾಳೆ.

ಶ್ರಾವಣ ಮಾಸದಲ್ಲಿ ಹಳ್ಳಿಯ ಹೆಂಗಸರೆಲ್ಲ ಸೇರಿ ಊರ ಮಠದಲ್ಲಿ ಇಲ್ಲವೆ, ದೇವಸ್ಥಾನದಲ್ಲಿ ಅಥವಾ ಊರ ಪ್ರಮುಖರ ಮನೆಯಲ್ಲಿ ಚೆಂಗಳೆವ್ವನ ಕಟ್ಟಿಗೆ ಮಾಧ್ಯಮದ ಸುಂದರ ಮೂರ್ತಿ ಶಿಲ್ಪವನ್ನು ಇಟ್ಟು ಪೂಜಿಸುವರು. ಉತ್ತರ ಕರ್ನಾಟಕದಲ್ಲಿ ಈ ಸಂಪ್ರದಾಯ ಇಂದಿಗೂ ಜೀವಂತವಾಗಿದೆ. ಆಕೆಯ ಚೆಲುವಿಕೆಯನ್ನು ಕೇಳಿ, ಶಿಲ್ಪದಲ್ಲಿ ಕಂಡು ಹೆಂಗಸರು ಮಾತನಾಡುವಾಗ ಚೆಲುವಿ ಚೆಂಗಳಿ ಎಂದು ಮಾತನಾಡುವದನ್ನು ಕೇಳಬಹುದು. ಈಗ ಜನಪದದಲ್ಲಿ ಚೆಂಗಳೆ ಚೆಲುವಿಕೆಯ ದೇವತೆಯೂ ಆಗಿದ್ದಾಳೆನ್ನಬಹುದು.

**ಅಲಂಕಾರ :** ಈ ಚೆಂಗಳೆವ್ವ ಶಿಲ್ಪಗಳು ಸಾಮಾನ್ಯವಾಗಿ ಎರಡು ಅಡಿ ಎತ್ತರವಾಗಿರುತ್ತವೆ. ಹಗುರವಾದ ಮೆದು ಕಟ್ಟಿಗೆಯಿಂದ ಮಾಡಲಾಗಿರುತ್ತದೆ. ಈ ಚೆಂಗಳೆವ್ವನ ಕಟ್ಟಿಗೆ ಶಿಲ್ಪಗಳು ಮುಖ್ಯವಾಗಿ ಎರಡು ರೀತಿಯಲ್ಲಿ ಕಂಡು ಬರುತ್ತವೆ. ೧. ಮಗುವನ್ನು ಹೊಂದಿರುವ ಚೆಂಗಳೆವ್ವನ ಶಿಲ್ಪ ೨. ಲಿಂಗ ಪೂಜಾ ನಿರತ ಚೆಂಗಳೆವ್ವನ ಶಿಲ್ಪ.[೯೮]

ಈ ಎರಡೂ ಬಗೆಯ ಶಿಲ್ಪಗಳು ಕುಳಿತ ಭಂಗಿಯವುಗಳೇ ಆಗಿರುತ್ತವೆ. ಆದರೆ, ಮಗುವನ್ನು ಹೊಂದಿರುವ ಶಿಲ್ಪಗಳಲ್ಲಿ ಕೆಲವು ೧. ಮಗುವನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡವುಗಳು ೨. ಇನ್ನೂ ಕೆಲವು ಮಗುವನ್ನು ತೊಡೆಯ ಮೇಲೆ ನಿಲ್ಲಿಸಿಕೊಂಡಿರುವುಗಳಾಗಿರುತ್ತವೆ. ಚೆಂಗಳೆವ್ವನ ಶಿಲ್ಪಗಳಿಗೆ ಸಾಮಾನ್ಯವಾಗಿ ಗುಲಾಬಿ ಮಿಶ್ರಿತ ಬಿಳಿ ಮೈಬಣ್ಣವಾಗಿರುತ್ತವೆ. ಹಸಿರು ಬಣ್ಣದ ಕುಪ್ಪಸ, ಕೆಂಪು ಬಣ್ಣದ ಕಚ್ಚೆ ಹಾಕಿದ ರೀತಿಯಲ್ಲಿ ಉಡಿಸಲಾದ ಸೀರೆ ಎರಡೂ ಬಣ್ಣದಲ್ಲೇ ಬರೆಯಲಾಗಿರುತ್ತದೆ. ಆಚರಣೆಯ ಸಂದರ್ಭದಲ್ಲಿ ಜನಪದರು ಚೆಂಗಳೆವ್ವನ ಶಿಲ್ಪಕ್ಕೆ ನೂಲಿನ ಸೀರೆಯನ್ನು ಉಡಿಸಿ, ಕೊರಳಲ್ಲಿ ಬಂಗಾರದ ಆಭರಣಗಳನ್ನು, ಕಾಲಲ್ಲಿ ಚೈನು, ಕೈಯಲ್ಲಿ ಬಳೆ, ಮೂಗಿನಲ್ಲಿ ಮೂಗುಬೊಟ್ಟು ಇತ್ಯಾದಿಗಳನ್ನು ತೊಡಿಸಿ

---

೯೬. ವಿವರಗಳಿಗೆ ನೋಡಿ : ಇದೇ ಮಹಾಪ್ರಬಂಧದ ಅಧ್ಯಾಯ ಮೂರು, ಮಣ್ಣಿನ ಮಾಧ್ಯಮದ ಜನಪದ ಶಿಲ್ಪಕಲೆ, ಪು -೬೩

೯೭. ಡಾ. ಬಿ.ಎಸ್. ಗದ್ದಿಗಿಮಠ : ಕನ್ನಡ ಜಾನಪದ ಗೀತಗಳು, ಪುಟ - ೧೫೭

೯೮. ಈ ಭಂಗಿಯಲ್ಲಿರುವ ಶಿಲ್ಪವು ಜಾಲಿಹಾಳದ ರಂಗಪ್ಪ ಚಿತ್ರಗಾರರ ಮನೆಯಲ್ಲಿ ರಚನೆಯ ಹಂತದಲ್ಲಿತ್ತು



ಚೆಂಗೈವ್ವನ ಶಿಲ್ಪ ( ಹೊಳೆ ಹಡಗಲಿ )



ಲಿಂಗಪೂಜಾ ನಿರತ
ಚೆಂಗೈವ್ವನ ಶಿಲ್ಪ (ಜಾಲಿಹಾಳ)



ಅಲಂಕಾರಗೊಳಿಸಿರುತ್ತಾರೆ. ಇನ್ನು ಮಗುವಿನ ಕುಳಿತ ಇಲ್ಲವೆ ನಿಂತ ಭಂಗಿಯ ಶಿಲ್ಪ ಸಾಮಾನ್ಯವಾಗಿ ಚೆಂಗಳೆವ್ವನಂತೆ ಗುಲಾಬಿ ಮಿಶ್ರಿತ ಬಿಳಿ ಬಣ್ಣವನ್ನು ಮೈಬಣ್ಣವಾಗಿ ಹೊಂದಿ ಬೆತ್ತಲೆಯಾಗಿರುತ್ತದೆ. ತಾಯಿ ಚೆಂಗಳೆವ್ವ ಹಾಗೂ ಮಗುವಿನ ಹಣೆಯ ಮೇಲೆ ವಿಭೂತಿಯನ್ನು ಬಳಿಯಲಾಗಿರುತ್ತದೆ. ಈ ಶಿಲ್ಪಗಳು ಪ್ರಮಾಣಬದ್ಧವಾಗಿದ್ದು, ನೈಜತೆಗೆ ಹತ್ತಿರವಾಗಿರುತ್ತವೆ. ಆದರೆ, ಅವುಗಳ ರಚನೆ, ಆಚರಣೆ, ಬಣ್ಣ ಎಲ್ಲವೂ ಅಪ್ಪಟ ಜನಪದವೇ ಆಗಿರುತ್ತವೆ.

**ರಚನೆ :** ಈ ಶಿಲ್ಪಗಳನ್ನು ಸಾಮಾನ್ಯವಾಗಿ ಸಾಗವಾನಿ, ಅವದಂಬರ, ಶಿವಹೊನ್ನೆ, ಅಂಕಲಿ ಮುಂತಾದ ಮರಗಳನ್ನು ಬಳಸಿ ತಯಾರಿಸಲಾಗಿರುತ್ತದೆ. ರುಂಡ, ಮುಂಡ, ಕೈ ಮತ್ತು ಕಾಲು ಮುಂತಾದ ಅವಯವಗಳನ್ನು ನಾಲ್ಕಾರು ತುಂಡುಗಳಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಆ ಶಿಲ್ಪದ ಅಳತೆ, ಪ್ರಮಾಣಕ್ಕೆ ತಕ್ಕಂತೆಯೇ ರಚಿಸಿಕೊಂಡು ಜೋಡಿಸಿ ಶಿಲ್ಪವನ್ನು ಪೂರ್ಣಗೊಳಿಸಿರುತ್ತಾರೆ. ಇವನ್ನು ಕೀಲು ಜೋಡಣೆ ಮತ್ತು ಕೂಲು ಜೋಡಣೆ ವಿಧಾನದಲ್ಲೇ ಜೋಡಿಸಲಾಗಿರುತ್ತದೆ. ಕೆಲವೊಮ್ಮೆ ಪೂರ್ಣರೂಪದ ಶಿಲ್ಪಗಳಲ್ಲೂ ಚೆಂಗಳೆವ್ವ ಮತ್ತು ಮಗುವಿನ ಶಿಲ್ಪಗಳ ರುಂಡವನ್ನು ಪ್ರತ್ಯೇಕವಾಗಿ ತೆಗೆಯಲು ಹಾಕಲು ಬರುವಂತೆ ಮಾಡಿರುತ್ತಾರೆ. ರುಂಡ ಭಾಗಕ್ಕೆ ಕೆಳಗೆ ಒಂದು ಕೂಲು ಮಾಡಿರುತ್ತಾರೆ. ಈ ಕೂಲನ್ನು ಮುಂಡ ಭಾಗದಲ್ಲಿ ಮಾಡಿದ ತೂತಿನಲ್ಲಿ ಸೇರಿಸುವಂತಿರುತ್ತದೆ.

ಲಿಂಗ ಪೂಜಾ ನಿರತ ಚೆಂಗಳೆವ್ವನ ಶಿಲ್ಪಗಳು[೯೯] ಕೆಲವು ಸಲ ರುಂಡ ಮತ್ತು ಮುಂಡ ಭಾಗವು ಮರದ ಒಂದೇ ತುಂಡಿನಲ್ಲಿ ರಚಿಸಿದವುಗಳಾಗಿದ್ದು, ಕೈ ಮತ್ತು ಕಾಲುಗಳು ಪ್ರತ್ಯೇಕ ತುಂಡಿನಲ್ಲಿ ನಿರ್ಮಿಸಿ ಕೀಲು, ಮತ್ತು ಕೂಲು ಜೋಡಣಾ ವಿಧಾನದಿಂದ ಮಾಡಿದವುಗಳಾಗಿರುತ್ತವೆ.[೧೦೦] ಲಿಂಗದ ಶಿಲ್ಪವನ್ನು ಕೆಲವು ವೇಳೆ ಕೈ ಮತ್ತು ಕಾಲುಗಳನ್ನು ಜಂತ್ರ ಹಿಡಿದು ನೀಳವಾಗಿ ಮಾಡಲಾಗಿರುತ್ತದೆ.

ಹೊಳೆಹಡಗಲಿ[೧೦೧]ಯಲ್ಲಿ ಶ್ರೀ ಬಸನಗೌಡ ಪಾಟೀಲರ ಮನೆಯಲ್ಲಿ ಒಂದು ಹಾಗೂ ಇದೇ ಊರಿನ ದ್ಯಾಮವ್ವನ ಗುಡಿಯಲ್ಲಿ ಒಂದು ಚೆಂಗಳೆವ್ವನ ಶಿಲ್ಪಗಳಿವೆ. ಬಸನಗೌಡರ[೧೦೨] ಮನೆಯಲ್ಲಿರುವ ಚೆಂಗಳೆವ್ವನ ಶಿಲ್ಪ ಸುಮಾರು ೨೦೦ ವರ್ಷಗಳಿಗಿಂತಲೂ ಹಳೆಯದು. ಈ ಶಿಲ್ಪವನ್ನು ಮಾಡಿದ ಕಲಾವಿದ ಯಾರೆಂದು ತಿಳಿದು ಬರುವದಿಲ್ಲ. ಆದರೆ ೨೦೦೦ ನೇ ಇಸವಿಯಲ್ಲಿ ಜಾಲಿಹಾಳದ ರಂಗಪ್ಪ ಚಿತ್ರಗಾರರಿಂದ ಈ ಶಿಲ್ಪಕ್ಕೆ ಬಣ್ಣ ಮಾಡಿಸಿರುವದಾಗಿ ಗೌಡರು ಹೇಳುತ್ತಾರೆ. ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಈ ಶಿಲ್ಪವನ್ನು ಪ್ರತಿ ಸೋಮವಾರದಂದು ಇಟ್ಟು ಸೀರೆ ಉಡಿಸಿ, ಆಭರಣಗಳನ್ನು ಹಾಕಿ ಅಲಂಕರಿಸಿ ಓಣಿಯ ಹೆಣ್ಣುಮಕ್ಕಳೆಲ್ಲ ಸೇರಿ ಹಾಡು, ಕಥೆ ಹೇಳಿ ಆಚರಿಸುತ್ತಾರೆ. ಕುಳಿತ ಭಂಗಿ ಹಾಗೂ ಆಕರ್ಷಕ ಬಣ್ಣಗಳಿಂದ ಶಿಲ್ಪ ಹೊಚ್ಚ ಹೊಸದಾಗಿ ಚೆಲುವಿಕೆಯಿಂದ ಕಂಗೊಳಿಸುತ್ತದೆ. ಚೆಂಗಳೆಯ ಶಿಲ್ಪದ ತೊಡೆಯ ಮೇಲೆ

---

೯೯. ಈ ಭಂಗಿಯ ಶಿಲ್ಪದ ಜೊತೆಗೆ ಮಗುವಿನ ಶಿಲ್ಪವಿರುವುದಿಲ್ಲ
೧೦೦. ವಿವರ ನೀಡಿದವರು : ರಂಗಪ್ಪ ಚಿತ್ರಗಾರ, ಜಾಲಿಹಾಳ
೧೦೧. ಹೊಳೆ ಹಡಗಲಿ : ತಾ. ರೋಣ, ಜಿ. ಗದಗ
೧೦೨. ವಿವರ ನೀಡಿದವರು : ಬಸನಗೌಡ ಪಾಟೀಲ, ಹೊಳೆ ಹಡಗಲಿ

ನಿಂತುಕೊಂಡಿರುವ ಮಗುವಿನ ಶಿಲ್ಪವು ಬೆತ್ತಲೆಯಾಗಿದ್ದು ಒಂಭತ್ತು-ಹತ್ತು ತಿಂಗಳ ಮಗುವಿನಂತೆ ಮುಗ್ಧತೆಯಿಂದ ಕೂಡಿರುತ್ತದೆ.

ದ್ಯಾಮವ್ವನ ಗುಡಿಯಲ್ಲಿರುವ ಚೆಂಗಳೆವ್ವನ ಶಿಲ್ಪವು ರೂಪ, ಆಕಾರ, ಭಂಗಿ ಮತ್ತು ಬಣ್ಣ ಎಲ್ಲದರಲ್ಲೂ ಗೌಡರ ಮನೆಯಲ್ಲಿರುವ ಶಿಲ್ಪವನ್ನೇ ಹೋಲುತ್ತದೆ. ಇದೂ ಸುಮಾರು ಎರಡು ಅಡಿ ಎತ್ತರವಾಗಿದ್ದು ಮಗುವನ್ನು ಹೊಂದಿದೆ. ಮಗುವು ಚೆಂಗಳೆವ್ವನ ತೊಡೆಯ ಮೇಲೆ ಕುಳಿತ ಭಂಗಿಯಲ್ಲಿದ್ದು ಇದೂ ಕೂಡ ಬೆತ್ತಲೆಯಾಗಿದೆ. ಹಣೆಗೆ ವಿಭೂತಿ ಬಳಿಯಲಾಗಿದೆ. ಈ ಶಿಲ್ಪವನ್ನು ರಚಿಸಿದ ಕಲಾವಿದ ಯಾರೆಂದು ತಿಳಿದು ಬರುವದಿಲ್ಲ. ಇದೂ ಕೂಡ ತುಂಬ ಹಳೆಯ ಶಿಲ್ಪವಾಗಿದೆ. ಮೂರು ಅಥವಾ ನಾಲ್ಕು ವರ್ಷಗಳಿಗೊಮ್ಮೆ ಈ ಶಿಲ್ಪಕ್ಕೂ ಬಣ್ಣ ಮಾಡಿಸುತ್ತಾರೆ. ಬಹುಶಃ ಗೌಡರ ಮನೆಯಲ್ಲಿರುವ ಚೆಂಗಳೆವ್ವನ ಶಿಲ್ಪ ಹಾಗೂ ದ್ಯಾಮವ್ವನ ಗುಡಿಯಲ್ಲಿರುವ ಚೆಂಗಳೆವ್ವನ ಶಿಲ್ಪಗಳನ್ನು ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಜಾಲಿಹಾಳದಲ್ಲಿರುವ ಚಿತ್ರಗಾರ ಮನೆತನದ ಪೂರ್ವಜರೇ ರಚಿಸಿರಲು ಸಾಧ್ಯವಿದೆ. ಏಕೆಂದರೆ ಈಗಲೂ ಈ ಶಿಲ್ಪಗಳಿಗೆ ಬಣ್ಣವನ್ನು ಈ ಕಲಾವಿದರಿಂದಲೇ ಮಾಡಿಸುವ ಪದ್ಧತಿ ಇದೆ.

ಗುಡಿಯಲ್ಲಿರುವ ಚೆಂಗಳೆವ್ವ ಶಿಲ್ಪವನ್ನು ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಸೋಮವಾರಕ್ಕೊಮ್ಮೆ ಓಣಿಯ ಹೆಂಗಸರೆಲ್ಲ ಗುಡಿಯಲ್ಲಿ ಸೇರಿ ಹಾಡು, ಕಥೆ ಹೇಳಿ ಚೆಂಗಳೆವ್ವನ ವರ್ಣನೆ ಮಾಡಿ ಆಚರಿಸುತ್ತಾರೆ. ಈ ಆಚರಣೆ ಜನಪದರಿಗೆ ಮನೋರಂಜನೆಯೂ ಆಗಿರುತ್ತದೆ.

ಗೌರಮ್ಮನ ಶಿಲ್ಪದಂತೆಯೇ ಚೆಂಗಳೆವ್ವನ ಶಿಲ್ಪವು ಹೆಣ್ಣುಮಕ್ಕಳ ಕೇಂದ್ರಿತವಾಗಿ ಆಚರಿಸಲ್ಪಟ್ಟರೂ ಆಕಾರದಲ್ಲಿ, ಚಲುವಿಕೆಯಲ್ಲಿ, ರೂಪದಲ್ಲಿ ಗೌರಮ್ಮನ ಶಿಲ್ಪವನ್ನು ಮೀರಿಸುವಂತೆ ಇರುತ್ತದೆ. ತನ್ನ ಆದರ್ಶ ಗುಣಗಳು ಹಾಗೂ ಭಕ್ತಿ ಪರಾಕಾಷ್ಟೆಯನ್ನು ಮೆರೆದುದರಿಂದಾಗಿ ಭಕ್ತಿ-ಭಾವಗಳಿಂದ ಆಚರಿಸಲ್ಪಡುವ ಚೆಂಗಳೆಯ ಶಿಲ್ಪ ತನ್ನ ಸೌಂದರ್ಯ ಹಾಗೂ ಕಲಾತ್ಮಕತೆಯ ದೃಷ್ಟಿಯಿಂದಲೂ ನಮ್ಮ ಜನಪದರಿಗೆ ಮಹತ್ವದ್ದಾಗಿದೆ.

## ೧.೨ ಶಿರಭಾವ ಶಿಲ್ಪಗಳು

ಜನಪದ ಗ್ರಾಮ ದೇವತಾ ಶಿಲ್ಪಗಳಲ್ಲಿ ಕೆಲವು ಕೇವಲ ರುಂಡ ಭಾಗದ ಶಿಲ್ಪಗಳು ಮಾತ್ರ ರಚನೆಗೊಂಡು ಪೂಜಿಸಲ್ಪಡುತ್ತವೆ. ಸಾಮಾನ್ಯವಾಗಿ ಇವು ಮುಖವಾಡ ಶಿಲ್ಪಗಳಾಗಿರುತ್ತವೆ. ವಿಶೇಷ ಉತ್ಸವ, ಜಾತ್ರೆಗಳ ಸಂದರ್ಭಗಳಲ್ಲಿ ಇಂಥ ಶಿಲ್ಪಗಳನ್ನು ಮುಖಕ್ಕೆ ಧರಿಸಿಕೊಂಡು ಆಡುವದನ್ನು ಕಾಣಬಹುದು. ಉತ್ತರ ಕರ್ನಾಟಕದಾದ್ಯಂತ ಅನೇಕ ಊರುಗಳಲ್ಲಿ ಒಂದಿಲ್ಲಾ ಒಂದು ಬಗೆಯ ಮುಖವಾಡ ಶಿಲ್ಪಗಳು ಕಂಡು ಬರುತ್ತವೆ. ಇಂಥ ಶಿಲ್ಪಗಳಲ್ಲಿ ಪ್ರಮುಖವಾದ ಒಂದೆರಡು ಶಿಲ್ಪಗಳೆಂದರೆ ೧. ಚೌಡಮ್ಮನ ಶಿಲ್ಪಗಳು ೨. ಅಮೋಘ ಸಿದ್ದೇಶ್ವರನ ಶಿಲ್ಪಗಳು.

## ೧. ಚೌಡಮ್ಮನ ಶಿಲ್ಪಗಳು

ಉತ್ತರ ಕರ್ನಾಟಕದ ಅದರಲ್ಲೂ ವಿಶೇಷವಾಗಿ ಗುಲಬರ್ಗಾ ಮತ್ತು ಬಿಜಾಪೂರ ಜಿಲ್ಲೆಯ ಹಲವು ಕಡೆ ಚೌಡಮ್ಮನ ಆರಾಧನೆ, ಕುಣಿತ ಬಹಳ ವಿಶೇಷವಾಗಿ ಕಂಡು ಬರುತ್ತದೆ. ಕುಂಬಾರರು, ಕುರುಬರು, ಪಂಚಾಳರು, ನೇಕಾರರು ಇಲ್ಲವೆ ಲಿಂಗಾಯತರು ಚೌಡಮ್ಮನ ಪ್ರಮುಖ ಆರಾಧಕರಾಗಿರುತ್ತಾರೆ. ಚೌಡಮ್ಮನ ಜಾತ್ರೆಯು ವರ್ಷಕ್ಕೊಮ್ಮೆ ಇಲ್ಲೆ ಎರಡು ವರ್ಷಕ್ಕೊಮ್ಮೆ ನಡೆಯುತ್ತದೆ. ಸಾಮಾನ್ಯವಾಗಿ ಶಿವರಾತ್ರಿ ಅಮವಾಸ್ಯೆಗೆ ಮುಂಚಿತವಾಗಿ ಬರುವ ಒಂದು ದಿನವನ್ನು ಚೌಡಮ್ಮನ ವಾರವೆಂದು ಹೇಳಲಾಗುವ ಶುಕ್ರವಾರದಂದು ಜಾತ್ರೆ ನಡೆಸುವದು ರೂಢಿಯಲ್ಲಿದೆಯಾದರೂ, ಅನೇಕ ಊರುಗಳಲ್ಲಿ ಚೌಡಮ್ಮನ ಜಾತ್ರೆಗಳು ಮಾರ್ಚನಿಂದ ಮೇ ವರೆಗೆ ನಡೆಯುತ್ತವೆ. ಚೌಡಮ್ಮ ದೇವಿಯ ಮುಖವಾಡಗಳನ್ನು ನಿರ್ಧಿಷ್ಟಪಡಿಸಿದ ವ್ಯಕ್ತಿಗಳು ಧರಿಸಿಕೊಂಡು ಊರಿನ ಎಲ್ಲ ಜಾತಿ, ಜನವರ್ಗದವರೆಲ್ಲ ಸೇರಿ ಜಾತ್ರೆ, ಕುಣಿತದ ಉತ್ಸವವನ್ನು ನಡೆಸಿಕೊಡುತ್ತಾರೆ.[೧೦೩]

ಚೌಡಮ್ಮನ ಹುಟ್ಟಿನ ಬಗ್ಗೆ ಅನೇಕ ಪುರಾಣ ಕಥೆಗಳನ್ನು ಗ್ರಾಮೀಣರು ಹೇಳುತ್ತಾರೆ.

**ಪುರಾಣ :** ಶಿವನ ಹಣೆಯಿಂದ ದಕ್ಷ ಬ್ರಹ್ಮನ ಸಂಹಾರಕ್ಕೆ ವೀರಭದ್ರ[೧೦೪] ಅವತರಿಸುತ್ತಾನೆ. ಅದೇ ಸಮಯಕ್ಕೆ ಅವನ ಸಹಾಯಕ್ಕಾಗಿ ಚೌಡಮ್ಮ ಜನಿಸುತ್ತಾಳೆ. ವೀರಭದ್ರ ಕೋಪದಿಂದ ವೈರಿಗಳನ್ನು ಸಂಹರಿಸಿ ಹೋಗುತ್ತಿದ್ದಂತೆ ಅವರಿಂದ ಚೆಲ್ಲಿದ ಒಂದೊಂದು ಹನಿ ರಕ್ತಕ್ಕೂ ಒಬ್ಬೊಬ್ಬ ನವರಾಕ್ಷಸರು ಹುಟ್ಟುತ್ತಿರುತ್ತಾರೆ. ಇದನ್ನು ತಪ್ಪಿಸಲು ಚೌಡಮ್ಮನು ಅವತರಿಸಿದಳೆಂದು ಪ್ರತೀತಿಯಿದೆ. ಅವಳು ತನ್ನ ಭಯಂಕರವಾದ ನಾಲಿಗೆಯನ್ನು ಚಾಚಿ ವೈರಿಗಳ ರಕ್ತ ನೆಲಕ್ಕೆ ಬೀಳದಂತೆ ಕುಡಿಯುತ್ತಿದ್ದಳು. ಇದರಿಂದ ವೈರಿಗಳ ನಾಶವಾಗಿ ದಕ್ಷನ ಸಂಹಾರ ಸಾಧ್ಯವಾಯಿತಂತೆ.[೧೦೫] ಚೌಡಮ್ಮನ ಉಗ್ರರೂಪವು ಈ ಮಾತುಗಳಿಗೆ ಪೂರಕವಾಗಿ ತೋರುತ್ತದೆ.

**ಚೌಡಮ್ಮನ ರುಂಡ ಭಾಗ ಮಾತ್ರವೇ ಏಕೆ ಪೂಜಿಸುವರು ? :** ಚೌಡಮ್ಮ ಹಟಗಾರರ ಉದ್ಯೋಗದ ದೇವತೆ. ಹೈದರಾಬಾದ ಕರ್ನಾಟಕದ ಕೆಲವು ಊರುಗಳಲ್ಲಿ ಈಕೆ ಗ್ರಾಮದೇವತೆಯಾಗಿ ಬಾಳಿ, ದ್ಯಾವಮ್ಮ, ದುರಗಮ್ಮ, ಮರಗಮ್ಮ, ಎಲ್ಲಮ್ಮ, ಕಾಳಮ್ಮರಂತೆ ಒಬ್ಬ ಶಕ್ತಿದೇವತೆಯೆನಿಸಿದ್ದಾಳೆ. ರಣರಂಗದಲ್ಲಿ ಮತ್ತೇರಿ ಅಣ್ಣನಾದ ವೀರಭದ್ರನ ಹಿಂಬಡದ ರಕ್ತ ನೆಕ್ಕುತ್ತ ಬಂದುದನ್ನು ನೋಡಿದರೆ ಚೌಡಮ್ಮ ತುಂಬ ಭಯಂಕರ ದೇವತೆಯೆಂದೂ ಅನಿಸುವದು.[೧೦೬] ಚೌಡಮ್ಮನ ರುಂಡ ಭಾಗವನ್ನು ಮಾತ್ರ

---

೧೦೩. ಹಿ. ಚಿ. ಬೋರಲಿಂಗಯ್ಯ (ಸಂ) : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ - ೨೦

೧೦೪. ಶಿವನ ಬಲಭುಜದಿಂದ ವೀರಭದ್ರನು ಹುಟ್ಟಿದನು ಎಂಬ ಉಲ್ಲೇಖ : ಡಾ. ಚೆನ್ನಣ್ಣ ವಾಲೀಕಾರ : ಹೈದರಾಬಾದ್ ಕರ್ನಾಟಕದ ಗ್ರಾಮ ದೇವತೆಗಳ ಜಾನಪದೀಯ ಅಧ್ಯಯನ, ಪುಟ -೧೭೬

೧೦೫. ಹಿ. ಚಿ. ಬೋರಲಿಂಗಯ್ಯ (ಸಂ) : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ - ೨೦

೧೦೬. ಡಾ. ಚೆನ್ನಣ್ಣ ವಾಲೀಕಾರ : ಹೈದರಾಬಾದ್ ಕರ್ನಾಟಕದ ಗ್ರಾಮ ದೇವತೆಗಳ ಜಾನಪದೀಯ ಅಧ್ಯಯನ, ಪುಟ - ೧೭೬

[illegible]

[illegible]

[illegible]

[illegible]

[illegible]

[illegible]

[illegible]

ರಚಿಸಿ ಪೂಜಿಸುವದು ಮಾತ್ರ ವಾಡಿಕೆಯಲ್ಲಿದೆ. ಇದಕ್ಕೆ ನಿದರ್ಶನವಾಗಿ ವೀರಭದ್ರನ ಚೌಪದನದಲ್ಲಿ ಈ ರೀತಿ ವಿವರವಿದೆ. ವೀರಭದ್ರ ಕತ್ತರಿಸಿ ಹಾಕುತ್ತಿದ್ದ ರುಂಡಗಳಿಂದ ಸೋರುವ ರಕ್ತವನ್ನು ಚೌಡಮ್ಮ ನಾಲಿಗೆಯಿಂದ ನೆಕ್ಕುತ್ತ ಹೊರಟಳು. ಚೌಡಮ್ಮಗೆ ರಕ್ತದಾಹ ಹೆಚ್ಚಾಗಿ ರಕ್ತದಿಂದ ಮೆತ್ತಿದ ವೀರಭದ್ರನ ಹಿಂಬಡಗಳನ್ನು ನೆಕ್ಕತೊಡಗಿದಾಗ ವೀರಭದ್ರನಿಗೆ ಸಿಟ್ಟು ಬಂತು. ಅವಳನ್ನು ಮೂರು ತುಂಡು ಮಾಡಿದನು. ಅದಕ್ಕಾಗಿ ಇವತ್ತಿಗೂ ಚೌಡಮ್ಮನ ರುಂಡವನ್ನು ಹಟಗಾರರು, ಮುಂಡವನ್ನು ಬ್ರಾಹ್ಮಣರು, ಪಾದವನ್ನು ಮಾದರು ಪೂಜಿಸುತ್ತಿರುವರೆಂದು[೧೦೭] ಹೇಳುತ್ತಾರೆ.

ಕೆಲವು ಊರುಗಳಲ್ಲಿ ಚೌಡಮ್ಮ ಹಳವಾರಿ ದೇವತೆ ಎಂದೂ, ಮಕ್ಕಳನ್ನು ತಿನ್ನುವ ದೇವತೆಯೆಂತಲೂ ಅನ್ನುವರು. ಈಕೆ ಕಾಡಿಸುವ ದೇವತೆಯೂ ಆಗಿರುವಳೆಂಬ ಕಾರಣದಿಂದ ಈಕೆಯನ್ನು ಆರಾಧಿಸುವರೆಂಬ ಪ್ರತೀತಿ ಜನಪದರಲ್ಲಿದೆ[೧೦೮] ಎಂಬುದನ್ನು ಗಮನಿಸಬೇಕು.

ಉತ್ತರ ಕರ್ನಾಟಕದಲ್ಲಿ ಗ್ರಾಮದೇವತೆಯಾಗಿ ಚೌಡಮ್ಮ ಪೂಜೆಗೊಳ್ಳುವ ಊರುಗಳೆಂದರೆ, ಗುಲಬರ್ಗಾ ಜಿಲ್ಲೆಯ ಮಾಶ್ಯಾಳ, ಮಣ್ಣೂರು, ಅಳ್ಳಗಿ, ಅರಳಗುಂಡಗಿ, ಮಳ್ಳಿ, ಮಜ್ಜಲ, ಮಾಗಣಗೇರಿ, ಮುದ್ನೂರು, ಬಿಜಾಪೂರ ಜಿಲ್ಲೆಯ ಇಂಡಿ, ಸಿಂದಗಿ, ಮದರಿ, ಕೋರಳ್ಳಿ, ಯರಗಲ್ಲ, ಬಳಗಾನೂರ ಮತ್ತು ಗೋಲಗೇರಿ ಮುಂತಾದವುಗಳು.

ಚೌಡಮ್ಮಳನ್ನು ಚಾಮುಂಡಿ, ಚಾಮುಂಡೇಶ್ವರಿಯೆಂದು ಪರಿವರ್ತಿಸಿರಬಹುದು.[೧೦೯] ಚೌಡ ಎಂಬುದರ ಅರ್ಥ Crest ಎಂದಿದೆ. Crest ಎಂದರೆ ತಲೆ, ನೆತ್ತಿ, ಅಗ್ರಶಿಖರ, ತುರಾಯಿ, ಜುಟ್ಟು, ಕುತ್ತಿಗೆಯ ಕೂದಲು, ಚೂಡಾಲಂಕಾರ. ಇನ್ನು ಚವುಡ ಶಬ್ದಕ್ಕೆ ಸುರಗಿ, ಕುಠಾರಿ ಎಂಬ ಅರ್ಥವಿದೆ. ಮೇಲಿನ ಸಾದೃಶ್ಯವನ್ನು ಈ ದೇವತೆಯ ಅರ್ಚನಾ ಮೂರ್ತಿಯಲ್ಲಿ ಕಾಣುತ್ತೇವೆ. ಸಿಂಹವಾಹನವಾಗಿರುವ ಕಿರೀಟ, ಹಾಗೂ ಖಡ್ಗಧಾರಿಯಾದ ಈ ದೇವತೆಯ ಮುಖ ಬಣ್ಣ ಕೆಂಪು, ತೆರೆದ ಬಿರುಗಣ್ಣುಗಳು, ಕೋರೆ ಹಲ್ಲುಗಳು ಹಾಗೂ ಹರಡಿದ ಕೂದಲುಗಳಿಂದ ಈ ಮೂರ್ತಿ ಕಂಗೊಳಿಸಿದರೆ, ಇನ್ನೂ ಕೆಲವು ಕಡೆ ಕೇವಲ ಅವಳ ಮುಖವಾಡವನ್ನು ಮಾತ್ರ ಗದ್ದುಗೆಯ ಮೇಲಿಟ್ಟು ಗದ್ದುಗೆಗೆ ಸಿಂಹಮುಖದ ರೂಹು ಕೆತ್ತಿ ಬಳಿಯಲ್ಲಿ ಖಡ್ಗವೊಂದನ್ನು ಪೂಜೆಗೆ ಇಟ್ಟಿರುತ್ತಾರೆ. ಖಡ್ಗ ಕಾರಣವಾಗಿಯೋ, ಕೆದರಿದ ಕೂದಲು ಕಾರಣವಾಗಿಯೋ ಇವಳಿಗೆ ಚವುಡಿ ಎಂಬ ಹೆಸರು ಬಂದಿರಬೇಕು. ಇದೇ ಮುಂದೆ ಚೌಡಿ, ಚಾಮುಂಡಿ ಆಗಿರಬೇಕು[೧೧೦] ಎಂದು ವಿದ್ವಾಂಸರು ತರ್ಕಿಸುತ್ತಾರೆ.

ಈ ದೇವತಾ ಶಿಲ್ಪವು ನಿತ್ಯ ಪೂಜೆಗೊಳ್ಳುತ್ತದೆ. ಮತ್ತು ಪ್ರತಿ ಅಮವಾಸ್ಯೆ, ನವರಾತ್ರಿ, ಹಾಗೂ

---

೧೦೭. ಡಾ. ಚೆನ್ನಣ್ಣ ವಾಲೀಕಾರ : ಹೈದರಾಬಾದ್ ಕರ್ನಾಟಕದ ಗ್ರಾಮ ದೇವತೆಗಳ ಜಾನಪದೀಯ ಅಧ್ಯಯನ, ಪುಟ - ೧೭೭
೧೦೮. ..... ಅದೇ ....., ಪುಟ - ೧೭೮
೧೦೯. ಡಾ. ಎಸ್.ಸಿ. ಪಾಟೀಲ (ಸಂ) : ಶಿಕ್ಷಣ ಸಂಪದ, ಪ್ರೊ. ವಿ.ಜಿ. ಮಾರಿಹಾಳ ಅಭಿನಂಧನ ಗ್ರಂಥ, ಪುಟ - ೧೮೧
೧೧೦. ..... ಅದೇ .....

ಕಾರ್ತಿಕಗಳಲ್ಲಿ ವಿಶೇಷ ಪೂಜೆ ನಡೆಯುವದು. ಹಾಗೂ ಪ್ರತಿ ವರ್ಷ ಬಾದಾಮಿ ಅಮವಾಸ್ಯೆಯ ಚತುರ್ದಶಿ ದಿನದಂದು ಮೇಲಿನ ಎಲ್ಲ ಗ್ರಾಮಗಳಲ್ಲಿಯೂ ಜಾತ್ರೆ ಜರಗುತ್ತದೆ. ಅಮವಾಸ್ಯೆಯ ಹಿಂದಿನ ರಾತ್ರಿ ಬಾಳಬಟ್ಟಲನ್ನು ಪ್ರಧಾನ ಅರ್ಚಕರು ಎರಡೂ ಕೈಯಲ್ಲೊಂದರಂತೆ ಹಿಡಿದುಕೊಂಡು ಭಕ್ತರ ಕೆಲವು ಮನೆಗಳಿಗೆ ಹೋಗುವದುಂಟು. ಕುಂಬಾರರೇ ಸಿದ್ಧಪಡಿಸಿದ ಮಣ್ಣಿನ ಪರಿಯಾಣದಲ್ಲಿ ಎಣ್ಣೆ ಸುರುವಿ, ಅದರಲ್ಲಿ ಅರಿವೆಯ ಚಿಂದಿಗಳನ್ನು ಅದ್ದಿ, ಅದಕ್ಕೆ ಉರಿ ಹಚ್ಚಿರುವದೇ ಬಾಳಬಟ್ಟಲು. ಉರಿಯುತ್ತಿರುವ ಈ ಬಟ್ಟಲುಗಳನ್ನು ಹಿಡಿದುಕೊಂಡು ಕ್ರಮವಾಗಿ ಅಗಸರ, ಗಾಣಿಗರ, ಗೌಡರ ಹಾಗೂ ಶಾನುಭೋಗರ ಮನೆಗಳಿಗೆ ಹೋಗಿ ಅವರೆಲ್ಲರಿಂದ ಪೂಜೆಗೊಂಡು ಬೀದಿಯ ಎಡ-ಬಲದ ಮನೆಯ ಭಕ್ತರಿಗೂ ದರ್ಶನವೀಯುತ್ತ ಗ್ರಾಮ ಪ್ರದಕ್ಷಿಣೆ ಮಾಡುತ್ತಾರೆ. ಅಂದು ದೇವಿಗೆ ಭಕ್ತರೆಲ್ಲ ತಮ್ಮ ತಮ್ಮ ಹರಕೆಗಳನ್ನು ಅರ್ಪಿಸುತ್ತಾರೆ. ಅವು ದೇವಿಗೆ ಕಣ್ಣು ಬೊಟ್ಟು ಮಾಡಿಸುವದು, ಸೀರೆ ಉಡಿಸುವುದು, ಉಡಿ ತುಂಬುವದು, ಮಕ್ಕಳ ಜವಳ, ದೀಡ ನಮಸ್ಕಾರ ಹೀಗೆ ವಿವಿಧ ಹರಕೆಗಳು ಸಲ್ಲುತ್ತವೆ. ಇವಳು ದೈತ್ಯರನ್ನು ಸಂಹಾರ ಮಾಡಿದ ದ್ಯೋತಕವಾಗಿ ಕುಂಬ ಕಾಯಿ ಒಡೆದು ಅದರ ಮೇಲೆ ಕುಂಕುಮದ ಓಕುಳಿ ಚೆಲ್ಲುತ್ತಾರೆ. ಅಂದು ಮಧ್ಯಾಹ್ನ ಮುಖವಾಡವನ್ನೇ ಅರ್ಚಕನಿಗೆ ಧರಿಸಿ, ಹಸಿರು ಸೀರೆ ಉಡಿಸಿ ಕೈಯಲ್ಲಿ ಖಡ್ಗವೊಂದನ್ನು ಕೊಡುತ್ತಾರೆ. ಈ ಮುಖವಾಡ ಶಿಲ್ಪ ಹೆಚ್ಚೆಂದರೆ ಸಾಮಾನ್ಯವಾಗಿ ಒಂದೂವರೆ ಅಡಿ ಅಗಲ, ಮೂರು ಅಡಿ ಎತ್ತರ, ಐದು ಕಿಲೋ ಭಾರವಾಗಿರುತ್ತದೆ. ಉಗ್ರತೆಯೇ ಮೈದಾಳಿದಂತೆ ಈ ಶಿಲ್ಪದ ಸ್ವರೂಪವಿರುತ್ತದೆ. ಈ ದೇವತೆ ಸಮಸ್ಥ ಭಕ್ತರಿಗೆ ದರ್ಶನ ಕೊಡುತ್ತ, ಅವರಿಗೆ ಅಭಯಹಸ್ತ ತೋರಿಸುತ್ತ, ಸನಾದಿ, ಸಂಬಾಳದ ತಾಳಗತ್ತಿನೊಂದಿಗೆ ಕುಣಿಯುತ್ತ ಸಾಗುತ್ತಾಳೆ. ದೇವತೆಯ ಸಂಚಾರದ ಸಂದರ್ಭದಲ್ಲಿ ಜನರು ಭಯ, ಭಕ್ತಿಯಿಂದ ಕೆಲವು ಕ್ರಿಯೆಗಳನ್ನು ಮಾಡುತ್ತಾರೆ.[೧೧೧] ದೇವತೆ ಗ್ರಾಮದ ಮಧ್ಯಕ್ಕೆ ಬಂದಾಗ ದೇವತೆಯಿಂದ ಮೊಸರು ಕಡೆದು ಮಜ್ಜಿಗೆ ಮಾಡುವ ನಟನೆ ನಡೆಯುತ್ತದೆ. ಆಗ ಕೆಲವರು ಬೆಕ್ಕುಗಳಂತೆ ಮಿಯಾವ್ ಎಂದು ಶಬ್ದ ಮಾಡುತ್ತಿರುತ್ತಾರೆ. ಅಲ್ಲಿ ಮಜ್ಜಿಗೆ ಕಂಬ ನೆಡಲಾಗಿರುತ್ತದೆ. ಅದಕ್ಕೆ ಬೇವಿನ ತೊಪ್ಪಲನ್ನು ಹೊದಿಸಿರುತ್ತಾರೆ. ಆಚರಣೆಯ ನಂತರ ಬೇವಿನ ತೊಪ್ಪಲನ್ನು ರೈತರು ಹೊಲದಲ್ಲಿ ಚೆಲ್ಲುತ್ತಾರೆ. ಬೆಳೆಗಳಿಗೆ ರೋಗ ಬರುವದಿಲ್ಲವೆಂಬುದು ಇದರ ನಂಬಿಕೆಯಾಗಿದೆ. ಮಜ್ಜಿಗೆ ಮಾಡುವ ಕ್ರಿಯೆ ಪಶುಪಾಲನೆ, ಹೈನುಗಾರಿಕೆಯ ಸಂಕೇತವಾಗಿರಬಹುದೆಂದು ಡಾ. ಎಂ.ಎಂ. ಪಡಶೆಟ್ಟಿಯವರು ಅಭಿಪ್ರಾಯ ಪಡುತ್ತಾರೆ. ಹೀಗೆ ಅಗ್ನಿ ತುಳಿಯುವದು, ಕೋಲಾಟ ಆಡುವದು, (ಆಳೆತ್ತರದ ಕೋಲುಗಳನ್ನು ಹಿಡಿದು ತಳವಾರರೊಂದಿಗೆ ಬಡಿದಾಡುತ್ತ ಅಗಸಿಯ ಆಚೆಯವರೆಗೂ ಹಿಮ್ಮೆಟ್ಟಿಸುವದು ನಡೆಯುತ್ತದೆ) ಗ್ರಾಮದ ಪ್ರತಿಷ್ಠಿತರೊಂದಿಗೆ ಪಗಡೆಯಾಟ ಆಡುವದು ಹಾಗೂ ಹೇಳಿಕೆಗಳನ್ನು ನೀಡುವದು ಮುಂತಾಗಿ ನಡೆಯುತ್ತವೆ.

---

೧೧೧. ..... ಅದೇ ....., ಪುಟ - ೧೮೩




ಚೌಡಮ್ಮನ ಶಿಲ್ಪಗಳು (ಮಾಗಣಗೇರಿ)



ಚೌಡಮ್ಮನ ಶಿಲ್ಪ ( ಅರಳಗುಂಡಗಿ )

ಮಾಶ್ಯಾಳ ಚೌಡಮ್ಮರಷ್ಟು ಪ್ರಸಿದ್ಧಿಯಲ್ಲಿ ಇಲ್ಲ. ಬೀದರ ಜಿಲ್ಲೆಯಲ್ಲೂ ಕೆಲವೆಡೆ ಅಪರೂಪಕ್ಕೆಂಬಂತೆ ಚೌಡಮ್ಮನ ಶಿಲ್ಪಗಳು ಕಂಡುಬರುತ್ತವೆ. ಔರಾದ ಹಾಗೂ ಬಸವಕಲ್ಯಾಣ ತಾಲ್ಲೂಕುಗಳಲ್ಲಿ ಚೌಡಮ್ಮ ಶಿಲ್ಪಗಳಿವೆ. ಆದರೆ, ಜಾತ್ರೆ, ಉತ್ಸವಗಳು ಅಲ್ಲಿಯ ಜನತೆಯ ಬಡತನ ಕಾರಣವಾಗಿ ಪ್ರಸಿದ್ಧಿಯಲ್ಲಿ ಇಲ್ಲ.

**ಮಾಶ್ಯಾಳದ ಚೌಡಮ್ಮ :** ಮಾಶ್ಯಾಳದ ಚೌಡಮ್ಮ ಪ್ರಸಿದ್ಧಳು. ಗುಡಿ ಊರ ಮಧ್ಯದಲ್ಲಿದೆ. ಗುಡಿಯಲ್ಲಿ ಚೌಡಮ್ಮನ ಜೋಡುಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಕುಂಬಾರರು ಇಲ್ಲಿ ಪೂಜಾರಿಗಳಾಗಿದ್ದಾರೆ. ಉತ್ಸವವು ಪ್ರತಿ ವರ್ಷ ಬಾದಾಮಿ ಅಮವಾಸ್ಯೆಗೆ ನಡೆಯುತ್ತದೆ. ಈ ಉತ್ಸವವು ಮೂರು ದಿನಗಳ ಕಾಲ ನಡೆಯುವದು. ಮೊದಲ ದಿವಸ ಬಾಳಬಟ್ಟಲದ ಉತ್ಸವ, ಎರಡನೆಯ ದಿವಸ ಕುದುರೆ ಕುಣಿತ, ಮೂರನೆಯ ದಿವಸ ಕುಸ್ತಿ, ಬಯಲಾಟ, ನಾಟಕ, ಹಾಡಕ್ಕಿ ನಡೆಯುವವು.[೧೧೨] ಹೈದರಾಬಾದ್ ಕರ್ನಾಟಕವಲ್ಲದೆ ಉತ್ತರ ಕರ್ನಾಟಕದ ಇತರ ಭಾಗಗಳಲ್ಲಿ ಅಂದರೆ, ಇಳಕಲ್,[೧೧೩] ಬೆಳಗಾವಿ, ಹುಬ್ಬಳ್ಳಿ[೧೧೪] ಪ್ರದೇಶಗಳಲ್ಲಿ ಚೌಡಮ್ಮ ಶಿಲ್ಪಗಳು ಕ್ವಚಿತ್ತಾಗಿ ದೊರೆಯುತ್ತವೆ.

ಇಂಡಿ[೧೧೫]ಯಲ್ಲಿ ಚೌಡಮ್ಮ ದೇವತೆಯಿದ್ದು ಪ್ರತಿ ವರ್ಷ ಮೇ ತಿಂಗಳು ಜಾತ್ರೆ ನಡೆಯುತ್ತದೆ. ಇದೇ ತಾಲೂಕಿನ ತಾಂಬಾ ಹಾಗೂ ಚಿಕ್ಕಬೇವನೂರ [೧೧೬] ಗ್ರಾಮ ಮುಂತಾದೆಡೆಗಳಲ್ಲಿ ಚೌಡೇಶ್ವರಿಯ ದೇವಾಲಯ ಮತ್ತು ಶಿಲ್ಪಗಳಿದ್ದು ಪ್ರಸಿದ್ಧವಾದವುಗಳಾಗಿವೆ. ತಾಂಬಾದ ಕುಂಬಾರ ಓಣಿಯಲ್ಲಿರುವ ಚೌಡೇಶ್ವರಿ ದೇವಿಯು ಆ ಗ್ರಾಮದ ಹಾಗೂ ಸುತ್ತಮುತ್ತಲಿರುವ ಊರುಗಳ ಜನತೆಯ ಆರಾಧ್ಯ ದೈವವಾಗಿದ್ದಾಳೆ. ಪ್ರತಿ ವರ್ಷ ಬಾದಾಮಿ ಅಮವಾಸ್ಯೆಯ ದಿನದಂದು ಈ ದೇವಿಯ ಜಾತ್ರೆ ನಡೆಯುತ್ತದೆ.

**ಶಿಲ್ಪದ ರಚನೆ :** ಸಾಮಾನ್ಯವಾಗಿ ವಿಶ್ವಕರ್ಮರು ಈ ಶಿಲ್ಪವನ್ನು ಮಾಡಿರುತ್ತಾರೆ. ಹಗುರವಾಗಿರುವ, ಹೊನ್ನೆ, ಯೆಕ್ಕೆ, ಮಳಿಗೆ, ಮಾವಿನ ಮರವನ್ನು ಶಿಲ್ಪಗಳ ರಚನೆಗೆ ಬಳಸಿರುತ್ತಾರೆ. ಈ ಶಿಲ್ಪ ಒಂದೂವರೆ ಅಡಿ ಅಗಲ, ಮೂರು ಅಡಿ ಎತ್ತರವಿದ್ದು ಐದು ಕೆ.ಜಿ. ಭಾರವಾಗಿರುತ್ತದೆ. ಎಲ್ಲ ಚೌಡಮ್ಮ ಶಿಲ್ಪಗಳಿಗೆ ಕೆಂಪು ಬಣ್ಣವನ್ನೇ ಬಳಿಯಲಾಗಿದ್ದು, ಅಗಲವಾದ ಕಣ್ಣು, ಬಿಳಿಯ ಕಣ್ಣುಗಳ ಮಧ್ಯೆ ಕಪ್ಪು ಗುಡ್ಡೆ, ಕೋರೆ ಹಲ್ಲು, ಅರ್ಧ ಭಾಗ ನುಂಗಲ್ಪಟ್ಟ ಕೂಸಿನ ಅಧೋ ಭಾಗ ಹೊಂದಿರುತ್ತದೆ. ತಲೆಯ ಮೇಲೆ ನಾಗರ ಹೆಡೆ, ಹಣೆಯ ಮೇಲೆ ಎರಡು ಇಲ್ಲವೆ ಮೂರು ಬೆರಳು ವಿಭೂತಿ, ಹಣೆಪಟ್ಟಿಯಲ್ಲಿ ಹೆಣ್ಣುಗಳ ಅಲಂಕೃತ ಮುಖಗಳ ಚಿತ್ರ ಹಾಗೂ ಹಾವುಗಳಿಂದ ಅಲಂಕೃತವಾದ ಎತ್ತರವಾದ ಕಿರೀಟ, ಕಿರೀಟದ ಎಡ-ಬಲಕ್ಕೂ ಕಿರೀಟಕ್ಕೆ ಹೊಂದಿದಂತೆ ಪ್ರಭಾವಳಿ ಹಾಗೂ ಕಿವಿಯಲ್ಲಿ ಓಲೆಗಳು

---

೧೧೨. ಹೆಚ್ಚಿ ವಿವರಗಳಿಗೆ ನೋಡಿರಿ : ಡಾ. ಚೆನ್ನಣ್ಣ ವಾಲೀಕಾರ : ಹೈದರಾಬಾದ್ ಕರ್ನಾಟಕದ ಗ್ರಾಮ ದೇವತೆಗಳ ಜಾನಪದೀಯ ಅಧ್ಯಯನ, ಪುಟ -೧೭೯

೧೧೩. ಇಳಕಲ್ಲ : ತಾ. ಹುನಗುಂದ, ಜಿ. ಬಾಗಲಕೋಟ

೧೧೪. ಹುಬ್ಬಳ್ಳಿ : ತಾ. ಹುಬ್ಬಳ್ಳಿ, ಜಿ. ಧಾರವಾಡ

೧೧೫. ಇಂಡಿ : ತಾ. ಇಂಡಿ, ಜಿ. ಬಿಜಾಪುರ

೧೧೬. ತಾಂಬಾ, ಚಿಕ್ಕಬೇವನೂರ : ತಾ. ಇಂಡಿ, ಜಿ. ಬಿಜಾಪುರ

[illegible]

ಮುಂತಾದವುಗಳಿಂದ ಶಿಲ್ಪ ಆಕರ್ಷಕವಾಗಿರುತ್ತದೆ. ಗುಲಬರ್ಗಾ ಜಿಲ್ಲೆಯ ಅರಳಗುಂಡಗಿಯ[೧೧೭] ಬಡಿಗೇರರ ಮನೆಯ ಹತ್ತಿರದ ದ್ಯಾಮವ್ವ ದೇವಸ್ಥಾನದಲ್ಲಿರುವ ಚೌಡಮ್ಮನ ಶಿಲ್ಪ ಮೇಲಿನ ವಿವರಣೆಗೆ ಉದಾಹರಣೆಯಂತಿದೆ. ಇದೇ ರೀತಿಯ ಇನ್ನೊಂದು ಶಿಲ್ಪ ಕಿಟ್ಟದಲ್ಲಿ ಮಾಡಲಾಗಿದ್ದು, ಅದು ಹಟಗಾರರ ಮನೆಯಲ್ಲಿ ನೋಡಲು ಸಿಗುತ್ತದೆ.

ಜಾತ್ರೆಯ ದಿವಸ ಊರವರೆಲ್ಲ ಸೇರಿ ಪೂಜೆ, ನೈವೇದ್ಯ ಸಲ್ಲಿಸಿ ಸಂಜೆಗೆ ಗಂಗಸ್ಥಳ ಮಾಡಿ ಊರಲ್ಲಿ ಪ್ರವೇಶಿಸಿ ಮುಖಕ್ಕೆ ಕಟ್ಟಿ ಕುಣಿಯುವ ಉತ್ಸವ ನಡೆಯುತ್ತದೆ. ಮಾಗಣಗೇರಿಯಲ್ಲಿ ವಿಶ್ವಕರ್ಮರ ಮನೆಯಲ್ಲಿ ಚೌಡೇಶ್ವರಿ ದೇವಸ್ಥಾನವಿದ್ದು, ಚೌಡಮ್ಮಳ ಒಂದು ಜೊತೆ ಶಿಲ್ಪಗಳಿವೆ. ಈ ಎರಡೂ ಶಿಲ್ಪಗಳು ರೂಪದಲ್ಲಾಗಲಿ, ಬಣ್ಣದಲ್ಲಾಗಲಿ ಏನೂ ವ್ಯತ್ಯಾಸ ಹೊಂದಿಲ್ಲ. ಆಕಾರದಲ್ಲಿ ಒಂದು ಶಿಲ್ಪ ದೊಡ್ಡದು, ಮತ್ತೊಂದು ಶಿಲ್ಪ ಚಿಕ್ಕದು ಆಗಿವೆ. ಈ ಎರಡೂ ಬದಿಗೆ ಖಡ್ಗವನ್ನಿಡಲಾಗಿದೆ. ಮಾಶ್ಯಾಳದಲ್ಲಿ[೧೧೮] ಚೌಡಮ್ಮನ ಜಾತ್ರೆ ವಿಶೇಷವಾಗಿ ನಡೆಯುತ್ತದೆ.

## ೨. ಅಮೋಘಸಿದ್ಧೇಶ್ವರನ ಶಿಲ್ಪಗಳು

ಅಮೋಘ ಸಿದ್ಧೇಶ್ವರನ ಒಂದು ಜೊತೆ ಮುಖವಾಡ ಶಿಲ್ಪಗಳನ್ನು ದೇವಸ್ಥಾನದಲ್ಲಿ ಗದ್ದುಗೆಯ ಮೇಲೆ ಪ್ರತಿಷ್ಠಾಪಿಸಲಾಗಿರುತ್ತದೆ. ಕಲ್ಲೂರು,[೧೧೯] ಮಾಣಶಿವಣಗಿ,[೧೨೦] ಖೈನೂರು,[೧೨೧] ಅರಕೇರಿ[೧೨೨] ಮುಂತಾದ ಊರುಗಳಲ್ಲಿ ಅಮೋಘ ಸಿದ್ಧೇಶ್ವರನ ಶಿಲ್ಪಗಳನ್ನು ದೇವಸ್ಥಾನಗಳಲ್ಲಿ ಪ್ರತಿಷ್ಠಾಪಿಸಿರುವುದನ್ನು ಕಾಣಬಹುದು. ಈ ಎರಡು ಮುಖವಾಡ ಶಿಲ್ಪಗಳಲ್ಲಿ ಒಂದು ದೊಡ್ಡದೇವರು, ಇನ್ನೊಂದು ಸಣ್ಣ ದೇವರು ಎಂದು ಗ್ರಾಮೀಣರು ಹೇಳುತ್ತಾರೆ. ಪ್ರತೀ ವರ್ಷ ಬಾದಾಮಿ ಅಮವಾಸ್ಯೆಯಂದು ದೇವರ ಉತ್ಸವ ನಡೆಯುತ್ತದೆ. ಈ ಉತ್ಸವದ ಸಂದರ್ಭದಲ್ಲಿ ಐದು ದಿನಗಳು ಹಾಗೂ ದೀಪಾವಳಿ ಅಮವಾಸ್ಯೆಯ ಸಂದರ್ಭದಲ್ಲಿ ಐದು ದಿನಗಳು ಮಾತ್ರ ಈ ಶಿಲ್ಪಗಳನ್ನು ಹೊರತೆಗೆದು ಗದ್ದುಗೆಯ ಮೇಲೆ ಪ್ರತಿಷ್ಠಾಪಿಸಿರುತ್ತಾರೆ. ಇದಕ್ಕೆ ದೇವರು ಹಸೆ ಏರುವದು ಅಥವಾ ಹಸೆ ಕುಳಿತಿರುವದು ಎಂದು ಹೇಳುತ್ತಾರೆ. ಐದು ದಿನಗಳ ನಂತರ ಆ ಶಿಲ್ಪಗಳಿಗಾಗಿ ಮಾಡಲಾಗಿರುವ ಬೆಳ್ಳಿಯ ಎರಡು ಪೆಟ್ಟಿಗೆಗಳಲ್ಲಿಡುವ ಕಾರ್ಯಕ್ರಮವನ್ನು 'ದಿಂಡೆ' ತುಂಬುವದು ಎಂದು ಹೇಳುತ್ತಾರೆ. ಜನರು ಭಕ್ತಿಯಿಂದ ಈ ದೇವತೆಗೆ ನಡೆದುಕೊಳ್ಳುವರು.

---

೧೧೭. ಅರಳಗುಂಡಗಿ : ತಾ. ಜೇವರ್ಗಿ, ಜಿ. ಗುಲಬರ್ಗಾ

೧೧೮. ಮಾಶ್ಯಾಳದ ಚೌಡಮ್ಮನ ಗುಡಿಯಲ್ಲಿ ಒಂಭತ್ತು ಚೌಡಮ್ಮನ ಮುಖವಾಡಗಳಿವೆ

೧೧೯. ಕಲ್ಲೂರು : ತಾ. ಜೇವರ್ಗಿ, ಜಿ. ಗುಲಬರ್ಗಾ

೧೨೦. ಮಾಣಶಿವಣಗಿ : ತಾ. ಜೇವರ್ಗಿ, ಜಿ. ಗುಲಬರ್ಗಾ

೧೨೧. ಖೈನೂರು : ತಾ. ಸಿಂದಗಿ, ಜಿ. ಬಿಜಾಪುರ

೧೨೨. ಅರಕೇರಿ : ತಾ. ಯಾದಗೀರ, ಜಿ. ಗುಲಬರ್ಗಾ



ಅಮೋಘಸಿದ್ಧನ ಶಿಲ್ಪಗಳು (ಖೈನೂರ)



ನಿಜಲಿಂಗಮ್ಮ ಮತ್ತು ಗಂಗಮ್ಮ ( ಕಾಮಲಾಪುರ )

**ಹೇಳಿಕೆ :** ಪ್ರತಿ ವರ್ಷ ನಡೆಯುವ ವಿಶೇಷ ಜಾತ್ರೆಯ ಸಂದರ್ಭದಲ್ಲಿ ಈ ದೇವರ ಪೂಜಾರಿಗಳಾದವರು ಈ ದೇವರ ಮುಖವಾಡಶಿಲ್ಪಗಳನ್ನು ಮುಖಕ್ಕೆ ಕಟ್ಟಿಕೊಂಡು, ಕೈಯಲ್ಲಿ ಬೆತ್ತ ಹಿಡಿದು, ಡೊಳ್ಳಿನ ವಾಲಗದೊಂದಿದೆ ಕುಣಿತ ಪ್ರದರ್ಶನ ಮಾಡಿ, ನಂತರ ಡೊಳ್ಳನ್ನು ಏರಿ ಭವಿಷ್ಯ ಹೇಳುವರು. ಹೀಗೆ ಹೇಳುವದನ್ನು ದೇವರ ಹೇಳಿಕೆ ಎಂದು ಕರೆಯುವರು. ಈ ಹೇಳಿಕೆ ಹೇಳುವ ಸಂದರ್ಭದಲ್ಲಿ ಅವರು ವಿಶೇಷ ಪೋಶಾಕು ಧರಿಸಿರುವರು.

**ಶಿಲ್ಪಗಳ ರಚನೆ :** ಸಾಮಾನ್ಯವಾಗಿ ಈ ಶಿಲ್ಪಗಳು ಮರದ ಮಾಧ್ಯಮದವುಗಳಾಗಿರುತ್ತವೆ. ಈ ಮುಖವಾಡ ಶಿಲ್ಪಗಳು ಮನುಷ್ಯನ ಸಾಮಾನ್ಯ ಮುಖದ ಎರಡರಷ್ಟು ದೊಡ್ಡದಾಗಿರುತ್ತವೆ. ಇವು ಪ್ರಸನ್ನ ಭಾವದ ತೇಜಸ್ಸುಳ್ಳ ನಗು ಮುಖದವುಗಳಾಗಿರುತ್ತವೆ. ಕೆಂಪು ಬಣ್ಣ ಪ್ರಧಾನವಾಗಿ ಮುಖವರ್ಣಿಕೆ ಹೊಂದಿರುವ ಈ ಶಿಲ್ಪಗಳಲ್ಲಿ ಕಪ್ಪು ಮೀಸೆ, ಏರಿದ ಹುಬ್ಬು, ಅಗಲವಾದ ಕಣ್ಣುಗಳಿಂದ ಕೂಡಿ ಆಕರ್ಷಕವಾಗಿ ಕಂಡುಬರುತ್ತವೆ. ಕಿರೀಟದಲ್ಲಿ ಅಲಂಕೃತ ನಾಗರ ಶಿಲ್ಪ, ಹಣೆಯ ಮೇಲೆ ಢಾಳವಾಗಿ ಎದ್ದು ಕಾಣುವ ವಿಭೂತಿಯಿಂದ ಕಂಗೊಳಿಸುತ್ತವೆ. ಸುತ್ತಲೂ ಹೂಗಳಿಂದ ರಚಿಸಿದ ಬಾಸಿಂಗ ಮತ್ತು ಹೂಮಾಲೆಗಳಿಂದ ಅಲಂಕೃತಗೊಳಿಸಲಾಗಿರುತ್ತವೆ.

ಹೀಗೆ ಮರದ ಮಾಧ್ಯಮದ ಧರ್ಮಮೂಲ ಜನಪದ ಶಿಲ್ಪಕಲೆಯಲ್ಲಿ ಶಿರಭಾವ ಶಿಲ್ಪಗಳು ಪ್ರಮುಖವಾಗಿ ಕಂಡು ಬರುತ್ತವೆ. ಚೌಡಮ್ಮನ ಶಿಲ್ಪಗಳು ಹಾಗೂ ಅಮೋಘಸಿದ್ಧೇಶ್ವರನ ಶಿಲ್ಪಗಳು ಇವೆರಡರಲ್ಲಿ ಚೌಡಮ್ಮನ ಶಿಲ್ಪಗಳು ಉಗ್ರತೆಯಲ್ಲಿ ಮತ್ತು ಆಕಾರದಲ್ಲಿ ಅಮೋಘಸಿದ್ಧೇಶ್ವರನ ಶಿಲ್ಪಗಳಿಗಿಂತ ಮಿಗಿಲಾಗಿರುತ್ತವೆ. ಆದರೆ ಈ ಎರಡೂ ದೇವರುಗಳ ಜಾತ್ರೆ ಉತ್ಸವಗಳು ವಿಜೃಂಭಣೆಯಿಂದ ನಡೆಯುತ್ತವೆ. ಚೌಡಮ್ಮ ಉಗ್ರಸ್ವರೂಪದ ಸ್ತ್ರೀದೇವತೆಯಾದರೆ, ಅಮೋಘಸಿದ್ಧ ಸೌಮ್ಯ ಸ್ವರೂಪದ ಪುರುಷ ದೇವನಾಗಿದ್ದಾನೆ. ಆದರೆ ಈ ಎರಡೂ ದೇವತೆಗಳು ಮಳೆ-ಬೆಳೆಗಳ ಬಗ್ಗೆ ಭವಿಷ್ಯ ನುಡಿಯಬಲ್ಲವುಗಳಾಗಿದ್ದರಿಂದ ನಮ್ಮ ಜನಪದರಿಂದ ಆರಾಧಿಸಲ್ಪಡುವ ದೇವತಾ ಶಿಲ್ಪಗಳಾಗಿ ಪ್ರಸ್ತುತವಾಗಿವೆ.

## II. ಮರದ ಮಾಧ್ಯಮದ ದೇವರ ವಾಹನ ಶಿಲ್ಪಗಳು

ದೇವರ ವಾಹನಗಳಲ್ಲಿ ವಿವಿಧ ಪ್ರಕಾರಗಳಿವೆ. ಆದರೆ ಪ್ರಾತಿನಿಧಿಕವಾಗಿ ಮರದ ಮಾಧ್ಯಮದಲ್ಲಿರುವ ಕೆಲವು ಶಿಲ್ಪಗಳನ್ನು ಇಲ್ಲಿ ನೋಡಲಾಗಿದೆ. ಅವುಗಳನ್ನು ಮುಖ್ಯವಾಗಿ ಅಧ್ಯಯನದ ದೃಷ್ಟಿಯಿಂದ ಪ್ರಾಣಿ ಶಿಲ್ಪಗಳು, ಪಕ್ಷಿ ಶಿಲ್ಪಗಳು, ಜಲಚರ ಸಸ್ತನಿಗಳ ಶಿಲ್ಪಗಳು ಎಂದು ಮೂರು ರೀತಿಯಲ್ಲಿ ವಿಂಗಡಿಸಬಹುದು.

## II.೧ ಪ್ರಾಣಿ ವಾಹನ ಶಿಲ್ಪಗಳು

ಪ್ರಾಚೀನ ಕಾಲದಿಂದಲೂ ನಮ್ಮ ಜನಪದರು ಪ್ರತಿಯೊಂದು ದೇವರಿಗೆ ಅವುಗಳದ್ದೇ ಆದ ಪ್ರಾಣಿಗಳನ್ನು ವಾಹನಗಳನ್ನಾಗಿ ನಿರ್ಧೇಶಿಸಿದ್ದಾರೆ. ಅಂಥ ಪ್ರಾಣಿ ವಾಹನ ಶಿಲ್ಪಗಳಲ್ಲಿ ಸಾಕು ಪ್ರಾಣಿಗಳೂ ಹಾಗೂ ಕಾಡು ಪ್ರಾಣಿಗಳೂ ಸೇರುತ್ತವೆ.

**ಅ. ನಂದಿ ವಾಹನ ಶಿಲ್ಪಗಳು :** ನಂದಿಯು ಶಿವನ ವಾಹನ. ಇದನ್ನು ವೃಷಭ ಎಂದೂ ಕರೆಯುತ್ತಾರೆ. ನಂದಿಯು ಶಿವನ ವಾಹನವಾದುದರ ಬಗ್ಗೆ ಪುರಾಣದಲ್ಲಿ ಸುಂದರವಾದ ಕಥೆಯಿದೆ.[೧೨೩] ಆ ಕಥೆಯ ಪ್ರಕಾರ ಪ್ರಜಾಪತಿಗಳು ಶಿವನಿಗೆ ವೃಷಭನನ್ನು ವಾಹನವನ್ನಾಗಿ ನೀಡಿದ್ದಾರೆ. ಅಂದಿನಿಂದ ಶಿವನು ವೃಷಭವಾಹನ, ವೃಷಭಾಂಕ ಎಂದೂ ಕರೆಯಲ್ಪಡುತ್ತಿರುವನು. ಶಿವಗಣದಲ್ಲಿ ನಂದಿಯು ಪ್ರಸಿದ್ಧನು. ಆ ಕಾರಣದಿಂದಲೇ ಶಿವಭಕ್ತರಿಗೆ ಎತ್ತುಗಳು ಪೂಜ್ಯನೀಯವಾಗಿವೆ.

ಈ ಶಿವನ ವಾಹನವಾದ ನಂದಿಯು ಉತ್ತರ ಕರ್ನಾಟಕದ ಅನೇಕ ಶೈವ ದೇವಾಲಯಗಳಲ್ಲಿ ಮರದ ಮಾಧ್ಯಮದಲ್ಲಿ ರಚಿಸಿ ಇಟ್ಟಿರುವದನ್ನು ಕಾಣಬಹುದು. ಇವು ಶುದ್ಧ ಜನಪದ ಶೈಲಿಯಲ್ಲಿರುತ್ತವೆ. ಕಟ್ಟಿಗೆಯಿಂದ ಮಾಡಲಾಗಿರುವ ಈ ಶಿಲ್ಪಗಳಿಗೆ ಸಾಮಾನ್ಯವಾಗಿ ಬಿಳಿಯ ಬಣ್ಣ ಬಳೆದು ಕೆಂಪು, ಹಳದಿ, ಇಲ್ಲವೆ ಕಪ್ಪು ಬಣ್ಣದ ಮೊಗಡ, ಕೊರಳಲ್ಲಿ ಲಡ್ಡು, ಗಂಟೆ ಕಟ್ಟಿರುತ್ತವೆ. ಇನ್ನೂ ಕೆಲವು ನಂದಿ ವಾಹನ ಶಿಲ್ಪಗಳಿಗೆ ಮೈಮೇಲೆ ಜೂಲ ಹಾಕಿ ಅಲಂಕಾರ ಮಾಡಿರುತ್ತಾರೆ.

**ಆ. ಕುದುರೆ ವಾಹನ ಶಿಲ್ಪಗಳು :** ಕುದುರೆ ಇಂದ್ರನ ವಾಹನ. ಇದು ಸೂರ್ಯ ದೇವನ ವಾಹನವೂ ಹೌದು. ಕುದುರೆ ಮೈಲಾರ ಲಿಂಗನ ಸಂಪ್ರದಾಯದಲ್ಲಿ ಬರುವ ಒಂದು ಕಥೆಯ[೧೨೪] ಪ್ರಕಾರ ಭಕ್ತರು ದೀಕ್ಷೆ ಪಡೆದು ಕುದುರೆಯಂತೆ ಕುಣಿದು ಸೇವೆ ಸಲ್ಲಿಸುತ್ತಾರೆ.[೧೨೫] ಈ ಕುದುರೆಗಳಿಗೆ, ಕುಲದೇವತೆಯದ್ದಾಗಿದ್ದರೆ ಕೆಂಪು ಬಣ್ಣ, ಬೇರೆ ದೇವತೆಗಳದ್ದಾಗಿದ್ದರೆ ಹಳದಿ, ಬಿಳಿ, ಹಸಿರು ಬಣ್ಣದ ಕುದುರೆಗಳು ವಾಹನಗಳಾಗಿರುತ್ತವೆ. ದೇವರ ಹಿಪ್ಪರಗಿಯ[೧೨೬] - ರಾವುತರಾಯನ ಗುಡಿಯಲ್ಲಿ ಆಳೆತ್ತರದ ಕಟ್ಟಿಗೆ ಮಾಧ್ಯಮದ ಕುದುರೆ ಶಿಲ್ಪವಿದೆ. ವರ್ಷಕ್ಕೊಮ್ಮೆ ನಡೆವ ದೇವರ ಜಾತ್ರೆಯಲ್ಲಿ ಈ ಕುದುರೆ ಶಿಲ್ಪದ ಮೇಲೆ ರಾವುತರಾಯನ ಶಿಲ್ಪವನ್ನು ಕುಳ್ಳಿರಿಸಿ ಮೆರವಣಿಗೆ ಮಾಡಲಾಗುತ್ತದೆ. ಇದು ಬಿಳಿಯ ಬಣ್ಣದ ಕುದುರೆಯಾಗಿದೆ. ಕಿನ್ನಾಳ, ತಾಳಿಕೋಟಿಯ ಕಲಾವಿದರು ಇಂಥ ಶಿಲ್ಪಗಳನ್ನು ರಚಿಸುತ್ತಾರೆ.

---

೧೨೩. ವಿವಗಳಿಗೆ ನೋಡಿ : ಇದೇ ಮಹಾಪ್ರಬಂಧದ ಅಧ್ಯಾಯ ಆರು, ಲೋಹ ಮಾಧ್ಯಮದ ಜನಪದ ಶಿಲ್ಪಕಲೆ, ಪ್ರಾಣಿ ವಾಹನ ಶಿಲ್ಪಗಳು

೧೨೪. ಕರೀಗೌಡ ಬೀಚನಹಳ್ಳಿ (ಸಂ) : ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವ ಕೋಶ - ೨, ಪುಟ - ೨೪೨

೧೨೫. ವಿವರಗಳಿಗೆ ನೋಡಿ : ಇದೇ ಮಹಾಪ್ರಬಂಧದ ಅಧ್ಯಾಯ ಆರು, ಲೋಹ ಮಾಧ್ಯಮದ ಜನಪದ ಶಿಲ್ಪಕಲೆ, ಪ್ರಾಣಿ ವಾಹನ ಶಿಲ್ಪ

೧೨೬. ದೇವರ ಹಿಪ್ಪರಗಿ : ತಾ. ಸಿಂದಗಿ, ಜಿ. ಬಿಜಾಪುರ

**ಇ. ಹುಲಿ ವಾಹನ ಶಿಲ್ಪಗಳು :** ಹಲವಾರು ಗ್ರಾಮ ದೇವತೆಗಳಿಗೆ ಹುಲಿಯು ವಾಹನವಾಗಿರುತ್ತದೆ. ಸಾಮಾನ್ಯವಾಗಿ ಮರದ ಮಾಧ್ಯಮದಲ್ಲಿರುವ ದ್ಯಾಮವ್ವ, ಹುಲಿಗೆಮ್ಮ, ಕಾಳಮ್ಮ, ಕರೆವ್ವ ಮುಂತಾದ ಗ್ರಾಮ ದೇವತಾ ಶಿಲ್ಪಗಳು ಹುಲಿ ವಾಹನದ ಮೇಲೆಯೇ ಆಸೀನವಾದ ಭಂಗಿಯಲ್ಲಿರುತ್ತವೆ. ಈ ಶಿಲ್ಪಗಳು ಲೋಹ ಮಾಧ್ಯಮದಲ್ಲಿ ಅಲ್ಪ ಪ್ರಮಾಣದಲ್ಲಿ ಕಂಡು ಬರುತ್ತವೆ. ಆದರೆ ಮರದ ಮಾಧ್ಯಮದಲ್ಲಿ ಅಪ್ಪಟ ಜನಪದೀಯ ಶೈಲಿಯಲ್ಲಿ ರಚನೆಯಾಗಿರುತ್ತವೆ.

ಈ ಹುಲಿ ವಾಹನ ಶಿಲ್ಪ ಸಾಮಾನ್ಯವಾಗಿ ತೆರೆದ ಬಾಯಿ, ಹಳದಿ ಮೈ ಬಣ್ಣವನ್ನು ಹೊಂದಿ ಭಯಾನಕ ವಿನ್ಯಾಸಳಿಂದ ಕೂಡಿರುತ್ತವೆ. ಸೂಕ್ಷ್ಮವಾದ ಉಗುರು ಇತರ ವಿವರಗಳನ್ನು ಮಾಡಲಾಗಿರುತ್ತದೆ. ಹುಲಿ ವಾಹನ ಶಿಲ್ಪಗಳು ಎಲ್ಲೆಲ್ಲಿ ಸ್ತ್ರೀ ಗ್ರಾಮದೇವತೆಗಳಿವೆಯೋ ಅಲ್ಲೆಲ್ಲ ಅವು ವಾಹನ ಶಿಲ್ಪಗಳಾಗಿ ಬಹುವಾಗಿ ಕಂಡುಬರುತ್ತವೆ.

**ಈ. ಇಲಿ ವಾಹನ ಶಿಲ್ಪಗಳು :** ಇಲಿ ಗಣೇಶನ ವಾಹನ. ಇಳಕಲ್ಲಿನಲ್ಲಿ ವರ್ಷಕ್ಕೊಮ್ಮೆ ಇಲಿ ಹಬ್ಬ ಮಾಡುತ್ತಾರೆ.[೧೨೭] ನೇಕಾರಿಕೆಯಲ್ಲಿ ಇಲಿಗಳು ತೊಂದರೆ ಕೊಡಬಾರದೆಂದು ಹೀಗೆ ಮಾಡುತ್ತಾರಂತೆ. ಈ ಪರಂಪರೆ ನೇಕಾರರು ಇರುವ ಕಡೆಗಳೆಲ್ಲೆಲ್ಲ ರೂಢಿಯಲ್ಲಿದೆಯಂತೆ. ಇದು ಮಣ್ಣಿನಿಂದ ರಚಿತವಾಗಿರುತ್ತದೆ. ಆದರೆ ವಿಘ್ನ ನಿವಾರಕ ಗಣೇಶನ ವಾಹನವಾದ ಈ ಇಲಿಯು ಗಣೇಶನ ಶಿಲ್ಪ ಕಟ್ಟಿಗೆಯದಿದ್ದಲ್ಲಿ, ಇದು ಕೂಡ ಕಟ್ಟಿಗೆಯಲ್ಲೇ ರಚನೆಗೊಂಡಿರುತ್ತದೆ.

**ಉ. ಕೋಣ ವಾಹನ ಶಿಲ್ಪಗಳು :** ಕೋಣ ವಾಹನ ಶಿಲ್ಪವನ್ನು ದೇವತಾ ಮೂರ್ತಿಗಳ ಮುಂದೆ ನಿಲ್ಲಿಸಿರುತ್ತಾರೆ. ಕಟ್ಟಿಗೆಯಲ್ಲಿ ಮಾಡಲಾದ ಈ ಶಿಲ್ಪಕ್ಕೆ ಕಪ್ಪು ಮೈಬಣ್ಣ, ಕೋಡುಗಳಿಗೆ ಬಿಳಿಯ ಬಣ್ಣ ಬಳೆದಿರುತ್ತಾರೆ. ಇದು ಯಮಧರ್ಮನ ವಾಹನವೆಂದು ತಿಳಿಯಲಾಗಿದೆ. ಜನಪದರಲ್ಲಿ ಕೋಣವು ದುರ್ಗೆ, ಮಾರಿ ದೇವತೆಗಳ ಗಂಡನೆಂಬ ಭಾವನೆಯಿದೆ. ಆ ದೇವತೆಗಳ ಹಬ್ಬದಲ್ಲಿ ಜೀವಂತ ಕೋಣವನ್ನು ಬಲಿಗೊಡುವದು ಬೆಳೆದು ಬಂದಿದೆ. ಇದು ರುದ್ರನ ತೊಡೆಯಿಂದ ಹುಟ್ಟಿದ ಪುಂಢರೀಕ ಎಂಬ ಕಪ್ಪು ಬಣ್ಣದ ಕೋಣವು ಭಯಂಕರ ಪ್ರಾಣಿಯೆಂದು ತಿಳಿಯಲಾಗಿದೆ. ಉತ್ತರ ಕರ್ನಾಟಕದ ಅನೇಕ ಗ್ರಾಮಗಳಲ್ಲಿರುವ ದೇವತಾ ಶಿಲ್ಪಗಳೆದುರು ಕೋಣ ವಾಹನದ ಶಿಲ್ಪವಿದ್ದೇ ಇರುತ್ತದೆ.

**ಊ. ನಾಯಿ ವಾಹನ ಶಿಲ್ಪಗಳು :** ಇದೂ ಕೂಡ ಮರದಲ್ಲಿ ಮಾಡಿದ್ದಾಗಿರುತ್ತದೆ. ಕಪ್ಪು, ಬಿಳಿ ಬಣ್ಣದಿಂದ ಅಲಂಕೃತವಾಗಿರುತ್ತದೆ. ದತ್ತಾತ್ರೇಯ ಮತ್ತು ಮಲ್ಲಯ್ಯರಿಗೆ ನಾಯಿ ವಾಹನವಾಗಿದೆ. ನಾಯಿಯನ್ನು ಜನಪದರು ನಾರಾಯಣನೆಂದು[೧೨೮] ಕರೆಯುತ್ತಾರಂತೆ. ಮೈಲಾರಲಿಂಗನ ಸಂಪ್ರದಾಯದಲ್ಲಿ ನಾಯಿಗೊರವ ದೀಕ್ಷೆ ಆಚರಣೆಯಲ್ಲಿದೆ. ಮೈಲಾರಲಿಂಗನಿಗೆ ನಾಯಿ ಸಹಾಯ

---

೧೨೭. ವಿವರಗಳಿಗೆ ನೋಡಿ : ಕರೀಗೌಡ ಬೀಚನಹಳ್ಳಿ (ಸಂ) : ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವ ಕೋಶ - ೨, ಪುಟ - ೨೪೨

೧೨೮. ಕರೀಗೌಡ ಬೀಚನಹಳ್ಳಿ (ಸಂ) : ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವ ಕೋಶ - ೨, ಪುಟ - ೨೯೨



ನಂದಿಯ ಶಿಲ್ಪ ( ಕಿನ್ನಾಳ )



ಹುಲಿ ವಾಹನ ಶಿಲ್ಪ (ಕ. ವಿ. ಹಂಪಿ)

ಮಾಡಿತ್ತೆಂದು ಐತಿಹ್ಯವಿದೆ. ಆಗಿನಿಂದ ಮೈಲಾರಲಿಂಗನ ಜೊತೆಗೆ ನಾಯಿಗೂ ಪೂಜೆ ಸಲ್ಲುತ್ತ ಬಂದಿದೆಯಂತೆ.

**ಎ. ಟಗರು ವಾಹನ ಶಿಲ್ಪಗಳು :** ಟಗರು ವಾಹನ ಶಿಲ್ಪವೂ ಮರದ ಮಾಧ್ಯಮದ್ದಾಗಿರುತ್ತದೆ. ಕಪ್ಪು, ಕಂದು ಬಣ್ಣದ್ದಾಗಿರುತ್ತದೆ. ಇದು ಅಗ್ನಿಯ ವಾಹನವಂತೆ. ಟಗರಿನ ಯಥಾರೂಪದ ಶಿಲ್ಪ ಇದಾಗಿರುತ್ತದೆ.

**II.೨ ಪಕ್ಷಿ ವಾಹನ ಶಿಲ್ಪಗಳು :** ಪ್ರಾಣಿಗಳಂತೆ ಪಕ್ಷಿ ಸಂಕುಲಗಳಲ್ಲಿಯೂ ಕೆಲವು ದೇವರ ವಾಹನಗಳೆಂದು ಪುರಾಣ ಕಾಲದಿಂದಲೂ ಮಾನ್ಯತೆ ಪಡೆದಿವೆ. ಮರದ ಮಾಧ್ಯಮದಲ್ಲಿ ಸಿಗುವ ಅಂಥ ಕೆಲವು ಶಿಲ್ಪಗಳನ್ನು ಇಲ್ಲಿ ನೋಡಬಹುದು.

**ಅ. ನವಿಲು ವಾಹನ ಶಿಲ್ಪಗಳು :** ಪುರಾಣಗಳಲ್ಲಿ ಉಲ್ಲೇಖವಾದಂತೆ ಕುಮಾರಸ್ವಾಮಿ ಅಥವಾ ಷಣ್ಮುಖಸ್ವಾಮಿ ಹಾಗೂ ಸರಸ್ವತಿಯರ ವಾಹನ ನವಿಲು ಆಗಿದೆ. ನವಿಲು ಶಿಲ್ಪ ಮರದ ಮಾಧ್ಯಮದಲ್ಲೂ ರಚನೆಯಾದದ್ದು ಕಂಡು ಬರುತ್ತದೆ. ಕಟ್ಟಿಗೆಯಲ್ಲಿ ರಚಿಸಲಾದ ನವಿಲು ವಾಹನ ಶಿಲ್ಪಗಳಿಗೆ ನಿಜ ನವಿಲಿನ ಗರಿಗಳನ್ನೇ ಅಂಟಿಸಿರುತ್ತಾರೆ.

**ಆ. ಕಾಗೆ ವಾಹನ ಶಿಲ್ಪಗಳು :** ಶನಿ ದೇವರ ವಾಹನ ಕಾಗೆ. ಶನಿಯನ್ನು ಕಾಕವಾಹನವೆಂತಲೂ ಕರೆಯುವರು. ಇದೂ ಕಟ್ಟಿಗೆಯದೇ ಆಗಿರುತ್ತದೆ. ಈ ಕಾಗೆ ವಾಹನ ಶಿಲ್ಪವು ಶನಿ ದೇವತಾ ಶಿಲ್ಪದ ಎದುರಿಗೆ ಹಾರುವ ಭಂಗಿಯಲ್ಲಿರುತ್ತದೆ.

**ಇ. ಹಂಸ ವಾಹನ ಶಿಲ್ಪಗಳು :** ಹಂಸ ಬ್ರಹ್ಮನ ವಾಹನವಂತೆ. ಮರದ ಮಾಧ್ಯಮದಲ್ಲೂ ಇವು ರಚನೆಗೊಂಡಿರುತ್ತವೆ. ಇವುಗಳಿಗೆ ಬಿಳಿಯ ಬಣ್ಣ ಬಳೆಯಲಾಗಿರುತ್ತದೆ. ಅನೇಕ ದೇವಾಲಯಗಳಲ್ಲಿ ಇವು ಕಂಡು ಬರುತ್ತವೆ.

**ಈ. ಗರುಡ ವಾಹನ ಶಿಲ್ಪಗಳು :** ಮರದ ಕೆತ್ತನೆಯ ಕೆಲಸದಲ್ಲಿ, ದೇವಾಲಯದ ದ್ವಾರಬಂಧಗಳಲ್ಲಿ, ದೇವಾಲಯಗಳ ಹೊರ ಹಾಗೂ ಒಳ ಭಿತ್ತಿಯ ಉಬ್ಬುಶಿಲ್ಪಗಳಲ್ಲಿ, ಧ್ವಜ ಸ್ತಂಭ ಅಥವಾ ಗರುಡ ಗಂಬಗಳಲ್ಲಿ, ರಥಗಳ ಪಾರ್ಶ್ವ ಭಾಗಗಳಲ್ಲಿ ವಿವಿಧ ಭಂಗಿಯಲ್ಲಿ ಕಾಣಿಸುವ ಶಿಲ್ಪಗಳಲ್ಲಿ ಈ ಗರುಡ ಶಿಲ್ಪವೂ ಒಂದು.

ಪಕ್ಷಿ ರಾಜನಾದ ಈ ಗರುಡವನ್ನು ಗಿಡುಗವೆಂದೂ ಕರೆಯುವರು. ಪುರಾಣ ಕಾಲದಿಂದಲೂ ಗರುಡಕ್ಕೆ ವಿಶೇಷ ಮಹತ್ವವಿದೆ. ಸಾಮಾನ್ಯವಾಗಿ ಗಿಡುಗ ಎಂದು ಕರೆಯಲ್ಪಡುವ ಹಕ್ಕಿಯೇ ಗರುಡನಾಗಿದ್ದರೂ ಪರಮ ಭಕ್ತಿ, ಅದ್ಭುತ ಶಕ್ತಿಯ ಸಂಕೇತ. ಚುರುಕು ಬುದ್ಧಿಯ ದ್ಯೋತಕ. ಅನ್ನ ಹಾಕಿದ ದಣಿಗೆ ತನ್ನನ್ನೇ ಬಲಿಕೊಟ್ಟುಕೊಂಡ ಗರುಡ ಬಲಿದಾನಕ್ಕೆ ಇನ್ನೊಂದು ಹೆಸರೆಂದು ಹೇಳಬಹುದು.

ಗರುಡನಾಗಿದ್ದರೂ ಪರಮ ಭಕ್ತಿ, ಅದ್ಭುತ ಶಕ್ತಿಯ ಸಂಕೇತ. ಚುರುಕು ಬುದ್ಧಿಯ ದ್ಯೋತಕ. ಅನ್ನ ಹಾಕಿದ ದಣಿಗೆ ತನ್ನನ್ನೇ ಬಲಿಕೊಟ್ಟುಕೊಂಡ ಗರುಡ ಬಲಿದಾನಕ್ಕೆ ಇನ್ನೊಂದು ಹೆಸರೆಂದು ಹೇಳಬಹುದು. ಅದಕ್ಕೆಂದೇ ಗರುಡ ಧ್ವಜ, ಗರುಡ ರಾಗ, ಗರುಡಗಂಬ, ಗರುಡ ಮಣಿ, ಗರುಡ ಹಚ್ಚೆ, ಗರುಡಪಚ್ಚೆ, ಗರುಡ ಮುದ್ರೆ, ಗರುಡ ರೇಖೆ ಹೀಗೆ ಗರುಡ ಶಬ್ಧದೊಂದಿಗೆ ಹೆಣೆದುಕೊಂಡು ಬರುವ ವಿಶೇಷ ಪದಗಳು ಗರುಡನ ಮಾಹಿತಿಗಳನ್ನು ತಿಳಿಸುತ್ತವೆ. ಉತ್ತರ ಕರ್ನಾಟಕದ ಅನೇಕ ದೇವಾಲಯಗಳಲ್ಲಿ ಮರದ ಮಾಧ್ಯಮದಲ್ಲಿ ಗರುಡನ ಶಿಲ್ಪಗಳು ಕಂಡುಬರುತ್ತವೆ. ಬಿದನೂರಿನ ಗುಡ್ಡೆ ವೆಂಕಟರಮಣನ ದೇವಾಲಯದ ದ್ವಾರಭಾಗದಲ್ಲಿರುವ ಗರುಡಶಿಲ್ಪ, ಕೆಳದಿಯ ವಸ್ತುಸಂಗ್ರಹಲಾಯದಲ್ಲಿರುವ ಗರುಡ ಶಿಲ್ಪ, ಜಾಲಹಳ್ಳಿಯ[೧೨೯] ರಂಗನಾಥ ಸ್ವಾಮಿಯ ದೇವಾಲಯದಲ್ಲಿರುವ ಗರುಡ ಶಿಲ್ಪಗಳು ಮರದ ಮಾಧ್ಯಮದಲ್ಲಿವೆ. ಗರುಡ ವಿಷ್ಣುವಿನ ವಾಹನವೂ ಆಗಿದೆ. ಅರ್ಧ ಮಾನವ , ಅರ್ಧ ಪಕ್ಷಿ ರೀತಿಯಲ್ಲೂ ರಚನೆಯಾಗಿರುತ್ತದೆ.

ಮರದ ಮಾಧ್ಯಮದ ಧರ್ಮಮೂಲ ಜನಪದ ಶಿಲ್ಪಗಳಲ್ಲಿ ಪುರುಷ ದೇವತಾ ಶಿಲ್ಪಗಳು ಹಾಗೂ ಸ್ತ್ರೀ ದೇವತಾ ಶಿಲ್ಪಗಳು ಪ್ರಮುಖವಾಗಿರುವಂತೆ, ದೇವರ ವಾಹನ ಶಿಲ್ಪಗಳೂ ಪ್ರಮುಖವಾಗಿವೆ. ನಂದಿ, ಕುದುರೆ, ಹುಲಿ, ನಾಯಿ, ಟಗರು ಮುಂತಾದ ಪ್ರಾಣಿ ವಾಹನ ಶಿಲ್ಪಗಳು, ನವಿಲು, ಕಾಗೆ, ಹಂಸ, ಗರುಡ ಮುಂತಾದ ಪಕ್ಷಿ ವಾಹನ ಶಿಲ್ಪಗಳು ಕುತೂಹಲದಿಂದ ಕೂಡಿದವುಗಳಾಗಿವೆ. ಜನಪದರು ಧೈವೀ ಶಕ್ತಿಗಳಿಗೆ ರೂಪ ನೀಡಿದ್ದು, ಅವುಗಳಿಗೆ ವಿವಿಧ ಗುಣಗಳನ್ನು ಆರೋಪಿಸಿದ್ದು ಹಾಗೂ ದೇವರು-ದೇವತೆಗಳಿಗೆ ಒಂದೊಂದು ಪ್ರಾಣಿಯನ್ನೋ ಇಲ್ಲವೆ ಪಕ್ಷಿಯನ್ನೋ ವಾಹನವಾಗಿ ನಿರ್ಮಿಸಿದ್ದು ಎಲ್ಲವೂ ಅವರ ಅದ್ಭುತ ಕಲ್ಪನಾಶಕ್ತಿಗೆ ಸಾಕ್ಷಿಯಾಗಿವೆ.

## III. ಮರದ ಮಾಧ್ಯಮದ ವೃತ್ತಿಮೂಲ ಜನಪದ ಶಿಲ್ಪಕಲೆ

ಜನಪದರಲ್ಲಿ ಹಲವು ಜನವರ್ಗ ಹೊಟ್ಟೆಪಾಡಿನ ಬದುಕಿಗಾಗಿ ಹಲವು ಬಗೆಯ ವೃತ್ತಿಗಳನ್ನು ಅವಲಂಭಿಸಿದ್ದಾರೆ. ಅಂಥವುಗಳಲ್ಲಿ ಮರದ ಮಾಧ್ಯಮದಲ್ಲಿ ಹಲವು ರೀತಿಯ ಪ್ರಾಣಿ, ಪಕ್ಷಿ, ಸ್ತ್ರೀ, ಪುರುಷದೇವತಾ ಶಿಲ್ಪಗಳು ಇತ್ಯಾದಿಗಳನ್ನು ರಚಿಸುವ ವೃತ್ತಿಕಾರ ಶಿಲ್ಪಿಗಳೂ ಇದ್ದಾರೆ. ಇವರು ವಂಶ ಪಾರಂಪರ್ಯವಾಗಿ ತಮ್ಮ ಕಲಾ ವೃತ್ತಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಇಂಥವರು ರಚಿಸುವ ದೇವತಾಶಿಲ್ಪಗಳನ್ನುಹೊತ್ತು ಊರೂರು ತಿರುಗಿ ಭಿಕ್ಷೆ ಬೇಡಿ ಹೊಟ್ಟೆ ತುಂಬಿಸಿಕೊಳ್ಳುವವರು ಉತ್ತರ ಕರ್ನಾಟಕದ ಅನೇಕ ಕಡೆಗಳಲ್ಲಿ ಕಂಡುಬರುತ್ತಾರೆ. ಈ ಬಗೆಯ ಶಿಲ್ಪಗಳಲ್ಲಿ ಕೆಲವು ಮುಖವಾಡ ಶಿಲ್ಪಗಳೂ ಇರುತ್ತವೆ. ಇವೆಲ್ಲವನ್ನು ೧. ಹೊತ್ತು ತಿರುಗುವವರಲ್ಲಿನ ದೇವತಾ ಶಿಲ್ಪಗಳು ಹಾಗೂ ಮುಖವಾಡ ಶಿಲ್ಪಗಳು ೨. ಕಲೆಯನ್ನೇ ವೃತ್ತಿಯನ್ನಾಗಿಸಿಕೊಂಡು ರಚಿಸುವವರ ಶಿಲ್ಪಗಳು, ಹೀಗೆ ಎರಡು ಬಗೆಯಲ್ಲಿ ವಿಂಗಡಿಸಬಹುದು.

---

೧೨೯. ಜಾಲಹಳ್ಳಿ : ತಾ. ದೇವದುರ್ಗ, ಜಿ. ರಾಯಚೂರ

**೧. ಹೊತ್ತು ತಿರುಗುವವರಲ್ಲಿನ ದೇವತಾ ಶಿಲ್ಪಗಳು :** ಉತ್ತರ ಕರ್ನಾಟಕದಲ್ಲಿ ಹೊಟ್ಟೆಪಾಡಿನ ಉಪಜೀವನಕ್ಕಾಗಿ ಕೆಲವು ಸಮುದಾಯದ ಜನ ದೇವತಾ ಶಿಲ್ಪಗಳನ್ನು ತಲೆಯ ಮೇಲೆ ಹೊತ್ತು ಊರಿಂದ ಊರಿಗೆ ಹೋಗಿ ಶಿಲ್ಪಗಳನ್ನಿಟ್ಟು ಹಲವಾರು ನೃತ್ಯ-ಹಾಡು ಇತ್ಯಾದಿಗಳನ್ನುಪ್ರದರ್ಶಿಸಿ ಭಿಕ್ಷೆ ಸ್ವೀಕರಿಸುತ್ತಾರೆ. ಇಂಥಲ್ಲೆಲ್ಲ ಇವರು ಹೊತ್ತೊಯ್ದು ಪ್ರದರ್ಶಿಸುವ ಶಿಲ್ಪವೇ ಪ್ರಮುಖ ಆಕರ್ಷಣೆಯ ಕೇಂದ್ರವಾಗಿರುತ್ತದೆ. ಅಂಥ ಶಿಲ್ಪಗಳಲ್ಲಿ ದುರಗಮ್ಮನ ಶಿಲ್ಪಗಳು, ಮರಗಮ್ಮನಂತಹ ಶಿಲ್ಪಗಳು ಮುಖ್ಯವಾಗಿರುತ್ತವೆ.

**೧.೧ ದುರಗಮ್ಮನ ಶಿಲ್ಪಗಳು :** ದುರಗಮ್ಮ ಶಿಲ್ಪ ಕಟ್ಟಿಗೆ ಮಾಧ್ಯಮದಲ್ಲಿ ರಚಿಸಲ್ಪಟ್ಟಿರುತ್ತದೆ. ಆದರೆ ಜನಪದರಿಗೆ ಮಾಧ್ಯಮಕ್ಕಿಂತ ಈ ಶಿಲ್ಪ ಒಬ್ಬ ದೇವತೆಯದು ಎಂಬುದಕ್ಕಾಗಿ ಆಕರ್ಷಿಸಲ್ಪಡುವಂಥದಾಗಿರುತ್ತದೆ. ದ್ಯಾಮವ್ವ, ಪಾಲಕಮ್ಮ, ಎಲ್ಲಮ್ಮ, ಮರಗಮ್ಮ, ಕಾಳಮ್ಮ, ಚೌಡಮ್ಮ ಹೀಗೆ ಒಟ್ಟು ಏಳು ಸ್ತ್ರೀ ದೇವತೆಗಳೆಲ್ಲ ಅಕ್ಕತಂಗಿಯರಾಗಿದ್ದು ಅವರಲ್ಲಿ ದುರಗಮ್ಮ ಒಬ್ಬಳು ಎಂದು ಹೇಳಲಾಗುತ್ತದೆ. ಮೊದ ಮೊದಲು ಕೋಟೆ ರಕ್ಷಕಳಾಗಿದ್ದ ದುರಗಮ್ಮ ನಂತರ ಯುದ್ಧ ದೇವತೆಯಾದಳಂತೆ. ರಾಜರು ಯುದ್ಧಕ್ಕೆ ಹೊರಡುವಾಗ ತಮಗೆ ಯುದ್ಧದಲ್ಲಿ ಜಯ ಸಿಗಲಿ ಎಂದು ಈ ದೇವತೆಗೆ ಪೂಜಿಸುತ್ತಿದ್ದರಂತೆ. ಹೀಗಾಗಿ ಈಕೆ ಕೋಟೆ ದೇವತೆಯಾಗುವದರ ಜೊತೆಗೆ ಯುದ್ಧ ದೇವತೆಯೂ ಆದಳು.[೧೩೦] ಕರ್ನಾಟಕದೆಲ್ಲೆಡೆ ದುರಗಮ್ಮಳ ದೇವತಾ ಶಿಲ್ಪಗಳು ಕಂಡು ಬರುತ್ತವೆ. ದುರಗಮ್ಮ ಈಚೆಗೆ ಶಿಷ್ಟ ದೇವತೆಯಾಗಿ ಉತ್ತರ ಕರ್ನಾಟಕದ ಹಲವೆಡೆ ಪೂಜಿಸಲ್ಪಡುತ್ತಿದ್ದಾಳೆ. ಅದರೊಂದಿಗೆ ಕೆಲವು ಜನರು ಇದೇ ದೇವತೆಯನ್ನು ತಲೆ ಮೇಲೆ ಹೊತ್ತ ತಿರುಗುತ್ತಾರೆ. ಅಂಥವರಲ್ಲಿ ದುರುಗಮುರಗಿಯವರಲ್ಲಿನ ಶಿಲ್ಪಗಳೂ ಮುಖ್ಯವಾಗುತ್ತವೆ. ಇವು ಮಾತ್ರ ಅಪ್ಪಟ ಜನಪದ ಶಿಲ್ಪಗಳಾಗಿದ್ದು, ಪ್ರತಿಷ್ಠಾಪಿತ ದುರಗಮ್ಮ ದೇವತೆಗಳ ಪರ್ಯಾಯ ರೂಪಗಳಾಗಿವೆ ಎಂದರೆ ತಪ್ಪಲ್ಲ.

**ದುರುಗಮುರಗಿಯವರು :** ದುರಗಮ್ಮ ಒಂದು ಊರಾಡುವ ದೇವತೆ. ಈ ದೇವತೆಯ ಶಿಲ್ಪವನ್ನು ತಲೆಯ ಮೇಲೆ ಹೊತ್ತು ಊರಾಡುತ್ತ, ಭಿಕ್ಷೆ ಎತ್ತುವ ಒಂದು ಬುಡಕಟ್ಟು ಜನಾಂಗದವರು ಈ ಕಲೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಗೊಂಡ, ಬಿಲ್ಲ ಜಾತಿಯವರಾದ ಇವರು ಉತ್ತರ ಭಾರತದಿಂದ ದಕ್ಷಿಣಕ್ಕೆ ಬಂದು ದ್ರಾವಿಡ ಗುಂಪಿಗೆ ಸೇರಿದವರೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.[೧೩೧] ಕರ್ನಾಟಕದ ಗುಲಬರ್ಗಾ, ಬೀದರ, ರಾಯಚೂರು, ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಹೆಚ್ಚಾಗಿ ವಾಸವಾಗಿರುವ ಇವರು ಇನ್ನುಳಿದ ಜಿಲ್ಲೆಗಳಲ್ಲೂ ಸಾಮಾನ್ಯವಾಗಿ ಕಂಡು ಬರುತ್ತಾರೆ. ಇವರನ್ನು ಉತ್ತರ ಕರ್ನಾಟಕದಲ್ಲಿ ದುರುಗಮುರಗಿಯವರೆಂದೂ, ಮರಗಮ್ಮನಾಡಿಸುವವರೆಂದೂ ಕರೆಯುತ್ತಾರೆ. ದಕ್ಷಿಣ ಕರ್ನಾಟಕದಲ್ಲಿ ಉರು ಮಾರಿಯಮ್ಮ ಅಥವಾ ಕೊಲ್ಲಾಪುರದಮ್ಮ ಎಂದೂ ಕರೆಯುತ್ತಾರೆ.[೧೩೨] ಇವರು

---

೧೩೦. ಡಾ. ಚೆನ್ನಣ್ಣ ವಾಲೀಕಾರ : ಹೈದರಾಬಾದ್ ಕರ್ನಾಟಕದ ಗ್ರಾಮ ದೇವತೆಗಳ ಜಾನಪದೀಯ ಅಧ್ಯಯನ, ಪುಟ -೧೪೦

೧೩೧. ಕರೀಗೌಡ ಬೀಚನಹಳ್ಳಿ (ಸಂ) : ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವ ಕೋಶ - ೨, ಪುಟ - ೮೮

೧೩೨. ಹಿ. ಚಿ. ಬೋರಲಿಂಗಯ್ಯ (ಸಂ) : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ - ೨೭



ದುರಗಮ್ಮನ ಶಿಲ್ಪ ( ಕ. ವಿ. ವಿ. ಹಂಪಿ ಸಂಗ್ರಹ )



ದುರಗಮ್ಮನ ಶಿಲ್ಪ ( ದೇವರನಾವದಗಿ )




ದುರಗಮ್ಮನ ಶಿಲ್ಪ ( ಕ. ವಿ.ವಿ. ಹಂಪಿ ಸಂಗ್ರಹ )



ಪೆಟ್ಟಿಗೆ ದುರಗಮ್ಮ ಮತ್ತು ಪೋತುರಾಜನ ಮುಖವಾಡ ಶಿಲ್ಪಗಳು ( ಕಲಘಟಗಿ )



ಪೋತುರಾಜನ ಮುಖವಾಡದ ಶಿಲ್ಪ (ಸುರೇಬಾನ)



ದುರಗಮ್ಮನ ಶಿಲ್ಪ (ರಾಮದುರ್ಗ)



ದುರಗಮ್ಮನ ಶಿಲ್ಪಗಳು ( ಕಲಘಟಗಿ )

ದುರಗಮ್ಮ ಶಿಲ್ಪವನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಹೊತ್ತುಕೊಂಡು ಊರಾಡುತ್ತಾರೆ. ವಾದ್ಯ ಬಾರಿಸುತ್ತ ವಾದ್ಯದ ಬಡಿತಕ್ಕೆ ತಕ್ಕಂತೆ ಪುರುಷನೊಬ್ಬ ಪೋತುರಾಜನ ಮುಖವಾಡ ಶಿಲ್ಪವೊಂದನ್ನು ಧರಿಸಿ ಪ್ರದರ್ಶಿಸುತ್ತ ಜನರಲ್ಲಿ ಭಯ-ಭಕ್ತಿ ಹುಟ್ಟಿಸಿ ಭಿಕ್ಷೆ ಪಡೆಯುತ್ತಾರೆ. ಇವರಲ್ಲಿ ಪೆಟ್ಟಿಗೆ ದುರಗಮ್ಮ ಮತ್ತು ಬುಟ್ಟಿಯ ದುರಗಮ್ಮ ಎಂದು ಎರಡು ವಿಧ ಮಾಡಬಹುದು. ದುರಗಮುರಗಿಯವರು ದುರಗಮ್ಮ ಶಿಲ್ಪವನ್ನು ಪೆಟ್ಟಿಗೆಯಲ್ಲಿಟ್ಟು ಆಡುವವರಾಗಿದ್ದರೆ ಅದು ಪೆಟ್ಟಿಗೆ ದುರಗಮ್ಮ. ಬುಟ್ಟಿಯಲ್ಲಿಟ್ಟುಕೊಂಡು ಆಡುವವರಾಗಿದ್ದರೆ ಅದು ಬುಟ್ಟಿಯ ದುರಗಮ್ಮ.

**ಪ್ರದರ್ಶನ ವಿಧಾನ :** ದುರಗಮ್ಮ ಶಿಲ್ಪವಿರುವ ಬುಟ್ಟಿ ಅಥವಾ ಪೆಟ್ಟಿಗೆಯನ್ನು ಊರಿನ ಒಂದು ಬೀದಿಯ ವಿಶಾಲ ಸ್ಥಳದಲ್ಲಿ ಇಟ್ಟು ಗಂಟೆ ಬಾರಿಸಲಾಗುತ್ತದೆ. ಹೆಂಗಸೊಬ್ಬಳು ಉರುಮೆ ಅಥವಾ ಡೋಲಕ್ಕ (ವಾದ್ಯ) ಭಾರಿಸುತ್ತ ದುರಗಮ್ಮನ ಸ್ತುತಿ ಮಾಡುತ್ತಾಳೆ. ಪುರುಷನೊಬ್ಬ ಛಾವಟಿಯಿಂದ ತನ್ನ ಬರಿ ಮೈಗೆ ಹೊಡೆದುಕೊಳ್ಳುತ್ತ ದೇವತೆಯ ಸ್ತುತಿ ಮಾಡುತ್ತಾನೆ. ಇದರೊಂದಿಗೆ ಛಾವಟಿಯನ್ನು ಎರಡೂ ಕೈಗಳಿಂದ ಹಿಂಡುತ್ತ ನರ್ತಿಸುತ್ತ ಮಧ್ಯೆ ಮಧ್ಯೆ ಆವೇಶ ಬಂದವನಂತೆ ಛಾವಟಿಯಿಂದ ಮೈಗೆ ಹೊಡೆದುಕೊಳ್ಳುತ್ತಾನೆ. ನಂತರ ಎರಡನೇ ಘಟ್ಟದಲ್ಲಿ ಮುಖಕ್ಕೆ ಪೋತುರಾಜನ ಮುಖವಾಡ ಶಿಲ್ಪವನ್ನು ಧರಿಸಿಕೊಂಡು ಡೋಲಕದ ತಾಳಕ್ಕೆ ತಕ್ಕಂತೆ ಕುಣಿಯುತ್ತಾನೆ. ಈ ದೃಶ್ಯ ಹೆಂಗಸರಿಗೆ, ಮಕ್ಕಳಿಗೆ ನೋಡಲು ಭಯಾನಕವೂ ಆಗಿರುತ್ತದೆ. ಉತ್ತರ ಕರ್ನಾಟಕದಲ್ಲಿ ಚೌಡಿಯ ಮುಖವಾಡವನ್ನು, ದಕ್ಷಿಣ ಕರ್ನಾಟಕದಲ್ಲಿ ಸೋಮನ ಮುಖವಾಡವನ್ನು ಹಾಕಿಕೊಂಡು ಕುಣಿಯಲಾಗುತ್ತದೆ.[೧೩೩] ನಂತರ ಓಣಿಯ ಆಯಾ ಮನೆಯ ಹೆಂಗಸರು ಮೊರದಲ್ಲಿ ದವಸ ಧಾನ್ಯಗಳನ್ನುತಂದು ದೇವತೆಗೆ ಅರ್ಪಿಸುತ್ತಾರೆ. ಹೀಗೆ ಆಗಾಗ ಊರುಗಳಲ್ಲಿ ಬರುವ ಈ ದೇವತೆಗೆ ಕೆಲವರು ಹರಕೆ ಹೊರುವುದುಂಟು. ಹರಕೆಯಾಗಿ ಕಡಗ, ಗೆಜ್ಜೆ, ಚೈನು, ಡಾಬು, ತೋಳಬಂದಿ ಮುಂತಾದ ಒಡವೆಗಳನ್ನು ಅರ್ಪಿಸುವುದುಂಟು. ಪ್ರತಿ ಊರಿಗೆ ಹೋದಾಗಲೂ ಇಂತಿಂಥ ಒಡವೆಗಳನ್ನು ಇಂತಿಂಥ ಊರವರು ಕೊಟ್ಟರು ಎಂದು ಹೇಳಿ ಅವರಿಗೆ ಒದಗಿದ್ದ ಕಷ್ಟಗಳು ಪರಿಹಾರವಾದ ಬಗೆಯನ್ನು ಹೊಗಳುತ್ತ ಹರಕೆ ನೀಡುತ್ತಾರೆ - ದುರಗಮುರಗಿಯವರು.

ಇದು ಗೌಡ್ರ ಮಲ್ಲವ್ವ ಕೊಟ್ಟಾಳ ಬೆಳ್ಳಿ ಬಟ್ಟsಲ
ಇದು ಲಕ್ಕವ್ವ ಕೊಟ್ಟಾಳ ಬೆಳ್ಳಿ ಛತ್ರಿsಕಿ

ಹೀಗೆ ಮುಂದುವರೆಯುತ್ತದೆ ಹರಕೆ.

**ವೇಷ ಭೂಷಣ :** ದುರುಗಮುರಗಿಯ ಪುರುಷ ವೇಶಧಾರಿ ಪೋತುರಾಜನ ವೇಷ ವಿಚಿತ್ರವಾಗಿರುತ್ತದೆ. ಮುಖಕ್ಕೆ ಅರಿಷಿಣ, ಹಣೆಗೆ ಕುಂಕುಮ, ಕಾಡಿಗೆ ಕಣ್ಣು, ದಪ್ಪ ಮತ್ತು ಹುರಿಗಟ್ಟಿದ ಮೀಸೆ, ಎದೆ, ಕೈ, ರಟ್ಟೆಗಳಿಗೆ ಅರಿಷಿಣ ಲೇಪನ, ರಟ್ಟೆಯಲ್ಲಿ ಬೆಳ್ಳಿಯ ಕಡಗ, ನಡುವಿಗೆ ಹುರಿಹೊಡೆದ ಬಟ್ಟೆ, ಕಾಲಿಗೆ ಗೆಜ್ಜೆಯ ಪೊದೆ, ಬಣ್ಣದ ಪಂಜೆ ಅಥವಾ ಲಂಗ ತೊಟ್ಟು ಬರಿಮೈಯಲ್ಲಿ ಇರುವನು.

೧೩೩. ಹಿ. ಚಿ. ಬೋರಲಿಂಗಯ್ಯ (ಸಂ) : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ - ೨೮

ಸಾಮಾನ್ಯವಾದ ವೇಷದ ಹೆಂಗಸು ಹೆಚ್ಚಾಗಿ ಹೆಂಡತಿಯಿರುತ್ತಾಳೆ. ಈಕೆ ಡೋಲಕ ಬಾರಿಸುತ್ತಾ, ಸ್ತುತಿ ಮಾಡುತ್ತಿರುವಳು. ಈತನ ಜೊತೆಗಿದ್ದು ದುರಗಮ್ಮನ ಪೆಟ್ಟಿಗೆ ಹೊರುತ್ತಾಳೆ.

**ದುರಗಮ್ಮ ಶಿಲ್ಪದ ರಚನೆ :** ಮರದ ಮಾಧ್ಯಮದ ದುರಗಮ್ಮ ಶಿಲ್ಪಗಳು ಸಾಮಾನ್ಯವಾಗಿ ಒಂದು ಅಡಿಯಿಂದ ಮೂರು ಅಡಿಯವರೆಗೂ ಎತ್ತರವನ್ನು ಹೊಂದಿರುತ್ತವೆ. ಬೇವು, ಕಳ್ಳಿ, ಹೆಬ್ಬೇವು, ಮಾವು, ಸಾಗವಾನಿ ಹಾಗೂ ಅತ್ತಿ ಮುಂತಾದ ಮರವನ್ನು ಇವುಗಳ ರಚನೆಗೆ ಬಳಸಲಾಗುತ್ತದೆ.

ಮೊದಲಿಗೆ ಮಾಡಬೇಕಾದ ಶಿಲ್ಪದ ಕಚ್ಚಾ ರೂಪದ ಕೆತ್ತನೆ ಮಾಡಿ ನಂತರ ಅದರ ಮೇಲೆ ಅರಗನ್ನು ಲೇಪಿಸಿ ಅನಂತರ ಅದರ ಮೇಲೆ ಕಿಟ್ಟವನ್ನು[೧೩೪] ಪದರ ಪದರವಾಗಿ ಮೆತ್ತಿ, ತಿದ್ದಿ ತೀಡಿ, ಶಿಲ್ಪವನ್ನು ಪೂರ್ಣಗೊಳಿಸುತ್ತಾರೆ. ಅನಂತರ ವುಡ್ ಪ್ರೈಮರ್ ಬಳಿದು ಒಣಗಿದ ನಂತರ ವಿವಿಧ ಬಣ್ಣಗಳನ್ನು ಹಚ್ಚಿ ಶಿಲ್ಪವನ್ನು ಅಲಂಕಾರಗೊಳಿಸುತ್ತಾರೆ.[೧೩೫]

ಸಾಮಾನ್ಯವಾಗಿ ದುರಗಮ್ಮನ ಎಲ್ಲ ಶಿಲ್ಪಗಳಿಗೂ ಬಣ್ಣ ಬಳಿದು ಅಲಂಕರಿಸಲಾಗಿರುತ್ತದೆ. ಮತ್ತು ಎಲ್ಲ ಶಿಲ್ಪಗಳೂ ಕಂದು ಮಿಶ್ರಿತ ಕೆಂಪು ಬಣ್ಣವನ್ನು ಮುಖ ಮತ್ತು ಮೈ ಬಣ್ಣವಾಗಿ ಹೊಂದಿರುತ್ತವೆ. ಧಾರವಾಡ ಜಿಲ್ಲೆಯ ಕಲಘಟಗಿಯಲ್ಲಿ ತಯಾರಾದ ದುರಗಮ್ಮನ ಅನೇಕ ಶಿಲ್ಪಗಳು, ಧಾರವಾಡ, ಬೆಳಗಾವಿ, ಹೊನ್ನಾವರ, ಕುಮಟಾಗಳಲ್ಲಿ ನೋಡಲು ಸಿಗುತ್ತವೆ. ಎಲ್ಲ ದುರಗಮ್ಮನ ಶಿಲ್ಪಗಳು ಕುಳಿತ ಭಂಗಿಯಲ್ಲಿರುತ್ತವೆ. ಮತ್ತು ಎರಡು ಇಲ್ಲವೆ ನಾಲ್ಕು ಕೈಗಳನ್ನು ಹೊಂದಿರುತ್ತವೆ. ಬಳ್ಳಾರಿ ಜಿಲ್ಲೆಯ ಹಿರೇಮಲ್ಲನಕೇರಿಯಲ್ಲಿ ಎರಡು ಕೈಗಳನ್ನು ಮಾತ್ರ ಹೊಂದಿರುವ ದುರಗಮ್ಮನ ಶಿಲ್ಪವಿದ್ದು, ಒಂದು ಕೈಯಲ್ಲಿ ಖಡ್ಗ, ಮತ್ತೊಂದರಲ್ಲಿ ಬಟ್ಟಲು ಹಿಡಿದಿದ್ದು ಸಿಂಹದ ಮೇಲೆ ಕುಳಿತ ಭಂಗಿಯಲ್ಲಿದೆ.[೧೩೬]

ಕಲಘಟಗಿಯಲ್ಲಿ ತಯಾರಾಗುವ ದುರಗಮ್ಮನ ಕಿಟ್ಟದ ಶಿಲ್ಪಗಳು ನಾಲ್ಕು ಕೈಗಳನ್ನೇ ಹೊಂದಿದ್ದು ಒಂದು ಕೈಯಲ್ಲಿ ಖಡ್ಗ, ಒಂದು ಕೈಯಲ್ಲಿ ಬಟ್ಟಲು ಹೊಂದಿ ಕೈಗಳು ಮುಂಚಾಚಿರುವಂತಿವೆ. ಮತ್ತು ಕೈಗಳ ಎಡಬಲ ತೋಳುಗಳಿಗೆ ಹೊಂದಿ ಮುಗಿದ ಕೈಗಳ ನಿಂತ ಭಂಗಿಯ ಚಿಕ್ಕ ಚಿಕ್ಕ ಶಿಲ್ಪಗಳಿದ್ದು ಅವನ್ನು ಸಖಿಯರು ಎಂದು ಕರೆಯುತ್ತಾರೆ. ಈ ಶಿಲ್ಪಗಳನ್ನು ಸಾಮಾನ್ಯವಾಗಿ ಹಸಿರು ಬಣ್ಣದ ಕುಪ್ಪಸ ಹಾಗೂ ನೀಲಿ ಬಣ್ಣದ ಸೀರೆಯನ್ನು ತೊಟ್ಟುಕೊಂಡಂತೆ ಬಣ್ಣದಲ್ಲೇ ರಚಿಸಲಾಗಿರುತ್ತದೆ. ಕೊರಳಲ್ಲಿ ಬಂಗಾರದ ಆಭರಣಗಳಂತೆ ಬಣ್ಣದಿಂದ ಅಲಂಕೃತಗೊಳಿಸಲಾಗಿರುತ್ತದೆ. ದುರಗಮ್ಮ ಶಿಲ್ಪಗಳಿಗೆ ಹೊಂದಿ ಹಿಂಭಾಗದಲ್ಲಿ ಪ್ರಭಾವಳಿ ಇರುತ್ತದೆ. ಈ ಪ್ರಭಾವಳಿಗಳು ಬಣ್ಣದ ಹೂ, ನಕ್ಷೆಗಳಿಂದ ಅಲಂಕೃತವಾಗಿದ್ದು ಮುಂದಕ್ಕೆ ಎದ್ದು ಕಾಣುವಂತೆ ನಾಗರ ಶಿಲ್ಪಗಳನ್ನು ಉಬ್ಬುಶಿಲ್ಪದಂತೆ ರಚಿಸಲಾಗಿರುತ್ತದೆ. ಕೆಲವು

---

೧೩೪. ಕಿಟ್ಟ : ಹುಣಸೆ ಬೀಜ ನೆನೆಸಿ, ರುಬ್ಬಿ, ಕುದಿಸಿ ಅದರೊಂದಿಗೆ ಮರದ ಹೊಟ್ಟು, ಅಂಟು, ಗೋಣಿಚೀಲ ಸೇರಿಸಿ ತಯಾರಿಸಲಾಗುತ್ತದೆ

೧೩೫. ರಾಜಶೇಖರ ಚೆನ್ನಬಸಪ್ಪ ಬಡಿಗೇರ, ಕಲಘಟಗಿ

೧೩೬. ಡಾ. ಸಿ. ಮಹಾದೇವ : ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ಪುಟ - ೪೧

ಪ್ರಭಾವಳಿಯಲ್ಲಿ ಎರಡು ನಾಗರಗಳಿದ್ದರೆ, ಕೆಲವು ಪ್ರಭಾವಳಿಯಲ್ಲಿ ನಾಲ್ಕು ನಾಗರ ಶಿಲ್ಪಗಳೊಂದಿಗೆ ದುರಗಮ್ಮ ಶಿಲ್ಪದ ಎರಡೂ ತೋಳುಗಳಿಗೆ ಆನಿಸಿ ಮುಮ್ಮುಖವಾಗಿ ಹೆಡೆ ಬಿಚ್ಚಿದ ಎರಡು ನಾಗರ ಶಿಲ್ಪಗಳು ಹಾಗೂ ಶಿಲ್ಪದ ಸೊಂಟಕ್ಕೆ ಸುತ್ತಿಕೊಂಡು ಹೆಡೆ ಬಿಚ್ಚಿ ಮುಂದೆ ನೋಡುತ್ತಿರುವ ನಾಗರ ಶಿಲ್ಪವನ್ನು ಹೊಂದಿರುವಂತೆ ರಚಿಸಲಾಗಿವೆ. ಈ ಒಂದೇ ಶಿಲ್ಪದಲ್ಲಿ ಒಟ್ಟು ಏಳು ನಾಗರ ಶಿಲ್ಪಗಳನ್ನು ರಚಿಸಲಾಗಿದ್ದು, ಇವುಗಳಿಗೆ ಬಿಳಿ ಬಣ್ಣ ಬಳೆದು ಕೆಂಪು ಬಣ್ಣದಿಂದ ಚಾಚಿದ ನಾಲಿಗೆ ಹಾಗೂ ಕಪ್ಪು ಬಣ್ಣದಿಂದ ನಾಗರದ ಮೈಗೆ ಕಲೆಗಳನ್ನು ರಚಿಸಲಾಗಿದೆ. ಈ ಶಿಲ್ಪಗಳ ಕೈ ಮತ್ತು ತೋಳುಗಳಿಗೆ ಹಳದಿ ಬಣ್ಣದಿಂದ ಬಳೆ ಹಾಗೂ ತೋಳಬಂಧಿಯನ್ನು ರಚಿಸಲಾಗಿದೆ. ಈ ಎಲ್ಲ ಶಿಲ್ಪಗಳನ್ನು ಮರದ ಹಲಗೆಯಾಕಾರದಲ್ಲಿ ಸಾಧಾರಣ ಎತ್ತರದ ಪೀಠದ ಮೇಲೆ ಕುಳಿತ ಭಂಗಿಯಲ್ಲಿ ನಿರ್ಮಿಸಲಾಗಿದೆ. ಈ ಶಿಲ್ಪಗಳಿಗೆ ಅರಗಿನ ಬಣ್ಣ[೧೩೭]ವನ್ನು ಬಳೆಯಲಾಗುತ್ತದೆ.

ದುರಗಮ್ಮನ ಶಿಲ್ಪದ ರೂಪವು ಚೌಡಮ್ಮನ ಮುಖವಾಡ ಶಿಲ್ಪದ ರೂಪವನ್ನು ಬಹುಪಾಲು ಹೋಲುತ್ತದೆ. ಕೆಂಪು ಬಣ್ಣದ ಮುಖದಲ್ಲಿ ಅಗಲವಾದ ಕಣ್ಣುಗಳು, ಕಪ್ಪು ಗುಡ್ಡೆಗಳು, ಹಣೆಯ ಮೇಲೆ ಅಡ್ಡನಾಮ, ಕಿವಿ ಮತ್ತು ಮೂಗಿನಲ್ಲಿ ಆಭರಣಗಳಿದ್ದು, ದುರಗಮ್ಮನ ಬಾಯಲ್ಲಿ ಕೋರೆ ಹಲ್ಲುಗಳನ್ನು ರಚಿಸಲಾಗಿರುತ್ತದೆ. ಇಟಗಿಯಲ್ಲಿನ ತೇರಿನ ದುರಗಮ್ಮನ ಶಿಲ್ಪಗಳು ನೋಡಲು ಸಿಗುತ್ತವೆ. ಉದ್ದವಾದ ಕೋಲಿಗೆ ಅಳವಡಿಸಲಾದ ಈ ಶಿಲ್ಪಗಳು ಅರ್ಧ ದೇಹವನ್ನು ಮಾತ್ರ ಹೊಂದಿದ್ದು ಮಾರಮ್ಮನ ರಥೋತ್ಸವ ಸಂದರ್ಭದಲ್ಲಿ ತೇರಿಗೆ ಈ ಶಿಲ್ಪಗಳನ್ನು ಅಳವಡಿಸಲಾಗುತ್ತದೆ.[೧೩೮] ಇನ್ನು ಊರಿಗೆ ಯಾವುದಾದರೂ ತೊಂದರೆಯಾದರೆ ಗಡಿಯಾಚೆಗೆ ಬಿಟ್ಟು ಬರುವ ಗಡಿ ದುರಗಮ್ಮನ ಶಿಲ್ಪವನ್ನು ರಚಿಸುವದು ಕೆಲವೆಡೆ ರೂಢಿಯಲ್ಲಿ ಬಂದಿದೆ. ಈ ಶಿಲ್ಪವೂ ಮರದಲ್ಲಿದ್ದು ಆದರೆ ತೀರ ಸರಳ ಹಾಗೂ ಒರಟು ರಚನೆಯಾಗಿರುತ್ತದೆ. ಈ ಶಿಲ್ಪವನ್ನು ಅಂತಿಮವಾಗಿ ನದಿಯಲ್ಲಿ ವಿಸರ್ಜಿಸುತ್ತಾರೆ.[೧೩೯]

**ದುರಗಮುರಗಿ ಪೆಟ್ಟಿಗೆ ತಯಾರಿಕೆ :** ದುರಗಮ್ಮನ ಪೆಟ್ಟಿಗೆ ಅಥವಾ ದುರಗಮುರಗಿ ಪೆಟ್ಟಿಗೆಯು ಸುಮಾರು ಎರಡರಿಂದ ಮೂರು ಅಡಿ ಎತ್ತರವಾಗಿದ್ದು ಎರಡು ಅಡಿ ಮತ್ತು ಒಂದೂವರೆ ಅಡಿ ಅಗಲವಾಗಿರುತ್ತದೆ. ಈ ಪೆಟ್ಟಿಗೆಯನ್ನು ಮುಚ್ಚಲು ತೆಗೆಯಲು ಅನುಕೂಲವಾಗುವಂತೆ ಬಾಗಿಲದಂತೆ ಎರಡು ಹಲಗೆಗಳನ್ನು ಮಾಡಿರುತ್ತಾರೆ.[೧೪೦] ಈ ಪೆಟ್ಟಿಗೆಯನ್ನು ಸಾಮಾನ್ಯವಾಗಿ ಮಾವಿನ ಮರದಿಂದ ಮಾಡಿರುತ್ತಾರೆ. ಪೆಟ್ಟಿಗೆಯ ಕೆಳಗೆ ಸುಮಾರು ಅರ್ಧ ಅಡಿಯಷ್ಟು ಉದ್ದವಾದ ಕಾಲುಗಳನ್ನು

---

೧೩೭. ಅರಗಿನ ಬಣ್ಣ :ಇದು ದೇಶೀಯವಾಗಿ ತಯಾರಿಸಲಾಗುವ ಬಣ್ಣ, ಇದಕ್ಕೆ ಲಜಾವರ ಬಣ್ಣವೆಂದೂ ಹೇಳುತ್ತಾರೆ. ಸ್ಪಿರಿಟ್‌ನಲ್ಲಿ ಮೋಸಂಬರ್, ರಾಳ ಮತ್ತು ಗುಬ್ಬಿ ರಾಳ ಇವುಗಳನ್ನು ಸೇರಿಸಿ ತಯಾರಿಸುತ್ತಾರೆ

೧೩೮. ಡಾ.ಸಿ. ಮಹಾದೇವ : ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ಪುಟ - ೪೧

೧೩೯. ..... ಅದೇ .....

೧೪೦. ಮಾಹಿತಿ : ಮಲ್ಲೇಶಪ್ಪ ಗಂಗಪ್ಪ ಬಡಿಗೇರ, ಕಲಘಟಗಿ

ಮಾಡಿರುತ್ತಾರೆ. ಈ ಪೆಟ್ಟಿಗೆಯ ಒಳಗೆ ದುರಗಮ್ಮನ ಶಿಲ್ಪವನ್ನು ಕೂರಿಸಲಾಗಿರುತ್ತದೆ.

**ವರ್ಣ ಚಿತ್ರಗಳು :** ದುರಗಮ್ಮನ ಪೆಟ್ಟಿಗೆಯು ವರ್ಣಚಿತ್ರಗಳಿಂದ ಆಕರ್ಷಕವಾಗಿರುತ್ತದೆ. ಹೆಚ್ಚಾಗಿ ಕೆಂಪು, ಹಳದಿ ಎರಡು ಮೂಲ ಬಣ್ಣಗಳು ಪ್ರಧಾನವಾಗಿ ಎದ್ದು ಕಾಣುತ್ತವೆ. ಜೊತೆಗೆ ಹಸಿರು, ಬಿಳಿ, ದಟ್ಟ ಹಸಿರು, ಕೆಲವೊಮ್ಮೆ ಗುಲಾಬಿ ಬಣ್ಣವನ್ನು ಬಳೆಯಲಾಗಿರುತ್ತದೆ. ಸಾಮಾನ್ಯವಾಗಿ ಕೆಂಪು ಬಣ್ಣದ ಹಿನ್ನೆಲೆಯ ಮೇಲೆ ಹಳದಿ, ಬಿಳಿ, ಹಸಿರು ಬಣ್ಣಗಳಿಂದ ಚಿತ್ರಗಳು ಬರೆಯಲ್ಪಟ್ಟಿರುತ್ತವೆ. ಮಿಶ್ರ ಬಣ್ಣಗಳಿಗಿಂತ ನೇರ ಬಣ್ಣಗಳ ಬಳಕೆಯೇ ಹೆಚ್ಚಾಗಿ ಕಂಡುಬರುತ್ತದೆ. ಇದಕ್ಕೆ ಉದಾಹರಣೆಯಾಗಿ ಕಲಘಟಗಿಯಲ್ಲಿ[೧೪೧] ತಯಾರಾಗಿರುವ ಪೆಟ್ಟಿಗೆಗಳನ್ನು ನೋಡಬಹುದು. ಈ ಪೆಟ್ಟಿಗೆಗಳ ಮೇಲೆ ಜನರ ಅಭಿರುಚಿಗೆ ತಕ್ಕಂತೆ ಚಿತ್ರಗಳನ್ನು ಬಿಡಿಸಿರುತ್ತಾರೆ. ಬುದ್ಧ, ಬಸವ, ಶಿವ, ಪಾರ್ವತಿ, ರಾಮಾಯಣ, ಮಹಾಭಾರತ, ಗಣಪತಿ, ಲಕ್ಷ್ಮಿ-ಸರಸ್ವತಿ ಮುಂತಾದ ಪೌರಾಣಿಕ ಮತ್ತು ಐತಿಹಾಸಿಕ ಪಾತ್ರಗಳನ್ನು, ದೇವರುಗಳನ್ನು ಚಿತ್ರಿಸಲಾಗಿರುತ್ತದೆ. ಅಲ್ಲದೆ, ಮುಸ್ಲಿಂ ಧರ್ಮದವರಾಗಿದ್ದರೆ, ಅಂಥವರ ಅಭಿರುಚಿಗೆ ತಕ್ಕಂತೆ ಮೆಕ್ಕಾ-ಮದೀನಾ, ಮಸೀದಿಗಳನ್ನು ಚಿತ್ರಿಸಿರುತ್ತಾರೆ. ಈ ಚಿತ್ರಗಳೆಲ್ಲ ಒಣಗಿದ ನಂತರ ಹೊಳಪು ಬರುವದಕ್ಕೆಂದು ಒಣಗಿದ ಕೇದಗೆ ಎಲೆಯಿಂದ ತಿಕ್ಕಿ ತಣ್ಣೀರಲ್ಲಿ ತೊಳೆಯುತ್ತಾರೆ. ಕಲಘಟಗಿಯ ತೊಟ್ಟಿಲು ಹಾಗೂ ಶಿಲ್ಪಗಳ ತಯಾರಕರು ಬಣ್ಣ ಹಚ್ಚಲು ಉಪಯೋಗಿಸುವ ಕುಂಚಗಳನ್ನು ಅಳಿಲು, ಆಡಿನ ಕೂದಲಿನಿಂದ ತಯಾರಿಸಿಕೊಂಡಿರುತ್ತಾರೆ.

ಬೈಲಹೊಂಗಲದ[೧೪೨] ಅಣ್ಣಪ್ಪ ಚಿತ್ರಗಾರ ಅವರು ರಚಿಸಿದ ದುರಗಮ್ಮನ ಶಿಲ್ಪದ ಗುಡಿಯಾಕಾರದ ಪೆಟ್ಟಿಗೆಯ ಹಿಂಬದಿಯ ಫಲಕದಲ್ಲಿ, ದ್ಯಾಮವ್ವನ ಚಿತ್ರವನ್ನು ಬರೆಯಲಾಗಿದೆ. ದ್ಯಾಮವ್ವ ಎದುರಿಗೆ ಕೋಣವನ್ನು ಬಲಿ ಕೊಡುವ ಆಚರಣೆಯ ಸನ್ನಿವೇಶವೂ ವರ್ಣಚಿತ್ರಗಳಲ್ಲಿ ವ್ಯಕ್ತವಾಗಿದೆ. ರಾಮದುರ್ಗದ[೧೪೩] ಲಕ್ಷ್ಮಣ ವಾಲ್ಮೀಕಿ ಅವರ ಹತ್ತಿರ ಈ ದುರಗಮ್ಮನ ಶಿಲ್ಪ ಹಾಗೂ ಪೆಟ್ಟಿಗೆ ಇದೆ. ದುರಗಮ್ಮನ ವಾರಗಳಾದ ಮಂಗಳವಾರ ಮತ್ತು ಶುಕ್ರವಾರ ಲಕ್ಷ್ಮಣ ಮತ್ತು ಆತನ ಪತ್ನಿ ಲಕ್ಷ್ಮವ್ವ ಈ ಪೆಟ್ಟಿಗೆಯನ್ನು ಹೊತ್ತು, ಸುತ್ತಲಿನ ಊರುಗಳಲ್ಲಿ ಆಡಿ ಬರುತ್ತಾರೆ.

ಈ ಪೆಟ್ಟಿಗೆಗಳ ಮೇಲೆ ಚಿತ್ರಿತಗೊಂಡ ಚಿತ್ರಗಳ ವಸ್ತುಗಳು ರಾಮಾಯಣ, ಮಹಾಭಾರತ ಸನ್ನಿವೇಷಗಳೊಂದಿಗೆ ತೀರ ಸಾಮಾನ್ಯವಾದ ಸಾಮಾಜಿಕ ಒಳಿತು ಕೆಡುಕು ಅಥವಾ ಅವುಗಳ ಕುರಿತು ಸ್ವರ್ಗ, ನರಕದ ಕಲ್ಪನೆ ಕೊಡುವ ದೃಶ್ಯಗಳಿಂದ ಕೂಡಿರುತ್ತವೆ. ಆರತಿ ಮಾಡುವ ಸ್ತ್ರೀಯರು, ಯಮಲೋಕದ ಸನ್ನಿವೇಷ, ಇಸ್ಪೀಟ ಆಡುವವರು ಮುಂತಾದ ಚಿತ್ರಗಳಿರುತ್ತವೆ. ಬೂಲೋಕದಲ್ಲಿ ಮನುಷ್ಯನು ಮಾಡುವ ಪುಣ್ಯ-ಪಾಪಕರ್ಮಗಳ ಫಲವಾಗಿ ಸ್ವರ್ಗ ಮತ್ತು ನರಕಗಳಲ್ಲಿ ಅವರಿಗೆ ಸಿಗುವ ಪದವಿ ಇಲ್ಲವೆ ಶಿಕ್ಷೆ,

---

೧೪೧. ಕಲಘಟಗಿ : ತಾ. ಕಲಘಟಗಿ, ಜಿ. ಧಾರವಾಡ
೧೪೨. ಬೈಲಹೊಂಗಲ : ತಾ. ಬೈಲಹೊಂಗಲ, ಜಿ. ಬೆಳಗಾವಿ
೧೪೩. ರಾಮದುರ್ಗ : ತಾ. ರಾಮದುರ್ಗ, ಜಿ. ಬೆಳಗಾವಿ

ಇವುಗಳ ವಿವಿಧ ಸನ್ನಿವೇಷದ ಚಿತ್ರಗಳಿರುತ್ತವೆ. ಅಲ್ಲದೆ ದೇವರ ಚಿತ್ರಗಳು ಇಲ್ಲಿ ಚಿತ್ರಿಸಲ್ಪಟ್ಟಿರುತ್ತವೆ. ಕಲಘಟಗಿಯ ಈ ತರಹದ ಪೆಟ್ಟಿಗೆಗಳಲ್ಲಿ ಇಂಥ ಚಿತ್ರಗಳೊಂದಿಗೆ ಒಂಟೆ, ತೆಂಗಿನ ಮರ, ಶ್ರೀಮಂತನ ಚಿತ್ರ ಇತ್ಯಾದಿಗಳು ಚಿತ್ರಿತಗೊಂಡಿವೆ. ದುರಗಮುರಗಿ ಪೆಟ್ಟಿಗೆಯ ಸುತ್ತಲೂ ಇಂಥ ಚಿತ್ರಗಳು ರಚನೆಯಾಗಿರುತ್ತವೆ. ಆದರೆ ಪೆಟ್ಟಿಗೆಯ ಒಳಗೆ ಚಿತ್ರಗಳನ್ನು ರಚಿಸಿರುವದಿಲ್ಲ. ಕೇವಲ ಬಿಳಿಯ ಬಣ್ಣ ಮಾತ್ರ ಬಳೆಯಲಾಗಿರುತ್ತದೆ. ಹುಬ್ಬಳ್ಳಿಯ ಬಂಕಾಪೂರ ಚೌಕದಲ್ಲೂ ಈ ತರಹದ ವರ್ಣಮಯ ದುರಗಮ್ಮನ ಶಿಲ್ಪ ಹಾಗೂ ಪೆಟ್ಟಿಗೆಗಳನ್ನು ತಯಾರಿಸಿರುತ್ತಾರೆ.[೧೪೪] ಈ ಪೆಟ್ಟಿಗೆಗಳು ತಯಾರಾದ ನಾಲ್ಕಾರು ವರ್ಷಗಳ ನಂತರ ಪುನಃ ಬಣ್ಣವನ್ನು ಮಾಡಿಸುತ್ತಾರೆ. ಹಿಂದೆ ಅರಗಿನ ಬಣ್ಣ ಎಂದು ಹೇಳುವ ಒಂದು ಬಗೆಯ ಜಲ ವರ್ಣವನ್ನು ಬಳಸುತ್ತಿದ್ದವರು ಈಗ ಏಷಿಯನ್ ಪೇಂಟ್ ಬಳಸುತ್ತಲಿದ್ದಾರೆ.

**ಮುಖವಾಡ ಶಿಲ್ಪಗಳು :** ವೃತ್ತಿ ಮೂಲ ಜನಪದ ಶಿಲ್ಪಕಲೆಯಲ್ಲಿ ಮುಖವಾಡ ಶಿಲ್ಪಗಳಂತೆ, ಸಿದ್ಧಿಕಿ ಸಿದ್ಧಿ ವೇಷಗಾರರು ಪ್ರದರ್ಶನ ವೇಷಗಳಲ್ಲಿ ಬಳಸುವ ಮುಖವಾಡ ಶಿಲ್ಪಗಳೂ ವಿಶೇಷವಾಗಿರುತ್ತವೆ.

**ಸಿದ್ಧಿಕಿ ಸಿದ್ಧಿ ಮುಖವಾಡ ಶಿಲ್ಪಗಳು :** ಬೆಳಗಾವಿ ಜಿಲ್ಲೆಯಲ್ಲಿ ಜಾತಿಗಾರರೆಂಬ ಹೆಸರಿನ ಒಂದು ವೃತ್ತಿ ಪಂಗಡದವರು ವಿಡಂಬಕ ಸೋಗುಗಳನ್ನು ಹಾಕಿಕೊಂಡು ಪ್ರದರ್ಶಿಸುತ್ತಾರೆ. ಸಿದ್ಧಿಕಿ ಸಿದ್ಧಿ ಅಥವಾ ಸಿದ್ಧಿಕಿ ಬಕರಾ ಎಂಬುದು ಇವರ ಆಕರ್ಷಕ ಮತ್ತು ವಿಶಿಷ್ಟ ಸೋಗು. ಉತ್ತರ ಕನ್ನಡದ ಸಿದ್ಧಿ ಜನ ಇಲ್ಲವೆ ನಿಗ್ರೋಗಳನ್ನು ಹೋಲುವಂತೆ ಇವರು ಕಟ್ಟಿಗೆಯ ದಪ್ಪ ಮೂಗು, ತುಟಿಗಳನ್ನು ಹೊಂದಿರುವ ಮುಖವಾಡ ಶಿಲ್ಪವನ್ನು ಕಟ್ಟಿಕೊಂಡು, ಅರಿವೆ ಗಂಟಿನಿಂದ ಪುಷ್ಠ ದಪ್ಪ ಮಾಡಿಕೊಂಡು, ತಲೆಗೊಂದು ಟೋಪಿ ಅಥವಾ ಮುಂಡಾಸು ಹಾಕಿ ಸೋಗಿಗೆ ಸಿದ್ಧವಾಗುತ್ತಾರೆ. ನಂತರ ತೆಂಗಿನ ಪರಟೆಯೊಂದರಲ್ಲಿ ಹರಳು ಹಾಕಿ, ಅದಕ್ಕೆ ಅರಿವೆ ಸುತ್ತಿ ಹಿಡಿದು ತಾಳಬದ್ಧವಾಗಿ ಬಾರಿಸುತ್ತ ವಿಡಂಬಕವಾಗಿ ಪ್ರದರ್ಶಿಸುತ್ತ ಬರುತ್ತಾರೆ. ಬೆಳಗಾವಿ ಜಿಲ್ಲೆಯ ಮೂಡಲಗಿ, ಕುಡಚಿ ಮುಂತಾದ ಗ್ರಾಮಗಳಲ್ಲಿ ಇಂಥ ಜನರಿದ್ದಾರೆ. ಶೆಟ್ಟಿ ಸೋಗು, ಬಾಣಂತಿ ಸೋಗು, ಮುದಕಿ ಸೋಗು, ಇತರ ವಿಡಂಬಕ ಸೋಗುಗಳನ್ನು ಹಾಕಿ ಪ್ರದರ್ಶಿಸುತ್ತಾರೆ. ಸಾಮಾನ್ಯವಾಗಿ ಅಲೆಮಾರಿಗಳೇ ಆಗಿರುವ ಇವರು ಹೈದರಾಬಾದ ಕರ್ನಾಟಕದಲ್ಲೂ ಕಂಡುಬರುತ್ತಾರೆ. ಈ ಜಾತಿಗಾರರು ಮೂಲತಃ ಹಿಂದೂಗಳೇ ಆಗಿದ್ದು ಸಂದರ್ಭವೊಂದರಲ್ಲಿ ಮುಸಲ್ಮಾನರಾಗಿ ಮತಾಂತರಗೊಂಡರು.[೧೪೫] ಆದರೆ ಜಾತಿಗಾರರು ಎಂಬ ಹೆಸರು ಹಾಗೆಯೇ ಉಳಿಯಿತೆಂದು ಹೇಳಲಾಗುತ್ತದೆ.

ಜಾತಿಗಾರರಿಗೆ ಸಂವಾದಿಯಾದ ಇನ್ನೊಂದು ಜನವರ್ಗ ವೇಷಗಾರರು ಅಥವಾ ಬಹುರೂಪಿಗಳು. ಆದರೆ ಹಿಂದೂ ಮತಸ್ಥರಾದ ಬಹುರೂಪಿಗಳಿಗೂ, ಮುಸ್ಲಿಂ ಮತಸ್ಥರಾದ ಜಾತಿಗಾರರಿಗೂ ಯಾವ ಸಂಬಂಧವೂ ಇಲ್ಲ ಎಂದು ಒಂದು ಅಭಿಪ್ರಾಯವಿದ್ದರೆ, ಮೂಲತಃ ಒಂದೇ ಗುಂಪಿಗೆ ಸೇರಿರುವ ಈ ಜನ ಮುಸಲ್ಮಾನರ ಆಳ್ವಿಕೆಯ ನಂತರ ವೇಷಗಾರರು ಮತ್ತು ಜಾತಿಗಾರರು ಎಂಬುದಾಗಿ ಒಡೆದಿರಬೇಕು ಎಂದು

---

೧೪೪. ಮಾಹಿತಿ ನೀಡಿದವರು : ಮಲ್ಲೇಶಪ್ಪ ಗಂಗಪ್ಪ ಬಡಿಗೇರ, ಕಲಘಟಗಿ

೧೪೫. ಹಿ. ಚಿ. ಬೋರಲಿಂಗಯ್ಯ (ಸಂ) : ಕರ್ನಾಟಕ ಜನಪದ ಕಲೆಗೆಳ ಕೋಶ, ಪುಟ - ೨೦೧

[illegible]

ಮತ್ತೊಂದು ಅಭಿಪ್ರಾಯವಿದೆ.[೧೪೬] ಅದೇನೇ ಇದ್ದರೂ ಈ ಜನರು ಪ್ರದರ್ಶಿಸುವ ಮುಖವಾಡ ಶಿಲ್ಪ ಸಿದ್ಧಿಕಿ ಸಿದ್ಧಿ ವಿಶೇಷವಾಗಿರುತ್ತದೆ.

**ಶಿಲ್ಪರಚನೆ ಮತ್ತು ವಿನ್ಯಾಸ :** ಈ ಮುಖವಾಡ ಶಿಲ್ಪವು ಕಟ್ಟಿಗೆಯಿಂದ ಮಾಡಲಾಗಿರುತ್ತದೆ. ದೊಡ್ಡದಾದ ಮೂಗು, ದಪ್ಪ ತುಟಿ, ಹಲ್ಲು, ಗದ್ದ, ಉದ್ದನೆಯ ಮೀಸೆ ಇರುತ್ತದೆ. ಕಿವಿಯವರೆಗೂ ಇಳಿಬಿದ್ದ ಚೂಪಾದ ಟೋಪಿ ಇಲ್ಲವೆ ಅಗಲವಾದ ಹ್ಯಾಟು, ಬಣ್ಣದ ಕೋಟು, ಅರಿವೆಯ ಗಂಟಿನಿಂದ ತಯಾರಿಸಿದ ಎದ್ದು ಕಾಣುವ ನಿತಂಬಗಳು, ಎಡಗೈಯಲ್ಲಿ ಬಡಿಗೆ, ಬಲಗೈಯಲ್ಲಿ ಕೈಬಂಟ, ಬಗಲಲ್ಲಿ ಜೋಳಿಗೆ ಇರುತ್ತದೆ. ಕೈಬಂಟಕ್ಕೆ ಗುಳಗುಳಕೆ ಎನ್ನುವ ಇನ್ನೊಂದು ಹೆಸರೂ ಇದೆ. ಇದು ತೆಂಗಿನ ಗರಟೆಯಲ್ಲಿ ರಚಿಸಲಾದ ಒಂದು ಸರಳವಾದ ವಾದ್ಯ. ಗರಟೆಯಲ್ಲಿ ಹರಳುಗಳನ್ನು ಹಾಕಿ ಬಾಯಿಗೆ ಅರಿವೆ ಕಟ್ಟಿ, ಹಿಂದೆ ಜೋತು ಬಿಟ್ಟ ಅರಿವೆಯ ಚುಂಗ ಹಿಡಿದುಕೊಂಡು ಅಲುಗಾಡಿಸುತ್ತ ನುಡಿಸುವರು.

ವೇಷ ತೊಟ್ಟ ಸಿದ್ಧಿಕಿ ಮನೆ ಮನೆಗೆ ಹೋಗಿ ಹಾಡು ಹೇಳುತ್ತ ಕೈಬಂಟವನ್ನು ಬಾರಿಸುತ್ತ ಭಿಕ್ಷೆ ನೀಡಿಸಿಕೊಳ್ಳುವರು. ಸಾಮಾನ್ಯವಾಗಿ ಸಿದ್ಧಿಕಿ ಸಿದ್ಧಿ ಮುಖವಾಡ ಶಿಲ್ಪಧಾರಿಯು ಒಬ್ಬೊಂಟಿಯಾಗಿಯೇ ಇರುವನಾದರೂ, ಕೆಲವೊಮ್ಮೆ ಹೆಣ್ಣು ವೇಷಧಾರಿಯೂ ಒಂದು ಜೊತೆಗಿರುವದು. ಈಕೆಗೆ ಚಿಮಣಾ ಎನ್ನುವರು. ಆಗ ಕೈಬಂಟದ ಬದಲಿಗೆ ಡೋಲು ಇರುತ್ತದೆ. ಚಿಮಣಾ ಡೋಲು ಬಾರಿಸುತ್ತಾಳೆ. ಸಿದ್ಧಿಕಿ ಸಿದ್ಧಿ ಹಾಗೂ ಚಿಮಣಾ ಸೇರಿಯೇ ಹಾಡು ಹೇಳುತ್ತಾರೆ. ಸಂತಸದಿಂದ ಮನೆಯವರು ಭಿಕ್ಷೆ ನೀಡಿ ಕಳಿಸುತ್ತಾರೆ.[೧೪೭] ಈ ಜಾತಿಗಾರರು ಈ ಸಿದ್ಧಿಕಿ ಸಿದ್ಧಿ ವೇಷವಲ್ಲದೆ, ಹಣ್ಣು ಹಣ್ಣು ಮುದತಿಯ ವೇಷ ಸಾಲ ವಸೂಲಾತಿಗೆ ಹೊರಟ ಸೆಟ್ಟಿಯ ಸೋಗು ಹಾಕಿ ಮನೆ ಮನೆಗೆ ಹೋಗಿ ಮನರಂಜನೆ ನೀಡುತ್ತಾರೆ.

## ೨. ಕಲೆಯನ್ನು ವೃತ್ತಿಯನ್ನಾಗಿಸಿಕೊಂಡು ರಚಿಸುವವರ ಶಿಲ್ಪಗಳು

ಕರ್ನಾಟಕದಲ್ಲಿ ಹಲವಾರು ಜನವರ್ಗದ ಕೆಲವು ಕುಟುಂಬಗಳು ವಂಶಪಾರಂಪರ್ಯವಾಗಿ ಮರದ ಮಾಧ್ಯಮದಲ್ಲಿ ವಿವಿಧ ಬಗೆಯ ಶಿಲ್ಪಗಳನ್ನು ರಚಿಸಿ ಅವುಗಳನ್ನು ಮಾರಾಟ ಮಾಡಿ ಬದುಕುವ ವೃತ್ತಿಯನ್ನು ಅವಲಂಭಿಸಿದ್ದಾರೆ. ಅವರ ದೈನಂದಿನ ಬದುಕು ಈ ವೃತ್ತಿಯನ್ನೇ ಅವಲಂಭಿಸಿದೆ. ನಮ್ಮ ಜನಪದರು ಯಾವ ಬಗೆಯ ಶಿಲ್ಪವನ್ನು ಬೇಡುತ್ತಾರೋ ಆ ಬಗೆಯ ಶಿಲ್ಪವನ್ನು ಅವರಿಗೆಟುಕುವ ಬೆಲೆಯಲ್ಲಿ ಮಾಡಿಕೊಡುತ್ತಾರೆ. ಅಂಥ ಹೆಸರಾಂತ ವೃತ್ತಿಕಾರರ ಕುಟುಂಬಗಳು ಉತ್ತರ ಕರ್ನಾಟಕದಲ್ಲಿವೆ. ಅಂಥವರಲ್ಲಿ ಮುಖ್ಯವಾದವರೆಂದರೆ,

೨.೧ ಕಿನ್ನಾಳದ ಕಲಾವಿದರು ರಚಿಸುವ ಶಿಲ್ಪಗಳು

೨.೨ ಕೋಕಾಕದ ಕಲಾವಿದರು ರಚಿಸುವ ಶಿಲ್ಪಗಳು

---

೧೪೬. ಹಿ. ಚಿ. ಬೋರಲಿಂಗಯ್ಯ (ಸಂ) : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ - ೨೦೧

೧೪೭. ವಿವರಗಳಿಗೆ ನೋಡಿ : ..... ಅದೇ ....., ಪುಟ - ೨೦೧, ೨೦೨

[illegible]

[illegible]

[illegible]

[illegible]

[illegible]

[illegible]

೨.೩ ಕಲಘಟಗಿ ಕಲಾವಿದರು ರಚಿಸುವ ಶಿಲ್ಪಗಳು

೨.೪ ತಾಳಿಕೋಟೆಯ ಕಲಾವಿದರು ರಚಿಸುವ ಶಿಲ್ಪಗಳು

೨.೫ ತೊಣಶ್ಯಾಳದ ಕಲಾವಿದರು ರಚಿಸುವ ಶಿಲ್ಪಗಳು

**೨.೧ ಕಿನ್ನಾಳದ ಕಲಾವಿದರು ರಚಿಸುವ ಶಿಲ್ಪಗಳು :** ಕಿನ್ನಾಳದಲ್ಲಿ[೧೪೮] ತಯಾರಾಗುವ ಶಿಲ್ಪಗಳು ಕಿನ್ನಾಳ ಕಲೆಯಂದೇ ಹೆಸರುವಾಸಿಯಾಗಿವೆ. ಈ ಜನಪದ ಕಲೆಯನ್ನು ಆರ್ಯ ಕ್ಷತ್ರಿಯ ಜನಾಂಗಕ್ಕೆ ಸೇರಿದ ಚಿತ್ರಗಾರರು ಅಥವಾ ಜಿನಗಾರರು ಅಥವಾ ಬಣಗಾರರು ರಚನೆ ಮಾಡುತ್ತ ಬಂದಿದ್ದಾರೆ. ಇವರನ್ನು ಈಗ ಸಾಮಾನ್ಯವಾಗಿ ಚಿತ್ರಗಾರರು ಎಂದೇ ಕರೆಯುತ್ತಾರೆ. ನಿಮಿಷಾಂಬ ದೇವಿ ಇವರ ದೈವ. ಬಳ್ಳಾರಿ, ಹೊಸಪೇಟೆ, ಕೂಡ್ಲಿಗಿ,[೧೪೯] ಕೊಟ್ಟೂರು,[೧೫೦] ಇಟಗಿ,[೧೫೧] ಹಗರಿಬೊಮ್ಮನ ಹಳ್ಳಿ, ಹರಪನಹಳ್ಳಿ ಮುಂತಾದ ಊರುಗಳಲ್ಲಿ ಕಂಡುಬರುತ್ತಾರೆ. ಕಿನ್ನಾಳ ಗ್ರಾಮವಂತೂ ಜನಪದ ಶಿಲ್ಪಕಲೆಯ ಮುಖ್ಯ ಕೇಂದ್ರವೆನಿಸಿದೆ. ಇಲ್ಲಿ ಚಿತ್ರಗಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರು ಮೂಲತಃ ವಿಜಯ ನಗರ ಕಾಲದಲ್ಲಿ ದೇವಾಲಯಗಳಲ್ಲಿ ಭಿತ್ತಿ ಚಿತ್ರ ರಚಿಸುತ್ತಿದ್ದರೆಂದು ತಿಳಿದು ಬರುತ್ತದೆ. ಇಂದಿಗೂ ಇವರನ್ನು ಜನಪದ ಕಲಾವಿದರೆಂದೇ ಗುರುತಿಸಲಾಗುತ್ತದೆ.

**ಶಿಲ್ಪಗಳ ತಯಾರಿಕೆ :** ಈ ಕಲಾವಿದರು ತಾವು ರಚಿಸಬೇಕಾಗಿರುವ ಶಿಲ್ಪದ ಉದ್ದಗಲಗಳಿಗೆ ಸರಿಹೊಂದುವ ಬೇವು ಅಥವಾ ಹೆಬ್ಬೇವು ಇಲ್ಲವೆ ಸೂಕ್ತವಾದ ಮರದ ತುಂಡನ್ನು ಮೊದಲಿಗೆ ಆಯ್ಕೆ ಮಾಡಿಕೊಳ್ಳುವರು. ನಂತರ ಅದರ ಅನಗತ್ಯ ಭಾಗಗಳನ್ನು ತಗೆದು ಹಾಕಿ ಪ್ರತಿಮೆಯ ಒರಟಾದ ಆಕೃತಿಯನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಇದಕ್ಕೂ ಮೊದಲು ಹುಣಸೆ ಬೀಜವನ್ನು ಜಜ್ಜಿ, ನೀರಿನಲ್ಲಿ ನೆನೆ ಹಾಕಿ ನುಣ್ಣಗೆ ರುಬ್ಬುಲಾಗುವದು. ನಂತರ ಆ ಸರಿಯನ್ನು ಒಂದು ಪಾತ್ರೆಯಲ್ಲಿ ಹಾಕಿ ಒಲೆಯ ಮೇಲೆ ಇಟ್ಟು ಸಾಕಷ್ಟು ಹೊತ್ತು ಕುದಿಸಲಾಗುತ್ತದೆ. ನೀರೆಲ್ಲ ಇಂಗಿ ಒಂದು ಹದಕ್ಕೆ ಬಂದ ನಂತರ ಹುಣಸೆ ಬೀಜದ ಹಿಟ್ಟಿಗೆ ನೆನೆಸಲಾದ ಸೆಣಬಿನ ಚೀಲದ ಪುಡಿಯನ್ನು ಮಿಶ್ರ ಮಾಡಿ ನಾದಿಕೊಂಡು ಮೇಣದಂತೆ ಹದ ಮಾಡಿಕೊಳ್ಳುತ್ತಾರೆ. ಹೀಗೆ ಸಿದ್ಧವಾದ ಹಿಟ್ಟನ್ನು ಮರದ ಒರಟು ಆಕೃತಿಯ ಮೇಲೆ ಮೆತ್ತುವುದರ ಮೂಲಕ ಮಾಡಬೇಕೆಂದಿರುವ ಶಿಲ್ಪದ ಸಾಧಾರಣ ರೂಪ, ಆಕಾರಗಳನ್ನು ಮಾಡಿಕೊಳ್ಳುತ್ತಾರೆ. ನಂತರ ಮರದ ಪುಡಿಯೊಡನೆ ಕಲಸಿದ ಹುಣಸೆ ಬೀಜದ ಹಿಟ್ಟನ್ನು ಸವರಿದ ತೆಳು ಮತ್ತು ಮೃದುವಾದ ಹತ್ತಿ ಬಟ್ಟೆಯನ್ನು ಅಂಟಿಸಲಾಗುತ್ತದೆ. ಅದೂ ಒಣಗಿದ ನಂತರ ವಿವಿಧ ಬಣ್ಣಗಳನ್ನು ಬಳೆದು ಶಿಲ್ಪಗಳನ್ನು ಅಲಂಕರಿಸಲಾಗುತ್ತದೆ.[೧೫೨]

---

೧೪೮. ಕಿನ್ನಾಳ : ತಾ. ಜಿ. ಕೊಪ್ಪಳ

೧೪೯. ಕೂಡ್ಲಿಗಿ : ತಾ. ಹೊಸಪೇಟೆ, ಜಿ. ಬಳ್ಳಾರಿ

೧೫೦. ಕೊಟ್ಟೂರು : ತಾ. ಹೊಸಪೇಟೆ, ಜಿ. ಬಳ್ಳಾರಿ

೧೫೧. ಇಟಗಿ : ತಾ. ಹೆಸಪೇಟೆ, ಜಿ. ಬಳ್ಳಾರಿ

೧೫೨. ಡಾ. ಸಿ. ಮಹಾದೇವ : ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ಪುಟ - ೪೩

[illegible]

[illegible]

[illegible]

[illegible]

ಇತ್ತೀಚೆಗೆ ಈ ಶಿಲ್ಪಗಳ ರಚನಾ ಕ್ರಮಗಳಲ್ಲಿ ಕೆಲವು ಸಡಿಲಿಕೆ ಅಥವಾ ಬದಲಾವಣೆಗಳಾಗಿವೆ. ಹುಣಸೆ ಬೀಜದ ಹಿಟ್ಟಿನ ಬದಲಾಗಿ ವುಡ್ ಪ್ರೈಮರ್ ಅಥವಾ ಪೆವಿಕಾಲ್‌ನೊಡನೆ ಕಲಸಿದ ವೈಟ್ ಜಿಂಕ್ ಹುಡಿಯನ್ನು ಬಳಿದು ಅದು ಒಣಗಿದ ನಂತರ ಬಣ್ಣ ಬಳಿದು ಅಲಂಕಾರಗೊಳಿಸಲಾಗುತ್ತದೆ. ಹಿಂದೆ ತಾವೇ ದೇಶೀಯವಾಗಿ ತಯಾರಿಸಿಕೊಂಡ ಬಣ್ಣವನ್ನೇ ಬಳಿಯುತ್ತಿದ್ದವರು ತೀರ ಇತ್ತೀಚೆಗೆ ಪೇಟೆಯಿಂದ ತಂದ ರಸಾಯನಿಕ ಬಣ್ಣಗಳನ್ನೇ ಬಳಿಯುತ್ತಲಿದ್ದಾರೆ, ಅವರೇ ತಯಾರಿಸಿಕೊಂಡ ಈ ಬಣ್ಣಕ್ಕೆ ಲಜಾವರ ಬಣ್ಣ ಎಂದು ಹೇಳುತ್ತಾರೆ.

**ಲಜಾವರ ಬಣ್ಣ :** ಕಿನ್ನಾಳ ಕಲಾವಿದರು ಸ್ವತಃ ತಾವೇ ದೇಶೀಯವಾಗಿ ತಯಾರಿಸಿಕೊಳ್ಳುವ ಬಣ್ಣಕ್ಕೆ ಲಜಾವರ ಬಣ್ಣ ಎಂದು ಹೇಳುತ್ತಾರೆ. ಬಳ್ಳಾರಿ ಜಿಲ್ಲೆಯ ಮಲ್ಲೇಶ್ವರನ ಬೆಟ್ಟದಲ್ಲಿ[೧೫೩] ಕೆಂಪು, ಹಸಿರು, ಹಳದಿ ಬಣ್ಣದ ಕಲ್ಲುಗಳು ದೊರೆಯುತ್ತವೆ. ಇಂಗಳಿಕವನ್ನು ವೊಟ್ಟೆಯಲ್ಲಿರುವ ಲೋಳೆಯೊಂದಿಗೆ ಅರೆದು ಮಿಶ್ರ ಮಾಡಿ ಕೆಂಪು ಬಣ್ಣವನ್ನು ತಯಾರಿಸುತ್ತಾರೆ. ಹರದಾಳ ಕಲ್ಲನ್ನು ಅರೆದು ಹುರುಮಂಜು ಬಣ್ಣವನ್ನು ಮತ್ತು ಸುಣ್ಣದ ಕಲ್ಲು ಹಾಗೂ ಬಳಪದ ಕಲ್ಲನ್ನು ಅರೆದು ಬಿಳಿ ಬಣ್ಣವನ್ನು ತಯಾರಿಸುತ್ತಾರೆ. ಅರೆದ ಬಣ್ಣಕ್ಕೆ ಅಂಟನ್ನು ಮಿಶ್ರ ಮಾಡಿ ಬಳಸಲಾಗುತ್ತದೆ. ಹೀಗೆ ಚಿತ್ರಗಾರರು ಕಪ್ಪು ಬಣ್ಣವನ್ನು ರೊಟ್ಟಿಯ ಹೆಂಚಿನ ಮಸಿಯನ್ನು ಸಂಗ್ರಹಿಸಿ ನೀರು ಸೇರಿಸಿ, ಕುದಿಸಿ ನಂತರ ಸೋಸಿ ಅದಕ್ಕೆ ಅಂಟು ಸೇರಿಸಿ ಬಳಸುತ್ತಾರೆ. ತಮಗೆ ಬೇಕಾದ ಬಣ್ಣಗಳನ್ನು ಸ್ವತಃ ಶ್ರಮವಹಿಸಿ ಸಿದ್ಧಪಡಿಸಿಕೊಳ್ಳುತ್ತಾರೆ.

ಕಿನ್ನಾಳ ಕಲಾವಿದರು ತಯಾರಿಸುವ ಶಿಲ್ಪಗಳಲ್ಲಿ ೧. ದ್ವಾರಪಾಲಕರ ಶಿಲ್ಪಗಳು ೨. ದೇವತಾ ಶಿಲ್ಪಗಳು ೩. ದೇವರ ವಾಹನಗಳ ಶಿಲ್ಪಗಳು ೪. ಪ್ರಾಣಿ ಶಿಲ್ಪಗಳು ೫. ರಥದ ಅಲಂಕಾರದ ಶಿಲ್ಪಗಳು ೬. ಉತ್ಸವ ಮಂಟಪದ ಶಿಲ್ಪಗಳು ಮತ್ತು ರಥದ ಅಲಂಕರಣದಲ್ಲಿ ಬಳಸುವ ಕಮಾನಿನ ಬಾಗಿಲು ಚೌಕಟ್ಟುಗಳು ಅಲ್ಲದೆ, ಪಕ್ಷಿ, ಹಣ್ಣು-ಹಂಪಲು ಶಿಲ್ಪಗಳು ಪ್ರಮುಖವಾಗಿವೆ.

ವಿರುಪಾಕ್ಷ ದೇವಾಲಯದ ವಿರುಪಾಕ್ಷನ ಸಿಂಹವಾಹನ, ಹಿರೇಮಲ್ಲನ ಕೇರಿಯ ಊರಮ್ಮನ ಗುಡಿಯಲ್ಲಿರುವ ನಂದಿ ವಾಹನದ ಮೇಲೆ ಆಸೀನರಾಗಿರುರುವ ಶಿವ-ಪಾರ್ವತಿಯರ ಶಿಲ್ಪಗಳೂ ಈ ಕಿನ್ನಾಳದ ಕಲಾವಿದರೇ ಮಾಡಿದವುಗಳಾಗಿದ್ದು ತುಂಬ ಸುಂದರವೂ, ಉಲ್ಲೇಖಾರ್ಹವಾದವುಗಳೂ ಆಗಿವೆ. ಅಲ್ಲದೆ ಗದುಗಿನಲ್ಲಿರುವ ಕಾಮಣ್ಣ-ರತಿಯರ ಶಿಲ್ಪಗಳು, ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿರುವ ದ್ವಾರಪಾಲಕ, ಯಶೋಧಾ, ಗೌರಮ್ಮ ಶಿಲ್ಪಗಳು ಒಂದಕ್ಕಿಂತ ಒಂದು ಸುಂದರವಾಗಿವೆ. ಕೆಲವು ಶಿಲ್ಪಗಳು ಪ್ರತಿಮಾ ಶಾಸ್ತ್ರಕ್ಕೆ ಅನುಗುಣವಾಗಿ, ತಾಳ ಪ್ರಮಾಣಕ್ಕೆ ತಕ್ಕಂತೆ ಇದ್ದು ಆದರೆ, ಅವುಗಳ ರಚನಾಕ್ರಮ ಮತ್ತು ಮಾಧ್ಯಮಗಳು ಅಪ್ಪಟ ಜನಪದೀಯವಾದವುಗಳೇ ಆಗಿವೆ. ವಿಜಯ ನಗರ ಕಾಲದ ಮಂಟಪದ ಕಂಬಗಳಲ್ಲಿ ಕಂಡುಬರುವ ಸಿಂಹ, ದ್ವಾರಪಾಲಕರು ಮುಂತಾದ ಶಿಲ್ಪಗಳ ಅನುಕರಣೆ ಇವುಗಳಲ್ಲಿ ಕಂಡು

---

೧೫೩. ಹರಪನ ಹಳ್ಳಿ ಮತ್ತು ಹಡಗಲಿ ಊರುಗಳ ನಡುವೆ ಬರುತ್ತದೆ

[illegible]

ಬರುತ್ತದೆ. ಈ ಶಿಲ್ಪಗಳ ಅಲಂಕರಣದಲ್ಲಿ ಹಳದಿ, ಕೆಂಪು, ಹಸಿರು, ಕಪ್ಪು ಮತ್ತು ಬಿಳಿ ಬಣ್ಣಗಳನ್ನು ಹೇರಳವಾಗಿ ಬಳಸಲಾಗಿದೆ. ನೆರೆಯ ಆಂಧ್ರ ಮತ್ತು ತಮಿಳುನಾಡುಗಳಲ್ಲೂ ಸಹ ಈ ಬಗೆಯ ಶಿಲ್ಪಗಳು ಕಂಡು ಬರುತ್ತವೆ. ಈ ಕಲೆ ವಿಜಯನಗರೋತ್ತರ ಕಾಲದ ಕೊಡುಗೆಯಾಗಿದೆ ಎಂದು ಡಾ. ಸಿ. ಮಹದೇವ್[೧೫೪] ಅಭಿಪ್ರಾಯ ಪಡುತ್ತಾರೆ.

**೨.೨ ಗೋಕಾಕದ ಕಲಾವಿದರು ರಚಿಸುವ ಶಿಲ್ಪಗಳು :** ಗೋಕಾಕದಲ್ಲಿ[೧೫೫] ನಾನಾ ಬಗೆಯ ತರಕಾರಿ, ಹಣ್ಣು ಹಂಪಲುಗಳ ಶಿಲ್ಪಗಳನ್ನು ನೈಜ ಆಕಾರಕ್ಕೆ ತಕ್ಕಂತೆ ಅತ್ಯಂತ ಆಕರ್ಷಕವಾಗಿ ತಯಾರಿಸುತ್ತಾರೆ. ಮಣ್ಣು ಮತ್ತು ಕಟ್ಟಿಗೆಯಿಂದ ತಯಾರಿಸಿ, ಅಂದವಾದ ಬಣ್ಣ ಕೊಟ್ಟು ಮಾರಾಟಕ್ಕೆ ಸಿದ್ಧಗೊಳಿಸುತ್ತಾರೆ. ಈ ವಿವಿದ ತರಕಾರಿ, ಹಣ್ಣು-ಹಂಪಲುಗಳು ಬಿಡಿಯಾಗಿ ಮತ್ತು ತಾಟು ಇಲ್ಲವೆ ಪೆಟ್ಟಿಗೆಗಳಲ್ಲಿ ಅಂದವಾಗಿ ಹೊಂದಿಸಿದ ರೀತಿಯಲ್ಲಿ ಇಡಲಾಗಿರುತ್ತದೆ. ಭಾರತದೆಲ್ಲೆಡೆ ಇವುಗಳಿಗೆ ಬೇಡಿಕೆಯಿದೆ. ಈ ಜನಪದ ಕಲೆಗಾರಿಕೆ ಹಲವು ತಲೆಮಾರುಗಳಿಂದ ಗೋಕಾಕ ಪಟ್ಟಣದಲ್ಲಿ ನಡೆದುಕೊಂಡು ಬಂದಿದೆ. ಜಿನಗಾರರು ಇವುಗಳನ್ನು ತಯಾರಿಸುತ್ತಾರೆ. ಇವರ ಒಂದು ದೊಡ್ಡ ಓಣಿಯೇ ಇಲ್ಲಿದೆ. ಇವರೆಲ್ಲ ಈ ಕಲೆಯ ವೃತ್ತಿಕಾರರಾಗಿದ್ದಾರೆ. ಇವರ ಪೂರ್ವಜರು ಸೋಲಾಪುರ ಮಹಾರಾಜರ ಕಾಲದಲ್ಲಿ ಆಶ್ರಯ ಪಡೆದಿದ್ದರು. ಕ್ರಮೇಣ ಅಲ್ಲಿಂದ ಗೋಕಾಕ್‌ಗೆ ವಲಸೆ ಬಂದು ನೆಲೆಸಿದ್ದಾಗಿ ಹೇಳುತ್ತಾರೆ.

ಈ ಕಲಾವಸ್ತುಗಳ ತಯಾರಿಕೆಗೆ ಹರಿವಾಳ ಅಥವಾ ಪೋಲಕಿ ಕಟ್ಟಿಗೆ ಬಳಸುತ್ತಾರೆ. ಈ ಕಟ್ಟಿಗೆ ಅತ್ಯಂತ ಹಗುರವಾಗಿರುತ್ತದೆ. ಇದರ ಜೊತೆಯಲ್ಲಿ ಬಿದಿರಿನಲ್ಲಿ ಮೈದಾ ಹಿಟ್ಟಿನ ಸರಿ, ಕಲ್ಲು ನಾರಿನ ಹಾಳೆ, ಅಂಟು ಬಣ್ಣ, ದಾರದ ಎಳೆ ಮುಂತಾದ ವಸ್ತುಗಳನ್ನು ಉಪಯೋಗಿಸುತ್ತಾರೆ.

ಹರಿವಾಳದ ಕಟ್ಟಿಗೆಯನ್ನು ಮೊದಲು ಚೆನ್ನಾಗಿ ಒಣಗಿಸಿತ್ತಾರೆ. ನಂತರ ಕೆತ್ತಿ ನುಣುಪುಗೊಳಿಸಿ, ಬೇಕಾದ ಆಕಾರಕ್ಕೆ ಕತ್ತರಿಸಿಕೊಳ್ಳುತ್ತಾರೆ. ನಂತರ ಸುಣಬುರಲಿ ಹರಳುಗಳನ್ನು ಪುಡಿ ಮಾಡಿ ದ್ರಾವಣ ತಯಾರಿಸಿ, ಅದಕ್ಕೆ ಅಂಟು ಸೇರಿಸಿ ವಸ್ತುಗಳ ಮೇಲೆ ನಾಲ್ಕಾರು ಸಾರಿ ಲೇಪನ ಮಾಡುತ್ತಾರೆ. ಕಟ್ಟಿಗೆಯಲ್ಲಿನ ಬಿರುಕು, ತಗ್ಗುಗಳನ್ನು ಲಾಂಬಿಯಿಂದ ತುಂಬಿಕೊಂಡು ಆಯಾ ವಸ್ತುವಿನ ಗುಣ, ಬಣ್ಣಕ್ಕನುಗುಣವಾಗಿ ಬಣ್ಣವನ್ನು ತಿಳಿಯಾಗಿ ಲೇಪನ ಮಾಡುತ್ತ ೩-೪ ಬಾರಿ ಬೆಳಕು ನೆಳಲಿನ ಛಾಯೆಗಳನ್ನು ವರ್ಣಗಳಲ್ಲಿ ಮೂಡಿಸುತ್ತಾರೆ. ಕೊನೆಯ ಹಂತದಲ್ಲಿ ಸಂಯಮದಿಂದ ಬಣ್ಣಗಳ ವಿನ್ಯಾಸ ಪೂರ್ಣಗೊಳಿಸುತ್ತಾರೆ. ಅದರ ಮೇಲೆ ಬಣ್ಣ ಮಾಸದಿರಲೆಂದು ವಾರ್ನಿಸ್ ಬಳೆಯಲಾಗುತ್ತದೆ.[೧೫೬] ವಸ್ತುಗಳಲ್ಲಿ ಇನ್ನೂ ನೈಜತೆಯನ್ನು ತರಲು ಹಣ್ಣುಗಳಲ್ಲಿ ಅರ್ಧ ಹೋಳು ಮಾಡಿದಂತೆ ಕತ್ತರಿಸುತ್ತಾರೆ. ಕಲ್ಲಂಗಡಿ, ಸೇಬು ಮೊದಲಾದ ಹಣ್ಣುಗಳು ನೈಜವಾಗಿ ಕತ್ತರಿಸಿದಂತೆ ಬಣ್ಣದ ವಿನ್ಯಾಸ ರೂಪಿಸಿ, ಒಳಗಿನ ಬೀಜಗಳನ್ನು ತೋರಿಸಿರುತ್ತಾರೆ.

---

೧೫೪. ಡಾ. ಸಿ. ಮಹಾದೇವ : ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ಪುಟ - ೪೪

೧೫೫. ಗೋಕಾಕ : ತಾ. ಗೋಕಾಕ, ಜಿ. ಬೆಳಗಾವಿ

೧೫೬. ಪಿ. ಆರ್. ತಿಪ್ಪೇಸ್ವಾಮಿ (ಸಂ) : ಕಲಾ ಕೋಶ, ಪುಟ -೧೪೩

ಮಾರಾಟಕ್ಕೆ ಸಿದ್ಧವಾಗಿಟ್ಟ ವಸ್ತುಗಳಂತೆಯೇ ಇವು ಕಾಣಿಸುತ್ತವೆ. ಸಾಮಾನ್ಯವಾಗಿ ಮಾವು, ನಿಂಬೆ, ದ್ರಾಕ್ಷಿ, ನೇರಳೆ, ಚಿಕ್ಕು, ಸೇಬು, ಮೋಸಂಬಿ, ಪೇರಲ, ಸೀತಾಫಲ, ಬಾಳೆಹಣ್ಣು, ನೆಲ್ಲಿಕಾಯಿ, ಅಂಜೀರ, ಗೋಡಂಬಿ, ದಾಳಿಂಬೆ ಮುಂತಾದ ಹಣ್ಣುಗಳನ್ನು ಕಂಡರೆ ನೈಜ ಹಣ್ಣುಗಳಂತೆಯೇ ಭಾಸವಾಗುತ್ತವೆ. ಈ ಕಲಾ ಸೃಷ್ಟಿಗಳು ಮದುವೆ, ಹುಟ್ಟು ಹಬ್ಬ ಇತ್ಯಾದಿ ಸಂದರ್ಭಗಳಲ್ಲಿ ವಿಶೇಷವಾಗಿ ಉಡುಗೊರೆಯ ವಸ್ತುಗಳಾಗಿ ಮಾರಾಟವಾಗುತ್ತವೆ. ಮನೆಯ ಗೋಡೆಗಳನ್ನು ಗೋಕಾಕದ ಈ ಹಣ್ಣು ಹಂಪಲುಗಳು ಅಲಂಕರಿಸಿಕೊಳ್ಳುವುದು ಸರ್ವೇ ಸಾಮಾನ್ಯ. ಗೋಕಾಕದಲ್ಲಿ ತಯಾರಾಗುವ ಕಟ್ಟಿಗೆ ಗೊಂಬೆಗಳೂ ಪ್ರಸಿದ್ಧವಾಗಿವೆ.

### ೨.೩ ಕಲಘಟಗಿಯ ಕಲಾವಿದರು ರಚಿಸುವ ಶಿಲ್ಪಗಳು

ಶೈಶವಾವಸ್ಥೆಯಲ್ಲಿರುವ ಮಕ್ಕಳ ಅಳುವನ್ನು ನಿಲ್ಲಿಸಲು, ಮಲಗಿಸಿ ನಿದ್ರೆ ಬರಿಸಲು ನಮ್ಮ ಜನಪದರು ಆಶ್ರಯಿಸಿದ್ದು ತೊಟ್ಟಿಲು ಎಂಬ ಸಾಧನವನ್ನು. ಇದು ಮರದ ಮಾಧ್ಯಮದಲ್ಲಿ ಅತ್ಯಂತ ಕಲಾತ್ಮಕವಾಗಿ ರಚನೆಗೊಂಡಿರುತ್ತದೆ. ಹಿಂದೆ ಇಂಥ ಕಲಾತ್ಮಕ ತೊಟ್ಟಿಲುಗಳನ್ನು ರಚಿಸುವವರು ಅನೇಕ ಊರುಗಳಲ್ಲಿ ಇದ್ದರೆಂದು ತೋರುತ್ತದೆ. ಇಂದಿನ ಆಧುನಿಕ ಕಾಲದಲ್ಲಿ ಹಲವಾರು ಕಾರಣಗಳ ಹಿನ್ನೆಲೆಯಲ್ಲಿ ಮರದ ಮಾಧ್ಯಮದ ತೊಟ್ಟಿಲುಗಳ ಸ್ಥಾನವನ್ನು ಕಬ್ಬಿಣದ ತೊಟ್ಟಿಲುಗಳು ಆಕ್ರಮಿಸಿಕೊಂಡಿವೆ. ಮರದ ಮಾಧ್ಯಮದ ಕಲಾತ್ಮಕ ತೊಟ್ಟಿಲುಗಳ ನಿರ್ಮಾಣ ಕಲೆಯನ್ನೇ ವೃತ್ತಿಯಾಗಿಸಿಕೊಂಡು ಇನ್ನೂ ಉಳಿಸಿಕೊಂಡು ಬಂದವರೆಂದರೆ, ಧಾರವಾಡ ಜಿಲ್ಲೆಯ ಕಲಘಟಗಿಯ ಕಲಾವಿದರು. ಇವರು ತಯಾರಿಸುವ ತೊಟ್ಟಿಲುಗಳು ರಾಷ್ಟ್ರಮಟ್ಟದಲ್ಲಿ ಪ್ರಸಿದ್ಧಿ ಪಡೆದಿವೆ. ಸುಮಾರು ನಾಲ್ಕೈದು ತಲೆಮಾರುಗಳ ಹಿಂದೆ ಹತ್ತಾರು ಕುಟುಂಬಗಳು ಈ ತೊಟ್ಟಿಲುಗಳ ನಿರ್ಮಾಣದಲ್ಲಿ ತೊಡಗಿದ್ದವು. ಇಂದು ಕೇವಲ ಒಂದೆರಡು ಕುಟುಂಬಗಳು ಮಾತ್ರ ಈ ವೃತ್ತಿಯನ್ನು ಉಳಿಸಿಕೊಂಡಿವೆ.

**ರಚನೆ :** ಈ ತೊಟ್ಟಿಲುಗಳ ರಚನೆಗೆ ಸಾಮಾನ್ಯವಾಗಿ ಸಾಗವಾನಿ ಮರವನ್ನು ಬಳಸುತ್ತಾರೆ. ಬೇಕಾದ ಅಳತೆಗೆ ತಕ್ಕಂತೆ ತುಂಡುಗಳನ್ನು ಸಿದ್ಧಪಡಿಸಿಕೊಂಡು, ತೊಟ್ಟಿಲನ್ನು ನಿರ್ಮಿಸುತ್ತಾರೆ. ನಂತರ ಇದರ ಮೇಲೆ ಸೇಡಿ[೧೫೭]ಯನ್ನು ಲೇಪಿಸುತ್ತಾರೆ. ನಂತರ ನೀರು ಹಚ್ಚಿ ಕಲ್ಲಿನಿಂದ ಪಾಲೀಶ್ ಮಾಡುವರು. ಎಲ್ಲ ಮುಗಿದ ಮೇಲೆ ಬಣ್ಣಗಾರಿಕೆ. ಈ ಬಣ್ಣವನ್ನು ಅರಗಿನ ಬಣ್ಣ[೧೫೮] ಎಂದು ಹೇಳುತ್ತಾರೆ. ತೊಟ್ಟಿಲ ಮೇಲೆ ರಾಮಾಯಣ, ಮಹಾಭಾರತದ ದೃಶ್ಯಾವಳಿಗಳನ್ನು ಅಲ್ಲದೆ ಅನೇಕ ದೇವ, ದೇವತೆಗಳ ಚಿತ್ರಗಳನ್ನು ಚಿತ್ರಿಸಿ ಅಲಂಕರಿಸುವರು. ಈ ತೊಟ್ಟಿಲುಗಳು ಬೇರೆ ಬೇರೆ ಅಳತೆಯಲ್ಲಿ ನಿರ್ಮಾಣವಾಗಿರುತ್ತವೆ. ತೊಟ್ಟಿಲುಗಳನ್ನು ಗಾತ್ರದ ದೃಷ್ಟಿಯಿಂದ ಮೂರು ವಿಧವಾಗಿ ವಿಂಗಡಿಸಬಹುದು. ೧೬ ಯಕ್ಕಿ, ೨೦ಯಕ್ಕಿ

---

೧೫೭. ಸೇಡಿ : ಹುಣಸೆ ಬೀಜದ ಸರಿ ಹಾಗೂ ಜೇಡಿ ಮಣ್ಣಿನ ಮಿಶ್ರಣ

೧೫೮. ಈ ಕಲಾವಿದರು ಲಜಾವರ ಬಣ್ಣವನ್ನು ಬಳೆಯುತ್ತಾರೆ. ಇದನ್ನು ಅರಗು, ರಾಳಗಳೊಡನೆ ಹುಡಿ ಬಣ್ಣವನ್ನು ಸೇರಿಸಿ ತಯಾರಿಸಿರುತ್ತಾರೆ.

ಮತ್ತು ೨೪ ಯಕ್ಕಿ. ಗೇಣು ಮತ್ತು ಬೆರಳೆನಿಕೆಯೇ ಇವರ ಲೆಕ್ಕ. ಸಾಮಾನ್ಯವಾಗಿ ತೊಟ್ಟಿಲುಗಳು ೧೮ ಅಂಗುಲ ಅಡ್ಡ ಮತ್ತು ೨ ಅಡಿ ೮ ಅಂಗುಲ ಉದ್ದವಿರುತ್ತವೆಯಾದರೂ ೨೦ ಯಕ್ಕಿ ಹಾಗೂ ೨೪ ಯಕ್ಕಿಗಳ ತೊಟ್ಟಿಲುಗಳು ಮುಖ್ಯವೆಂದು ಅವರು ಹೇಳುತ್ತಾರೆ. ಈ ತೊಟ್ಟಿಲುಗಳು ನೂರು ವರ್ಷಗಳ ಕಾಲ ಬಾಳಿಕೆ ಬರುತ್ತವೆ. ವಿಶೇಷವೆಂದರೆ ಈ ತೊಟ್ಟಿಲುಗಳನ್ನು ಮೊಳೆ ಹೊಡೆಯದೇ ಜೋಡಿಸಿ ತಯಾರಿಸಿದವುಗಳಾಗಿರುತ್ತವೆ.

**ಇತರ ಶಿಲ್ಪಗಳು :** ಇಲ್ಲಿನ ಕಲಾವಿದರು ತೊಟ್ಟಿಲು ಮಾತ್ರವಲ್ಲದೆ, ಅನೇಕ ಬಗೆಯ ದೇವತಾ ಶಿಲ್ಪಗಳು, ಮುಖವಾಡಶಿಲ್ಪಗಳು, ದೇವರ ವಾಹನಶಿಲ್ಪಗಳನ್ನು ರಚಿಸುತ್ತಾರೆ. ದೇವತಾ ಶಿಲ್ಪಗಳಲ್ಲಿ ಮುಖ್ಯವಾದವುಗಳೆಂದರೆ ದುರುಗಮುರಗಿ ಶಿಲ್ಪಗಳು, ಗೌರಮ್ಮ ಶಿಲ್ಪಗಳು, ದ್ಯಾಮವ್ವನ ಶಿಲ್ಪಗಳು ಮುಂತಾದವುಗಳು. ಮುಖವಾಡ ಶಿಲ್ಪಗಳಲ್ಲಿ ಪೋತುರಾಜನ ಮುಖವಾಡ ಇತ್ಯಾದಿ ಶಿಲ್ಪಗಳು. ದೇವರ ವಾಹನಗಳಲ್ಲಿ ಸಿಂಹ, ಹಾವು, ಕುದುರೆ ಇತ್ಯಾದಿಗಳಾಗಿವೆ.

**೨.೪ ತಾಳೀಕೋಟೆಯ ಕಲಾವಿದರು ರಚಿಸುವ ಶಿಲ್ಪಗಳು :** ತಾಳೀಕೋಟೆಯಲ್ಲಿ[೧೫೫] ವಿವಿಧ ಶಿಲ್ಪಗಳನ್ನು ರಚಿಸುವವರ ಕುಟುಂಬಗಳಿರುವ ಒಂದು ಓಣಿಯೇ ಇದೆ. ಇವರಿಗೆ ಜಿನಗಾರರು ಎಂದು ಕರೆಯುತ್ತಾರೆ. ಈ ಜನರು ಕಲೆಯಲ್ಲಿ ಬಹು ಮುಖ ಪ್ರತಿಭೆಯುಳ್ಳವರಾಗಿದ್ದಾರೆ. ಇವರು ಶಿಲ್ಪಗಳನ್ನು ರಚಿಸುವದಲ್ಲದೆ ಅವುಗಳಿಗೆ ತಾವೇ ಬಣ್ಣ ಬಳೆದು ವಿವಿಧ ಚಿತ್ರ ವಿನ್ಯಾಸಗಳನ್ನು ರಚಿಸುತ್ತಾರೆ.

ತಾಳೀಕೋಟೆಯ ಈ ಜಿನಗಾರರು ೧. ದುರುಗಮುರಗಿಯ ಶಿಲ್ಪ ಮತ್ತು ಪೆಟ್ಟಿಗೆ ೨. ದೇವರ ಪಲ್ಲಕ್ಕಿ ೩. ದೇವರ ಮುಖವಾಡ ೪. ತೊಟ್ಟಿಲು ೫. ಮಕ್ಕಳ ಆಟಿಗೆಯ ವಸ್ತುಗಳು ಮುಂತಾದವುಗಳನ್ನು ವಂಶಪಾರಂಪರ್ಯವಾಗಿ ರಚಿಸುತ್ತ ಬಂದಿದ್ದಾರೆ. ಹಾಲೆಮರ, ಹತ್ತಿಮರ, ಸಾಗವಾನಿ, ಶಿವನಿಮರ ಮುಂತಾದ ಮರಗಳನ್ನು ಶಿಲ್ಪ ರಚನೆಗೆ ಬಳಸುತ್ತಾರೆ. (ರಚಿಸಿದ ಶಿಲ್ಪಗಳಿಗೆ ತಾವೇ ಸ್ವತಃ ಬಣ್ಣವನ್ನು ಬಳೆದು ಚಿತ್ರಗಳಿಂದ ಅಲಂಕರಿಸುತ್ತಾರೆ.) ಇವರ ಶಿಲ್ಪಗಳ ರಚನೆ ಹೆಚ್ಚಾಗಿ ಕಲಘಟಗಿ ಹಾಗೂ ಗೋಕಾಕ ಕಲಾವಿದರ ಶಿಲ್ಪಗಳ ರಚನೆಯನ್ನೇ ಹೋಲುತ್ತವೆ.

ಇವರು ಅಗಸಿ ಎಣ್ಣೆ, ಬಿಳಿಯ ರಾಳ, ಕೆಂಪು ರಾಳಗಳ ಮಿಶ್ರಣದಿಂದ ತಯಾರಿಸಿದ ಬಣ್ಣಕ್ಕೆ ಗೂಳಿ ಬಣ್ಣ ಎನ್ನುತ್ತಾರೆ. ಇನ್ನೂ ಕೆಲವು ಸಲ ಹುಡಿ ಬಣ್ಣದಲ್ಲಿ ಅಂಟು ಸೇರಿಸಿ, ನೀರಿನಲ್ಲಿ ಮಿಶ್ರಣ ಮಾಡಿ ಬಣ್ಣ ತಯಾರಿಸುವರು.ಇದರಲ್ಲಿ ಅರಿದಾಳ ಕಾಯಿಯ ಅಂಟನ್ನು ಬಳಸಿಕೊಳ್ಳುತ್ತಾರೆ. ಕುಂಚಗಳಿಗೆ ಅಳಿಲಿನ ಬಾಲದ ತುಪ್ಪಳವನ್ನು ಉಪಯೋಗಿಸುತ್ತಾರೆ. ಇವರು ತಯಾರಿಸುವ ಶಿಲ್ಪಗಳು ಬಿಜಾಪೂರ, ಬಾಗಲಕೋಟೆ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ವ್ಯಾಪಿಸಿವೆ. ಮರಾಠಿಯನ್ನು ಮಾತನಾಡುವ ಇವರು ಮಹಾರಾಷ್ಟ್ರ ಮೂಲದವರಾಗಿದ್ದು ಉಪಜೀವನಕ್ಕಾಗಿ ಕರ್ನಾಟಕಕ್ಕೆ ಬಂದು ನೆಲೆಸಿರುವದಾಗಿ ಹೇಳುತ್ತಾರೆ.

---

೧೫೫. ಡಾ. ಎಸ್.ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ - ೨೬೦

[illegible]

**೨.೫ ತೊನಶ್ಯಾಳದ ಕಲಾವಿದರು ರಚಿಸುವ ಶಿಲ್ಪಗಳು :** ಮರದ ಮಾಧ್ಯಮದಲ್ಲಿ ಹಲವು ಬಗೆಯ ಜನಪದ ದೇವತಾ ಶಿಲ್ಪಗಳನ್ನು ರಚಿಸುವ ಮತ್ತೊಂದು ಕೇಂದ್ರ ಬಿಜಾಪೂರ ಜಿಲ್ಲೆಯ ತೊನಶ್ಯಾಳದಲ್ಲಿದೆ. ಈ ಗ್ರಾಮದಲ್ಲಿನ ಬಡಿಗೇರರ ಕುಟುಂಬವು ವಂಶಪಾರಂಪರ್ಯವಾಗಿ ಈ ವೃತ್ತಿಯನ್ನು ನಡೆಸಿಕೊಂಡು ಬಂದಿದೆ. ಸಾಮಾನ್ಯವಾಗಿ ಇವರು ಸಾಗವಾನಿ ಮರವನ್ನು ಶಿಲ್ಪ ಕೆತ್ತನೆಗೆ ಬಳಸುತ್ತಾರೆ. ಇವರು ತಾವು ರಚಿಸಿದ ಶಿಲ್ಪಗಳಿಗೆ ಮೊದ ಮೊದಲು ತಾವೇ ದೇಶೀಯವಾಗಿ ತಯಾರಿಸಿಕೊಂಡ ಬಣ್ಣಗಳನ್ನು ಬಳೆಯುತ್ತಿದ್ದರು. ಈಗ ಮಾತ್ರ ಆಧುನಿಕ ವರ್ಣಗಳನ್ನು ಬಳಸಿ ಶಿಲ್ಪಗಳನ್ನು ಅಲಂಕರಿಸುತ್ತಾರೆ.

ಇವರು ರಚಿಸುವ ಶಿಲ್ಪಗಳಲ್ಲಿ ಮುಖ್ಯವಾದವುಗಳೆಂದರೆ, ದ್ಯಾಮವ್ವನ ಶಿಲ್ಪಗಳು, ದೇವರ ಮುಖವಾಡ ಶಿಲ್ಪಗಳು, ದೇವರ ವಾಹನ ಶಿಲ್ಪಗಳು ಮುಂತಾದವುಗಳಾಗಿವೆ. ವಿಶೇಷವಾಗಿ ತೇರಿನ ಕುದುರೆ ಶಿಲ್ಪಗಳು ಆಕಾರದಲ್ಲಿ ದೊಡ್ಡವುಗಳಾಗಿದ್ದು ಅತ್ಯಂತ ಆಕರ್ಷಕವಾಗಿರುತ್ತವೆ. ಉತ್ತರ ಕರ್ನಾಟಕದ ಅನೇಕ ಊರುಗಳಲ್ಲಿ ಇವರು ರಚಿಸಿ ಕೊಟ್ಟ ಶಿಲ್ಪಗಳು ನೋಡಲು ಸಿಗುತ್ತವೆ. ಶಿಲ್ಪಗಳನ್ನು ರಚಿಸುವಲ್ಲಿ ಶ್ರೀ ಗಂಗಾಧರ ಬಡಿಗೇರ ನಿಷ್ಣಾತರಾಗಿದ್ದಾರೆ. ಬಿಜಾಪೂರ ಜಿಲ್ಲೆಯ ಹೊನಹಳ್ಳಿ, ಸವನ ಹಳ್ಳಿ, ಹಿಟ್ನಳ್ಳಿ, ಕತ್ನಳ್ಳಿ, ಮನಗೂಳಿಗಳಲ್ಲಿನ ದೇವತಾ ಶಿಲ್ಪಗಳು ಇಲ್ಲಿಯೇ ತಯಾರಾದವುಗಳಾಗಿವೆ. ಇಂಡಿ ತಾಲೂಕಿನ ಸಾತಲಗಾಂವದ ಶ್ರೀ ಮಲ್ಲಿಕಾರ್ಜುನ ಸಿದ್ಧನ ಶಿಲ್ಪ, ಸಂಗೂಗಿ ಚೌಡಮ್ಮನ ಶಿಲ್ಪ, ಚಬನೂರಿನ ಅಮೋಘ ಸಿದ್ಧನ ಶಿಲ್ಪ, ಬಸವನ ಬಾಗೇವಾಡಿ ತಾಲೂಕಿನ ಗೊಳುತಿಯ ಗ್ರಾಮ ದೇವತಾ ಶಿಲ್ಪ, ಸಿಂದಗಿ ತಾಲೂಕಿನ ಬಸನಾಳ, ನಿವಾಳಖೋಡದ ದೇವತಾ ಶಿಲ್ಪಗಳು, ಅಕ್ಕಲಕೋಟ ತಾಲೂಕಿನ ಕರ್ಜಗಿಯ ರೇವಣ ಸಿದ್ಧ ದೇವರ ಶಿಲ್ಪ, ಹೂವಿನ ಹಿಪ್ಪರಗಿಯ ಗ್ರಾಮದೇವತಾ ಶಿಲ್ಪ, ತಿಕೋಟಾದ ಗ್ರಾಮ ದೇವತಾ ಶಿಲ್ಪ, ಅಲ್ಲದೆ ಬೆಳಗಾವಿ ಹಾಗೂ ಗುಲಬರ್ಗಾ ಜಿಲ್ಲೆಯ ಹಲವಾರು ಹಳ್ಳಿಗಳಲ್ಲಿನ ದೇವತಾ ಶಿಲ್ಪಗಳೆಲ್ಲ ಈ ತೊನಶ್ಯಾಳ ಗ್ರಾಮದಲ್ಲಿ ನಿರ್ಮಾಣಗೊಂಡವುಗಳಾಗಿವೆ.

ನಮ್ಮ ಜನಪದರ ಬದುಕಿನ ಬಹುಮುಖ್ಯ ಅಂಗವಾಗಿರುವ ಮರ ದಿನನಿತ್ಯವೂ ವಿವಿಧ ರೀತಿಯಲ್ಲಿ ಬಳಕೆಯಾಗುವುದರೊಂದಿಗೆ ಅವರ ಸೌಂದರ್ಯ ಪ್ರಜ್ಞೆ, ಧಾರ್ಮಿಕತೆ ಹಾಗೂ ವೃತ್ತಿಯ ಹಿನ್ನೆಲೆಯಲ್ಲಿ ಹಲವು ಬಗೆಯಲ್ಲಿ ಶಿಲ್ಪರೂಪಗಳನ್ನು ತಾಳಿ ಜನಪದರ ಬದುಕನ್ನೇ ನಿಯಂತ್ರಿಸಬಲ್ಲ, ಬದುಕಿನ ಬಹುಮುಖ್ಯ ಭಾಗವಾಗಿ ಪ್ರಾಮುಖ್ಯ ಪಡೆದಿವೆ. ಪ್ರಯೋಜನದ ದೃಷ್ಟಿಯಿಂದ, ಮನರಂಜನೆಯ ದೃಷ್ಟಿಯಿಂದ ಅವರು ನಿರ್ಮಿಸಿಕೊಂಡ ಅನೇಕ ತರಹದ ಕೃಷಿ ಉಪಕರಣಗಳಾಗಿರಬಹುದು, ಗೃಹೋಪಕರಣಗಳಾಗಿರಬಹುದು ಇಲ್ಲವೆ ಮನೆ, ಮಠ, ಮಂದಿರದಂತಹ ವಾಸ್ತುಗಳಾಗಿರಬಹುದು ಇಂಥಲ್ಲೆಲ್ಲ ಜನಪದರು ತಮ್ಮ ಸೌಂದರ್ಯ ಪ್ರಜ್ಞೆ ಮತ್ತು ಕಲಾಪ್ರತಿಭೆಯನ್ನು ಮೆರೆದಿದ್ದಾರೆ. ದ್ಯಾಮವ್ವ, ದುರಗವ್ವ, ಮರಗಮ್ಮ, ಗೌರಮ್ಮ, ಚೆಂಗಳೆವ್ವ, ಚೌಡಮ್ಮ, ಅಮೋಘಸಿದ್ಧೇಶ್ವರ ಮುಂತಾದ ಸ್ತ್ರೀ ಹಾಗೂ ಪುರುಷ ದೇವತಾ ಶಿಲ್ಪಗಳು ಹಾಗೂ ಪ್ರಾಣಿ-ಪಕ್ಷಿ ಮುಂತಾದ ವಾಹನಶಿಲ್ಪಗಳು ಜನಪದರ ದೈವೀ



ನಿಜಲಿಂಗಮ್ಮನ ಶಿಲ್ಪ ( ಕಮಲಾಪುರ )



ಹುಲಿಗೆಮ್ಮನ ಶಿಲ್ಪ ( ಕಮಲಾಪುರ )



ತೊಟ್ಟಿಲ ಶಿಲ್ಪ





ಶೀಗಮ್ಮನ ಶಿಲ್ಪಗಳು ( ಸಿಂದಗಿ )





ಮಕ್ಕಳಾಟಿಗೆ ಶಿಲ್ಪಗಳು ( ಕಿನ್ನಾಳ )



ಕಾಮಧೇನು ಶಿಲ್ಪ ( ಕಿನ್ನಾಳ )



ಜೋಡುಕುದುರೆ ಶಿಲ್ಪಗಳು ( ಗುಲಬರ್ಗಾ )




ದ್ವಾರಪಾಲಕನ ಶಿಲ್ಪ ( ಕಿನ್ನಾಳ )



ಕಿನ್ನಾಳ ಶಿಲ್ಪಗಳು.



ಕಾಮ - ರತಿ ಶಿಲ್ಪಗಳು ( ಗದಗ )



ರಾಮಲಿಂಗ ಕಾಮದೇವ ನವಲಗುಂದ

ಭಾವನೆಯಲ್ಲಿ ಹುಟ್ಟಿ ವಿಕಾಸಗೊಂಡು ಒಂದು ಸಂಸ್ಕೃತಿಯಾಗಿ ರೂಪ ತಳೆದು ಉಳಿದು ಬಂದಿವೆ. ಹೀಗೆ ರೂಪ ತಳೆದ ಶಿಲ್ಪಗಳನ್ನೇ ಹೊತ್ತು ತಿರುಗುವ ಮೂಲಕ ಹೊಟ್ಟೆ ಹೊರೆಯುವ ವೃತ್ತಿಯನ್ನು ಅನೇಕರು ಅವಲಂಭಿಸಿದ್ದಾರೆ. ಮತ್ತು ಇಂಥ ಶಿಲ್ಪಗಳನ್ನು ರಚಿಸುವ ಕಾಯಕ ಕೈಗೊಂಡ ವೃತ್ತಿಯವರೂ ವಂಶಪಾರಂಪರ್ಯವಾಗಿ ಉಳಿದು ಬೆಳೆದು ಬಂದುದು ನಿಜಕ್ಕೂ ಕುತೂಹಲದಿಂದ ಕೂಡಿದುದಾಗಿದೆ.

## ರಥ (ತೇರು) ಶಿಲ್ಪಗಳು

ರಥಗಳ ಕಲ್ಪನೆ ಪುರಾತನವಾದುದು. ಋಗ್ವೇದದಲ್ಲಿ ಅಶ್ವಿನಿ ದೇವತೆಗಳು ಹಾಗೂ ಸೂರ್ಯ ದೇವರಿಂದ ಬಳಸಲ್ಪಡುತ್ತಿದ್ದ ಉಲ್ಲೇಖವಿದೆ. ಅಶ್ವಿನಿ ದೇವತೆಗಳ ರಥ ವಿಲಕ್ಷಣವಾದುದಾಗಿದ್ದು ಈ ರಥಕ್ಕೆ ಮೂರು ದಿವ್ಯಾಶ್ವಗಳನ್ನಾಗಲಿ ಇಲ್ಲವೆ ಮೂರು ಹೇಸರಗತ್ತೆಗಳನ್ನಾಗಲಿ ಹೂಡಲಾಗುತ್ತಿತ್ತು[೧೬೦] ಎಂದು ಹೇಳಲಾಗಿದೆ.

ಸೂರ್ಯ ದೇವನ ರಥ ಒಂದೇ ಚಕ್ರವನ್ನು ಹೊಂದಿದ್ದು ಏಳು ಕುದುರೆಗಳಿಂದ ಎಳೆಯುವಂಥದ್ದು. ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳಲ್ಲಿ ಹಾಗೂ ಸಂಸ್ಕೃತ ನಾಟಕ ಹಾಗೂ ಹಳಗನ್ನಡಗಳಲ್ಲಿ ರಥಗಳ ಕುರಿತು ವಿವರಣೆಗಳು ದೊರೆಯುತ್ತವೆ. ಜಗತ್ತಿನ ಬಹುತೇಕ ಎಲ್ಲಾ ಸಂಸ್ಕೃತಿ ಹಾಗೂ ನಾಗರಿಕತೆಗಳಲ್ಲಿ ರಥಗಳಿದ್ದುದು ಕಾಣಬಹುದು. ಮೊಹೆಂಜೋದಾರೋ ಹಾಗೂ ಹರಪ್ಪ ಸಂಸ್ಕೃತಿ, ಸಿಂಧೂ ಕೊಳ್ಳದ ಸಂಸ್ಕೃತಿ, ಮೆಸಪೊಟೇಮಿಯಾ, ಗ್ರೀಕ್, ಬೆಬಿಲೋನಿಯಾ, ಅಸ್ಸೀರಿಯಾ ಮುಂತಾದ ನಾಗರಿಕತೆಗಳಲ್ಲಿಯ ರಥ ಬಳಕೆ ವಿಪುಲವಾಗಿತ್ತು. ಸಿಂಧೂ ಕೊಳ್ಳದ ಸಂಸ್ಕೃತಿ ಶೋಧದಲ್ಲಿ ದೊರೆತ ರಥದ ಗಾಲಿ ಹಾಗೂ ಪಕ್ಷಿ ರಥಗಳು, ಆಟಿಕೆ ರಥದ ಮಾದರಿಗಳು ದೊರಕಿವೆ. ಹದಿನಾಲ್ಕನೆಯ ಶತಮಾನದಲ್ಲಿ ಚೀನಾದಲ್ಲಿ ಕಂಚಿನ ರಥಗಳು ಬಳಕೆಯಲ್ಲಿದ್ದವು[೧೬೧] ಎಂದು ತಿಳಿದು ಬರುತ್ತದೆ.

ಆರಂಭದಲ್ಲಿ ಮರದಿಂದಲೇ ರಥಗಳನ್ನು ರಚಿಸಿದ್ದಿರಬೇಕು. ಕ್ರಮೇಣ ದೀರ್ಘಕಾಲ ಬಾಳಿಕೆ ಬರುವ ಲೋಹದ ರಥಗಳು ಬಳಕೆಗೆ ಬಂದಿರಬೇಕು. ಮೊದ ಮೊದಲು ಎರಡು ಚಕ್ರಗಳುಳ್ಳ ರಥಗಳು ಅಸ್ತಿತ್ವಕ್ಕೆ ಬಂದು ಕಾಲಾನಂತರ ನಾಲ್ಕು ಚಕ್ರಗಳನ್ನುಳ್ಳ ರಥಗಳು ಬಂದಿರಲು ಸಾಕು. ಹಿಂದೆ ನಮ್ಮ ಮಹಾರಾಜರು ವಿವಿಧ ಉದ್ದೇಶಗಳಿಗಾಗಿ ಹಲವಾರು ಬಗೆಯ ರಥಗಳನ್ನು ಬಳಸುತ್ತಿದ್ದರು. ಅಲ್ಲದೆ ಬೆಳ್ಳಿ, ಬಂಗಾರ ಹಾಗೂ ಮರದ ರಥಗಳನ್ನು ಮಾಡಿಸಿ ದೇವಾಲಯಕ್ಕೆ ದಾನಗಳಾಗಿ ನೀಡಿದ್ದೂ ಇದೆ. ಇಂದು ಈ ರಥಗಳನ್ನು ನಾವು ದೇವಾಲಯದಲ್ಲಿ ಉತ್ಸವದ ಪ್ರತೀಕವಾಗಿ ನೋಡಬಹುದಾಗಿದೆ. ಈ ರಥಗಳು ವಿನ್ಯಾಸದಲಿ ದೇವಾಲಯವನ್ನೇ ಹೋಲುತ್ತವೆ.

---

೧೬೦. Dr. Raju Kalidas : Temple Cars of Mediveal Tamilahim, Page No. - 7

೧೬೧. ದೃವರಾಜ ನಾ. ಗದಗಕರ : ದೇಗುಲ ರಥಶಿಲ್ಪ, ಪುಟ -೨

[illegible]

[illegible]

[illegible]

[illegible]

[illegible]

[illegible]

[illegible]

ವೈವಿಧ್ಯಮಯವಾದ ಈ ರಥ ಶಿಲ್ಪಗಳನ್ನು ಮಾಧ್ಯಮಕ್ಕನುಗುಣವಾಗಿ ಪ್ರಧಾನವಾಗಿ ಎರಡು ರೀತಿಯಲ್ಲಿ ವಿಂಗಡಿಸಬಹುದು. ೧. ಮರದ ಮಾಧ್ಯಮದ ರಥಶಿಲ್ಪಗಳು, ೨. ಲೋಹ ಮಾಧ್ಯಮದ ರಥಶಿಲ್ಪಗಳು.

**೧. ಮರದ ಮಾಧ್ಯಮದ ರಥಶಿಲ್ಪಗಳು :** ಕರ್ನಾಟಕದಲ್ಲಿ ವಿಶಾಷವಾಗಿ ಕಂಡುಬರುವ ದೇವಾಲಯದ ರಥಶಿಲ್ಪಗಳು ಮರದ ರಚನೆಗಳಲ್ಲಿ ಮುಖ್ಯವಾಗಿವೆ. ಸಾಮಾನ್ಯವಾಗಿ ಪ್ರತಿಯೊಂದು ದೇವಾಲಯ ತನ್ನದೇ ಆದ ರಥವೊಂದನ್ನು ಹೊಂದಿರುತ್ತದೆ. ವರ್ಷಕ್ಕೊಮ್ಮೆ ನಡೆಯುವ ದೇವರ ಹಬ್ಬದ ದಿನ ಇದನ್ನು ಭಕ್ತರೆಲ್ಲರೂ ಸೇರಿ ಎಳೆಯುವರು. ಕಲಶ, ಬಣ್ಣ ಬಣ್ಣದ ಬಟ್ಟೆ, ವಜ್ರ ಮತ್ತು ಅನೇಕ ಪರಿವಾರ ದೇವತೆಗಳ ಪ್ರತಿಮೆಗಳಿಂದ ಅಲಂಕೃತವಾದ ರಥದಲ್ಲಿ ದೇವರ ಉತ್ಸವಮೂರ್ತಿಯನ್ನಿಟ್ಟು ಎಳೆಯಲಾಗುವುದು. ಇದನ್ನು ರಥೋತ್ಸವ ಎಂದು ಕರೆಯುವರು. ಅಲಂಕೃತ ರಥ ಧಾವಿಸಿ ಬಂದಾಗ ದೇವಾಲಯವೇ ನಡೆದು ಬಂದಂತೆ ತೋರುತ್ತದೆ. ರಥವನ್ನು ಚಲಿಸುವ ದೇವಾಲಯವೆಂದರೂ ತಪ್ಪಲ್ಲ.

ನಮ್ಮ ಜನಪದರು ಈ ರಥವನ್ನು ತೇರು ಎಂದೇ ಕರೆಯುತ್ತಾರೆ.

ಕರ್ನಾಟಕದಲ್ಲಿ ತೇರುಗಳ ನಿರ್ಮಾಣವನ್ನು ವಿಜಯನಗರೋತ್ತರ ಕಾಲದಿಂದ ಗುರುತಿಸಲಾಗುತ್ತದೆ.[೧೬೨] ಆದರೆ ಹಂಪೆಯ ವಿಜಯ ವಿಠಲ ದೇವಾಲಯದ ಕಲ್ಲಿನ ರಥವನ್ನು ಗಮನಿಸಿದಾಗ ತೇರುಗಳ ನಿರ್ಮಾಣವನ್ನು ವಿಜಯನಗರ ಪೂರ್ವರಿಂದಲೂ ಗುರುತಿಸಬಹುದಾಗಿದೆ.

ಈ ತೇರುಗಳನ್ನು ಶೈಲಿಗನುಗುಣವಾಗಿ ಹೀಗೆ ವಿಂಗಡಿಸುತ್ತಾರೆ. ಚತುರಸ್ರಾಕಾರವಾಗಿದ್ದರೆ ನಾಗರ, ಅಷ್ಟಭುಜಾಕೃತಿಯಲ್ಲಿದ್ದರೆ ದ್ರಾವಿಡ, ಷಡ್‌ಭುಜಾಕೃತಿಯಲ್ಲಿದ್ದರೆ ಆಂದ್ರ ಮತ್ತು ವೃತ್ತಾಕಾರವಾಗಿದ್ದರೆ ವೇಸರ[೧೬೩] ವೆಂದು ಗುರುತಿಸಲಾಗುತ್ತದೆ. ಈ ತೇರುಗಳನ್ನು ಹೊನ್ನೆ, ನಂದಿ, ಮತ್ತಿ, ಸಾಗುವಾನಿ ಮತ್ತು ಬೇವಿನ ಮರಗಳಿಂದ ನಿರ್ಮಿಸಲಾಗಿದೆ. ಸಾಮಾನ್ಯವಾಗಿ ತೇರು ನಾಲ್ಕು ಚಕ್ರ, ಆರು ಚಕ್ರಗಳನ್ನು ಹೊಂದಿದವುಗಳನ್ನು ಕಾಣುತ್ತೇವೆ. ಈ ಚಕ್ರಗಳು ಕೆಲವೆಡೆ ಮರದವುಗಳಾಗಿದ್ದರೆ ಇನ್ನೂ ಕೆಲವೆಡೆ ಕಲ್ಲಿನವುಗಳಾಗಿವೆ. ಇಡೀ ತೇರಿನ ಭಾರ ಚಕ್ರ ಹಾಗೂ ಅದಕ್ಕೆ ಜೋಡಿಸಲಾಗಿರುವ ಚಚ್ಚೌಕದ ಎರಡು ತೊಲೆಗಳ ಮೇಲಿರುತ್ತದೆ. ಈ ತೊಲೆಗಳಿಗೆ ಅಚ್ಚು ಎಂದು ಕರೆಯುತ್ತಾರೆ.

ಕರ್ನಾಟಕದಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ತೇರಿನ ಶಿಲ್ಪ ಪ್ರಧಾನವಾಗಿ ಬೆಳೆದು, ಉಳಿದು ಬಂದಿದೆ. ಇಲ್ಲಿನ ದೇವಾಲಯಗಳು ವೈವಿಧ್ಯಮಯವಾದ ತೇರುಗಳನ್ನು ಹೊಂದಿವೆ. ತೇರಿನ ಸ್ವರೂಪ, ಗಾತ್ರ, ಲಕ್ಷಣಗಳನ್ನು ಆಧರಿಸಿ ಏಳು ವಿಧದಿಂದ ತೇರುಗಳನ್ನು ವರ್ಗೀಕರಿಸಿ ಹೇಳಬಹುದಾಗಿದೆ. ಅವುಗಳೆಂದರೆ, ಗಡ್ಡಿಯ ತೇರು, ಕಟ್ಟುವ ತೇರು, ತಟ್ಟೆಯ ತೇರು, ಹೂವಿನ ತೇರು, ದೊಡ್ಡ ತೇರು, ಚಿಕ್ಕ

---

೧೬೨. ಡಾ. ಸಿ. ಮಹದೇವ : ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ಪುಟ -೩೦,೩೧
೧೬೩. ..... ಅದೇ ....., ಪುಟ - ೩೨

ತೇರು ಹಾಗೂ ತೆಪ್ಪದ ತೇರು ಇತ್ಯಾದಿ.

**ಗಡ್ಡಿಯ ತೇರು :** ಕರ್ನಾಟಕದ ಹಲವಾರು ದೇವಾಲಯಗಳಲ್ಲಿ ಗಡ್ಡಿ ತೇರಿನ ಬಳಕೆ ವಿಪುಲ ಸಂಖ್ಯೆಯಲ್ಲಿ ನೋಡಬಹುದಾಗಿದೆ. ಈ ತೇರು ಶಾಶ್ವತ ಸ್ವರೂಪದ ಅಖಂಡವಾದ ಗಡ್ಡಿಯನ್ನು ಹೊಂದಿರುವುದರಿಂದ ಗಡ್ಡಿಯ ತೇರೆಂದು ಪ್ರಸಿದ್ಧಿ ಹೊಂದಿದೆ. ಈ ತೇರನ್ನು ಉತ್ಸವದ ಸಂದರ್ಭದಲ್ಲಿ ಸಿಂಗಾರಗೊಳಿಸಲಾಗಿರುತ್ತದೆ. ಈ ತೇರುಗಳು (ಸಾಂಪ್ರದಾಯಿಕ) ಚೌಕು, ವರ್ತುಳ, ಅಷ್ಟಮ, ದ್ವಾದಶ, ಕಮಲ, ಲಕ್ಷತ್ರ ಹಾಗೂ ಬಹುಕೋನಗಳ ವಿನ್ಯಾಸಗಳಲ್ಲಿ ನಿರ್ಮಾಣಗೊಳ್ಳುತ್ತವೆ. ಪ್ರದೇಶಕ್ಕನುಗುಣವಾಗಿ ಭಿನ್ನವಾಗಿರುತ್ತವೆ.

**ಕಟ್ಟುವ ತೇರು :** ನಾಡಿನ ಹಲವಾರು ಭಾಗಗಳಲ್ಲಿ ಜಾತ್ರೆ ಸಮಯದಲ್ಲಿ ಈ ತರಹದ ತೇರುಗಳನ್ನು ಕಟ್ಟಿ ನಿರ್ಮಿಸುವುದುಂಟು. ಪ್ರತಿ ಭಾರಿಯೂ ಜಾತ್ರೆಗೆಂದು ಹೊಸ ತೇರನ್ನು ಕಟ್ಟುವುದರಿಂದ ಈ ತೇರಿಗೆ ಕಟ್ಟುವ ತೇರೆಂದು ಹೆಸರು ಬಂದಿದೆ. ಗ್ರಾಮೀಣ ಭಾಗದಲ್ಲಿ ದೊರೆಯುವ ಕಟ್ಟಿಗೆ, ಬಿದಿರು, ಹಳಿಬಂಡಿ ಗಾಲಿ, ದಿಮ್ಮೆ ಹಾಗೂ ಎಳೆಗಳನ್ನು ಬಳಸಿ ಗ್ರಾಮೀಣ ಬಡಗಿಯರೇ ಈ ತೇರನ್ನು ನಿರ್ಮಿಸುವುದುಂಟು. ಈ ತೇರು ಅನೇಕ ಅಂತಸ್ತುಗಳಿಂದ ಕೂಡಿರುತ್ತದೆ. ಅಂತಸ್ತುಗಳನ್ನು ಅಂಕಣಗಳು ಎಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಐದು, ಏಳು, ಒಂಭತ್ತು ಹಾಗೂ ಹನ್ನೆರಡು ಅಂತಸ್ತಿನವರೆಗೂ ಈ ತೇರುಗಳು ನಿರ್ಮಾಣವಾಗಿರುತ್ತವೆ. ಈ ತೇರನ್ನು ಮೂರು ಭಾಗಗಳಿಂದ ವಿಂಗಡಿಸಬಹುದಾಗಿದೆ. ಕೆಳಭಾಗ, ಮಂಟಪದ ಭಾಗ ಹಾಗೂ ಗೋಪುರದ ಭಾಗ. ಮಂಟಪದ ಭಾಗವನ್ನು ಕಲಾತ್ಮಕ ಕಂಬಗಳು ಹಾಗೂ ಸುಂದರ ಕಮಾನುಗಳಿಂದ ನಿರ್ಮಿಸಿರುತ್ತಾರೆ. ಗೋಪುರದ ತುದಿಯಲ್ಲಿ ಶಿಖರ ಹಾಗೂ ಲೋಹದ ಕಳಸವನ್ನು ಕೂಡಿಸುತ್ತಾರೆ. ಈ ಕಟ್ಟುವ ತೇರುಗಳು ತಾತ್ಕಾಲಿಕ ಸ್ವರೂಪದವುಗಳಾಗಿರುತ್ತವೆ.

**ತಟ್ಟೆಯ ತೇರು :** ಈ ತೇರುಗಳು ಬಿದಿರಿನ ತಟ್ಟೆ (ಚಾಪೆ) ಯಿಂದ ನಿರ್ಮಾಣಗೊಳ್ಳುವುದರಿಂದ ತಟ್ಟೆಯ ತೇರೆಂದು ಹೆಸರು ಬಂದಿದೆ. ಕರ್ನಾಟಕದ ಉತ್ತರಕನ್ನಡ ಹಾಗೂ ದಕ್ಷಿಣಕನ್ನಡ ಜಿಲ್ಲೆಯ ಹಲವಾರು ದೇವಾಲಯಗಳಲ್ಲಿ ಉತ್ಸವದ ಸಮಯದಲ್ಲಿ ಇಂಥ ತೇರುಗಳು ಬಳಕೆ ಮಾಡುತ್ತಾರೆ.[೧೬೪] ತಟ್ಟೆಯ ತೇರಿನ ಅಡಿಪಾಯವು ಚೌಕಾಕಾರವಿದ್ದು ಈ ಭಾಗವು ಗಾಲಿ, ಅಚ್ಚು, ಓಟಿ ಹಾಗೂ ಅದರ ಮೇಲೆ ಆಧಾರ ತೊಲೆಗಳನ್ನು ಹೊಂದಿರುತ್ತವೆ. ಈ ತಟ್ಟೆಯ ತೇರಿನ ಹೊರಮೈ ಮೇಲೆ ಕಲಾತ್ಮಕವಾಗಿ ಪೌರಾಣಿಕ ಸನ್ನಿವೇಶಗಳನ್ನು ಚಿತ್ರಿಸಿರುತ್ತಾರೆ. ತೇರು ಐದು, ಏಳು, ಒಂಭತ್ತು ಹಾಗೂ ಹನ್ನೆರಡು ಅಂತಸ್ತುಗಳವರೆಗೂ ಏರುತ್ತದೆ.

**ಹೂವಿನ ತೇರು :** ದೇವಾಲಯಗಳಲ್ಲಿ ಬಳಸುವ ತೇರುಗಳಲ್ಲಿಯೇ ಈ ತೇರು ವಿಶಿಷ್ಟ ಬಗೆಯದು. ಈ ತೇರಿನಲ್ಲಿ ಪ್ರಧಾನವಾಗಿ ಪುಷ್ಪಾಲಂಕಾರದ ಚೆಲುವನ್ನು ಕಾಣಬಹುದಾಗಿದೆ.

---

೧೬೪. ದೃವರಾಜ ನಾ. ಗದಗಕರ : ದೇಗುಲ ರಥಶಿಲ್ಪ, ಪುಟ -೬೭

[illegible]

ಪುಷ್ಪಗಳೊಂದಿಗೆ ಬಾಳೆಯ ದಿಂಡು ಹಾಗೂ ಮುಳ್ಳುಗಳನ್ನು ಈ ತೇರಿನ ರಚನೆಯಲ್ಲಿ ಹೆಚ್ಚಾಗಿ ಬಳಸುತ್ತಾರೆ. ತೇರಿನಲ್ಲಿ ಬಾಳೆಯ ದಿಂಡಿಗೆ ಚುಚಲಾಗಿರುವ ಎಲ್ಲಾ ಮುಳ್ಳುಗಳಿಗೂ ಸುಂದರ ಹೂಗಳನ್ನು ಚುಚ್ಚುತ್ತಾ ಹೋಗುತ್ತಾರೆ. ಈ ತೇರುಗಳು ನಯ, ನಾಜೂಕುಗಳಿಂದ ಕೂಡಿ ಕಣ್ಮನ ತಣಿಸುತ್ತವೆ.

**ದೊಡ್ಡ ತೇರು :** ದೊಡ್ಡ ತೇರನ್ನು ದೇವಾಲಯದ ಪರ್ವ ಕಾಲದಲ್ಲಿ ಉತ್ಸವದ ಸಂದರ್ಭದಲ್ಲಿ ಎಳೆಯುವರು. ಈ ದೊಡ್ಡ ತೇರಿನ ಗಾತ್ರ ಇಪ್ಪತ್ತು ಅಡಿಯಿಂದ ಒಂಭತ್ತು ಅಡಿಯವರೆಗೂ ಇರುತ್ತವೆ. ಉತ್ಸವದ ಕಾಲಕ್ಕೆ ಈ ತೇರಿನ ಮೇಲೆ ಅಂತಸ್ತುಗಳಿಂದ ಗೋಪುರವನ್ನು ನಿರ್ಮಿಸಿ ಅಲಂಕಾರಗೊಳಿಸುತ್ತಾರೆ. ದೇವಾಲಯದ ತೇರುಗಳಲ್ಲೇ ಬೃಹತ್ ಗಾತ್ರವನ್ನು ಈ ತೇರುಗಳು ಹೊಂದಿರುವುದರಿಂದ ದೊಡ್ಡ ತೇರು ಎಂದು ಈ ತೇರುಗಳಿಗೆ ಹೆಸರು ಬಂದಿದೆ.

**ಚಿಕ್ಕ ತೇರು :** ಗಾತ್ರದಲ್ಲಿ ಚಿಕ್ಕದಾಗಿರುವ ತೇರು ಚಿಕ್ಕ ತೇರು. ದೇವಾಲಯದ ಪ್ರಾಂಗಣದಲ್ಲಿ ಭಕ್ತರ ಅಪೇಕ್ಷೆಯ ಮೇರೆಗೆ ಈ ತೇರನ್ನು ಎಳೆಯಲಾಗುತ್ತದೆ. ಗಾತ್ರದಲ್ಲಿ ಈ ತೇರು ಐದು ಅಡಿಯಿಂದ ಹದಿನೈದು ಅಡಿಯವರೆಗೂ ಇರುತ್ತದೆ. ಸದಾ ಕಾಲ ಸಾಲಂಕೃತ ಸ್ಥಿತಿಯಲ್ಲಿರುವ ಈ ತೇರು ಚಿಕ್ಕದಾದರೂ, ದೊಡ್ಡತೇರಿನ ಪ್ರತಿಬಿಂಬವೇ ಆಗಿರುತ್ತದೆ. ದೊಡ್ಡ ತೇರಿನ ಎಲ್ಲಾ ಅಂಗಗಳನ್ನು ಈ ಚಿಕ್ಕ ತೇರು ಹೊಂದಿರುತ್ತದೆ.

## ತೇರು ಶಿಲ್ಪದ ಸ್ವರೂಪ

ಕರ್ನಾಟಕವನ್ನಾಳಿದ ವಿವಿಧ ಅರಸು ಮನೆತನದವರು, ಪಾಳೆಗಾರರು, ಸಾಮಂತರು ಮುಂತಾದವರು ತಮ್ಮ ಆಳ್ವಿಕೆಯಲ್ಲಿ ದೇವಾಲಯಗಳನ್ನು ನಿರ್ಮಿಸಿರುವಂತೆ ತೇರುಗಳನ್ನೂ ನಿರ್ಮಿಸಿ ಪೋಷಿಸಿಕೊಂಡು ಬಂದಿರುವರು. ಸುಮಾರು ಐದು ಅಡಿಯಿಂದ ಹಿಡಿದು ಒಂದು ನೂರು ಅಡಿಗೂ ಮಿಕ್ಕಿ ದೊಡ್ಡದಾಗಿರುವ ತೇರುಗಳನ್ನು ಕರ್ನಾಟಕದಲ್ಲಿ ಇಂದು ನೋಡಲು ಸಿಗುತ್ತವೆ. ಈ ತೇರುಗಳು ಚಿಕ್ಕದಾಗಿರಬಹುದು, ಇಲ್ಲವೆ ದೊಡ್ಡ ಗಾತ್ರದವುಗಳೇ ಆಗಿರಬಹುದು, ಆದರೆ ಅವುಗಳ ಸೌಂದರ್ಯ ಆ ತೇರುಗಳ ಆಕಾರಕ್ಕೆ ತಕ್ಕಂತಿರುತ್ತವೆ. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಕಂಡುಬರುವ ತೇರಿನ ಅಡಿಯಿಂದ ಮುಡಿಯವರೆಗೂ ಮೂರ್ತಿಶಿಲ್ಪಗಳು ಹಾಗೂ ನಕ್ಷೆಯ ಕೆತ್ತನೆಗಳಿಂದ ಅಲಂಕೃತಗೊಂಡಿವೆ. ಈ ಬಗೆಯ ಶಿಲ್ಪ ಕೆತ್ತನೆಯು ಮರದ ಮಾಧ್ಯಮದ ತೇರುಗಳಲ್ಲೇ ಹೆಚ್ಚಾಗಿ ಕಾಣಬಹುದು.

ಕೇವಲ ಕಂಬಗಳನ್ನು ಅಳವಡಿಸಿರುವ ತೇರುಗಳಲ್ಲಿ ಯಾವುದೇ ಉಬ್ಬು ಶಿಲ್ಪಗಳ ರಚನೆಗೆ ಸ್ಥಳಾವಕಾಶವಿರುವುದಿಲ್ಲ. ಇದು ಸರಳ ರಚನೆಯಾಗಿರುತ್ತದೆ. ಸಾಮಾನ್ಯವಾಗಿ ತೇರುಗಳನ್ನು ಮೂರನೆಯ ಹಂತದವರೆಗೆ ಕ್ರಮವಾಗಿ ವಿಸ್ತೃತಗೊಂಡಂತೆಯೂ, ನಾಲ್ಕು ಮತ್ತು ಐದನೆಯ ಹಂತಗಳು ಕ್ರಮೇಣ ಕಿರಿದಾದಂತೆಯೂ ರಚಿಸಲಾಗಿರುತ್ತದೆ. ತೇರಿನ ಶಿಲ್ಪಗಳಲ್ಲಿ ದೇವತೆಗಳು, ಪ್ರಾಣಿಗಳು, ಕುಸ್ತಿ ಪಟುಗಳು, ಮಿಥುನ ಶಿಲ್ಪಗಳು ಮತ್ತಿ ಜಾನಪದ ನೃತ್ಯಗಾರರು ಮುಂತಾದ ಉಬ್ಬು ಹಾಗೂ ದುಂಡು ಮಾದರಿಯ



[illegible] ತೇರು
(ಬಳ್ಳಾರಿ)



[illegible] ತೇರು ([illegible]



[illegible] ತೇರು ([illegible]).



[illegible] - ತೇರು [illegible]
[illegible]

ಶಿಲ್ಪಗಳನ್ನು ರಚಿಸಲಾಗಿರುತ್ತದೆ. ನಿಂತ ಸಿಂಹಗಳ ಶಿಲ್ಪಗಳನ್ನು ಹೆಚ್ಚೂ ಕಡಿಮೆ ಎಲ್ಲ ತೇರುಗಳಲ್ಲೂ ಕಾಣಬಹುದು. ಗಣೇಶ, ಕಾಳಿ, ಮಹಿಶಮರ್ಧಿನಿ, ಸರಸ್ವತಿ, ಲಕ್ಷ್ಮೀ, ಕಾರ್ತಿಕೇಯ, ಸಪ್ತ ಮಾತೃಯರು, ಗಾಯತ್ರಿ, ವಿಷ್ಣು, ಭೈರವ, ಕಾಮದೇನಿ ಮುಂತಾದ ದೇವತೆಗಳ ಉಬ್ಬು ಪ್ರತಿಮೆಗಳನ್ನು ಮೊದಲ ಮತ್ತು ಎರಡನೆಯ ಹಂತಗಳಲ್ಲಿ ರಚಿಸಲಾಗಿರುತ್ತದೆ. ಸಾಮಾನ್ಯವಾಗಿ ಮೂರನೆಯ ಹಂತದಲ್ಲಿ ಅಷ್ಟದಿಕ್ಪಾಲಕರ, ದಶಾವತಾರದ ಮತ್ತು ಮಿಥುನ ಶಿಲ್ಪಗಳನ್ನು ಬಿಡಿಸಲಾಗಿದೆ. ಇತ್ತೀಚೆಗೆ ನಿರ್ಮಾಣವಾದ ಹಂಪೆಯ ಚಂದ್ರಮೌಳೀಶವರ ತೇರಿನಲ್ಲಿ ವಿದ್ಯಾರಣ್ಯರ ಜೀವನ ಮತ್ತು ಸಾಧನೆಗಳನ್ನು ಉಬ್ಬುಶಿಲ್ಪದಲ್ಲಿ ಬಿಡಿಸಲಾಗಿದೆ.[೧೬೫] ಕರ್ನಾಟಕದ ಬಹುತೇಕ ತೇರಿನ ಶಿಲ್ಪಗಳಲ್ಲಿ ದೇವಾಲಯ ವಾಸ್ತುಗಳಲ್ಲಿರುವಂತೆ ಮಿಥುನ ಶಿಲ್ಪಗಳಿರುವುದು ಗಮನಾರ್ಹವಾಗಿದೆ. ತೇರಿನ ಚಕ್ರಗಳು ಸಾಮಾನ್ಯವಾಗಿ ಮೂರರಿಂದ ಒಂಭತ್ತು ಅಡಿಯವರೆಗೂ ಎತ್ತರ ಹೊಂದಿರುತ್ತವೆ.

ಗ್ರಾಮ ದೇವತೆಗಳಿಗಾಗಿ ರಚನೆಗೊಂಡಿರುವ ತೇರುಗಳು ತುಂಬ ಸರಳವಾಗಿರುತ್ತವೆ. ಉತ್ಸವದ ಸಂದರ್ಭದಲ್ಲಿ ಎಳೆಯಲಾಗುವ ಈ ತೇರುಗಳನ್ನು ಉತ್ಸವದ ನಂತರ ಅವುಗಳ ಕೆಲವು ಭಾಗಗಳನ್ನು ಬಿಚ್ಚಿ ಇಡಲಾಗುತ್ತದೆ. ಆಂಜನೇಯ, ಊರಮ್ಮ, ದುರ್ಗಮ್ಮ ಮುಂತಾದ ದೇವತೆಗಳ ಜಾತ್ರೆಗಳಲ್ಲಿ ಇಂಥ ಸರಳ ರಚನೆಯ ತೇರುಗಳು ಸಿಂಗರಿಸಲ್ಪಟ್ಟಿರುತ್ತವೆ.

## ಕೆಲವು ಪ್ರಮುಖ ತೇರು ಶಿಲ್ಪಗಳು

ಹೊಸಪೇಟೆ ತಾಲೂಕಿನ ಮರಿಯಮ್ಮನ ಹಳ್ಳಿಯಲ್ಲಿರುವ ಆಂಜನೇಯ ದೇವಾಲಯದ ಎರಡು ತೇರುಗಳು ವೃತ್ತಾಕಾರದಲ್ಲಿದ್ದು ವೇಸರ ಶೈಲಿಯಲ್ಲಿವೆ. ನಂದಿಬೇವೂರಿನ ತೇರು ಹಾಗೂ ಹಂಪೆಯ ಚಂದ್ರಮೌಳೇಶ್ವರನ ತೇರು ಶಿಲ್ಪ ಅಷ್ಟಮುಖಾಕೃತಿಯಲ್ಲಿದ್ದು ದ್ರಾವಿಡ ಶೈಲಿಯವುಗಳಾಗಿವೆ. ಕೊಟ್ಟೂರಿನ ಬಸವೇಶ್ವರ ಸ್ವಾಮಿಯ ತೇರು ಅಷ್ಟವಾಕೃತಿಯಲ್ಲಿದ್ದರೆ, ಹಂಪೆಯ ದೊಡ್ಡ ತೇರು ಚೌಕಾಕೃತಿಯಲ್ಲಿದೆ.[೧೬೬]

ಬಾದಾಮಿ ಬನಶಂಕರಿಯ(ಜಿ. ಬಾಗಲಕೋಟೆ) ತೇರು ಶಿಲ್ಪವು ತಳಭಾಗದಲ್ಲಿ ಚೌಕಾಕಾರವಾಗಿದ್ದು ಮೇಲಿನ ಭಾಗ ವೃತ್ತಾಕಾರವಾಗಿದೆ. ಗೋಲಗೇರಿಯ ಶ್ರೀ ಗೊಲ್ಲಾಳೇಶ್ವರನ ತೇರು ಶಿಲ್ಪವು (ತಾ. ಸಿಂದಗಿ, ಜಿ. ಬಿಜಾಪುರ) ಬನಶಂಕರಿಯ ತೇರು ಶಿಲ್ಪವನ್ನೇ ಹೋಲುತ್ತದೆ. ಆದರೆ ಆಕಾರದಲ್ಲಿ ಈ ತೇರಿಗಿಂತಲೂ ದೊಡ್ಡದಾಗಿದ್ದು ಇಡೀ ತಾಲೂಕಿನಲ್ಲೇ ಎತ್ತರವಾದ ತೇರು ಶಿಲ್ಪವಾಗಿದೆ. ಗುಲಬರ್ಗಾದ ಶ್ರೀ ಶರಣ ಬಸವೇಶ್ವರರ ತೇರು ಚತಸ್ರಾಕಾರದಲ್ಲಿದ್ದು ಎತ್ತರವಾಗಿದೆ. ಜೇರಟಗಿಯ (ತಾ. ಜೇವರ್ಗಿ, ಜಿ. ಗುಲಬರ್ಗಾ) ತೇರಿನ ಶಿಲ್ಪವೂ ಅಷ್ಟವಾಕೃತಿಯಲ್ಲಿದ್ದು ಸುಂದರವಾಗಿದೆ.

---

೧೬೫. ಡಾ. ಸಿ. ಮಹದೇವ : ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ಪುಟ -೩೩
೧೬೬. ..... ಅದೇ .....

[illegible]

[illegible]

[illegible]

[illegible]

ಗುಲಗರ್ಗಾದ ರಾಘವೇಂದ್ರ ಮಠದಲ್ಲಿರುವ ಸಣ್ಣ ತೇರೂ ಅಷ್ಟಮಾಕೃತಿಯಲ್ಲಿದ್ದು ಸುಂದರ ರಚನೆಯಾಗಿದೆ. ದೇವಲಗಾಣಗಾಪುರದ (ತಾ.ಜಿ. ಗುಲಬರ್ಗಾ) ದತ್ತಾತ್ರೆಯನ ತೇರು ಷಡ್ಬುಜಾಕೃತಿಯಲ್ಲಿದ್ದು ಲೋಹದ ಗಾಲಿಗಳನ್ನು ಹೊಂದಿದೆ. ಮಾಗಣಗೇರಿಯ (ತಾ. ಜೇವರ್ಗಿ, ಜಿ. ಗುಲಬರ್ಗಾ) ಚರಂತೆಪ್ಪನ ತೇರಿನ ಕೆಳಗಿನ ಎರಡು ಅಂತಸ್ತುಗಳು ಚತುಸ್ರಾಕಾರವಾಗಿದ್ದು ಮೇಲಿಂದ ಮೂರು ಅಂತಸ್ತುಗಳು ಅಷ್ಟಮಾಕೃತಿಯಲ್ಲಿವೆ. ಉಜ್ಜನಿಯ (ತಾ. ಕೂಡ್ಲಿಗಿ, ಜಿ. ಬಳ್ಳಾರಿ) ಬಸವೇಶವರ ತೇರು ವೃತ್ತಾಕಾರದಲ್ಲಿದ್ದು ದೊಡ್ಡದಾಗಿದೆ. ಬಳ್ಳಾರಿಯ ಬಳ್ಳೇಶವರನ ತೇರು ವೃತ್ತಾಕಾರವಾಗಿದ್ದು, ಕಂಬಗಳಿಂದಾವೃತವಾಗಿದ್ದಾಗಿದೆ. ಹೀಗೆ ಮರದ ಮಾಧ್ಯಮದ ತೇರು ಶಿಲ್ಪಗಳು ವೈವಿಧ್ಯಮಯವಾಗಿದ್ದು ನಮ್ಮ ಜನಪದರ ಸೌಂದರ್ಯ ಮತ್ತು ಧಾರ್ಮಿಕ ಪ್ರಜ್ಞೆಯ ದ್ಯೋತಕವಾಗಿವೆ.

ಹೆಸರಿಸಬಹುದಾದ ಇನ್ನೂ ಕೆಲವು ತೇರು ಶಿಲ್ಪಗಳೆಂದರೆ ಚೊಳಚಗುಡ್ಡದ ಶ್ರೀ ವೀರಭದ್ರನ ತೇರು (ತಾ. ಬಾದಾಮಿ, ಜಿ. ಬಾಗಲಕೋಟ), ಸೊಂಡೂರಿನ(ಜಿ. ಬಳ್ಳಾರಿ) ಹತ್ತಿರದ ನರಸಿಂಹ ಸ್ವಾಮಿಯ ತೇರು, ಕಿನ್ನಾಳದ ಬನಶಂಕರಿ ತೇರು (ಜಿ. ಕೊಪ್ಪಳ), ಸುಲ್ತಾನಪುರದ ಬಸವೇಶ್ವರ ತೇರು (ತಾ. ಹುಕ್ಕೇರಿ, ಜಿ. ಬೆಳಗಾವಿ), ಕನಕಗಿರಿಯ ಕನಕಾಚಲಪತಿಯ ತೇರು (ತಾ. ಗಂಗಾವತಿ, ಜಿ. ಕೊಪ್ಪಳ), ಹುಬ್ಬಳ್ಳಿಯ ಸಿದ್ಧಾರೂಢನ ತೇರು (ಜಿ. ಧಾರವಾಡ), ಕುಂದರಗಿ ಮತ್ತು ಅಂಕಲಗಿಯ ಅಡವಿಸಿದ್ಧೇಶ್ವರನ ತೇರು (ತಾ. ಗೋಕಾಕ, ಜಿ. ಬೆಳಗಾವಿ), ಇಂಚಲದ ಶಿವಾನಂದ ಮಠದ ತೇರು (ತಾ. ಸೌಂದತ್ತಿ, ಜಿ. ಬೆಳಗಾವಿ), ಹಲಕುರ್ಕಿಯ ಶ್ರೀ ದಿಂಗಬರೇಶ್ವರ ತೇರು (ತಾ. ಜಿ. ಬಾಗಲಕೋಟ), ಧಾರವಾಡ ಶ್ರೀ ಮುರಗಾಮಠದ ತೇರು, ಹುಮನಾಬಾದದ ವೀರಭದ್ರೇಶ್ವರನ ತೇರು (ಜಿ. ಬೀದರ), ಕಲಕೇರಿಯ ತೇರು (ತಾ. ಸಿಂದಗಿ, ಜಿ. ಬಿಜಾಪುರ), ನೆಲೋಗಿಯ ಹನುಮಂತ ದೇವರ ತೇರು (ತಾ. ಜೇವರ್ಗಿ, ಜಿ. ಗುಲಬರ್ಗಾ) ಹಾರಕೋಡದ ಶ್ರೀ ಚೆನ್ನಬಸವೇಶ್ವರರ ತೇರು ಶಿಲ್ಪ(ತಾ. ಬಸವಕಲ್ಯಾಣ, ಜಿ. ಬೀದರ) ಮುಂತಾದ ತೇರು ಶಿಲ್ಪಗಳು ಉಲ್ಲೇಖಾರ್ಹವಾದವುಗಳಾಗಿವೆ.

[illegible]

[illegible]

ಅಧ್ಯಾಯ : ಐದು

# ಶಿಲಾ ಮಾಧ್ಯಮದ ಜನಪದ ಶಿಲ್ಪಕಲೆ

[illegible]

[illegible]

ಬಹು ಪ್ರಾಚೀನ ಕಾಲದಿಂದಲೂ ಶಿಲ್ಪಕಲಾ ಸೃಷ್ಟಿಗೆ ಪ್ರಧಾನವಾಗಿ ಶಿಲೆ ( Stone ) ಬಳಕೆಗೊಂಡಿದೆ. ಹಳೆಯ ಶಿಲಾಯುಗದಲ್ಲೇ ಬಂಡೆಗಳ ಮೇಲೆ ಮೂಡಿ ಬಂದ ಪ್ರಾಣಿಗಳ ಕೆತ್ತನೆ ಶಿಲ್ಪಗಳು ಉಳಿದು ಬಂದಿವೆ.[೧] ಈ ಶಿಲ್ಪಾವಶೇಷಗಳು ಶಿಲ್ಪ ಕೆತ್ತನೆಗೆ ಶಿಲೆಯು ಮಾಧ್ಯಮವಾಗಿ ಬಳಕೆಯಾದುದರ ಪ್ರಾಚೀನತೆಯ ಬಗೆಗೆ ಸಾಕ್ಷಿಯನ್ನೊದಗಿಸುತ್ತವೆ. ಸೈಂಧವ ಸಂಸ್ಕೃತಿಯ ಶೋಧದಲ್ಲಿ ಸುಣ್ಣದಕಲ್ಲು, ಬಳಪದ ಕಲ್ಲುಗಳಲ್ಲಿ ಮಾಡಿದ ಮೂರ್ತಿಶಿಲ್ಪಗಳು, ಆಟಿಕೆ ಶಿಲ್ಪಗಳು ದೊರೆತಿವೆ.[೨] ಜಗತ್ತಿನ ಪ್ರಾಚೀನ ಈಜಿಪ್ಟ್, ಗ್ರೀಕ್ ಮುಂತಾದ ಸಂಸ್ಕೃತಿಗಳು ಶಿಲ್ಪರಚನೆಯಲ್ಲಿ ಶಿಲಾ ಮಾಧ್ಯಮಕ್ಕೇ ಹೆಚ್ಚಿನ ಆಧ್ಯತೆ ನೀಡಿರುವದು ಕಂಡುಬರುತ್ತದೆ. ನಮ್ಮ ದೇಶದಲ್ಲೂ ಸೈಂಧವ ಸಂಸ್ಕೃತಿಯ ಹರವಿನಲ್ಲೇ ಶಿಲಾ ಶಿಲ್ಪಗಳು ದೊರೆತಿವೆ. ಮೆಹೆನ್‌ಜೋದಾರೋವಿನಲ್ಲಿ ದೊರೆತ ಸಣ್ಣ ಪ್ರಮಾಣದ ಸುಣ್ಣದ ಕಲ್ಲಿನ ಶಿಲ್ಪಗಳು ಇದಕ್ಕೆ ಉದಾಹರಣೆಯಾಗಿವೆ. ಪ್ರಾಚೀನ ಗ್ರಂಥಗಳಲ್ಲಿ ಶಿಲಾ ಶಿಲ್ಪದ ಉಲ್ಲೇಖ ಸ್ಪಷ್ಟವಾಗಿದ್ದರೂ ಅಶೋಕನ ಕಾಲದಲ್ಲೇ ಶಿಲ್ಪ ಕೃತಿಗಳು ದೊರೆಯುವುವೆಂಬುದನ್ನು ಗಮನಿಸಬೇಕು. ಇವುಗಳೆಲ್ಲ ಮರಳುಗಲ್ಲಿನಲ್ಲಿವೆ. ಈ ಎಲ್ಲ ಉಲ್ಲೇಖಗಳ ಹಿನ್ನೆಲೆಯಲ್ಲಿ ಭಾರತದಲ್ಲಿನ ಶಿಲಾಶಿಲ್ಪದ ಪ್ರಾಚೀನತೆಯನ್ನು ತಿಳಿಯಬಹುದಾಗಿದೆ. ಕ್ರಿಸ್ತಾಬ್ಧದ ಅನಂತರ ಭಾರತೀಯ ಶಿಲ್ಪವು ಶಿಲೆಯಲ್ಲಿ ಶ್ರೀಮಂತವಾಗಿ ಅರಳಿ ನಿಂತದ್ದನ್ನು ಕಾಣುತ್ತೇವೆ. ಶಿಲ್ಪಕ್ಕೆ ಮರ ಮತ್ತಿತರ ಮಾಧ್ಯಮಗಳಿಗಿಂತಲೂ ಹೆಚ್ಚು ಅನುಕೂಲವೆನಿಸಿದ, ಸ್ವಾರಸ್ಯವೆನಿಸಿದ ಮಾಧ್ಯಮವೆಂದರೇನೇ ಶಿಲೆ. ಮೈಕೆಲ್ ಎಂಜೆಲೋನ ಪ್ರಕಾರ ದಿಟವಾದ ಶಿಲ್ಪವೆಂದರೆ ಅದು ಕೆತ್ತನೆಯಿಂದ ರೂಪಗೊಂಡದ್ದು, ಅದೂ ಶಿಲೆಯಲ್ಲಿ ಕಂಡರಿಸಿರುವದು.[೩] ಈ ಎಲ್ಲ ಅಂಶಗಳು ಶಿಲ್ಪ ಕೆತ್ತನೆಯಲ್ಲಿ ಶಿಲಾ ಮಾಧ್ಯಮಕ್ಕಿರುವ ಮಹತ್ವವನ್ನು ತಿಳಿಸುತ್ತವೆ. ಇಂದಿಗೂ ಕೂಡ ಶಿಲ್ಪ ಕೆತ್ತನೆಗೆ ಶಿಲೆ ಪ್ರಮುಖ ಮಾಧ್ಯಮವಾಗಿ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ.

ಶಿಲೆಯಲ್ಲಿ ಹಲವಾರು ಬಗೆಗಳಿವೆ. ಆದರೆ ಶಿಲ್ಪ ಕೆತ್ತನೆಗೆ ಬಳಸುವ ಶಿಲೆಗಳನ್ನು ಸಾಮಾನ್ಯ ಶಿಲೆ, ಮರಳು ಶಿಲೆ, ಬಳಪ ಶಿಲೆ, ಅಮೃತ ಶಿಲೆ[೪] ಮತ್ತು ಕಪ್ಪು ಶಿಲೆಗಳೆಂದು ಅವುಗಳನ್ನು ವಿಂಗಡಿಸಬಹುದು. ಈ ವಿವಿಧ ಬಗೆಯ ಶಿಲೆಗಳನ್ನು ಪ್ರಧಾನವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು. ಒಂದು; ಮೃದು

---

೧. ಪ್ರೊ. ಎಸ್.ಕೆ. ರಾಮಚಂದ್ರರಾವ್ ; ಕರ್ನಾಟಕದ ಕಲೆಗಳು, ಮೊದಲ ಸಂಪುಟ, ಪುಟ - ೭೯

೨. ..... ಅದೇ ..... ಪುಟ - ೮೫

೩. ..... ಅದೇ ..... ಪುಟ - ೮೦

೪. ಅಮೃತಶಿಲೆ ನಿಕ್ಷೇಪ ಕರ್ನಾಟಕದಲ್ಲಿ ಇಲ್ಲ

ಶಿಲೆ, ಇನ್ನೊಂದು ; ಕಠಿಣ ಶಿಲೆ. ನಮ್ಮ ಪೂರ್ವಜರು ಕರ್ನಾಟಕದಲ್ಲಿ ಆಯಾ ಪ್ರದೇಶಗಳಲ್ಲೇ ಸಿಗುವ ಶಿಲೆಯನ್ನೇ ಸಾಮಾನ್ಯವಾಗಿ ಶಿಲ್ಪಕಲೆಗೆ ಬಳಸಿಕೊಂಡು ಬಂದಿದ್ದಾರೆ.

ನಮ್ಮ ಗ್ರಾಮೀಣ ಜನಪದರು ತಮ್ಮ ಜೀವನಮಾರ್ಗದಲ್ಲಿ ಧಾರ್ಮಿಕ ಹಿನ್ನೆಲೆಯಲ್ಲಿ ಉದಯವಾದ ದೇವರುಗಳ ಮೂರ್ತಿ ಶಿಲ್ಪ ನಿರ್ಮಾಣಕ್ಕೆ ಅವರು ಬಳಸಿದ ಮಣ್ಣು, ಕಟ್ಟಿಗೆ, ಲೋಹಗಳಂತೆ ಶಿಲೆಯೂ ಮಹತ್ವದ ಮಾಧ್ಯಮವಾಗಿದೆ. ಈ ಶಿಲಾ ಮಾಧ್ಯಮದಲ್ಲೇ ಅವರು ತಮ್ಮ ಬದುಕಿನ ಆಯ್ದ ಅಪೂರ್ವ ಘಟನೆಗಳನ್ನೂ ದಾಖಲಿಸುವಂತಹ ಶಿಲ್ಪಗಳನ್ನು ಕಂಡರಿಸಿದರು. ವೀರ ಮರಣ, ಆತ್ಮ ಬಲಿದಾನದಂತಹ ಸ್ಮಾರಕ ಶಿಲ್ಪಗಳು ಈ ಹಿನ್ನೆಲೆಯಲ್ಲಿ ಮುಖ್ಯವಾಗುವಂತಹವುಗಳಾಗಿವೆ. ಜನಪದ ಕೆಲವು ದೇವತಾ ಶಿಲ್ಪಗಳು ಹಾಗೂ ಸ್ಮಾರಕ ಶಿಲ್ಪಗಳ ಹಿಂದಿನ ಪ್ರೇರಣೆ ಬೇರೆ ಬೇರೆಯಾಗಿದ್ದರೂ ಅವುಗಳ ಮಾಧ್ಯಮ ಒಂದೇ ಆಗಿದೆ, ಇಲ್ಲಿ ಪ್ರೇರಣೆ ಧರ್ಮವಾಗಿ ಮಾಧ್ಯಮ ಶಿಲೆಯಾಗಿದೆ. ಈ ಶಿಲಾ ಮಾಧ್ಯಮದ ಜನಪದ ಶಿಲ್ಪಕಲೆ ಬೆಳೆದು ಬಂದ ಧಾರ್ಮಿಕ ಹಿನ್ನೆಲೆಯನ್ನು ಗಮನಿಸಿ ಶಿಲಾ ಮಾಧ್ಯಮದ ಧರ್ಮಮೂಲ ಜನಪದ ಶಿಲ್ಪಕಲೆ ಎಂದು ಕರೆದು ಅಧ್ಯಯನ ಮಾಡಲಾಗಿದೆ.

## ಶಿಲಾಮಾಧ್ಯಮದ ಧರ್ಮಮೂಲ ಜನಪದ ಶಿಲ್ಪಕಲೆ

ಪ್ರಾಚೀನ ಕಾಲದಿಂದಲೂ ನಮ್ಮ ಜನಪದರು ನೂರಾರು ದೇವತೆಗಳನ್ನು ಮಣ್ಣು,[೫] ಮರ, ಲೋಹ ಮಾಧ್ಯಮಗಳಂತೆ ಶಿಲಾ ಮಾಧ್ಯಮದಲ್ಲೂ ರಚಿಸಿ ಪೂಜಿಸುತ್ತ ಬಂದಿದ್ದಾರೆ. ಇಂಥ ನೂರಾರು ಬಗೆಯ ಜನಪದ ದೇವತಾ ಶಿಲ್ಪಗಳೆಲ್ಲ ಮುಖ್ಯವಾಗಿ ಧಾರ್ಮಿಕ ಹಿನ್ನೆಲೆಯಲ್ಲಿಯೇ ಬೆಳೆದು ಬಂದವುಗಳಾಗಿವೆ. ಶಿಲಾ ಮಾಧ್ಯಮದ ಶಿಲ್ಪಗಳು ಸಾಮಾನ್ಯವಾಗಿ ಮನೆಯ ಹೊರಗೆ ಪೂಜಿಸಲ್ಪಡುವಂಥವುಗಳು. ಗ್ರಾಮದ ದೇವತೆಯಾಗಿಯೋ, ಇಲ್ಲವೆ ಒಂದು ಜನವರ್ಗದ ಆರಾಧ್ಯ ದೈವವಾಗಿಯೋ, ಇಲ್ಲವೆ ಒಂದು ಜನವರ್ಗಕ್ಕೆ ಸೇರಿಯೂ ಒಂದು ಪ್ರದೇಶದ ಬಹು ವರ್ಗಗಳ ಜನರಿಂದ ಆರಾಧಿಸಲ್ಪಡುವ ದೈವವಾಗಿಯೂ ಈ ಶಿಲ್ಪಗಳು ಪೂಜಿಸಲ್ಪಡುತ್ತಿರುವುದನ್ನು ಕಾಣಬಹುದಾಗಿದೆ.

ಶಿಲಾ ಮಾಧ್ಯಮದ ಧರ್ಮಮೂಲ ಜನಪದ ಶಿಲ್ಪಕಲೆಯನ್ನು ಮುಖ್ಯವಾಗಿ ನಾಲ್ಕು ಬಗೆಯಲ್ಲಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಅವುಗಳೆಂದರೆ ೧. ದೇವತಾ ಶಿಲ್ಪಗಳು, ೨. ಆತ್ಮ ಬಲಿದಾನ ಶಿಲ್ಪಗಳು, ೩. ವೀರಮರಣ ಶಿಲ್ಪಗಳು, ೪. ದಾನ-ದತ್ತಿ ಶಿಲ್ಪಗಳು. ಇವುಗಳಲ್ಲಿ ಮತ್ತೆ ಚಿತ್ರಾತ್ಮಕವಾಗಿ ತೋರಿಸಿರುವಂತೆ ಉಪವಿಂಗಡಣೆ ಮಾಡಿಕೊಂಡು ವಿವರವಾದ ಅಧ್ಯಯನ ಮಾಡಲಾಗಿದೆ.

---

೫. ವಿವರಗಳಿಗೆ ನೋಡಿ ; ಇದೇ ಮಹಾ ಪ್ರಬಂಧದ ಅಧ್ಯಾಯ ಮೂರು, ಮಣ್ಣಿನ ಮಾಧ್ಯಮದ ಜನಪದ ಶಿಲ್ಪಕಲೆ, ಪುಟ -೪೦

[illegible]

[illegible]

[illegible]

[illegible]


[illegible]

# ಶಿಲಾಮಾಧ್ಯಮದ ಧರ್ಮಮೂಲ ಜನಪದ ಶಿಲ್ಪಕಲೆ

- **I.** ದೇವತಾ ಶಿಲ್ಪಗಳು
  - ಪುರುಷ ದೇವತಾ ಶಿಲ್ಪಗಳು
    - ವೀರಭದ್ರನ ಶಿಲ್ಪಗಳು
    - ಶಿವನ ಶಿಲ್ಪಗಳು
    - ಗಣಪತಿಯ ಶಿಲ್ಪಗಳು
    - ಮೈಲಾರನ ಶಿಲ್ಪಗಳು
    - ದೊಡ್ಡಪ್ಪನ ಶಿಲ್ಪಗಳು
    - ಭೂತಾಳನ ಶಿಲ್ಪಗಳು
  - ಸ್ತ್ರೀ ದೇವತಾ ಶಿಲ್ಪಗಳು
    - ಲಜ್ಜಾಗೌರಿ ಶಿಲ್ಪಗಳು
    - ಕಾಳಿಯ ಶಿಲ್ಪಗಳು
    - ಭದ್ರಕಾಳಿ ಶಿಲ್ಪಗಳು
    - ಧುರ್ಗಿಯ ಶಿಲ್ಪಗಳು
    - ಶೆಟವಿ ತಾಯಿಯ ಶಿಲ್ಪಗಳು
    - ಕರಿಯವ್ವನ ಶಿಲ್ಪಗಳು
    - ರೆಬ್ಬೆವ್ವನ ಶಿಲ್ಪಗಳು
    - ಉಡಚಮ್ಮನ ಶಿಲ್ಪಗಳು
    - ಮರೆವ್ವನ ಶಿಲ್ಪಗಳು
    - ಮಾಯಮ್ಮನ ಶಿಲ್ಪಗಳು
    - ಬಾದುಮೆಯ ಶಿಲ್ಪಗಳು
  - ಪ್ರಾಣಿ ದೇವತಾ ಶಿಲ್ಪಗಳು
    - ನಂದಿಯ ಶಿಲ್ಪಗಳು
    - ಹನುಮಂತನ ಶಿಲ್ಪಗಳು
    - ನಾಗ ದೇವತಾ ಶಿಲ್ಪಗಳು
- **II.** ಆತ್ಮ ಬಲಿದಾನ ಶಿಲ್ಪಗಳು
- **III.** ವೀರ ಮರಣ ಶಿಲ್ಪಗಳು
- **IV.** ದಾನ ದತ್ತಿ ಶಿಲ್ಪಗಳು


[illegible]

# II. ಆತ್ಮ ಬಲಿದಾನ ಶಿಲ್ಪಗಳು



[illegible]

## III. ವೀರ ಮರಣ ಶಿಲ್ಪಗಳು



## ೧. ದೇವತಾ ಶಿಲ್ಪಗಳು

ಧಾರ್ಮಿಕ ಮನೋಭಾವದ ನಮ್ಮ ಜನಪದರು, ಹಲವಾರು ದೇವರುಗಳನ್ನು ಕಲ್ಪಿಸಿಕೊಂಡು ಅವುಗಳಿಗೆ ತಮ್ಮದೇ ರೂಪ-ಆಕಾರಗಳನ್ನು ಕೊಟ್ಟು, ವಿವಿಧ ಮಾಧ್ಯಮಗಳಲ್ಲಿ ದೇವತಾ ಶಿಲ್ಪಗಳನ್ನು ರಚಿಸಿ ಪೂಜಿಸುತ್ತ ಬಂದಿದ್ದಾರೆ. ಮಣ್ಣು ಮತ್ತು ಮರದ ಮಾಧ್ಯಮಗಳಿಗಿಂತಲೂ ಹೆಚ್ಚು ಕಾಲ ಬಾಳಿಕೆ ಬರುವ ಶಿಲಾ ಮಾಧ್ಯಮವನ್ನು ಆಯ್ಕೆ ಮಾಡಿಕೊಂಡು ಅನೇಕ ಬಗೆಯ ದೇವತಾ ಶಿಲ್ಪಗಳನ್ನು ರಚಿಸಿ ಆರಾಧಿಸುತ್ತ ಬಂದಿದ್ದಾರೆ. ಅಲ್ಲದೆ ಪ್ರತಿಯೊಂದು ದೇವರಿಗೆ ಒಂದೊಂದು ಬಗೆಯ ಪ್ರಾಣಿ, ಪಕ್ಷಿಗಳನ್ನು ವಾಹನಗಳಾಗಿ ಸೃಷ್ಟಿಸಿದ್ದಾರೆ. ಈ ಪ್ರಾಣಿ ಪಕ್ಷಿಗಳು ದೇವರ ವಾಹನಗಳಾದ್ದರಿಂದ ಅವುಗಳೂ ದೇವರಷ್ಟೇ ಮಹತ್ವವನ್ನು ಪಡೆದಿರುತ್ತವೆ. ಹೀಗಾಗಿ ಶಿಲಾ ಮಾಧ್ಯಮದ ಒಟ್ಟು ದೇವತಾ ಶಿಲ್ಪಗಳನ್ನು ೧. ಪುರುಷ ದೇವತಾ ಶಿಲ್ಪಗಳು, ೨. ಸ್ತ್ರೀ ದೇವತಾ ಶಿಲ್ಪಗಳು, ೩. ಪ್ರಾಣಿದೇವತಾ ಶಿಲ್ಪಗಳು ಎಂದು ವಿಂಗಡಿಸಿಕೊಂಡು ಪ್ರಾತಿನಿಧಿಕವಾಗಿ ಕೆಲವನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

### ೧. ಪುರುಷ ದೇವತಾ ಶಿಲ್ಪಗಳು

ಸಾಮಾನ್ಯವಾಗಿ ಪುರುಷ ದೇವತಾ ಶಿಲ್ಪಗಳು ಮನುಷ್ಯ ಕಲ್ಪಿಸಿಕೊಂಡ ದೇವತೆಗಳು. ಪುರಾಣ ದೇವತೆಗಳು ಹಾಗೂ ಶರಣರು, ಸಾಧು, ಸತ್ಪುರುಷರ ದೇವತಾ ಶಿಲ್ಪಗಳಾಗಿರುತ್ತವೆ. ಶಿಲಾ ಮಾಧ್ಯಮದಲ್ಲಿ ನೂರಾರು ಪುರುಷ ದೇವತಾ ಶಿಲ್ಪಗಳು ಸಿಗುತ್ತವೆಯಾದರೂ, ಇಲ್ಲಿ ಜಾನಪದೀಯವಾಗಿ ಪ್ರಮುಖವಾಗುವ ಕೆಲವು ಶಿಲ್ಪಗಳನ್ನು ಮಾತ್ರ ಗಮನಿಸಲಾಗಿದೆ.

### ೧.೧ ವೀರಭದ್ರನ ಶಿಲ್ಪಗಳು

ಕರ್ನಾಟಕದಾದ್ಯಂತ ಅಪಾರ ಜನಪ್ರೀಯತೆ ಪಡೆದ ದೈವಗಳಲ್ಲಿ ವೀರಭದ್ರನೂ ಒಬ್ಬ. ಈತ ಮುಖ್ಯವಾಗಿ ಶೈವ ಮತ್ತು ವೀರಶೈವರ ಆರಾಧ್ಯ ದೈವ. ಶಿವ ಮತ್ತು ದಕ್ಷಬ್ರಹ್ಮರ ನಡುವಿನ ವೈಷಮ್ಯದಲ್ಲಿ ಶಿವನ ಅಪೇಕ್ಷೆಯಂತೆ ವೀರಭದ್ರನು ಜನ್ಮ ತಾಳುತ್ತಾನೆ. ನಂತರ ಶಿವನ ಅಣತಿಯಂತೆ ದಕ್ಷನನ್ನು ಕೊಂದು ನಂತರ ಪ್ರಮುಖ ಯುದ್ಧ ದೈವವಾಗಿ ಕಾಣಿಸಿಕೊಂಡಿದ್ದಾನೆ. ಕೂರ್ಮ ಪುರಾಣ ಮತ್ತು ಭಾಗವತ ಪುರಾಣಗಳಲ್ಲಿ ವೀರಭದ್ರನು ದಕ್ಷನನ್ನು ಕೊಂದ ಬಗೆಯನ್ನು ವಿವರಿಸಲಾಗಿದೆ. ಕನ್ನಡದಲ್ಲಿಯ ಅನೇಕ ಕಾವ್ಯಗಳಲ್ಲಿ ವೀರಭದ್ರನ ಕಥೆಯ ಉಲ್ಲೇಖ ಬರುತ್ತದೆ.[೬]

ಕ್ರಿ. ಶ. ೧೨೦೦ ರ ಪ್ರಮುಖ ಕವಿ ರಾಘವಾಂಕನ ವಿರೇಶ ಚರಿತೆ. ಕ್ರಿ. ಶ. ೧೬೫೦ ರ ರಂಗನಾಥನ ವೀರಭದ್ರ ವಿಜಯ ಮುಂತಾದ ಕೃತಿಗಳು ವೀರಭದ್ರನ ಅವತಾರವನ್ನು ಕುರಿತು ವಿವರಿಸುತ್ತವೆ.[೭]

---

೬. ಹಿ.ಚಿ. ಬೋರಲಿಂಗಯ್ಯ (ಸಂ) ; ಕರ್ನಾಟಕ ಜನಪದ ಕಲೆಗಳ ಕೋಶ, ಪುಟ - ೬೯

೭. ..... ಅದೇ .....

ಅನೇಕ ದೇವ-ದೇವತೆಗಳಂತೆ ವೀರಭದ್ರನೂ ಮೂಲತಃ ಪೌರಾಣಿಕ ದೇವತೆಯಾಗಿರುವದರಿಂದ ಆತನ ಆಚರಣೆಯೂ ಪೌರಾಣಿಕ ವಿಷಯದ ಹಿನ್ನೆಲೆಯಲ್ಲಿ ಜನಪ್ರೀಯವಾಗಿ ನಂತರ ಜನಪದವೂ ಆಗಿ ಪ್ರಚಲಿತಗೊಂಡಿದೆ. ಇಂದು ಕರ್ನಾಟಕದಾದ್ಯಂತ ಕಂಡು ಬರುವ ವೀರಭದ್ರನ ಶಿಲ್ಪಗಳು ಮತ್ತು ಆಚರಣೆ, ಶಿಷ್ಟ ಮತ್ತು ಜನಪದ ಎರಡೂ ಸಮ್ಮಿಶ್ರಗೊಂಡಿರುವುದನ್ನು ಕಾಣಬಹುದಾಗಿದೆ.

**ಪೌರಾಣಿಕ ಹಿನ್ನೆಲೆ :** ಶೈವ ಪುರಾಣಗಳ ಹಿನ್ನೆಲೆಯಲ್ಲಿ ವೀರಭದ್ರ ದೇವರು ಶಿವನ ಉಗ್ರ ರೂಪದಿಂದ ಉದ್ಭವಿಸುತ್ತಾನೆ.[೮] ಪುರಾಣದಂತೆ, ದಕ್ಷನು ಶಿವನೋಲಗಕ್ಕೆ ಬಂದಾಗ ಶಿವ ಆತನಿಗೆ ಮಾತನಾಡಿಸದೆ ಇದ್ದುದಕ್ಕೆ ಅವಮಾನವಾದುದರಿಂದ ಆತನು ಅದರ ಸೇಡು ತೀರಿಸಿಕೊಳ್ಳಲು ಪ್ರತಿಯಾಗಿ ಯಜ್ಞ ಮಾಡುತ್ತಾನೆ. ಯಜ್ಞಕ್ಕೆ ದೇವಾನು-ದೇವತೆಗಳಿಗೆಲ್ಲ ಆಮಂತ್ರಣ ಕೊಟ್ಟು ಶಿವನಿಗೆ ಮಾತ್ರ ಕೊಡದೆ ಉದ್ದೇಶಪೂರ್ವಕವಾಗಿ ಅವಮಾನ ಮಾಡಬೇಕೆಂದು ಬಿಟ್ಟಿರುತ್ತಾನೆ. ನಾರದನಿಂದ ಈ ವಿಷಯ ತಿಳಿದ ಪಾರ್ವತಿಯು, ಶಿವನು ಬೇಡವೆಂದರೂ ತಂದೆಯಾದ ದಕ್ಷನ ಯಜ್ಞಕ್ಕೆ ಹೋಗುತ್ತಾಳೆ. ಆಮಂತ್ರಣವಿಲ್ಲದೆ ಬಂದ ಈಕೆಗೆ ದಕ್ಷನಿಂದ ತುಂಬಾ ಅವಮಾನವಾಗುತ್ತದೆ. ತನ್ನ ತಂದೆಯಿಂದ ತನಗೆ ಮತ್ತು ತನ್ನ ಪತಿ ಈಶ್ವರನಿಗೆ ಆದ ಅವಮಾನವನ್ನು ತಾಳಿಕೊಳ್ಳಲಾಗದೆ ಅದೇ ಯಜ್ಞಕುಂಡದಲ್ಲಿ ಹಾರಿ ಪ್ರಾಣ ಬಿಡುತ್ತಾಳೆ. ಇದನ್ನು ದಿವ್ಯದೃಷ್ಟಿಯಿಂದ ಕಂಡುಕೊಂಡ ಶಿವ ರೌದ್ರಾವತಾರ ತಾಳುತ್ತಾನೆ. ಈ ಅವತಾರದಿಂದ ವೀರಭದ್ರ ಜನಿಸುತ್ತಾನೆ.[೯] ಇನ್ನೊಂದೆಡೆಗೆ ಉಲ್ಲೇಖಗೊಂಡಿರುವಂತೆ ದಕ್ಷನು ತಾನು ಯಜ್ಞಮಾಡುವಾಗ ಗೌರಿಗೆ ಆಹ್ವಾನಿಸಿ ಶಿವನಿಗೆ ಆಹ್ವಾನಿಸದಿರುವುದಿಲ್ಲ. ಇದರಿಂದಾಗಿ ಗೌರಿ ಧರ್ಮ ಸಂಕಟದಲ್ಲಿ ಸಿಲುಕಿ ಶಿವನ ಮಾತನ್ನು ಮೀರಿ ಅಲ್ಲಿಗೆ ಹೋಗಿ ಅವಮಾನಿತಳಾಗಿ ಕೆಂಡಕ್ಕೆ ಆಹುತಿಯಾಗುತ್ತಾಳೆ. ವೀರಭದ್ರ ಶಿವನಣತಿಯಂತೆ ದಕ್ಷನ ಶಿರವನ್ನು ಕತ್ತರಿಸುತ್ತಾನೆ.[೧೦] ಶಿವನ ರೌದ್ರಾವತಾರವೇ ವೀರಭದ್ರ. ವೀರಭದ್ರನು ತಂದೆಯಾದ ಶಿವನ ಆಜ್ಞೆಯಂತೆ ದಕ್ಷನ ಯಜ್ಞ ಕುಂಡವನ್ನು ಹಾಳು ಮಾಡಿ, ಆತನ ರುಂಡವನ್ನು ಚಂಡಾಡುತ್ತಾನೆ. ನಂತರ ದಕ್ಷನ ಹೆಂಡತಿಯ ಕಳಕಳಿಯ ಮೇರೆಗೆ ಆತನಿಗೆ ಮತ್ತೆ ಜೀವದಾನ ಮಾಡುತ್ತಾನೆ. ಆದರೆ, ಕುರಿತಲೆಯನ್ನು ಮುಂಡಕ್ಕೆ ಹೊಂದಿಸುತ್ತಾನೆ.

ಶೈವ ಪುರಾಣಗಳಲ್ಲಿ ಉಲ್ಲೇಖಿತವಾದ ವಿಷಯ ಮತ್ತು ಜನಪದರಲ್ಲಿ ಪ್ರಚಲಿತವಿರುವ ಕಥಾ ವಿಷಯಗಳಿಗೂ ಹೆಚ್ಚಿನ ವ್ಯತ್ಯಾಸವೇನೂ ಕಂಡುಬರುವದಿಲ್ಲ. ಪುರಾಣೋಕ್ತ ವಿಷಯವೇ ಜನಪದರಲ್ಲಿ ರೂಢಿಯಲ್ಲಿದೆ. ಈ ಹಿನ್ನೆಲೆಯಲ್ಲೇ ವೀರಭದ್ರನ ವೇಷ, ಕುಣಿತ, ರೌದ್ರಾವತಾರದ ಪ್ರದರ್ಶನಗಳು ಜನಪದರಲ್ಲಿ ನಡೆಯುತ್ತವೆ.

**ಆಚರಣೆ :**[೧೧] ವೀರಭದ್ರ ಜನಪದರಲ್ಲಿ ಹಲವು ರೀತಿಯಲ್ಲಿ ಆರಾಧನೆಗೊಳ್ಳುತ್ತಿದ್ದಾನೆ.

---

೮. ಡಾ. ಚಂದ್ರಶೇಖರ ಕಂಬಾರ (ಸಂ) ; ಕನ್ನಡ ಜಾನಪದ ವಿಶ್ವಕೋಶ, ಸಂಪುಟ - ೨, ಪುಟ - ೧೮೦೫

೯. ಡಾ. ಎ.ಎಂ. ಸತ್ಯನಾಯಕ ; ಉತ್ತರ ಕರ್ನಾಟಕದ ಮದುವೆ ಸಂಪ್ರದಾಯಗಳು, ಪುಟ - ೧೧೨

೧೦. ಹಿ.ಚಿ. ಬೋರಲಿಂಗಯ್ಯ (ಸಂ) ; ಕರ್ನಾಟಕ ಜನಪದ ಕಲೆಗಳ ಕೋಶ, ಪುಟ - ೬೯

೧೧. ಹೆಚ್ಚಿನ ವಿವರಗಳಿಗೆ ನೋಡಿ, ಹಿ.ಚಿ. ಬೋರಲಿಂಗಯ್ಯ (ಸಂ) ; ಕರ್ನಾಟಕ ಜನಪದ ಕಲೆಗಳ ಕೋಶ, ಪುಟ - ೭೨

ವೀರಭದ್ರನ ಪ್ರೀತ್ಯರ್ಥವಾಗಿ ಗುಗ್ಗಳ ಸೇವೆಯನ್ನು ಭಕ್ತರು ನಡೆಸುತ್ತಾರೆ. ವೀರಗಾಸೆ, ಪುರವಂತರ ಕುಣಿತ ಮುಂತಾದ ಕಲಾಸೇವೆಯನ್ನು ಕೈಗೊಳ್ಳುತ್ತಾರೆ. ವೀರಭದ್ರನ ಹಾವಭಾವಗಳನ್ನು ಅಭಿನಯಿಸಿ ಅವನ ಪುರಾಣವನ್ನು ನಿರೂಪಿಸುವ ವೀರಭದ್ರನ ಕುಣಿತವೂ ರೂಢಿಯಲ್ಲಿದೆ. ಉತ್ತರ ಕರ್ನಾಟಕದ ಪುರವಂತರು ವಿವಿಧ ಶಸ್ತ್ರಗಳನ್ನು ಮೈತುಂಬ ಚುಚ್ಚಿಕೊಳ್ಳುವ ಮೂಲಕ ತಮ್ಮನ್ನೇ ದಂಡಿಸಿಕೊಳ್ಳುವ ರೀತಿಯಲ್ಲಿ ವೀರಭದ್ರನನ್ನು ಸ್ತುತಿಸುತ್ತಾರೆ. ವೀರಭದ್ರನ ವೇಷ ಹಾಕಿದವರು ಸಾಕ್ಷಾತ್ ವೀರಭದ್ರನ ಅವತಾರವೆಂಬಂತೆ ಆವೇಶದಿಂದ ಕತ್ತಿಯನ್ನು ಝಳಪಿಸುತ್ತ ಕುಣಿಯುತ್ತಾರೆ. ಮಧ್ಯೆ ಮಧ್ಯೆ ಒಡಬು ಹೇಳುವದು ನಡೆಯುತ್ತದೆ. ಈ ಒಡಬು ಮೇಲಿನ ಕಥೆಯ ಅಂಶಗಳನ್ನೊಳಗೊಂಡಿರುತ್ತದೆ. ಜೊತೆಗೆ ವಾದ್ಯಮೇಳಗಳೂ, ಜನಜಂಗುಳಿಯೂ ಇರುತ್ತದೆ. ಶಿವರಾತ್ರಿ, ಗೌರಿ ಹಬ್ಬ, ಯುಗಾದಿ ಅಲ್ಲದೆ ಶಿವೋಪಾಸನೆಯ ವಿಶಿಷ್ಠ ಸಂದರ್ಭಗಳಲ್ಲೆಲ್ಲ ಈ ಕುಣಿತ ಸೇವೆ ನಡೆಯುತ್ತದೆ. ಮಾತ್ರವಲ್ಲ ವೀರಶೈವ, ಲಿಂಗಾಯತರ ಮದುವೆ, ಗೃಹ ಪ್ರವೇಶ ಮೊದಲಾದ ಸಂದರ್ಭಗಳಲ್ಲಿಯೂ ಈ ಸೇವೆ ನಡೆಸುತ್ತಾರೆ. ಕೆಲವೆಡೆ ಅಗ್ನಿ ಕುಂಡವನ್ನು ಹಾಯುವದು ನಡೆಯುತ್ತದೆ.

ಹೀಗೆ ವೀರಭದ್ರನ ಕುರಿತ ಆಚರಣೆ, ಪ್ರದರ್ಶನ ಅನೇಕ ಶತಮಾನಗಳಿಂದ ನಡೆದು ಬಂದಿದ್ದರೆ, ಈ ವೀರಭದ್ರನ ರೂಪ, ಆಕಾರವನ್ನು ಭಕ್ತರ ಅಪೇಕ್ಷೆಯ ಮೇರೆಗೆ ಕಲಾವಿದರು, ಶಿಲ್ಪಿಗಳು ಕೆತ್ತಿ ನಿರ್ಮಿಸಿದ್ದಾರೆ. ಲೋಹ, ಶಿಲೆ ಮತ್ತಿತರ ಮಾಧ್ಯಮಗಳಲ್ಲಿ ಕೆತ್ತಿ ಆತನ ಪರಂಪರೆಯನ್ನು ದಾಖಲಿಸಿಕೊಂಡು ಬಂದಿದ್ದಾರೆ. ಮೂಲತಃ ವೀರಭದ್ರ ಪುರಾಣದ ದೇವತಾಪುರುಷನಾದರೂ ಶಿಲ್ಪದಲ್ಲಿ ಮೂಲತಃವಾಗಿ ಜನಪದೀಯ ಶೈಲಿಯಲ್ಲಿ ರಚನೆಯಾಗುತ್ತ ಬಂದಿದ್ದು, ಕಾಲಾಂತರದಲ್ಲಿ ಶಿಷ್ಠಕ್ಕೆ ತಿರುಗಿ, ತಾಳ-ಮಾನ-ಪ್ರಮಾಣದ ಪ್ರಕಾರ ಸೃಷ್ಟಿಯಾದುದನ್ನು ಕಾಣುತ್ತೇವೆ. ಉತ್ತರ ಕರ್ನಾಟಕದಲ್ಲಿ ನೂರಾರು ವೀರಭದ್ರನ ಶಿಲ್ಪಗಳನ್ನು ಕಾಣಬಹುದು. ಮತ್ತು ಅನೇಕ ವೀರಭದ್ರನ ಗುಡಿಗಳೂ ಇವೆ. ಈ ಗುಡಿಗಳಲ್ಲಿ ಪ್ರತಿಷ್ಠಾಪಿತವಾಗಿರುವ ಕೆಲವು ವೀರಭದ್ರನ ಶಿಲ್ಪಗಳು ಜನಪದ ಶೈಲಿಯಲ್ಲಿಯೇ ರಚಿಸಲ್ಪಟ್ಟವುಗಳಾಗಿವೆ.

ಕರ್ನಾಟಕದಲ್ಲಿ ದೊರೆಯುವ ವೀರಭದ್ರನ ಶಿಲಾ ಶಿಲ್ಪಗಳನ್ನು ಮುಖ್ಯವಾಗಿ ೧. ಎರಡು ಕೈಗಳಿರುವ ವೀರಭದ್ರನ ಶಿಲ್ಪಗಳು, ೨. ನಾಲ್ಕು ಕೈಗಳಿರುವ ವೀರಭದ್ರನ ಶಿಲ್ಪಗಳು, ೩. ಎಂಟು ಕೈಗಳಿರುವ ವೀರಭದ್ರನ ಶಿಲ್ಪಗಳು, ೪. ಹತ್ತು ಕೈಗಳಿರುವ ವೀರಭದ್ರನ ಶಿಲ್ಪಗಳು ಎಂದು ವಿಂಗಡಿಸಬಹುದಾದರೂ ಹದಿನೆಂಟು ಕೈಗಳು, ಮೂವತ್ತೆರಡು ಕೈಗಳು[೧೨] ಇರುವ ವೀರಭದ್ರನ ಶಿಲ್ಪಗಳು ನಿರ್ಮಾಣಗೊಂಡಿರುವದನ್ನು ಕಾಣಬಹುದು.


ಕರ್ನಾಟಕದಲ್ಲಿ ಚಾಲುಕ್ಯರ ಕಾಲದಿಂದ ಆರಂಭವಾದ ವೀರಭದ್ರ ಮೂರ್ತಿಯ ಪ್ರತಿಷ್ಠಾಪನೆ, ವಿಜಯನಗರದ ಅರಸರ ಕಾಲದಲ್ಲಿ ವ್ಯಾಪಕವಾಗಿ ಆದಂತೆ ಕಂಡುಬರುತ್ತದೆ. ಆದರಲ್ಲೂ ಅಪಾರ ಯುದ್ಧಗಳು ಸಂಭವಿಸಿದ ವಿಜಯ ನಗರ ಅರಸರ ಆಳ್ವಿಕೆಯ ಕಾಲದಲ್ಲಿ ಪ್ರಮುಖ ಯುದ್ಧದೇವತೆಗಳಾದ

---


೧೨. ಬೆಂಗಳೂರಿನ ಗವಿಪುರದಲ್ಲಿ ಮೂವತ್ತೆರಡು ಕೈಗಳಿರುವ ವೀರಭದ್ರನ ಶಿಲ್ಪವಿದೆ



ವೀರಭದ್ರನ ಶಿಲ್ಪ ( ಹೊನ್ನಕೀರಣಗಿ )




ವೀರಭದ್ರನ ಶಿಲ್ಪ ( ಚೊಳಚಗುಡ್ಡ )



ವೀರಭದ್ರನ ಶಿಲ್ಪಗಳು ಬನಶಂಕರಿ ಬಾದಾಮಿ





ವೀರಭದ್ರನ ಶಿಲ್ಪ ( ಕಮಲಾಪುರ ಮ್ಯೂಸಿಯಂ )

ವೀರಭದ್ರ ಮತ್ತು ಆಂಜನೇಯರ ಆರಾಧನೆ ಪ್ರಾಮುಖ್ಯತೆ ಪಡೆದುಕೊಂಡಂತೆ ಕಾಣುತ್ತದೆಂದು[೧೩] ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಕರ್ನಾಟಕದ ಎಲ್ಲ ಭಾಗಗಳಲ್ಲೂ ವೀರಭದ್ರನ ಮೂರ್ತಿಶಿಲ್ಪಗಳು ಕಂಡು ಬರುತ್ತವೆ. ಕತ್ತಿ, ಬಿಲ್ಲು, ಬಾಣ, ತ್ರಿಶೂಲ, ಡಾಲು ಇತ್ಯಾದಿ ಆಯುಧಗಳು ವೀರಭದ್ರನ ನಾಲ್ಕೂ ಕೈಗಳಲ್ಲಿರುತ್ತವೆ.[೧೪] ವಿಜಯ ನಗರದ ಶಾಸನವೊಂದರ ಪ್ರಕಾರ ವೀರಭದ್ರನಿಗೆ ಎಂಟು ಕೈಗಳಿದ್ದು, ಎಲ್ಲ ಕೈಗಳಲ್ಲೂ ವಿವಿಧ ಆಯುಧಗಳಿದ್ದು ಚರ್ಮದ ಉಡುಪು ತೊಡಿಸಲಾಗಿದೆ. ಚಾಲುಕ್ಯರ ಕಾಲದಲ್ಲಿ ವೀರಭದ್ರನ ಶಿಲ್ಪಕ್ಕಾಗಿ ಮರಳುಗಲ್ಲನ್ನೇ ಹೆಚ್ಚಾಗಿ ಬಳಸಲಾಗಿದೆ.[೧೫]

ಗುಲಬರ್ಗಾ ಜಿಲ್ಲೆಯ ಕೀರಣಗಿಯಲ್ಲಿ ವೀರಭದ್ರನ ದೇವಾಲಯವಿದ್ದು, ದೇವಾಲಯದಲ್ಲಿ ಕಪ್ಪು ಶಿಲೆಯ ವೀರಭದ್ರ ಹಾಗೂ ಕಾಳಿಯ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಉತ್ತರ ದಿಕ್ಕಿಗೆ ಮುಖ ಮಾಡಿರುವ ಈ ದೇವಾಲಯದಲ್ಲಿ ವೀರಭದ್ರನ ಮುಖವೂ ಉತ್ತರಾಭಿಮುಖವಾಗಿದೆ.

ಈ ಶಿಲ್ಪವು ಸುಮಾರು ಐದು ಅಡಿಗಿಂತ ಹೆಚ್ಚು ಎತ್ತರವಾಗಿದೆ. ಇದು ಉಬ್ಬು ಶಿಲ್ಪವಾಗಿದೆ. ಈ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದ್ದು, ಕೈಯಲ್ಲಿ ತ್ರಿಶೂಲ, ಖಡ್ಗ, ರುಂಡೆ, ಡಾಲುಗಳಿವೆ. ಮುಖವು ರೌದ್ರಾವತಾರದಿಂದ ಕೂಡಿದ್ದು ಮೇಲು ಮುಖ ಮಾಡಿರುವ ಹುರಿ ಮೀಸೆ, ಚೆಪ್ಪಟೆಯಾದ ಮೂಗು, ಅಗಲವಾದ ಉಬ್ಬು ಕಣ್ಣುಗಳು, ದೊಡ್ಡ ಕಿವಿಗಳು ಇದ್ದು ತಲೆಯ ಮೇಲೆ ಬೋರಲು ಹಾಕಿದ ಬುಟ್ಟಿಯಂತಹ ಕಿರೀಟವಿದೆ. ಕೊರಳಲ್ಲಿ ವಿವಿಧ ಆಭರಣಗಳೊಂದಿಗೆ ಲಿಂಗವನ್ನು ಕೆತ್ತಲಾಗಿದೆ. ಸೊಂಟದಲ್ಲಿ ಸೊಂಟ ಪಟ್ಟಿ ಹಾಗೂ ಮಧ್ಯದಲ್ಲಿರುವ ರುಂಡವು ಟಗರಿನ ತಲೆಯಂತೆ ತೋರುತ್ತದೆ. ಅದರ ಕೆಳಗೆ ಗಂಟೆಯನ್ನು ಕೆತ್ತಲಾಗಿದೆ. ವೀರಭದ್ರ ಶಿಲ್ಪದ ಎಡಬದಿಯ ಕೆಳ ಭಾಗದಲ್ಲಿ ಆಡಿನ ಮುಖದ ಚಿಕ್ಕದಾದ ದಕ್ಷಬ್ರಹ್ಮನನ್ನು ಕೆತ್ತಲಾಗಿದೆ. ಬಲ ಬದಿಯಲ್ಲೂ ಒಂದು ಚಿಕ್ಕದಾದ ನಿಂತುಕೊಂಡಿರುವ ಭಂಗಿಯ ಶಿಲ್ಪವಿದೆ.

ಈ ವೀರಭದ್ರನ ಶಿಲ್ಪದ ಕೆಳಗೆ ಅರ್ಧ ಅಡಿ ಎತ್ತರದ ಗದ್ದುಗೆಯಿದ್ದು, ಗದ್ದುಗೆಯನ್ನೊಳಗೊಂಡು ಒಟ್ಟು ಶಿಲ್ಪ ಅಖಂಡ ಶಿಲೆಯಲ್ಲಿಯೇ ನಿರ್ಮಿತವಾಗಿದೆ. ಒಟ್ಟು ಶಿಲ್ಪದಲ್ಲಿ ಮುಖ ಹಾಗೂ ಕಾಲುಗಳು ದೊಡ್ಡದಾಗಿದ್ದು, ದೇಹ ಕಿರಿದಾಗಿದ್ದರೂ ಸುಂದರ ಶಿಲ್ಪವಾಗಿದೆ. ಪ್ರತಿ ವರ್ಷ ಬಾದಾಮಿ ಅಮವಾಸ್ಯೆಗೆ ಜಾತ್ರೆ ನಡೆಯುತ್ತದೆ.[೧೬] ಜಾತ್ರೆಯಲ್ಲಿ ರಥೋತ್ಸವವೂ ಜರುಗುತ್ತದೆ.

ಅರಳಗುಂಡಗಿಯಲ್ಲಿ[೧೭] ಊರ ಮಧ್ಯದಲ್ಲಿ ಕುಡಿಯುವ ನೀರಿನ ಭಾವಿಯೊಂದಿದೆ. ಈ ಭಾವಿಯ ಕಟ್ಟೆಯ ಮೇಲೆ ಮೂರು ಅಡಿ ಎತ್ತರದ ವೀರಭದ್ರನ ಶಿಲಾ ಮಾಧ್ಯಮದ ಉಬ್ಬು ಶಿಲ್ಪವಿದೆ. ಈ ಉಬ್ಬು

೧೩. ಹೆಚ್ಚಿನ ವಿವರಗಳಿಗೆ ನೋಡಿ, ಹಿ.ಚಿ. ಬೋರಲಿಂಗಯ್ಯ (ಸಂ) ; ಕರ್ನಾಟಕ ಜನಪದ ಕಲೆಗಳ ಕೋಶ, ಪುಟ - ೬೯
೧೪. ಸೂರ್ಯನಾಥ ಕಾಮತ್, ದೇವರ ಕೊಂಡಾರೆಡ್ಡಿ, ಜಗನ್ನಾಥ (ಸಂ) ; ಇತಿಹಾಸ ದರ್ಶನ, ಸಂಪುಟ -೬, ಪುಟ - ೯೫
೧೫. ಪಿ.ಆರ್. ತಿಪ್ಪೇಸ್ವಾಮಿ ; ಶಿಲ್ಪಕಲಾ ಪ್ರಪಂಚ, ಪುಟ - ೧೭೨
೧೬. ವಿವರ ನೀಡಿದವರು : ಶಂಭುಲಿಂಗಯ್ಯ ಮಠ, ವೀರಭದ್ರನ ಪೂಜಾರಿಗಳು.ಸಾ. ಹೊನ್ನಕೀರಣಗಿ,ತಾ.ಜಿ.ಗುಲಬರ್ಗಾ
೧೭. ಅರಳಗುಂಡಗಿ : ತಾ. ಜೇವರ್ಗಿ, ಜಿ. ಗುಲಬರ್ಗಾ

[illegible]

[illegible]

[illegible]

[illegible]

[illegible]

ಶಿಲ್ಪ ಪ್ರಮಾಣಬದ್ಧವಾಗಿಲ್ಲದ ಸರಳ ರಚನೆಯಾಗಿದೆ. ತಲೆಭಾಗ ಕಿರೀಟವೂ ಸೇರಿ ದೊಡ್ಡದೆನಿಸಿದರೆ, ದೇಹ, ಕಾಲು ಮತ್ತು ಕೈಗಳು ಚಿಕ್ಕದಾಗಿವೆ. ಮೊಳಕಾಲಿನ ಕೆಳಗೆ ಬರುವಂತೆ ರುಂಡಮಾಲೆಯನ್ನು ಧರಿಸಲಾಗಿದೆ. ಕೊರಳಲ್ಲಿ ಲಿಂಗವನ್ನು ಕೆತ್ತಲಾಗಿದೆ. ನಾಲ್ಕು ಕೈಗಳನ್ನು ಹೊಂದಿದ್ದು ಕೈಯಲ್ಲಿ ತ್ರಿಶೂಲ, ಖಡ್ಗ, ಬಿಲ್ಲು ಹಾಗೂ ಬಾಣಗಳನ್ನು ಕೊಡಲಾಗಿದೆ. ಈ ಶಿಲ್ಪದ ಎಡಬಲಕ್ಕೂ ಚಿಕ್ಕದಾದ ಎರಡು ಉಬ್ಬು ಶಿಲ್ಪಗಳಿವೆ. ಎಡ ಭಾಗದ ಶಿಲ್ಪವು ಆಡಿನ ಮುಖವನ್ನು ಹೊಂದಿದ ದಕ್ಷಬ್ರಹ್ಮನದಾಗಿದೆ. ಕೈಗಳನ್ನು ಮುಗಿದು ನಿಂತ ಭಂಗಿಯಲ್ಲಿದೆ. ಬಲ ಭಾಗದಲ್ಲಿರುವ ಶಿಲ್ಪ ಪದ್ಮಾಸನದಲ್ಲಿ ಕುಳಿತ ಭಂಗಿಯಲ್ಲಿದ್ದು ಶಿಲ್ಪದ ಮೇಲ್ಭಾಗದ ಹಿನ್ನೆಲೆಯ ಎಡ-ಬಲ ಬದಿಗಳಲ್ಲಿ ಸೂರ್ಯ ಚಂದ್ರರನ್ನು ಕೆತ್ತಲಾಗಿದೆ.

ಕುರುಗೋಡಿನಲ್ಲಿ ( ಬಳ್ಳಾರಿ ತಾಲೂಕು ) ವೀರಭದ್ರನ ದೇವಸ್ಥಾನವಿದ್ದು, ಇಲ್ಲಿ ಪಂಚಮುಖಗಳ ವೀರಭದ್ರನ ಶಿಲಾ ಶಿಲ್ಪವಿದೆ. ಈ ಶಿಲ್ಪ ಸಂಪೂರ್ಣವಾಗಿ ಶಿಷ್ಠವಾಗಿದೆ. ಇತ್ತೀಚೆಗೆ ಈ ಶಿಲ್ಪದಡಿಯಲ್ಲಿ ನಿಧಿಯಿದೆಯೆಂದು ದುಷ್ಕರ್ಮಿಗಳು ಈ ಶಿಲ್ಪವನ್ನು ಒಡೆದು ಹಾಕಿದ್ದಾರೆ. ಬಾದಾಮಿ ಹತ್ತಿರದ ಬನಶಂಕರಿ ದೇವಸ್ಥಾನದ ಆವರಣದಲ್ಲಿ ಹಂಪಿ- ಕನ್ನಡ ವಿಶ್ವವಿದ್ಯಾಲಯದ ಶಿಲ್ಪಕಲಾ ವಿಭಾಗದ ಎದುರಲ್ಲಿ ಒಂದು ವೀರಭದ್ರನ ಶಿಲ್ಪವಿದೆ. ( ಇದು ಚೊಳಚಗುಡ್ಡದ ಹತ್ತಿರ ಹೊಳೆಯಲ್ಲಿ ಸಿಕ್ಕಿದ್ದು, ಕೆಳಭಾಗದ ಪೀಠ ಒಡೆದು ಹೋಗಿದೆ.) ಈ ಶಿಲ್ಪ ಎರಡು ಕೈಗಳನ್ನು ಹೊಂದಿದ್ದು ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ಬಹುಶಃ ಡಾಲು ಇದ್ದು, ಜಾನಪದ ಶೈಲಿಯಲ್ಲಿದೆ. ರುಂಡಮಾಲೆಯನ್ನು ಕೆತ್ತಲಾಗಿದೆ.


ಇವಲ್ಲದೆ ಹಂಪಿಯಲ್ಲಿರುವ ಉದ್ಧಾನ ವೀರಭದ್ರನ ಶಿಲ್ಪ, ಬೆಟ್ಟದ ಮೇಲಿನ ವೀರಭದ್ರನ ಶಿಲ್ಪ, ಅಲ್ಲಿಯೇ ಕಮಲಾಪುರದಿಂದ ಕಂಪ್ಲಿಗೆ ಹೋಗುವ ಮಾರ್ಗದ ಎಡಗಡೆಯಿರುವ ವೀರಭದ್ರನ ಶಿಲ್ಪಗಳು ಗಮನಾರ್ಹ. ಹೊಸಪೇಟೆಯಲ್ಲಿ ಕಣವಿ ವೀರಭದ್ರ, ಸಣ್ಣಕ್ಕಿ ವೀರಭದ್ರ, ಪೇಟೆ ವೀರಭದ್ರನ ಶಿಲ್ಪಗಳಿವೆ. ಕಂಪ್ಲಿಯಲ್ಲೂ ವೀರಭದ್ರನ ಒಂದು ಶಿಲ್ಪವನ್ನು ಕಾಣಬಹುದು. ಬೆಂಗಳೂರಿನಲ್ಲಿ ದೋಭಿಘಾಟ್ ಬಳಿ ಹದಿನೆಂಟು ಕೈಗಳನ್ನು ಹೊಂದಿರುವ ವೀರಭದ್ರನ ಶಿಲ್ಪವಿದೆ.[೧೮] ತುಮಕೂರು ಹತ್ತಿರದ ಹಳೇ ನಿಜಗಲ್ಲಿನಲ್ಲಿ ಹದಿನೈದು ಅಡಿ ಎತ್ತರದ ವೀರಭದ್ರನ ಶಿಲ್ಪವಿದೆ. ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಗಬ್ಬೂರಲ್ಲೂ ವೀರಭದ್ರನ ಶಿಲ್ಪವಿದೆ.

**೧.೨ ಶಿವನ ಶಿಲ್ಪಗಳು :** ನಮ್ಮ ಜನಪದರು ಶಿವನನ್ನು ಹಲವಾರು ರೀತಿಯಲ್ಲಿ ಪೂಜಿಸುತ್ತಾರೆ. ಶಿವನಿಗೆ ಹಲವಾರು ಅವತಾರಗಳೂ ಇವೆ. ಶಿವ ತ್ರಿಮೂರ್ತಿಗಳಲ್ಲಿ ಒಬ್ಬ. ಬ್ರಹ್ಮ, ವಿಷ್ಣುಗಳು ಸೃಷ್ಟಿ ಸ್ಥಿತಿಯ ದೇವತೆಗಳಾದರೆ, ಲಯದ ದೇವರು ಶಿವ. ಶಿವನದು ತಾಮಸಗುಣ. ಹಲವಾರು ಪುರಾಣಗಳಲ್ಲಿ ಶಿವನ ಹುಟ್ಟಿನ ಬಗ್ಗೆ ನಾನಾ ರೀತಿಯ ಕಥೆಗಳು[೧೯] ಬರುತ್ತವೆ. ಶಿವನಿಗೆ ಪಾರ್ವತಿ ಮತ್ತು ಗಂಗೆಯರು ಹೆಂಡತಿಯರು. ಶಿವ ತನ್ನ ಶಿರದಲ್ಲಿ ಗಂಗೆಯನ್ನು ಹೊಂದಿದ್ದಾನೆ. ಪರ್ವತದಲ್ಲಿ ಶಿವನು ವಾಸಿಸುತ್ತಾನೆ.


---

೧೮. ಮಾಹಿತಿ ನೀಡಿದವರು : ಡಾ. ಡಿ.ವಿ. ಪರಮಶಿವಮೂರ್ತಿ

೧೯. ವಿವರಗಳಿಗೆ ನೋಡಿ: ಡಾ. ಚಂದ್ರಶೇಖರ ಕಂಬಾರ (ಸಂ) : ಕನ್ನಡ ಜಾನಪದ ವಿಶ್ವಕೋಶ, ಸಂಪುಟ - ೨, ಪುಟ - ೧೮೩೭



ಶಿವನ ಶಿಲ್ಪ ( ಸಿದ್ದನಕೊಳ್ಳ )



ದ್ವಾರಪಾಲಕನ ಶಿಲ್ಪ ( ಮಂಗಳಗುಡ್ಡ )

ಶಿವ-ಪಾರ್ವತಿ ದಂಪತಿಗಳಿಗೆ, ಸುಬ್ರಹ್ಮಣ್ಯ ಮತ್ತು ಗಣಪತಿ ಎಂಬಿಬ್ಬರು ಮಕ್ಕಳು. ಶಿವ ತಾನು ಆಗಾಗ ತಳೆದ ರೂಪಗಳಿಂದ, ಬೇರೆ ಸ್ತ್ರೀಯರಿಂದ ಇಂದ್ರಜಿತ್, ಹನುಮಾನ್ ಮಂತಾದ ಮಕ್ಕಳು ಹುಟ್ಟಿದರೆಂದು ಹೇಳಲಾಗಿದೆ. ಶಿವನಿಂದ ಅನೇಕರು ಮೋಕ್ಷ ಹೊಂದಿದರೆಂದು ಪುರಾಣಗಳಲ್ಲಿ ಉಲ್ಲೇಖಗಳಿವೆ.[೨೦] ಶಿವನಿಗೆ ಕೆಂಪು ಜಡೆಗಳಿವೆ. ಮೂರು ಕಣ್ಣುಗಳಿವೆ. ಹಣೆಗಣ್ಣು ಬೆಂಕಿಯಿಂದ ಕೂಡಿದೆ. ಶಿವನಿಗೆ ಅನೇಕ ಹೆಸರುಗಳಿವೆ. ಶಿವನ ವಾಹನ ವೃಷಭ. ಶಿವನನ್ನು ನಾಲ್ಕು, ಎಂಟು ಮತ್ತು ಹತ್ತು ಕೈಗಳುಳ್ಳವನೆಂದು ವರ್ಣಿಸಲಾಗಿದೆ. ಅವನ ಕೈಯಲ್ಲಿ ತ್ರಿಶೂಲ, ಡಮರುಗಳು ಎದ್ದು ಕಾಣುತ್ತವೆ. ಸರ್ಪ ಆತನ ಆಭರಣ, ಹುಲಿ ಚರ್ಮವನ್ನು ಆತ ಸುತ್ತಿಕೊಂಡಿರುತ್ತಾನೆ. ಆನೆಯ ಚರ್ಮ ಹೊದ್ದಿರುತ್ತಾನೆ.

ಭಾರತದಲ್ಲಿ ಅಸಂಖ್ಯಾತರು ಶಿವನ ಆರಾಧಕರಾಗಿದ್ದಾರೆ. ಅನೇಕ ಸಲ ಶಿವ ಮತ್ತು ವಿಷ್ಣು ಇವರ ಮಧ್ಯೆ ಹೋರಾಟಗಳಾಗಿವೆ. ಶಿವ ವಿಷಪಾನ ಮಾಡಿದ್ದಾನೆ. ಸೂರ್ಯನೊಡನೆ ಹೋರಾಡಿ ಸೋಲಿಸಿದ್ದಾನೆ. ಶಿವನನ್ನು ಸಂಕೇತಿಸುವ ಅನೇಕ ಚಿನ್ಹೆಗಳಿವೆ. ಅವುಗಳಲ್ಲಿ ಶಿವಲಿಂಗವು ಮುಖ್ಯವಾದುದು. ಲಿಂಗವು ಪುರುಷ ಸಂಕೇತವಾದರೆ, ಅದರ ಕೆಳಗಿನ ಪೀಠವು ಹೆಣ್ಣು ಸಂಕೇತವಾಗಿದೆ. ಶಿವಲಿಂಗವನ್ನು ಪೂಜಿಸುವದು ಭಾರತದೆಲ್ಲೆಡೆ ಕಂಡುಬರುತ್ತದೆ.[೨೧]

ಹೀಗೆ ನಾನಾ ರೂಪದ ಶಿವನನ್ನು ನಮ್ಮ ಜನಪದರು ಶಿಲಾ ಮಾಧ್ಯಮದಲ್ಲಿ ಅವನ ಶಿಲ್ಪವನ್ನು ನಿರ್ಮಿಸಿ, ದೇವಾಲಯಗಳನ್ನು ಕಟ್ಟಿ ಪೂಜಿಸುತ್ತಾ ಬಂದಿದ್ದಾರೆ. ಶಿವನು ಲಿಂಗಪ್ಪನಾಗಿ, ರುದ್ರೇಶ್ವರನಾಗಿ, ವೀರಭದ್ರನಾಗಿ, ಮಹದೇವನಾಗಿ, ನೀಲಕಂಠೇಶ್ವರನಾಗಿ, ನಂದೀಶ್ವರನಾಗಿ, ಗಂಗಾಧರನಾಗಿ, ಸದಾಶಿವನಾಗಿ ನೂರಾರು ಹೆಸರುಗಳಿಂದ ಪೂಜಿಸಲ್ಪಡುತ್ತಿದ್ದಾನೆ. ಶಿವನ ಶಿಲ್ಪಗಳು ಹೆಚ್ಚಾಗಿ ಶಿಷ್ಟ ಪರಂಪರೆಯಲ್ಲೇ ಹೆಚ್ಚಾಗಿ ಸೃಷ್ಟಿಗೊಂಡವುಗಳಾಗಿವೆ. ಇದೇ ಶಿವನ ಶಿಲ್ಪಗಳು, ಶಿವರಾಯನಾಗಿ, ಗೌರಿಯ ಗಂಡನಾಗಿ, ನಂದೀಶ್ವರನಾಗಿ, ಮಣ್ಣಿನ ಮಾಧ್ಯಮ, ಮರದ ಮಾಧ್ಯಮ ಹಾಗೂ ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಗಳಲ್ಲಿ ರಚನೆಗೊಂಡು ಆಚರಿಸಲ್ಪಡುವ ಶಿಲ್ಪವಾಗಿದೆ.

**೧.೩ ಗಣಪತಿಯ ಶಿಲ್ಪಗಳು :** ಗಣಪತಿಯು ಮನೆಯ ಒಳಗೆ ಮತ್ತು ಮನೆಯ ಹೊರಗೆ ಎರಡೂ ಕಡೆ ಪೂಜಿಸಲ್ಪಡುವ ಜನಪದ ದೇವತೆಯಾಗಿದೆ. ಮೊದ ಮೊದಲು ಹಳ್ಳಿಗರಿಂದ ಸಗಣಿಯಲ್ಲಿ ರಚಿಸಲ್ಪಡುತ್ತಿದ್ದ ಗಣಪ, ನಂತರ ಮಣ್ಣು ಮತ್ತು ಶಿಲಾ ಮಾಧ್ಯಮಗಳಿಂದಲೂ ರಚಿಸಲ್ಪಟ್ಟು ಆರಾಧನೆಗೊಳ್ಳುತ್ತ ಬಂದ ದೇವತೆಯಾಗಿದೆ. ಗಣಪನಿಗೆ ಹಲವಾರು ಹೆಸರುಗಳಿವೆ.[೨೨] ಮುಖ್ಯವಾಗಿ ಗಣಪ, ವಿಘ್ನನಿವಾರಕನಾಗಿ, ಭಾವೈಕ್ಯದ ಸಂಕೇತವಾಗಿ, ವಿದ್ಯೆ-ಬುದ್ಧಿಗಳನ್ನು ಕೊಡುವ ದೇವತೆಯಾಗಿ ನಮ್ಮ ಜನಪದರಲ್ಲಿ ಕಂಡು ಬರುತ್ತಾನೆ. ಗಣಪತಿಯು ಆರ್ಯ ಹಾಗೂ ದ್ರಾವಿಡ ಸಂಸ್ಕೃತಿಗಳು ಸಂಘರ್ಷವಾಗಿ

೨೦. ವಿವರಗಳಿಗೆ ನೋಡಿ: ಡಾ. ಚಂದ್ರಶೇಖರ ಕಂಬಾರ (ಸಂ) : ಕನ್ನಡ ಜಾನಪದ ವಿಶ್ವಕೋಶ, ಸಂಪುಟ - ೨, ಪುಟ - ೧೮೩೭

೨೧. ಶ್ರೀಧರ ಭಾಸ್ಕರ ವರ್ಣೇಕರ್ ; ಭಾರತೀಯ ವಿದ್ಯೆ, ಪುಟ - ೧೪೫

೨೨. ವಿವರಗಳಿಗೆ ನೋಡಿ ಇದೇ ಮಹಾ ಪ್ರಬಂಧದ ಅಧ್ಯಾಯ-ಮೂರು, ಮಣ್ಣಿನ ಮಾಧ್ಯಮದ ಜನಪದ ಶಿಲ್ಪಕಲೆ, ಪುಟ -೪೩

ಕರಗಿ ಒಂದಾಗಿ ಇಳಿದ ಎರಕವೆಂದು ಹೇಳಬಹುದಾಗಿದೆ ಎಂದು ಡಾ. ಬಿ.ಎಸ್. ಗದ್ದಿಗಿಮಠರು[೨೩] ಪೌರಾಣಿಕ ದೃಷ್ಟಾಂತಗಳ ಮೂಲಕ ಪ್ರತಿಪಾದಿಸುತ್ತಾರೆ. ಇಂದು ಗಣೇಶ ಸಂಕುಚಿತವಾದ ಜಾತಿ, ಮತ, ಪಂಥಗಳಲ್ಲದೆ, ದೇಶದ ಗಡಿಗಳನ್ನು ಮೀರಿ ಪೂಜಿಸಲ್ಪಡುತ್ತಿದ್ದಾನೆ. ಹೀಗಾಗಿ ಗಣೇಶನ ಶಿಲ್ಪಗಳು ನೂರಾರು ಬಗೆಯಲ್ಲಿ, ನೂರಾರು ಶೈಲಿಗಳಲ್ಲಿ, ವೈವಿಧ್ಯಮಯವಾಗಿ ದೇಶವ್ಯಾಪಿಯಾಗಿ ಕಂಡುಬರುತ್ತವೆ. ಹಾಗೇ ಉತ್ತರ ಕರ್ನಾಟಕದಾದ್ಯಂತ ಗಣೇಶನ ಶಿಲ್ಪಗಳು ರಚನೆಯಾಗಿದ್ದು, ಅವುಗಳಲ್ಲಿ ಅನೇಕ ಶಿಲ್ಪಗಳು ರಚನೆ ಮತ್ತು ಆಚರಣೆಯ ದೃಷ್ಟಿಯಿಂದ ಜನಪದವಾಗಿ ಕಂಡುಬರುತ್ತವೆ. ಈ ಶಿಲ್ಪಗಳು, ಶಿಷ್ಟ ಪರಂಪರೆಯಲ್ಲೂ ಮತ್ತು ಜನಪದರಲ್ಲೂ ಹೇರಳವಾಗಿ ಕಂಡು ಬರುವದರಿಂದ ಅವನ್ನು ಪಟ್ಟಿ ಮಾಡುವದೂ ಅಸಾಧ್ಯವೆಂದು ತೋರುತ್ತದೆ. ಗಣಪನ ಶಿಲ್ಪಗಳು ಸಾಮಾನ್ಯವಾಗಿ ನಾಲ್ಕು, ಆರು, ಎಂಟು, ಹತ್ತು ಇಲ್ಲವೆ ಹದಿನಾರು ಕೈಗಳನ್ನು ಹಾಗೂ ಆನೆಯ ಸೊಂಡಿಲನ್ನು ಹೊಂದಿರುತ್ತವೆ. ನಾಲ್ಕು ಕೈಗಳಿರುವ ಗಣಪನ ಶಿಲ್ಪಗಳು ಹೆಚ್ಚಾಗಿ ಕಂಡು ಬರುತ್ತವೆ. ಕೈಗಳಲ್ಲಿ ಪರಶು, ಪಾಶ, ಮೋದಕ, ದಂತ, ಹಣ್ಣು ಇತ್ಯಾದಿಗಳಿರುತ್ತವೆ. ಗಣಪ ಇಂದು ಅನೇಕ ಬಗೆಯ ಆಧುನಿಕ ಆಯಾಮಗಳನ್ನು ಪಡೆದುಕೊಂಡು[೨೪] ಆಚರಿಸಲ್ಪಡುವ ಭಾವೈಕ್ಯದ ದೇವತೆಯಾಗಿದ್ದಾನೆ.

೧.೪ **ಮೈಲಾರಲಿಂಗನ ಶಿಲ್ಪಗಳು :** ಮಲ್ಲಯ್ಯನೇ[೨೫] ಮೈಲಾರ ದೇವರು, ಮೈಲಾರಲಿಂಗ, ಮಲ್ಲಾರಿ, ಮಾರ್ತಾಂಡ, ಭೈರವ, ಖಂಡೋಬಾ ಇತ್ಯಾದಿ ಹೆಸರುಗಳಿಂದ ಪ್ರಸಿದ್ಧನಾಗಿದ್ದಾನೆ. ಇವನನ್ನು ಶಿವಸ್ವರೂಪಿ ಎಂದು ಹೇಳುತ್ತಾರೆ.[೨೬] ಮೈಲಾರನಿಗೆ ಇಬ್ಬರು ಹೆಂಡಂದಿರು. ಒಬ್ಬಳು ಮಾಳಚಿದೇವಿ, ಇನ್ನೊಬ್ಬಳು ತುಪ್ಪದ ಮಾಳಮ್ಮ. ಮೈಲಾರನ ಅನುಯಾಯಿಗಳನ್ನು ಗೊರವ, ಗೊಗ್ಗಯ್ಯ, ವಗ್ಗಯ್ಯ ಮುಂತಾಗಿ ಕರೆಯುತ್ತಾರೆ. ಇವರಿಗೆ ವಿಶಿಷ್ಟವಾದ ವೇಷಭೂಷಣಗಳಿರುತ್ತವೆ. ಕರ್ನಾಟಕದಲ್ಲಿ ಮೈಲಾರನ ಕ್ಷೇತ್ರಗಳು ವಿಪುಲವಾಗಿವೆ. ಅವುಗಳಲ್ಲಿ ರಾಯಚೂರು ಜಿಲ್ಲೆಯ ಆನೆಗೊಂದಿ, ಬೆಳಗಾವಿ ಜಿಲ್ಲೆಯ ಕುಬಟೂರು, ಬಳ್ಳಾರಿ ಜಿಲ್ಲೆಯ ಮೈಲಾರ, ಬೀದರ ಜಿಲ್ಲೆಯ ಮೈಲಾರಪೂರ ಹಾಗೂ ಧಾರವಾಡ ಜಿಲ್ಲೆಯ ದೇವಿಹೊಸೂರು ಮುಂತಾದವು ಖ್ಯಾತವಾಗಿವೆ. ಸಾಮಾನ್ಯವಾಗಿ ದೇವಸ್ಥಾನಗಳಲ್ಲಿ ಮೈಲಾರನ ಶಿಲ್ಪಗಳು ಪೂಜಿಸಲ್ಪಡುತ್ತವೆ ಮತ್ತು ಮನೆಮನೆಗಳ ಜಗುಲಿಗಳ ಮೇಲೆ ಮೈಲಾರನ ಲೋಹದ ಶಿಲ್ಪಗಳು ಪೂಜಿಸಲ್ಪಡುತ್ತವೆ. ಪ್ರಸ್ತುತ ಅಧ್ಯಾಯದಲ್ಲಿ ಮೈಲಾರಲಿಂಗನ ಶಿಲಾ ಶಿಲ್ಪದ ಕುರಿತು ಕೆಲ ವಿವವರಗಳನ್ನು ತಿಳಿಯಬಹುದು.

**ರಚನೆ :** ಮೈಲಾರಲಿಂಗನ ಶಿಲಾ ಶಿಲ್ಪಗಳು ಉಬ್ಬು[೨೭] ಇಲ್ಲವೆ ದುಂಡು ಶಿಲ್ಪಗಳಾಗಿರುತ್ತವೆ. ಸಾಮಾನ್ಯವಾಗಿ ಸುಖಾಸನದಲ್ಲಿರುತ್ತವೆ. ನಾಲ್ಕು ಕೈಗಳಿರುತ್ತವೆ. ಕೈಗಳಲ್ಲಿ ತ್ರಿಶೂಲ, ಡಮರು, ಖಡ್ಗ,

---

೨೩. ಡಾ. ಬಿ.ಎಸ್. ಗದ್ದಿಗಿಮಠ ; ಕನ್ನಡ ಜನಪದ ಗೀತಗಳು, ಪುಟ - ೧೫೮

೨೪. ನೋಡಿರಿ : ಇದೇ ಮಹಾ ಪ್ರಬಂಧದ ಅಧ್ಯಾಯ ಮೂರು, ಮಣ್ಣಿನ ಮಾಧ್ಯಮದ ಜನಪದ ಶಿಲ್ಪಕಲೆ, ಪುಟ -೪೩

೨೫. ನೋಡಿರಿ : ಇದೇ ಮಹಾ ಪ್ರಬಂಧದ ಅಧ್ಯಾಯ ಆರು, ಲೋಹ ಮಾಧ್ಯಮದ ಜನಪದ ಶಿಲ್ಪಕಲೆ,ಮಲ್ಲಯ್ಯನ ಶಿಲ್ಪಗಳು

೨೬. ಡಾ. ಸೂರ್ಯನಾಥ್ ಕಾಮತ, ಡಾ. ಲಕ್ಷ್ಮಣ ತೆಲಗಾವಿ (ಸಂ) : ಇತಿಹಾಸ ದರ್ಶನ, ಸಂಪುಟ -೩, ಸಂಚಿಕೆ -೧, ಪುಟ -೧೩೧

೨೭. ಧಾರವಾಡದ ವಿದ್ಯಾಗಿರಿಯಲ್ಲಿ ಮೈಲಾರನ ದೇವಾಲಯದಲ್ಲಿ ಮೈಲಾರನ ಉಬ್ಬುಶಿಲ್ಪವಿದೆ

ಭಿಕ್ಷಾಪಾತ್ರೆ ಇರುತ್ತವೆ. ಎಡ ತೊಡೆಯ ಮೇಲೆ ಚತುರ್ಭುಜ ಗಣಪ ಹಾಗೂ ಬಲ ತೊಡೆಯ ಮೇಲೆ ಗಂಗೆಮಾಳಮ್ಮ ಕುಳಿತಿರುತ್ತಾರೆ. ಈತನ ಶಿಲ್ಪಗಳೊಂದಿಗೆ ನಿಂತ ನಾಯಿಯ ಶಿಲ್ಪವೂ ಇರುತ್ತದೆ. ಈತನ ಶಿಲ್ಪದೊಟ್ಟಿಗೇ ಸಾಲಂಕೃತವಾದ ಕುದುರೆಯು ಜಿಗಿಯುವ ಭಂಗಿಯಲ್ಲಿ ಶಿಲ್ಪಿತವಾಗಿರುತ್ತದೆ. ಶಿಲ್ಪದ ಹಿಂದಿನ ಪ್ರಭಾವಳಿಯ ಮೇಲುಗಡೆ ಈಶ್ವರಲಿಂಗ ಹಾಗೂ ನಂದಿ ವಾಹನನ ಚಿಕ್ಕಪ್ರಮಾಣದ ಉಬ್ಬು ಶಿಲ್ಪಗಳು ಇರುತ್ತವೆ. ಮೇಲ್ತುದಿಯ ಎಡ ಬಲಗಳಲ್ಲಿ ಸೂರ್ಯ-ಚಂದ್ರರ ಶಿಲ್ಪಗಳಿರುತ್ತವೆ. ಧಾರವಾಡದಲ್ಲಿರುವ ಮೈಲಾರನ ಶಿಲ್ಪಕ್ಕೆ ಕಿರೀಟವಿದೆ. ಈ ಕಿರೀಟದ ಮುಂಭಾಗದಲ್ಲಿ ತ್ರಿಶೂಲ, ಅದರ ಮೇಲ್ತುದಿಯಲ್ಲಿ ಒಂದು ರುಂಡದ ಶಿಲ್ಪವಿದೆ. ಕೊರಳಲ್ಲಿ ಕಂಠೀಹಾರ, ಮಣಿಸರ, ಕೈ ಮತ್ತು ಕಾಲುಗಳಿಗೆ ಬಳೆ, ಭುಜಕ್ಕೆ ಭುಜಬಂಧಗಳನ್ನು ತೊಡಿಸಲಾಗಿದೆ. ವೈಜಯಂತಿ ಮಾಲೆಯಲ್ಲಿ ಏಳು ರುಂಡಗಳನ್ನು ಪೋಣಿಸಲಾಗಿದೆ. ಮೈಲಾರನ ಮುಖದಲ್ಲಿ ಯೌವನ ಭಾವ ವ್ಯಕ್ತವಾಗುತ್ತದೆ.

**೧.೫ ದೊಡ್ಡಪ್ಪನ ಶಿಲ್ಪಗಳು :** ದೊಡ್ಡಪ್ಪ ಒಂದು ಪುರುಷ ದೇವತೆ. ಇದು ಗ್ರಾಮದೇವತೆಯೂ ಹೌದು. ಅದರಗುಂಜಿ[೨೮] ಗ್ರಾಮದಲ್ಲಿ ಈ ದೇವತಾ ಶಿಲ್ಪವನ್ನು ದೇವಾಲಯದಲ್ಲಿ ಕಾಣಬಹುದು. ಪದ್ಮಾಸನದಲ್ಲಿ ಕುಳಿತ ಭಂಗಿಯ ಈ ಶಿಲ್ಪ ಜೈನ ತೀರ್ಥಂಕರ ಮೂರ್ತಿಯೆಂದು ಅಭಿಪ್ರಾಯ ಪಡಲಾಗಿದೆ.[೨೯] ಅದೇನೇ ಇದ್ದರೂ, ಈ ದೇವತೆಯ ಬಗ್ಗೆ ಅನೇಕ ಐತಿಹ್ಯಗಳು ಹರಡಿಕೊಂಡಿವೆ. ನಂಬಿಕೆಗಳು ಬೆಳೆದು ಬಂದಿವೆ. ನಂಬಿಕೆಯೊಂದರ ಪ್ರಕಾರ, ರಾತ್ರಿಯ ಸಮಯದಲ್ಲಿ ದೊಡ್ಡಪ್ಪನು ಪಾದರಕ್ಷೆಗಳನ್ನು ಹಾಕಿಕೊಂಡು ಊರಿನ ಸುತ್ತಲೂ ಅಲೆದಾಡುವನು ಎಂಬ ನಂಬಿಕೆಯಿದೆ. ಹಲವಾರು ಜನ ಈ ದೇವತೆಗೆ ಹಲವಾರು ಜನ ಭಕ್ತಿಯಿಂದ ನಡೆದುಕೊಳ್ಳುವರು. ಉತ್ತರ ಕರ್ನಾಟಕದಲ್ಲಿ ಅನೇಕರು ದೊಡ್ಡಪ್ಪನ ಹೆಸರನ್ನು ವ್ಯಕ್ತಿಗಳಿಗೆ ಇಟ್ಟು ಕರೆಯುತ್ತಾರೆ. ಕೆಲವೆಡೆ ಹಿರೋಡ್ಯಾನನ್ನೇ ದೊಡ್ಡಪ್ಪ ಎಂದೂ ಕರೆಯುವರು. ಉತ್ತರ ಕರ್ನಾಟಕದ ಅನೇಕ ಗ್ರಾಮಗಳಲ್ಲಿ ನೈಸರ್ಗಿಕವಾಗಿರುವ ಸಾಮಾನ್ಯ ಆಕಾರದ ಒಂದು ಕಲ್ಲನ್ನೇ ಇಟ್ಟು ಪೂಜಿಸುವರು.

### ೧.೬ ಬೂತಾಳಸಿದ್ಧನ ಶಿಲ್ಪಗಳು

ಬೂತಾಳಸಿದ್ಧನು, ಶ್ರೀ ಅಮೋಘಸಿದ್ಧನ ಭಂಟನೆಂದು ಪುರಾಣವಿದೆ. ಎಲ್ಲೆಲ್ಲಿ ಅಮೋಘಸಿದ್ಧನ ದೇವಸ್ಥಾನಗಳಿವೆಯೋ, ಅಲ್ಲೆಲ್ಲ ಬೂತಾಳಸಿದ್ಧನು ಹತ್ತಿರದಲ್ಲೇ ಇರುತ್ತಾನೆ. ಸಾಮಾನ್ಯವಾಗಿ ಕಲ್ಲಿನ ನಿಸರ್ಗ ಸಹಜ ಆಕೃತಿಗಳನ್ನೇ ಕೆಲವೆಡೆ ಬೂತಾಳಸಿದ್ಧ ದೇವರೆಂದು ಪೂಜಿಸುತ್ತಾರೆ. ಸಿಂದಗಿ ತಾಲೂಕಿನ ಖೈನೂರು, ಜೇವರ್ಗಿ ತಾಲೂಕಿನ ಮಾಣಶಿವಣಗಿ, ಅರಕೇರಿ, ಕಲ್ಲೂರುಗಳಲ್ಲಿ ಈ ಬೂತಾಳಸಿದ್ಧನ ಶಿಲ್ಪಗಳಿರುವುದನ್ನು ಕಾಣಬಹುದು. ಅಫಜಲಪುರ ತಾಲೂಕಿನ ಆತನೂರದಲ್ಲೂ ಬೂತಾಳಸಿದ್ಧನ ಶಿಲ್ಪವಿದೆ. ಈ ಎಲ್ಲ ಶಿಲ್ಪಗಳೂ ಶಿಲಾ ಮಾಧ್ಯಮದಲ್ಲಿವೆ. ಆದರೆ ಕಲಾತ್ಮಕ ದೃಷ್ಟಿಯಿಂದ

---

೨೮. ಅದರಗುಂಜಿ: ತಾ. ಜಿ. ಧಾರವಾಡ

೨೯. ಬಿ.ಪಿ. ಪಾಟೀಲ; ಉತ್ತರ ಕರ್ನಾಟಕದ ಗ್ರಾಮ ದೇವತೆಗಳು; ಒಂದು ಅಧ್ಯಯನ, ಪುಟ - ೯೯

ಮಹತ್ವದವುಗಳಾಗುವದಿಲ್ಲ. ಆಕರ್ಷಕವಾದ ಕೆತ್ತನೆಯಾಗಲಿ, ಪ್ರಮಾಣ ಬದ್ಧವಾದ ರಚನೆಯಾಗಲಿ ಕಂಡು ಬರುವದಿಲ್ಲ. ಈ ಶಿಲ್ಪಗಳಿಗೆ ಸಾಮಾನ್ಯವಾಗಿ ಜಾಜ ( ಒಂದು ಬಗೆಯ ನಿಸರ್ಗಮೂಲದ ಬಣ್ಣ ) ಎಂಬ ಕೆಂಪು ಬಣ್ಣವನ್ನು ಬಳೆಯಲಾಗಿರುತ್ತದೆ. ಅಮವಾಸ್ಯೆಗಳಲ್ಲಿ ಈ ಶಿಲ್ಪಗಳಿಗೂ ಪೂಜೆ ನೈವೇಧ್ಯ ಸಲ್ಲುತ್ತದೆ. ಇಂಥ ಶಿಲ್ಪಗಳು ಹೆಚ್ಚಾಗಿ ಗುಲಬರ್ಗಾ ಮತ್ತು ಬಿಜಾಪೂರ ಜಿಲ್ಲೆಗಳಲ್ಲಿ ಕಂಡು ಬರುತ್ತವೆ.

**೧.೭ ಹಿರೋಡ್ಯಾನ ಶಿಲ್ಪಗಳು :** ಉತ್ತರ ಕರ್ನಾಟಕದ ಅನೇಕ ಹಳ್ಳಿಗಳಲ್ಲಿ ಹಿರೋಡ್ಯಾ ಎಂಬ ದೇವರ ಶಿಲ್ಪಗಳು ಕಂಡು ಬರುತ್ತವೆ. ಹಿರಿಯ ಒಡೆಯನೇ ಹಿರೋಡ್ಯಾ ಆಗಿರಬಹುದು. ಈತನೇ ಕೆಲವು ಊರುಗಳಲ್ಲಿ ಊರಿನ ಒಡೆಯನೆಂದು ಪೂಜಿಸಲ್ಪಡುವ ದೇವರಾಗಿದ್ದಾನೆ. ಈತನ ಶಿಲ್ಪಗಳು ಸರಳವಾದ ಪಚನೆಗಳಾಗಿರುತ್ತವೆ. ಕೆಲವು ಊರುಗಳಲ್ಲಿ ನೈಸರ್ಗಿಕವಾದ ಕಲ್ಲುಗಳನ್ನಿಟ್ಟು ಪೂಜಿಸುವುದುಂಟು. ಶಿಲ್ಪ ಹೇಗೇ ಇರಲಿ ಭಾವನಾತ್ಮಕವಾಗಿ ಹಿರೋಡ್ಯಾ ಜನಪದರಿಂದ ಪೂಜಿಸಲ್ಪಡುತ್ತಾನೆ.

ಈ ಎಲ್ಲ ಶಿಲಾ ಮಾಧ್ಯಮದ ಧರ್ಮಮೂಲ ಶಿಲ್ಪಗಳು ವರ್ಷದಲ್ಲಿ ಬರುವ ವಿವಿಧ ಹಬ್ಬ, ಹುಣ್ಣಿಮೆ, ಜಾತ್ರೆ, ಉತ್ಸವಗಳಲ್ಲಿ ಹಲವಾರು ಬಗೆಯ ಆಚರಣೆಗಳ ಕೇಂದ್ರಗಳಾಗಿ ಮಹತ್ವ ಪಡೆಯುತ್ತವೆ. ಈ ಶಿಲ್ಪಗಳು ರೂಪ ಆಕಾರಗಳಿಂದ ಸುಂದರವಾಗಿರಲಿ, ಇಲ್ಲದಿರಲಿ ಆದರೆ ಭಾವನಾತ್ಮಕವಾಗಿ ಭಯ-ಭಕ್ತಿಯನ್ನು ಹುಟ್ಟಿಸುವಂತಹ ಸ್ವರೂಪದವುಗಳಾಗಿರುತ್ತವೆ. ಅವುಗಳ ಹಿಂದಿರುವ ಪುರಾಣ, ಕಥೆ, ಐತಿಹ್ಯಗಳು, ಪವಾಡಗಳು ಇವೆಲ್ಲವುಗಳಿಂದಾಗಿ ಜನಪದರ ಮನಸ್ಸಿನ ಮೇಲೆ ಪ್ರಭಾವ ಬೀರುವಂತಹವುಗಳಾಗಿರುತ್ತವೆ.

## ೨. ಸ್ತ್ರೀ ದೇವತಾ ಶಿಲ್ಪಗಳು

ಗ್ರಾಮೀಣರ ಬದುಕಿನ ಹಲವು ಸ್ತರಗಳಲ್ಲಿ ಸ್ತ್ರೀಯು ಪ್ರಮುಖ ಪಾತ್ರ ವಹಿಸಿರುವಳು. ಹೀಗಾಗಿ ಸ್ತ್ರೀಯನ್ನು ಮಾತೃ ದೇವತೆಯಾಗಿ ಆರಾಧಿಸುವುದು, ಫಲದೇವತೆಯಾಗಿ, ಶಕ್ತಿ ದೇವತೆಯಾಗಿ ಕಂಡು ಅರ್ಚಿಸುವುದು ಸಾಮಾನ್ಯವಾಗಿ ಎಲ್ಲ ಜನಾಂಗಗಳಲ್ಲೂ ಕಂಡು ಬರುತ್ತದೆ.[೩೦] ಪಿತೃ ದೇವರಿಗಿಂತ ಮಾತೃದೇವತೆಯ ಕಲ್ಪನೆ ಪ್ರಾಚೀನವೆಂಬುದೂ ಹರಪ್ಪ ಮತ್ತು ಮೆಹೆಂಜೋದಾರೋಗಳಲ್ಲಿ ದೊರೆತ ಮಣ್ಣಿನ ನಗ್ನ ಸ್ತ್ರೀ ವಿಗ್ರಹಗಳಿಂದ ತಿಳಿದು ಬರುತ್ತದೆ.[೩೧] ಸ್ತ್ರೀ ದೇವತಾ ಶಿಲ್ಪಗಳನ್ನು ಆರಂಭದಲ್ಲಿ ಮಣ್ಣಿನಲ್ಲಿ ರಚಿಸಿದ ಮಾನವನು ಕಾಲಕ್ರಮದಲ್ಲಿ ಮರ, ಶಿಲೆ ಇತ್ಯಾದಿ ಮಾಧ್ಯಮಗಳಲ್ಲೂ ರಚಿಸುತ್ತ ಬಂದಿರುವನು. ಉತ್ತರ ಕರ್ನಾಟಕದಲ್ಲಿ ಕಂಡು ಬರುವ ನೂರಾರು ಬಗೆಯ ಸ್ತ್ರೀ ದೇವತಾ ಶಿಲ್ಪಗಳಲ್ಲಿ ಹಲವು ಆಚರಣಾತ್ಮಕವಾಗಿ ಮತ್ತು ರಾಚನಿಕವಾಗಿ ಜನಪದ ಶೈಲಿಯಲ್ಲಿರುವುದನ್ನು ಕಾಣಬಹುದು. ಪ್ರಾತಿನಿಧಿಕವಾಗಿ ಕೆಲವು ಶಿಲ್ಪಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

---

೩೦. ಡಾ. ಬಿ.ಪಿ. ಪಾಟೀಲ; ಗ್ರಾಮ ದೇವತೆಗಳು, ಪುಟ - ೭

೩೧. ಡಾ. ಎಸ್.ಎಂ. ವೃಷಭೇಂದ್ರ ಸ್ವಾಮಿ (ಸಂ) : ಜಾನಪದ ಸಾಹಿತ್ಯ ದರ್ಶನ, ಭಾಗ - ೮, ಪುಟ - ೮೧

[illegible]

## ೨.೧ ಲಜ್ಜಾಗೌರಿ ಶಿಲ್ಪಗಳು

ಮೂಲತಃ ಶಿಷ್ಟಪದವಾಗಿರುವ ಲಜ್ಜಾಗೌರಿ ಶಿಲ್ಪ ಕಾಲಕ್ರಮದಲ್ಲಿ ಜನಪದ ದೇವತಾ ಶಿಲ್ಪವಾಗಿ ಮಾರ್ಪಟ್ಟಿದೆ. ಇದು ತಾಂತ್ರಿಕವಾಗಿ ಯೋನಿ ಪ್ರಧಾನವಾದ ಶಿಲ್ಪವೆಂದು ಹೇಳಬಹುದು. ಯೋನಿ ಕಾಣುವಂತೆ ಕಾಲುಗಳನ್ನಗಲಿಸಿ, ಕುಳಿತ ಇಲ್ಲವೆ ಮಲಗಿದ ಭಂಗಿಯ ಶಿಲ್ಪವಾಗಿದೆ. ಉತ್ತರ ಕರ್ನಾಟಕವಲ್ಲದೇ ಭಾರತದ ಬೇರೆ ಬೇರೆ ಭಾಗಗಳಲ್ಲಿ ಈ ಶಿಲ್ಪಗಳು ಕಂಡು ಬರುತ್ತವೆ. ಇವುಗಳಲ್ಲಿ ಬಹಳಷ್ಟು ಕಲ್ಲಿನವು, ಕೆಲವು ಮಣ್ಣಿನವುಗಳಾಗಿವೆ. ಲಜ್ಜಾ ಗೌರಿಯ ಬಗ್ಗೆ ಅನೇಕರು ಅಧ್ಯಯನ ಮಾಡಿದ್ದಾರೆ.[೩೨] ಅವರಲ್ಲಿ ಡಾ. ಎಂ. ಎಂ. ಕಲಬುರ್ಗಿಯವರೂ ಒಬ್ಬರಾಗಿದ್ದಾರೆ. ಡಾ. ಕಲಬುರ್ಗಿಯವರು ಈ ಶಿಲ್ಪಗಳನ್ನು ರುಂಡವುಳ್ಳ ವಿಗ್ರಹಗಳು, ರುಂಡವಿಲ್ಲದ ವಿಗ್ರಹಗಳು ಎಂದು ಪ್ರಧಾನವಾಗಿ ಎರಡು ರೀತಿಯಲ್ಲಿ ವಿಂಗಡಿಸುತ್ತಾರೆ. ಮತ್ತೆ ರುಂಡವುಳ್ಳ ವಿಗ್ರಹಗಳನ್ನು ಮುಖವುಳ್ಳ, ಮುಖಕ್ಕೆ ಬದಲು ಕಮಲವುಳ್ಳ ಇಲ್ಲವೆ, ಕೇವಲ ವರ್ತುಳಾಕಾರವುಳ್ಳ ವಿಗ್ರಹಗಳೆಂದೂ ವರ್ಗೀಕರಿಸಬಹುದೆಂದು ಹೇಳುತ್ತಾರೆ.[೩೩] ಇವುಗಳಲ್ಲಿ ಮುಖಕ್ಕೆ ಬದಲು ಕಮಲವಿರುವ ವಿಗ್ರಹಗಳೇ ಅಧಿಕವಾಗಿ ಕಂಡು ಬರುತ್ತವೆ.

**ರಚನೆ :** ಸಾಮಾನ್ಯವಾಗಿ ಲಜ್ಜಾಗೌರಿಯ ಶಿಲ್ಪದ ಎರಡೂ ಕೈಗಳಲ್ಲಿ ಕಮಲಗಳಿರುವಂತೆ ಕೆತ್ತಲಾಗಿರುತ್ತದೆ. ಕರ್ನಾಟಕದಲ್ಲಿ ದೊರೆತ ಲಜ್ಜಾಗೌರಿ ಶಿಲ್ಪಗಳಲ್ಲಿ ಬೀಳಗಿಯಲ್ಲಿನ ಶಿಲ್ಪಕ್ಕೆ ಮುಖಕ್ಕೆ ಬದಲು ವರ್ತುಳಾಕಾರವನ್ನು ಬಿಡಿಸಲಾಗಿದೆ. ಉಳಿದವುಗಳಿಗೆ ಮುಖಕ್ಕೆ ಕಮಲವನ್ನು ಕೆತ್ತಲಾಗಿದೆ.

ಈ ಲಜ್ಜಾಗೌರಿ ಶಿಲ್ಪಗಳಿಗೆ ದೇವಾಲಯಗಳಿರುವುದಿಲ್ಲ. ಮತ್ತು ಜನರು ಇವುಗಳಿಗೆ ವಸ್ತ್ರ, ಒಡವೆಗಳನ್ನು ತೊಡಿಸುವುದಿಲ್ಲ. ಈ ನಗ್ನ ಶಿಲ್ಪಗಳನ್ನು ಕುಳಿತ ಪ್ರಸೂತಿ ಭಂಗಿಯದೋ, ಮಲಗಿದ ಸಂಭೋಗ ಭಂಗಿಯದೋ ಎಂಬ ಸಂದೇಹ ಬರುವಂತೆ ಶಿಲ್ಪಿಸಿದವುಗಳಾಗಿರುತ್ತವೆ. ಒಂದು ವೇಳೆ ಪ್ರಸೂತಿ ಭಂಗಿಯದೆಂದು ಭಾವಿಸಿದರೆ ಸೃಷ್ಟಿ ಸಂಕೇತವೆಂದೂ, ಸಂಭೋಗ ಭಂಗಿಯದೆಂದು ಭಾವಿಸಿದರೆ ಭೋಗ ಸಂಕೇತವೆಂದೂ ಇವಕ್ಕೆ ಅರ್ಥ ಹೇಳಬೇಕಾಗುತ್ತದೆ. ಇವುಗಳಲ್ಲಿ ಮೊದಲನೆಯದೇ ಸರಿ ಇರಬಹುದು ಎಂದು ಹೇಳುತ್ತ ಇಲ್ಲಿಯೂ ಸೃಷ್ಟಿಪ್ರಾಪ್ತಿಗಾಗಿ ಅಲ್ಲ, ಸೃಷ್ಟಿ ಸ್ಥಾನವೆಂದು ಪೂಜಿಸುತ್ತಿರಬಹುದು ಎಂದು ಡಾ. ಕಲಬುರ್ಗಿಯವರು ಅಭಿಪ್ರಾಯ ಪಟ್ಟಿರುವದು ಸಮಂಜಸವೆಂದು ತೋರುತ್ತದೆ.

**ಜಾನಪದ ಹೇಳಿಕೆಗಳು :** ಲಜ್ಜಾಗೌರಿ ಶಿಲ್ಪದ ಬಗೆಗೆ ಎರಡು ಜಾನಪದ ಹೇಳಿಕೆಗಳಿವೆ.[೩೪]

೧. ಒಮ್ಮೆ ಶಿವ ಮತ್ತು ಪಾರ್ವತಿ ನಗ್ನರಾಗಿ ಜಲಕ್ರೀಡೆಯಾಡುತ್ತಿದ್ದರು. ಆಗ ಭಕ್ತನೊಬ್ಬ ದರ್ಶನಕ್ಕೆ ಬರಲು ಶಿವನು ಓಡಿ ಹೋಗಿ ದೇವಾಲಯದಲ್ಲಿರುವ ಲಿಂಗದಲ್ಲಿ ಲೀನವಾದನು. ಪಾರ್ವತಿ

---

೩೨. ಡಾ. ಎಂ.ಎಂ. ಕಲಬುರ್ಗಿ, ಶ್ರೀ ಗಣೇಶ ಶಾಸ್ತ್ರಿ ಲೇಲೆ, ಶ್ರೀಮತಿ ಸ್ಟೇಲಾ ಕ್ರಾಮಿಶ್, ಶ್ರೀ ಸುಕಾಲಿಯಾ, ಶ್ರೀ ಕಾಂಡ್ರಿಂಗ್‌ಟನ್ ಮತ್ತು ಶ್ರೀಮತಿ ಮರೆ, ಶ್ರೀ ಜಗದೀಶ ನಾರಾಯಣ ತಿವಾರಿ, ಡಾ. ಅ. ಸುಂದರ, ಡಾ. ಎಸ್. ಶೆಟ್ಟರ, ಡಾ. ಎಂ. ಚಿದಾನಂದ ಮೂರ್ತಿ, ಡಾ. ಆರ್. ಸಿ. ಡೇರೆ, ಡಾ. ಶೀಲಾಕಾಂತ ಪತ್ತಾರ

೩೩. ಡಾ. ಎಂ.ಎಂ. ಕಲಬುರ್ಗಿ ; ಮಾರ್ಗ, ಸಂಪುಟ - ೨, ಪುಟ - ೩೭೪

೩೪. ..... ಅದೇ ....., ಪುಟ - ೩೭೫

[illegible]

ಲಜ್ಜೆಯಿಂದ ನೀರಲ್ಲೇ ಅಡಗಿದಳು. ಪಾರ್ವತಿಯ ಈ ಲಜ್ಜೆ ಕಾರಣವಾಗಿ ಆಕೆಯನ್ನು ಲಜ್ಜಾಗೌರಿಯೆಂದು ಕರೆಯುತ್ತಾರೆ.

೨. ಶಿವನು, ಪಾರ್ವತಿಗೆ ತನ್ನ ಕಂಬಳಿಯನ್ನು ಕೊಟ್ಟು ಲೋಕ ಸಂಚಾರಕ್ಕೆ ಹೋಗಿದ್ದನು. ಮತ್ತೆ ತಾನೇ ಇಲಿಯಾಗಿ ಬಂದು ಆ ಕಂಬಳಿಯನ್ನು ಅಲ್ಲಲ್ಲಿ ಕಡಿದನು. ಈ ತೂತು ಬಿದ್ದ ಕಂಬಳಿಯನ್ನು ಕಂಡು ಶಿವನು ಕೋಪಗೊಳ್ಳಬಹುದೆಂದು ಪಾರ್ವತಿ ನಡುಗಿದಳು. ಅಷ್ಟರಲ್ಲಿ ಶಿವನು ಸಿಂಪಿಗನ ರೂಪದಲ್ಲಿ ಬರುವನು. ಕಂಬಳಿಯನ್ನು ಹೊಲಿದು ಮೊದಲಿನಂತೆ ಮಾಡಿಕೊಟ್ಟರೆ ಬೇಡಿದುದನ್ನು ಕೊಡುವುದಾಗಿ ಪಾರ್ವತಿ ಸಿಂಪಿಗನಿಗೆ ಮಾತು ಕೊಡುತ್ತಾಳೆ. ಕಂಬಳಿಯನ್ನು ಮೊದಲಿನಂತೆ ಮಾಡಿದ ಸಿಂಪಿಗ ಪಾರ್ವತಿಗೆ ಭೋಗ ಸುಖವನ್ನು ಕೇಳುತ್ತಾನೆ. ಮಾತು ಕೊಟ್ಟ ತಪ್ಪಿಗಾಗಿ ಪಾರ್ವತಿ ಅನಿವಾರ್ಯವಾಗಿ ಒಪ್ಪಿದಳು. ಸಂಭೋಗನಿರತ ಸಿಂಪಿಗ ತನ್ನ ಶಿವರೂಪ ತೋರಿದ. ಆಗ ಪಾರ್ವತಿ ಲಜ್ಜೆಯಿಂದ ತಲೆ ಕೆಳಗೆ ಮಾಡಿದಳು. ರುಂಡ ಕತ್ತರಿಸಲ್ಪಟ್ಟಿತು.[೩೫] ಸಂಭೋಗ ಸಮಯದ ನಗ್ನ ರೂಪದಲ್ಲಿಯೇ ರುಂಡ ಉಳಿದು ಬಿಟ್ಟಿತು. ಇದೇ ಲಜ್ಜಾ ಗೌರಿಯಾಗಿದೆಯಂತೆ. ಈ ಕಥೆ ಲಜ್ಜಾಗೌರಿ ರುಂಡರಹಿತವಾಗಿರುವುದಕ್ಕೆ ಮತ್ತು ನಗ್ನವಾಗಿರುವುದಕ್ಕೆ ಸುಂದರವಾದ ಕಾರಣವನ್ನು ಒದಗಿಸುತ್ತದೆ. ಶಂಕರ ದಾಸಿಮಯ್ಯನ ಪುರಾಣ ಮತ್ತು ಜನಪದ ಸಾಹಿತ್ಯಗಳಲ್ಲಿಯೂ ಈ ಕಥೆಯಿದೆ. ಕಥೆ ಏನೇ ಇದ್ದರೂ ಲಜ್ಜಾಗೌರಿ ಶಿಲ್ಪಗಳು ಕರ್ನಾಟಕದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಕೆಲವು ನಿರ್ಧಿಷ್ಟ ಸ್ಥಳಗಳಲ್ಲಿ ನೋಡಲು ಸಿಗುತ್ತವೆ. ಮುಖ್ಯವಾಗಿ ಸನ್ನತಿ[೩೬]ಯಲ್ಲಿ (ಸುಟ್ಟ ಮಣ್ಣಿನ) ಮೂರು ಶಿಲ್ಪಗಳಿವೆ. ಬಾದಾಮಿಯ[೩೭] ವಸ್ತು ಸಂಗ್ರಹಾಲಯದಲ್ಲಿ ಒಂದು ಶಿಲ್ಪವಿದೆ. ನಾಗರಾಳದಲ್ಲಿ[೩೮] ಕಪ್ಪು ಶಿಲೆಯಲ್ಲಿ ದೊಡ್ಡ ಶಿಲ್ಪವಿದೆ. ಹೊಸ ಮಹಾಕೂಟದಲ್ಲಿ[೩೯] ನಸುಗೆಂಪು ಶಿಲೆಯಲ್ಲಿ ಒಂದು ದೊಡ್ಡ ಶಿಲ್ಪವಿದೆ. ಜಾಲಿಹಾಳದ ಹತ್ತಿರದ ಹುಲಿಗೆಮ್ಮನ ಕೊಳ್ಳದಲ್ಲಿ[೪೦] ಎರಡು ಶಿಲ್ಪಗಳಿವೆ. ಇವುಗಳಿಗೆ ಈಗ ಸುಣ್ಣ ಬಳೆಯಲಾಗಿದೆ. ಸಿದ್ಧನಕೊಳ್ಳದಲ್ಲಿ[೪೧] ನೆಲಹಾಸು ಶಿಲೆಯ ಮೇಲೆ ಕೆತ್ತಲಾದ ಒಂದು ದೊಡ್ಡ ಶಿಲ್ಪವಿದೆ. ಇದು ಜನರಿಂದ ಪೂಜೆಗೊಳ್ಳುತ್ತದೆ. ಬೀಳಗಿಯಲ್ಲಿ[೪೨] ನಸುಗೆಂಪು ಶಿಲೆಯ ಒಂದು ದೊಡ್ಡ ಶಿಲ್ಪವಿದೆ. ಮಜತಿಯಲ್ಲಿ[೪೩] ನಸುಗೆಂಪು ಶಿಲೆಯ ಒಂದು ದೊಡ್ಡ ಶಿಲ್ಪವಿದೆ. ಬಳ್ಳಿಗಾವೆಯಲ್ಲಿ[೪೪] ಕಪ್ಪು ಶಿಲೆಯ ಒಂದು ದೊಡ್ಡ ಶಿಲ್ಪವಿದೆ. ಹಿರೇಮಣೂರದಲ್ಲಿ[೪೫] ಕಂಬದಲ್ಲಿ

---

೩೫. ಶ್ರೀ ಗಣೇಶ ಶಾಸ್ತ್ರಿ ಲೇಲೆ ಅವರು ಮಹಾಕೂಟದಲ್ಲಿ ಸಂಗ್ರಹಿಸಿದ ಹೇಳಿಕೆಯಾಗಿದೆ

೩೬. ಸನ್ನತಿ ; ತಾ. ಚಿತ್ತಾಪುರ, ಜಿ. ಗುಲಬರ್ಗಾ

೩೭. ಬಾದಾಮಿ, ತಾ. ಜಿ. ಬಾಗಲಕೋಟ

೩೮. ನಾಗರಾಳ, ತಾ. ಬಾದಾಮಿ, ಜಿ. ಬಾಗಲಕೋಟ

೩೯. ಹೊಸಮಹಾಕೂಟ, ತಾ. ಬಾದಾಮಿ, ಜಿ. ಬಾಗಲಕೋಟ

೪೦. ಹುಲಿಗೆಮ್ಮನ ಕೊಳ್ಳ, ತಾ. ಬಾದಾಮಿ, ಜಿ. ಬಾಗಲಕೋಟ

೪೧. ಸಿದ್ಧನಕೊಳ್ಳ, ತಾ. ಬಾದಾಮಿ, ಜಿ. ಬಾಗಲಕೋಟ

೪೨. ಬೀಳಗಿ, ಜಿ. ಬಾಗಲಕೋಟ

೪೩. ಮಜತಿ, ತಾ. ಹುಕ್ಕೇರಿ, ಜಿ. ಬೆಳಗಾಂ

೪೪. ಬಳ್ಳಿಗಾವಿ, ತಾ. ಶಿಕಾರಿಪುರ, ಜಿ. ಶಿವಮೊಗ್ಗ

೪೫. ಹಿರೇಮಣೂರ, ತಾ. ಅಫಜಲಪೂರ, ಜಿ. ಗುಲಬರ್ಗಾ



ಲಜ್ಜಾಗೌರಿ ಶಿಲ್ಪ (ಅಲಗೆಬಾಳ್ನ ಕೆರೆ).



ಲಜ್ಜಾಗೌರಿ ಶಿಲ್ಪ ( ಸಿದ್ದನಕೊಳ್ಳ

ಒಂದು ಶಿಲ್ಪವಿದೆ. ಇವುಗಳಲ್ಲದೆ ಸಿದ್ಧನಕೊಳ್ಳದ ನೆರೆಯ ಗುಡ್ಡದ ಮೇಲಿನ ಸಿಬಾರ ಬಾಗಿಲು ಹತ್ತಿರ ಒಂದು, ಐಹೊಳೆ ವಸ್ತು ಸಂಗ್ರಹಾಲಯದ ಹೊರ ಆವರಣದಲ್ಲಿ ಎರಡು, ಕಲ್ಲೂರು [೪೬] ಗ್ರಾಮದಲ್ಲಿನ ದೇವಾಲಯದ ಕಂಬದ ಮೇಲೆ ಒಂದು, ಹೊಸಪೇಟೆಯ ವಾಲ್ಮೀಕಿ ಕೇರಿಯ ಬೀದಿ ಪಕ್ಕದಲ್ಲಿ ಒಂದು ಲಜ್ಜಾಗೌರಿ ಶಿಲ್ಪಗಳಿರುವುದನ್ನು ಡಾ. ಎಂ.ಎಂ. ಕಲಬುರ್ಗಿಯವರು [೪೭] ಪತ್ತೆ ಹಚ್ಚಿದ್ದಾರೆ.

ಬಳ್ಳಿಗಾವಿಯಲ್ಲಿರುವ ಲಜ್ಜಾಗೌರಿ ಶಿಲ್ಪವನ್ನು ಅಲ್ಲಿನ ಜನರು ಕಮಲಮ್ಮ ಎಂದು ಕರೆಯುತ್ತಾರೆ. ಈ ಶಿಲ್ಪಗಳನ್ನು ಕೆಲವೆಡೆ ಎಲ್ಲಮ್ಮ ಎಂದು ಕರೆಯುವರು ಎಂದು ಡಾ. ಎಸ್. ಸೆಟ್ಟರ್ [೪೮] ಹೇಳುತ್ತಾರೆ. ಕಮಲವೇ ಶಿಲ್ಪದ ಮುಖವಾಗಿರುವುದರಿಂದ ಕಮಲಮ್ಮ ಎಂದು ಕರೆಯುತ್ತಿರಬೇಕೆಂದು ನಾವು ಸರಳವಾಗಿ ಊಹಿಸಬಹುದಾಗಿದೆ.

ಸನ್ನತಿಯಲ್ಲಿರುವ ಶಿಲ್ಪಗಳು ಗಾತ್ರದಲ್ಲಿ ಸಣ್ಣವು ಮತ್ತು ಮಣ್ಣಿನಿಂದ ಮಾಡಿ ಸುಟ್ಟವುಗಳಾಗಿವೆ. ಬಹುಶಃ ಇವು ಮನೆಯಲ್ಲಿ ಪೂಜಿಸಲ್ಪಡುವ ವಿಗ್ರಹಗಳು. ಮಿಕ್ಕವು ಮಾತ್ರ ದೊಡ್ಡಗಾತ್ರದ ಶಿಲಾ ಶಿಲ್ಪಗಳಾಗಿದ್ದು ಬಹಿರಂಗವಾಗಿ ಪೂಜಿಸಲ್ಪಡುವಂಥವುಗಳಾಗಿವೆ. ಸಾಮಾನ್ಯವಾಗಿ ದೊಡ್ಡ ಶಿಲ್ಪಗಳು ಕೊಳ್ಳದಲ್ಲಿ ಸಿಕ್ಕಿವೆ. ಈ ಕೊಳ್ಳಗಳಲ್ಲಿ ಈಗ ಜನವಸತಿ ಇಲ್ಲ. ಪೂರ್ವದಲ್ಲೂ ಇದ್ದ ಸೂಚನೆಗಳಿಲ್ಲ. ಬಹುಶಃ ನಿರ್ಜನ ಸ್ಥಳದಲ್ಲಿ ಈ ಶಿಲಾ ಶಿಲ್ಪವನ್ನು ಪೂಜಿಸುತ್ತಿದ್ದರೆಂದು ಇದರಿಂದ ವ್ಯಕ್ತವಾಗುತ್ತದೆ. ಅಲ್ಲದೆ ಲಜ್ಜಾಗೌರಿ ಶಿಲ್ಪಗಳು ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಬಾದಾಮಿ ಪರಿಸರದಲ್ಲಿ ಹೆಚ್ಚು ಸಿಗುತ್ತವೆ. ಆದುದರಿಂದ ಬಾದಾಮಿ ಪರಿಸರ ಈ ಸಂಪ್ರದಾಯದ ಒಂದು ಮುಖ್ಯ ನೆಲೆಯೆನಿಸುತ್ತದೆ. ಅಲ್ಲದೆ ಈ ಪ್ರದೇಶ ಪ್ರಮುಖವಾಗಿ ಶೈವ ಪರಿಸರವಾಗಿರುವದರಿಂದ ಇದಕ್ಕೂ, ಲಜ್ಜಾಗೌರಿಗೂ ತಾತ್ವಿಕ, ಆಚರಣಾತ್ಮಕ ಸಂಬಂಧವಿರಲೇಬೇಕು[೪೯] ಎಂದು ಡಾ. ಕಲಬುರ್ಗಿಯವರು ಸಾಕಷ್ಟು ವಿವರಗಳನ್ನು ನೀಡುತ್ತಾರೆ.

**ನಂಬಿಕೆ :** ಲಜ್ಜಾಗೌರಿ ಮಕ್ಕಳ ಫಲ ಕೊಡುವ ದೇವತೆಯೆಂಬುದು ಸಾಮಾನ್ಯ ನಂಬಿಕೆಯಾಗಿದೆ. ಮಕ್ಕಳಿಗಾಗಿ ಹಂಬಲಿಸುವ ಮಹಿಳೆಯರು ಈ ಶಿಲ್ಪವನ್ನು ಪೂಜಿಸುವರೆಂದೂ, ಅದರ ಯೋನಿಯನ್ನು ನೆಕ್ಕುವರೆಂದೂ ತಿಳಿದು ಬರುತ್ತದೆ. ಸಿದ್ಧನಕೊಳ್ಳದ ವಿಗ್ರಹದ ಯೋನಿಗೆ ಬೆಣ್ಣೆ, ಕುಂಕುಮ ಹಚ್ಚುವರೆಂದು ಶ್ರೀ ಢೇರೆ ಹೇಳುತ್ತಾರೆ.[೫೦] ಇದು ಫಲಶಕ್ತಿಯ ಸಂಕೇತವೆಂದೂ, ಫಸಲು ಸಮೃದ್ಧಿಗಾಗಿ ಇದನ್ನು ಆರಾಧಿಸುತ್ತಿರಬಹುದೆಂದೂ ಡಾ. ಎಂ. ಚಿದಾನಂದಮೂರ್ತಿ [೫೧] ಹೇಳುತ್ತಾರೆ. ಇವರ ಈ ಅಭಿಪ್ರಾಯವನ್ನು ಡಾ. ಕಲಬುರ್ಗಿಯವರು ಅಲ್ಲಗಳೆಯುತ್ತಾರೆ. ಬಂಜೆಯರು ಮಕ್ಕಳಿಗಾಗಿ ಕೆಲವೊಮ್ಮೆ

---

೪೬. ಕಲ್ಲೂರ, ತಾ. ಯಲಬುರ್ಗಾ, ಜಿ. ಕೊಪ್ಪಳ.

೪೭. ಡಾ. ಎಂ.ಎಂ. ಕಲಬುರ್ಗಿ ; ಮಾರ್ಗ, ಸಂಪುಟ - ೨, ಪುಟ - ೩೭೭

೪೮. ಡಾ. ಎಸ್. ಶೆಟ್ಟರ್ ; ಮಾರ್ಗ ಪಬ್ಲಿಕೇಶನ್ಸ್, ೧೯೭೬

೪೯. ಪಿ.ಆರ್. ತಿಪ್ಪೇಸ್ವಾಮಿ (ಸಂ) ; ಶಿಲ್ಪಕಲಾ ಪ್ರಪಂಚ, ಪುಟ - ೬೨

೫೦. ಡಾ. ಎಂ.ಎಂ. ಕಲಬುರ್ಗಿ ; ಮಾರ್ಗ, ಸಂಪುಟ - ೨, ಪುಟ - ೩೮೨

೫೧. ಡಾ. ಎಂ. ಚಿದಾನಂದಮೂರ್ತಿ, ಬಾದುಬ್ಬೆ-ಬಾದುಮಯ್ಯ-ಬನಶಂಕರಿ-ಪೆಟ್ಟಿಗೆ-ಲಜ್ಜಾಗೌರಿ ( ಸಾಧನೆ ೧೪-೨)

ಈ ಶಿಲ್ಪಗಳನ್ನು ಪೂಜಿಸುವದರಿಂದ, ಇದು ಕೇವಲ ಮಕ್ಕಳ ಫಲಕ್ಕಾಗಿ ಪೂಜಿಸುವ ದೇವತೆಯೆಂದು ಹೇಳಬೇಕೆನಿಸುತ್ತಿದ್ದರೂ ಇದು ಆ ಮೇಲೆ ಬೆಳೆದು ಬಂದ ನಂಬಿಕೆಯಾಗಿರುವಂತೆ ಕಾಣುತ್ತದೆ.[೫೨] ಹೀಗಾಗಿ ಒಟ್ಟಿನಲ್ಲಿ ಲಜ್ಜಾಗೌರಿ ಲೌಕಿಕ ಫಲಪ್ರಾಪ್ತಿಗಾಗಿ ಪೂಜಿಸಲ್ಪಡುವ ಶಿಲ್ಪವಲ್ಲವೆಂಬ ಅಭಿಪ್ರಾಯ ವ್ಯಕ್ತಪಡಿಸಿ ಅದನ್ನು ಸಾಕಷ್ಟು ವಿವರಗಳನ್ನು ಕೊಟ್ಟು ಸಮರ್ಥಿಸುತ್ತಾರೆ. ಈ ಅರ್ಥದಲ್ಲಿ ಲಜ್ಜಾಗೌರಿ ಶಿಲ್ಪ, ಶಿಷ್ಟ ಸಂಪ್ರದಾಯದ ಹಿನ್ನೆಲೆಯಲ್ಲಿ ಹುಟ್ಟಿ ಕ್ರಮೇಣ ಆಚರಣಾತ್ಮಕವಾಗಿ ಜನಪದ ಸಂಪ್ರದಾಯಕ್ಕೆ ವಾಲಿದ ವಿಲಕ್ಷಣ ಶಿಲ್ಪವಾಗಿದೆಯೆನ್ನಬಹುದು.

## ೨.೨ ಕಾಳಿಯ ಶಿಲ್ಪಗಳು

ಶಕ್ತಿ ದೇವತೆಗಳಲ್ಲಿ ಒಬ್ಬಳು ಕಾಳಿ ದೇವತೆ. ವಚನಗಳಲ್ಲಿ ಕಾಳಿ, ಕಾಳಿಕಾ, ಕಾಳೆವ್ವ, ಭದ್ರಕಾಳಿ ಈ ರೂಪಗಳಲ್ಲಿ ಕಾಳಿಯ ಉಲ್ಲೇಖಗಳಿವೆ.[೫೩] ಕಾಳಿಯ ವಾಸಸ್ಥಾನವಾದ ಬನ್ನಿಯ ಮರವನ್ನು ಜನರು ಪೂಜಿಸುತ್ತಾರೆ.[೫೪] ಬನ್ನಿಮಹಾಂಕಾಳಿ ಎಂದು ಜನಪದರು ಅದನ್ನು ಕರೆಯುತ್ತಾರೆ. ಶರಣರ ಕಾಲದಲ್ಲಿ ಈ ದೇವಿಯ ಪೂಜಕರು ಕಂಚುಗಾರರೇ ಆಗಿದ್ದರು. ಈಗಲೂ ಕಾಳಿಯ ಭಕ್ತರು ವಿಶೇಷವಾಗಿ ಪತ್ತಾರ ಅಥವಾ ಪಂಚಾಳರೇ ಆಗಿದ್ದಾರೆ. ಶಿರಸಂಗಿ ಕಾಳಮ್ಮ ಪ್ರಸಿದ್ಧಳು. ಪಂಚಾಳರ ಮನೆದೇವತೆ. ಈ ದೇವಿಯ ಶಿಲ್ಪ ಶಿಲಾ ಮಾಧ್ಯಮದ್ದಾಗಿರುತ್ತದೆ. ಕಾಳಿ ದೇವತೆ ಆಚರಣೆಯಲ್ಲಿ ಶಿಷ್ಟವೂ ಹೌದು, ಜನಪದವೂ ಹೌದು.

ಡಾ. ಚೆನ್ನಣ್ಣ ವಾಲೀಕಾರರು ಕಾಳಿಯನ್ನು ಶಿಷ್ಟ ಪರಿಕಲ್ಪನೆಯ ದೇವತೆ ಎಂದು ಹೇಳುತ್ತಾರೆ.[೫೫] ಈಕೆ ಮೂಲದಲ್ಲಿ ಒಬ್ಬಳೇ ಇದ್ದವಳು. ಅನಂತರ ಕಾಳಿ, ಮಹಾಕಾಳಿ, ಭದ್ರಕಾಳಿಯಾಗಿ ಅವತಾರಗಳನ್ನು ತಾಳಿದಂತಿದೆ. ಈ ಕಾಳಿ ಎಂಬ ಹೆಸರು ಕಾಲಿಘಾಟದಿಂದ ಬಂದಿದೆ[೫೬] ಎಂದು ವಿದ್ವಾಂಸರು ಹೇಳುತ್ತಾರೆ. ಈಕೆ ಸ್ವಭಾವದಿಂದ ಉಗ್ರವಾಗಿರುವ ದೇವತೆಯಾಗಿದ್ದಾಳೆ. ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಕುನ್ನೂರು ಗ್ರಾಮದಲ್ಲಿ ಕಾಳಮ್ಮ ದೇವತೆ ಇರುವಳು. ಈ ಕಾಳಮ್ಮನಿಗೆ ನಡಕೊಂಡರೆ, ಧಾರವಾಡ ಜಿಲ್ಲೆಯ ಶಿರಸಂಗಿ ಕಾಳಮ್ಮನಿಗೆ ಹೋಗಬೇಕಿಲ್ಲವೆಂದು ಇಲ್ಲಿನವರ ನಂಬಿಕೆಯಾಗಿದೆ. ಉತ್ತರ ಕರ್ನಾಟಕದಲ್ಲಿ ನೂರಾರು ಕಾಳಿಯ ಶಿಲ್ಪಗಳು ದೊರೆಯುತ್ತವೆ.

**ನಂಬಿಕೆ :** ಕಾಳಮ್ಮಗೆ ಹೊಸ ಗೋದಿಯನ್ನು ಅರ್ಪಿಸುವರು. ಇದರಿಂದ ಧಾನ್ಯ ಸಂಪತ್ತು ಹೆಚ್ಚುತ್ತದೆಂಬ ನಂಬಿಕೆಯಿದೆ. ಕಾಳಮ್ಮನ ಗುಡಿಯಲ್ಲಿ ಸಂಸಾರ ನಡೆಸುವಂತಿಲ್ಲ. ಇದೂ ಒಂದು ನಂಬಿಕೆ. ಕಾಳಮ್ಮ ಇರುವೆಡೆಯಲ್ಲಿ ಪೂಜಾರಿಗಳು ಕುಟ್ಟುವಂತಿಲ್ಲ, ಬೀಸುವಂತಿಲ್ಲ ಮತ್ತು ಹೊರಸು ಹಾಕುವಂತಿಲ್ಲ. ಯಾವುದೇ ಶಬ್ಧವನ್ನು ಕಾಳಮ್ಮ ಕೇಳಬಾರದಂತೆ. ಕಾಳಮ್ಮನ ಶಿಲ್ಪದ ಬಲಗಡೆಯಿಂದ ಹೂವು ಬಿದ್ದರೆ

---

೫೨. ಪಿ.ಆರ್. ತಿಪ್ಪೇಸ್ವಾಮಿ (ಸಂ) : ಶಿಲ್ಪಕಲಾ ಪ್ರಪಂಚ, ಪುಟ - ೩೬೦

೫೩. ಡಾ. ಸಿ.ಕೆ. ನಾವಲಗಿ : ವಚನ ಸಾಹಿತ್ಯ ಮತ್ತು ಜಾನಪದ, ಪುಟ - ೭೮

೫೪. ..... ಅದೇ .....

೫೫. ಡಾ. ಚೆನ್ನಣ್ಣ ವಾಲೀಕಾರ; ಹೈದರಾಬಾದ ಕರ್ನಾಟಕದ ಗ್ರಾಮ ದೇವತೆಗಳ ಜಾನಪದೀಯ ಅಧ್ಯಯನ, ಪುಟ - ೧೭೦

೫೬. Dravidian Gods in Modern Hinduism, W.T. Elmore, P-5

ಕೆಲಸ ಆಗುತ್ತದಂತೆ. ಕಾಳಮ್ಮ-ಕಾಳಪ್ಪ ಎಂಬ ಹೆಸರುಗಳನ್ನು ಇಟ್ಟುಕೊಳ್ಳುವುದು ಸಾಮಾನ್ಯವಾಗಿ ರೂಢಿಯಲ್ಲಿದೆ.

## ೨.೩ ಭದ್ರಕಾಳಿಯ ಶಿಲ್ಪಗಳು

ಭದ್ರಕಾಳಿಗೆ ಮಹಾಕಾಳಿ ಎಂದೂ ಕರೆಯುವರು. ಪಾರ್ವತಿಯ ಇನ್ನೊಂದು ರೂಪ ಭದ್ರಕಾಳಿ. ದಕ್ಷನ ಯಜ್ಞಕ್ಕೆ ಹೋದ ಪಾರ್ವತಿ ತನ್ನನ್ನೇ ಬಲಿ ಕೊಟ್ಟುಕೊಂಡಿದ್ದನ್ನು ತಿಳಿದ ಶಿವ ಅಲ್ಲಿಗೆ ಹೋಗಿ ಕೋಪದಿಂದ ತನ್ನ ಜಡೆಯನ್ನು ನೆಲಕ್ಕೆ ಅಪ್ಪಳಿಸಿದನು. ಅದರ ಪರಿಣಾಮವಾಗಿ ಭದ್ರಕಾಳಿ ಮತ್ತು ವೀರಭದ್ರ ಎಂಬ ಎರಡು ಶಕ್ತಿಗಳು [೫೭] ಉದ್ಭವಿಸಿದವಂತೆ. ಈ ಭದ್ರಕಾಳಿಯೇ ನಿಜವಾದ ಸತಿ ಅಥವಾ ಪಾರ್ವತಿಯ ಇನ್ನೊಂದು ರೂಪ ಎಂದು ತಿಳಿದು ಪೂಜಿಸಲಾಗುತ್ತದೆ.

ಭದ್ರಕಾಳಿಯ ಬಗೆಗೆ ಹಲವಾರು ಕಥೆಗಳಿವೆ.[೫೮] ಒಂದು ಕಥೆಯ ಪ್ರಕಾರ, ದೇವಕಿಯ ಮಗನನ್ನೇ ಕೃಷ್ಣನೆಂದು ತಿಳಿದು, ಯಶೋಧೆಯ ಮಗನನ್ನು ಕಂಸನು ಬಂಡೆಗೆ ಅಪ್ಪಳಿಸುತ್ತಿರುವಾಗ ಕಂಸನ ಹಿಡಿತದಿಂದ ತಪ್ಪಿಸಿಕೊಂಡು ಆಕಾಶಕ್ಕೆ ನೆಗೆದ ಆ ಮಗುವೇ ಇನ್ನೊಂದು ರೂಪದ ಭದ್ರಕಾಳಿ. ಇನ್ನೊಂದು ಕಥೆಯ ಪ್ರಕಾರ ಲಂಕೆಯನ್ನು ಕಾಯುತ್ತಿದ್ದ ಲಂಕಾಲಕ್ಷ್ಮಿಯೇ ಭದ್ರಕಾಳಿಯೆಂದಿದೆ.[೫೯] ಹನುಮಂತನು ಲಂಕೆಯೊಳಗೆ ಪ್ರವೇಶಿಸದಂತೆ ತಡೆದ ಮೊದಲ ವ್ಯಕ್ತಿ ಈಕೆ. ಹನುಮಂತನು ಇವಳಿಗೆ ಹೊಡೆಯಲು ಪ್ರಜ್ಞೆ ತಪ್ಪಿ ಬಿದ್ದಳು. ಪ್ರಜ್ಞೆ ಬಂದ ನಂತರ ಪೂರ್ವ ವೃತ್ತಾಂತ ಜ್ಞಾಪಕಕ್ಕೆ ಬರಲು ಹನುಮಂತನಿಗೆ ಧನ್ಯವಾದಗಳನ್ನು ಹೇಳಿ ಕೈಲಾಸಕ್ಕೆ ಹಿಂತಿರುಗಿದಳು.

**ಶಿಲ್ಪ ರಚನೆ :** ಉತ್ತರ ಕರ್ನಾಟಕದ ಅನೇಕ ಊರುಗಳಲ್ಲಿ ಶಿಲಾ ಮಾಧ್ಯಮದಲ್ಲಿ ಅನೇಕ ಕಾಳಿಯ ಶಿಲ್ಪಗಳು ನೋಡಲು ಸಿಗುತ್ತವೆ. ಕೆಲವು ಶಿಲ್ಪಗಳು ಕಾಳಮ್ಮ ಎಂಬ ಹೆಸರಿನಲ್ಲಿ ಸ್ವತಂತ್ರವಾಗಿ ದೇವಾಲಯಗಳಲ್ಲಿ ಮರದ ಕೆಳಗೆ ಪೂಜಿಸಲ್ಪಡುತ್ತವೆ. ಇನ್ನೂ ಕೆಲವೆಡೆ ವೀರಭದ್ರನ ದೇವಸ್ಥಾನಗಳಲ್ಲಿ ವೀರಭದ್ರನೊಟ್ಟಿಗೆ ಪೂಜಿಸಲ್ಪಡುತ್ತವೆ. ವೀರಭದ್ರ ಮತ್ತು ಕಾಳಿಯರನ್ನು ಅಣ್ಣ ತಂಗಿಯರೆಂದು ಭಕ್ತಿಯಿಂದ ಜನಪದರು ಪೂಜಿಸುತ್ತಾರೆ. ಹೊನ್ನಕೀರಣಗಿಯಲ್ಲಿರುವ[೬೦] ವೀರಭದ್ರನ ದೇವಸ್ಥಾನದಲ್ಲಿ ನಾಲ್ಕು ಅಡಿ ಎತ್ತರವಾದ ಕಪ್ಪು ಶಿಲೆಯಲ್ಲಿ ಭದ್ರಕಾಳಿಯ ಶಿಲ್ಪವಿದೆ. ವೀರಭದ್ರನ ಜೊತೆಗೆ ನಿತ್ಯವೂ ಈ ಭದ್ರಕಾಳಿ ಪೂಜೆಗೊಳ್ಳುತ್ತಾಳೆ. ಶಿಲ್ಪದ ಶೈಲಿ ಸರಳವಾಗಿದೆ. ಇದೇ ರೀತಿ ಆತನೂರ,[೬೧] ಆಂದೋಲಗಳಲ್ಲೂ[೬೨] ಭದ್ರಕಾಳಿಯ ಶಿಲ್ಪಗಳಿದ್ದು ಜನಪದ ದೈವಗಳಾಗಿ ಪೂಜೆಗೊಳ್ಳುತ್ತಲಿವೆ.

---

೫೭. ಡಾ. ಚಂದ್ರಶೇಖರ ಕಂಬಾರ (ಸಂ) ; ಕನ್ನಡ ಜಾನಪದ ವಿಶ್ವಕೋಶ, ಪುಟ - ೧೪೭೮

೫೮. ..... ಅದೇ .....

೫೯. ವಿವರಗಳಿಗೆ ನೋಡಿ ..... ಅದೇ ..... ಪುಟ - ೧೪೭೯

೬೦. ಹೊನ್ನಕೀರಣಗಿ, ತಾ. ಜಿ. ಗುಲಬರ್ಗಾ

೬೧. ಆತನೂರ , ತಾ. ಅಫಜಲಪುರ, ಜಿ. ಗುಲಬರ್ಗಾ

೬೨. ಆಂದೋಲ , ತಾ. ಜೇವರ್ಗಿ, ಜಿ. ಗುಲಬರ್ಗಾ

[illegible]

[illegible]

[illegible]

[illegible]

[illegible]

[illegible]

## ೨.೪ ದುರ್ಗಿಯ ಶಿಲ್ಪಗಳು

ಕಿರುಕುಳ ದೈವಗಳಲ್ಲಿ ಸ್ತ್ರೀದೇವತೆ ದುರ್ಗಿಯೂ ಒಬ್ಬಳಾಗಿದ್ದಾಳೆ. ಮಹಾಭಾರತದಲ್ಲಿ ದುರ್ಗಿಯ ಬಗೆಗೆ ಅನೇಕ ಉಲ್ಲೇಖಗಳಿವೆ.[೬೩] ಪಾಂಡವರಿಗೆ ದುರ್ಗಿ ದರ್ಶನ ನೀಡಿ ಯುದ್ಧದಲ್ಲಿ ಜಯ ಲಭಿಸುವಂತೆ ಮಾಡಿದಳಂತೆ. ಹನ್ನೆರಡನೇ ಶತಮಾನದ ವಚನಗಳಲ್ಲೂ ದುರ್ಗಿಯ ಕುರಿತು ಅನೇಕ ಉಲ್ಲೇಖಗಳಿವೆ.[೬೪] ಪ್ರಸಿದ್ಧ ಉಚ್ಚಂಗಿಯ ದುರ್ಗಿಯ ಉಲ್ಲೇಖ ಹನ್ನೆರಡನೇ ಶತಮಾನದ ಚೌಡಯ್ಯನ ವಚನದಲ್ಲಿದೆ. ಈ ಉಚ್ಚಂಗಿ ದುರ್ಗಿಗೆ ಪೋತುರಾಜನನ್ನು ಬಿಡುವ ಸಂಪ್ರದಾಯವೂ ಇದ್ದಂತೆ ತೋರುತ್ತದೆ[೬೫] ಎಂಬುದೂ ಗಮನಾರ್ಹ. ಶಿವನ ಹೆಂಡತಿಯಾದ ಪಾರ್ವತಿಯು ದುರ್ಗಿಯ ಒಂದು ಅವತಾರ ಎಂದು ಜನಪದ ವಿಶ್ವಕೋಶದಲ್ಲಿ ಹೇಳಲಾಗಿದೆ.[೬೬] ಹೀಗಾಗಿ ಈ ದೇವತೆಯು ಅಂಬಿಕಾ, ಭದ್ರಕಾಳಿ, ಭದ್ರಾದೇವಿ ಮುಂತಾಗಿ ಅವತಾರಗಳನ್ನು ತಳೆದಿರುವದು ಸ್ಪಷ್ಟವಾಗುತ್ತದೆ.

**ರಚನೆ :** ದುರ್ಗಿಯ ಶಿಲ್ಪಗಳು ವಿವಿಧ ಆಕಾರ ಹಾಗೂ ಲಕ್ಷಣಗಳನ್ನು ಹೊಂದಿರುವವು. ದುರ್ಗಿಯ ಅನೇಕ ಶಿಲ್ಪಗಳು ಶಿಲಾ ಮಾಧ್ಯಮದಲ್ಲಿ ದೊರೆಯುತ್ತವೆ. ಆದರೆ ಬಹಳಷ್ಟು ಶಿಲ್ಪಗಳು ಇಂದು ಶಾಸ್ತ್ರಬದ್ಧ ಸಂಪ್ರದಾಯದ ಚೌಕಟ್ಟಿನಲ್ಲಿ ಸೃಷ್ಟಿಗೊಂಡಿವೆ. ನವರಾತ್ರಿಯಲ್ಲಿ ಈ ದೇವತೆಗೆ ಬಲಿ ಕೊಡುವ ಪದ್ಧತಿ ಇದೆ. ಅಲ್ಲೂರಿನ[೬೭] ದುರ್ಗಮ್ಮ ಗುಡ್ಡದ ಮೇಲಿದೆ. ಅಲ್ಲಿ ದೊಡ್ಡ ಕಲ್ಲಿನ ಬಂಡೆಗೆ ಮೂರ್ತಿಯನ್ನು ಕೊರೆದಿದ್ದು ನಂತರ ಗುಡಿ ಕಟ್ಟಿರುವರು. ಈ ದೇವಿಯ ಕುರಿತು ನಂಬಲಾಗದಂತಹ ಐತಿಹ್ಯಗಳಿವೆ.[೬೮] ತಳವಾರರು ಈ ದೇವತೆಯ ಪೂಜಾರಿಗಳಾಗಿದ್ದಾರೆ. ಮೂರು ವರ್ಷಗಳಿಗೊಮ್ಮೆ ಈ ದೇವಿಯ ಜಾತ್ರೆ ನಡೆಯುತ್ತದೆ. ಇದೇ ರೀತಿ ಶಿಲಾಮಾಧ್ಯಮದಲ್ಲಿ ದುರಗಮ್ಮನ ಶಿಲ್ಪಗಳು ಅಳ್ನಾವರ[೬೯] ಹಾಗೂ ತಾರೀಹಾಳ[೭೦]ಗಳಲ್ಲೂ ಇರುತ್ತವೆ.

## ೨.೫ ಶೆಟವಿ ತಾಯಿಯ ಶಿಲ್ಪಗಳು

ಶೆಟವಿ ಮಾನವರಿಗೆ ಹಣೆಬರಹ ಬರೆಯುತ್ತಾಳೆನ್ನುವ ಕಲ್ಪನೆ ನಮ್ಮ ಜನಪದರಲ್ಲಿದೆ. ಬ್ರಹ್ಮಲಿಪಿಯು ಶಿಷ್ಟರ ಹಣೆಬರಹವಾದರೆ, ಶೆಟವಿ ತಾಯಿಯದು ಬರಿ ಹಳ್ಳಿಗರ ಹಣೆಬರಹ. ಹೀಗಾಗಿ ಶೆಟವಿ ಒಬ್ಬ ಸ್ತ್ರೀದೇವತೆಯೆನಿಸಿದ್ದಾಳೆ. ಈಕೆ ಹಡೆದ ಮೂರು ತಿಂಗಳವರೆಗೆ ಕೂಸು ಹಾಗೂ ಬಾಣಂತಿಯರ

---

೬೩. ಡಾ. ಚಂದ್ರಶೇಖರ ಕಂಬಾರ (ಸಂ) ; ಕನ್ನಡ ಜಾನಪದ ವಿಶ್ವಕೋಶ, ಸಂಪುಟ - ೨, ಪುಟ - ೧೦೩೫

೬೪. ಡಾ. ಸಿ.ಕೆ. ನಾವಲಗಿ ; ವಚನ ಸಾಹಿತ್ಯ ಮತ್ತು ಜಾನಪದ, ಪುಟ - ೭೮

೬೫. ..... ಅದೇ ..... ಪುಟ - ೭೯

೬೬. ಡಾ. ಚಂದ್ರಶೇಖರ ಕಂಬಾರ (ಸಂ) ; ಕನ್ನಡ ಜಾನಪದ ವಿಶ್ವಕೋಶ, ಸಂಪುಟ - ೨, ಪುಟ - ೧೦೩೬

೬೭. ಅಲ್ಲೂರು, ತಾ. ಚಿತ್ತಾಪೂರ, ಜಿ. ಗುಲಬರ್ಗಾ

೬೮. ವಿವರಗಳಿಗೆ ನೋಡಿ, ಡಾ. ಚೆನ್ನಣ್ಣ ವಾಲೀಕಾರ; ಹೈದರಾಬಾದ್ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ, ಪುಟ - ೧೪೧

೬೯. ಅಳ್ನಾವರ, ತಾ. ಜಿ. ಧಾರವಾಡ.

೭೦. ತಾರೀಹಾಳ, ತಾ. ಹುಬ್ಬಳ್ಳಿ, ಜಿ. ಧಾರವಾಡ.

ರಕ್ಷಣೆ ಮಾಡುತ್ತಾಳೆ ಎಂಬ ನಂಬಿಕೆಯಿದೆ. ಶಿಲ್ಪದ ರಚನೆ ಸುಂದರವಾಗಿರುತ್ತದೆ. ಮೂರು ತಿಂಗಳ ನಂತರ ಮೊರದಲ್ಲಿ ಅವಳ ಸಂಕೇತವಾದ ಒಂದು ದುಂಡುಕಲ್ಲನ್ನು ಪೂಜಿಸಿ ಐದಾರು ವರ್ಷದ ಎಳೆಯರಿಂದ ಕೂಸನ್ನು, ಆ ಮೊರವನ್ನು ದಾಟಿಸಿ ಶೆಟವಿ ತಾಯಿಯನ್ನು ಬೀಳ್ಕೊಡುತ್ತಾರೆ. ಈಕೆಗೆ ಹಿರಿಯಮ್ಮ, ವಿಧಿಯಮ್ಮ ಎನ್ನುವ ಹೆಸರುಗಳೂ ಇವೆ. ಇವಳನ್ನು ಕುರಿತು ಅನೇಕ ಕಥೆಗಳಿವೆ.[೭೧]

ಒಮ್ಮೆ ಶೆಟವಿ ತಾಯಿ ಒಂದು ಕೂಸಿನ ಹಣೆಬರಹವನ್ನು ಬರೆದು ಹೋಗುತ್ತಿದ್ದಳು. ಆಗ ಬಾಣಂತಿಯು ಏನು ಬರೆದೆ? ಎಂದು ಕೇಳಿದಳು. 'ತಾಯಿಯ ಗಂಡನಾಗಲಿ' ಎಂದು ಬರೆದಿದ್ದೇನೆ ಎಂದು ಉತ್ತರಿಸಿ ಹೋದಳು. ಪರಿ ಪರಿಯಾಗಿ ಆ ಬಾಣಂತಿ ಬೇಡಿಕೊಂಡರೂ ಹಣೆಬರಹವನ್ನು ಬದಲಿಸಲು ಆಕೆ ಒಪ್ಪದೇ ದೋದಳು. ತಾಯಿ ಕೂಸನ್ನೇ ಕೊಲ್ಲಲು ಕಳಿಸಿಕೊಟ್ಟಳು. ಕೊಲೆಗಡುಕರು ಕೂಸನ್ನು ಕೊಲ್ಲದೇ ಅಡವಿಯಲ್ಲಿ ಬಿಟ್ಟು ಬಂದು, ಕೊಂದಿದ್ದೇವೆ ಎಂದರು. ಆದರೆ ಮುಂದೆ ಅವನೇ ದೊಡ್ಡವನಾಗಿ ಪರಸ್ಪರ ಅರಿವಿಲ್ಲದೆಯೇ ಹೆತ್ತ ತಾಯಿಯನ್ನೇ ವರಿಸಿದನಂತೆ.[೭೨] ಹೀಗೆ ಕಥೆಗಳು ಬರುತ್ತವೆ.

ಮಹಾರಾಷ್ಟ್ರದ ಕೆಲವು ಪ್ರದೇಶಗಳಲ್ಲಿ ಹಾಗೂ ಕರ್ನಾಟಕದ ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿ ಶಿಶು ಹುಟ್ಟಿದ ಐದನೆಯ ದಿನ ಅದನ್ನು ಎತ್ತಿಕೊಂಡು ಹೋಗಲು ಶೆಟವಿ ಬರುವಳೆಂದು ನಂಬಿಕೆಯಿದೆ. ಧನುರ್ವಾತದ ಸೋಂಕಿನಿಂದ ಸಾಯುವ ಶಿಶುವಿನ ಸಂದರ್ಭಕ್ಕೆ ಈ ಶೆಟವಿ (ಸಟೆಯುವದು) ಕಾರಣ ಎಂದು ನಂಬಿಕೆಯಿರಬೇಕು.[೭೩] ಈ ಹಿನ್ನೆಲೆಯಲ್ಲಿ ಈ ಶೆಟವಿ ಭೂತಕ್ಕೆ ಬೆದರಿಕೆಯಾಗಲೆಂದು ತಲೆ ಕೆಳಗೆ ಮಾಡಿದ ಮನುಷ್ಯಾಕೃತಿಗಳನ್ನು ಬಿಡಿಸಿ ಶಿಶುವಿನ ಬಳಿಯಲ್ಲಿ ಇಡುತ್ತಾರೆ.

## ೨.೬ ಕರಿಯವ್ವನ ಶಿಲ್ಪಗಳು

ಉತ್ತರ ಕರ್ನಾಟಕದ ಧಾರವಾಡ, ಬಾಗಲಕೋಟೆ, ಮತ್ತು ಬೆಳಗಾವಿ ಜಿಲ್ಲೆಗಳ ಕೆಲವೆಡೆ ಶಿಲಾ ಮಾಧ್ಯಮದಲ್ಲಿ ರಚಿಸಿದ ಕರಿಯವ್ವನ ಶಿಲ್ಪಗಳು ಕಂಡು ಬರುತ್ತವೆ. ಶೈಲಿಯ ದೃಷ್ಟಿಯಿಂದ ಬಹುತೇಕ ಶಿಲ್ಪಗಳು ಶಿಷ್ಟವಾಗಿ ಕಂಡು ಬರುತ್ತವೆ. ಕೆಲವು ಸರಳ ರಚನೆಗಳಾಗಿದ್ದು ಜನಪದೀಯ ಶೈಲಿಯವಾಗಿ ಕಂಡು ಬರುತ್ತವೆ. ಧಾರವಾಡದ ಹತ್ತಿರವಿರುವ ಪುಡಕಲಕಟ್ಟಿ[೭೪] ಗ್ರಾಮದಲ್ಲಿ ಕರಿಯವ್ವ ಶಿಲ್ಪವಿದೆ. ಇದು ಶಿಲಾ ಮಾಧ್ಯಮದ ರಚನೆಯಾಗಿದೆ. ಸುಮಾರು ಒಂದು ಅಡಿ ಎತ್ತರವಿದ್ದು, ಬೆಳ್ಳಿಯ ಕಣ್ಣು ಬಟ್ಟುಗಳನ್ನು ಇಟ್ಟು ಗಲ್ಲೀಪ ತೊಡಿಸಲಾಗಿದೆ.[೭೫] ಈ ದೇವತೆಯ ಜಾತ್ರೆ ಪ್ರತಿ ವರ್ಷ ನಡೆಯುತ್ತದೆ. ಜನರು ಹರಕೆಗಳನ್ನು ಹೊರುವ ಸಂಪ್ರದಾಯಗಳಿವೆ. ಎಕ್ಕೇರಿ[೭೬]ಯಲ್ಲಿ ಶಿಲಾ ಮಾಧ್ಯಮದ ಒಂದು ದೇವತಾ ಶಿಲ್ಪವಿದ್ದು

---

೭೧. ಡಾ. ಚಂದ್ರಶೇಖರ ಕಂಬಾರ (ಸಂ) ; ಕನ್ನಡ ಜಾನಪದ ವಿಶ್ವಕೋಶ, ಸಂಪುಟ - ೨, ಪುಟ - ೧೮೫೬

೭೨. ರೇಡಿಯೋ ನಾಟಕದಲ್ಲಿ ಕೇಳಿದ್ದು

೭೩. ಡಾ. ಎಂ.ಎಸ್. ಸುಂಕಾಪೂರ (ಸಂ) ; ಜಾನಪದ ಸಾಹಿತ್ಯ ದರ್ಶನ, ಭಾಗ -೮, ಪುಟ -೨೭

೭೪. ಪುಡಕಲ ಕಟ್ಟೆ - ತಾ. ಜಿ. ಧಾರವಾಡ

೭೫. ಬಿ.ಪಿ. ಪಾಟೀಲ- ಉತ್ತರ ಕರ್ನಾಟಕದ ಗ್ರಾಮ ದೇವತೆಗಳು, ಒಂದು ಅಧ್ಯಯನ

೭೬. ಎಕ್ಕೇರಿ, ತಾ. ಸೌಂದತ್ತಿ, ಜಿ. ಬೆಳಗಾವಿ

[illegible]

ಕರಿಯವ್ವ ಎಂದೇ ಪೂಜಿಸಲ್ಪಡುತ್ತಿದೆ. ಇದು ಉಡಚಮ್ಮನ ಶಿಲ್ಪವನ್ನೇ ಹೆಚ್ಚೂ ಕಡಿಮೆ ಹೋಲುತ್ತದೆ. ರಾಮದುರ್ಗದ ಕರಿಯವ್ವ ಕೂಡ ಪ್ರಸಿದ್ಧ.

**ಉಣ್ಣಿ ಕರೆಮ್ಮ :** [೭೭] ಕೆರೂರಿನಲ್ಲಿ ಸಾರ್ವಜನಿಕ ಬಸ್ ಸ್ಟ್ಯಾಂಡಿನಲ್ಲಿ ಉಣ್ಣಿ ಕರೆಮ್ಮ ಎಂಬ ಶಿಲಾ ಮಾಧ್ಯಮದ ದೇವತಾ ಶಿಲ್ಪವೊಂದಿದೆ. ಇದು ಸುಮಾರು ಮೂರು ಅಡಿಯಷ್ಟು ಎತ್ತರವಾಗಿದೆ. ವಿಶೇಷವೆಂದರೆ, ಈಕೆ ಜಾನುವಾರುಗಳ ಮೈಗೆ ಅಂಟಿಕೊಳ್ಳುವ ಉಣ್ಣಿಗಳನ್ನು ನಿವಾರಿಸುವ ದೇವತೆ ಆಗಿದ್ದಾಳೆ. ಜನರು ಇವಳನ್ನು ಪೂಜಿಸಿ, ನೈವೇದ್ಯ ಅರ್ಪಿಸುವಾಗ, ದನಗಳ ಉಣ್ಣಿಗಳನ್ನು ಅರ್ಪಿಸುವರಂತೆ. ಹೀಗೆ ಮಾಡುವದರಿಂದ ಉಣ್ಣಿಗಳು ನಿವಾರಣೆಯಾಗುತ್ತವೆ ಎಂಬ ನಂಬಿಕೆ ಪ್ರಚಲಿತದಲ್ಲಿದೆ.

## ೨.೭ ರಬ್ಬೆವ್ವನ ಶಿಲ್ಪಗಳು

ಮನಗೂಳಿಯಲ್ಲಿ [೭೮] ರಬ್ಬೆವ್ವ ಎಂಬ ದೇವತಾ ಶಿಲ್ಪವಿದೆ. ಇದು ಹುಡೇದ ಮೇಲೆ ಒಂದು ಚಿಕ್ಕದಾದ ಗುಡಿಯಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದೆ. ಇದೂ ಕೂಡ ಶಿಲಾ ಮಾಧ್ಯಮದ್ದೇ ಆಗಿದ್ದು ಸಹಜವಾದ ನಿಸರ್ಗದ ಒಂದು ಆಕಾರದ ಶಿಲೆಯೇ ದೇವತಾ ಶಿಲ್ಪವಾಗಿ ಆಚರಣೆಗೊಳ್ಳತ್ತಲಿದೆ. ಈ ದೇವತೆಗೆ ಉತ್ಸವ, ಆಚರಣೆಗಳು ನಡೆಯುತ್ತವೆ. ಸುತ್ತ ಮುತ್ತಲಿನ ಊರುಗಳಲ್ಲಿ ಈ ದೇವತೆ ಪ್ರಸಿದ್ಧಿಯಲ್ಲಿದೆ.

## ೨.೮ ಉಡಚಮ್ಮನ ಶಿಲ್ಪಗಳು

ಉತ್ತರ ಕರ್ನಾಟಕದ ಕೆಲವೆಡೆ ಉಡಚಮ್ಮ ಎಂಬ ಹೆಸರಿನ ಸ್ತ್ರೀ ದೇವತಾ ಶಿಲ್ಪಗಳು ಕಂಡು ಬರುತ್ತವೆ. ರೋಣ ತಾಲೂಕಿನ ಕರಮುಡಿಯಲ್ಲಿನ ಉಡಚಮ್ಮ ಅತ್ಯಂತ ಪ್ರಸಿದ್ಧ ದೇವತೆಯಾಗಿದ್ದಾಳೆ. ವರ್ಷಕ್ಕೊಮ್ಮೆ ಜಾತ್ರೆ, ಉತ್ಸವಗಳು ನಡೆಯುತ್ತವೆ. ಶಿಲ್ಪದ ಕೆತ್ತನೆ ಸಂಪೂರ್ಣ ಶಿಷ್ಟ ರೂಪದ್ದಾಗಿ ಕಾಣುತ್ತದೆ. ಸುತ್ತಮುತ್ತಲಿನ ಊರುಗಳಲ್ಲೆಲ್ಲ ಪ್ರಸಿದ್ಧಿಯಲ್ಲಿರುವ ಹನಸಿ [೭೯] ಎಂಬ ಗ್ರಾಮದ ದೇವತೆಯೂ ಉಡಚಮ್ಮ. ಈ ದೇವತೆಯ ಸುತ್ತ ಹಲವಾರು ಕಥೆ, ಐತಿಹ್ಯಗಳು ಹೆಣೆಯಲ್ಪಟ್ಟಿವೆ. ಈ ದೇವತಾ ಶಿಲ್ಪವು ಶಿಲಾ ಮಾಧ್ಯಮದ್ದಾಗಿದ್ದು, ಅದರ ಮುಖಕ್ಕೆ ಕೋರೆ ಮೀಸೆ ಹಚ್ಚಲಾಗಿದೆ. ಮತ್ತು ಸೀರೆ ಉಡಿಸಿ ಹೂಗಳಿಂದ ಅಲಂಕರಿಸಲಾಗಿದೆ.

## ೨.೯ ಮರೆವ್ವನ ಶಿಲ್ಪಗಳು

ಇದೇ ರೀತಿಯ ಒಂದು ಶಿಲ್ಪ ಅರಳೇಶ್ವರ [೮೦]ದಲ್ಲಿದೆ. ಈ ದೇವತೆಯನ್ನು ಮರೆವ್ವ ಎಂದು ಕರೆಯಲಾಗುತ್ತದೆ. ಇದು ಕೂಡ ಶಿಲಾ ಮಾಧ್ಯಮದ್ದೇ ಆಗಿದ್ದು, ಕಣ್ಣು ಬಟ್ಟು ಹಾಗೂ ಕೋರೆ

---

೭೭. ಮಾಹಿತಿ ನೀಡಿದವರು - ಡಾ. ಯಾದಪ್ಪ ಪರದೇಶಿ, ಸಾ. ಕೆರೂರು

೭೮. ಮನಗೂಳಿ, ತಾ. ಬಸವನ ಬಾಗೇವಾಡಿ, ಜಿ. ಬಿಜಾಪುರ

೭೯. ಹನಸಿ, ತಾ. ನವಲಗುಂದ, ಜಿ. ಧಾರವಾಡ

೮೦. ಅರಳೇಶ್ವರ : ತಾ. ಹಾನಗಲ್, ಜಿ. ಧಾರವಾಡ



ಮಂಗಳಮ್ಮ ( ಮಂಗಳಗುಡ್ಡ)

ಮೀಸೆಗಳನ್ನು ಹಚ್ಚಲಾಗಿದೆ.[೮೧] ಸೀರೆ ಉಡಿಸಲಾಗಿದೆ.

## ೨.೧೦ ಮಾಯಮ್ಮನ ಶಿಲ್ಪಗಳು

ಚಿಂಚಲಿ[೮೨]ಯಲ್ಲಿ ಮಾಯಮ್ಮ ಎಂಬ ದೇವತಾ ಶಿಲ್ಪವಿದೆ. ಇದು ಕೂಡ ಶಿಲೆಯದಾಗಿದೆ. ಇದಕ್ಕೆ ನಾಲ್ಕು ಕೈಗಳಿವೆ. ಬಲಗೈಯಲ್ಲಿ ಖಡ್ಗ, ತ್ರಿಶೂಲಗಳಿವೆ. ಎಡಗೈಗಳಲ್ಲಿ ಕುಂಕುಮ ಭರಣಿ, ಹಾವು ಇವೆ. ತಲೆಯ ಮೇಲೆ ಹತ್ತು ಹೆಡೆಯ ಸರ್ಪವಿದೆ. ಒಡವೆಗಳಿಂದ ದೇವತೆಯ ಶಿಲ್ಪವು ಸಿಂಗಾರಗೊಂಡಿದೆ. ಈ ದೇವತೆ ಕೂಡ ಸಾಕಷ್ಟು ಮಹಿಮಾನ್ವಿತಳೆಂದು ಜನರಲ್ಲಿ ನಂಬಿಕೆಯಿದೆ.

## ೨.೧೧ ಬಾದುಮೆಯ ಶಿಲ್ಪಗಳು

ಬಾದುಮೆ ನಮ್ಮ ಗ್ರಾಮೀಣ ಕೃಷಿಕರ ಪ್ರಾಕೃತಿಕ ದೈವ. ಸ್ತ್ರೀದೇವತೆ, ಕೃಷಿಕರಲ್ಲಿ ಬಾದುಮೆ ಸೀಮಾದೈವವಾಗಿ ಕಂಡು ಬರುತ್ತಾಳೆ. ಬಾದುಮೆ ಎಂಬುದಕ್ಕೆ ಸೀಮಾಸೂಚಕ ಅಂಕಿತದಿಂದ ಕೂಡಿದ ಕಲ್ಲು ಎಂಬರ್ಥವಿದೆ[೮೩] ಎಂಬುದನ್ನು ಗಮನಿಸಬೇಕು.

**ರಚನೆ :** ವೈಶಾಖ ಮಾಸದಲ್ಲಿ ನಡೆಯುವ ಬಾದಮೀ ಪೂಜೆಯ ಪೂಜಾ ವಿಧಾನ ಹೀಗಿದೆ. ಅಡುಗೆಯ ಮನೆಯ ಒಂದು ಕಂಬದ ಬಳಿಯಲ್ಲಿ ಚಿಕ್ಕದೊಂದು ಹಂದರ ಹಾಕಿ, ಅದರ ಮೇಲೆ ಬೇವಿನ ಎಸಳುಗಳನ್ನು ದಟ್ಟವಾಗಿ ಹೊದಿಸಲಾಗುವದು. ಹಂದರದೊಳಗೆ ಇರಿಸಿದ ಪೂಜಾ ಪೀಠದ ಮೇಲೆ ಸುಣ್ಣ ಬಣ್ಣಗಳ ಪಟ್ಟೆಗಳಿಂದ ಅಲಂಕೃತವಾದ ಏಳು ಬೆನಕಗಳನ್ನು ಸಾಲಾಗಿ ಇರಿಸಲಾಗುವದು. ಆ ಬೆನಕಗಳನ್ನು ಪೂಜಿಸಿ ಮರುದಿವಸ ವಿಸರ್ಜಿಸಲಾಗುವದು. ಹನ್ನೆರಡನೇ ಶತಮಾನದ ಬಸವಣ್ಣನವರ ವಚನದಲ್ಲಿ ಈ ಬಾದುಮೆಯ ಉಲ್ಲೇಖ ಬರುತ್ತದೆ.[೮೪] ಬಾದುಮೆಗೆ, ಬಾದುಬ್ಬೆ, ಬನದಬ್ಬೆ, ಬಾಡುಂಬೆ, ಬಾಳುಂಬೆ ಇತ್ಯಾದಿ ಹೆಸರುಗಳು ಕನ್ನಡ ಸಾಹಿತ್ಯ ಮತ್ತು ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಕೆಲವರು ಬನಶಂಕರಿಯೇ ಬಾದುಮೆಯಾಗಿರಬಹುದೆಂದು ತರ್ಕಿಸಿದ್ದಾರೆ. ಈ ಸ್ತ್ರೀ ದೇವತೆಯ ಬಗ್ಗೆ ಡಾ. ಎಂ.ಎಂ. ಕಲಬುರ್ಗಿ, ಡಾ. ಬೆಟಗೇರಿ ಕೃಷ್ಣಶರ್ಮ, ಡಾ. ಎಂ. ಚಿದಾನಂದಮೂರ್ತಿ ಮುಂತಾದ ವಿದ್ವಾಂಸರು ಚರ್ಚಿಸಿದ್ದಾರೆ.[೮೫] ಅದೇನೇ ಇದ್ದರೂ ಇಂದು ಬಾದುಮೆ ಒಂದು ಜನಪದ ಸ್ತ್ರೀ ದೇವತಾ ಶಿಲ್ಪವಾಗಿ ಆಚರಣೆಗೊಳ್ಳುವದು ಕಂಡು ಬರುತ್ತದೆ.

---

೮೧. ವಿವರಗಳಿಗೆ ನೋಡಿ, ಡಾ. ಬಿ.ಪಿ. ಪಾಟೀಲ, ಉತ್ತರ ಕರ್ನಾಟಕದ ಗ್ರಾಮ ದೇವತೆಗಳು, ಒಂದು ಅಧ್ಯಯನ. (ಅಪ್ರಕಟಿತ) ಪುಟ -೧೮೩

೮೨. .....ಅದೇ.....

೮೩. ಡಾ. ಸಿ.ಕೆ. ನಾವಲಗಿ, ವಚನ ಸಾಹಿತ್ಯದಲ್ಲಿ ಜಾನಪದ ಅಂಶಗಳು (ಅಪ್ರಕಟಿತ), ಪುಟ - ೨೬೬

೮೪. ಡಾ. ಎಂ.ಎಂ. ಕಲಬುರ್ಗಿ, ಮಾರ್ಗ, ಸಂಪುಟ - ೨, ಪುಟ - ೩೬೦

೮೫. ಡಾ. ಎಂ.ಎಂ. ಕಲಬುರ್ಗಿ, ಮಾರ್ಗ, ಸಂಪುಟ - ೨, ಪುಟ - ೩೬೦

# ೩. ಪ್ರಾಣಿ ದೇವತಾ ಶಿಲ್ಪಗಳು

ಆದಿ ಮಾನವನ ಪ್ರಾಕೃತಿಕ ಪೂಜೆಯಲ್ಲಿ ಪ್ರಾಣಿ ಪೂಜೆಯೂ ಒಂದು. ಈತ ತನಗೆ ಭಯಪಡಿಸುವ ಕ್ರೂರ ಪ್ರಾಣಿಗಳಲ್ಲಿಯೂ ದೈವತ್ವ ಕಂಡು ಪೂಜಿಸಿದ. ತನಗೆ ಉಪಕಾರಕವಾದ ಮತ್ತು ಸಾಧುವಾದ ಪ್ರಾಣಿಗಳು ಹಾಗೂ ಅವುಗಳ ಶಿಲ್ಪಗಳನ್ನು ಮಾಡಿ ಪೂಜಿಸಿದನು. ಹಾವು, ಇಲಿ, ಮೊಸಳೆ, ಸಿಂಹ, ಕೋತಿ ಇತ್ಯಾದಿ ಪ್ರಾಣಿಗಳನ್ನು ಭಕ್ತಿಯಿಂದ ಪೂಜಿಸುತ್ತ ಬಂದನು. ಮತ್ತು ಅವುಗಳ ಶಿಲ್ಪಗಳನ್ನು ವಿವಿಧ ಮಾಧ್ಯಮಗಳಲ್ಲಿ ರಚಿಸಿ, ಅವುಗಳ ರೂಪಾಕಾರಗಳನ್ನು ನೋಡಿ ಸಂತಸಗೊಂಡನು.

ಶಿಲಾ ಮಾಧ್ಯಮದ ಪ್ರಾಣಿ ದೇವತಾ ಶಿಲ್ಪಗಳು ಹಲವಾರು ಬಗೆಯಲ್ಲಿ ದೊರೆಯುತ್ತವೆ. ಅವುಗಳ ರಚನೆ, ಸ್ವರೂಪ, ವಿನ್ಯಾಸ, ಶಿಲ್ಪದ ಮೈವಳಿಕೆ ವಿಶೇಷವಾಗಿ ಗಮನ ಸೆಳೆಯುವಂತಿರುತ್ತವೆ. ಪ್ರಾತಿನಿಧಿಕವಾದ ಕೆಲವನ್ನು ಮಾತ್ರ ಇಲ್ಲಿ ನೋಡಬಹುದಾಗಿದೆ. ಅವು ನಂದಿ ಶಿಲ್ಪಗಳು, ಹನುಮಂತನ ಶಿಲ್ಪಗಳು, ನಾಗದೇವತಾ ಶಿಲ್ಪಗಳು.

## ೩.೧ ನಂದಿ ಶಿಲ್ಪಗಳು

ದೇವಾಲಯಗಳಲ್ಲಿ ನಂದಿಯ ಶಿಲಾ ಶಿಲ್ಪವನ್ನು ಲಿಂಗದ ಮುಂದೆ ಅಂತರಾಳ ಅಥವಾ ನವರಂಗಗಳಲ್ಲಿ ಪ್ರತಿಷ್ಠಾಪಿಸಿರುವುದು ಸಾಮಾನ್ಯವಾಗಿ ಕಂಡು ಬರುತ್ತದೆ. ಕೆಲವೆಡೆ ಪ್ರತ್ಯೇಕ ಮಂಟಪಗಳಲ್ಲಿ, ಕೆಲವೆಡೆ ದೇವಾಲಯದ ಒಳಭಾಗದಲ್ಲಿ ನಂದಿಯ ದುಂಡು ಶಿಲ್ಪಗಳನ್ನು ಪ್ರತಿಷ್ಠಾಪಿಸಿದ್ದರೆ, ಕೆಲವು ಕಂಬಗಳಲ್ಲಿ, ದೇವಾಲಯದ ದ್ವಾರಗಳಲ್ಲಿ ನಂದಿಯ ಶಿಲ್ಪಗಳ ದುಂಡು ಹಾಗೂ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿರುತ್ತದೆ. ಈ ಬಗೆಯ ದೇವಾಲಯ ನಂದಿಶಿಲ್ಪಗಳು ಶಿಷ್ಟ ಶಿಲ್ಪಗಳಾಗಿ ತೋರಿಬರುತ್ತವೆ. ಇಂಥ ಶಿಷ್ಟ ಪರಂಪರೆಯ ದೇವಾಲಯ ಶಿಲ್ಪಗಳನ್ನು ಹೊರತು ಪಡಿಸಿಯೂ ನಮ್ಮ ಜನಪದರು ಈ ನಂದಿಯನ್ನು ಒಂದು ದೈವವಾಗಿ, ಹಲವಾರು ನಂಬಿಕೆ, ಆಚರಣೆಗಳ ಹಿನ್ನೆಲೆಯಲ್ಲಿ ಪೂಜಿಸುತ್ತ, ಆರಾಧಿಸುತ್ತ ಬಂದಿದ್ದಾರೆ. ಇದಕ್ಕೆ ಹಲವಾರು ಕಾರಣಗಳೂ ಜನಪದರಲ್ಲುಂಟು. ಮುಖ್ಯವಾಗಿ ನಂದಿಯು ಕೃಷಿ ಉಳುಮೆಯಲ್ಲಿ ರೈತನಿಗೆ ಸಹಾಯಕವಾಗಿರುವುದು, ಮಾತ್ರವಲ್ಲ ನಂದಿಯು ಶಿವನ ವಾಹನವೂ ಆಗಿದೆ. ಈ ಕಾರಣದಿಂದ ನಂದಿಯನ್ನು ಪೂಜಿಸುವುದೆಂದರೆ, ಅದಕ್ಕೆ ಕೃತಜ್ಞತೆಯನ್ನು ಸಲ್ಲಿಸಿದಂತೆ ಮತ್ತು ಸಾಕ್ಷಾತ್ ಶಿವನನ್ನು ಪೂಜಿಸಿದಂತೆ ಎಂದು ನಮ್ಮ ಜನಪದರು ಭಾವಿಸುತ್ತಾರೆ.

ಈ ಹಿನ್ನೆಲೆಯಲ್ಲಿ ಲಿಂಗದ ಎದುರಿಗೆ ಹಾಗೂ ಲಿಂಗವನ್ನು ಹೊರತು ಪಡಿಸಿಯೂ ಅನೇಕ ವಿಧಗಳಲ್ಲಿ ನಂದಿಯ ಶಿಲಾ ಶಿಲ್ಪಗಳನ್ನು ಮಾಡಿಸಿ ಪ್ರತಿಷ್ಠಾಪಿಸಿ ಪೂಜಿಸುತ್ತ ಬಂದಿರುವುದನ್ನು ಕಾಣಬಹುದು. ಹಾದಿ ಬಸವಣ್ಣ, ಬೀದಿ ಬಸವಣ್ಣ, ಗುತ್ತಿ ಬಸವಣ್ಣ, ಬಾಗೇವಾಡಿಯ ಬಸವಣ್ಣ ಹೀಗೆ ನೂರಾರು ಬಗೆಯಲ್ಲಿ ಬಸವಣ್ಣ ಎಂಬ ಹೆಸರಿನಲ್ಲೂ ನಂದಿಯನ್ನು ಪೂಜಿಸುತ್ತ ಬಂದಿದ್ದಾರೆ. ಮೈಸೂರು ನಂದಿ ಜಗತ್‌ಪ್ರಸಿದ್ಧವಾಗಿದೆ.



ವರ್ಣಾಲಂಕೃತ ನಂದಿಯ ಶಿಲ್ಪ ( ಕಮಲಾಪುರ )



ನಂದಿಯ ಶಿಲ್ಪ ( ಪಟ್ಟದಕಲ್ಲು)

ಉತ್ತರ ಕರ್ನಾಟಕದ ಕೆಲವು ಕಡೆ ನಮ್ಮ ಗ್ರಾಮೀಣರು ಉಳುಮೆ ಮಾಡುವ ಎತ್ತುಗಳು ಸತ್ತಾಗ ಅವುಗಳನ್ನು ಹೊಲಗದ್ದೆಗಳಲ್ಲಿ ತಗ್ಗು ತಗೆದು ಹೂಳುತ್ತಾರೆ. ಹೀಗೆ ಹೂಳಿದ ಭಾಗದಲ್ಲಿ ನೆಲದಿಂದ ಒಂದೆರಡು ಅಡಿಯಷ್ಟು ಎತ್ತರಕ್ಕೆ ಮಣ್ಣಿನ ಗುಪ್ಪೆಯನ್ನು ಏರಿಸಿ ಅದರ ಮೇಲೆ ಮಣ್ಣಿನಿಂದ ಇಲ್ಲವೆ ಕಲ್ಲಿನಿಂದ ನಂದಿಯ ಶಿಲ್ಪವನ್ನು ಮಾಡಿಸಿ ಪ್ರತಿಷ್ಠಾಪಿಸಿ ಪೂಜಿಸುವರು. ಇನ್ನೂ ಕೆಲವು ಕಡೆಗಳಲ್ಲಿ ಎತ್ತುಗಳು ಸತ್ತ ಮೇಲೆ ಅವುಗಳನ್ನು ಹೂಳಿದ ಸಮಾಧಿಯ ಮೇಲೆ ಚಿಕ್ಕದಾದ ಗುಡಿಗಳನ್ನು ಕಟ್ಟಿ, ಒಳಗೆ ನಂದಿಯ ಶಿಲಾ ವಿಗ್ರಹವನ್ನು ಪ್ರತಿಷ್ಠಾಪಿಸಿ, ಹುಣ್ಣಿಮೆ-ಅಮವಾಸ್ಯೆ, ಹಬ್ಬಗಳ ಸಂದರ್ಭಗಳಲ್ಲಿ ಪೂಜಿಸುತ್ತಾರೆ. ಹಾದಿ ಬಸವಣ್ಣ, ಸೀಮೆ ಬಸವಣ್ಣ, ಬೀದಿ ಬಸವಣ್ಣ, ಕಟ್ಟೆ ಬಸವಣ್ಣ, ಅಡವಿ ಬಸವಣ್ಣಗಳಾಗಿ ದೇವರಾಗಿ ಪೂಜಿಸಲ್ಪಡುತ್ತವೆ. ಉತ್ಸವ-ಕಾಂಡಗಳೂ ನಡೆಯುತ್ತವೆ. ಬಸವನ ಬಾಗೇವಾಡಿ[೮೬] ಯಲ್ಲಿರುವ ನಂದಿಯ ಶಿಲ್ಪ ಪ್ರಸಿದ್ಧವಾಗಿದೆ. ಒಂದು ಸಾವಿರ ವರ್ಷಗಳಿಗೂ ಹಳೆಯದಾದ ಈ ನಂದಿಯ ಶಿಲಾ ಶಿಲ್ಪ ಅನೇಕ ಕಾರಣಗಳಿಂದ ಪ್ರಸಿದ್ಧಿ ಪಡೆದಿದೆ.

ಮುಖ್ಯವಾಗಿ ಹನ್ನೆರಡನೇ ಶತಮಾನದಲ್ಲಿ ಶಿವಭಕ್ತೆ ಮಾದಲಾಂಬಿಕೆಯು ಬಾಗೇವಾಡಿಯಲ್ಲಿ ಸಂಗಮೇಶ್ವರಲಿಂಗ ಹಾಗೂ ನಂದಿಯನ್ನು ದಿನ ನಿತ್ಯ ಪೂಜಿಸುತ್ತಿದ್ದಳಂತೆ. ಈ ನಂದಿಯ ವರಪ್ರಸಾದದಿಂದಲೇ ಬಸವಣ್ಣ ಹುಟ್ಟಿದನೆಂದು ಪ್ರತೀತಿಯಿದೆ. ಈ ಶಿಲ್ಪ ಮೂರೂವರೆ ಅಡಿ ಎತ್ತರವಿದೆ. ಈಗಲೂ ಈ ನಂದಿ ಪೂಜೆಗೊಳ್ಳುತ್ತದೆ. ಈ ನಂದಿಯ ಶಿಲ್ಪಕ್ಕೆ ಮೀಸೆ, ಮೊಗಡ, ಹಣೆಪಟ್ಟಿ, ಕೊಂಬಣಸು, ವಿಭೂತಿ, ಕಣ್ಣು ಎಲ್ಲವನ್ನೂ ಬೆಳ್ಳಿಯ ಹಾಳೆಯಲ್ಲಿ ಕತ್ತರಿಸಿ, ಉಬ್ಬೊತ್ತು ತಂತ್ರದಿಂದ ರಚಿಸಿದವುಗಳಾಗಿದ್ದು, ನಂದಿ ಶಿಲ್ಪಕ್ಕೆ ತೊಡಿಸಿರುತ್ತಾರೆ. ಅಲ್ಲದೆ ಕೊರಳಲ್ಲಿ ಗಂಟೆ, ಗಂಟೆ ಸರಗಳು, ಲಿಂಗದ ಕಾಯಿ ಮುಂತಾದ ಆಭರಣಗಳನ್ನು ಹಾಕಿ ಅಲಂಕಾರ ಮಾಡಿರುತ್ತಾರೆ. ಬಸವನ ಬಾಗೇವಾಡಿಯಲ್ಲಿ ಇರುವ ಬಸವೇಶ್ವರ ದೇವಸ್ಥಾನದಲ್ಲಿ ಈ ನಂದಿಯನ್ನು ಕಾಣಬಹುದು.

ನುಣುಪಾದ ಮೈವಳಿಕೆಯುಳ್ಳ ಪಟ್ಟದಕಲ್ಲಿನಲ್ಲಿರುವ ಪಚ್ಚೆಕಲ್ಲಿನ ದೊಡ್ಡ ನಂದಿಯ ಶಿಲ್ಪವೂ ಪ್ರಸಿದ್ಧವಾಗಿದೆ. ಪಟ್ಟದಕಲ್ಲಿನ ಈ ನಂದಿ ಹಾಗೂ ಬಸವನ ಬಾಗೇವಾಡಿಯ ನಂದಿ ಶಿಲ್ಪಗಳಿಗೆ ಪೂಜಿಸಿ ಬೇಡಿಕೊಂಡರೆ ಮಕ್ಕಳಾಗುತ್ತವೆ ಎಂಬ ನಂಬಿಕೆ ಇದೆ.

### ೩.೨ ಹನುಮಂತನ ಶಿಲ್ಪಗಳು

ವಾಯುಪುತ್ರನೆಂದೇ ಹೆಸರಾಗಿರುವ ಹನುಮಂತನನ್ನು ಆಂಜನೇಯ, ಮಾರುತಿ, ಶನೀಶ್ವರ, ಮುಖ್ಯಪ್ರಾಣ, ಶನಿನಿವಾರಕ, ಭಜರಂಗಬಲಿ, ರಾಮಸಖ ಎಂದು ಮುಂತಾದ ಹೆಸರುಗಳಿಂದ ಕರೆಯುವರು. ಹನುಮಂತ ಪ್ರಾಚೀನ ಕಾಲದಿಂದಲೂ ನಮ್ಮ ಗ್ರಾಮೀಣ ಜನಪದರ ಧಾರ್ಮಿಕ ಮನೋಭಾವನೆಗಳಲ್ಲಿ ಒಡಮೂಡಿದ್ದಾನೆ. ಸ್ವಾಮಿನಿಷ್ಠೆ, ಭಕ್ತಿ, ಶೌರ್ಯ, ಶಕ್ತಿ, ಸಾಹಸ, ಜಾಣ್ಮೆಗಳ ಪ್ರತಿರೂಪವಾಗಿದ್ದಾನೆ. ಈ

---

೮೬. ಬಸವನ ಬಾಗೇವಾಡಿ: ತಾ. ಬಸವನ ಬಾಗೇವಾಡಿ, ಜಿ. ಬಿಜಾಪುರ

ಹನುಮಂತ ರಾಮನ ನಿಷ್ಠಾವಂತ ಭಕ್ತ. ರಾಮಾಯಣವನ್ನು ಗೊತ್ತಿರುವ ಎಲ್ಲರಿಗೂ ಹನುಮಂತನ ಅಗಾಧ ಸ್ವಾಮಿನಿಷ್ಠೆಯ ಕಲ್ಪನೆಯುಂಟಾಗುತ್ತದೆ. ಈ ಹನುಮದೇವನ ಜನ್ಮವು ಚೈತ್ರ ಮಾಸದ ಹುಣ್ಣಿಮೆಯಂದು[೮೭] ಆಗಿದೆಯೆಂದು ಜನಪದರ ನಂಬಿಕೆಯಾಗಿದೆ.

ಹನುಮಂತನು ನಮ್ಮ ಗ್ರಾಮೀಣರ ಧಾರ್ಮಿಕತೆಯ ಮುಖ್ಯ ಪೂಜಾ ದೇವತೆಗಳಲ್ಲಿ ಒಬ್ಬನು. ನಮ್ಮ ನಾಡಿನ ಹಳ್ಳಿ-ಪಟ್ಟಣಗಳಲ್ಲೂ ಈತನ ಶಿಲ್ಪಗಳು ಮತ್ತು ದೇವಸ್ಥಾನಗಳು ಕಂಡು ಬರುತ್ತವೆ. ಊರಿದ್ದಲ್ಲಿ ಹನುಮಪ್ಪ ಎಂಬ ಮಾತು ಗ್ರಾಮೀಣರಲ್ಲಿ ಪ್ರಚಲಿತವಿದೆ. ಗ್ರಾಮೀಣ ಜನಪದರಲ್ಲಿ ಹನುಮಂತ ದೇವರು ಊರ ರಕ್ಷಕನಾಗಿ, ಪೀಡ ನಿವಾರಕನಾಗಿ, ಶಕ್ತಿ, ಧೈರ್ಯಗಳ ವರ್ಧಕನಾಗಿ ಆರಾಧಿಸಲ್ಪಡುತ್ತಾನೆ. ಈತನ ಶಿಲ್ಪಗಳು ಭಾರತದಾದ್ಯಂತ ಕಂಡು ಬರುತ್ತವೆ.

**ರಚನೆ :** ಹನುಮಂತನ ಶಿಲ್ಪಗಳು ಬಹುತೇಕ ಕರ್ನಾಟಕದ ಪ್ರತಿಯೊಂದು ಊರಿನಲ್ಲಿ ಕಂಡು ಬರುತ್ತವೆ. ಪ್ರತಿಯೊಂದು ಗ್ರಾಮ-ಪಟ್ಟಣಗಳಲ್ಲೂ ಹನುಮಂತನ ಶಿಲ್ಪಗಳು ಪ್ರತಿಷ್ಠಾಪಿಸಲ್ಪಟ್ಟಿರುತ್ತವೆ. ಈ ಎಲ್ಲ ಶಿಲ್ಪಗಳು ಶಿಲಾ ಮಾಧ್ಯಮದವುಗಳಾಗಿರುತ್ತವೆ. ತಾಂತ್ರಿಕವಾಗಿ ( ರಚನೆಗೆ ಸಂಬಂಧಿಸಿದಂತೆ ) ಹನುಮಂತನ ಶಿಲ್ಪಗಳಲ್ಲಿ ಮುಖ್ಯವಾಗಿ ಎರಡು ವಿಧಗಳನ್ನಾಗಿ ವಿಂಗಡಿಸಬಹುದು. ೧. ಉಬ್ಬುಗೆತ್ತನೆಯ ಶಿಲ್ಪಗಳು ೨. ದುಂಡುಗೆತ್ತನೆಯ ಶಿಲ್ಪಗಳು.

ಅಖಂಡ ಕಲ್ಲಿನ ಚಪ್ಪಟೆ ಮೈಮೇಲೆ ಹನುಮಂತನ ಚಿತ್ರವನ್ನು ಬರೆದು ಈ ಶಿಲ್ಪವನ್ನು ಕೆತ್ತಲಾಗಿರುತ್ತದೆ. ಹೀಗೆ ಕೆತ್ತುವಿಕೆಯ ಕ್ರಮದಿಂದಾಗಿ ಹನುಮಂತನ ಆಕಾರವು ಚಪ್ಪಟೆ ಹಿನ್ನೆಲೆಯಿಂದ ಮುಂದಕ್ಕೆ ಉಬ್ಬಾಗಿ ಕಾಣಿಸುತ್ತದೆ. ಚಿತ್ರವೊಂದನ್ನು ನೋಡುವ ಹಾಗೆ ಇದನ್ನು ಎದುರುಬದಿಯಿಂದಲೇ ನೋಡಲು ಸಾಧ್ಯ. ಇದನ್ನು ಉಬ್ಬು ಶಿಲ್ಪವೆಂದು ಕರೆಯಲಾಗುವದು.

ಈ ಉಬ್ಬಗೆತ್ತನೆಯ ಹನುಮಂತ ಶಿಲ್ಪದಲ್ಲಿ ಸಾಮಾನ್ಯವಾಗಿ ಬಲಗೈ ಮೇಲೆ ಎತ್ತಿದ್ದು ಗುಡ್ಡವನ್ನು ಹಿಡಿದಿರುವುದು, ಇಲ್ಲವೆ ಅಭಯ ಹಸ್ತವಾಗಿರುವುದು. ಎಡಗೈಯಲ್ಲಿ ಗದೆ ಇರುವುದು. ಎಡಕ್ಕೆ ಮುಖ ವಾಲಿಕೊಂಡಿರುವುದು. ತೀರ ಕ್ವಚಿತ್ತಾಗಿ ಮುಖವು ಎದುರುಗಡೆಯಿಂದ ನೇರವಾಗಿ ನೋಡುವಂತಿರುತ್ತದೆ. ಬಾಲವನ್ನು ಡೊಂಕಾಗಿ ತಲೆಯ ಮೇಲೆ ಕಮಾನು ಅಥವಾ ಪ್ರಾಕಾರದಂತೆ ಬಂದಿರುವುದು. ಇದಿಷ್ಟು ಸಾಮಾನ್ಯವಾಗಿ ಕಂಡು ಬರುವ ಹನುಮಂತನ ಶಿಲ್ಪದ ಸ್ವರೂಪವೆನ್ನಬಹುದು. ಕೆಲವೊಮ್ಮೆ ಕಲಾವಿದರ ಪ್ರತಿಭೆ, ಪರಿಶ್ರಮದಂತೆ ಶಿಲ್ಪವು ಸೊಗಸಾಗಿ ರೂಪಿತವಾಗಿರುತ್ತದೆ. ಹನುಮಂತನ ಮುಖವು ಮಂಗನಂತೆಯೇ ಇರುತ್ತದೆ. ಸೊಂಟಕ್ಕೆ ಒಂದೇ ವಸ್ತ್ರ ಕಾಷೀನವನ್ನು ತೊಡಿಸಿರುತ್ತಾರೆ. ಕಿವಿಗಳಲ್ಲಿ ಕುಂಡಲಗಳಿರುತ್ತವೆ. ಈತನು ಸಮ ಇಲ್ಲವೆ, ತ್ರಿಭಂಗಿಯಲ್ಲಿದ್ದು ಕೈಗಳು ಅಂಜಲಿ ಮುದ್ರೆಯಲ್ಲಿದ್ದರೆ ಭಕ್ತಾಂಜನೇಯ ಎಂದು, ಕೈಗಳಲ್ಲಿ ವೀಣೆ ಪುಸ್ತಕ ಇಲ್ಲವೆ, ವಜ್ರ ಪರ್ವತ ಅಥವಾ ಮರವನ್ನು ಹಿಡಿದಿದ್ದರೆ

---

೮೭. ನೂತನ : ವಾಯುಪುತ್ರ, ಹನುಮ ಕ್ಷೇತ್ರ ಯಲಗೂರ, ಪುಟ - ೨೩. ಲೇ. ಮನೋಜ್ ದೇಶಪಾಂಡೆ, ಏಪ್ರೀಲ್ - ೨೦೦೦

[illegible]

ವೀರಾಂಜನೇಯನೆಂದು, ಕಮಲದ ಮೇಲೆ ಯೋಗ ಮುದ್ರೆಯಲ್ಲಿ ಕುಳಿತಿದ್ದು ಬಲಗೈಲಿ ಜಪಮುದ್ರೆಯನ್ನು ಹಿಡಿದು, ಎಡಗೈಯನ್ನು ತೊಡೆಯ ಮೇಲೆ ಇಟ್ಟಿದ್ದರೆ ಯೋಗಾಂಜನೇಯನೆಂದು, ರಾಮ-ಸೀತೆಯರ ಎದುರಿನಲ್ಲಿದ್ದರೆ ರಾಮಾಂಜನೇಯನೆಂದು ಗುರುತಿಸಲಾಗುವುದು.

ಸಾಮಾನ್ಯವಾಗಿ ಹನುಮಂತನನ್ನು ಬಲಗೈ ಅಭಯ ಹಸ್ತ, ಎಡಗೈ ಕಟಿಹಸ್ತದಲ್ಲಿ ತೋರಿಸಿರುತ್ತಾರೆ. ಕಂಠಹಾರ, ಕಡಗಗಳನ್ನು ಧರಿಸಿರುವಂತೆಯೂ ತೋರಿಸಲಾಗಿರುತ್ತದೆ. ಕೆಲವೊಮ್ಮೆ ತಲೆಯ ಹಿಂಭಾಗದಲ್ಲಿ ಶಿಖೆಯನ್ನು ತೋರಿಸಿರುವರು. ಬಾಲವನ್ನು ಬೆನ್ನಿನಿಂದ ತಲೆಯ ಮೇಲಿನವರೆಗೆ ಸುತ್ತುವರೆದು, ತುದಿಯಲ್ಲಿ ಗಂಟೆಯನ್ನು ಕೆತ್ತಲಾಗಿರುತ್ತದೆ.

ಹನುಮಂತನ ಶಿಲ್ಪದಲ್ಲಿ ಎದ್ದು ಕಾಣುವ ಅವಯವಗಳಲ್ಲಿ ಬಾಲವೂ ಒಂದಾಗಿರುವುದರಿಂದ, ಈ ಬಾಲದ ಆಧಾರದ ಮೇಲೆಯೇ ಕೆಲವೊಮ್ಮೆ ಹನುಮಂತನ ಸ್ಥಾನ ನಿರ್ಧೇಶನವನ್ನು ಜನಪದರು ಹೇಳುತ್ತಾರೆ. ಸಾಮಾನ್ಯವಾಗಿ ಬಾಲ ಇರುವ ಸ್ಥಿತಿಯ ಆಧಾರದ ಮೇಲೆ ೧. ಹೊರಬಾಲ ಆಂಜನೇಯ ಮತ್ತು ೨. ಒಳಬಾಲ ಆಂಜನೇಯ ಎಂದು ವಿಂಗಡಿಸಬಹುದು. ಹೊರಬಾಲ ಆಂಜನೇಯ ಊರ ಹೊರಗಿದ್ದರೆ, ಒಳಬಾಲ ಆಂಜನೇಯನ ಶಿಲ್ಪವನ್ನು ಊರಿನ ಮಧ್ಯದಲ್ಲಿ ಸ್ಥಾಪಿಸಿರುತ್ತಾರೆ. ಯಲಗೂರು ಗ್ರಾಮದ (ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕು) ಹನುಮಂತ ದೇವರು ಪ್ರಸಿದ್ಧವಾಗಿದೆ.[೮೮] ಯಲಗೂರೇಶ, ಯಲಗುರ್ದಪ್ಪನೆಂದೇ ಇಲ್ಲಿನ ಸುತ್ತಮುತ್ತಲಿನವರಿಗೆ ಪ್ರಸಿದ್ಧ. ಈ ಮಾರುತಿಯ ದೇವಸ್ಥಾನ ಮೂರುನೂರು ವರ್ಷಗಳಷ್ಟು ಹಳೆಯದು. ಇಲ್ಲಿನ ಆಂಜನೇಯ ಶಿಲ್ಪ ನಿಂತ ಭಂಗಿಯಲ್ಲಿದ್ದು ಸ್ಫುಟವಾದ ದಿವ್ಯಲಕ್ಷಣದಿಂದ ಕೂಡಿದೆ. ಶ್ರೀರಾಮನ ಪಾದದ ದೂಳಿನಿಂದಾದ ಪವಿತ್ರವಾದ ಕ್ಷೇತ್ರವೆಂದು ಜನರ ನಂಬಿಕೆಯಲ್ಲಿರುವ ಯಲಗೂರದ ಆಂಜನೇಯನಿಗೆ ಅಸಂಖ್ಯಾತ ಭಕ್ತರು ನಡೆದುಕೊಳ್ಳುತ್ತಾರೆ. ಹಾಗೆಯೇ ಗದಗ ಜಿಲ್ಲೆಯ ಬ್ಯಾಡಗಿ ತಾಲೂಕಿನ ಕದರಮಂಡಲಗಿಯ ಕಾಂತೇಶನೆಂದು ಪ್ರಸಿದ್ಧವಾದ ಹನುಮಂತ ದೇವರ ಶಿಲ್ಪವಿದೆ. ಇದು ಸುಮಾರು ಐದು ಸಾವಿರ ವರ್ಷಗಳ ಹಿಂದಿನ ಶಿಲ್ಪವಾಗಿದೆ ಎಂದು ನಂಬಿಕೆಯಿದೆ. ಈ ಶಿಲಾ ಶಿಲ್ಪ ಐದು ಅಡಿ ಎತ್ತರವಾಗಿದ್ದು, ಎಡಗೈ ಸೊಂಟದ ಮೇಲಿದೆ. ಬಲಗೈ ಮೇಲಕ್ಕೆ ಎತ್ತಿದಂತಿದೆ. ಗದೆ, ಡಾಲು ಕೆತ್ತಲಾಗಿದೆ. ವಿಶೇಷವೆಂದರೆ ಈ ಶಿಲ್ಪದಲ್ಲಿ ಮುಖವು ಮುಮ್ಮುಖವಾಗಿ ನೇರ ನೋಟ ಬೀರುವಂತೆ ಶಿಲ್ಪಿಸಲಾಗಿದೆ. ಇನ್ನೂ ಒಂದು ವಿಶೇಷವೆಂದರೆ ಕಣ್ಣು ಮತ್ತು ಕಿರೀಟಗಳಲ್ಲಿ ಸಾಲಿಗ್ರಾಮವಿದೆ. ಎರಡೂ ಕಾಲುಗಳ ಮಧ್ಯೆ ಉತ್ಸವ ಮೂರ್ತಿ ಶಿಲ್ಪಗಳೂ ಇವೆ.[೮೯]

ಗಂಗಾವತಿಯಿಂದ ಇಪ್ಪತ್ತು ಕಿ.ಮೀ. ದೂರದಲ್ಲಿ ಗಂಗಾವತಿ ಮತ್ತು ಲಿಂಗಸ್ಗೂರ ಮಾರ್ಗದಲ್ಲಿ ಕನಕಗಿರಿ ಎಂಬ ಗ್ರಾಮವಿದೆ. ಕನಕಮುನಿ ತಪಸ್ಸು ಮಾಡಿದ ಸ್ಥಳವೆಂದು ಇಲ್ಲಿನ ಸ್ಥಳಕ್ಕೆ ಪ್ರತೀತಿಯಿದೆ. ಸುವರ್ಣಗಿರಿ ಎಂದು ಅಶೋಕನ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಈ ಊರಲ್ಲಿ ಕನಕಾಚಲಪತಿಯ

---

೮೮. ನೂತನ : ವಾಯುಪುತ್ರ ಹನುಮ ಕ್ಷೇತ್ರ ಯಲಗೂರ, ಪುಟ - ೨೩. ಲೇ. ಮನೋಜ್ ದೇಶಪಾಂಡೆ, ಏಪ್ರೀಲ್ - ೨೦೦೦
೮೯. ಬಿ.ಪಿ. ಪಾಟೀಲ : ಉತ್ತರ ಕರ್ನಾಟಕದ ಗ್ರಾಮ ದೇವತೆಗಳು, ಒಂದು ಅಧ್ಯಯನ. (ಅಪ್ರಕಟಿತ), ಪುಟ - ೨೦೩

[illegible]

[illegible]

[illegible]

[illegible]

ದೇವಾಲಯವಿದೆ. ಈ ದೇವಾಲಯದ ಸಮುಚ್ಚಯದಲ್ಲಿ ಒಂದು ಸಂಜೀವ ಆಂಜನೇಯ ಎಂದು ಕರೆಯುವ ಆಂಜನೇಯನ ಗುಡಿಯೊಂದು ಇದೆ. ಈ ಗುಡಿಯಲ್ಲಿ ಆರು ಅಡಿ ಎತ್ತರದ ಭವ್ಯವಾದ ಹನುಮಂತನ ಶಿಲ್ಪವಿದೆ.ಈ ಶಿಲಾ ಶಿಲ್ಪ ನಿಂತ ಭಂಗಿಯಲ್ಲಿದ್ದು ಮುಖವು ಮುಮ್ಮುಖವಾಗಿರುವ ಅಪರೂಪದ ಪ್ರಸಿದ್ಧ ಶಿಲ್ಪವಾಗಿದೆ.[೬೦] ಕಣ್ಣಿದ್ದರೆ ಕನಕಗಿರಿ ನೋಡು ಎಂಬ ನುಡಿಗಟ್ಟು ಇಲ್ಲಿ ಜನಜನಿತವಾಗಿದೆ. ಏಕೆಂದರೆ ಇಲ್ಲಿನ ದೇವಾಲಯ ಸಮುಚ್ಚಯದಲ್ಲಿ ಅನೇಕ ತರಹದ ಕುಸುರಿನ ಶಿಲ್ಪಗಳನ್ನು ಕೆತ್ತಲಾಗಿದೆ. ಹಾಗೆಯೇ ಧಾರವಾಡ ಜಿಲ್ಲೆಯ ಕದರಮಂಡಲಗಿಯಲ್ಲಿರುವ ಒಂದು ಜನಪದ ದೇವತೆ ಪ್ರಸಿದ್ಧಿಯಲ್ಲಿದೆ. ಅದೇ ಕದರಮಂಡಲಗಿ ಹನುಮಪ್ಪ. ಈ ಶಿಲಾ ಮಾಧ್ಯಮದ ಹನುಮಂತನ ಶಿಲ್ಪದ ಮುಖವು ಮುಂದೆ ಬಾಗಿದ್ದು ಪೂರ್ವಾಭಿಮುಖವಾಗಿದೆ. ವಿಶೇಷವೆಂದರೆ ಈ ಹನುಮಂತ ದೇವರು ಕಳ್ಳರು, ಸುಳ್ಳರಿಗೆ ಒಲಿಯುತ್ತಾನೆಂದು ಪ್ರತೀತಿ ಇದೆ.[೬೧] ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಬಿರಡಿ ಗ್ರಾಮದ ಶ್ರೀ ರಾಮಚಂದ್ರ ದೇವಾಲಯದಲ್ಲಿ ಪೂಜೆಗೊಳ್ಳದೆ ನಿರ್ಲಕ್ಷಿತವಾಗಿರುವ[೬೨] ಹನುಮಂತನ ಶಿಲ್ಪವಿದೆ. ಮುಮ್ಮುಖವಾಗಿ ಕೈಮುಗಿದ ಈ ಶಿಲ್ಪ ಚಾಲುಕ್ಯ ಶೈಲಿಯಲ್ಲಿದೆ.

ಬೆಂಗಳೂರಿನ ಮಹಾಲಕ್ಷ್ಮೀಪುರ ಬಡಾವಣೆಯಲ್ಲಿ ಬೃಹದಾಕಾರದ ವೀರಾಂಜನೇಯನ ಶಿಲ್ಪವಿದೆ. ಈ ಶಿಲ್ಪವು ಇಪ್ಪತ್ತೆರಡು ಅಡಿ ಎತ್ತರ, ಹದಿನಾರು ಅಡಿ ಅಗಲದ್ದಾಗಿದೆ. ಬಲಗೈಯಲ್ಲಿ ಸಂಜೀವಿನಿ ಪರ್ವತವನ್ನು, ಎಡಗೈಯಲ್ಲಿ ಗದೆಯನ್ನು ಹಿಡಿದು ನಿಂತಿರುವ ಈ ಬೃಹತ್ ವಿಗ್ರಹ ವಿಶೇಷವಾಗಿದೆ. ಹನುಮ ಜಯಂತಿಯ ಕಾಲದಲ್ಲಿ ಭಕ್ತಾದಿಗಳಿಂದ ೪೫೦ ಕಿಲೋ ಬೆಣ್ಣೆಯಿಂದ ಅಲಂಕಾರ ಮಾಡುತ್ತಾರೆ. ಮತ್ತು ಪ್ರತಿ ಭಾನುವಾರ ಪಂಚಾಮೃತಾಭಿಷೇಕ ನಡೆಯುತ್ತದೆ.

ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ರೈಲ್ವೇ ಸ್ಟೇಷನ್ ರಸ್ತೆಯಲ್ಲಿರುವ ಹನುಮಂತನ ಶಿಲ್ಪವು ನಿತ್ಯವೂ ಪೂಜೆಗೊಳ್ಳುತ್ತದೆ. ಈ ಹನುಮಪ್ಪನಿಗೆ ವಿಭೂತಿ, ಕುಂಕುಮದಿಂದ ವಿಶೇಷ ಅಲಂಕಾರ ಮಾಡಿ, ಬಿಳಿ ದೋತಿ ಉಡಿಸಿ, ಕೊರಳಿಗೆ ಬಿಳಿಯ ಶೆಲ್ಲೆ ಹಾಕಿರುತ್ತಾರೆ. ಕುತೂಹಲದ ವಿಷಯವೆಂದರೆ, ಇದು ಉಬ್ಬು ಶಿಲ್ಪವಾದ್ದರಿಂದ ಶಿಲ್ಪದ ಎಡ-ಬಲ ಭಾಗಗಳಲ್ಲಿರುವ ಮಳೆಗೆ ಕಟ್ಟಿರುವ ದಾರಗಳ ಮೇಲೆ ದೋತಿ ಹಾಗೂ ಶೆಲ್ಲೆಗಳನ್ನು ಹಾಕಿರುತ್ತಾರೆ. ಅದನ್ನು ಹನುಮಂತ ಬಟ್ಟೆ ತೊಟ್ಟಿರುವನೆಂದು ನೋಡುಗರು ಕಲ್ಪಿಸಿಕೊಳ್ಳಬೇಕು, ಹಾಗಿದೆ.

ಕರ್ನಾಟಕದ ಕೆಲವೆಡೆ ಪಂಚಮುಖಿ ಆಂಜನೇಯನ ಶಿಲಾ ಶಿಲ್ಪಗಳು ಅಪರೂಪವಾಗಿ ಕಂಡುಬರುತ್ತವೆ. ವೀರ ಚೆನ್ನಮ್ಮಾಜಿ ಕಟ್ಟಿಸಿದ ದೇವಾಲಯವೊಂದು ಬಿದನೂರಿನಲ್ಲಿ ಇದೆ. ಅದನ್ನು ಪಂಚಮುಖಿ ಆಂಜನೇಯನ ದೇವಾಲಯವೆಂದು ಕರೆಯುತ್ತಾರೆ. ಮುಧೋಳದಲ್ಲೂ ಪಂಚಮುಖಿ

---

೬೦. ಕರ್ಮವೀರ : ಕಣ್ಣಿದ್ದರೆ ಕನಕಗಿರಿ ನೋಡು, ಪುಟ - ೨೮-೨೯. ಲೇ. ಎಸ್. ಹನುಮಂತ ಜೋಯಿಸ್, ಡಿಸೆಂಬರ ೨೦೦೦
೬೧. ಡಾ. ಚಂದ್ರಶೇಖರ ಕಂಬಾರ (ಸಂ) : ಜಾನಪದ ವಿಶ್ವಕೋಶ, ಪುಟ - ೩೦೭
೬೨. ಸಂಯುಕ್ತ ಕರ್ನಾಟಕ : ಕೈಮುಗಿದು ಕರೆವ ಅನಾಥ ಹನುಮ, , ಸತೀಶ ಸಲಗರೆ, ಸೆಪ್ಟೆಂಬರ ೨೦೦೦

[illegible]

ಆಂಜನೇಯನ ಶಿಲಾ ಶಿಲ್ಪವಿದೆ.[೯೩] ಕರ್ನಾಟಕವಷ್ಟೇ ಅಲ್ಲ ಇಡೀ ಭಾರತದಾದ್ಯಂತ ಸಾವಿರಾರು ಆಂಜನೇಯನ ದೇವಸ್ಥಾನಗಳು, ಆಂಜನೇಯನ ಶಿಲ್ಪಗಳೂ ಇವೆ. ಆದರೆ ಪಂಚಮುಖಿ ಆಂಜನೇಯ ಇರುವುದು ಐದು ಕಡೆಗಳಲ್ಲಿ ಮಾತ್ರ ಎಂದು ಹೇಳಲಾಗುತ್ತದೆ. ಬಿದನೂರಿನಲ್ಲಿರುವ ಆಂಜನೇಯನ ಶಿಲ್ಪ ಅವುಗಳಲ್ಲಿ ಒಂದು ಎನ್ನಬಹುದು.[೯೪]

**ಪ್ರತೀತಿ :** ಮೊಗಲ್ ದೊರೆ ಔರಂಗಜೇಬನು ರಾಜ್ಯವನ್ನು ವಿಸ್ತರಿಸುವ ಆಸೆಯಿಂದ ತನ್ನ ಪಕ್ಕದ ಪ್ರದೇಶಗಳನ್ನು ಒಂದೊಂದಾಗಿ ಆಕ್ರಮಿಸಿಕೊಳ್ಳುತ್ತ ಬಂದನು. ಮುಂದೆ ದಕ್ಷಿಣ ಭಾಗಕ್ಕೆ ಬಂದಾಗ ಅಲ್ಲಿ ಶಿವಾಜಿಯ ಮಗ ರಾಜಾರಾಮನು ಮರಾಠರ ದೊರೆಯಾಗಿದ್ದನು. ಔರಂಗಜೇಬನು ಅಲ್ಲಿಗೂ ಆಕ್ರಮಣ ಮಾಡಿದಾಗ ದಿರ್ಬಲನಾಗಿದ್ದ ರಾಜಾರಾಮ ಓಡಿ ಹೋಗಿ, ಕೆಳದಿಯ ರಾಣಿಯಾಗಿದ್ದ ಚೆನ್ನಮ್ಮನಲ್ಲಿ ಆಶ್ರಯ ಬೇಡಿದ. ಆಶ್ರಯ ಕೇಳಿ ಬಂದವನನ್ನು ಮರಳಿ ಕಳಿಸದ ಚೆನ್ನಮ್ಮ ರಾಜಾರಾಮ ಮತ್ತು ಅವನ ಸಂಗಡಿಗರಿಗೆ ಅಭಯ ಹಸ್ತ ನೀಡಿದಳಂತೆ. ಈ ಘಟನೆಯ ನೆನಪಿಗೆಂದೇ ಆಕೆ ಈ ಪಂಚಮುಖಿ ಆಂಜನೇಯ ದೇವಸ್ಥಾನವನ್ನು ಕಟ್ಟಿಸಿದಳೆಂದು ಪ್ರತೀತಿ ಇದೆ.

**ರಚನೆ :** ಕಲಾವತಿ ನದಿ ತೀರದಲ್ಲಿರುವ ಈ ದೇವಸ್ಥಾನದ ಒಳಗಿರುವ ಆಂಜನೇಯನ ಶಿಲಾ ಮೂರ್ತಿಯು ಸುಮಾರು ಐದು ಅಡಿ ಎತ್ತರವಾಗಿದೆ. ಐದು ಮುಖಗಳನ್ನು ಕೆತ್ತಲಾಗಿದೆ. ಪೂರ್ವ ದಿಕ್ಕಿಗಿರುವ ಮುಖ ಆಂಜನೇಯನದಾಗಿದ್ದರೆ, ದಕ್ಷಿಣದಲ್ಲಿ ನರಸಿಂಹ, ಉತ್ತರದಲ್ಲಿ ವರಾಹ, ಪಶ್ಚಿಮದಲ್ಲಿ ಗರುಡಾಂಜನೇಯ ಮುಖ ಹೊಂದಿದೆ. ಊರ್ಧ್ವ ಭಾಗದಲ್ಲಿ ಹಯವದನನ ರೂಪವಿದೆ. ಶಿಲ್ಪದ ಹಿಂದೆ ಪ್ರಭಾವಳಿಯನ್ನು ಕೆತ್ತಲಾಗಿದೆ. ಗದಗ ಜಿಲ್ಲೆಯ ರೋಣ ತಾಲೂಕಿನ ಕರಮಡಿಯಲ್ಲಿ ಹನುಮಂತನೇ ಪ್ರಧಾನ ಗ್ರಾಮ ದೇವತೆಯಾಗಿದ್ದಾನೆ. ಈ ಶಿಲ್ಪದ ಮುಖವು ಎಡಭಾಗಕ್ಕೆ ತಿರುವಿದೆ. ಈ ಹನುಮಂತನ ಜಾತ್ರೆಯು ಪ್ರಸಿದ್ಧವಾಗಿದೆ.[೯೫] ಹಾಗೆಯೇ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಗುಡ್ಡದ ಮಲ್ಲಾಪೂರದಲ್ಲಿ ಹನುಮಂತನ ಶಿಲಾ ಶಿಲ್ಪವಿದೆ. ಬಾಗಲಕೋಟೆ ತಾಲೂಕಿನ ತುಳಸಿಗೇರಿ ಹನುಮಂತನದು ಏಳು ಅಡಿ ಎತ್ತರದ ಬೃಹತ್ ಶಿಲ್ಪವಾಗಿದೆ.

ಧಾರವಾಡ ಜಿಲ್ಲೆಯ ಹುಬ್ಬಳ್ಳಿಯಲ್ಲಿ ಗಾಳಿ ಆಂಜನೇಯ, ಬಾಲಾಂಜನೇಯ ಇತ್ಯಾದಿ ಹನುಮಂತನ ಶಿಲ್ಪಗಳಿರುವಂತೆಯೇ, ಹಳೇ ಹುಬ್ಬಳ್ಳಿಯಲ್ಲಿ ಶ್ರೀ ಮುದಿ ಹನುಮಂತನ ದೇವಸ್ಥಾನವೊಂದಿದೆ.[೯೬] ಈ ದೇವಸ್ಥಾನದಲ್ಲಿರುವ ಶಿಲ್ಪದ ಮೈಮೇಲೆ ವಯಸ್ಸಾದವರಿಗೆ ಚರ್ಮದ ಮೇಲೆ ನಿರಿಗೆ ಇರುವಂತೆ ಇಲ್ಲೂ ಹಾಗೆ ಕೆತ್ತಿರುವುದನ್ನು ಕಾಣಬಹುದು. ಮುದಿ ಹನುಮಂತನಾದ್ದರಿಂದ ಪಕ್ಕದಲ್ಲಿ

---

೯೩. ಸಂಯುಕ್ತ ಕರ್ನಾಟಕ : ಚೆನ್ನಮ್ಮಾಜಿ ಕಾಲದ ಪಂಚಮುಖಿ ಆಂಜನೇಯ ದೇವಾಲಯ, ಸಂಪುಟ - ೬೭, ಲೇ. ಬಿ.ಎಸ್. ವಿನಾಯಕ, ಅಗಸ್ಟ ೧೯೯೯

೯೪. ಡಾ. ಎಂ.ಜಿ. ನಾಗರಾಜ, ಪಿ.ವಿ. ಕೃಷ್ಣಮೂರ್ತಿ (ಸಂ) : ಇತಿಹಾಸ ದರ್ಶನ, ಸಂಪುಟ - ೧೪, ಪುಟ - ೧೩೪

೯೫. ಬಿ.ಪಿ. ಪಾಟೀಲ : ಉತ್ತರ ಕರ್ನಾಟಕದ ಗ್ರಾಮ ದೇವತೆಗಳು, ಒಂದು ಅಧ್ಯಯನ. (ಅಪ್ರಕಟಿತ), ೨೦೩

೯೬. ಕರ್ಮವೀರ : ರಿಗ್ರೇಟ್ ಅಯ್ಯರ್, ಪುಟ - ೬೬, ದಿ. ೨೭-೦೫-೨೦೦೧



ಹನುಮಂತನ ಶಿಲ್ಪ ( ಖೈನೂರ )



ಹನುಮಂತನ ಶಿಲ್ಪ ( ಹೊಸಪೇಟೆ )



ಹನುಮಂತನ ಶಿಲ್ಪ ( ಕ.ವಿ. ಹಂಪಿ )

ಒಂದು ಕೋಲೂ ಇರಿಸಿರುವುದು ಕುತೂಹಲವನ್ನುಂಟು ಮಾಡುತ್ತದೆ.

**ನಂಬಿಕೆ :** ಈತನ ದರ್ಶನ ಮಾಡಿದರೆ ಸೊಂಟ, ಮಂಡಿ ನೊವು ನಿವಾರಣೆಯಾಗುವದೆಂದೂ, ಈತನು ಬಹು ಜಾಗೃತ ಹನುಮಂತನೆಂದೂ ಪ್ರತೀತಿಯಿದೆ.

ನೆಲೋಗಿಯಲ್ಲಿ[೯೭] ಊರಹೊರಗೆ ಹನುವುಂತನ ದೊಡ್ಡ ದೇವಾಲಯವಿದ್ದು, ಈ ದೇವಾಲಯದಲ್ಲಿನ ಶಿಲ್ಪವು ಪ್ರಸಿದ್ಧವಾಗಿದೆ. ಪ್ರತಿ ವರ್ಷ ಅದ್ದೂರಿಯಾಗಿ ಜಾತ್ರೆ, ಉತ್ಸವಗಳು ನಡೆಯುತ್ತವೆ. ಜಾತ್ರೆಯ ಸಂದರ್ಭದಲ್ಲಿ ರಥೋತ್ಸವ ನಡೆಯುತ್ತದೆ.

ಹುಲ್ಯಾಳಪ್ಪ, ಹುಲ್ಯಾಳೇಶ ಎಂದು ಪ್ರಸಿದ್ಧಿಯಲ್ಲಿರುವ ಹನುಮಂತ ದೇವರ ಶಿಲ್ಪವೊಂದು ಹುಲ್ಯಾಳದಲ್ಲಿದೆ. ಯಲಗೂರು ಹಾಗೂ ತುಳಸಿಗೇರಿಯ ಹನುಮಪ್ಪರಂತೆ ಇಲ್ಲಿಯದೂ ಜೋಡು ಹನುಮಪ್ಪನ ಶಿಲ್ಪವಾಗಿದೆ. ಇವುಗಳಲ್ಲಿ ಒಂದು ಶಿಲ್ಪ ತಂತಾನೇ ಬೃಹದಾಕಾರದಲ್ಲಿ ಬೆಳೆದು ನಿಂತಿದೆ ಎಂಬ ಪ್ರತೀತಿ[೯೮] ಜನರಲ್ಲಿ ಜೀವಂತವಾಗಿದೆ. ಈ ಶಿಲ್ಪಗಳ ಮುಖವು ಪೂರ್ವಾಭಿಮುಖವಾಗಿದ್ದು ಎಡಕ್ಕೆ ತಿರುಗಿವೆ. ಬಾಲವು ಕಮಾನಿನಂತೆ ಶಿಲ್ಪದ ಬಲಬದಿಯಿಂದ ತಲೆಯ ಮೇಲುಗಡೆಯಿಂದ ಹಾಯ್ದು ಎಡಗಡೆಗೆ ಇಳಿದಿದೆ. ಬಲಗೈ ಅಭಯ ಹಸ್ತಗಳಾಗಿದ್ದು, ಎಡಗೈಯಲ್ಲಿ ಗದೆ ಇರುವುದು. ಶಿಲ್ಪಗಳು ಸುಮಾರು ಐದು ಅಡಿ ಎತ್ತರವಾಗಿವೆ.

**ನಂಬಿಕೆ :** ಹುಲ್ಯಾಳದ[೯೯] ಹನುಮಂತ ದೇವರ ಮಹಿಮೆಯಿಂದಾಗಿ ಈ ಊರಲ್ಲಿನ ಯಾರಿಗೇ ಆಗಲಿ, ಯಾವುದೇ ಜಾತಿಯ ಹಾವುಗಳು ಕಚ್ಚಿದರೆ ಅವರು ಸಾಯುವದಿಲ್ಲ. ಹಾವು ಕಚ್ಚಿಸಿಕೊಂಡವರನ್ನು ನೇರವಾಗಿ ಗುಡಿಗೆ ತಂದು ಅಲ್ಲಿರುವ ಬೇವಿನ ಮರದ ಎಲೆಗಳನ್ನು ತಿನ್ನಿಸಿದರೆ ಸಾಕು ಅವರು ಸಾವಿನಿಂದ ಪಾರಾಗುತ್ತಾರೆ. ಹೀಗೆ ಹಾವು ಕಚ್ಚಿಸಿಕೊಂಡೂ ಜೀವಂತ ಉಳಿದಿರುವ ಅನೇಕರ ಹೆಸರುಗಳನ್ನು ಅಲ್ಲಿಯ ಅರ್ಚಕರು ಹೇಳುತ್ತಾರೆ.

**ಆಚರಣೆ :** ಹನುಮಂತ ದೇವರ ಪ್ರಸಿದ್ಧಿಯಿಂದಾಗಿ ಹುಲ್ಯಾಳ ಒಂದು ಯಾತ್ರಾ ಸ್ಥಳವಾಗಿಯೇ ಬೆಳೆದಿದೆ. ಜಮಖಂಡಿ ಮತ್ತಿತರ ಸುತ್ತಮುತ್ತಲಿನ ಊರುಗಳಿಂದ ಮಾತ್ರವಲ್ಲದೆ, ದೂರದ ಮುಂಬಯಿ, ಮಿರಜ, ಸಾಂಗ್ಲಿ, ಅಥಣಿ ಮತ್ತಿತರ ಊರುಗಳಿಂದ ಭಕ್ತ ಜನರು ಬಂದು ಪೂಜೆ ಸಲ್ಲಿಸುತ್ತಾರೆ.

ನೇಕಾರಿಕೆಯು ಪ್ರಧಾನ ವೃತ್ತಿಯಾಗಿರುವ ಈ ಊರಲ್ಲಿ ಪ್ರತಿ ವರ್ಷ ಹಸ್ತ ಮಳೆಯಾದಾಗ ಗುಡಿಯ ಮುಂದೆ ಗೋಪಾಳ ತುಂಬುವ ಪದ್ಧತಿ ಇದೆ. ಭಕ್ತಾದಿಗಳು ಒಂದು ಬುಟ್ಟಿಯಲ್ಲಿ ಅನ್ನದ ಅಗುಳುಗಳನ್ನು

---

೯೭. ನೆಲೋಗಿ, ತಾ. ಜೇವರ್ಗಿ, ಜಿ. ಗುಲಬರ್ಗಾ
೯೮. ಕರ್ಮವೀರ : ವೆಂಕಟೇಶ ಇನಾಮದಾರ, ಹುಲ್ಯಾಳದ ಹುಲ್ಯಾಳಪ್ಪ, ಪುಟ -೪೬, ನವೆಂಬರ ೨೦೦೦
೯೯. ಹುಲ್ಯಾಳ, ತಾ. ಜಮಖಂಡಿ, ಜಿ. ಬಾಗಲಕೋಟ

ಕೈಯಿಂದ ಉದುರಿಸುತ್ತಾರೆ. ವಿಶೇಷವೆಂದರೆ ಅನ್ನದ ಅಗುಳು ಬುಟ್ಟಿಯನ್ನು ತುಂಬಿದರೂ ಅನ್ನ ಕೆಳಗೆ ಚೆಲ್ಲುವುದಿಲ್ಲ. ಅದು ಒಂದು ಕಡೆ ಬಾಗಿ ಅನ್ನವನ್ನು ಚೆಲ್ಲಿಸಿದಾಗ ಆ ಜಮೀನಿನಲ್ಲಿ ಉತ್ತಮ ಫಸಲು ಬರುತ್ತದೆ ಎಂಬ ಪ್ರತೀತಿಯೊಂದಿಗೆ ಈ ಆಚರಣೆ ಇಂದಿಗೂ ಪ್ರಚಲಿತದಲ್ಲಿದೆ.

ಡಿಸೆಂಬರ ತಿಂಗಳಲ್ಲಿ ಪ್ರತೀ ವರ್ಷ ಹನುಮಪ್ಪನ ಕಾರ್ತಿಕೋತ್ಸವ ನಡೆಯುತ್ತದೆ. ಈ ಸಮಯದಲ್ಲಿ ಭಕ್ತರು ತಮ್ಮ ಹಸುಗೂಸುಗಳನ್ನು ಹಾರಿಸುವ ರೂಢಿಯಿದೆ. ಮೇಲಿನಿಂದ ಮಕ್ಕಳನ್ನು ಹಾರಿಸಿದಾಗ ಕೆಳಗೆ ಅವನ್ನು ಹಿಡಿಯುವುದಕ್ಕೋಸ್ಕರ ನಾಲ್ಕು ಜನ ಜಮಖಾನೆಯನ್ನು ಹಿಡಿದಿರುತ್ತಾರೆ.[೧೦೦] ಈ ಆಚರಣೆ ಕುತೂಹಲವೆನಿಸುತ್ತದೆ.

**ಹನುಮಂತನ ಮದುವೆ :** ಯುಗಾದಿಯಿಂದ ಕಾರಹುಣ್ಣಿಮೆಯವರೆಗೆ (ಎಪ್ರೀಲ್, ಮೇ, ಜೂನ್ ತಿಂಗಳು) ಬೆಳಗಾವಿ ಮತ್ತು ಬಿಜಾಪೂರ ಜಿಲ್ಲೆಗಳ ಕೆಲವು ಗ್ರಾಮಗಳಲ್ಲಿ ಹನುಮಂತ ದೇವರ ಮದುವೆ ಮಾಡಿ ಓಕುಳಿಯಾಡುವುದು ರೂಡಿಯಲ್ಲಿದೆ.[೧೦೧] ಈ ಓಕುಳಿಯಾಟದಲ್ಲಿ ಸಮಾಜದ ಕೆಳಸ್ತರದ ಹೆಂಗಸರೂ ಭಾಗವಹಿಸುವುದು ಒಂದು ವಿಶೇಷವಾಗಿರುತ್ತದೆ. ಮೂಲತಃ ಹನುಮ ಬಾಲ ಬ್ರಹ್ಮಚಾರಿ. ರಾಮಾಯಣದಲ್ಲಾಗಲಿ, ಮಹಾಭಾರತದಲ್ಲೇ ಆಗಲಿ ಎಲ್ಲೂ ಆತನ ಮದುವೆಯ ಪ್ರಸ್ತಾಪ ಬರುವುದಿಲ್ಲ. ಆದರೆ ಬೆಳಗಾವಿ ಮತ್ತು ಬಿಜಾಪೂರ ಜಿಲ್ಲೆಯ ಕೆಲವೆಡೆ ಭಕ್ತರು ಹನುಮಂತ ದೇವರ ಮದುವೆ ಮಾಡುತ್ತಾರೆಂಬುದು ಸೋಜಿಗದ ಸಂಗತಿಯಾಗಿದೆ.

ಹನುಮಂತನ ಶಿಲ್ಪಗಳು ದೇವಾಲಯಗಳಲ್ಲಿ ಮಾತ್ರವಲ್ಲದೆ, ಊರ ಹೊರಗೆ ಮತ್ತು ಊರ ಒಳಗೆ ಇರುವ ಅರಳಿ ಮರದ ಕಟ್ಟೆ, ಬೀದಿ ಬದಿಯಲ್ಲಿರುವ ಕಟ್ಟೆಗಳು, ಜಲಾಶಯಗಳು, ಕೆರೆಗಳು, ಹೊಳೆ, ಹಳ್ಳ, ಭಾವಿ ಮುಂತಾದ ಸ್ಥಳಗಳಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುತ್ತವೆ. ಅಲ್ಲದೆ ಗ್ರಾಮಗಳ ಅಗಸೀ ಬಾಗಿಲು, ಗುಡ್ಡಗಳ ಮೇಲೂ ಹನುಮಂತನ ಸಣ್ಣ, ದೊಡ್ಡ ಶಿಲ್ಪಗಳು ನೋಡಲು ಸಿಗುತ್ತವೆ. ಸಾಮಾನ್ಯವಾಗಿ ಉತ್ತರ ಕರ್ನಾಟಕದಲ್ಲಿ ಹನುಮಪ್ಪನು ಇಲ್ಲದ ಊರುಗಳನ್ನು ಕಾಣಲು ಸಾಧ್ಯವೇ ಇಲ್ಲ.

### ೩.೩ ನಾಗದೇವತಾ ಶಿಲ್ಪಗಳು

ಭಾರತದಲ್ಲಿ ನಾಗಪೂಜೆ ಆದಿಕಾಲದಿಂದಲೂ ನಡೆದುಕೊಂಡು ಬಂದಿದೆ. ಋಗ್ವೇದದಲ್ಲಿ ಮಹತ್ವಪೂರ್ಣ ದೇವತೆಗಳಲ್ಲಿ ನಾಗ ಕೂಡಾ ಒಂದು ಎನ್ನಲಾಗಿದೆ.[೧೦೨] ಈ ಭೂಮಿ ನಿಂತಿರುವುದೇ ನಾಗರಾಜನ ಹೆಡೆಯ ಮೇಲೆ ಎಂದು ಪೌರಾಣಿಕರ ಮತ. ನಾಗ ಶಿವನ ಆಭರಣ, ವಿಷ್ಣುವಿನ ತಲ್ಪ, ಗಣೇಶನ ಉದರಬಂಧ, ಸುಬ್ರಹ್ಮಣ್ಯನ ಅನನ್ಯ ಸ್ವರೂಪ, ಯೋಗ ಸಾಧನೆಯಲ್ಲಿ ಕುಂಡಲಿನೀ ಶಕ್ತಿ. ಸುಬ್ರಹ್ಮಣ್ಯ,

---

೧೦೦. ಹುಲ್ಯಾಳ, ತಾ. ಜಮಖಂಡಿ, ಜಿ. ಬಾಗಲಕೋಟ

೧೦೧. ಮಾಹಿತಿ ನೀಡಿದವರು : ಡಾ. ಯಾದಪ್ಪ ಪರದೇಶಿ, ಸಾ. ಕೆರೂರು

೧೦೨. ಡಾ. ಸೂರ್ಯನಾಥ ಕಾಮತ್, ಪಿ.ವಿ. ಕೃಷ್ಣಮೂರ್ತಿ : (ಸಂ.), ಇತಿಹಾಸ ದರ್ಶನ, ಸಂಪುಟ - ೧೦, ಪುಟ - ೨೦೨

ಲಕ್ಷ್ಮಣ, ಬಲರಾಮರು ನಾಗರಾಜನ ಅವತಾರವೆಂದೇ ಪರಿಗಣಿತರಾಗಿದ್ದಾರೆ. ನಾಗಾರಾಧನೆಯ ಹಬ್ಬವೇ ನಾಗರ ಪಂಚಮಿಯೆಂದು ಆಚರಿಸಲಾಗುವದು. ಇದು ಶ್ರಾವಣ ಮಾಸದ ಶುದ್ಧ ಪಂಚಮಿಯಂದು ಆಚರಿಸುವಂಥದ್ದು. ಅದರ ಹಿಂದಿನ ದಿನ ನಾಗ ಚೌತಿಯಾಗಿ ಆಚರಿಸುವ ಕ್ರಮವೂ ಇದೆ. ಇದಲ್ಲದೆ ಶುದ್ಧ ಷಷ್ಠಿಯ ದಿನವೂ ನಾಗಾರಾಧನೆ ನಡೆಸುವದುಂಟು.

ಹಲವಾರು ನಂಬಿಕೆಗಳ ಹಿನ್ನೆಲೆಯಲ್ಲಿ ನಾಗಾರಾಧನೆಯು ರೂಢಿಗೆ ಬಂದಿದೆ. ಶ್ರಾವಣ ಮಾಸದಲ್ಲಿ ಎಲ್ಲೆಲ್ಲೂ ಹಸಿರು ಬೆಳೆದು, ಭೂಮಿ ಕಂಗೊಳಿಸುತ್ತಿರುತ್ತದೆ. ಹೀಗಾಗಿ ಕ್ಷೇತ್ರಪಾಲಕನೆಂದು ಕರೆದು ನಾಗನ ಭೀತಿಯಿಂದ ಪಾರಾಗಲು ಮತ್ತು ನಾಗಗಳಿದ್ದ ಹೊಲಗಳಲ್ಲಿ ಇತರ ಕೀಟಗಳಿಂದ, ಕಳ್ಳರಿಂದ ತೊಂದರೆ ಬರದಿರಲೆಂದು ಹೀಗೆ ಅನೇಕ ಕಾರಣಗಳಿಂದ ನಾಗಪೂಜೆಗೆ ಔಚಿತ್ಯವಿದೆ.

ನಾಗರಪಂಚಮಿ ಹೆಣ್ಣುಮಕ್ಕಳ ಹಬ್ಬ. ಈ ಹಬ್ಬದಂದು ಬೆಳಿಗ್ಗೆ ಎದ್ದು ಸ್ನಾನಾದಿಗಳನ್ನು ಮುಗಿಸಿಕೊಂಡು ಕಲ್ಲು ಅಥವಾ ಮಣ್ಣಿನ ನಾಗನಿಗೆ ಪೂಜೆ ಸಲ್ಲಿಸಿ ನೈವೇಧ್ಯ ಮಾಡಿ ಹಾಲೆರೆಯುವುದು ರೂಢಿಯಲ್ಲಿದೆ. ಕೆಲವೆಡೆ ಹುತ್ತದ ಮಣ್ಣು ಇಲ್ಲವೆ ಗೋದಿ ಹಿಟ್ಟು ಕಲಸಿ ಸರ್ಪದ ಆಕೃತಿ ರಚಿಸಿ ತಟ್ಟೆಯಲ್ಲಿಟ್ಟು ನೆಲದ ಮೇಲೆ ರಂಗೋಲಿಯಿಂದ ನಾಗನ ಚಿತ್ರ ಬರೆದು, ಅದರ ಮೇಲಿಟ್ಟು ಹಾಲು, ತುಪ್ಪ, ಅರಳು ಮುಂತಾದವುಗಳನ್ನು ನೈವೇಧ್ಯ ಮಾಡಿ ಪೂಜಿಸುವುದ ಪದ್ಧತಿ. ಈ ಹಬ್ಬಕ್ಕೆ ಹೆಣ್ಣು ಮಕ್ಕಳು ತವರಿಗೆ ಬರುವುದು ವಾಡಿಕೆ. ನಾಗರಪಂಚಮಿ ಕುರಿತಂತೆ ಹಲವು ನಂಬಿಕೆಗಳು, ಜನಪದ ಕಥೆಗಳೂ, ಗೀತೆಗಳೂ ರೂಢಿಯಲ್ಲಿವೆ.[೧೦೩]

**ರಚನೆ :** ಶಿಲಾ ಮಾಧ್ಯಮದಲ್ಲಿ ರಚಿಸಿದ ಸಾವಿರಾರು ನಾಗರ ಶಿಲ್ಪಗಳು ಕರ್ನಾಟಕದುದ್ದಕ್ಕೂ ಅನೇಕ ಊರು, ದೇವಾಲಯಗಳಲ್ಲಿ ಸಿಗುತ್ತವೆ. ಹಿಂದೂ ಅದರಲ್ಲೂ ಶೈವ ಸಂಪ್ರದಾಯದ ದೇವಾಲಯಗಳಲ್ಲಿ ಈ ನಾಗದೇವತಾ ಶಿಲ್ಪಗಳು ಹೇರಳವಾಗಿ ನೋಡಲು ಸಿಗುತ್ತವೆ.

ಉತ್ತರ ಕರ್ನಾಟಕದ ಅನೇಕ ಊರುಗಳಲ್ಲಿ ನಾಗರ ಪಂಚಮಿಯಂದು ಊರಿನ ನಿರ್ಧಿಷ್ಟ ಸ್ಥಳಗಳಲ್ಲಿ ಅಂದರೆ, ಬನ್ನಿಯ ಗಿಡದ ಬುಡದಲ್ಲಿ, ಬೀದಿಯ ಪಕ್ಕದಲ್ಲಿ ಚಿಕ್ಕ ಚಿಕ್ಕ ನಾಗರ ಶಿಲ್ಪಗಳನ್ನು ಕಲ್ಲಿನಲ್ಲಿ ಕೆತ್ತಿಸಿ ಇಡುವ ಸಂಪ್ರದಾಯವಿದೆ. ಇವುಗಳನ್ನು ಹರಕೆಯ ರೂಪದಲ್ಲಿ ಸಲ್ಲಿಸುವರು. ಸಾಮಾನ್ಯವಾಗಿ ಒಡ್ಡರು ಈ ಶಿಲ್ಪಗಳನ್ನು ಕಟೆದು ಕೊಡುತ್ತಾರೆ. ಇಂಥ ಶಿಲ್ಪಗಳನ್ನು ಹರಕೆ ಹೊತ್ತ ಕೆಲವರು ಮಾಡಿಸಿ ಊರಲ್ಲಿನ ನಿರ್ದಿಷ್ಟ ಸ್ಥಳಗಳಲ್ಲಿ ತಂದು ಇಟ್ಟು ಪೂಜೆ ಸಲ್ಲಿಸುವರು. ಇವು ಸಾಮಾನ್ಯವಾಗಿ ಒಂದು x ಒಂದು, ಒಂದು x ಒಂದೂವರೆ, ಅರ್ಧ x ಅರ್ಧ ಅಡಿ ಅಳತೆಯ ಚಪ್ಪಟೆ ಕಲ್ಲುಗಳ ಮೇಲೆ ಕೊರೆದ ಇಲ್ಲವೆ ಉಬ್ಬು ಶಿಲ್ಪ ತಂತ್ರದಲ್ಲಿ ಕೆತ್ತಿದ ನಾಗ ದೇವತಾ ಶಿಲ್ಪಗಳಾಗಿರುತ್ತವೆ. ರಚನಾ ತಂತ್ರದ ದೃಷ್ಠಿಯಿಂದ ಈ ಶಿಲ್ಪಗಳನ್ನು ಮುಖ್ಯವಾಗಿ ಎರಡು ರೀತಿಯಲ್ಲಿ ವಿಂಗಡಿಸಬಹುದು. ೧. ಉಬ್ಬಗೆತ್ತನೆಯ ನಾಗ ದೇವತಾ

೧೦೩. ನೋಡಿ : ಇದೇ ಮಹಾ ಪ್ರಬಂಧದ ಅಧ್ಯಾಯ ಮೂರು : ಮಣ್ಣಿನ ಮಾಧ್ಯಮದ ಜನಪದ ಶಿಲ್ಪಕಲೆ, ಪುಟ - ೭೯



ನಾಗರಾಜನ ಶಿಲ್ಪ ( ಬನಶಂಕರಿ ದೇವಾಲಯ, ಬಾದಾಮಿ )



ನಾಗರ ಶಿಲ್ಪಗಳ ಸಮೂಹ ( ಬೇಲೂರು )

ಶಿಲ್ಪಗಳು ೨. ಪೂರ್ಣ ಅಥವಾ ದುಂಡುಗೆತ್ತನೆಯ ನಾಗದೇವತಾ ಶಿಲ್ಪಗಳು. ಈ ಎರಡೂ ಬಗೆಯ ನಾಗರ ಶಿಲ್ಪಗಳು ಎಲ್ಲ ಕಡೆ ಕಂಡುಬರುತ್ತವೆ. ಇವು ಪೂಜೆಗೊಳ್ಳುತ್ತವೆ. ಬಾದಾಮಿ ತಾಲೂಕಿನ ಬೇಲೂರಿನಲ್ಲಿ ಉಬ್ಬುಗೆತ್ತನೆಯ ಚಿಕ್ಕ ಆಕಾರದ ಶಿಲ್ಪಗಳನ್ನು ನೂರಾರು ಸಂಖ್ಯೆಯಲ್ಲಿ ರಾಶಿ, ರಾಶಿಯಾಗಿ ಅಲ್ಲಲ್ಲಿ ಒಟ್ಟಿರುವುದನ್ನು ಕಾಣಬಹುದು. ಅರ್ಧxಅರ್ಧ, ಅರ್ಧxಒಂದು ಅಡಿ ಚಿಕ್ಕ ಆಕಾರದ ಮರಳು ಶಿಲೆಯಲ್ಲಿ ಇವುಗಳನ್ನು ಮಾಡಲಾಗಿದೆ. ನಾಗ ದೇವತೆಯ ಉಬ್ಬು ಶಿಲ್ಪಗಳನ್ನು, ಕೆಲವು ಕೊರೆ ಚಿತ್ರಗಳನ್ನು ಮಾಡಿಸಿ ಹರಕೆಯಾಗಿ ಊರಿನ ಜನರು ಪ್ರತಿ ವರ್ಷ ಒಂದು ನಿರ್ಧಿಷ್ಠ ಸ್ಥಳದಲ್ಲಿ ಇಟ್ಟು ಪೂಜಿಸುವದನ್ನು ಇಲ್ಲಿ ಕಾಣಬಹುದು. ಈ ಶಿಲ್ಪಗಳನ್ನು ಸ್ಥಳೀಯ ಒಡ್ಡರ ಜನಾಂಗದವರು ರಚಿಸುತ್ತಾರೆ.[೧೦೪] ಈ ಊರಿನಲ್ಲಿ ಕೆಲವೆಡೆ ಬನ್ನಿಯ ಮರದ ಬುಡದಲ್ಲಿ, ಕೆಲವೆಡೆ ಊರಿನ ವಿಶಾಲ ಸ್ಥಳ ಇಲ್ಲವೆ ಬೀದಿ ಬದಿಯಲ್ಲಿ ಇಂಥ ಶಿಲ್ಪಗಳನ್ನು ಕಾಣಬಹುದಲ್ಲದೆ, ಇವು ಆಗಾಗ ಪೂಜೆಗೊಳ್ಳುತ್ತವೆ. ಈ ಶಿಲ್ಪಗಳನ್ನು ಯಾರೂ ಸ್ಥಳಾಂತರಿಸುವುದಿಲ್ಲ ಮತ್ತು ಹಾನಿ ಮಾಡುವುದಿಲ್ಲ. ಹೀಗಾಗಿ ನೂರಾರು ಶಿಲ್ಪಗಳು ರಾಶಿಯಾಗಿ ಬಿದ್ದಿರುತ್ತವೆ.

ಉತ್ತರ ಕರ್ನಾಟಕದ ಅನೇಕ ಊರುಗಳಲ್ಲಿ ನಾಗರ ಕಲ್ಲು ಎಂದು ನಾಗ ಶಿಲ್ಪಗಳನ್ನು ಕರೆಯುತ್ತಾರೆ. ಅರಳೀಮರ, ಬನ್ನಿ ಮರಗಳಡಿಯಲ್ಲಿರುವ ಕಟ್ಟೆಯ ಮೇಲೆ ಪ್ರತಿಷ್ಠಾಪಿಸಲ್ಪಟ್ಟಿರುವ ನಾಗರ (ಕಲ್ಲುಗಳನ್ನು) ಶಿಲ್ಪಗಳನ್ನು ಕಾಣಬಹುದು. ಕೋಲಾರ ಜಿಲ್ಲೆಯ ವಿದುರಾಶ್ವತ್ಥದ ಮರಗಳ ತೋಪಿನಲ್ಲಿ ನೂರಾರು ನಾಗರ ಶಿಲ್ಪಗಳನ್ನು ವೈವಿಧ್ಯಮಯವಾಗಿ ಪ್ರತಿಷ್ಠಾಪಿಸಿದ್ದು ಕಾಣಬಹುದೆಂದು ಡಾ. ಎ.ವಿ. ನಾವಡ ಹೇಳುತ್ತಾರೆ. ಅದೇ ರೀತಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಹಾಗೂ ಹೊಸಪೇಟೆಯ ಹತ್ತಿರದ ಮಲಪನಗುಡಿ, ಕಮಲಾಪುರಗಳಲ್ಲಿ ಊರಲ್ಲಿರುವ ಅರಳೀಮರ, ಬನ್ನಿ ಮರಗಳ ಅಡಿಯಲ್ಲಿರುವ ಕಟ್ಟೆಗಳ ಮೇಲೆ, ಅಲ್ಲಲ್ಲಿ ಕಲ್ಲಿನಲ್ಲಿ ಕೆತ್ತಲಾಗಿರುವ ನಾಗ ದೇವತೆಗಳ ಉಬ್ಬು ಶಿಲ್ಪಗಳನ್ನು ನೂರಾರು ಸಂಖ್ಯೆಯಲ್ಲಿ ಕಾಣಬಹುದು. ಸಾಮಾನ್ಯವಾಗಿ ಎಲ್ಲ ಊರುಗಳಲ್ಲಿ ಇಂಥ ಶಿಲ್ಪಗಲು ಕಂಡು ಬರುತ್ತವೆಯಾದ್ದರಿಂದ ಊರುಗಳ ಹೆಸರುಗಳನ್ನು ಉಲ್ಲೇಖಿಸುವುದು ಅನಗತ್ಯವೆನಿಸುತ್ತದೆ. ಅರಳೀಮರ ಮತ್ತು ನಾಗ ಇವೆರಡೂ ಫಲೋತ್ಪತ್ತಿಯ ಪ್ರತೀಕಗಳೇ ಆಗಿದ್ದು ವಿಶೇಷವಾಗಿ ಹೆಂಗಸರು ಇವುಗಳ ಪೂಜೆ ಮಾಡುವುದನ್ನು ಕಾಣಬಹುದು. ಈ ಮೂಲಕ ವೃಕ್ಷಕ್ಕೂ-ನಾಗನಿಗೂ ಇರುವ ಅವಿನಾಭಾವ ಸಂಬಂಧ ಕೂಡ ವ್ಯಕ್ತವಾಗುತ್ತದೆ. ಈ ನಾಗಾರಾಧನೆ ಭಾರತದಲ್ಲಿ ಮಾತ್ರವಲ್ಲದೆ, ಜಗತ್ತಿನ ಇತರ ದೇಶಗಳಲ್ಲೂ ಇದೆ. ಗ್ರೀಸ್, ಈಜಿಪ್ತ, ಇಟಲಿ, ಸುಮೇರಿಯಾ, ಬ್ಯಾಬಿಲೋನಿಯಾ, ಮೆಕ್ಸಿಕೋ ಹಾಗೂ ಯುರೋಪ್ ಖಂಡಗಳಲ್ಲಿ ನಾಗ ದೈವಿಕ ಶಕ್ತಿಯ ಪ್ರತೀಕವೆಂದು ತಿಳಿಯಲಾಗಿದೆ. ಅಷ್ಟೇ ಏಕೆ ಕ್ರೈಸ್ತ, ಜೈನ, ಬೌದ್ಧ ಧರ್ಮಗಳ ಗ್ರಂಥಗಳಲ್ಲಿಯೂ[೧೦೫] ನಾಗಗಳ ಪ್ರಸ್ತಾಪವಿದೆ.

---

೧೦೪. ಮಾಹಿತಿ ನೀಡಿದವರು : ಯಶವಂತರಾವ್ ರಣದೇವ್, ಸಾ. ಬೇಲೂರು, ತಾ. ಬಾದಾಮಿ, ಜಿ. ಬಾಗಲಕೋಟ

೧೦೫. ತರಂಗ : ನಾಗಾರಾಧನೆ, ೨೫ ಅಗಸ್ಟ ೧೯೯೬, ಎಸ್.ಎಸ್. ಭಟ್

[illegible]

[illegible]

[illegible]

ಪ್ರಾದೇಶಿಕ ದೈವಿಕ ಶಕ್ತಿಗಳನ್ನು ಪುರಾಣಗಳ ರೂಪದಲ್ಲಿ ಅರ್ಥೈಸುವಾಗ ನಾಗ ಶಕ್ತಿಗಳ ಅರಿವು ಉಂಟಾಗುತ್ತದೆ. ನಾಗ ಸ್ಥಳಗಳ ಪುರಾಣಗಳಲ್ಲಿ ಸ್ಥಳೀಯ ಘಟನೆಗಳೇ ಕಾರಣವಾಗಿ ಭಕ್ತಿ ರೂಪದಲ್ಲಿ ವರ್ಣಿಸಲ್ಪಡುವಾಗ ನಾಗ ಶಕ್ತಿಯ ಅಸಾಮಾನ್ಯ ಘಟನೆಗಳು ಚಿಂತನೆಗೆ ಎಡೆಮಾಡಿಕೊಡುತ್ತವೆ. ಈ ನಾಗ ದೇವತಾ ಶಿಲಾ ಶಿಲ್ಪಗಳು ಒಂದು ಹೆಡೆಯಿಂದ ಎರಡು, ಐದು, ಏಳು, ಎಂಟು ಇಲ್ಲವೆ ಹನ್ನೆರಡು ಹೆಡೆಯವುಗಳೂ ಆಗಿರುತ್ತವೆ.

**ನಂಬಿಕೆ :** ನಾಗಾರಾಧನೆಯಿಂದ ನಾಗರ ಶಾಪ ನಿವಾರಣೆ, ಚರ್ಮರೋಗ ನಿವಾರಣೆ ಹಾಗೂ ಪಾಪ ಪರಿಹಾರವಾಗುತ್ತದೆ ಮತ್ತು ಕುಟುಂಬ, ಸಮಾಜಕ್ಕೆ ನೈತಿಕ, ಮಾನಸಿಕ ನೆಮ್ಮದಿಯಾಗುತ್ತದೆ ಎಂದು ನಂಬಲಾಗಿದೆ. ನಾಗ ದೇವರು ಧನ ಸಂಪತ್ತು, ಫಲವಂತಿಕೆಗಳ ಪ್ರತೀಕವೆಂದೂ ನಂಬಿಕೆ ಇದೆ. ನಮ್ಮ ಗ್ರಾಮೀಣರು ಇಂಥ ನಂಬಿಕೆಗಳ ಹಿನ್ನೆಲೆಯಲ್ಲಿ ನೂರಾರು ಶಿಲ್ಪಗಳನ್ನು ಅರಳಿ ಮರ, ಬನ್ನಿ ಮರ ಮುಂತಾದ ಮರಗಳ ಅಡಿಯಲ್ಲಿ ಪ್ರತಿಷ್ಠಾಪಿಸಿ, ಪೂಜಿಸುತ್ತ ಬಂದಿದ್ದಾರೆ. ಇಂಥ ಶಿಲ್ಪಗಳು ಕೇವಲ ಗ್ರಾಮಗಳಲ್ಲಿ ಮಾತ್ರವಲ್ಲ, ಊರಿನ ಆಚೆಗಿರುವ ಹೊಲ-ಗದ್ದೆಗಳಲ್ಲೂ ನಮ್ಮ ಗ್ರಾಮೀಣರು ಇಂಥ ಶಿಲ್ಪಗಳನ್ನಿಟ್ಟು ಪೂಜಿಸುತ್ತಾರೆ.

ಗುಲಬರ್ಗಾದ ವಸ್ತು ಸಂಗ್ರಹಾಲಯದಲ್ಲಿರುವ ನಾಗ ಶಿಲ್ಪ, ಇದೇ ಜಿಲ್ಲೆಯ ಶಿರವಾಳ[೧೦೬] ಮತ್ತು ಕರಕಮುಕ್ಲಿ[೧೦೭]ಯಲ್ಲಿ ಲಭ್ಯವಿರುವ ಶಿಲಾ ಮಾಧ್ಯಮದ ನಾಗ ಶಿಲ್ಪಗಳು ವಿಶೇಷವಾಗಿದ್ದು ಜನಪದ ಶೈಲಿಯವಾಗಿವೆ. ಸಿಂದಗಿ ತಾಲೂಕಿನ ಖೈನೂರಲ್ಲಿ[೧೦೮] ಶ್ರೀ ಗೊಲ್ಲಾಳೇಶ್ವರ ದೇವಸ್ಥಾನದಲ್ಲಿ ಶಿಲಾ ಮಾಧ್ಯಮದಲ್ಲಿ ಮೂರು ಉಬ್ಬು ತಂತ್ರದ ನಾಗ ಶಿಲ್ಪಗಳು ನೋಡಲು ಸಿಗುತ್ತವೆ. ಹಾಗೇ ದೇವರ ನಾವದಗಿಯ[೧೦೯] ಮಲ್ಲಿಕಾರ್ಜುನ ದೇವಾಲಯದಲ್ಲಿನ ನಾಗ ದೇವತಾ ಶಿಲ್ಪಗಳು ಜನಪದ ಶೈಲಿಯಲ್ಲಿವೆ.

ಹೀಗೆ ಶಿಲಾ ಮಾಧ್ಯಮದಲ್ಲಿ ನೂರಾರು ಬಗೆಯ ಪುರುಷ ದೇವತಾ ಶಿಲ್ಪಗಳು, ಸ್ತ್ರೀ ದೇವತಾ ಶಿಲ್ಪಗಳು ಹಾಗೂ ಪ್ರಾಣಿ ದೇವತಾ ಶಿಲ್ಪಗಳು ರಚನೆಗೊಂಡು ಸಾವಿರಾರು ವರ್ಷಗಳಿಂದ ನಮ್ಮ ಜನಪದರ ಆರಾಧ್ಯ ದೈವವಾಗಿ, ಕುಲ ದೈವವಾಗಿ, ಗ್ರಾಮ ದೇವತೆಗಳಾಗಿ ಅವರ ಬದುಕಿನ ಮುಖ್ಯ ಭಾಗವೇ ಆಗಿವೆಯೆಂಬುದು ಈ ವಿಭಾಗದಲ್ಲಿ ಅಧ್ಯಯನ ಮಾಡಲಾದ ಶಿಲ್ಪಗಳಿಂದ ತಿಳಿದು ಬರುತ್ತದೆ. ಪ್ರತಿಯೊಂದು ಶಿಲ್ಪವೂ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿ ವಿಶೇಷತೆಯಿಂದ ಕೂಡಿದ್ದು ತಿಳಿದು ಬರುತ್ತದೆ. ವೀರಭದ್ರನ ಶಿಲ್ಪಗಳು, ಶಿವ ಹಾಗೂ ಗಣೇಶನ ಶಿಲ್ಪಗಳು, ಮೈಲಾರಲಿಂಗ ಹಾಗೂ ದೊಡ್ಡಪ್ಪನ ಶಿಲ್ಪಗಳು ಮುಂತಾದ ಪುರುಷ ದೇವತಾ ಶಿಲ್ಪಗಳು ಅಲ್ಲದೆ, ಲಜ್ಜಾ ಗೌರಿ, ಕಾಳಿ,

---

೧೦೬. ಶಿರವಾಳ, ತಾ. ಅಫಜಲಪುರ, ಜಿ. ಗುಲಬರ್ಗಾ
೧೦೭. ಕರಕ ಮುಕ್ಲಿ ,ತಾ. ಅಫಜಲಪುರ, ಜಿ. ಗುಲಬರ್ಗಾ
೧೦೮. ಖೈನೂರ , ತಾ. ಸಿಂದಗಿ, ಜಿ. ಬಿಜಾಪುರ
೧೦೯. ದೇವರನಾವದಗಿ , ತಾ. ಸಿಂದಗಿ, ಜಿ. ಬಿಜಾಪುರ

ಭದ್ರಕಾಳಿಯರ ಶಿಲ್ಪಗಳು, ದುರ್ಗಿ, ಶೆಟವಿ ತಾಯಿ, ಕರಿಯೆವ್ವ, ರೆಬ್ಬೆವ್ವ, ಉಡಚಮ್ಮ, ಮಾಯಮ್ಮ, ಬಾದುಮೆಯಂತಹ ಸ್ತ್ರೀ ದೇವತಾ ಶಿಲ್ಪಗಳು ಜನಪದರ ಬದುಕಿನ ಅವಿಭಾಜ್ಯ ಅಂಗಗಳಾಗಿವೆ.

ಹಾಗೆಯೇ ಪ್ರಾಣಿ ದೇವತಾ ಶಿಲ್ಪಗಳಾದ ನಂದಿ, ಹನುಮಂತ, ನಾಗ ದೇವತೆ ಮುಂತಾದ ಜನಪದ ಶಿಲ್ಪಗಳು ಗ್ರಾಮೀಣರ ಆಚರಣೆಯಲ್ಲಿ ಹೇಗೆ ಮಹತ್ವ ಪಡೆದವುಗಳಾಗಿವೆ ಎಂಬುದನ್ನು ಈ ವಿಭಾಗದಲ್ಲಿ ಮಾಡಲಾದ ಅಧ್ಯಯನದಿಂದ ತಿಳಿಯಬಹುದು.

## II. ಆತ್ಮಬಲಿದಾನದ ಶಿಲ್ಪಗಳು

ಪ್ರಾಚೀನ ಕಾಲದಿಂದಲೂ ನಮ್ಮ ಪೂರ್ವಜರು ನಂಬಿಕೊಂಡು ಬಂದ ಅನೇಕ ಮೌಲ್ಯಗಳಲ್ಲಿ ಆತ್ಮಬಲಿದಾನವೂ ಒಂದಾಗಿದೆ. ಆತ್ಮಬಲಿದಾನ ಎಂದರೆ ಒಂದು ರೀತಿಯಲ್ಲಿ ಪ್ರಾಣಾರ್ಪಣೆ. ಈ ಪ್ರಾಣಾರ್ಪಣೆ ಅಥವಾ ಆತ್ಮಬಲಿದಾನಗಳು ಅಸ್ವಾಭಾವಿಕ ಮರಣಗಳಾಗಿದ್ದರೂ ಆತ್ಮಹತ್ಯೆಯಲ್ಲ. ಆತ್ಮಹತ್ಯೆಯನ್ನು ಹೇಡಿಯಾದವನು ಕೈಕೊಂಡರೆ, ಆತ್ಮಬಲಿದಾನವನ್ನು ಸತ್ವಶಾಲಿಯಾದವನು ಸ್ವಾಗತಿಸುತ್ತಾನೆ. ಒಂದರಿಂದ ನಿಂದೆ, ನರಕಗಳ ಪ್ರಾಪ್ತಿ, ಇನ್ನೊಂದರಿಂದ ಕೀರ್ತಿ ಮುಕ್ತಿಗಳ ಪ್ರಾಪ್ತಿ[೧೧೦] ಎನ್ನುವದು ನಮ್ಮ ಜನಪದರು ಹಿಂದಿನಿಂದ ನಂಬಿಕೊಂಡು ಬಂದ ಒಂದು ಮೌಲ್ಯ.

ಧರ್ಮಕ್ಕಾಗಿಯೋ, ಆತ್ಮತೃಪ್ತಿಗಾಗಿಯೋ ಅಥವಾ ತನ್ನ ನಿಷ್ಠೆಯನ್ನು ಪ್ರದರ್ಶಿಸುವದಕ್ಕಾಗಿಯೋ ಇಲ್ಲವೆ ತಾನು ನಂಬಿದ ಪ್ರೀತಿಯ ವಸ್ತು ಅಥವಾ ವ್ಯಕ್ತಿಯ ಅಗಲಿಕೆಯ ಸಂಕಷ್ಟವನ್ನು ತಡೆಯಲಾಗದೆ ವ್ರತಗಳನ್ನು ಕೈಕೊಂಡೋ, ಬೆಂಕಿಗೆ ಹಾರಿಯೋ ಅಥವಾ ಸ್ವಯಂ ಇರಿದುಕೊಂಡು ಪ್ರಾಣವನ್ನು ಕಳೆದುಕೊಳ್ಳುವದು ನಮ್ಮ ಜನಪದರಲ್ಲಿ ರೂಢಿಯಲ್ಲಿತ್ತು. ಈ ರೀತಿಯಲ್ಲಿ ಆತ್ಮಾರ್ಪಣೆ ಮಾಡಿಕೊಳ್ಳುವದೆಂದರೆ ಅವರಿಗೆ ಇಷ್ಟವಾದ ಮತ್ತು ಪರಮ ಪುಣ್ಯದ ಕಾರ್ಯವೆಂದು ಬಗೆದಿದ್ದರು. ಸಾರ್ವಜನಿಕರು ಇಂತಹವರ ಬಗೆಗೆ ಅಪಾರ ಗೌರವ, ಭಕ್ತಿಯನ್ನು ಹೊಂದಿರುತ್ತಿದ್ದರು. ಆತ್ಮಾರ್ಪಣೆ ಮಾಡಿಕೊಂಡವರ ಮನದಲ್ಲಿಯೂ ನಾವು ಶ್ರೇಷ್ಠವಾದ ಕಾರ್ಯವನ್ನು ಕೈಗೊಂಡಿದ್ದೇವೆ, ಇದರಿಂದ ನಮ್ಮ ಜನ್ಮ ಸಾರ್ಥಕವಾಯಿತು ಎಂಬ ಭಾವನೆ ತುಂಬಿರುತ್ತಿತ್ತು. ಈ ರೀತಿಯ ಘಟನೆಗಳನ್ನು ದಾಖಲಿಸುವ ಹಲವು ಶಿಲ್ಪಗಳು ಭಾರತದ ತುಂಬೆಲ್ಲ ಹರಡಿರುವಂತೆ ಕರ್ನಾಟಕದಲ್ಲೂ ಲಭ್ಯವಿವೆ. ಇಂತಹ ಬಲಿದಾನ ಶಿಲ್ಪಗಳೆಲ್ಲ ಶಿಲಾ ಮಾಧ್ಯಮದವುಗಳಾಗಿದ್ದು ಇವುಗಳಲ್ಲಿ ಜನಪದ ಶೈಲಿಯೇ ಪ್ರಧಾನವಾಗಿ ಕಂಡು ಬರುತ್ತದೆ. ಇಂತಹ ಶಿಲ್ಪಗಳು ಕುತೂಹಲಕಾರಿಯಾಗಿದ್ದು ಅಭ್ಯಾಸಯೋಗ್ಯವಾಗಿವೆ. ಡಾ. ಎಂ.ಎಂ ಕಲಬುರ್ಗಿಯವರು ಆತ್ಮಬಲಿದಾನ ಸ್ಮಾರಕಗಳ ಕುರಿತು ವಿದ್ವತ್ ಪೂರ್ಣ ಅಧ್ಯಯನ ಮಾಡಿದ್ದಾರೆ.[೧೧೧] ಡಾ. ಚೆನ್ನಕ್ಕ ಎಲಿಗಾರ ಅವರು ಆತ್ಮಬಲಿದಾನವನ್ನು ಧಾರ್ಮಿಕ ಆತ್ಮಬಲಿದಾನ, ಲೌಕಿಕ ಆತ್ಮಬಲಿದಾನ ಎಂದು ಮುಖ್ಯವಾಗಿ

---

೧೧೦. ಡಾ. ಚೆನ್ನಕ್ಕ ಎಲಿಗಾರ : ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ, ಪುಟ - ೨೧೩

೧೧೧. ಡಾ. ಎಂ.ಎಂ. ಕಲಬುರ್ಗಿ : ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಪುಟ - ೨೧

[illegible]

ಎರಡು ರೀತಿಯಲ್ಲಿ ವಿಂಗಡಿಸಿ ಅಧ್ಯಯನ ಮಾಡಿದ್ದಾರೆ.[೧೧೨] ಹಾಗೇ ಡಾ. ಡಿ. ವಿ. ಪರಮಶಿವ ಮೂರ್ತಿಯವರೂ[೧೧೩] ಕನ್ನಡ ಶಾಸನ ಶಿಲ್ಪಗಳ ಅಧ್ಯಯನದ ಸಂದರ್ಭದಲ್ಲಿ ಆತ್ಮ ಬಲಿದಾನ ಶಿಲ್ಪಗಳನ್ನು ಧಾರ್ಮಿಕ ಆತ್ಮ ಬಲಿದಾನ ಶಾಸನಶಿಲ್ಪಗಳು ಅಥವಾ ಲೌಕಿಕ ಆತ್ಮ ಬಲಿದಾನ ಶಾಸನಶಿಲ್ಪಗಳೆಂದು ವಿಂಗಡಿಸಿ ಅಧ್ಯಯನ ಮಾಡಿದ್ದಾರೆ. ಇವರಿಬ್ಬರಲ್ಲಿ ಒಬ್ಬರು ಶಾಸನಗಳಲ್ಲಿನ ಸ್ತ್ರೀ ಸಮಾಜ ಕುರಿತು ಅಧ್ಯಯನ ಮಾಡಿದರೆ, ಮತ್ತೊಬ್ಬರು ಶಾಸನಶಿಲ್ಪಗಳ ಕುರಿತು ಅಧ್ಯಯನ ಮಾಡಿದ್ದಾರೆ. ಈ ಎರಡೂ ಕ್ರಮಗಳನ್ನು ಅನುಮೋದಿಸಿಯೇ ಇಲ್ಲಿ ಆತ್ಮ ಬಲಿದಾನ ಶಿಲ್ಪಗಳನ್ನು ೧. ಧಾರ್ಮಿಕ ಆತ್ಮ ಬಲಿದಾನ ಶಿಲ್ಪಗಳು ಮತ್ತು ೨. ಲೌಕಿಕ ಆತ್ಮ ಬಲಿದಾನ ಶಿಲ್ಪಗಳು ಎಂದು ಮುಖ್ಯವಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಆದರೆ ಈ ಅಧ್ಯಯನದಲ್ಲಿ ಶಾಸನ ರಹಿತ ಹಾಗೂ ಶಾಸನ ಸಹಿತವಾದ ಎರಡೂ ಬಗೆಯ ಆತ್ಮ ಬಲಿದಾನ ಶಿಲ್ಪಗಳನ್ನು ಗಮನಿಸಲಾಗಿರುತ್ತದೆ. ಅದರಲ್ಲೂ ಮುಖ್ಯವಾಗಿ ಶಿಲ್ಪ ಕೇಂದ್ರಿತವಾದ ಅಧ್ಯಯನ ಮಾಡಲಾಗಿದೆ.

ಈ ಶಿಲಾ ಮಾಧ್ಯಮದ ಶಿಲ್ಪಗಳಲ್ಲಿ ಮರದ ಮಾಧ್ಯಮ, ಮಣ್ಣಿನ ಮಾಧ್ಯಮ ಹಾಗೂ ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಗಳಲ್ಲಿ ಕಂಡು ಬರುವ ನಾಜೂಕು, ವರ್ಣವಿನ್ಯಾಸ, ಕುತೂಹಲಕಾರಿಯಾದ ನಿರ್ಮಾಣ ಕ್ರಮ ಮುಂತಾದವುಗಳು ಇಲ್ಲಿ ಕಂಡು ಬರುವುದಿಲ್ಲ. ಇಲ್ಲಿ ಏನಿದ್ದರೂ ಶಿಲ್ಪದ ಕೆತ್ತನೆ, ಸಂಯೋಜನೆ, ಅವಕಾಶದ ಹಂಚಿಕೆ, ಇವುಗಳೊಂದಿಗೆ ಶಿಲ್ಪದ ಮೈವಳಿಕೆ ಮತ್ತು ಶಿಲ್ಪದ ವಿಷಯದ ಗ್ರಹಿಕೆ ಮುಖ್ಯವಾಗುತ್ತವೆ. ಧಾರ್ಮಿಕ ಆತ್ಮ ಬಲಿದಾನ ಶಿಲ್ಪಗಳನ್ನು **೧.೧ ನಿಸಿಧಿ ಶಿಲ್ಪಗಳು, ೧.೨ ಹರಕೆ ಬಲಿದಾನ ಶಿಲ್ಪಗಳು** ಎಂದು ವಿಂಗಡಿಸಿ ಮತ್ತೆ ಕೆಳಗಿನಂತೆ ಉಪವಿಂಗಡಣೆ ಮಾಡಿ ಅಧ್ಯಯನ ಮಾಡಲಾಗಿದೆ. ಅ. ಕಂಬಗಳಾಕಾರದ ನಿಸಿಧಿಶಿಲ್ಪಗಳು, ಆ. ಫಲಕದಾಕಾರದ ನಿಸಿಧಿಶಿಲ್ಪಗಳು, ಇ. ಪಾದಗಳಾಕಾರದ ನಿಸಿಧಿಶಿಲ್ಪಗಳು, ಈ. ಬಂಡೆ ನಿಸಿಧಿ ಶಿಲ್ಪಗಳು ಇವುಗಳನ್ನು ನಿಸಿಧಿ ಶಿಲ್ಪಗಳಲ್ಲಿಯೂ, ಅ. ಸೂರ್ಯ ಗ್ರಹಣ ಬಲಿ ಶಿಲ್ಪಗಳು, ಆ. ಉರಿ ಉಯ್ಯಾಲೆ ಬಲಿ ಶಿಲ್ಪಗಳು, ಇ. ಶೂಲ ಬಲಿ ಶಿಲ್ಪಗಳು, ಈ. ಶಿರ ಬಲಿ ಶಿಲ್ಪಗಳು, ಉ. ಸಿಡಿ ತಲೆ ಬಲಿ ಶಿಲ್ಪಗಳು, ಊ. ಇರಿತ ಬಲಿ ಶಿಲ್ಪಗಳು ಇವುಗಳನ್ನು ಹರಕೆ ಬಲಿದಾನ ಶಿಲ್ಪಗಳ ವಿಭಾಗದಲ್ಲೂ ವಿಂಗಡಿಸಿ ಅಧ್ಯಯನ ಮಾಡಲಾಗಿದೆ.

## ೧. ಧಾರ್ಮಿಕ ಆತ್ಮ ಬಲಿದಾನ ಶಿಲ್ಪಗಳು

ದೈವವನ್ನು ಗುರಿಯಾಗಿಟ್ಟುಕೊಂಡು ಆತ್ಮಾನುಸಂಧಾನ ಮಾಡುವದರಿಂದ ಸದ್ಗತಿ ಸಾಧ್ಯವೆಂದು ಭಾವಿಸಿದ ನಮ್ಮ ಜನಪದರು, ದೇವರ ಹೆಸರಿನಲ್ಲಿ ಕೈಗೊಳ್ಳುವ ಆತ್ಮ ಬಲಿದಾನದಿಂದಲೂ ಸದ್ಗತಿ ಸಾಧ್ಯವೆಂದು ನಂಬಿದವರು.[೧೧೪] ಹೀಗಾಗಿ ನಮ್ಮ ಪೂರ್ವಜರು ಧಾರ್ಮಿಕ ಆತ್ಮ ಬಲಿದಾನಕ್ಕೆ ಹೆಚ್ಚು ಮಹತ್ವ

---

೧೧೨. ಡಾ. ಚೆನ್ನಕ್ಕ ಎಲಿಗಾರ : ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ, ಪುಟ - ೨೧೩

೧೧೩. ಡಾ. ಡಿ.ವಿ. ಪರಮಶಿವಮೂರ್ತಿ, ಕನ್ನಡ ಶಾಸನಶಿಲ್ಪ, ಪುಟ - ೧೧೭

೧೧೪. ಡಾ. ಎಂ.ಎಂ. ಕಲಬುರ್ಗಿ : ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು.

[illegible]

[illegible]

[illegible]

[illegible]

[illegible]

ನೀಡಿ ಅನುಷ್ಠಾನಗೊಳಿಸಿಕೊಂಡು ಬಂದುದನ್ನು ಕಾಣಬಹುದು. ಈ ಪದ್ಧತಿಯನ್ನು ಹಿಂದೂಯೇತರ ಧರ್ಮಗಳಲ್ಲಿಯೂ ಆಚರಣೆಯಲ್ಲಿದ್ದಿತೆಂದು ತಿಳಿದು ಬರುತ್ತದೆ.

## ೧.೧ ನಿಸಿಧಿಶಿಲ್ಪಗಳು

ಸನ್ಯಾಸನ ವಿಧಿಯಿಂದ ಮಡಿದವರ ಸ್ಮಾರಕವಾಗಿ ವೀರರಿಗೆ ವೀರಮರಣ ಶಿಲ್ಪಗಳನ್ನು ಸ್ಥಾಪಿಸುತ್ತಿದ್ದಂತೆ ಕೆಲವು ಸ್ಮಾರಕ ಶಿಲ್ಪಗಳನ್ನು ನಿಲ್ಲಿಸುತ್ತಿದ್ದರು. ಇವುಗಳನ್ನು ನಿಸಿಧಿ ಶಿಲ್ಪಗಳೆಂದು ಕರೆಯುತ್ತಾರೆ. ಇವುಗಳು ಬಸದಿಗಳ ಮುಂದಿನ ಪ್ರತ್ಯೇಕ ಶಿಲಾ ಫಲಕಗಳಲ್ಲಿ, ಬಸಿದಿಯ ಕಂಬಗಳ ಮೇಲೆ, ಊರ ಹೊರಗಿನ ಹೊಲಗಳಲ್ಲಿ ನೆಟ್ಟ ಕಲ್ಲುಗಳಲ್ಲಿ, ಬಂಡೆಗಳ ಮೇಲೆ ಕಾಣಿಸಿಕೊಳ್ಳುತ್ತವೆ.[೧೧೫] ಈ ಎಲ್ಲ ನಿಸಿಧಿ ಶಿಲ್ಪಗಳನ್ನು ಶಾಸನ ಸಹಿತ ಶಿಲ್ಪ, ಶಾಸನ ರಹಿತ ಶಿಲ್ಪ, ಕೇವಲ ಶಾಸನವಿರುವ ಶಿಲೆ ಹೀಗೆ ಮೂರು ರೀತಿಯಲ್ಲಿ ಕಂಡುಬರುತ್ತವೆ. ನಿಸಿಧಿಶಿಲ್ಪಗಳೆಲ್ಲವೂ ಉಬ್ಬು ಶಿಲ್ಪಗಳೇ ಆಗಿರುತ್ತವೆ. ಈ ಶಿಲ್ಪದ ವಿನ್ಯಾಸದ ಮೂಲಕ ನಿಸಿಧಿಶಿಲ್ಪವನ್ನು ತಟ್ಟನೇ ಗುರುತಿಸಬಹುದು. ಒಂದು ಕಡೆ ಭೋಧಿಸುತ್ತಿರುವ ಗುರು ಮತ್ತೊಂದು ಕಡೆಗೆ ಆಲಿಸುತ್ತಿರುವ ಶಿಷ್ಯ ಇವರಿಬ್ಬರ ನಡುವೆ ತೆರೆದ ಪುಸ್ತಕವನ್ನು ಹೊತ್ತ ವ್ಯಾಸ ಪೀಠ, ಹೀಗೆ ಈ ಶಿಲ್ಪ ವಿನ್ಯಾಸಗಳು ಸಾಮಾನ್ಯವಾಗಿರುತ್ತವೆ.

ಉತ್ತರ ಕರ್ನಾಟಕಕ್ಕಿಂತ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಿಸಿಧಿಶಿಲ್ಪಗಳು ಕಂಡು ಬರುತ್ತವೆ. ಈ ನಿಸಿಧಿಶಿಲ್ಪಗಳನ್ನು ಅ. ಕಂಬಗಳಾಕಾರದ ನಿಸಿಧಿಶಿಲ್ಪಗಳು ಬ. ಫಲಕಗಳಾಕಾರದ ನಿಸಿಧಿಶಿಲ್ಪಗಳು ಇ. ಪಾದಗಳಾಕಾರದ ನಿಸಿಧಿಶಿಲ್ಪಗಳೆಂದು ವಿಭಾಗಿಸಿ ನೋಡಬಹುದು.

**ಅ. ಕಂಬಗಳಾಕಾರದ ನಿಸಿಧಿಶಿಲ್ಪಗಳು :**[೧೧೬] ಕಂಬಗಳಾಕಾರದ ನಿಸಿಧಿಶಿಲ್ಪಗಳು ಒಂದೇ ಸ್ಥಳದಲ್ಲಿ ಹೆಚ್ಚಾಗಿ ಶ್ರವಣಬೆಳಗೊಳದಲ್ಲಿ ಕಂಡು ಬರುತ್ತವೆ. ಇವು ಸುಮಾರು ಮೂರು ಅಡಿಗಳಿಂದ ಆರು ಅಡಿಗಳವರೆಗೆ ಎತ್ತರವಾಗಿವೆ. ಕಂಬದ ಮೇಲಿನ ತುದಿ ಗೋಪುರಾಕಾರವಾಗಿದ್ದು, ಅದರ ಕೆಳಗೆ ಚಚ್ಚೌಕವಾದ ಜಾಗವನ್ನು ಬಿಡಿಸಿಕೊಂಡು ಶಿಲ್ಪವನ್ನು ಕೆತ್ತಲಾಗಿದೆ.[೧೧೭] ಈ ಬಗೆಯ ನಿಸಿಧಿಶಿಲ್ಪಗಳು ಕೆಲವು ಶಾಸನ ಸಹಿತವಾದವುಗಳಾಗಿದ್ದರೆ, ಕೆಲವು ಶಾಸನ ರಹಿತವಾದವುಗಳಾಗಿರುತ್ತವೆ. ಈ ಶಿಲ್ಪಗಳು ಸುತ್ತಲೂ ನಿಂತು ನೋಡಬಹುದಾದ ರೀತಿಯಲ್ಲಿರುತ್ತವೆ. ಈ ಬಗೆಯ ಶಿಲ್ಪಗಳಲ್ಲಿ ಜಿನಮೂರ್ತಿ, ಭಕ್ತರು, ಗ್ರಂಥಗಳು, ಜಿನನ ಎಡ-ಬಲ ಬದಿಗಳಲ್ಲಿ ಚಾಮರಗಳು ಸಾಮಾನ್ಯವಾಗಿರುತ್ತವೆ. ಕೆಲವು ಶಿಲ್ಪಗಳ ಕಂಬದ ತುದಿಯಲ್ಲಿ ಅರಳಿದ ಕಮಲದ ಹೂವಿನಂತಿರುತ್ತದೆ. ಕೆಲವು ನಿಸಿಧಿಶಿಲ್ಪಗಳ ಮೇಲ್ತುದಿಯಲ್ಲಿ ಐದು ಹೆಡೆಯುಳ್ಳ ಸರ್ಪವನ್ನು ಕೆತ್ತಲಾಗಿರುತ್ತದೆ. ಇದು ಸುಪಾರ್ಶ್ವನಾಥನ ಲಾಂಛನವಾಗಿರುತ್ತದೆ. ಕೆಲವು

---

೧೧೫. ಡಾ. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ - ೯೮

೧೧೬. ವಿವರಗಳಿಗೆ ನೋಡಿ : ಡಾ. ಡಿ.ವಿ.ಪರಮಶಿವಮೂರ್ತಿ, ಕನ್ನಡ ಶಾಸನಶಿಲ್ಪ, ಪುಟ - ೧೧೮-೧೨೦

೧೧೭. ..... ಅದೇ ....., ಪುಟ - ೧೧೮

[illegible]

[illegible]

[illegible]

[illegible]

[illegible]

ಶಿಲ್ಪಗಳಲ್ಲಿ ಜಿನನ ಮುಂದೆ ಸ್ತ್ರೀಯೊಬ್ಬಳು ಕೈಮುಗಿದು ಕುಳಿತಿರುವುದು ಸಾಮಾನ್ಯವಾಗಿರುತ್ತದೆ. ಇವು ಶಿಲ್ಪದ ದೃಷ್ಟಿಯಿಂದ ಸೊಗಸಾದ ರಚನೆಗಳೂ ಆಗಿರುತ್ತವೆ.

ಹಂಪೆಯಲ್ಲಿ ರಾಜ್ಯ ಪುರಾತತ್ವ ಇಲಾಖೆಯವರು ಕೊಪ್ಪಳದ ಕೋಟೆಯಲ್ಲಿ ಹೊಸದಾಗಿ ದೊರಕಿದ ನಲವತ್ತು ನಿಸಿಧಿಶಾಸನ ಶಿಲ್ಪಗಳನ್ನು ಸಂಗ್ರಹಿಸಿಟ್ಟಿದ್ದಾರೆ. ಇವೆಲ್ಲ ಕಂಬದಾಕಾರದಲ್ಲಿದ್ದು ಜಿನ, ಮುನಿ, ಭಕ್ತರ ಶಿಲ್ಪಗಳನ್ನು ಹೊಂದಿವೆ. ಇವುಗಳ ಕಾಲ ಕ್ರಿ.ಶ. ೯ ರಿಂದ ೧೦ ನೇ ಶತಮಾನ.

**ಆ. ಫಲಕದಾಕಾರದ ನಿಸಿಧಿಶಿಲ್ಪಗಳು :** ಫಲಕದಾಕಾರದ ನಿಸಿಧಿಶಿಲ್ಪಗಳು ಬಹು ಸಂಖ್ಯೆಯಲ್ಲಿ ಅನೇಕ ಊರುಗಳಲ್ಲಿ ಕಂಡು ಬರುತ್ತವೆ. ಹೆಚ್ಚಾಗಿ ಫಲಕದಾಕಾರದಲ್ಲಿ ಶಿಲೆಯನ್ನು ಸಿದ್ಧಪಡಿಸಿಕೊಂಡು, ಅವುಗಳ ಮೇಲೆ ಈ ಶಿಲ್ಪಗಳನ್ನು ಕೆತ್ತಲಾಗಿರುತ್ತದೆ. ಈ ಶಿಲ್ಪಗಳೂ ಉಬ್ಬು ಶಿಲ್ಪಗಳಾಗಿರುತ್ತವೆ. ಫಲಕದಾಕಾರದ ಇಂಥ ಶಿಲ್ಪಗಳನ್ನು ಒಂದು ಹಂತದ ನಿಸಿಧಿಶಿಲ್ಪ, ಎರಡು ಹಂತದ ನಿಸಿಧಿಶಿಲ್ಪ, ಮೂರು ಹಂತದ ನಿಸಿಧಿಶಿಲ್ಪಗಳೆಂದು ಮೂರು ಬಗೆಯಲ್ಲಿ ವಿಂಗಡಿಸಬಹುದು.

**೧. ಒಂದು ಹಂತದ ನಿಸಿಧಿ ಶಿಲ್ಪ :** ಒಂದು ಹಂತದ ನಿಸಿಧಿ ಶಿಲ್ಪಗಳಲ್ಲಿ ಕೆಲವು ಫಲಕದ ಮೂರನೆ ಒಂದು ಭಾಗದಷ್ಟು, ಕೆಲವು ಅದಕ್ಕಿಂತ ಹೆಚ್ಚಿಗೆ, ಕೆಲವು ಎರಡನೇ ಒಂದು ಭಾಗದಷ್ಟು ಸ್ಥಳದಲ್ಲಿ ಅರ್ಧ ವರ್ತುಳಾಕಾರದ ಅವಕಾಶದಲ್ಲಿ ಉಬ್ಬುಶಿಲ್ಪವನ್ನು ಕೆತ್ತಲಾಗಿರುತ್ತದೆ. ಈ ಶಿಲ್ಪಗಳಲ್ಲಿ ಮುಕ್ಕೊಡೆಯ ಕೆಳಗೆ ಎತ್ತರವಾದ ಪೀಠದ ಮೇಲೆ ಕುಳಿತ ಜಿನ, ಅಕ್ಕಪಕ್ಕದಲ್ಲಿ ಇಬ್ಬರು ಮುನಿಗಳು ಜಿನನನ್ನು ಪೂಜಿಸುತ್ತಿರುವುದು. ಜಿನನ ಎರಡೂ ಬದಿಗಳಲ್ಲಿ ಶ್ರುತಪೀಠಗಳು, ಅವುಗಳ ಮೇಲೆ ಹೊತ್ತಿಗೆಗಳು, ಅಲ್ಲದೆ ಜಿನನ ಕುಳಿತ ಶಿಲ್ಪದ ಮೇಲ್ಭಾಗದ ಅವಕಾಶದಲ್ಲಿ ಎಡ ಮತ್ತು ಬಲ ಭಾಗಗಳಲ್ಲಿ ಸೂರ್ಯ ಚಂದ್ರರು, ಜಿನನ ಎರಡೂ ಬದಿಗಳಲ್ಲಿ ಚಾಮರಗಳು ಇಂಥ ಕೆಲವು ವಿವರಗಳು ಎಲ್ಲ ಶಿಲ್ಪಗಳಲ್ಲೂ ಸಾಮಾನ್ಯವಾಗಿ ಕೆತ್ತಲ್ಪಟ್ಟಿರುತ್ತವೆ. ಕ್ರಿ.ಶ. ೧೧ ನೇ ಶತಮಾನದ ಹುಂಚದ [೧೧೮] ಒಂದು ನಿಸಿಧಿಶಿಲ್ಪ ಹಾಗೂ ಕ್ರಿ.ಶ. ೧೨ ನೇ ಶತಮಾನದ ಇದೇ ಸ್ಥಳದ ನ್ನೊಂದು ಶಿಲ್ಪ ಇವುಗಳು ಮುಖ್ಯವಾಗುತ್ತವೆ. ಈ ಶಿಲ್ಪಗಳಲ್ಲಿ ಜಿನನು ಕುಳಿತಿರುವ ಎತ್ತರವಾದ ಪೀಠದ ಮುಂಭಾಗದಲ್ಲಿ ನಡುವೆ ಸಿಂಹ ಲಾಂಛನವನ್ನು ಕೆತ್ತಲಾಗಿದೆ. ಕೆಳದಿಯಲ್ಲಿ [೧೧೯] ಕ್ರಿ.ಶ. ೧೫ ನೇ ಶತಮಾನಕ್ಕೆ ಸೇರಿದ ಒಂದು ನಿಸಿಧಿಶಿಲ್ಪವಿದ್ದು ಇಲ್ಲಿ ಜಿನನ ಎಡ ಭಾಗದಲ್ಲಿ ಸ್ತ್ರೀಯೊಬ್ಬಳು ಕೈಮುಗಿದು ಕುಳಿತಿದ್ದು, ಬಲಭಾಗದಲ್ಲಿ ಭೋಧಿಸುತ್ತಿರುವ ಮುನಿಯ ಶಿಲ್ಪವಿದೆ. ಈ ಶಿಲ್ಪದಿಂದ ಸ್ತ್ರೀಯೊಬ್ಬಳು ಸನ್ಯಸನದಿಂದ ಮುಡಿಪಿದಳೆಂದು ಹೇಳಬಹುದು. ಸ್ತ್ರೀಯರ ನಿಸಿಧಿ ಶಿಲ್ಪಗಳು[೧೨೦] ಶ್ರವಣಬೆಳಗೊಳದಲ್ಲಿ ಹೆಚ್ಚಾಗಿ ದೊರೆಯುತ್ತವೆ.

**೨. ಎರಡು ಹಂತದ ನಿಸಿಧಿ ಶಿಲ್ಪಗಳು :** ಹುಂಚದ ಕ್ರಿ.ಶ. ೧೨ ನೇ ಶತಮಾನದ ಒಂದು

---

೧೧೮. ಹುಂಚ, ತಾ. ಹೊಸನಗರ, ಜಿ. ಶಿವಮೊಗ್ಗ
೧೧೯. ಕೆಳದಿ, ತಾ. ಸಾಗರ, ಜಿ. ಶಿವಮೊಗ್ಗ

[illegible]

ನಿಸಿಧಿಶಿಲ್ಪ, ಬಳ್ಳಿಗಾವಿಯ[೨೨೧] ಎರಡು ನಿಸಿಧಿಶಿಲ್ಪಗಳು ಈ ಬಗೆಯವು. ಒಂದರಲ್ಲಿ ಕೆಳ ಹಂತದಲ್ಲಿ ಮೋಕ್ಷ ಪಡೆದವನನ್ನು ಹಾಗೂ ಮೇಲಿನ ಹಂತದಲ್ಲಿ ಜಿನ ಹಾಗೂ ಅಕ್ಕಪಕ್ಕ ಮುನಿ ಮತ್ತು ಭಕ್ತನನ್ನು ಕೆತ್ತಲಾಗಿದೆ. ಇನ್ನೆರಡು ನಿಸಿಧಿಶಿಲ್ಪಗಳಲ್ಲಿ ಕೆಳಹಂತದಲ್ಲಿ ಅಪ್ಸರೆಯರ ನಡುವೆ ಒಬ್ಬ ವ್ಯಕ್ತಿ ಕೈಮುಗಿದು ಕುಳಿತಿದ್ದಾನೆ. ಅದೇ ವ್ಯಕ್ತಿಯು ಮೇಲಿನ ಹಂತದಲ್ಲಿ ಜೈನ ಮುನಿಯ ಬಳಿ ಕುಳಿತು ಆಶೀರ್ವಾದ ಪಡೆಯುತ್ತಿರುವನು. ಜಿನನ ತಲೆಯ ಮೇಲಿನ ಛತ್ರಿಯನ್ನು ಮಣಿಗಳಿಂದ ಅಲಂಕರಿಸಿದಂತೆ ಕೆತ್ತಲಾಗಿದೆ. ಈ ಶಿಲ್ಪಗಳು ನುಣುಪಾದ ಮೈವಳಿಕೆಯನ್ನು ಹೊಂದಿವೆ. ಅಲ್ಲಿನ ಮತ್ತೊಂದು ನಿಸಿಧಿಶಿಲ್ಪದಲ್ಲಿ ಮೋಕ್ಷ ಪಡೆದ ವ್ಯಕ್ತಿಯನ್ನು ಅಪ್ಸರೆಯರು ವಿಮಾನದಲ್ಲಿ ಕರೆದೊಯ್ಯುತ್ತಿದ್ದಾರೆ. ಮೇಲಿನ ಹಂತದಲ್ಲಿ ಜಿನ ಮುನಿ ಮತ್ತು ಮೋಕ್ಷ ಪಡೆದ ವ್ಯಕ್ತಿ ಒಂದೇ ಎತ್ತರದ ವೇದಿಕೆಯ ಮೇಲೆ ಕುಳಿತಿದ್ದಾರೆ. ಇದು ಮೋಕ್ಷ ಪಡೆದವನು ಜಿನ ಮತ್ತು ಮುನಿಗೆ ಸರಿಸಮಾನರು ಎಂಬ ಅಂಶವನ್ನು ತಿಳಿಸುತ್ತದೆ.

ತವನಂದಿಯ[೨೨೨] ಒಂದು ನಿಸಿಧಿಶಿಲ್ಪದ ಕೆಳಹಂತದಲ್ಲಿ ಸತಿ-ಪತಿ ಇಬ್ಬರೂ ಸಲ್ಲೇಖನ ವ್ರತದಿಂದ ಮಡಿದ ವಿಷಯವನ್ನು ತಿಳಿಸುವ ಶಿಲ್ಪವಿದೆ. ಆದರೆ ಮೇಲಿನ ಹಂತದಲ್ಲಿ ಜಿನ ಹಾಗೂ ಮುನಿಗಳ ಬಳಿ ಸ್ತ್ರೀಯು ಕುಳಿತ ಶಿಲ್ಪವಿದ್ದು ಅವಳ ಪತಿಯ ಶಿಲ್ಪವಿಲ್ಲ. ಈ ಶಿಲ್ಪದ ಮೇಲ್ಭಾಗದಲ್ಲಿ ಕೀರ್ತಿಮುಖವನ್ನು ಕೆತ್ತಲಾಗಿದೆ. ಇದೇ ಸ್ಥಳದ ಮತ್ತೊಂದು ನಿಸಿಧಿ ಕಲ್ಲಿನಲ್ಲಿ ಸ್ತ್ರೀಯೊಬ್ಬಳು ಮುಡುಪಿದ ವಿಷಯ ತಿಳಿದು ಬರುತ್ತದೆ. ಈ ನಿಸಿಧಿ ಶಿಲ್ಪದ ಕೆಳಹಂತದಲ್ಲಿ ಸ್ತ್ರೀಯು ಕೈಮುಗಿದು ಕುಳಿತಿದ್ದು, ಅವಳ ಬಳಿ ಮುನಿಯು ಗ್ರಂಥವೊಂದನ್ನುಪಠಿಸುವ ಭಂಗಿಯಲ್ಲಿದೆ. ಮೇಲಿನ ಹಂತದಲ್ಲಿ ಅಪ್ಸರೆಯೊಬ್ಬಳು ತನ್ನ ಕರುಳಲ್ಲಿ ಚಾಮರವನ್ನು ಸಿಕ್ಕಿಸಿಕೊಂಡು ಸುಂದರವಾದ ಕೇಶವಿನ್ಯಾಸದಿಂದ, ಒಳ್ಳೆಯ ಆಭರಣಗಳಿಂದ ಶೋಭಿಸುತ್ತಿದ್ದಾಳೆ.

**೩. ಮೂರು ಹಂತದ ನಿಸಿಧಿಶಿಲ್ಪಗಳು :** ಮೂರು ಹಂತಗಳ ಶಿಲ್ಪಗಳಿರುವ ನಿಸಿಧಿಶಿಲ್ಪಗಳು ನಮ್ಮಲ್ಲಿ ಅಪರೂಪ. ಈ ರೀತಿಯ ಒಂದು ನಿಸಿಧಿಶಿಲ್ಪ ಶಿವಮೊಗ್ಗದ ವಸ್ತುಸಂಗ್ರಹಾಲಯದಲ್ಲಿದೆ.[೨೨೩] ಮಹಿಳೆಯೋರ್ವಳು ಸಲ್ಲೇಖನವ್ರತ ಕೈಗೊಂಡು ಮುಡುಪಿದ ವಿವರವನ್ನು ಇದು ಹೊಂದಿದೆ. ಈ ಶಿಲ್ಪ ಕಲಾತ್ಮಕ ವಿನ್ಯಾಸಗಳಿಂದ ಕೂಡಿದೆ. ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಕುಬಟೂರಿನಲ್ಲಿ ಮೂರು ಹಂತದ ಒಂದು ನಿಸಿಧಿಶಿಲ್ಪ ದೊರಕಿದೆ.[೨೨೪] ಇಲ್ಲಿ ಪತಿಯೊಂದಿಗೆ ಇಬ್ಬರು ಪತ್ನಿಯರೂ ನಿಸಿಧಿ ಹೊಂದಿದ್ದಾರೆಂದು ತಿಳಿಯುತ್ತದೆ. ಹೀಗೆ ಒಂದು ಹಂತದಿಂದ ಮೂರು ಹಂತದ ನಿಸಿಧಿಶಿಲ್ಪಗಳು ಜೈನ ಸಮಾಜದಲ್ಲಿನ ಧಾರ್ಮಿಕಾಚರಣೆಯ ಅಂಶಗಳನ್ನು ಶಿಲ್ಪಿಯವಾಗಿ ದಾಖಲಿಸಲ್ಪಟ್ಟಿವೆ. ಮೋಕ್ಷ ಪಡೆದವನು ಜಿನನ ಸಮಾನನು ಎಂಬ ಅಂಶ ಈ ಶಾಸನ ಶಿಲ್ಪಗಳಿಂದ ಅರಿಯಬಹುದು.

---

೨೨೦. ಡಾ. ಡಿ.ವಿ. ಪರಮಶಿವನಮೂರ್ತಿ : ಕನ್ನಡ ಶಾಸನ ಶಿಲ್ಪ, ಪುಟ - ೨೨೧

೨೨೧. ಬಳ್ಳಿಗಾವಿ, ತಾ. ಶಿಕಾರಿಪುರ, ಜಿ. ಶಿವಮೊಗ್ಗ

೨೨೨. ತವನಂದಿ, ತಾ. ಸೊರಬ, ಜಿ. ಶಿವಮೊಗ್ಗ

೨೨೩. ಮ್ಯೂಸಿಯಂ, ಶಿವಮೊಗ್ಗ ( ಕ್ರಿ.ಶ. ೧೪ )

೨೨೪. ಡಾ. ಡಿ.ವಿ. ಪರಮಶಿವಮೂರ್ತಿ, ಕನ್ನಡ ಶಾಸನಶಿಲ್ಪ, ಪುಟ - ೨೨೫

**ಇ. ಪಾದಗಳಾಕಾರದ ನಿಸಿಧಿಶಿಲ್ಪಗಳು :** ಹಲವಾರು ಜೈನ ಸ್ಥಳಗಳಲ್ಲಿ ಪಾದಗಳ ಶಿಲ್ಪಗಳನ್ನು ಕಾಣಬಹುದು. ಇವು ನಿಸಿಧಿಯ ಮತ್ತೊಂದು ರೂಪ.[೧೨೫] ಈ ರೀತಿಯ ಪಾದಗಳು ಕೊರೆ ಚಿತ್ರಗಳಲ್ಲಿ, ಇಲ್ಲವೆ ಉಬ್ಬು ಶಿಲ್ಪಗಳಂತೆ ರಚಿಸಿರುವುದನ್ನು ಹೆಚ್ಚಾಗಿ ಕಾಣಬಹುದು. ಇವು ಹುಟ್ಟು ಬಂಡೆಗಳ ಮೇಲೆ ಮಾತ್ರ ಕಂಡು ಬರುತ್ತವೆ. ಕ್ವಚಿತ್ತಾಗಿ ಕೊರೆದ ಬಂಡೆಗಳ ಮೇಲೂ ಕಾಣಬರುತ್ತವೆ. ಕೆಲವೆಡೆ ಈ ಪಾದಗಳನ್ನು ಅರಳಿದ ತಾವರೆಯ ಹೂವಿನ ನಡುವೆ ಇರುವಂತೆ ಶಿಲ್ಪಿಸಲಾಗಿದೆ. ಹಲವೆಡೆ ಒಂದು ಜೊತೆ ಪಾದಗಳನ್ನು ಕೆತ್ತಲಾಗಿದ್ದರೆ, ಕೆಲವೆಡೆ ಐದು ಜೊತೆ ಪಾದಗಳನ್ನು ಕೆತ್ತಲಾಗಿದೆ. ಈ ರೀತಿಯ ಪಾದಶಿಲ್ಪಗಳು ಮುಡುಪಿದ ಜೈನರ ಪಾವಿತ್ರ್ಯತೆಯನ್ನು, ಪೂಜ್ಯತೆಯನ್ನು ತಿಳಿಸುತ್ತವೆ. ಇಂಥ ಪಾದಶಿಲ್ಪಗಳು ಇತರ ಧರ್ಮಗಳಲ್ಲೂ ಕಾಣಬಹುದು. ಬಾದಾಮಿ ಹತ್ತಿರದ ಬನಶಂಕರಿ ದೇವಾಲಯದಲ್ಲಿ ದೀಪಸ್ತಂಭದ ಮುಂದುಗಡೆ ಎರಡು ಜೊತೆ ಪಾದ ಶಿಲ್ಪಗಳು ಇವೆ. ವಿಶೇಷವೆಂದರೆ ಒಂದು ಜೊತೆ ಪಾದಶಿಲ್ಪಗಳು ಹೆಡೆ ಎತ್ತಿ ಸುರುಳಿ ಸುತ್ತಿಕೊಂಡು ಕುಳಿತ ಸರ್ಪದ ಶಿಲ್ಪದ ಮಧ್ಯದಲ್ಲಿ ಇವುಗಳನ್ನು ಕೆತ್ತಲಾಗಿದೆ. ಹೊಸಪೇಟೆ ಹತ್ತಿರದ ಕಮಲಾಪುರದ ಊರಮ್ಮನ ಗುಡಿಯ ಮುಂದೆಯೂ ಇಂಥ ಶಿಲ್ಪಗಳನ್ನು ಶಿಲ್ಪಿಸಲಾಗಿದೆ.

ಇದೇ ರೀತಿಯ ಪಾದ ಶಿಲ್ಪಗಳನ್ನು ಹಂಪಿಯಲ್ಲೂ ಕಾಣಬಹುದು. ಹಂಪಿಯ ಕೋದಂಡ ರಾಮ ದೇವಾಲಯದ ಮೂಲಕ ಸುಗ್ರೀವ ಗುಹೆ, ಸೀತೆ ಸೆರಗು ಸ್ಥಳಗಳ ಮಾರ್ಗವಾಗಿ ಪುರಂದರ ಮಂಟಪಕ್ಕೆ ಹೋಗುವ ಕಾಲುದಾರಿಯ ನಡುವೆ ಬಲ ಬದಿಗೆ ಒಂದು ಸ್ಥಳವಿದೆ. ಅದಕ್ಕೆ ಏಡಿಗುದ್ದ ಎಂದು ಕರೆಯುತ್ತಾರೆ. ಈ ಕೋಟೆಗೋಡೆಗೆ ಅಂಟಿಕೊಂಡಂತೆ ಏಕಶಿಲಾ ಹಾಸಿಗೆಯ ಮೇಲೆ ಕಲ್ಲಿನ ಪೊಟರೆಯೊಂದಿದೆ. ಇದರ ಮೂಲಕ ಸದಾ ನೀರು ಜಿನುಗುತ್ತಿರುತ್ತದೆ. ಈ ಸ್ಥಳದಲ್ಲಿ ಸುಮಾರು ಎಂಟು ಅಡಿ ಉದ್ದದ ಸರ್ಪದ ಕೆತ್ತನೆಯೊಂದಿದೆ. ಅದರ ಪಕ್ಕದಲ್ಲಿ ಮತ್ತೊಂದು ಸಣ್ಣ ಸರ್ಪದ ಉಬ್ಬು ಶಿಲ್ಪವಿದೆ. ಈ ಸರ್ಪವು ಪರಸ್ಪರ ಎದುರುಬದುರಾಗಿರುವ ಬಲಗಾಲಿನ ಎರಡು ಪಾದಗಳ ಶಿಲ್ಪಗಳನ್ನು ಸುತ್ತಿ ಸುತ್ತಿಕೊಂಡಂತೆ ಶಿಲ್ಪಿಸಿರುವುದನ್ನು ಕಾಣಬಹುದಾಗಿದೆ.

**ಈ. ಬಂಡೆ ನಿಸಿಧಿಶಿಲ್ಪಗಳು :** ಕೆಲವೆಡೆ ನಿಸಿಧಿಶಿಲ್ಪಗಳು ಬಂಡೆಗಳ ಮೇಲೂ ಕಂಡು ಬರುತ್ತವೆ. ಪ್ರಾಚೀನ ಜೈನ ಕೇಂದ್ರಗಳಲ್ಲಿ ಇವು ಸಾಮಾನ್ಯ. ನಿಂತ ಜಿನ, ಶ್ರುತಪೀಠ, ಮುನಿ, ವ್ರತಧಾರಿಗಳ ಶಿಲ್ಪಗಳು ಸಾಮಾನ್ಯವಾಗಿ ಕಂಡು ಬರುತ್ತವೆ. ಕೊಪ್ಪಳದ ಚಂದ್ರಮ ಬಂಡೆ, ಆನೆಗೊಂದಿಯ ಗವಿರಂಗನಾಥ ದೇಗುಲದ ಬಳಿ, ಗಂಗಾವತಿಯ ಹತ್ತಿರದ ಹಿರೇಜಂತಕಲ್ಲು ಬೆಟ್ಟದಲ್ಲಿ ಈ ರೀತಿಯ ಸುಂದರ ಶಿಲ್ಪಗಳು ಕಂಡು ಬರುತ್ತವೆ.

ಒಟ್ಟಾರೆ ನಿಸಿಧಿಶಿಲ್ಪಗಳು ಉತ್ತರ ಕರ್ನಾಟಕದಲ್ಲಿ ಸಾರ್ವತ್ರಿಕವೆಂಬಂತೆ ಕಂಡು ಬರುತ್ತವೆ. ಕೊಪ್ಪಳ ಪಟ್ಟಣವೊಂದರಲ್ಲೇ ಸುಮಾರು ಅರವತ್ತಕ್ಕೂ ಹೆಚ್ಚು ನಿಸಿಧಿಶಿಲ್ಪಗಳು[೧೨೬] ದೊರೆಯುತ್ತವೆ.

---

೧೨೫. ಡಾ. ಡಿ.ವಿ. ಪರಮಶಿವಮೂರ್ತಿ, ಕನ್ನಡ ಶಾಸನಶಿಲ್ಪ, ಪುಟ - ೧೨೬

೧೨೬. ಡಾ. ಸೂರ್ಯನಾಥ ಕಾಮತ್, ಪಿ.ವಿ. ಕೃಷ್ಣಮೂರ್ತಿ (ಸಂ) : ಇತಿಹಾಸ ದರ್ಶನ, ಸಂಪುಟ - ೧೦, ಪುಟ - ೮೭

## ೧.೨ ಹರಕೆ ಬಲಿದಾನ ಶಿಲ್ಪಗಳು

ತನ್ನ ಕೋರಿಕೆಯನ್ನ ಈಡೇರಿಸಲು ಮನುಷ್ಯನು ದೇವರಿಗೆ ಹರಕೆಯನ್ನು ಒಪ್ಪಿಸುವದು ಈಗಲೂ ಪ್ರಚಲಿತದಲ್ಲಿರುವುದನ್ನು ಕಾಣುತ್ತೇವೆ. ಹರಕೆ ಸಲ್ಲಿಕೆಯು ಹಣ, ಶ್ರಮ ಅಥವಾ ದಂಡನೆಯ ರೂಪದಲ್ಲಿರುತ್ತದೆ. ಪ್ರಾಚೀನ ಕಾಲದಿಂದಲೂ ನಮ್ಮ ಜನಪದರು ಇವೆಲ್ಲವುಗಳ ಜೊತೆಯಲ್ಲಿ ಪ್ರಾಣವನ್ನೂ ಅರ್ಪಿಸುತ್ತಿದ್ದರು. ದೇವರಿಂದ ಬಂದ ಈ ಜೀವ ದೇವರ ಸನ್ನಿಧಿಗೇ ಹೋಗಲಿ ಎಂದು ಜನಪದರು ನಂಬಿದ್ದರು. ಈ ನಂಬಿಕೆಯ ಹಿನ್ನೆಲೆಯಲ್ಲಿ ತಮ್ಮ ಪ್ರಾಣವನ್ನು ಬಲಿ ಕೊಡುವ ಪದ್ಧತಿಗಳನ್ನು ಹಲವಾರು ರೀತಿಯಲ್ಲಿ ಆಚರಿಸುತ್ತಿದ್ದರು. ಇಂತಹ ಹಲವು ಸಂಗತಿ ಮತ್ತು ವಿಧಾನಗಳು ಶಿಲ್ಪಗಳಲ್ಲಿ ಕೆತ್ತಲಾಗಿದ್ದನ್ನು ಕಾಣಬಹುದು. ಸೂರ್ಯ ಗ್ರಹಣದ ಸಂದರ್ಭದಲ್ಲಿ ಬಲಿಯಾಗುವುದು, ಸಿಡಿತಲೆಬಲಿ, ಶೂಲಬಲಿ, ಉರಿ ಉಯ್ಯಾಲೆಬಲಿ ಹೀಗೆ ಹಲವು ರೀತಿಯ ಹರಕೆಬಲಿಯ ವಿಧಾನಗಳನ್ನು ಗಮನಿಸಬಹುದು.

### ಅ. ಸೂರ್ಯ ಗ್ರಹಣ ಬಲಿದಾನದ ಶಿಲ್ಪಗಳು

ಮುಖ್ಯವಾಗಿ ಹಿಂದೂಗಳು ಮೋಕ್ಷ ಪ್ರಾಪ್ತಿಗಾಗಿ ಹಬ್ಬ ಹರಿದಿನಗಳಲ್ಲಿ ವಿಶೇಷವಾಗಿ ಸೂರ್ಯ ಗ್ರಹಣದ ಅಮವಾಸ್ಯೆಯ ದಿನಗಳಲ್ಲಿ ಬೆಂಕಿಗೆ ಬಿದ್ದು ಮರಣ ಹೊಂದುತ್ತಿದ್ದರು.[೧೨೭] ಈ ರೀತಿಯ ಮರಣಕ್ಕೆ ಸಂಬಂಧಿಸಿದಂತೆ ಜನಪದರು ಶಿಲ್ಪಗಳನ್ನು ಕಡೆದು ನಿಲ್ಲಿಸಿದ್ದಾರೆ. ಕೆಲವು ಶಾಸನಗಳಲ್ಲಿ ಮತ್ತು ಶಾಸನಸಹಿತ ಶಿಲ್ಪಗಳಲ್ಲಿ ಇಂಥ ಬಲಿದಾನದ ವಿಷಯವನ್ನು ತಿಳಿಯಬಹುದು.

ನಾಗಾರ್ಜುನ ಗ್ರಾಮದ ದೇವರ ಬಂಟ ಬಾಚಿಗ, ರಾಜೆಯಜೀ ಭಟ್ಟ, ಚಂಡ, ಬೀರಯ್ಯ, ಬೊಪ್ಪ, ತೆಲುಂಗದ ಮಲ್ಲ, ತೊಣ್ಡಗೆಯ ಬಮ್ಮ ಮೊದಲಾದವರು ಸೂರ್ಯಗ್ರಹಣದಂದು ಬೆಂಕಿಗೆ ಬಿದ್ದು ಪ್ರಾಣಾರ್ಪಣೆ ಮಾಡಿರುವುದು ತಿಳಿಯುತ್ತದೆ.[೧೨೮] ಈ ಸಂಗತಿಗಳನ್ನು ದಾಖಲಿಸಿದ ಹರಕೆಬಲಿದಾನ ಶಿಲ್ಪಗಳ ಕೆಲವು ವಿವರಗಳನ್ನು ಇಲ್ಲಿ ತಿಳಿಯಬಹುದು.

ಕ್ರಿ.ಶ. ೧೧೪೧ ರ ತಿಳವಳ್ಳಿಯ[೧೨೯] ಶಾಸನಸಹಿತವಾದ ಶಿಲ್ಪ ಬೊಪ್ಪಗೆ ಸಂಬಂಧಿಸಿದುದಾಗಿದ್ದು ಮೂರು ಹಂತದಲ್ಲಿದೆ. ಕೆಳಹಂತದಲ್ಲಿ ಮಂಟಪದ ಕಂಬಗಳ ಮಧ್ಯೆ ಬೊಪ್ಪ ಕೈಮುಗಿದುಕೊಂಡು ಬೆಂಕಿಗೆ ಬೀಳಲು ಸಿದ್ಧನಾಗಿ ನಿಂತಿದ್ದಾನೆ. ಅವನ ಮುಂದೆ ಬೆಂಕಿಯು ಉರಿಯುತ್ತಿದೆ. ಅವನ ಎಡಬದಿಗೆ ಕಮಂಡಲ, ಬಲಬದಿಗೆ ಒಂದು ಕಂಬ, ಅದರ ಮೇಲೆ ದುಂಡನೆಯ ವಸ್ತು ಕೆತ್ತಲಾಗಿದೆ. ಎರಡನೇ ಹಂತದಲ್ಲಿ ಬೊಪ್ಪನನ್ನು ಸ್ವರ್ಗಕ್ಕೆ ಒಯ್ಯುವ ದೃಶ್ಯವನ್ನು ಶಿಲ್ಪಿಸಲಾಗಿದೆ. ಮೂರನೇ ಹಂತದಲ್ಲಿ ಒಂದು ಹಾವು ಸೂರ್ಯನನ್ನು ನುಂಗುತ್ತಿರುವ ಶಿಲ್ಪವಿದೆ. ಇದು ಗ್ರಹಣದ ಬಗೆಗೆ ಜನಪದರಲ್ಲಿದ್ದ ಕಲ್ಪನೆಯನ್ನು

---

೧೨೭. ವಿವರಗಳಿಗೆ ನೋಡಿ : ಡಾ. ಚೆನ್ನಕ್ಕ ಎಲಿಗಾರ : ಶಾಸನಗಳಲ್ಲಿ ಸ್ತ್ರೀ ಸಮಾಜ, ಪುಟ - ೨೧೫

೧೨೮. ಡಾ. ಚೆನ್ನಕ್ಕ ಎಲಿಗಾರ : ಶಾಸನಗಳಲ್ಲಿ ಸ್ತ್ರೀ ಸಮಾಜ, ಪುಟ - ೨೧೪

೧೨೯. ತಿಳವಳ್ಳಿ : ತಾ. ಹಾನಗಲ್, ಜಿ. ಹಾವೇರಿ

[illegible]

[illegible]

[illegible]

[illegible]

[illegible]

[illegible]

[illegible]

ಸೂಚಿಸುತ್ತದೆ. ಹಾವು ಸೂರ್ಯನನ್ನು ನುಂಗುತ್ತಿರುವುದು ಗ್ರಹಣವಾಗುತ್ತಿದೆ ಎಂಬುದರ ಸೂಚನೆಯಾಗಿರುತ್ತದೆ.

ಬಾಳೂರಿನ[೧೩೦] ಕ್ರಿ.ಶ. ೧೧೩೦ ರ ಒಂದು ಶಾಸನ ಸಹಿತವಾದ ಶಿಲ್ಪದಲ್ಲಿ ಚಂಡನು ಬೆಂಕಿಗೆ ಹಾರಿ ಆತ್ಮಾರ್ಪಣೆ ಮಾಡಿಕೊಂಡ ಶಿಲ್ಪವಿದೆ. ಈ ಶಾಸನ ಶಿಲ್ಪ ಮೂರು ಹಂತಗಳಲ್ಲಿದೆ. ಉಬ್ಬುಶಿಲ್ಪವಾಗಿದೆ. ಇದೂ ಕೂಡ ಮೇಲಿನ ಶಿಲ್ಪಶೈಲಿ ಹಾಗೂ ವಿನ್ಯಾಸವನ್ನೇ ಹೋಲುತ್ತದೆ.

ಶಿರಾಳಕೊಪ್ಪದ ಕ್ರಿ.ಶ. ೧೫ ನೇ ಶತಮಾನದ ಒಂದು ಶಾಸನ ಶಿಲ್ಪದಲ್ಲಿ ವೀರನೊಬ್ಬನು ಕೈಮುಗಿದು ನಿಂತಿದ್ದು, ಅವನ ಎಡಗಡೆ ದೊಡ್ಡದಾದ ಕೈಗತ್ತಿ ಇದೆ. ಬಲಗಡೆ ಒಂದು ಕಂಬದ ಮೇಲೆ ದುಂಡನೆಯ ವಸ್ತುವಿದೆ.[೧೩೧]

ನದಿಯಲ್ಲಿ ಮುಳುಗಿ ಸಾಯುವುದೂ ಕೂಡ ಪುಣ್ಯವೆಂದು ನಮ್ಮ ಜನಪದರು ನಂಬಿದ್ದರು. ಕ್ರಿ.ಶ. ೧೦೬೮ ರಲ್ಲಿ ಚಾಲುಕ್ಯ ದೊರೆ ಸೋಮೇಶ್ವರನು ಜ್ವರ ಪೀಡಿತನಾಗಿ ತುಂಗಭದ್ರಾನದಿಯಲ್ಲಿ ಮುಳುಗಿ ಪ್ರಾಣಾರ್ಪಣೆ ಮಾಡಿದ್ದು ಇತಿಹಾಸ ಪ್ರಸಿದ್ಧವೆನಿಸಿದೆ.[೧೩೨] ಈ ಬಗೆಯ ಧಾರ್ಮಿಕ ದೇಹತ್ಯಾಗವು[೧೩೩] ಜೈನರಲ್ಲೇ ಹೆಚ್ಚಾಗಿದ್ದಿತೆಂದು ವಿದ್ವಾಂಸರು ಹೇಳುತ್ತಾರೆ.

## ಆ. ಉರಿ ಉಯ್ಯಾಲೆ ಶಿಲ್ಪಗಳು

ಉರಿ ಉಯ್ಯಾಲೆ ಎಂದರೆ ಉರಿಯುತ್ತಿರುವ ಬೆಂಕಿಯ ಮೇಲೆ ತೂಗಾಡುವುದು. ದೇವರಿಗೆ ಒಪ್ಪಿಸುವ ಹರಕೆಗಳಲ್ಲಿ ಇದೂ ಒಂದು. ಈಗಲೂ ಈ ರೀತಿಯ ಹರಕೆ ಸೇವೆಯನ್ನು ಒರಿಸ್ಸಾ ಪ್ರದೇಶದ ಬುಡಕಟ್ಟು ಜನಾಂಗದಲ್ಲಿ ಕಾಣಬಹುದು.[೧೩೪] ಕರ್ನಾಟಕದಲ್ಲಿ ಕೆಂಡದ ಮೇಲೆ ನಡೆಯುವ ಹರಕೆ ಸೇವೆ ಈಗಲೂ ರೂಢಿಯಲ್ಲಿದೆ. ಉರಿ ಉಯ್ಯಾಲೆಯ ಸೇವೆ ಈಗ ಇಲ್ಲ. ಆದರೆ ಪ್ರಾಚೀನ ಕರ್ನಾಟಕದಲ್ಲಿ ಈ ಪದ್ಧತಿಯಿತ್ತೆಂಬುದಕ್ಕೆ ಕಾವ್ಯಗಳಲ್ಲಿ ಮತ್ತು ಶಾಸನಶಿಲ್ಪಗಳಲ್ಲಿ ಸಾಕ್ಷಿ ದೊರೆಯುತ್ತದೆ. ಈ ರೀತಿಯ ಎರಡು ಶಿಲ್ಪಗಳಲ್ಲಿ ಒಂದು ಗದಗ ಜಿಲ್ಲೆಯ ರೋಣ ಪ್ರದೇಶದಲ್ಲಿ, ಮತ್ತೊಂದು ಧಾರವಾಡ ಜಿಲ್ಲೆಯ ಮುಗದ ಗ್ರಾಮದಲ್ಲಿ ದೊರಕಿದೆ.[೧೩೫] ಇದೇ ಜಿಲ್ಲೆಯ ಕೌಜಗೇರಿಯ ಶಾಸನಶಿಲ್ಪವು ನಾಲ್ಕು ಹಂತಗಳನ್ನು ಹೊಂದಿದ್ದು, ಮೊದಲ ಹಂತದಲ್ಲಿ ದೊಡ್ಡದಾದ ಕಲ್ಲಿನ ಚೌಕಟ್ಟಿನೊಳಗೆ ಉಯ್ಯಾಲೆಯಲ್ಲಿ ವ್ಯಕ್ತಿಯೊಬ್ಬ ನಿಂತಿದ್ದಾನೆ. ಅವನ ಕೆಳಭಾಗದಲ್ಲಿ ದೊಡ್ಡದಾದ ಅಗ್ನಿಕುಂಡವಿದ್ದು ಅದರಲ್ಲಿ ಉರಿಯು ಧಗ ಧಗನೆ

---

೧೩೦. ಬಾಳೂರು : ತಾ. ಹಾನಗಲ್, ಜಿ. ಹಾವೇರಿ

೧೩೧. ಡಾ. ಡಿ.ವಿ. ಪರಮಶಿವಮೂರ್ತಿ: ಕನ್ನಡ ಶಾಸನಶಿಲ್ಪ, ಪುಟ -೧೯

೧೩೨. ಡಾ. ಚೆನ್ನಕ್ಕ ಎಲಿಗಾರ : ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪುಟ - ೨೧೪

೧೩೩. ಡಾ. ಎಂ. ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ - ೩೦೨

೧೩೪. ಡಾ. ಡಿ.ವಿ. ಪರಮಶಿವಮೂರ್ತಿ: ಕನ್ನಡ ಶಾಸನಶಿಲ್ಪ, ಪುಟ - ೧೯

೧೩೫. ಡಾ. ಡಿ.ವಿ. ಪರಮಶಿವಮೂರ್ತಿ: ಕನ್ನಡ ಶಾಸನಶಿಲ್ಪ, ಪುಟ - ೧೯

[illegible]

ಉರಿಯುತ್ತಿದೆ. ಅವನ ಎರಡೂ ಬದಿಗೆ ವಾದ್ಯಕಾರರು ಮೃದಂಗ, ಝಲ್ಲರಿ, ಜಾಗಟೆಯನ್ನು ಬಾರಿಸುತ್ತಿರುವಂತೆ ಕೆತ್ತಲಾಗಿದೆ. ಎರಡನೇ ಹಂತದಲ್ಲಿ ಇಬ್ಬರು ಅಪ್ಸರೆಯರು ಒಬ್ಬನನ್ನು ಸ್ವರ್ಗಕ್ಕೆ ಒಯ್ಯುತ್ತಿರುವರು. ಮೂರನೇ ಹಂತದಲ್ಲಿ ವ್ಯಕ್ತಿ ಕುಳಿತಿರುವಂತೆ, ನಾಲ್ಕನೇ ಹಂತದಲ್ಲಿ ಸೂರ್ಯದೇವನು ನಿಂತಿರುವಂತೆ ಶಿಲ್ಪಿಸಲಾಗಿದೆ. ಈ ಶಿಲ್ಪದ ಮೇಲ್ಭಾಗದಲ್ಲಿ ಹಾವು ಸೂರ್ಯನನ್ನು ನುಂಗುತ್ತಿರುವಂತೆ, ಗ್ರಹಣದ ದಿನವನ್ನು ಸೂಚಿಸುವ ಶಿಲ್ಪವಿದೆ.

ಲಿಪಿಯ ಶೈಲಿಯಿಂದ ಈ ಶಿಲ್ಪವು ೯ ಅಥವಾ ೧೦ ನೇ ಶತಮಾನಕ್ಕೆ ಸೇರಿರಬಹುದೆಂದು ಊಹಿಸಬಹುದು. ಇದೇ ಜಿಲ್ಲೆಯ, ಇದೇ ಅವಧಿಯ ನರೇಂದ್ರ ಗ್ರಾಮದ ಶಾಸನ ಶಿಲ್ಪದಲ್ಲೂ ಉರಿ ಉಯ್ಯಾಲೆಯ ಚಿತ್ರಣವಿದ್ದು, ಇದರಲ್ಲಿ ಬೆಂಕಿಯ ಸ್ವರೂಪವನ್ನು ಕೌಜಗೇರಿಯ ಶಿಲ್ಪಕ್ಕಿಂತ ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ. ವ್ಯಕ್ತಿಯು ಉಯ್ಯಾಲೆಯಲ್ಲಿ ನಿಂತಿರುವುದು, ಅವನ ಕೇಶ ವಿನ್ಯಾಸ, ಉಡುಪು ಬಹಳ ಆಕರ್ಷಕವಾಗಿವೆ. ಅದೇ ರೀತಿ ಮುಗದ ಗ್ರಾಮದ ಉರಿ ಉಯ್ಯಾಲೆ ಶಿಲ್ಪವು ಸುಂದರವಾದ ಉಬ್ಬು ಶಿಲ್ಪವಾಗಿದೆ.

ಈಗ ದೊರೆತಿರುವ ಆಧಾರಗಳಿಂದ ಉರಿ ಉಯ್ಯಾಲೆ ಹರಕೆಯನ್ನು ನಿಖರವಾಗಿ ಹೀಗೇ ಎಂದು ಅರ್ಥೈಸುವುದು ಕಷ್ಟ. ಡಾ. ಎಂ.ಎಂ. ಕಲಬುರ್ಗಿಯವರು ಉರಿ ಉಯ್ಯಾಲೆಯ ಪದ್ಧತಿಯು ಬೆಂಕಿಯಲ್ಲಿ ಬಿದ್ದು ಸಾಯುವ ಕ್ರಿಯೆ ಎಂದು ಪ್ರತಿಪಾದಿಸುತ್ತಾರೆ. ಈ ಅಭಿಪ್ರಾಯ ಸರಿಯಲ್ಲವೆಂದು ವಿದ್ವಾಂಸರು ವಾದಿಸುತ್ತಾರೆ.[೧೩೬] ಏಕೆಂದರೆ ಉರಿ ಉಯ್ಯಾಲೆಯಾಡುವವರು ಬೇಕೆಂದೇ ಉರಿಗೆ ಬಿದ್ದು ಪ್ರಾಣ ಅರ್ಪಿಸುತ್ತಿದ್ದರೋ ಅಥವಾ ಆಕಸ್ಮಿಕವಾಗಿ ಜಾರಿ ಬಿದ್ದು ಪ್ರಾಣ ಕಳೆದುಕೊಳ್ಳುತ್ತಿದ್ದರೋ ಎಂಬುದು ಶಿಲ್ಪಗಳಿಂದ ತಿಳಿದು ಬರುವದಿಲ್ಲ. ಒರಿಸ್ಸಾ ಪ್ರಾಂತದಲ್ಲಿ ಈಗಲೂ ಈ ಹರಕೆ ಸೇವೆ ಜೀವಂತವಾಗಿದೆ. ಇಲ್ಲಿ ಉರಿ ಉಯ್ಯಾಲೆ ಆಡುವರೇ ಹೊರತು ಯಾರೂ ಉರಿಗೆ ಬಿದ್ದು ಪ್ರಾಣ ಅರ್ಪಿಸುವುದಿಲ್ಲ. ಈ ಆಧಾರಗಳಿಂದ ಪ್ರಾಚೀನ ಕರ್ನಾಟಕದಲ್ಲೂ ಉರಿ ಉಯ್ಯಾಲೆಯಾಡುವವರು ಪ್ರಾಣ ಅರ್ಪಿಸುತ್ತಿರಲಿಲ್ಲವೆಂದು ಹೇಳಬಹುದು. ಆದರೆ ಆಕಸ್ಮಿಕವಾಗಿ ಕಾಲು ಜಾರಿ ಬೆಂಕಿಗೆ ಬಿದ್ದು ಸತ್ತವರಿಗೆ ಈ ಸ್ಮಾರಕ[೧೩೭] ಶಿಲ್ಪಗಳನ್ನು ಕಡೆದು ನಿಲ್ಲಿಸಿದ್ದಾರೆಂದು ಊಹಿಸಬಹುದಾಗಿದೆ.

### ಇ. ಶೂಲ ಬಲಿ ಶಿಲ್ಪಗಳು

ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ಆಲದಗೇರಿಯಲ್ಲಿ[೧೩೮] ಒಂದು ಬಹಳ ಅಪರೂಪದ ಆತ್ಮಬಲಿ ಶಿಲ್ಪವಿದೆ. ನಾಲ್ಕು ಹಂತದ ಈ ಶಿಲ್ಪವು ಶೂಲದ ಮೇಲೆ ಬಿದ್ದು ಬಲಿಯಾಗುವ ಅಪರೂಪದ ಸನ್ನಿವೇಷವನ್ನು ದಾಖಲಿಸಿದೆ. ಮೊದಲ ಹಂತದಲ್ಲಿ ಬಲಿಯಾಗುವವನು ತನ್ನ ಕೈಯಲ್ಲಿ ಖಡ್ಗವನ್ನು

---

೧೩೬. ಡಾ. ಎಂ. ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ - ೩೦೨

೧೩೭. ಡಾ. ಡಿ.ವಿ. ಪರಮಶಿವಮೂರ್ತಿ: ಕನ್ನಡ ಶಾಸನಶಿಲ್ಪ, ಪುಟ -೧೩೧

೧೩೮. ..... ಅದೇ .....

ಹಿಡಿದುಕೊಂಡು ಮೆರವಣಿಗೆಯಲ್ಲಿ ಹೋಗುತ್ತಿದ್ದು, ಅವನ ಹಿಂದೆ ವ್ಯಕ್ತಿಯೊಬ್ಬ ದೊಡ್ಡದಾದ ಛತ್ರಿಯನ್ನು ಹಿಡಿದಿದ್ದಾನೆ. ಈ ಛತ್ರಿಯ ವಿನ್ಯಾಸ ಸುಂದರವಾಗಿದೆ. ಮುಂಭಾಗದಲ್ಲಿ ನಗಾರಿ, ಡೋಲು, ಮೃದಂಗ, ಜಾಗಟೆ, ಝಲ್ಲರಿಗಳನ್ನು ಬಾರಿಸುತ್ತ ಅನೇಕರು ನೃತ್ಯ ಮಾಡುತ್ತ ಸಾಗಿರುವ ಸನ್ನವೇಷವನ್ನು ಶಿಲ್ಪಿಸಲಾಗಿದೆ. ಎರಡನೇ ಹಂತದಲ್ಲಿ ಬಲಿಯಾಗುವವನು ಕೆಳಗೆ ಕುಕ್ಕರಗಾಲಿನಲ್ಲಿ ಕುಳಿತಿದ್ದು ಆತನ ಎದುರು ನಿಂತಿರುವವನು ಬಲಗೈಯನ್ನು ಮೇಲಕ್ಕೆತ್ತಿ ಹರಸುತ್ತಿದ್ದಾನೆ. ಅವನ ಎದುರು ಎರಡು ದೊಡ್ಡ ಖಡ್ಗಗಳನ್ನು ಮೇಲ್ಮುಖವಾಗಿ ನೆಲದಲ್ಲಿ ನೆಡಲಾಗಿದೆ. ಅದರ ಪಕ್ಕ ದೊಡ್ಡದಾದ ಕಂಬವೊಂದನ್ನು ನೆಡಲಾಗಿದೆ. ಈ ಕಂಬವು ಮೂರನೇ ಹಂತದವರೆಗೂ ವ್ಯಾಪಿಸುವಂತೆ ಕೆತ್ತಲಾಗಿದೆ. ಕಂಬದ ತುದಿಯಲ್ಲಿನ ಅಟ್ಟದಲ್ಲಿ ಬಲಿಯಾಗಲಿರುವವನು ಕುಳಿತು, ತನ್ನ ಬಲಗೈಯಿಂದ ಕೆಳಗೆ ನಿಂತವರನ್ನು ಹರಸುತ್ತಿದ್ದಾನೆ. ಅಕ್ಕಪಕ್ಕದಲ್ಲಿ ಒಂದು ಕಡೆ ಸೂರ್ಯಗ್ರಹಣದ ಸಂಕೇತವಾದ ಕಂಬ ಮತ್ತು ವೃತ್ತದ ಆಕಾರವಿದೆ. ಮತ್ತೊಂದು ಕಡೆ ಸಿಂಹ ದೇಹ ಮತ್ತು ಆನೆಯ ಮುಖವನ್ನು ಹೊಂದಿರುವ ಕಾಲ್ಪನಿಕ ಪ್ರಾಣಿಯೊಂದು ತನ್ನ ಸೊಂಡಿಲಲ್ಲಿ ಸತ್ತ ವ್ಯಕ್ತಿಯೊಬ್ಬನನ್ನು ಹಿಡಿದುಕೊಂಡಿದೆ. ನಾಲ್ಕನೇ ಪಟ್ಟಿಕೆಯಲ್ಲಿ ಸ್ವರ್ಗದ ಹಂತವನ್ನು ಕಂಡರಿಸಲಾಗಿದೆ. ಈ ಮೇಲಿನ ವಿವರವಾದ ಚಿತ್ರಣದಿಂದ ವ್ಯಕ್ತಿಯೊಬ್ಬನು, ವೈಭವಯುತ ಮೆರವಣಿಗೆಯಲ್ಲಿ ಹೊರಟು, ಎತ್ತರವಾದ ಕಂಬವನ್ನೇರಿ ಕೆಳಗೆ ನೆಟ್ಟಿದ್ದ ಕತ್ತಿಗಳ ಮೇಲೆ ಬಿದ್ದು ತನ್ನನ್ನು ಬಲಿಗೈದುಕೊಂಡ ವಿಷಯವನ್ನು ತಿಳಿಯಬಹುದು. ಈ ಘಟನೆಯ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ಶಿಲ್ಪಿಸಲಾಗಿದೆ. ಬಳ್ಳಿಗಾವಿಯ ಶೂಲಬಲಿ ಶಿಲ್ಪ ಬಹಳ ಮನೋಜ್ಞವಾಗಿದ್ದು, ಎತ್ತರದ ಕಂಬದಿಂದ ಕೆಳಗೆ ನೆಟ್ಟ ಶೂಲಗಳ ಮೇಲೆ ವೀರನು ಬಿದ್ದು ಪ್ರಾಣ ಅರ್ಪಿಸಿದ ವಿಷಯ ತಿಳಿಸುತ್ತದೆ.

ಹೊಸಪೇಟೆ ತಾಲೂಕಿನ ಕಮಲಾಪುರದ ವಸ್ತು ಸಂಗ್ರಹಾಲಯದಲ್ಲಿನ ಒಂದು ವೀರ ಮಾಸ್ತಿ ಕಲ್ಲಿನಲ್ಲಿ ಶೂಲದ ಮೇಲೆ ಬಿದ್ದು ಪ್ರಾಣ ತ್ಯಾಗ ಮಾಡಿಕೊಂಡ ಮತ್ತೊಂದು ಚಿತ್ರಣ ದೊರೆಯುತ್ತದೆ. ಈ ಶಾಸನಸಹಿತ ಶಿಲ್ಪ ಮೂರು ಹಂತಗಳಲ್ಲಿದೆ. ಕೆಳಹಂತದಲ್ಲಿ ವೀರನು ಎತ್ತರವಾದ ಶೂಲದ ಮೇಲೆ ಬಿದ್ದಿದ್ದಾನೆ. ಶೂಲವು ಅವನ ಗುದ ಪ್ರದೇಶದಲ್ಲಿ ನಾಟಿಕೊಂಡಿದೆ. ಎರಡನೇ ಹಂತದಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿದ್ದಾರೆ. ವೀರನು ಶೂಲದ ಮೇಲೆ ಬೀಳುವ ಸಂದರ್ಭದಲ್ಲಿ ಅವನ ಸುತ್ತಲೂ ಕಹಳೆ, ಡೋಲು, ಜಾಗಟೆ, ಮೃದಂಗಗಳನ್ನು ಬಾರಿಸುತ್ತಿರುವಂತೆ ಕೆತ್ತಲಾಗಿದೆ. ಶೂಲದ ಮೇಲೆ ಬಿದ್ದಾಗ ನೋವು ಮರೆಯಾಗಲಿ ಎಂದೋ ಇಲ್ಲವೆ ಬೀಳುವವನು ಕೂಗಿಕೊಂಡರೂ ಕೇಳಿಸದಿರಲಿ ಎಂದೋ ಇಷ್ಟೊಂದು ವಾದ್ಯಗಳನ್ನು ನುಡಿಸುತ್ತಿರಬೇಕು.

### ಈ. ಶಿರಬಲಿ ಶಿಲ್ಪಗಳು

ಮುಂಡದಿಂದ ರುಂಡವನ್ನು ಕತ್ತರಿಸಿ ಬೇರ್ಪಡಿಸುವುದರ ಮೂಲಕ ಪ್ರಾಣಾರ್ಪಣೆ ಮಾಡುವುದಕ್ಕೆ ಶಿರಬಲಿ ಎನ್ನಲಾಗುವುದು. ಕರ್ನಾಟಕದಲ್ಲಿ ಶಿರಬಲಿ ಶಿಲ್ಪಗಳು ಶಾಸನ ರಹಿತವಾಗಿಯೂ ಮತ್ತು ಶಾಸನ ಸಹಿತವಾಗಿಯೂ ಇರುವುದನ್ನು ಕಾಣಬಹುದು. ಈ ಶಿಲ್ಪಗಳು ಆಕಾರದಲ್ಲಿ ಚಿಕ್ಕವು, ಕೆಲವು ದೊಡ್ಡವೂ ಆಗಿವೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಶಾಸನ ವಿಭಾಗದಲ್ಲಿ ಮಹಿಳೆಯೊಬ್ಬಳು ತನ್ನ ತಲೆಯನ್ನು ಕತ್ತರಿಸಿಕೊಂಡು ಆತ್ಮ ಬಲಿಗೈದ ಸುಂದರವಾದ ಉಬ್ಬುಶಿಲ್ಪವಿದೆ. ಕೈಮುಗಿದು ಕುಳಿತ ಭಂಗಿಯ ಮಹಿಳೆಯ ದೇಹ ಮತ್ತು ಕತ್ತರಿಸಿದ ಅವಳ ಶಿರವನ್ನು ಬೇರೆ ಬೇರೆಯಾಗಿ ಅಂದರೆ ಮುಂಡದಿಂದ ಶಿರವನ್ನು ಪ್ರತ್ಯೇಕವಾಗಿ ಮುಂಡದ ಮೇಲ್ಬದಿಯ ಬಲಭಾಗದಲ್ಲಿ ಕೆತ್ತಲಾಗಿದೆ. ಕಿವಿಯಲ್ಲಿ ಆಭರಣಗಳಿವೆ. ತಲೆಯ ಮೇಲೆ ಕೇಶದ ದೊಡ್ಡ ತುರುಬದಂತಹ ಜುಟ್ಟು ಕಟ್ಟಿದಂತೆ ಕೆತ್ತಲಾಗಿದೆ. ಈ ಶಿಲೆಯ ಮೇಲ್ಭಾಗದಲ್ಲಿ ಬಲಬದಿಯಲ್ಲಿ ಸೂರ್ಯ ಹಾಗೂ ಎಡಬದಿಯಲ್ಲಿ ಚಂದ್ರರನ್ನು ಕೆತ್ತಲಾಗಿದೆ. ಇಷ್ಟನ್ನು ಹೊರತುಪಡಿಸಿ, ಈ ಶಿಲ್ಪದಲ್ಲಿ ಬೇರಾವ ವಿವರಗಳನ್ನು ಕೆತ್ತಲಾಗಿಲ್ಲ. ಇದು ಶಿರಚ್ಛೇಧನ ಮಾಡಿಕೊಂಡ ಸ್ತ್ರೀಯ ಕುರಿತ ತೀರ ಸರಳವಾದ ಬಲಿದಾನ ಶಿಲ್ಪವಾಗಿದೆ. ಈ ಶಿಲ್ಪದಲ್ಲಿ ಹಂತಗಳನ್ನು ನಿರ್ಮಿಸಿಲ್ಲ.

ಗಣಗೂರಿನಲ್ಲಿ[೧೩೯] ಮೂರು ಹಂತದ ದೊಡ್ಡದಾದ ವೀರಗಲ್ಲು ಇದ್ದು ಮೊದಲ ಹಂತದಲ್ಲಿ ಕೈಮುಗಿದು ಕುಳಿತ ವೀರ, ಪಕ್ಕದಲ್ಲಿ ಒಬ್ಬನು ಕುಳಿತವನ ಶಿರವನ್ನು ಕತ್ತಿಯಿಂದ ಕತ್ತರಿಸುತ್ತಿರುವ ಶಿಲ್ಪವಿದೆ. ಎರಡನೇ ಹಂತದಲ್ಲಿ ಅಪ್ಸರೆಯರು, ಮೂರನೇ ಹಂತದಲ್ಲಿ ವೀರನು ಸ್ವರ್ಗದಲ್ಲಿ ಕುಳಿತಿರುವಂತೆ ಕಂಡರಿಸಲಾಗಿದೆ. ನಾಗಮಂಗಲ ತಾಲೂಕು ಬಸರಾಳು[೧೪೦] ಗ್ರಾಮದಲ್ಲಿ ಹೊಯ್ಸಳರ ಕಾಲದ ಮೂರು ಹಂತದ ಶಿರ ಬಲಿ ಶಿಲ್ಪವಿದೆ. ಕುದುರೆಯ ಮೇಲೆ ಕುಳಿತ ವೇಳಿವಾಳಿಯ ಮೆರವಣಿಗೆ, ವಿವಿಧ ವಾದ್ಯಗಳೊಂದಿಗೆ ವಾದ್ಯಕಾರರು ಇತ್ಯಾದಿಗಳನ್ನು ಮೊದಲ ಹಂತದಲ್ಲಿ ಕೆತ್ತಲಾಗಿದ್ದರೆ, ಕೈಮುಗಿದು ಗಂಭೀರವಾಗಿ ಕುಳಿತ ವೇಳಿವಾಳಿಯನ್ನು ಎರಡನೇ ಹಂತದಲ್ಲಿ ಕೆತ್ತಲಾಗಿದೆ. ಕುಳಿತವನ ಬಲಗಡೆಗೆ ಅಪ್ಸರೆ, ಎಡಗಡೆಗೆ ಕುತ್ತಿಗೆಯನ್ನು ಕತ್ತರಿಸಲು ಮಚ್ಚು ಹಿಡಿದ ವ್ಯಕ್ತಿಯನ್ನು ಶಿಲ್ಪಿಸಲಾಗಿದೆ. ಮೂರನೇ ಹಂತದಲ್ಲಿ ಆತ್ಮಾರ್ಪಣೆ ಮಾಡಿಕೊಂಡ ವೇಳೆವಾಳಿ ಶಿವಲಿಂಗದ ಮುಂದೆ ಕುಳಿತಿರುವನು.

ಇದೇರೀತಿಯಲ್ಲಿ ಮಹಾಮಂಡಳೇಶ್ವರ ಸೇವಿದೇವನ ರಾಣಿ ಲಚ್ಚಲದೇವಿಯು ಮಡಿದಾಗ ಮುಂಚೆ ಕೊಟ್ಟ ಭಾಷೆಯಂತೆ ಬೊಪ್ಪಣನು ಮರಣಿಸಿದ್ದು[೧೪೧] ಮೂರು ಹಂತಗಳಲ್ಲಿ ಕೆತ್ತಲಾಗಿದೆ. ಹಾಗೇ ಮೈಸೂರು ಜಿಲ್ಲೆ ತೊಂದವಾಡಿಯಲ್ಲಿ ಗಂಗರ ಕಾಲದ ಒಂದು ಆತ್ಮಬಲಿ ಶಿಲ್ಪವಿದೆ. ಇದು ಒಂದೇ ಹಂತದ್ದಾಗಿದೆ.[೧೪೨] ಕತ್ತರಿಸಲ್ಪಟ್ಟ ತಲೆಯನ್ನು ಶಾಸನವಿರುವ ಕೆಳ ಭಾಗದ ಒಂದು ಚೌಕಟ್ಟಿನಲ್ಲಿ ಕೆತ್ತಲಾಗಿದೆ.

## ಉ. ಸಿಡಿತಲೆ ಬಲಿ ಶಿಲ್ಪಗಳು

ಸಿಡಿತಲೆ ಎಂಬುದು ರುಂಡ ಹಾರಿಸಿಕೊಳ್ಳುವ ಮತ್ತೊಂದು ವಿಧಾನ. ಗಿಡದ ಟೊಂಗೆ ಅಥವಾ

---

೧೩೯. ಡಾ. ಡಿ.ವಿ. ಪರಮಶಿವಮೂರ್ತಿ: ಕನ್ನಡ ಶಾಸನಶಿಲ್ಪ, ಪುಟ -೧೩೩

೧೪೦. ..... ಅದೇ ..... ಪುಟ - ೧೩೨

೧೪೧. ಡಾ. ಎಂ. ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ - ೩೦೮

೧೪೨. ಡಾ. ಡಿ.ವಿ. ಪರಮಶಿವಮೂರ್ತಿ: ಕನ್ನಡ ಶಾಸನಶಿಲ್ಪ, ಪುಟ - ೧೩೩

[illegible]

[illegible]

[illegible]

[illegible]

ಬಿದಿರಿನ ಬೊಂಬನ್ನು ಬಾಗಿಸಿ ಅದರ ತುದಿಗೆ ವೇಳಿವಾಳಿಯ ಕೂದಲನ್ನು ಕಟ್ಟಿ ಒಬ್ಬನು ಖಡ್ಗದಿಂದ ಕತ್ತರಿಸಿದರೆ, ರುಂಡವು ಮುಂಡದಿಂದ ಬೇರ್ಪಟ್ಟು ಮೇಲಕ್ಕೆ ಚಿಮ್ಮಲ್ಪಡುತ್ತದೆ.[೧೪೩] ಹೀಗೆ ಚಿಮ್ಮಿದಾಗ ನೆರೆದಿರುವ ಜನ ಜಯಘೋಷ ಮಾಡುವರು. ಚಿಮ್ಮಿದ ರುಂಡದಿಂದ ಸಿಡಿಯುವ ರಕ್ತದ ಹನಿ ಮೇಲೆ ಬಿದ್ದಾಗ ಪಾವನರಾದೆವೆಂದು ಭಾವಿಸುವರು. ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ಅಬ್ಬಲೂರಿನಲ್ಲಿ[೧೪೪] ಕೆರೆಯ ಬಳಿಯಿರುವ ಒಂದು ಸಿಡಿತಲೆ ಶಿಲ್ಪವು ಬಹಳ ಗಮನಾರ್ಹವಾದುದಾಗಿದ್ದು, ಎರಡು ಹಂತಗಳನ್ನು ಒಳಗೊಂಡಿದೆ. ಕೆಳಹಂತದಲ್ಲಿ ಇಬ್ಬರು ಸ್ತ್ರೀಯರು ಹಾಗೂ ಒಬ್ಬ ಪುರುಷನು ವೀರಮಂಡಿಯಲ್ಲಿ ಕುಳಿತಿದ್ದು, ಈ ಮೂವರ ತಲೆ ದೇಹದಿಂದ ಬೇರ್ಪಟ್ಟಿದೆ. ಇವರ ಮೇಲ್ಭಾಗದಲ್ಲಿ ಬಗ್ಗಿಸಿದ ಗಿಡದ ಕೊಂಬೆಯಲ್ಲಿ ಪುರುಷನ ತಲೆ ನೇತಾಡುತ್ತಿದೆ. ಸ್ತ್ರೀಯರು ಮತ್ತು ಪುರುಷ ಬೆತ್ತಲೆಯಾಗಿ ಕುಳಿತಿದ್ದಾರೆ. ಇವರ ಮೇಲ್ಭಾಗದಲ್ಲಿ ಇಬ್ಬರು ಚಾಮರ ಬೀಸುತ್ತಿದ್ದು, ಇಬ್ಬರು ಆರತಿಯನ್ನು ಹಿಡಿದಿದ್ದಾರೆ. ಇವರ ಮೇಲ್ಭಾಗದಲ್ಲಿ ನಾಲ್ವರು ಶಂಖ, ಜಾಗಟೆ, ಕಹಳೆ ಮತ್ತು ಮೃದಂಗವನ್ನು ನುಡಿಸುತ್ತಿರುವರು. ಒಂದೇ ಬಾರಿ ಮೂರು ಜನ ಸಿಡಿತಲೆಗೊಟ್ಟ ವಿಷಯದ ಅಪರೂಪದ ಶಿಲ್ಪವಿದಾಗಿದೆ.

ಮೊಟ್ಟಮೊದಲಿಗೆ ದೊರಕಿದ ಸಿಡಿತಲೆ ಶಿಲ್ಪ ಸಾಕಮ್ಮನ ಜೋಡಿಹೊಸಹಳ್ಳಿಯದು.[೧೪೫] ಇದರ ಕಾಲ ಕ್ರಿ.ಶ. ೯ ನೇ ಶತಮಾನ. ದೊಡ್ಡದಾದ ಒರಟುಗಲ್ಲಿನ ಮೇಲೆ ಮಧ್ಯಭಾಗದಲ್ಲಿ ಚೌಕಾಕಾರದ ಜಾಗದಲ್ಲಿ ಶಿಲ್ಪವನ್ನು ಬಿಡಿಸಲಾಗಿದೆ. ವೀರನು ಪದ್ಮಾಸನದಲ್ಲಿ ಕುಳಿತಿದ್ದಾನೆ. ಅವನ ಬಲಪಕ್ಕದಲ್ಲಿ ಕತ್ತಿಯನ್ನು ಹಿಡಿದುಕೊಂಡಿರುವ ವ್ಯಕ್ತಿಯೊಬ್ಬ ವೀರನ ಶಿರವನ್ನು ಕತ್ತರಿಸಿದ್ದಾನೆ. ವೀರನ ಜುಟ್ಟಿಗೆ ಬಗ್ಗಿಸಿದ ಗಳವನ್ನು ಕಟ್ಟಲಾಗಿದ್ದು, ತಲೆ ಮುಂಡಭಾಗದಿಂದ ಬೇರೆಯಾಗಿದೆ. ಅವನ ಎಡಬಲಗಳಲ್ಲಿ ಇಬ್ಬರು ಅಪ್ಸರೆಯರು ಅವನನ್ನು ಸ್ವರ್ಗಕ್ಕೊಯ್ಯಲು ನಿಂತಿರುವಂತೆ ಶಿಲ್ಪಿಸಲಾಗಿದೆ. ಹಾಗೇ ನಗರಗೆರೆಯ[೧೪೬] ಒಂದು ವೀರಗಲ್ಲು ಮೂರು ಹಂತದ್ದಾಗಿದ್ದು, ಸಿಡಿತಲೆಯ ವಿಷಯದ ಶಿಲ್ಪವಾಗಿದೆ.

ಶಿವಮೊಗ್ಗ ವಸ್ತು ಸಂಗ್ರಹಾಲಯದಲ್ಲಿಯೂ ಮೂರು ಹಂತದ ಸಿಡಿತಲೆ ಶಿಲ್ಪವೊಂದಿದೆ. ಬಂದಳಿಕೆಯಲ್ಲೂ ಇಂಥದೊಂದು ಶಿಲ್ಪವಿದೆ.[೧೪೭] ಬಸರಾಳ[೧೪೮]ದಲ್ಲಿಯ ಸಿಡಿತಲೆ ಶಿಲ್ಪವೂ ಗಮನಾರ್ಹವಾಗಿದೆ. ಮೂರು ಹಂತಗಳಲ್ಲಿರುವ ಈ ಶಿಲ್ಪದ ಕೆಳಹಂತದಲ್ಲಿ ವೀರನನ್ನು ಕುದುರೆಯ ಮೇಲೆ ಮೆರವಣಿಗೆಗೆ ಕರೆದೊಯ್ಯುತ್ತಿದ್ದು, ವಾದ್ಯ, ಜಾಗಟೆಗಳು ಮೊಳಗುತ್ತಿವೆ. ಎರಡನೇ ಹಂತದಲ್ಲಿ ವೀರನು ತನ್ನ ಜುಟ್ಟನ್ನು ಬಗ್ಗಿಸಿದ ಗಳಕ್ಕೆ ಕಟ್ಟಿಕೊಂಡು ಕುಳಿತಿರುವನು. ಅವನ ಎಡಪಕ್ಕದಲ್ಲಿ ವ್ಯಕ್ತಿಯೊಬ್ಬ ಮಚ್ಚಿನಿಂದ ಅವನ ತಲೆಯನ್ನು ಕತ್ತರಿಸುತ್ತಿದ್ದಾನೆ. ಇಲ್ಲಿ ವೀರನು ಕುಳಿತಿರುವ ಭಂಗಿ ಹಾಗೂ ಬಗ್ಗಿಸಿ

---

೧೪೩. ಡಾ. ಎಂ.ಎಂ. ಕಲಬುರ್ಗಿ : ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಪುಟ - ೫೫

೧೪೪. ..... ಅದೇ ..... ಪುಟ - ೬೪

೧೪೫. ಸಾಕಮ್ಮನ ಜೋಡಿ ಹೊಸಳ್ಳಿ, ತಾ. ಶ್ರೀನಿವಾಸಪುರ, ಜಿ. ಕೋಲಾರ. ( ಕ್ರಿ.ಶ. ೯)

೧೪೬. ಗೌರಿಬಿದನೂರು, ಜಿ. ಕೋಲಾರ. (ಕ್ರಿ.ಶ. ೧೦)

೧೪೭. ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನಶಿಲ್ಪ, ಪುಟ -೧೩೫

೧೪೮. ಡಾ. ಎಂ.ಎಂ. ಕಲಬುರ್ಗಿ : ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಪುಟ - ೬೩

[illegible]

ಕಟ್ಟಿರುವ ಗಳವು ಈಶ್ವರನ ತಲೆಯಿಂದ ಸುರಿಯುತ್ತಿರುವ ಗಂಗೆಯಂತೆ ತೋರುತ್ತದೆ ಎಂದು ಪ್ರಸ್ತುತ ಶಿಲ್ಪವನ್ನು ಡಾ. ಡಿ.ವಿ. ಪರಮಶಿವಮೂರ್ತಿಯವರು[೧೪೯] ವರ್ಣಿಸಿದ್ದಾರೆ. ಈ ರೀತಿಯ ಹೋಲಿಕೆ ಎಷ್ಟು ಸಮಂಜಸ ? ಈ ಶಿಲ್ಪದ ಮೂರನೇ ಹಂತದಲ್ಲಿ ವೀರನು ಸ್ವರ್ಗದಲ್ಲಿರುವಂತೆ ಚಿತ್ರಿಸಲಾಗಿದೆ. ಇದೇ ರೀತಿಯ ಶಿಲ್ಪವು ಕೆಳದಿಯ ವಸ್ತು ಸಂಗ್ರಹಾಲಯದಲ್ಲಿದ್ದು ಅದೂ ಮೂರು ಹಂತಗಳದ್ದಾಗಿದೆ.[೧೫೦]

ಒಟ್ಟಿನಲ್ಲಿ ಲಭ್ಯ ಸಿಡಿತಲೆ ಶಿಲ್ಪಗಳಲ್ಲಿ ಪ್ರಾಣ ಅರ್ಪಿಸುವವರು ತಮ್ಮ ತಲೆಯನ್ನು ಬಗ್ಗಿಸಿದ ಬಿದಿರಿನ ಗಳ ಇಲ್ಲವೆ ಮರದ ಟೊಂಗೆಗೆ ಕಟ್ಟಿಸಿಕೊಂಡು ತಲೆಯನ್ನು ಅರ್ಪಿಸುತ್ತಿದ್ದರೆಂದು, ಅಲ್ಲದೆ ಈ ಸಂದರ್ಭದಲ್ಲಿ ಅನೇಕ ವಾದ್ಯಗಳನ್ನು ನುಡಿಸುತ್ತಿದ್ದರೆಂದು ತಿಳಿದು ಬರುತ್ತದೆ.

### ಊ. ಇರಿತಬಲಿ ಶಿಲ್ಪಗಳು

ತನಗೆ ಪ್ರೀಯರಾದವರ ಶ್ರೇಯಸ್ಸನ್ನು ಕೋರಲು ದೇವರಿಗೆ ಹರಕೆ ಹೊರುತ್ತಿದ್ದರು ನಮ್ಮ ಜನಪದರು. ಹರಕೆ ಈಡೇರಿದಾಗ ತಮ್ಮನ್ನು ತಾವೇ ಇರಿದುಕೊಂಡು ಅಥವಾ ಬೇರೆ ರೀತಿಯಲ್ಲಿ ಪ್ರಾಣವನ್ನು ಅರ್ಪಿಸುತ್ತಿದ್ದರು. ಈ ರೀತಿಯಲ್ಲಿ ತಮ್ಮನ್ನು ತಾವೇ ಇರಿದುಕೊಂಡು ಪ್ರಾಣಬಿಟ್ಟವರ ಕುರಿತು ಅನೇಕ ಶಿಲ್ಪಗಳು ನಿರ್ಮಿಸಲ್ಪಟ್ಟಿವೆ.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ಹತ್ತಿರದ ಕಮಲಾಪುರದಲ್ಲಿರುವ ವಸ್ತುಸಂಗ್ರಹಾಲಯದಲ್ಲಿ ತಮ್ಮ ಶಿರಗಳನ್ನು ಕಡಿದುಕೊಂಡು ಕೈಯಲ್ಲಿ ಹಿಡಿದು ನಿಂತಿರುವ ಎರಡು ಶಿಲ್ಪಗಳು ಕಂಡುಬರುತ್ತವೆ. ಇವರುಗಳು ಯಾವುದೋ ಕಾರಣಕ್ಕಾಗಿ ತಮ್ಮ ಶಿರವನ್ನು ಕತ್ತರಿಸಿಕೊಂಡಿದ್ದಾರೆ. ಹೆಚ್ಚಿನ ಸಂಶೋಧನೆಯಿಂದ ಇಂಥ ಶಿಲ್ಪಗಳು ಹೇರಳವಾಗಿ ದೊರೆಯುವ ಸಾಧ್ಯತೆಯಿದೆ.

### ೨. ಲೌಕಿಕ ಆತ್ಮ ಬಲಿದಾನ ಶಿಲ್ಪಗಳು

ಪತಿಯ ಮರಣದ ನಂತರ ಸತಿ ಹೋಗುವುದು, ಪ್ರೀಯ ವ್ಯಕ್ತಿಯ ಮರಣದ ನಂತರ ತಾನೂ ಮರಣವನ್ನಪ್ಪುವುದು, ಪ್ರೀಯ ವ್ಯಕ್ತಿಗೆ ಒಳಿತಾಗಲಿ ಎಂದು ಪ್ರಾಣವನ್ನರ್ಪಿಸುವುದು ಮೊದಲಾದ ಆಚರಣೆಗಳು ಲೌಕಿಕ ಬಲಿದಾನಗಳೆನಿಸಿಕೊಳ್ಳುತ್ತವೆ. ಇಲ್ಲಿ ಧರ್ಮವು ಪ್ರೇರಣೆ ನೀಡಿದರೂ ಸಾಮಾಜಿಕ ಕಟ್ಟು ಕಟ್ಟಳೆಗಳೇ ಮುಖ್ಯವಾಗುತ್ತವೆ. ಈ ರೀತಿಯ ಮರಣಗಳನ್ನು ದಾಖಲಿಸುವ ಹಲವಾರು ಶಾಸನ ಶಿಲ್ಪಗಳು, ಶಿಲ್ಪಗಳು ದೊರಕಿವೆ. ಇವನ್ನು ಮಾಸ್ತಿ ( ಮಹಾಸತಿ ) ಶಿಲ್ಪಗಳು, ವೇಳೆವಾಳಿ ಶಿಲ್ಪಗಳೆಂದು ವಿಂಗಡಿಸಬಹುದು. ಲೌಕಿಕ ಆತ್ಮ ಬಲಿದಾನ ಶಿಲ್ಪಗಳನ್ನು ೨.೧ ಮಾಸ್ತಿ ಶಿಲ್ಪಗಳು, ೨.೨ ವೇಳೆವಾಳಿ ಶಿಲ್ಪಗಳು ಎಂದು ಎರಡು ರೀತಿಯಲ್ಲಿ ವಿಂಗಡಿಸಿ, ಮತ್ತೆ ಮಾಸ್ತಿ ಶಿಲ್ಪಗಳಲ್ಲಿ ಅ. ಸಹಗಮನ ಶಿಲ್ಪಗಳು,

---

೧೪೯. ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನಶಿಲ್ಪ, ಪುಟ - ೧೩೬

೧೫೦. ಎಂ.ಜಿ. ನಾಗರಾಜ, ಡಾ. ಪಿ.ವಿ. ಕೃಷ್ಣಮೂರ್ತಿ : ಇತಿಹಾಸ ದರ್ಶನ, ಸಂಪುಟ - ೧೫, ಪುಟ -೧೪೬

[illegible]

ಬ. ಅನುಗಮನ ಶಿಲ್ಪಗಳು ಎಂದು ವಿಂಗಡಿಸಲಾಗಿದೆ. ಅನುಗಮನ ಶಿಲ್ಪಗಳಲ್ಲಿ ಅ. ಪೂರ್ಣ ಸತಿ ಶಿಲ್ಪಗಳು, ಆ. ಪೂರ್ಣ ಸತಿ ಶಿಲ್ಪವು ಇತರರ ಶಿಲ್ಪಗಳೊಂದಿಗೆ ಇರುವ ಶಿಲ್ಪಗಳು, ಇ. ಇಬ್ಬರು ಸತಿಯರ ಪೂರ್ಣ ಶಿಲ್ಪವು ಇತರರ ಶಿಲ್ಪಗಳೊಂದಿಗೆ ಇರುವ ಶಿಲ್ಪಗಳು, ಈ. ವೀರ ಮಾಸ್ತಿ ಶಿಲ್ಪಗಳು, ಉ. ಹಂತಗಳಿರುವ ವೀರ ಮಾಸ್ತಿ ಶಿಲ್ಪಗಳು, ಊ. ಒಕ್ಕೈ ಮಾಸ್ತಿ ಶಿಲ್ಪಗಳು, ಎ. ಇಕ್ಕೈ ಮಾಸ್ತಿ ಶಿಲ್ಪಗಳು, ಏ. ಬಹುಕೈ ಮಾಸ್ತಿ ಶಿಲ್ಪಗಳು ಎಂದು ಉಪ ವಿಂಗಡಣೆಗಳನ್ನು ಮಾಡಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

## ೨.೧ ಮಾಸ್ತಿ ಶಿಲ್ಪಗಳು

ಮಡಿದ ಗಂಡನೊಂದಿಗೆ ಚಿತೆಯನ್ನು ಪ್ರವೇಶಮಾಡುವುದರ ಮೂಲಕ ಸಾಯುವ ವಿಧಿಯನ್ನು ಸಹಗಮನ ಎಂಬುದಾಗಿ ಕರೆಯುತ್ತಾರೆ. ಸತಿ[೧೫೧] ಹೋಗುವುದು ಎಂಬುದಾಗಿಯೂ ಕೆಲವೊಮ್ಮೆ ಕರೆಯುತ್ತಾರೆ. ಈ ರೀತಿ ಅಗ್ನಿ ಪ್ರವೇಶ ಮಾಡಿ ಮಡಿದ ಮಹಿಳೆಯರ ಸ್ಮಾರಕಶಿಲ್ಪಗಳೇ[೧೫೨] ಮಹಾಸತಿ ಶಿಲ್ಪಗಳು. ಇಂಥ ನೂರಾರು ಬಗೆಯ ಶಿಲ್ಪಗಳು ಕರ್ನಾಟಕದ ಅನೇಕ ಊರುಗಳಲ್ಲಿ ನೋಡಲು ಸಿಗುತ್ತವೆ. ಪ್ರಾಚೀನ ಕಾಲದಲ್ಲಿ ಸತಿ ಪದ್ಧತಿಯು ತುಂಬಾ ಪ್ರಚಾರ ಪಡೆದಿದ್ದಿತು. ಆದರೆ ಕೆಲವೊಮ್ಮೆ ಪ್ರತಿಷ್ಠೆಗೆ ಬಲಿಯಾಗಿ, ಒತ್ತಾಯಕ್ಕೆ ಒಳಗಾಗಿ ಕೆಲವರು ಈ ಕಾರ್ಯವನ್ನು ಕೈಗೊಳ್ಳುತ್ತಿರಬಹುದು. ಈ ಸತಿ ಪದ್ಧತಿಯ ಗೌರವ ಸೂಚಿ ಪದ ಮಹಾಸತಿ. ಇದರ ತದ್ಭವ ರೂಪವೇ ಮಾಸ್ತಿ[೧೫೩] ಎಂದು ರೂಪಾಂತರಗೊಂಡಿದೆ.

ಅಧ್ಯಯನದ ದೃಷ್ಟಿಯಿಂದ ಶಿಲ್ಪಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಹಾಸತಿ ಶಿಲ್ಪಗಳನ್ನು ಅ.ಸಹಗಮನ ಶಿಲ್ಪಗಳು ಮತ್ತು ಬ.ಅನುಗಮನ ಶಿಲ್ಪಗಳು ಎಂದು ಎರಡು ಭಾಗಗಳಾಗಿ ವಿಂಗಡಿಸಬಹುದು.

## ಅ. ಸಹಗಮನ ಶಿಲ್ಪಗಳು

ಕಾರಣಾಂತರಗಳಿಂದ ಪತಿಯು ಮಡಿದಾಗ ಅವನ ಶವದ ಜೊತೆಯಲ್ಲಿಯೇ ಚಿತೆಗೆ ಹಾರಿಕೊಂಡು ಇಲ್ಲವೆ, ಸಮಾಧಿಯಲ್ಲಿ ಹುಗಿಸಿಕೊಂಡು ಅಸುನೀಗುತ್ತಿದ್ದ ಆಚರಣೆ ನಮ್ಮ ಜನಪದರಲ್ಲಿ ರೂಢಿಯಲ್ಲಿತ್ತು. ಇದನ್ನು ಸಹಗಮನ ಎಂದು ಕರೆಯಲಾಗುವುದು. ಇಂಥ ಘಟನೆಗಳು ಶಿಲ್ಪಗಳಾಗಿ ದಾಖಲೆಗೊಂಡಿವೆ. ಕ್ರಿ.ಶ. ಐದು ಅಥವಾ ಆರನೇ ಶತಮಾನದ ಕವಡಿ ಗ್ರಾಮದ ಶಾಸನ ಬಹುಶಃ ಕದಂಬ ರವಿವರ್ಮನ ರಾಣಿಯ ಸಹಗಮನವನ್ನು ಸೂಚಿಸುತ್ತಿದ್ದು, ಇದು ನಮ್ಮ ನಾಡಿನಲ್ಲಿ ಈ ಪದ್ಧತಿಯನ್ನು ಕುರಿತ ಪ್ರಥಮ

---

೧೫೧. ಸತಿ : ಈ ಪದ್ಧತಿಗೆ ಬಳಸುವ ಪದ ಬಹುಶಃ ಶಿವನ ಪತ್ನಿ ದಾಕ್ಷಾಯಿಣಿ ಅಥವಾ ಸತಿ ದೇವಿಯು ಪತಿಯ ಪರವಾಗಿ ನಿಂತು, ದಕ್ಷ ಬ್ರಹ್ಮನ ಯಜ್ಞದಲ್ಲಿ ಪ್ರಾಣಾರ್ಪಣೆ ಮಾಡಿದ ಘಟನೆಯೇ ಗಂಡನಿಗಾಗಿ ಹೆಂಡತಿ ಚಿತಾ ಪ್ರವೇಶ ಮಾಡುವ ಈ ಸತಿ ಪದ್ಧತಿಗೆ ಮೂಲವಾಗಿರಬೇಕು. ಈ ಪದ್ಧತಿಯ ಗೌರವ ಸೂಚಿ ಪದ ಮಹಾಸತಿ. ಇದರ ತದ್ಭವ ರೂಪ ಮಾಸ್ತಿ ಎಂದು ಡಾ. ಎಂ.ಎಂ. ಕಲಬುರ್ಗಿಯವರು ಹೇಳುತ್ತಾರೆ

೧೫೨. ಆರ್. ಶೇಷಶಾಸ್ತ್ರಿ : ಶಾಸನ ಪರಿಚಯ, ಪುಟ - ೩೦

೧೫೩. ಡಾ. ಎಂ.ಎಂ. ಕಲಬುರ್ಗಿ : ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಪುಟ - ೨೭

[illegible]

[illegible]

[illegible]

[illegible]

[illegible]

[illegible]

[illegible]

[illegible]

ದಾಖಲೆಯಾಗಿದೆ.[೧೫೪] ಇದು ಗಮನಾರ್ಹ ವಿಷಯವಾಗಿದೆ.

ಡಾ. ಡಿ.ವಿ. ಪರಮಶಿವಮೂರ್ತಿಯವರು ಸಹಗಮನ ಶಿಲ್ಪವೊಂದರ ಚಿತ್ರಣವನ್ನು ಹೀಗೆ ನೀಡಿದ್ದಾರೆ.[೧೫೫] 'ಸಸ್ತಾಪುರದ ಮಾಸ್ತಿ ಶಿಲ್ಪದಲ್ಲಿ ಅಪರೂಪದ ಸಹಗಮನ ಚಿತ್ರಣವಿದೆ. ಮಾಸ್ತಿಶಿಲೆಯ ತಳ ಭಾಗದಲ್ಲಿ ನಾಲ್ಕು ಯಾಳಿಯ ಮುಖಗಳನ್ನು ಚಿತ್ರಿಸಲಾಗಿದೆ. ಅದರ ಮೇಲೆ ವೃತ್ತಾಕಾರದ ಸಮಾಧಿ ಗುಂಡಿಯಲ್ಲಿ ಮಡಿದ ವೀರ ಮತ್ತು ಅವನ ಹೆಂಡತಿ ಮಲಗಿದ್ದಾರೆ. ಇಲ್ಲಿ ಸತಿಯು ಮಲಗಿದ್ದಲ್ಲಿಯೇ ತನ್ನ ಬಲಗೈಯನ್ನು ಮೇಲೆತ್ತಿ ಜನರನ್ನು ಹರಸುತ್ತಿರುವಳು. ಸಮಾಧಿಯ ಮೇಲ್ಭಾಗದ ಕಂಬದಿಂದ ಹೊರಟ ತೋಳನ್ನು ಬಿಡಿಸಲಾಗಿದೆ. ಕಂಬದ ಹಿಂಬಾಗದಲ್ಲಿ ಕುದುರೆಯ ಮೇಲಿರುವ ವೀರನನ್ನು, ಅವನನ್ನು ಇರಿಯುತ್ತಿರುವ ಇಬ್ಬರು ಶತ್ರುಗಳನ್ನು ಬಿಡಿಸಲಾಗಿದೆ. ನಂತರದ ಹಂತದಲ್ಲಿ ಶಿವಲಿಂಗ ಮತ್ತು ಭಕ್ತಿಯಿಂದ ಕುಳಿತ ಸತಿ-ಪತಿಯರನ್ನು ಚಿತ್ರಿಸಲಾಗಿದೆ. ಈ ಶಿಲ್ಪದ ಮತ್ತೊಂದು ವೈಶಿಷ್ಟ್ಯವೇನೆಂದರೆ ವೀರನ ಕುದುರೆಯ ಶಿಲ್ಪದ ಕೆಳಭಾಗದಲ್ಲಿ ಚೌಕಟ್ಟನ್ನು ಬಿಡಿಸುವುದರ ಮೂಲಕ ಕೋಟೆಯನ್ನು ಶಿಲ್ಪಿಸಲಾಗಿದೆ. ಅದರ ಮುಂದೆ ವ್ಯಕ್ತಿಯೊಬ್ಬ ನಿಂತಿರುವಂತಿದೆ. ಕೋಟೆ ಕಾಳಗದಲ್ಲಿ ಮಡಿದ ಪತಿಯ ಜೊತೆಯಲ್ಲಿಯೇ ಅವನ ಹೆಂಡತಿಯೂ ಸಮಾಧಿ ಮರಣ ಹೊಂದಿದ ಘಟನೆಯನ್ನು ಈ ಶಾಸನ ಬಹು ಸಮರ್ಥವಾಗಿ ತಿಳಿಸುತ್ತದೆ.'

ಬಾವಡೆ[೧೫೬] ಎಂಬ ಗ್ರಾಮದ ನಾಲ್ಕು ಹಂತಗಳ ಶಾಸನ ಶಿಲ್ಪವೊಂದು ಕೋಟೆ ಯುದ್ಧದಲ್ಲಿ ಮಡಿದ ಪತಿಯ ಜೊತೆ ಚಿತೆಯೇರುತ್ತಿರುವ ದೃಶ್ಯವನ್ನು ಒಳಗೊಂಡಿದೆ. ಕೆಳ ಹಂತದಲ್ಲಿ ಮಡಿದ ಪತಿಯ ಶವವನ್ನು ಚಿತೆಯ ಮೇಲಿಡಲಾಗಿದೆ. ಅವನ ಕಾಲಿನ ಸಮೀಪದಿಂದ ಸತಿಯು ಚಿತೆಯನ್ನು ಪ್ರವೇಶಿಸುತ್ತಿದ್ದಾಳೆ. ಎರಡನೇ ಹಂತದಲ್ಲಿ ವೀರನು ಕೋಟೆ ಕಾಳಗದಲ್ಲಿ ಹೋರಾಡುತ್ತಿದ್ದು, ಕೋಟೆಯನ್ನು ಚಿಕ್ಕದಾಗಿ ಕಂಸದಲ್ಲಿ ಸೂಚಿಸಲಾಗಿದೆ. ಮೂರನೇ ಹಂತದಲ್ಲಿ ಸತಿ ಹಾಗೂ ಪತಿಯರನ್ನು ಅಪ್ಸರೆಯರು ಸ್ವರ್ಗಕ್ಕೆ ಒಯ್ಯುತ್ತಿದ್ದಾರೆ. ನಾಲ್ಕನೆಯದಾದ ಸ್ವರ್ಗದ ಹಂತದಲ್ಲಿ ವೀರನು ಕೈಮುಗಿದು ಕುಳಿತಿದ್ದಾನೆ.

## ಬ. ಅನುಗಮನ ಶಿಲ್ಪಗಳು

ಕೇವಲ ಶಿಲ್ಪವಾಗಲಿ ಅಥವಾ ಶಾಸನ ಸಹಿತ ಶಿಲ್ಪವಾಗಲಿ, ಇವುಗಳಲ್ಲಿ ಸಹಗಮನವನ್ನು ಸೂಚಿಸುವಂತಹ ಶಿಲ್ಪವಾಗಲಿ ಅಥವಾ ಪಾಠವಾಗಲಿ ಇಲ್ಲದಿದ್ದ ಪಕ್ಷದಲ್ಲಿ ಇಂತಹ ಶಿಲ್ಪಗಳನ್ನು ಅನುಗಮನ ಶಿಲ್ಪಗಳೆಂದು ಭಾವಿಸಿ ಈ ಉಪ ವಿಭಾಗದಲ್ಲಿ ಚರ್ಚಿಸಲಾಗಿದೆ. ಅನುಗಮನವೆಂದರೆ ದೂರದಲ್ಲೆಲ್ಲೋ ತನ್ನ ಪತಿ ಮಡಿದ ವಾರ್ತೆಯನ್ನು ಕೇಳಿದ ನಂತರ ಸತಿಯು ಮಹಾಸತಿಯಾಗುವುದು. ಅನುಗಮನ ಶಿಲ್ಪಗಳನ್ನು ಪೂರ್ಣ ಸತಿ ಶಿಲ್ಪ, ಪೂರ್ಣಸತಿ ಮತ್ತು ಇತರರ ಶಿಲ್ಪ, ಇಬ್ಬರು ಸತಿಯರ ಪೂರ್ಣ

---

೧೫೪. ಡಾ. ಎಂ.ಎಂ. ಕಲಬುರ್ಗಿ : ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಪುಟ - ೨೭

೧೫೫. ಡಾ. ಡಿ.ವಿ. ಪರಮಶಿವಮೂರ್ತಿ: ಕನ್ನಡ ಶಾಸನಶಿಲ್ಪ, ಪುಟ - ೧೩೯

೧೫೬. ಬಾವಡೆ : ತಾ. ಜಿ. ಸೋಲಾಪುರ . ( ಮಹಾರಾಷ್ಟ್ರ )

[illegible]

[illegible]

[illegible]

[illegible]

ಶಿಲ್ಪ ಮತ್ತು ಇತರರ ಶಿಲ್ಪ, ವೀರ ಮಾಸ್ತಿ ಶಿಲ್ಪ, ಹಂತಗಳಿರುವ ಮಾಸ್ತಿ ಶಿಲ್ಪ, ಒಕ್ಕೈ ಮಾಸ್ತಿ ಶಿಲ್ಪ, ಇಕ್ಕೈ ಮಾಸ್ತಿ ಶಿಲ್ಪ,[೧೫೭] ಬಹುಕೈ ಮಾಸ್ತಿ ಶಿಲ್ಪ ಎಂದು ಹಲವು ರೀತಿಯಲ್ಲಿ ವಿಂಗಡಿಸುವದು[೧೫೮] ಸೂಕ್ತವಾಗುತ್ತದೆ.

### ಅ. ಪೂರ್ಣ ಸತಿ ಶಿಲ್ಪಗಳು

ಶಿಲಾ ಫಲಕದಲ್ಲಿ ಕೇವಲ ಮಹಿಳೆಯೊಬ್ಬಳ ಪೂರ್ಣಪ್ರಮಾಣದ ಶಿಲ್ಪವಿರುವುದನ್ನು ಪೂರ್ಣ ಸತಿ ಶಿಲ್ಪವೆನ್ನಬಹುದು. ಇಲ್ಲಿ ಬೇರಾವುದೇ ಶಿಲ್ಪವಿರುವುದಿಲ್ಲ. ಹೀಗಾಗಿ ಇದು ಒಂದು ರೀತಿಯಲ್ಲಿ ನೋಡಲು ದೇವತಾ ಶಿಲ್ಪದಂತೆ ಕಾಣುತ್ತದೆ. ಆದರೆ ಎಡಗೈಯಲ್ಲಿ ಕಮಂಡಲ ಹಿಡಿದು, ಬಲಗೈಯನ್ನು ಮೇಲಕ್ಕೆ ಎತ್ತಿ ಹರಸುತ್ತಿರುವ ಭಂಗಿಯಲ್ಲಿರುತ್ತದೆ. ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲೂಕಿನ ಅಬ್ಬಲೂರಿನಲ್ಲಿ ಕೆರೆಯ ಬಳಿಯಲ್ಲಿ ಈ ರೀತಿಯ ಒಂದು ಶಿಲ್ಪವಿದೆ. ಇದರ ಕಾಲ ಕ್ರಿ.ಶ. ೧೧ ನೇ ಶತಮಾನ. ನಾಲ್ಕು ಅಡಿ ಎತ್ತರವಿದೆ. ನೆಟ್ಟಗೆ ನಿಂತಿರುವ ಮಹಾಸತಿಯು ಎಡಗೈಯಲ್ಲಿ ಕಮಂಡಲ ಹಿಡಿದು, ಬಲಗೈಯನ್ನು ಮೇಲಕ್ಕೆತ್ತಿ ಹರಸುತ್ತಿದ್ದಾಳೆ. ಬಟ್ಟೆ, ಆಭರಣಗಳಿಂದ ಅಲಂಕೃತಗೊಂಡಿದ್ದಾಳೆ. ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಹಿರೇಅಣಜಿಯ[೧೫೯] ಒಂದು ಮಾಸ್ತಿ ಶಿಲ್ಪ ಕ್ರಿ.ಶ. ೧೨ ನೇ ಶತಮಾನದ್ದಾಗಿದ್ದು ಸುಂದರ ಶಿಲ್ಪವಾಗಿದೆ. ಒಂದು ಕೈ ಹರಸುವಂತೆ ಇದ್ದರೆ, ಇನ್ನೊಂದು ಕೈಯಲ್ಲಿ ಕಮಂಡಲವಿದೆ. ಕುತ್ತಿಗೆಗೆ ಕಂಠೀಹಾರ, ಕೊರಳಿಗೆ ಪದಕದ ಹಾರವಿದೆ. ನಡುವಿಗೆ ದಾವಣಿಯನ್ನು ಬಿಗಿದಿದ್ದಾಳೆ. ತಲೆಯ ಕೂದಲ ಗಂಟಿನ ಬಳಿ ತಾಳೆ ಹೂವನ್ನು ಮುಡಿದಿರುವಂತೆ ಚಿತ್ರಿಸಲಾಗಿದೆ. ಈ ಮೇಲಿನ ಎರಡೂ ಶಿಲ್ಪಗಳ ಹರಸುತ್ತಿರುವ ಕೈಯ ತೋರು ಬೆರಳು ಹಾಗೂ ಹೆಬ್ಬೆರಳುಗಳ ಮಧ್ಯೆ ಒಂದು ನಿಂಬೆ ಹಣ್ಣನ್ನು ಕೆತ್ತಲಾಗಿದೆ.

ಹಾವೇರಿಯಲ್ಲಿ ಎರಡು ಪೂರ್ಣ ಸತಿ ಶಿಲ್ಪಗಳಿದ್ದು, ಎರಡರಲ್ಲೂ ಸತಿಯರು ಎತ್ತರದ ವೇದಿಕೆಯ ಮೇಲೆ ನಿಂತಿರುವಂತೆ ಕೆತ್ತಲಾಗಿದೆ. ಇವುಗಳಲ್ಲಿ ಒಂದು ಶಿಲ್ಪವು ಸುಂದರವಾಗಿದ್ದು, ನಗುಮುಖ ಭಾವವಿದೆ, ತಲೆಯ ಹಿಂದೆ ಕೇದಿಗೆ ಗರಿಗಳನ್ನು ಮುಡಿದ, ಹೆಚ್ಚು ಆಭರಣಗಳನ್ನು ಧರಿಸಿದ ಅಪರೂಪದ ಮಾಸ್ತಿ ಶಿಲ್ಪ ಇದಾಗಿದೆ. ಇವಲ್ಲದೆ ಶಿವಮೊಗ್ಗ ಜಿಲ್ಲೆಯ ಚೆನ್ನಗಿರಿ ತಾಲೂಕಿನ ಹಿರೇಕೊಗಲೂರು,[೧೬೦] ಶಿವಮೊಗ್ಗ ವಸ್ತು ಸಂಗ್ರಹಾಲಯದಲ್ಲಿರುವ ಮೂರು ಮಾಸ್ತಿ ಶಿಲ್ಪಗಳು[೧೬೧] ಆಕರ್ಷಕವಾದ ಕೆತ್ತನೆಗಳಾಗಿವೆ.

### ಆ. ಪೂರ್ಣ ಸತಿಶಿಲ್ಪವು ಇತರರ ಶಿಲ್ಪಗಳೊಂದಿಗೆ ಇರುವ ಶಿಲ್ಪಗಳು

ಕೆಲವು ಮಾಸ್ತಿ ವಿಗ್ರಹಗಳು ತಮ್ಮ ಅಕ್ಕಪಕ್ಕದಲ್ಲಿ ಅಥವಾ ಒಂದು ಮೂಲೆಯಲ್ಲಿ ವೀರನ ಶಿಲ್ಪವನ್ನು ಒಳಗೊಂಡಿರುತ್ತವೆ. ಈ ವೀರನು ಹೋರಾಡುತ್ತಿರುವ ಅಥವಾ ಮಹಾಸತಿಯೊಂದಿಗೆ

---

೧೫೭. ಡಾ. ಎಂ.ಎಂ. ಕಲಬುರ್ಗಿ : ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಪುಟ - ೪೨

೧೫೮. ಡಾ. ಡಿ.ವಿ. ಪರಮಶಿವಮೂರ್ತಿ: ಕನ್ನಡ ಶಾಸನಶಿಲ್ಪ, ಪುಟ - ೧೪೦

೧೫೯. ..... ಅದೇ ....., ಪುಟ - ೧೪೧

೧೬೦. ..... ಅದೇ ....., ಪುಟ - ೧೪೩

೧೬೧. ..... ಅದೇ .....

ಕುಳಿತಿರುವ ಭಂಗಿಯಲ್ಲಿ ಶಿಲ್ಪಿತನಾಗಿರುತ್ತಾನೆ.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಸಾಸಲು[೧೬೨] ಗ್ರಾಮದ ಮಹಾಸತಿ ಶಿಲ್ಪದಲ್ಲಿ ಪದ್ಮಾಸನದಲ್ಲಿ ಕುಳಿತ ವೀರ ಹಾಗೂ ಪ್ರಭಾವಳಿಯ ಮಧ್ಯದಲ್ಲಿ ನಿಂತಿರುವ ಸತಿ ಶಿಲ್ಪವನ್ನು ಬಿಡಿಸಲಾಗಿದೆ.

ಬಳ್ಳಿಗಾವಿಯ ಮಹಾಸತಿ ಶಿಲ್ಪವೊಂದು ಕಲಾಪೂರ್ಣವಾಗಿದೆ. ಆಭರಣಗಳು ಸೀರೆಯ ನಿರಿಗೆ ಇತ್ಯಾದಿಗಳನ್ನು ಆಕರ್ಷಕವಾಗಿ ಕೆತ್ತಲ್ಪಟ್ಟಿವೆ. ಇನ್ನೊಂದ ಮಹಾಸತಿಶಿಲ್ಪದಲ್ಲಿ[೧೬೩] ಸತಿಯು ನಿಂತಿರುವ ಭಾಗದ ಮೇಲೆ ಸ್ವರ್ಗದ ಹಂತವಿದ್ದು, ಶಿವಲಿಂಗದ ಬಳಿ ವೀರನು ಕುಳಿತಿರುವನು. ಇಂಥ ಕೆಲವು ಮಹಾಸತಿ ಶಿಲ್ಪಗಳಲ್ಲಿ ಕಂಕುಳ ಭಾಗದಲ್ಲಿ ಎರಡೆರಡು ರಂಧ್ರಗಳನ್ನು ಮಾಡಲಾಗಿದ್ದು, ಅವುಗಳ ಸ್ಪಷ್ಟ ಕಾರಣಗಳು ತಿಳಿಯುವದಿಲ್ಲ. ಡಾ. ಡಿ.ವಿ. ಪರಮಶಿವಮೂರ್ತಿಯವರು[೧೬೪] ಸ್ಥಳೀಯರು ಹಬ್ಬ ಹರಿದಿನಗಳಲ್ಲಿ ಮಹಾಸತಿ ಶಿಲ್ಪಕ್ಕೆ ಹೂವಿನ ಹಾರ ಹಾಕಲು ಅಥವಾ ಸೀರೆ ಇನ್ನಿತರ ಬಟ್ಟೆಯನ್ನು ತೊಡಿಸಲು ಅನುವಾಗಲಿ ಎಂದು ಈ ರೀತಿ ರಂಧ್ರಗಳನ್ನು ಮಾಡಿರಬಹುದು ಎನ್ನುತ್ತಾರೆ. ನಿಡುನೇಗಿಲು, ವರ[೧೬೫] ಗ್ರಾಮಗಳಲ್ಲಿ ಅನೇಕ ಮಾಸ್ತಿಶಿಲ್ಪಗಳು ಒಂದೇ ಕಡೆಯಿದ್ದು, ಪ್ರತಿಯೊಂದೂ ವೈಶಿಷ್ಟ್ಯಪೂರ್ಣವಾಗಿವೆ. ವೀರರ ಶಿಲ್ಪಗಳಲ್ಲಿ ಮೀಸೆಯು ಎದ್ದು ಕಾಣುವಂತೆ ಶಿಲ್ಪಿಸಲಾಗಿದೆ. ಸಾಮಾನ್ಯವಾಗಿ ಮಾಸ್ತಿ ಶಿಲ್ಪಗಳು ಪೂಜೆಗೊಳ್ಳುವ ದೇವತಾ ಶಿಲ್ಪಗಳಾಗಿವೆ. ಮಾಸ್ತಿಯ ಗುಡಿಗಳನ್ನೂ ಕಾಣಬಹುದು. ಹಲವಾರು ಗ್ರಾಮಗಳಲ್ಲಿ ಮಹಾಸತಿಯರು ಕಾಲ ಕ್ರಮೇಣ ಗ್ರಾಮ ದೇವತೆಯಾಗಿ ಪರಿವರ್ತಿತವಾಗಿ ಗ್ರಾಮೀಣ ಜನಪದರ ಬದುಕಿನಲ್ಲಿ ಬೆರೆತು ಹೋಗಿದ್ದಾರೆ.

### ಇ. ಇಬ್ಬರು ಸತಿಯರ ಪೂರ್ಣ ಶಿಲ್ಪಗಳು, ಇತರರ ಶಿಲ್ಪಗಳೊಂದಿಗೆ ಇರುವ ಶಿಲ್ಪಗಳು

ಹೋರಾಟದಲ್ಲಿ ಮಡಿಯುವ ವೀರನೊಬ್ಬನಿಗೆ ಇಬ್ಬರು ಸತಿಯರಿದ್ದರೆ, ಅವರಿಬ್ಬರೂ ಪ್ರಾಣತ್ಯಾಗ ಮಾಡುತ್ತಿದ್ದರು. ಇಂತಹವರ ಹೆಸರಿಗೆ ನಿಲ್ಲಿಸಿದ ಮಹಾಸತಿಶಿಲ್ಪಗಳಲ್ಲಿ ವೀರನ ಜೊತೆಗೆ ಅವನ ಇಬ್ಬರು ಸತಿಯರ ಶಿಲ್ಪವನ್ನು ಶಿಲ್ಪಿಸಿರುತ್ತಾರೆ. ಕಮಲಾಪುರದ[೧೬೬] ವಸ್ತುಸಂಗ್ರಹಾಲಯದಲ್ಲಿ ಈ ರೀತಿಯ ಶಿಲ್ಪವಿನ್ಯಾಸವಿರುವ ಅನೇಕ ಮಹಾಸತಿ ಕಲ್ಲುಗಳು ನೋಡಲು ಸಿಗುತ್ತವೆ. ಅವುಗಳಲ್ಲಿ ಕೆಲವು ಮಹಾಸತಿ ಶಿಲ್ಪಗಳಲ್ಲಿ ವೀರನನ್ನು ಸತಿಯರ ಸಮನಾಗಿಯೇ ಚಿತ್ರಿಸಲಾಗಿದೆ. ಹಂಪೆಯ ಉದ್ಧಾನ ವೀರಭದ್ರ ದೇವಾಲಯದಲ್ಲಿನ ಆವರಣದಲ್ಲಿನ ಒಂದು ವೀರಗಲ್ಲಿನಲ್ಲಿ ಎತ್ತರವಾದ ವೇದಿಕೆಯ ಮೇಲೆ ವೀರನು ನಿಂತಿದ್ದು, ಅವನ ಅಕ್ಕಪಕ್ಕದಲ್ಲಿ ಸತಿಯರ ಶಿಲ್ಪಗಳೂ ಇವೆ. ಬಲಗಡೆಯಿರುವ ಮಹಾಸತಿಯ ಕೈಯಲ್ಲಿ

---

೧೬೨. ಡಾ. ಡಿ.ವಿ. ಪರಮಶಿವಮೂರ್ತಿ: ಕನ್ನಡ ಶಾಸನಶಿಲ್ಪ, ಪುಟ - ೧೪೪

೧೬೩. ..... ಅದೇ .....

೧೬೪. ..... ಅದೇ ..... ಪುಟ - ೧೪೧

೧೬೫. ನಿಡುನೇಗಿಲು, ವರ , ತಾ. ಹಿರೇಕೆರೂರು, ಜಿ. ಹಾವೇರಿ

೧೬೬. ಕಮಲಾಪುರ, ತಾ. ಹೊಸಪೇಟೆ, ಜಿ. ಬಳ್ಳಾರಿ. (ಕ್ರಿ.ಶ. ೧೬)

[illegible]

[illegible]

[illegible]

[illegible]

[illegible]

ಕಮಂಡಲವಿದೆ. ಇಬ್ಬರು ಸತಿಯರ ಪೂರ್ಣ ಶಿಲ್ಪವಿರುವ ಮಹಾಸತಿ ಶಿಲ್ಪಗಳು ಹಲವು ಹಂತಗಳಲ್ಲಿ ಕೆತ್ತಲ್ಪಟ್ಟವುಗಳೂ ದೊರೆಯುತ್ತವೆ. ಹಾವೇರಿ ತಾಲೂಕಿನ ದೇವಗಿರಿ[೧೬೭] ಗ್ರಾಮದ ಒಂದು ಮಾಸ್ತಿ ಶಿಲ್ಪ ಎರಡು ಹಂತದ್ದಾಗಿದೆ. ಮೊದಲ ಹಂತದಲ್ಲಿ ಇಬ್ಬರು ಸತಿಯರು ಬಲಗೈ ಮೇಲೆತ್ತಿ ನಿಂತಿದ್ದಾರೆ. ಕೈಯಲ್ಲಿ ನಿಂಬೆಹಣ್ಣುಗಳಿವೆ. ಮೇಲಿನ ಹಂತದಲ್ಲಿ ವಿಮಾನದಲ್ಲಿ ಕುಳಿತ ವೀರನನ್ನು ಅಪ್ಸರೆಯರು ಕೊಂಡೊಯ್ಯುತ್ತಿರುವಂತೆ ಕೆತ್ತಲಾಗಿದೆ. ಕಮಲಾಪುರದಲ್ಲಿ ಎರಡು ಹಂತಗಳುಳ್ಳ ಎರಡು ಮಹಾ ಸತಿ ಶಿಲ್ಪಗಳಿವೆ. ಒಂದರಲ್ಲಿ ಮೂರು ಜನ ಸತಿಯರ ಮಧ್ಯೆ ವೀರನೊಬ್ಬನು ನಿಂತಿದ್ದಾನೆ. ಮೇಲಿನ ಹಂತದಲ್ಲಿ ಶಿವಲಿಂಗ, ಯತಿ ಹಾಗೂ ನಂದಿಯ ಉಬ್ಬು ಶಿಲ್ಪವಿದೆ. ಮತ್ತೊಂದು ಮಹಾಸತಿ ಶಿಲ್ಪದ ಶಿಲಾಫಲಕದ ಕೆಳ ಹಂತದಲ್ಲಿ ಮೂವರು ಸ್ತ್ರೀಯರ ನಡುವೆ ವೀರ ಹಾಗೂ ಮೇಲಿನ ಹಂತದಲ್ಲಿ ಶಿವಲಿಂಗ, ನಂದಿ ಹಾಗೂ ಇಬ್ಬರು ಸ್ತ್ರೀಯರ ಜೊತೆ ವೀರನು ಕುಳಿತಿರುವ ಶಿಲ್ಪಗಳಿವೆ.

### ಈ. ವೀರ ಮಾಸ್ತಿ ಶಿಲ್ಪಗಳು

ಕೆಲವು ಮಹಾಸತಿ ಶಿಲ್ಪಗಳಲ್ಲಿ ವೀರನಿಗೆ ಹೆಚ್ಚು ಪ್ರಾಧಾನ್ಯವಿದ್ದು ಮಹಾಸತಿಯ ಶಿಲ್ಪಕ್ಕೆ ಕಡಿಮೆ ಪ್ರಾಧಾನ್ಯವಿರುತ್ತದೆ. ಕೆಲವೆಡೆ ಇಬ್ಬರಿಗೂ ಪ್ರಾಧಾನ್ಯತೆಯಿರುತ್ತದೆ. ಈ ರೀತಿಯ ಮಹಾಸತಿ ಶಿಲ್ಪಗಳು ಬಹುತೇಕ ಕರ್ನಾಟಕದೆಲ್ಲೆಡೆ ಹರಡಿಕೊಂಡಿವೆ. ಈ ಶಿಲ್ಪಗಳು ಒರಟು ಮುಕ್ತಾಯದಿಂದ ಕೂಡಿರುತ್ತವೆ. ಆದರೆ ಶೈಲಿಯ ದೃಷ್ಟಿಯಿಂದ ನೋಡಲು ಆಕರ್ಷಕವಾಗಿರುತ್ತವೆ. ಕಮಲಾಪುರದ ವಸ್ತುಸಂಗ್ರಹಾಲಯ, ಆನೆಗೊಂದಿ,[೧೬೮] ಹಿರೇಕೊಣತಿ ಹಾಗೂ ಯತ್ತಿನಹಳ್ಳಿ[೧೬೯] ಮುಂತಾದೆಡೆ ವೀರಮಾಸ್ತಿಶಿಲ್ಪಗಳು ದೊರೆಯುತ್ತವೆ. ಈ ಬಗೆಯ ಶಿಲ್ಪಗಳಲ್ಲಿ ಕೆಲವುಗಳಲ್ಲಿ ವೀರನು ಸತಿಯ ಭುಜವನ್ನು ಹಿಡಿದು ನಿಂತಿದ್ದರೆ, ಕೆಲವು ಶಿಲ್ಪಗಳಲ್ಲಿ ಸತಿಯು ವೀರನ ಭುಜವನ್ನು ಬಳಸಿ ನಿಂತ ಹಾಗೆ ಕೆತ್ತಲಾಗಿದೆ. ಹಿರೇಬಿದರಿಯ[೧೭೦] ಕಲ್ಮೇಶ್ವರ ದೇವಾಲಯದ ಹತ್ತಿರವೂ ಒಂದು ವೀರ ಮಾಸ್ತಿಶಿಲ್ಪ ಕಂಡು ಬರುತ್ತದೆ.

### ಉ. ಹಂತಗಳಿರುವ ವೀರ ಮಾಸ್ತಿಶಿಲ್ಪಗಳು

ಈ ಬಗೆಯ ವೀರ ಮಾಸ್ತಿಶಿಲ್ಪಗಳಲ್ಲಿ ಒಂದು, ಎರಡು, ಮೂರು ಹಾಗೂ ನಾಲ್ಕು ಹಂತಗಳ ಶಿಲ್ಪಗಳು ನೋಡಲು ದೊರೆಯುತ್ತವೆ. ಕಮಲಾಪುರದಲ್ಲಿರುವ ಎರಡು ಹಂತದ ಮಾಸ್ತಿ ಶಿಲ್ಪವೊಂದರಲ್ಲಿ ಕೆಳಹಂತದಲ್ಲಿ ವೀರನು ಶತ್ರುವಿನ ಕುದುರೆಯನ್ನು ಕತ್ತಿಯಿಂದ ತಿವಿದಿದ್ದು, ಎರಡನೇ ಹಂತದಲ್ಲಿ ಅವನು ಇಬ್ಬರು ಸ್ತ್ರೀಯರ ಮಧ್ಯೆ ನಿಂತಿದ್ದಾನೆ. ಕೆಲವು ಶಿಲ್ಪಗಳಲ್ಲಿ ಮಹಾಸತಿಯ ತಲೆಯ ಹಿಂದೆ ಪ್ರಭಾವಳಿಯನ್ನು ಕೆತ್ತಲಾಗಿದೆ.

---

೧೬೭. ಡಾ. ಡಿ.ವಿ. ಪರಮಶಿವಮೂರ್ತಿ: ಕನ್ನಡ ಶಾಸನಶಿಲ್ಪ, ಪುಟ - ೧೪೮

೧೬೮. ಆನೆಗೊಂದಿ, ತಾ. ಗಂಗಾವತಿ, ಜಿ. ಕೊಪ್ಪಳ. (ಕ್ರಿ.ಶ. ೧೪)

೧೬೯. ಹಿರೇಕೊಣತಿ ಯತ್ತಿನ ಹಳ್ಳಿ, ತಾ. ಹಿರೇಕೆರೂರು, ಜಿ. ಹಾವೇರಿ. (ಕ್ರಿ.ಶ. ೧೨)

೧೭೦. ಹಿರೇಬಿದರಿ, ತಾ. ರಾಣೇಬೆನ್ನೂರು, ಜಿ. ಹಾವೇರಿ

[illegible]

[illegible]

[illegible]

[illegible]

[illegible]

ದೇವಗಿರಿಯ[೧೭೧] ನಾಲ್ಕು ಹಂತದ ಒಂದು ವೀರ ಮಾಸ್ತಿ ಶಿಲ್ಪದಲ್ಲಿ, ಮೊದಲ ಹಂತದಲ್ಲಿ ವೀರನ ಹೋರಾಟವೂ, ಎರಡನೇ ಹಂತದಲ್ಲಿ ಇಬ್ಬರು ಸತಿಯರ ನಡುವೆ ಕುಳಿತ ವೀರನೂ, ಮೂರನೇ ಹಂತದಲ್ಲಿ ಅಪ್ಸರೆಯರ ಜೊತೆ ಸ್ವರ್ಗಕ್ಕೆ ಹೊರಟ ವೀರ ಹಾಗೂ ನಾಲ್ಕನೇ ಹಂತದಲ್ಲಿ ನಂದಿ, ಶಿವಲಿಂಗ, ಸತಿಪತಿಯನ್ನು ಶಿಲ್ಪಿಸಲಾಗಿದೆ. ರಟ್ಟಿಹಳ್ಳಿಯ[೧೭೨] ಒಂದು ವೀರ ಮಾಸ್ತಿ ಶಿಲ್ಪವು ಶಿಲ್ಪವಿನ್ಯಾಸದ ದೃಷ್ಟಿಯಿಂದ ಸುಂದರವಾಗಿದ್ದು, ಇದರ ಎರಡನೇ ಹಂತದಲ್ಲಿ ಮೂರು ಅಗ್ನಿ ಕುಂಡಗಳನ್ನು ಶಿಲ್ಪಿಸಲಾಗಿದೆ. ಒಂದೊಂದು ಅಗ್ನಿ ಕುಂಡದ ಮುಂದೆ ಇಬ್ಬಿಬ್ಬರು ಬೆಂಕಿಗೆ ಬೀಳಲು ಎತ್ತರದ ವೇದಿಕೆಯ ಮೇಲೆ ಕೈಮುಗಿದು ನಿಂತಿರುವರು. ಮೂರನೇ ಹಂತದಲ್ಲಿ ಎಲ್ಲ ಸತಿಯರೂ ವೀರನ ಜೊತೆ ಸ್ವರ್ಗಕ್ಕೆ ಹೋಗುತ್ತಿರುವ ವಿವರವಿದೆ. ಬಹುತೇಕ ಮಹಾಸತಿ ಶಿಲ್ಪಗಳಲ್ಲಿ ಮಹಾಸತಿಯರು ತಮ್ಮ ಮುಡಿಯನ್ನು ಕೇದಗೆ ಹೂವಿಂದ ಅಲಂಕರಿಸಿಕೊಂಡಿರುತ್ತಾರೆ. ಬಹುಶಃ ಇದು ಕೇದಗೆ ಹೂವಾಗಿರಬಹುದೆಂದು ಡಾ. ಡಿ. ವಿ. ಪರಮಶಿವಮೂರ್ತಿಯವರು ಊಹಿಸುತ್ತಾರೆ. ಬಹುಪಾಲು ಮಹಾಸತಿಯರು ಶಿಲ್ಪಗಳಲ್ಲಿ ಬಲಗೈಯನ್ನು ಮೇಲಕ್ಕೆತ್ತಿದ್ದಾರೆ. ಕ್ವಚಿತ್ತಾಗಿ ಎಡಗೈಯನ್ನು ಮೇಲಕ್ಕೆತ್ತಿರುವುದು ಕಂಡು ಬರುತ್ತದೆ. ಹಾಗೆಯೇ ಮಹಾಸತಿಯರು ಸತಿ ಹೋಗುವಾಗ ಮಧುಮಗಳಂತೆ ಸಿಂಗರಿಸಿಕೊಂಡಿರುತ್ತಾರೆ. ಕೈಗಳಲ್ಲಿ ಕಮಂಡಲ, ತಾವರೆಮೊಗ್ಗು, ನಿಂಬೆಹಣ್ಣುಗಳನ್ನು ಕೈಯಲ್ಲಿ ಹಿಡಿದುಕೊಂಡಿರುತ್ತಾರೆ.

### ಊ. ಒಕ್ಕೈ ಮಾಸ್ತಿ ಶಿಲ್ಪಗಳು

ಕೆಲವು ಶಿಲ್ಪಗಳಲ್ಲಿ ಮಹಾಸತಿಯ ಘಟನೆಯನ್ನು ತಿಳಿಸಲು ಸಾಂಕೇತಿಕವಾಗಿ ಕಂಬದಿಂದ ಹೊರಟ ಕೈಯೊಂದನ್ನು ಮಾತ್ರ ಶಿಲ್ಪಿಸಿರುತ್ತಾರೆ. ಇದನ್ನು ತೋಳುಗೈ, ವ್ಯಾಸನ ತೋಳು, ಒಕ್ಕೈ ಮಾಸ್ತಿ ಮುಂತಾಗಿ ಕರೆಯುತ್ತಾರೆ. ಸತಿಯರು ಚಿತೆಯನ್ನು ಹೋಗುವಾಗ ಕುಂಕುಮದಲ್ಲಿ ಕೈಯನ್ನು ಅದ್ದಿ ಬಾಗಿಲಿನ ಮೇಲೆ ತಮ್ಮ ಬೆರಳುಗಳನ್ನು ಮೂಡಿಸುತ್ತಿದ್ದರು. ಆ ಬೆರಳುಗಳನ್ನು, ಅದಕ್ಕೆ ಸೇರಿದಂತೆ ತೋಳನ್ನು ಶಿಲ್ಪಿಗಳು ಕೊರೆಯುತ್ತಿದ್ದರು.[೧೭೩] ಬಳ್ಳಿಗಾವೆ, ಬಂದಳಿಕೆ, ಶಿವಮೊಗ್ಗ ಮೊದಲಾದ ಸ್ಥಳಗಳಲ್ಲಿ ಒಕ್ಕೈ ಶಿಲ್ಪಗಳನ್ನು ಕಂಬದ ಮೇಲ್ಭಾಗದಲ್ಲಿ ಚೌಕಾಕಾರದ ಜಾಗವನ್ನು ಬಿಡಿಸಿಕೊಂಡು ಅದರೊಳಗೆ ವೀರ ಹಾಗೂ ಸತಿ ಕುಳಿತಿರುವಂತೆ ಶಿಲ್ಪಿಸಲಾಗಿದೆ.[೧೭೪] ಇವರ ಮೇಲು ಭಾಗದ ಕಂಬದಲ್ಲಿ ಕಳಸದ ಆಕಾರದಲ್ಲಿ ಗೋಪುರಾಕಾರ ಅಥವಾ ಕಿರೀಟದ ಆಕಾರವನ್ನು ಕೆತ್ತಿರುತ್ತಾರೆ. ಹಿರೇ ಅಣಜಿಯ[೧೭೫] ಒಕ್ಕೈ ಶಿಲ್ಪದ ಕೆಳಭಾಗದಲ್ಲಿ ವೀರನು ಕುಳಿತಿರುವಂತೆ ಚಿತ್ರಿಸಲಾಗಿದೆ. ಹಿರೇ ಅಣಜಿ, ಹಿರೇ ಕೊಣತಿಯ[೧೭೬] ಒಕ್ಕೈ ಶಿಲ್ಪಗಳು ಸಾಮಾನ್ಯವಾಗಿ ಕೈಯ ಹೆಬ್ಬೆರಳ ಮಧ್ಯೆ ನಿಂಬೆಹಣ್ಣನ್ನು ಹಿಡಿದಿವೆ. ತೋಳು ಹೊರಚಾಚಿರುವ

---

೧೭೧. ದೇವಗಿರಿ : ತಾ. ಜಿ. ಹಾವೇರಿ

೧೭೨. ರಟ್ಟಿಹಳ್ಳಿ, ತಾ. ಹಿರೇಕೆರೂರು, ಜಿ. ಹಾವೇರಿ. (ಕ್ರಿ.ಶ. ೧೩)

೧೭೩. ಡಾ. ಎಂ. ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ - ೩೧೮

೧೭೪. ಡಾ. ಡಿ.ವಿ. ಪರಮಶಿವಮೂರ್ತಿ: ಕನ್ನಡ ಶಾಸನಶಿಲ್ಪ, ಪುಟ - ೧೫೮

೧೭೫. ಹಿರೇ ಅಣಜಿ, ತಾ. ಬ್ಯಾಡಗಿ, ಜಿ. ಹಾವೇರಿ. (ಕ್ರಿ.ಶ.೧೧)

೧೭೬. ಹಿರೇ ಕೊಣತಿ, ತಾ. ಹಿರೇಕೆರೂರು, ಜಿ. ಹಾವೇರಿ

ಕಂಬದ ಮೇಲ್ಭಾಗ ಕಳಸದ ಆಕಾರದಲ್ಲಿದ್ದು, ಇಡೀ ಕಂಬವು ಚೌಕಾಕಾರವಾಗಿದೆ. ಇದರ ಮೇಲೆ ಹೂವು ಬಳ್ಳಿಗಳನ್ನು ಅಲಂಕಾರಕ್ಕಾಗಿ ರಚಿಸಲಾಗಿದೆ. ಬೆನಕನಕೊಂಡದ [೧೭೭] ವೀರ ಮಾಸ್ತಿಶಿಲ್ಪ ವಿಶೇಷವಾದುದಾಗಿದೆ. ಇಲ್ಲಿ ತೋಳಿನ ಶಿಲ್ಪವನ್ನು ವೀರಗಲ್ಲಿನ ಹೊರಭಾಗದಲ್ಲಿ ಶಿಲ್ಪಿಸಲಾಗಿದೆ.

### ಎ. ಇಕ್ಕೈ ಮಾಸ್ತಿಶಿಲ್ಪಗಳು

ಇಬ್ಬರು ಸತಿಯರು ಪ್ರಾಣ ತ್ಯಾಗ ಮಾಡಿದ್ದರೆ ಎರಡು ತೋಳುಗಳು ಕಂಬದಿಂದ ಹೊರಚಾಚಿದ ಹಾಗೆ ಶಿಲ್ಪಿತವಾಗಿರುತ್ತವೆ. ಇವನ್ನು ಇಕ್ಕೈ ಮಾಸ್ತಿಶಿಲ್ಪಗಳೆಂದು ಕರೆಯಲಾಗುವದು. ಈ ಬಗೆಯ ಶಿಲ್ಪಗಳು ಅಪರೂಪಕ್ಕೆ ದೊರೆಯುತ್ತವೆ. ಲಿಂಗನಮಕ್ಕಿಯ [೧೭೮] ಒಂದು ಶಿಲ್ಪ ಈ ಬಗೆಯದಾಗಿದೆ. ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ವರ ಗ್ರಾಮದಲ್ಲಿನ ಒಂದು ಇಕ್ಕೈ ಮಾಸ್ತಿಶಿಲ್ಪವು ಅಪರೂಪವಾದುದಾಗಿದೆ. ವೀರನು ಹಂದಿ ಬೇಟೆಯಲ್ಲಿ ಮಡಿದಾಗ ಅವನ ಇಬ್ಬರು ಸತಿಯರು ಸಹಗಮನ ಗೈದ ಘಟನೆಯನ್ನು ಇಲ್ಲಿ ಶಿಲ್ಪಿಸಲಾಗಿದೆ. ಕೆಳಹಂತದಲ್ಲಿ ಹಂದಿಗಳಿಗೆ ಬಾಣ ಬಿಡುತ್ತಿರುವ ವೀರ, ಮೇಲಿನ ಹಂತದಲ್ಲಿ ಎರಡು ಕಂಬಗಳನ್ನು, ಅವುಗಳಿಂದ ಹೊರಚಾಚಿದ ಎರಡು ಕೈಗಳನ್ನು ಕೆತ್ತಲಾಗಿದೆ.

### ಏ. ಬಹು ಕೈ ಮಾಸ್ತಿಶಿಲ್ಪಗಳು

ಬಹು ಕೈ ಮಾಸ್ತಿಶಿಲ್ಪಗಳೆಂದರೆ, ಮಾಸ್ತಿಶಿಲ್ಪಗಳಲ್ಲಿ ಎರಡಕ್ಕಿಂತ ಹೆಚ್ಚು ಕೈಗಳನ್ನು ಕೆತ್ತಲ್ಪಟ್ಟವುಗಳು. ಇವೂ ಕೂಡ ಅಪರೂಪವಾಗಿ ದೊರೆಯುತ್ತವೆ. ಅರುಹನ ಹಳ್ಳಿಯ [೧೭೯] ( ಧಾರವಾಡ ಜಿಲ್ಲೆ ) ಒಂದು ಶಿಲ್ಪ ಕುತೂಹಲಕಾರಿಯಾಗಿದೆ. ವೀರನೊಬ್ಬನು ಯುದ್ಧದಲ್ಲಿ ಮಡಿಯಲು ಅವನ ಐದು ಜನ ಸತಿಯರು ಮಹಾಸತಿಯರಾದ ವಿಷಯವನ್ನು ಇದು ತಿಳಿಸುತ್ತದೆ. ಈ ಶಿಲ್ಪದ ಕೆಳಹಂತದಲ್ಲಿ ಐದು ಕಂಬಗಳನ್ನು ಹಾಗೂ ಅವುಗಳಿಂದ ಹೊರಟ ಐದು ತೋಳುಗಳನ್ನು ಶಿಲ್ಪಿಸಲಾಗಿದೆ. ಎರಡನೇ ಹಂತದಲ್ಲಿ ವೀರನನ್ನು ಪಲ್ಲಕ್ಕಿಯಲ್ಲಿ ಕರೆದೊಯ್ಯುತ್ತಿದ್ದಾರೆ.

ಬೆಳಗಾವಿ ಜಿಲ್ಲೆಯ ಆತವಾಡಿಯಲ್ಲಿ ಮಹಾಸತಿ ಶಿಲ್ಪಗಳಿವೆ. ಉಚಗಾಂವನಲ್ಲಿ ಇಪ್ಪತ್ತಕ್ಕೂ ಹೆಚ್ಚಿಗೆ ಇವೆ. ಅಂಬೇವಾಡಿಯಲ್ಲಿ ಎರಡು ಮಹಾಸತಿ ಶಿಲ್ಪಗಳು ಕಂಡುಬರುತ್ತವೆ.

### ೨.೨ ವೇಳೆವಾಳಿ ಶಿಲ್ಪಗಳು

ತಮಗೆ ಅನ್ನವನ್ನಿಟ್ಟ ಒಡೆಯನು ಮಡಿದರೆ ತಾವೂ ಮಡಿಯುವುದಾಗಿ ಹಲವರು ಪ್ರತಿಜ್ಞೆ ಕೈಗೊಳ್ಳುವ ಸಂಪ್ರದಾಯ ನಮ್ಮ ಜನಪದರಲ್ಲಿ ಬೆಳೆದು ಬಂದಿತ್ತು. ಹೀಗೆ ಪ್ರತಿಜ್ಞೆಯನ್ನು ಕೈಗೊಳ್ಳುವುದನ್ನು 'ವೇಳೆಗೊಳ್ ' ಎಂದು ಕರೆಯಲಾಗಿದೆ. ತಮ್ಮ ಒಡೆಯನು ಮಡಿದಾಗ ಅವನ ವೇಳೆ

---

೧೭೭. ಡಾ. ಎಂ.ಎಂ. ಕಲಬುರ್ಗಿ : ಸಮಾಧಿ-ಬಲಿದಾನ-ವೀರ ಮರಣ ಸ್ಮಾರಕಗಳು, ಪುಟ -೪೫

೧೭೮. ..... ಅದೇ .....

೧೭೯. ಡಾ. ಬಿ.ಎಸ್. ಶೇಠೆ : ಕರ್ನಾಟಕದಲ್ಲಿ ಸತಿ ಪದ್ಧತಿ, ಪುಟ - ೨೩೨

[illegible]

ವಡಿಚರರು ಆತ್ಮಾಹುತಿ ಮಾಡಿಕೊಳ್ಳುತ್ತಿದ್ದರು. ಇದೇ ವೇಳೆವಾಳಿ. [೧೮೦] ವೇಳೆವಾಳಿ ಶಿಲ್ಪವನ್ನು ಅ. ಕೀಳ್ಗುಂಟೆ ಶಿಲ್ಪಗಳು, ಆ. ಬೆಂಕಿಬಲಿ ಶಿಲ್ಪಗಳು, ಇ. ಶೂಲಬಲಿ ಶಿಲ್ಪಗಳು, ಈ. ತಲೆ ಕಡಿಸಿಕೊಳ್ಳುವ ಶಿಲ್ಪಗಳು (ಸಿಡಿತಲೆ ಶಿಲ್ಪ) ಮತ್ತು ಉ. ಲೆಂಕರ ಶಿಲ್ಪಗಳು ಎಂದು ವಿಂಗಡಿಸಬಹುದು. [೧೮೧]

## ಅ. ಕೀಳ್ಗುಂಟೆ ಶಿಲ್ಪಗಳು

ಕೀಳ್ಗುಂಟೆ ಎಂಬುದು ಒಡೆಯನ ಸಮಾಧಿಯ ಕೆಳಗೆ ಆಳನ್ನು ಹೂಳುವುದು ಎಂದು ಡಾ. ಎಂ. ಎಂ. ಕಲಬುರ್ಗಿಯವರು ಅಭಿಪ್ರಾಯ ಪಡುತ್ತಾರೆ. [೧೮೨] ಗಂಗರಾಜ ಪೆರ್ಮಾನಡಿಯು ಮರಣ ಹೊಂದಿದಾಗ ಅವನ ಮನೆಮಗ ಅಗರಯ್ಯ ಎಂಬುವವನು ಕೀಳ್ಗುಂಟೆಯಾದ ಎಂದು ಶಾಸನ ಸಹಿತವಾದ ಶಿಲ್ಪವೊಂದು ತಿಳಿಸುತ್ತದೆ. ಈ ಶಿಲ್ಪದಲ್ಲಿ ದೊರೆ ಪೆರ್ಮಾನಡಿ ಮಂಚದ ಮೇಲೆ ಮಲಗಿದ್ದಾನೆ ಮಂಚದ ಕೆಳಗೆ ಎರಡು ಹೂಜಿಗಳನ್ನು ಇಡಲಾಗಿದೆ. ಇವು ಬಹುಶಃ ಔಷಧಿಯ ಪಾತ್ರೆಗಳಿರಬಹುದು. ದೊರೆಯು ಒಬ್ಬ ಸೇವಕನ ತೊಡೆಯ ಮೇಲೆ ತನ್ನ ಕಾಲುಗಳನ್ನು ಚಾಚಿಕೊಂಡು ಪ್ರಾಣ ತೊರೆದಿದ್ದಾನೆ. ಅವನ ಬಳಿ ಅಗರಯ್ಯನು ಅರಸನ ಸಾವನ್ನು ಸಹಿಸಲಾಗದೆ ಕಠಾರಿಯಿಂದ ತನ್ನನ್ನು ತಾನೇ ಇರಿದುಕೊಳ್ಳುತ್ತಿರುವ ಚಿತ್ರಣವಿದೆ. ಕಿಳ್ಗುಂಟೆಯ ಶಿಲ್ಪಗಳು ಹೆಚ್ಚಾಗಿ ದೊರೆಯುವುದಿಲ್ಲ.

## ಆ. ಬೆಂಕಿಬಲಿ ಶಿಲ್ಪಗಳು

ಈ ಬಗೆಯ ಶಿಲ್ಪಗಳೂ ಅಪರೂಪಕ್ಕೆ ದೊರೆಯುತ್ತವೆ. ಇವು ಸಾಮಾನ್ಯವಾಗಿ ಮೂರು ಹಂತಗಳಲ್ಲಿರುವುದು ಕಂಡುಬರುತ್ತವೆ. ಕ್ರಿ.ಶ. ೯ ನೇ ಶತಮಾನದ ಒಂದು ಶಿಲ್ಪವು ಕೊಡಗಿನದು. [೧೮೩] ಈ ಶಿಲ್ಪದ ಕೆಳಹಂತದಲ್ಲಿ ಇಬ್ಬರು ವ್ಯಕ್ತಿಗಳ ಶಿಲ್ಪವಿದೆ. ಇವರಲ್ಲಿ ಒಬ್ಬನು ಎತ್ತರವಾದ ಅಟ್ಟಣೆಯ ಮೇಲೆ ನಿಂತು, ಅವನ ಮುಂದೆ ಉರಿಯುತ್ತಿರುವ ಬೆಂಕಿಯ ಕೆಂಡಕ್ಕೆ ಹಾರಲು ಅಣಿಯಾಗಿದ್ದಾನೆ. ಎರಡನೇ ಹಂತದಲ್ಲಿ ಅಪ್ಸರೆಯರೊಡನೆ ಸ್ವರ್ಗಾರೋಹಣ, ಮೂರನೇ ಹಂತದಲ್ಲಿ ಸ್ವರ್ಗಪ್ರಾಪ್ತಿಯನ್ನು ಶಿಲ್ಪಿಸಲಾಗಿದೆ.

## ಇ. ಶೂಲಬಲಿ ಶಿಲ್ಪಗಳು

ಈ ಬಗೆಯ ಶಿಲ್ಪಗಳು ಹೃದಯ ವಿದ್ರಾವಕವಾದ ಆತ್ಮ ಬಲಿಯ ಸನ್ನಿವೇಷವನ್ನು ಹಿಡಿದಿಟ್ಟಿವೆ. ಕ್ರಿ.ಶ. ೧೦೬೦ ರ ಬಳ್ಳಿಗಾವಿಯ ಒಂದು ಶಿಲ್ಪದಲ್ಲಿ [೧೮೪] ತನ್ನ ಒಡೆಯನಿಗಾಗಿ ತುಳುವ ಚಂಡಿಗ ಎಂಬುವನು ಭೇರುಂಡೇಶ್ವರ ಕಂಬವನ್ನೇರಿ ಕೆಳಗೆ ನೆಟ್ಟಿರುವ ಶೂಲಗಳ ಮೇಲೆ ಬಿದ್ದು ಪ್ರಾಣವನ್ನರ್ಪಿಸಿದ ಶಿಲ್ಪವಿದೆ.

---

೧೮೦. ಡಾ. ಎಂ. ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ - ೧೦೪

೧೮೧. ಡಾ. ಡಿ.ವಿ. ಪರಮಶಿವಮೂರ್ತಿ: ಕನ್ನಡ ಶಾಸನಶಿಲ್ಪ, ಪುಟ - ೧೬೧

೧೮೨. ಡಾ. ಎಂ.ಎಂ. ಕಲಬುರ್ಗಿ : ಸಮಾಧಿ-ಬಲಿದಾನ-ವೀರ ಮರಣ ಸ್ಮಾರಕಗಳು, ಪುಟ - ೫೪

೧೮೩. ಡಾ. ಎಂ.ಜಿ. ನಾಗರಾಜ : ಕೊಡಗಿನ ಕೊಲೆಗಲ್ಲುಗಳು, ಹರಿತಿ ಸಿರಿ, ಪುಟ - ೭೩೩

೧೮೪. ಡಾ. ಡಿ.ವಿ. ಪರಮಶಿವಮೂರ್ತಿ: ಕನ್ನಡ ಶಾಸನಶಿಲ್ಪ, ಪುಟ - ೧೬೪

[illegible]

[illegible]

[illegible]

[illegible]

[illegible]

[illegible]

[illegible]

ಈ ಶಿಲ್ಪದಲ್ಲಿ ಎತ್ತರವಾದ ಕಂಬ, ಅದರ ಮೇಲೆ ಚಂಡಿಗ ಹಾಗೂ ಅಪ್ಸರೆಯರು, ಶೂಲಗಳ ಮೇಲೆ ಬಿದ್ದಿರುವ ಚಂಡಿಗನ ಶಿಲ್ಪವಿದೆ. ಅವನು ಬಿದ್ದ ರಭಸಕ್ಕೆ ಶೂಲಗಳು ಬೆನ್ನಿಂದ ಹೊರಗೆ ಬಂದಿವೆ.

### ಈ. ತಲೆಕಡಿಸಿಕೊಳ್ಳುವ ಶಿಲ್ಪಗಳು

ವೇಳವಾಳಿಗಳು ಆತ್ಮಸಮರ್ಪಣೆ ಮಾಡಿಕೊಳ್ಳಿತ್ತಿದ್ದ ಮತ್ತೊಂದು ವಿಧಾನವೆಂದರೆ ತಮ್ಮ ತಲೆಯನ್ನು ಕಡಿಸಿಕೊಳ್ಳುವುದು. ಇಂಥ ಪದ್ಧತಿಯ ಆಚರಣೆ ಶಾಸನೋಕ್ತವಾಗಿವೆ. ಆದರೆ ಶಿಲ್ಪಗಳು ಲಭ್ಯವಾಗಬೇಕಿವೆ.

### ಉ. ಲೆಂಕರ ಶಿಲ್ಪಗಳು

ರಾಜರುಗಳಿಗೆ ಅಪಾಯವೊದಗಿದಾಗ ತಮ್ಮ ಪ್ರಾಣವನ್ನು ಬಲಿಗೊಟ್ಟು ರಕ್ಷಿಸುವ ಮತ್ತು ಅವರು ನಿಧನರಾದರೆ ತಾವೂ ಪ್ರಾಣ ಕಳೆದುಕೊಳ್ಳುವ ವ್ಯಕ್ತಿಗಳಿಗೆ ಲೆಂಕರು ಎಂದು ಕರೆಯುತ್ತಾರೆ. ಹೊಯ್ಸಳರ ಕಾಲಕ್ಕೆ ಇವರನ್ನು ಗರುಡರು[೧೮೫] ಎಂದು ಕರೆಯಲಾಗಿದೆ. ಆದರೆ ಡಾ.ಎಂ.ಎಂ. ಕಲಬುರ್ಗಿಯವರ ಪ್ರಕಾರ ಹೊಯ್ಸಳರ ಕಾಲದಲ್ಲೂ ಇವರನ್ನು ಲೆಂಕರೆದೇ ಕರೆಯಲಾಗಿದೆ.[೧೮೬] ಹೊಯ್ಸಳ ಅರಸ ಎರಡನೇ ಬಲ್ಲಾಳನ ಮಂತ್ರಿಯಾಗಿದ್ದ ಕುವರಲಕ್ಷ್ಮನ ಶಾಸನ ಶಿಲ್ಪವೊಂದು ಲೆಂಕರ ಸಾಹಸಗಳನ್ನು ತಿಳಿಸುತ್ತದೆ. ಈ ಶಿಲ್ಪ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಬಳಿ ಒಂದು ಸ್ತಂಭದ ಮೇಲಿದೆ. ಈ ಶಿಲ್ಪ ಕುವರಲಕ್ಷ್ಮನು ತನ್ನ ಶಿರವನ್ನು ಕತ್ತಿಸಿಕೊಳ್ಳುತ್ತಿರುವ ಹಂತ ಹಂತದ ಶಿಲ್ಪವನ್ನು ಒಳಗೊಂಡಿದೆ.[೧೮೭] ಈ ಬಗೆಯ ಶಿಲ್ಪಗಳಲ್ಲಿ ಲೆಂಕರ ಕಾರ್ಯದಕ್ಷತೆ, ಅವರ ಹೆಮ್ಮೆಯ ಬಾಳ್ವೆ, ವೀರ-ತ್ಯಾಗವನ್ನು ಸಮರ್ಥವಾಗಿ ಹಿಡಿದಿಟ್ಟಿರುವ ಜನಪದ ದೃಶ್ಯಕಾವ್ಯಗಳಾಗಿವೆ.

## ೩. ವೀರಮರಣ ಶಿಲ್ಪಗಳು

ಯಾವುದೇ ಹೋರಾಟ ಅಥವಾ ಕಾದಾಟದಲ್ಲಿ ಸಾವನ್ನಪ್ಪುವ ವೀರನದು ವೀರ ಮರಣವಾಗುತ್ತದೆ.[೧೮೮] ಆ ವೀರನ ಸಾವಿನ ಸ್ಮಾರಕವಾಗಿ ಕೆತ್ತಲ್ಪಟ್ಟ ಶಿಲ್ಪವೇ ವೀರಮರಣ ಶಿಲ್ಪ. ಕರ್ನಾಟಕದಲ್ಲಿ ಇಂಥ ವೀರಮರಣ ಶಿಲ್ಪಗಳು ಅಧಿಕ ಸಂಖ್ಯೆಯಲ್ಲಿ ದೊರೆಯುತ್ತವೆ. ಈ ಬಗೆಯ ಶಿಲ್ಪಗಳನ್ನು ಶಾಸನ ಸಹಿತ ಶಿಲ್ಪಗಳು ಮತ್ತು ಶಾಸನ ರಹಿತ ಶಿಲ್ಪಗಳೆಂದು ಎರಡು ಭಾಗವಾಗಿ ವಿಂಗಡಿಸಬಹುದು. ಈ ವೀರ ಮರಣ ಶಿಲ್ಪಗಳ ವಿಷಯ[೧೮೯] ಮತ್ತು ಅವುಗಳ ಮೇಲಿರುವ ಶಿಲ್ಪದ

---

೧೮೫. ಡಾ. ಡಿ.ವಿ. ಪರಮಶಿವಮೂರ್ತಿ: ಕನ್ನಡ ಶಾಸನಶಿಲ್ಪ, ಪುಟ - ೧೬೪

೧೮೬. ಡಾ. ಎಂ.ಎಂ. ಕಲಬುರ್ಗಿ : ಸಮಾಧಿ - ಬಲಿದಾನ- ವೀರಮರಣ ಸ್ಮಾರಕಗಳು, ಪುಟ - ೫೯

೧೮೭. ..... ಅದೇ ....., ಪುಟ - ೬೧

೧೮೮. ಡಾ. ಎಂ.ಎಂ. ಕಲಬುರ್ಗಿ : ಸಮಾಧಿ- ಬಲಿದಾನ- ವೀರ ಮರಣ ಸ್ಮಾರಕಗಳು, ಪುಟ - ೫೯

೧೮೯. ವಿವರಗಳಿಗೆ ನೋಡಿ : ಡಾ. ಚೆನ್ನಕ್ಕ ಎಲಿಗಾರ : ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪುಟ - ೨೬೧

ಆಧಾರದಿಂದ ಹಲವು ವಿಧವಾಗಿ ವಿಂಗಡಿಸಿ ಅಧ್ಯಯನ ಮಾಡಬಹುದು. ೧. ವ್ಯಕ್ತಿ-ವ್ಯಕ್ತಿಗಳ ಕಾದಾಟ ಶಿಲ್ಪಗಳು, ೨. ವ್ಯಕ್ತಿ-ಪ್ರಾಣಿಗಳ ಕಾದಾಟ ಶಿಲ್ಪಗಳು, ೩. ಪ್ರಾಣಿ-ಪ್ರಾಣಿಗಳ ಕಾದಾಟ ಶಿಲ್ಪಗಳು, ೪. ವೀರಸ್ತಂಭಶಿಲ್ಪಗಳು ಎಂದು ನಾಲ್ಕು ಮುಖ್ಯ ವಿಂಗಡನೆ ಮಾಡಿ ಅಧ್ಯಯನ ಮಾಡಲಾಗಿದೆ.

### ೧. ವ್ಯಕ್ತಿ-ವ್ಯಕ್ತಿಗಳ ಕಾದಾಟ ಶಿಲ್ಪಗಳು

ವ್ಯಕ್ತಿ ತನ್ನ ಪ್ರಾಣ ರಕ್ಷಣೆಗಾಗಿಯೋ ಅಥವಾ ಆಸ್ತಿ, ಸ್ತ್ರೀ, ದನ-ಕರುಗಳ ರಕ್ಷಣೆಗಾಗಿಯೋ ಶತ್ರುಗಳ ಜೊತೆ ಹೋರಾಡುತ್ತಿರುವುದನ್ನು[೧೯೦] ಸೂಚಿಸುವ ಶಿಲ್ಪಗಳು. ಇವುಗಳನ್ನು ಅಧ್ಯಯನದ ದೃಷ್ಟಿಯಿಂದ ೧.೧ ತುರುಗೋಳ್ ಶಿಲ್ಪಗಳು, ೧.೨ ಪೆಣ್ಬುಯ್ಯಲ್ ಶಿಲ್ಪಗಳು, ೧.೩ ಊರಳಿವು ಶಿಲ್ಪಗಳು, ೧.೪ ಗಡಿ ಕಾಳಗ ಶಿಲ್ಪಗಳು ಮತ್ತು ೧.೫ ಕಳ್ಳರೊಡನೆ ಕಾದಾಟ ಶಿಲ್ಪಗಳು ಎಂದು ಐದು ಬಗೆಯಾಗಿ ವಿಂಗಡಿಸಬಹುದು.

### ೧.೧ ತುರುಗೋಳ್ ಶಿಲ್ಪ

ಹಿಂದೆ ಯಾವುದೇ ಕಾರಣದಿಂದ ಶತ್ರುಗಳು ದನಗಳನ್ನು ಅಪಹರಿಸಿದಾಗ ಆ ದನಗಳನ್ನು ರಕ್ಷಿಸಿಕೊಳ್ಳಲು ಪ್ರಾಣವನ್ನು ಲೆಕ್ಕಿಸದೆ ಹೋರಾಡುವಂತಹ ಕಾಲವಿತ್ತು. ಆ ಹೋರಾಟದಲ್ಲಿ ಕೆಲವರು ಗೆದ್ದು ಹಿಂತಿರುಗಿದರೆ, ಮತ್ತೆ ಕೆಲವರು ಸಾವನ್ನಪ್ಪುತ್ತಿದ್ದರು. ಇಂತಹ ವೀರರ ನೆನಪಿಗಾಗಿ ನಿಲ್ಲಿಸಿದ ವೀರಮರಣ ಶಿಲ್ಪಗಳನ್ನು ಸುಲಭವಾಗಿ ಗುರುತಿಸಬಹುದು. ಸಾಮಾನ್ಯವಾಗಿ ಈ ಶಿಲ್ಪಗಳ ಹೋರಾಟದ ಹಂತದಲ್ಲಿ ಯಾವುದಾದರೂ ಒಂದು ಕಡೆ ಕೆಲವು ದನಗಳು ನಿಂತಿರುವಂತೆ ಶಿಲ್ಪಿಸಿರುತ್ತಾರೆ. ಈ ಶಿಲ್ಪಗಳು ಒಂದು ಹಂತದಿಂದ ಹಿಡಿದು ಎರಡು, ನಾಲ್ಕು ಹಂತದ ಶಿಲ್ಪಗಳೂ ನೋಡಲು ಸಿಗುತ್ತವೆ.

ಗದಗ ತಾಲೂಕಿನ ಲಕ್ಕುಂಡಿಯ ಒಂದು ವೀರಮರಣ ಶಿಲ್ಪದ ಕೆಳಹಂತದಲ್ಲಿ ಹೋರಾಟದ ದೃಶ್ಯವನ್ನು ಶಿಲ್ಪಿಸಲಾಗಿದ್ದು, ಹೋರಾಡುತ್ತಿರುವವರ ತಲೆಯ ಮೇಲಿನ ಪಟ್ಟಿಕೆಯೊಂದರಲ್ಲಿ ದನಗಳನ್ನು ಕೆತ್ತಲಾಗಿದೆ. ವೀರನಾದವನು ಶತ್ರುಗಳ ರುಂಡವನ್ನು ಕಡಿದು ನೆಲಕ್ಕೆ ಚೆಲ್ಲಾಡಿದ್ದಾನೆ. ಎರಡನೇ ಹಂತದಲ್ಲಿ ವೀರನು ಅಪ್ಸರೆಯರೊಡನೆ ಸ್ವರ್ಗಕ್ಕೆ ಹೋಗುತ್ತಿರುವಂತೆ ಶಿಲ್ಪವಿದೆ. ನರೇಗಲ್ಲ[೧೯೧] ಗ್ರಾಮದ ಒಂದು ತುರುಗೋಳ್ ವೀರಮರಣ ಶಿಲ್ಪವು ಅಪರೂಪದ್ದಾಗಿದೆ. ಮೊದಲ ಹಂತದಲ್ಲಿ ವೀರನು ಶತ್ರುಗಳ ಜೊತೆ ಕಾದಾಡುತ್ತಿದ್ದು, ವೀರ ಹಾಗೂ ಅವನ ಕಡೆಯ ಇಬ್ಬರು ಬಿಲ್ಲು ಬಾಣಗಳನ್ನು ಹಿಡಿದಿದ್ದಾರೆ. ಶತ್ರು ಪಕ್ಷದವರು ಕುದುರೆಗಳ ಮೇಲೆ ಕುಳಿತಿದ್ದಾರೆ. ಅದರಲ್ಲಿ ಒಂದು ಕುದುರೆ ಸತ್ತು ಬಿದ್ದಿದೆ. ಎಲ್ಲರ ಕೈಯಲ್ಲೂ ಈಟಿಗಳಿವೆ. ಎರಡನೇ ಹಂತದಲ್ಲಿ ಆರು ಜನರು ಎಂಟು ದನಗಳನ್ನು ಓಡಿಸಿಕೊಂಡು ಹೋಗುತ್ತಿರುವರು. ಮೂರನೇ ಹಂತದಲ್ಲಿ ಅನೇಕ ವಾದ್ಯಗಾರರು, ಅಪ್ಸರೆಯರೊಡನೆ ವೀರನು ಸ್ವರ್ಗಕ್ಕೆ ಹೊರಟಿದ್ದು,

---

೧೯೦. ಬೆಳಗಾಂವ ತಾಲೂಕಿನ ಉಚಗಾಂವ ಗ್ರಾಮದಲ್ಲಿ ಅಲ್ಲಲ್ಲಿ ಸುಮಾರು ನಲವತ್ತಕ್ಕೂ ಹೆಚ್ಚು ವೀರಗಲ್ಲುಗಳಿವೆ

೧೯೧. ನರೇಗಲ್ಲ, ತಾ. ರೋಣ, ಜಿ. ಗದಗ

[illegible]

ನಾಲ್ಕನೇ ಹಂತದಲ್ಲಿ ವೀರನು ಸ್ವರ್ಗದಲ್ಲಿ ಕುಳಿತಿದ್ದಾನೆ.

### ೧.೨ ಪೆಣ್ಬುಯ್ಯಲ್ ಶಿಲ್ಪಗಳು

ನೆರೆ ರಾಜ್ಯದವರು ಅಥವಾ ಕಳ್ಳರು ಬಂದು ಊರನ್ನು ದೋಚುವಾಗ, ಸ್ತ್ರೀಯರನ್ನೂ ಅಪಹರಿಸುತ್ತಿದ್ದರು. ಅಲ್ಲದೆ ಅವರ ಮಾನಭಂಗಕ್ಕೂ ಪ್ರಯತ್ನಿಸುತ್ತಿದ್ದರು. ಅಥವಾ ಸೀರೆ ಸೆಳೆಯುವುದರ ಮೂಲಕ ಯುದ್ಧವನ್ನು ಸಾರುತ್ತಿದ್ದರು.[೧೯೨] ಇಂತಹ ವೇಳೆಯಲ್ಲಿ ಸ್ತ್ರೀಯರ ಹುಯ್ಯಲನ್ನು (ಕೂಗು) ಕೇಳಿ ರಕ್ಷಿಸಲು ಹೋರಾಡಿ ಮಡಿದ ವೀರರ ವಿಷಯವನ್ನು ದಾಖಲಿಸುವ ಅನೇಕ ವೀರಮರಣ ಶಿಲ್ಪಗಳು ದೊರೆಯುತ್ತವೆ.

ತುರುಗಳನ್ನು ಅಪಹರಿಸಲು ಬಂದವರು ಸ್ತ್ರೀಯರನ್ನೂ ಅಪಹರಿಸುತ್ತಿದ್ದರು ಎಂಬ ಅಂಶವನ್ನು ತಿಳಿಸುವ ಸುಂದರವಾದ ಎರಡು ವೀರಮರಣ ಶಿಲ್ಪಗಳು ಅಬ್ಬಲೂರಿನಲ್ಲಿವೆ.[೧೯೩] ಇವುಗಳಲ್ಲಿನ ಒಂದು ಶಿಲ್ಪ ವಿಶೇಷವಾಗಿದ್ದು ಮೂರು ಹಂತಗಳನ್ನು ಹೊಂದಿದೆ. ಇಡೀ ಶಿಲ್ಪದಲ್ಲಿ ಹೆಣ್ಣುಗಳ ಮಾನಭಂಗದ ಪ್ರಯತ್ನ ಹಾಗೂ ಅವರ ರಕ್ಷಣೆಗಾಗಿ ಹೋರಾಡುತ್ತಿರುವವರ ಶೌರ್ಯವನ್ನು ಮನ ಮಿಡಿಯುವಂತೆ ಸೆರೆ ಹಿಡಿಯಲಾಗಿದೆ. ಅದೇ ಸ್ಥಳದಲ್ಲಿರುವ ಮತ್ತೊಂದು ವೀರಮರಣ ಶಿಲ್ಪ ಪೆಣ್ಬುಯ್ಯಲ್ ಸನ್ನಿವೇಷವನ್ನು ನಾಲ್ಕು ಹಂತಗಳಲ್ಲಿ ತಿಳಿಸುತ್ತದೆ. ವೀರನು ಗೋಗ್ರಹಣ ಮತ್ತು ಮಾನಹಾನಿಯನ್ನು ತಡೆದು ಶತ್ರುಗಳನ್ನು ಹಿಮ್ಮೆಟ್ಟಿಸಿದ ಎಂಬ ಅಂಶಗಳನ್ನು ಒಳಗೊಂಡಿದೆ. ತುರುಗಳನ್ನು, ಮಾನಹಾನಿಗೆ ಒಳಗಾದ ಮಹಿಳೆಯರನ್ನು ವೀರನ ಮುಂಭಾಗದಲ್ಲಿಯೇ ಕೆತ್ತುವುದರ ಮೂಲಕ ಶಿಲ್ಪಿ ತನ್ನ ಕೌಶಲ್ಯವನ್ನು ಮೆರೆದಿದ್ದಾನೆ.[೧೯೪]

ಲಕ್ಕುಂಡಿಯ ಒಂದು ವೀರಮರಣ ಶಿಲ್ಪದಲ್ಲಿ ವೀರನ ಹಿಂದೆ ದನಗಳನ್ನು ಹಾಗೂ ಇಬ್ಬರು ಸ್ತ್ರೀಯರನ್ನು ಶಿಲ್ಪಿಸಿದ್ದು, ವೀರನು ಶತ್ರುಗಳ ಕೈಯಿಂದ ತುರುಗಳನ್ನು ಮತ್ತು ಸ್ತ್ರೀಯರನ್ನು ರಕ್ಷಿಸಿದ ವಿಷಯವನ್ನು ಇದು ತಿಳಿಸುತ್ತದೆಯೆಂಬುದು[೧೯೫] ವೀರನ ಸಾಹಸವನ್ನು ದೃಶ್ಯಾತ್ಮಕಗೊಳಿಸಿದುದಾಗಿದೆ. ಬಾದಾಮಿ ವಸ್ತು ಸಂಗ್ರಹಾಲಯದಲ್ಲಿ ಒಂದು ಪೆಣ್ಬುಯ್ಯಲ್ ವೀರಗಲ್ಲಿದೆ. ಇದು ಮೂರು ಹಂತದ ಶಿಲ್ಪವನ್ನು ಹೊಂದಿದ್ದು, ಮೊದಲ ಹಂತದಲ್ಲಿ ವೀರರ ಹೋರಾಟವನ್ನು, ಎರಡನೇ ಹಂತದಲ್ಲಿ ಅವರು ಅಪ್ಸರೆಯರೊಡನೆ ಇರುವಂತೆ, ಮೂರನೇ ಹಂತದಲ್ಲಿ ವೀರನು ಸ್ವರ್ಗದಲಿರುವಂತೆಯೂ ಶಿಲ್ಪಿಸಲಾಗಿದೆ.

ಪಟ್ಟದಕಲ್ಲಿನ ಒಂದು ವೀರಮರಣ ಶಿಲ್ಪದಲ್ಲಿ ವೀರನೊಡನೆ ಇಬ್ಬರು ವ್ಯಕ್ತಿಗಳು ಬಾಣ ಪ್ರಯೋಗ ಮಾಡುತ್ತ ಯುದ್ಧಕ್ಕೆ ನಿಂತಿದ್ದು ವೀರ ಅವರನ್ನು ಎದುರಿಸಲು ಸಿದ್ಧನಿರುವಂತಿದೆ. ಅವನ ಹಿಂದೆ ಸ್ತ್ರೀಯರು ನಿಂತಿರುವಂತೆಯೂ, ಎರಡನೇ ಹಂತದಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ

---

೧೯೨. ಡಾ. ಎಂ.ಎಂ. ಕಲಬುರ್ಗಿ : ಸಮಾಧಿ-ಬಲಿದಾನ-ವೀರ ಮರಣ ಸ್ಮಾರಕಗಳು, ಪುಟ - ೭೮

೧೯೩. ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನಶಿಲ್ಪ, ಪುಟ - ೮೫

೧೯೪. ಡಾ. ಆರ್. ಶೇಷಶಾಸ್ತ್ರಿ : ಕರ್ನಾಟಕದ ವೀರಗಲ್ಲುಗಳು, ಪುಟ - ೧೨೨

೧೯೫. ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನ ಶಿಲ್ಪ, ಪುಟ - ೮೭

[illegible]

[illegible]

[illegible]

[illegible]

[illegible]

[illegible]

[illegible]

ಕೊಂಡೊಯ್ಯುತ್ತಿರುವಂತೆಯೂ ಶಿಲ್ಪದಲ್ಲಿ ಬಿಡಿಸಲಾಗಿದೆ. ಇದೂ ಬಹುಶಃ ಪೆಣ್ಬುಯ್ಯಲ್‌ನಲ್ಲಿ ಹೋರಾಡಿ ಮಡಿದ ವೀರನ ಸ್ಮಾರಕವೇ ಆಗಿರಬೇಕೆಂದು ಡಾ. ಡಿ.ವಿ. ಪರಮಶಿವಮೂರ್ತಿ ಅಭಿಪ್ರಾಯ ಪಡುತ್ತಾರೆ.[೧೯೬] ಅಬ್ಬಲೂರಿನ [೧೯೭] ಒಂದು ಶಿಲ್ಪದಲ್ಲಿ ಸ್ತ್ರೀಯರ ಸೆರೆಯನ್ನು ಉಡೆ ಉರ್ಚುವ ಸನ್ನಿವೇಷವನ್ನು ಸಮರ್ಥವಾಗಿ ನಿರೂಪಿಸುತ್ತದೆ. ಅಂತರವಳ್ಳಿಯ[೧೯೮] ವೀರಮರಣ ಶಿಲ್ಪವೊಂದರಲ್ಲಿ ವೀರನು ತುರುಗಳ ಮತ್ತು ಹೆಣ್ಣುಗಳ ರಕ್ಷಣೆಗಾಗಿ ಹೋರಾಡಿದ ವಿಷಯ ಸ್ಪಷ್ಟವಾಗುತ್ತದೆ. ಇದರಲ್ಲಿ ಶತ್ರುಗಳು ವೀರನಿಗೆ ಶರಣಾಗಿ ಕೈಮುಗಿದು ತಮ್ಮನ್ನು ಬಿಟ್ಟುಬಿಡುವಂತೆ ಗೋಗರೆಯುತ್ತಿದ್ದಾರೆ.

### ೧.೩ ಊರಳಿವು ಶಿಲ್ಪಗಳು

ಹಿಂದೆ ಕಳ್ಳರು ತುರುಗಳನ್ನು ಕದ್ದು, ಸ್ತ್ರೀಯರನ್ನು ಮಾನಭಂಗಗೊಳಿಸಿ ಊರನ್ನು ನಾಶಪಡಿಸುತ್ತಿದ್ದರು. ಇದೇ ಊರಳಿವು ಅಥವಾ ಊರಿನ ನಾಶ. [೧೯೯] ಇಂತಹ ಸಮಯದಲ್ಲಿ ಹೆದರದೆ ಗಟ್ಟಿಯಾಗಿ ನಿಂತು ವೈರಿಗಳನ್ನು ಎದುರಿಸಿ ಊರನ್ನು, ಊರಿನ ಜನಗಳನ್ನು ರಕ್ಷಿಸುವುದು ವೀರರ ಧ್ಯೇಯವಾಗಿದ್ದಿತು ಎಂಬುದು ಅನೇಕ ವೀರಮರಣ ಶಾಸನ ಶಿಲ್ಪಗಳಿಂದ ತಿಳಿದು ಬರುತ್ತದೆ.

ಬಂಗಾರ ಪೇಟೆ ತಾಲೂಕಿನ ಯಲಬುರಿಗೆ ಗ್ರಾಮದಲ್ಲಿನ ಎರಡು ವೀರಮರಣ ಶಿಲ್ಪಗಳು ಊರಳಿವಿನ ವಿಷಯವನ್ನು ಹೇಳುತ್ತವೆ.[೨೦೦] ಈ ಎರಡೂ ಶಿಲ್ಪಗಳಲ್ಲಿ ವೀರನನ್ನು ದೊಡ್ಡದಾಗಿ ಶಿಲ್ಪಿಸಿದ್ದು, ಕೈಯಲ್ಲಿ ಬಿಲ್ಲನ್ನು ಹಿಡಿದಿರುವಂತೆ ಶಿಲ್ಪಿಸಲಾಗಿದೆ. ಅವನ ಜುಟ್ಟನ್ನು ನೆತ್ತಿಯ ಮೇಲಕ್ಕೆ ಎತ್ತಿ ಗಂಟು ಹಾಕಲಾಗಿದ್ದು, ಆ ಗಂಟು ಬಿಗಿಯಾಗಿರಲು ವಸ್ತ್ರವೊಂದನ್ನು ಬಿಗಿಯಲಾಗಿದೆ. ಇಬ್ಬರೂ ವೀರರಿಗೆ ಬಾಣಗಳು ನಾಟಿಕೊಂಡಿವೆ. ಒಂದು ವೀರಮರಣ ಶಿಲ್ಪದಲ್ಲಿ ವೀರನು ಸ್ವರ್ಗದಲ್ಲಿರುವುದನ್ನು ಮೂಲೆಯೊಂದರಲ್ಲಿ ಚಿತ್ರಿಸಲಾಗಿದೆ.

### ೧.೪ ಗಡಿ ಕಾಳಗ ಶಿಲ್ಪಗಳು

ಒಂದು ಊರಿನ ಗಡಿಯ ವಿಷಯವಾಗಿ, ಸೀಮೆಯ ವಿಷಯವಾಗಿ ಊರುಗಳ ಮಧ್ಯೆ ಜಗಳಗಳಾಗಿ, ಅವು ಹೊಡೆದಾಟದ ಹಂತಕ್ಕೆ ಹೋಗುತ್ತಿದ್ದ ಪ್ರಸಂಗಗಳು ನಡೆದಿವೆ. ಆ ಕಾಲದಲ್ಲಿ ಒಂದೊಂದು ಗ್ರಾಮವೂ ಆಡಳಿತದ ದೃಷ್ಟಿಯಿಂದ ಸ್ವತಂತ್ರ ಘಟಕವಾಗಿದ್ದುದರಿಂದ ಆಯಾ ಊರಿನ ಗಡಿಗಳಿಗೆ ಸ್ವಲ್ಪ ಮಟ್ಟಿಗೆ ಆಯಾ ಊರಿನ ಜನಗಳೇ ಹೊಣೆಗಾರರಾಗುತ್ತಿದ್ದರು. [೨೦೧] ಕೆಲವು ವೇಳೆ ಆಯಾ ರಾಜ್ಯದ ಗಡಿ

---

೧೯೬. ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನ ಶಿಲ್ಪ, ಪುಟ - ೮೮
೧೯೭. ಅಬ್ಬಲೂರು, ತಾ. ಹಿರೇಕೆರೂರು, ಜಿ. ಹಾವೇರಿ
೧೯೮. ಅಂತರವಳ್ಳಿ, ತಾ. ಹಿರೇಕೆರೂರು, ಜಿ. ಹಾವೇರಿ
೧೯೯. ಡಾ. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ - ೨೮೪
೨೦೦. ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನಶಿಲ್ಪ, ಪುಟ - ೯೦
೨೦೧. ಡಾ. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ - ೨೮೬

[illegible]

[illegible]

[illegible]

[illegible]

[illegible]

[illegible]

[illegible]

ವಿಷಯದಲ್ಲೂ ಭಿನ್ನಾಭಿಪ್ರಾಯಗಳುಂಟಾಗಿ ಯುದ್ಧಗಳಾಗುತ್ತಿದ್ದವು. ಇಂತಹ ಯುದ್ಧದಲ್ಲಿ ಮಡಿದವರ ಶಿಲ್ಪಗಳು ದೊರೆಯುತ್ತವೆ. ಇಂತಹ ಶಿಲ್ಪಗಳನ್ನು ಗಡಿ ಕಾಳಗ ಶಿಲ್ಪಗಳೆಂದು ಕರೆಯಬಹುದು.[೨೦೨] ಕರ್ನಾಟಕದ ದಕ್ಷಿಣ ಭಾಗದಲ್ಲಿ ಇಂಥಹ ಶಿಲ್ಪಗಳು ಕಂಡು ಬರುತ್ತವೆ. ಸಾಮಾನ್ಯವಾಗಿ ಗಡಿ ಕಾಳಗದ ಶಿಲ್ಪಗಳನ್ನು ತಕ್ಷಣ ಗುರುತಿಸಲು ಸಾಧ್ಯವಾಗುವುದಿಲ್ಲ.

### ೧.೫ ಕಳ್ಳರೊಡನೆ ಕಾದಾಟ ಶಿಲ್ಪಗಳು

ಕಳ್ಳರೊಡನೆ ಕಾದಾಡಿ ಮಡಿದವರ ಸ್ಮಾರಕವಾಗಿ ನಿಲ್ಲಿಸಲಾದ ಶಿಲ್ಪಗಳನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ. ಇವಕ್ಕೆ ಶಾಸನ ಪಾಠಗಳ ಸಹಾಯ ಬೇಕಾಗುತ್ತದೆ. ಸಾಮಾನ್ಯವಾಗಿ ವೀರ ಮರಣ ಶಿಲ್ಪಗಳಂತೆಯೇ ಇವುಗಳಲ್ಲೂ ಕಾದಾಟದ ಶಿಲ್ಪವನ್ನು ಕೆತ್ತಲಾಗಿರುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಈ ಶಿಲ್ಪಗಳು ಹೆಚ್ಚಾಗಿ ದೊರೆಯುತ್ತವೆ. ಕೊಡಕಣಿಯ[೨೦೩] ಶಿಲ್ಪವೊಂದು ಕಾಮಿಗವುಡಿಯ ಬೊಮ್ಮದೇವನು ಸಂತೆಯಿಂದ ಬರುವಲ್ಲಿ ಕಳ್ಳರ ಕೂಡೆ ಕಾದಿ ಬಿದ್ದನು ಎಂಬ ಉಲ್ಲೇಖವಿದೆ. ಶಾಸನ ಸಹಿತವಾದ ಈ ಶಿಲ್ಪವು ಮೂರು ಹಂತಗಳಲ್ಲಿದ್ದು ಕೆಳಗಿನ ಕಾದಾಟದ ಹಂತದಲ್ಲಿ ಬಿಲ್ಲು ಹಿಡಿದ ವೀರನು ಹೋರಾಡುತ್ತಿದ್ದಾನೆ. ಆರು ಜನ ಕಳ್ಳರು ಕತ್ತಿ, ಗುರಾಣಿಗಳೊಂದಿಗೆ ವೀರನನ್ನು ಎದುರಿಸುತ್ತಿದ್ದು, ಒಬ್ಬನು ಮಡಿದು ಬಿದ್ದಿದ್ದಾನೆ. ಮೇಲಿನೆರಡು ಹಂತಗಳು ಸ್ವರ್ಗಾರೋಹಣ ಮತ್ತು ಸ್ವರ್ಗಪ್ರಾಪ್ತಿಯನ್ನು ಸೂಚಿಸುತ್ತಿವೆ.[೨೦೪] ಸಾಮಾನ್ಯವಾಗಿ ಈ ಬಗೆಯ ಶಿಲ್ಪಗಳಲ್ಲಿ ವೀರನು ಕತ್ತಿಯನ್ನು ಇಲ್ಲವೆ ಬಾಣ, ಬಿಲ್ಲುಗಳನ್ನು ಹಿಡಿದು ಕಳ್ಳರೊಂದಿಗೆ ಹೋರಾಡುತ್ತಿರುವಂತೆ ಶಿಲ್ಪಿಸಲಾಗಿರುತ್ತದೆ. ಕೆಲವೊಮ್ಮೆ ವೀರಾವೇಶದಿಂದ ಹೋರಾಡುತ್ತಿರುವ ವೀರನ ಶಿಲ್ಪವನ್ನು ದೊಡ್ಡದಾಗಿ ಶಿಲ್ಪಿಸಲಾಗಿರುತ್ತದೆ. ಹುಬ್ಬಳ್ಳಿಯಲ್ಲಿ[೨೦೫] ಗುಡಿಯೊಂದರಲ್ಲಿ ಶಾಸನ ಸಹಿತವಾದ ವೀರ ಮರಣ ಶಿಲ್ಪವಿದೆ. ಸ್ಥಳೀಯರು ಇದನ್ನು ದುರ್ಗಾದೇವಿ ಎಂದು ಕರೆಯುತ್ತಿದ್ದಾರೆ. ಕಪ್ಪು ಶಿಲೆಯ ಈ ಶಿಲ್ಪದ ಬಲಗೈಯಲ್ಲಿ ಗುರಾಣಿ ಹಿಡಿದಿದೆ. ಗುರಾಣಿಗೆ ಬಾಣಗಳು ನೆಟ್ಟಿವೆ. ತುಮುಕೂರು ಜಿಲ್ಲೆ ಸತ್ಯಮಂಗಲ[೨೦೬] ಗ್ರಾಮದ ಒಂದು ಅಪ್ರಕಟಿತ ಶಾಸನ ಶಿಲ್ಪ ಮೂರು ಹಂತದಲ್ಲಿದ್ದು ಮೊದಲ ಹಂತವು ಹೋರಾಟವನ್ನು, ಎರಡನೇ ಹಂತವು ವಿಮಾನ ಪ್ರಯಾಣವನ್ನು, ಮೂರನೇ ಹಂತವು ಸ್ವರ್ಗ ಪ್ರಾಪ್ತಿಯನ್ನು ಸೂಚಿಸುತ್ತವೆ.

### ೨. ವ್ಯಕ್ತಿ ಪ್ರಾಣಿಗಳ ಕಾದಾಟ ಶಿಲ್ಪಗಳು

ಹಿಂದಿನ ಕಾಲದಲ್ಲಿ ಕೆಲವು ಪ್ರಾಣಿಗಳು ಊರಿಗೆ ನುಗ್ಗಿ ಜನ-ದನಕರುಗಳಿಗೆ ತೊಂದರೆ ಕೊಡುವುದಲ್ಲದೆ, ಬೆಳೆಗಳನ್ನೂ ನಾಶಪಡಿಸುತ್ತಿದ್ದವು. ಇಂತಹ ಪ್ರಾಣಿಗಳ ಕಾಟವನ್ನು ತಡೆಯಲಾರದೆ

---

೨೦೨. ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನ ಶಿಲ್ಪ, ಪುಟ - ೯೧

೨೦೩. ಕೊಡಕಣಿ, ತಾ. ಸೊರಬ, ಜಿ. ಶಿವಮೊಗ್ಗ

೨೦೪. ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನಶಿಲ್ಪ, ಪುಟ - ೯೨

೨೦೫. ಇತಿಹಾಸ ದರ್ಶನ : ಸಂಪುಟ - ೧೬, ಪುಟ - ೨೨

೨೦೬. ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನಶಿಲ್ಪ, ಪುಟ - ೯೩

[illegible]

[illegible]

[illegible]

[illegible]

[illegible]

[illegible]

[illegible]

ಅವನ್ನು ಬೇಟೆಯಾಡಿ ಕೊಂದು ಹಾಕಿದ ಅಥವಾ ಕೊಲ್ಲಲು ಹೋಗಿ ತಾವೇ ಮರಣವನ್ನಪ್ಪಿದ ಘಟನೆಗಳನ್ನು ತಿಳಿಸುವ ಶಾಸನಗಳು ಮತ್ತು ಶಿಲ್ಪಗಳು ನಮ್ಮಲ್ಲಿ ದೊರೆಯುತ್ತವೆ. ಈ ಬಗೆಯ ವೀರಮರಣಶಿಲ್ಪಗಳಲ್ಲಿ, ೨.೧ ಹಂದಿ ಬೇಟೆ ಶಿಲ್ಪಗಳು, ೨.೨ ಹುಲಿ ಬೇಟೆ ಶಿಲ್ಪಗಳು, ೨.೩ ಹಾವು ಬೇಟೆ ಶಿಲ್ಪಗಳು, ೨.೪ ಆನೆ ಬೇಟೆ ಶಿಲ್ಪಗಳು, ೨.೫ ಮೊಸಳೆಯೊಂದಿಗೆ ಕಾದಾಟ ಶಿಲ್ಪಗಳು, ೨.೬ ಜಿಂಕೆ ಬೇಟೆ ಶಿಲ್ಪಗಳು, ೨.೭ ಕೋಣ ಕಾಳಗದ ಶಿಲ್ಪಗಳು ಎಂದು ವಿಂಗಡಿಸಿ ಅಧ್ಯಯನ ಮಾಡಲಾಗಿದೆ. [೨೦೭]

## ೨.೧ ಹಂದಿ ಬೇಟೆ ಶಿಲ್ಪಗಳು

ಹಾವೇರಿ ಜಿಲ್ಲೆ ಹಿರೇಕೆರೂರು ತಾಲೂಕಿನಲ್ಲಿ ೧೨ ನೇ ಶತಮಾನದ ವೀರಮರಣ ಶಿಲ್ಪವೊಂದರಲ್ಲಿ ಹಂದಿ ಬೇಟೆಯ ದೃಶ್ಯ ಸೆರೆಹಿಡಿಯಲ್ಪಟ್ಟಿದೆ. ಒಂದು ದೊಡ್ಡದಾದ ಹಂದಿಯ ಹಿಂದೆ ಮತ್ತು ಮುಂದೆ ಬೇಟೆಗಾರರು ಬಿಲ್ಲು-ಬಾಣ, ಭರ್ಚಿಗಳನ್ನು ಹಿಡಿದು ನಿಂತಿದ್ದಾರೆ. ಹಂದಿಯನ್ನು ನಾಲ್ಕು ನಾಯಿಗಳು ಮುತ್ತಿವೆ. ಹಂದಿ ಬೇಟೆಯಾಡುವ ಸಂದರ್ಭದಲ್ಲಿ ಬೇಟೆಯಾಡುವವರು ನಾಯಿಗಳನ್ನು ಜೊತೆಯಲ್ಲಿ ಕಡ್ಡಾಯವಾಗಿ ಒಯ್ಯುತ್ತಿದ್ದರೆಂದು ಇದರಿಂದ ತಿಳಿಯುತ್ತದೆ. [೨೦೮] ಹೀಗಾಗಿ ನಾಯಿಗಳ ಚುರುಕುತನ, ಸ್ವಾಮಿನಿಷ್ಠೆ ಮತ್ತು ಹೋರಾಟದ ಗುಣವೂ ಈ ಶಿಲ್ಪಗಳಲ್ಲಿ ಎದ್ದು ಕಾಣುತ್ತದೆ.

## ೨.೨ ಹುಲಿ ಬೇಟೆ ಶಿಲ್ಪಗಳು

ಮನುಷ್ಯನಿಗಿಂತ ಬಲಿಷ್ಠವಾದ ಪ್ರಾಣಿ ಹುಲಿ. ಇಂತಹ ಬಲಿಷ್ಠವಾದ ಪ್ರಾಣಿಯೊಂದಿಗೆ ಹೋರಾಡಿದ ವಿಷಯವನ್ನು ತಿಳಿಸುವ ಅನೇಕ ವೀರಗಲ್ಲುಗಳು ನಮ್ಮಲ್ಲಿ ದೊರೆಯುತ್ತವೆ. ಎಮ್ಮಿಗನೂರಿನ ಒಂದು ಶಾಸನವು ಕೇತನಾಯಕ ಎಂಬುವವನು ಹುಲಿಯೊಡನೆ ಕಾದಾಡಿ ಮಡಿದ ವಿಷಯವನ್ನು ತಿಳಿಸುತ್ತದೆ.[೨೦೯] ಹಾವೇರಿ ತಾಲೂಕಿನ ಸಂಗೂರು ಎಂಬಲ್ಲಿನ ಒಂದು ವೀರಗಲ್ಲು ಬಹಳ ಸ್ವಾರಸ್ಯವಾಗಿದೆ. ಈ ಶಾಸನ ಸಹಿತ ಶಿಲ್ಪದ ಪಾಠದಲ್ಲಿ ಹುಲಿಯೊಂದಿಗೆ ಹೋರಾಡಿದ ವರ್ಣನೆಯಿದ್ದರೂ ಶಿಲ್ಪದಲ್ಲಿ ಅದು ಹುಲಿಯಾಗಿರದೆ ಸಿಂಹವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ವೀರಮರಣ ಶಿಲ್ಪದಲ್ಲಿ ಹುಲಿಗೆ ಬದಲಾಗಿ ಸಿಂಹ ತೋರಿಸಿರುವುದರ ಉದ್ದೇಶ ಬಹುಶಃ ವೀರನು ಹೆಚ್ಚು ಶೌರ್ಯವಂತ ಎಂದು ತೋರಿಸಲು ಹೀಗೆ ಕೆತ್ತಿರಬೇಕೆಂದು ಡಾ. ಡಿ.ವಿ.ಪರಮಶಿವಮೂರ್ತಿ [೨೧೦] ಅಭಿಪ್ರಾಯ ಪಟ್ಟಿರುವುದು ಸರಿಯಿದೆ ಎನಿಸಿತ್ತದೆ. ಅಣಜಿ, ಆಲದಗೇರಿ, [೨೧೧] ಅಂಬಳೆ, [೨೧೨] ಕಂದಲಿ, [೨೧೩] ಹಲ್ಗೇರಿ [೨೧೪] ಗಳಲ್ಲಿಯೂ ಸುಂದರವಾಗಿ ಕೆತ್ತಲಾದ

---

೨೦೭. ಆರ್. ಶೇಷಶಾಸ್ತ್ರಿ : ಕನ್ನಡ ಶಾಸನ ಪರಿಚಯ, ಪುಟ - ೨೫

೨೦೮. ಡಾ. ಆರ್. ಶೇಷಶಾಸ್ತ್ರಿ : ಕರ್ನಾಟಕದ ವೀರಗಲ್ಲುಗಳು, ಪುಟ - ೧೩೨

೨೦೯. ಕ.ಇ. IV - ೧೭ (ಕ್ರಿ.ಶ. ೧೨)

೨೧೦. ಡಾ. ಡಿ.ವಿ. ಪರಮಶಿವಮೂರ್ತಿ, ಕನ್ನಡ ಶಾಸನ ಶಿಲ್ಪ, ಪುಟ - ೧೦೧

೨೧೧. ಅಣಜಿ, ಆಲದಗೇರಿ, ತಾ. ಹಿರೇಕೆರೂರು, ಜಿ. ಹಾವೇರಿ

೨೧೨. ಅಂಬಳೆ, ತಾ. ಜಿ. ಚಿಕ್ಕಮಗಳೂರು

೨೧೩. ಕಂದಲಿ, ತಾ. ಕಲಘಟಗಿ, ಜಿ. ಧಾರವಾಡ ಜಿಲ್ಲೆ

೨೧೪. ಹಲ್ಗೇರಿ, ತಾ. ಜಿ. ಕೊಪ್ಪಳ

[illegible]

ಹುಲಿ ಬೇಟೆ ಶಿಲ್ಪಗಳಿವೆ. ಕಂಪ್ಲಿಯ[೨೧೫] ಸೋಮೇಶ್ವರ ದೇವಾಲಯದ ಎಡಭಾಗದ ಗೋಡೆಯ ಮಧ್ಯೆ ಮೂರು ಹಂತದಲ್ಲಿ ಕೆತ್ತಲಾದ ಹುಲಿಬೇಟೆಯ ವೀರಮರಣ ಶಿಲ್ಪವಿದೆ. ಇಲ್ಲಿ ವೀರನೊಂದಿಗೆ ನಾಯಿಗಳೂ ಇವೆ. ಆನೆಗೊಂದಿಯ ಕಡೇಬಾಗಿಲು ಸ್ಥಳದಲ್ಲಿಯೂ ಒಂದು ಹುಲಿಹೋರಾಟದ ವೀರಮರಣ ಶಿಲ್ಪವಿದೆ.

ಈ ಬಗೆಯ ವೀರಮರಣ ಶಿಲ್ಪಗಳು ಬಹು ಸಂಖ್ಯೆಯಲ್ಲಿದ್ದು ಏಕತಾನತೆ ಕಂಡು ಬರುತ್ತದೆ. ವೀರನ ಭಂಗಿ, ಹುಲಿಯ ಗಾತ್ರ ಅಥವಾ ಶಿಲ್ಪದ ಸೂಕ್ಷ್ಮತೆಯಲ್ಲಿ ಮಾತ್ರ ವ್ಯತ್ಯಾಸವಿರುತ್ತದೆ. ಆದರೆ, ಈ ಶಿಲ್ಪಗಳು ಹುಲಿಹೋರಾಟದ ಸಂದರ್ಭವನ್ನು ಸಮರ್ಥವಾಗಿ ದ್ವನಿಸುತ್ತವೆ.

### ೨.೩ ಹಾವು ಬೇಟೆ ಶಿಲ್ಪಗಳು

ಹಾವನ್ನು ಬೇಟೆಯಾಡಲು ಹೋದ ಹಾಗೂ ಹಾವು ಕಡಿಸಿಕೊಂಡು ಮಡಿದ ಸಂಗತಿಯನ್ನು ತಿಳಿಸುವ ವೀರಮರಣ ಶಿಲ್ಪಗಳೂ ಕ್ವಚಿತ್ತಾಗಿ ಸಿಗುತ್ತವೆ. ಸಾಮಾನ್ಯವಾಗಿ ಇಂಥ ಶಿಲ್ಪಗಳಲ್ಲಿ ಕತ್ತಿ ಅಥವಾ ಬಿಲ್ಲು ಬಾಣ ಹಿಡಿದು ನಿಂತ ವೀರ ಮತ್ತು ಹೆಡೆ ಬಿಚ್ಚಿ ನಿಂತ ಹಾವುಗಳ ಶಿಲ್ಪಕೆತ್ತನೆಯಿರುತ್ತದೆ. ಜೊತೆಗೆ ಮೇಲ್ಭಾಗದಲ್ಲಿ ಸೂರ್ಯ, ಚಂದ್ರರನ್ನು ಕೆತ್ತಲಾಗಿರುತ್ತದೆ.

### ೨.೪ ಆನೆ ಬೇಟೆ ಶಿಲ್ಪಗಳು

ಆನೆ ಬೇಟೆಯಲ್ಲಿ ನೇರವಾಗಿ ಆನೆಯನ್ನೇ ಕೊಲ್ಲುವುದು ಉದ್ದೇಶವಾಗಿರುತ್ತದೆ. ಈ ರೀತಿಯ ಶಿಲ್ಪಗಳು ಅಪರೂಪ. ಹಂಪಿಯ ಒಂದು ವೀರಮಾಸ್ತಿ ಕಲ್ಲಿನಲ್ಲಿ[೨೧೬] ಒಂದು ಆನೆಯನ್ನೂ, ಅದರ ಮುಂದೆ ಕೈಮುಗಿದು ನಿಂತ ವೀರ ಹಾಗೂ ಅವನ ಇಬ್ಬರು ಸತಿಯರು ಮಹಾಸತಿಯರಾದರೆಂದು ತೋರುತ್ತದೆ. ಪುರದ ಕೇರಿಯ[೨೧೭] ಒಂದು ವೀರಮರಣ ಶಿಲ್ಪದ ( ಕ್ರಿ.ಶ. ೧೨೦೦ ) ಕೆಳಹಂತದಲ್ಲಿ ಆನೆಯೊಂದು ಒಬ್ಬನನ್ನು ಸೊಂಡಿಲಲ್ಲಿ ಎತ್ತಿಹಿಡಿದ ದೃಶ್ಯವನ್ನು, ಮೇಲಿನ ಹಂತದಲ್ಲಿ ವೀರನನ್ನು ಅಪ್ಸರೆಯರು ಕೊಂಡೊಯ್ಯುತ್ತಿರುವಂತೆಯೂ ಚಿತ್ರಿಸಲಾಗಿದೆ. ಆದರೆ ಆನೆಯ ಕಾಲಿಗೆ ಸರಪಳಿಯನ್ನು ಬಿಗಿದಂತೆ ಕೆತ್ತಲಾಗಿದೆ.

### ೨.೫ ಮೊಸಳೆ ಕಾದಾಟ ಶಿಲ್ಪಗಳು

ಕರ್ನಾಟಕದ ಹಲವಾರು ನದಿಗಳಲ್ಲಿ, ಹೊಂಡಗಳಲ್ಲಿ ಮೊಸಳೆಗಳು ವಾಸವಾಗಿರುವುದು ಕಂಡು ಬರುತ್ತದೆ. ಮೊಸಳೆ ಬಲಿಷ್ಠವಾದ ಹಾಗೂ ಭಯಂಕರವಾದ ಪ್ರಾಣಿ. ಈ ಪ್ರಾಣಿಯಿಂದ ಮನುಷ್ಯನಿಗೆ, ದನಕರುಗಳಿಗೆ ಅಪಾಯವೊದಗಿದಾಗ ರಕ್ಷಣೆಗೋಸ್ಕರ ಇವುಗಳೊಂದಿಗೆ ಹೋರಾಡುವುದು ರೂಢಿಯಲ್ಲಿತ್ತು. ಹೀಗೆ ಹೋರಾಡಿ ಪ್ರಾಣ ತೆತ್ತವರ ವಿಷಯದ ಒಂದು ಗ್ರಂಥಲಿಪಿ ಶಿಲ್ಪ ಶಾಸನದಲ್ಲಿದೆ.

---

೨೧೫. ಕಂಪ್ಲಿ, ತಾ. ಗಂಗಾವತಿ, ಜಿ. ಬಳ್ಳಾರಿ

೨೧೬. ಹಂಪಿ, ತಾ. ಹೊಸಪೇಟೆ, ಜಿ. ಬಳ್ಳಾರಿ

೨೧೭. ಪುರದ ಕೇರಿ, ತಾ. ಹಿರೇಕೆರೂರು, ಜಿ. ಹಾವೇರಿ

[illegible]

[illegible]

[illegible]

[illegible]

[illegible]

[illegible]

[illegible]

ಕನಕಪುರ ತಾಲೂಕು ಮುತ್ತತ್ತಿ ದೇವಾಲಯದ ಬಳಿ ಈ ಶಿಲ್ಪವಿದೆ.[೨೧೮]

## ೨.೬ ಜಿಂಕೆ ಬೇಟೆ ಶಿಲ್ಪಗಳು[೨೧೯]

ಜಿಂಕೆಯನ್ನು ಬೇಟೆಯಾಡಲು ಹೋದಾಗ ಎದುರಾಳಿ ಬೇಟೆಗಾರರ ಬಾಣಗಳಿಗೆ ತುತ್ತಾಗಿ ಮಡಿದವರ ಸ್ಮಾರಕವಾಗಿಯೂ ವೀರಮರಣ ಶಿಲ್ಪಗಳನ್ನು ನಿಲ್ಲಿಸಿದ್ದು ಕಂಡು ಬರುತ್ತದೆ.

## ೨.೭ ಕೋಣ ಕಾಳಗದ ಶಿಲ್ಪಗಳು[೨೨೦]

ಕೋಣದೊಂದಿಗೆ ಕಾಳಗ ಮಾಡಿದ ಅಪರೂಪದ ವೀರಮರಣ ಶಿಲ್ಪಗಳೂ ಕಂಡುಬರುತ್ತವೆ. ಇಂಥವುಗಳಲ್ಲಿ ವೀರ ಮತ್ತು ಕೋಣವನ್ನು ಕೆತ್ತಲಾಗಿರುತ್ತದೆ. ಬೆಳಗಾಂವ ಜಿಲ್ಲೆಯ ಉಚಗಾಂವದಲ್ಲಿ ಇಪ್ಪತ್ತು, ಬಾದಾಮಿ ವಸ್ತು ಸಂಗ್ರಹಾಲಯದಲ್ಲಿ ಆರಕ್ಕೂ ಹೆಚ್ಚು, ಹಾವೇರಿ ಜಿಲ್ಲೆಯ ದೇವಗಿರಿಯಲ್ಲಿ ಮೂರು, ಅದೇ ಜಿಲ್ಲೆಯ ದೇವಿಹೊಸೂರಲ್ಲಿ ಮೂರು, ಇದೇ ಜಿಲ್ಲೆಯ ಅರಳೀಕಟ್ಟೆ ಗ್ರಾಮದಲ್ಲಿ ನಾಲ್ಕು, ಹೂಲಿಹಳ್ಳಿಯಲ್ಲಿ ಒಂದು, ಹಾವೇರಿ ಜಿಲ್ಲೆಯ (ಬ್ಯಾಡಗಿ ತಾಲೂಕು) ಮಾಣಗಿಯಲ್ಲಿ ಒಂದು, ಕಿತ್ತೂರಲ್ಲಿ ಒಂದು, ಸಿಡೇನೂರಲ್ಲಿ ಎರಡು, ನಿಡಗುಂದಿಯಲ್ಲಿ ಒಂದು, ಮೋಟಹಳ್ಳಿಯಲ್ಲಿ ಎರಡು, ಹಿರೇಬಿದರಿಯಲ್ಲಿ ಒಂದು ವಿವಿಧ ಬಗೆಯ ವೀರಮರಣ ಶಿಲ್ಪಗಳು ಕಂಡು ಬರುತ್ತವೆ.

ಗುಲಬರ್ಗಾ ಜಿಲ್ಲೆಯಲ್ಲೂ ವಿವಿಧ ಬಗೆಯಲ್ಲಿ ಕೆತ್ತಲಾದ ವೀರಮರಣ ಶಿಲ್ಪಗಳು ಕಂಡು ಬರುತ್ತವೆ. ಕತ್ತಿ, ಗುರಾಣಿ ಹಿಡಿದ ಶಿಲ್ಪಗಳು ಇಮದಾಪುರ, ಬಿಲ್ಲು, ಬಾಣ ಹಿಡಿದ ಶಿಲ್ಪಗಳು ಮುಗುಟಪಲ್ಲಿ ಮತ್ತು ಕುದುರೆ ಸವಾರಿ ಮಾಡುವ ವೀರರ ಶಿಲ್ಪಗಳು ಕರ್ಚಲ, ಈಟಿ ಹಿಡಿದು ನಿಂತ ವೀರರ ಶಿಲ್ಪಗಳು ಗುಂಡೇಪಲ್ಲಿ ಮುಂತಾದಡೆಗಳಲ್ಲಿ ಕಂಡು ಬರುತ್ತವೆ. ಕುರಕುಂಟಾದ ದೇವಾಲಯದ ಹೊರಗೋಡೆಯಲ್ಲಿ ಆನಿಸಿ ಎಂಟು ವೀರಮರಣ ಶಿಲ್ಪಗಳನ್ನಿಡಲಾಗಿದೆ.[೨೨೧] ಜೇವರ್ಗಿ ಮತ್ತು ಕಾಳಗಿಯಲ್ಲೂ ವೀರಗಲ್ಲುಗಳು ನೋಡಲು ಸಿಗುತ್ತವೆ. ಈ ಭಾಗದ ವೀರಮರಣ ಶಿಲ್ಪಗಳಲ್ಲಿ ಮೂರು ಹಂತಗಳಾಗಿ ವಿಂಗಡಿಸಿದವುಗಳು ಕಡಿಮೆ ಮತ್ತು ಗೋಗ್ರಹಣ ಶಿಲ್ಪಗಳಲ್ಲಿ ಗೋವುಗಳನ್ನು ಪ್ರತ್ಯೇಕ ಸಾಲಿನಲ್ಲಿ ತೋರಿಸಿರುವುದು ವಿಶೇಷವಾಗಿ ಕಾಣುತ್ತದೆ.

ರಾಯಚೂರು ಜಿಲ್ಲೆಯ ಚಂದನಕೆರೆ[೨೨೨]ಯಲ್ಲಿ ಎರಡು, ದೇವದುರ್ಗದ ಪೊಲೀಸ ಠಾಣೆಯ ಆವರಣದಲ್ಲಿ ಹತ್ತು ವೀರಗಲ್ಲುಗಳು ಕಂಡು ಬರುತ್ತವೆ. ಇವುಗಳಲ್ಲಿ ಬಹುಪಾಲು ಪ್ರಾಣಿ ಬೇಟೆಯ

---

೨೧೮. ಡಾ. ಡಿ.ವಿ. ಪರಮಶಿವಮೂರ್ತಿ, ಕನ್ನಡ ಶಾಸನ ಶಿಲ್ಪ, ಪುಟ - ೧೦೫

೨೧೯. ..... ಅದೇ ..... ಪುಟ - ೧೦೫

೨೨೦. ನೋಡಿ: ಡಾ. ಎಂ.ಜಿ. ನಾಗರಾಜರಾವ್, ಡಾ. ಪಿ.ವಿ. ಕೃಷ್ಣಮೂರ್ತಿ(ಸಂ) : ಇತಿಹಾಸ ದರ್ಶನ, ಸಂಪುಟ - ೧೫, ಪುಟ - ೭೦

೨೨೧. ವಿವರಗಳಿಗೆ ನೋಡಿ : ಡಾ. ಎಂ.ಜಿ. ನಾಗರಾಜರಾವ್, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ) : ಇತಿಹಾಸ ದರ್ಶನ, ಸಂಪುಟ - ೧೪, ಪುಟ - ೧೩೧

೨೨೨. ಚಂದನಕೆರೆ, ತಾ. ದೇವದುರ್ಗ, ಜಿ. ರಾಯಚೂರು

ಶಿಲ್ಪಗಳಾಗಿವೆ. ಒಂದೆರಡು ಮಾತ್ರ ಯುದ್ಧದ ದೃಶ್ಯವನ್ನು ಹಿಡಿದಿಡಲ್ಪಟ್ಟವುಗಳಾಗಿವೆ. ಹಾಗೇ ಬೆನಕನಕೊಂಡದಲ್ಲಿ ಒಂದು, ಅರಳೀಕಟ್ಟೆ ಗ್ರಾಮದಲ್ಲಿ ಐದು, ಹಾನಗಲ್ ಪರಿಸರದ ಚಿಕ್ಕನಂದಿಹಳ್ಳಿ, ಚೆಲ್ಲೂರು, ಮಾಸಣಗಿ, ಮುಂತಾದಡೆಗಳಲ್ಲಿ ವೀರಮರಣ ಶಿಲ್ಪಗಳನ್ನು ನೋಡಬಹುದು. ಬೆಳಗಾವಿ ಜಿಲ್ಲೆಯ ಅಂಬೇವಾಡಿಯಲ್ಲಿ ಎರಡು, ಗೋಜಿಗದಗ್ರಾಮದಲ್ಲಿ ಹತ್ತು, ಬೆಕ್ಕಿನ ಕೆರೆಯಲ್ಲಿ [೨೨೩] ಎರಡು ವೀರಮರಣ ಶಿಲ್ಪಗಳು ಕಂಡು ಬರುತ್ತವೆ. ಇದೇ ಜಿಲ್ಲೆಯ ರಾಯಭಾಗ, ಚಿಕ್ಕೋಡಿ, ಹಣ್ಣೀಕೇರಿಗಳಲ್ಲೂ ವೀರಮರಣ ಶಿಲ್ಪಗಳು [೨೨೪] ಕಂಡು ಬರುತ್ತವೆ.

## ೩. ಪ್ರಾಣಿ-ಪ್ರಾಣಿಗಳ ಕಾದಾಟ ಶಿಲ್ಪಗಳು

ಒಂದು ಪ್ರಾಣಿಯು ಮತ್ತೊಂದು ಪ್ರಾಣಿಯೊಂದಿಗೆ ಹೋರಾಡುವ ವಿವರಗಳನ್ನು ಕಂಡರಿಸಲ್ಪಟ್ಟ ಶಿಲ್ಪಗಳೂ ನಮ್ಮಲ್ಲಿ ದೊರೆಯುತ್ತವೆ. ಪ್ರಾಣಿಗಳಿಗೂ ವೀರಮರಣದ ಪಟ್ಟ ದೊರಕಿದ್ದು ಕುತೂಹಲಕರವಾಗಿದೆ. ಅಂತಹವುಗಳನ್ನು ಎರಡು ರೀತಿಯಲ್ಲಿ ಕಾಣಬಹುದು. ೩.೧ ನಾಯಿ-ಹಂದಿ ಕಾದಾಟ ಶಿಲ್ಪಗಳು, ೩.೨ ನಾಯಿ-ಹುಲಿ ಕಾದಾಟ ಶಿಲ್ಪಗಳು.

### ೩.೧ ನಾಯಿ-ಹಂದಿ ಕಾದಾಟ ಶಿಲ್ಪಗಳು

ಸಾಮಾನ್ಯವಾಗಿ ಪ್ರಾಣಿಗಳ ಬೇಟೆಯ ಸಂದರ್ಭದಲ್ಲಿ, ವಿಶೇಷವಾಗಿ ಹಂದಿ ಬೇಟೆಯ ಸಂದರ್ಭಗಳಲ್ಲಿ ನಾಯಿಗಳು ಪ್ರಮುಖ ಪಾತ್ರ ವಹಿಸಿದ್ದು ಶಿಲ್ಪಗಳಿಂದ ತಿಳಿದು ಬರುತ್ತದೆ. ಸ್ವಾಮಿ ನಿಷ್ಠೆಗೆ ಹೆಸರಾಗಿರುವ ನಾಯಿಯು ಪ್ರಾಣಿ ಬೇಟೆಯ ಸಂದರ್ಭದಲ್ಲಿ ಸತ್ತರೆ, ಇಂತಹ ಸಂಗತಿಯನ್ನು ಕುರಿತೂ ನಮ್ಮ ಜನಪದರು ಶಿಲ್ಪಗಳನ್ನು ಕೆತ್ತಿಸಿ ನಿಲ್ಲಿಸಿದ್ದಾರೆ. ಅಪರೂಪವಾಗಿ ಸಿಗುವ ಇಂಥ ಶಿಲ್ಪಗಳಲ್ಲಿ ನಾಯಿಯನ್ನು ದೊಡ್ಡದಾಗಿ ಕೆಲವು ಶಿಲ್ಪಗಳಲ್ಲಿ ಕೆತ್ತಲಾಗಿದೆ.[೨೨೫]

### ೩.೨ ನಾಯಿ-ಹುಲಿ ಕಾದಾಟ ಶಿಲ್ಪಗಳು

ಹುಲಿಯನ್ನು ಬೇಟೆಯಾಡುವಾಗಲೂ ನಾಯಿಗಳನ್ನು ನಮ್ಮ ಜನಪದರು ಬಳಸಿದ್ದಿದೆ. ಈ ಸಂದರ್ಭದಲ್ಲಿ ನಾಯಿಗಳು ಮರಣವನ್ನಪ್ಪಿದರೆ ಅವುಗಳ ನೆನಪಿಗಾಗಿ ನಿಲ್ಲಿಸಿರುವ ವೀರಮರಣ ಶಿಲ್ಪಗಳೂ ಇವೆ.[೨೨೬] ಇಂಥ ಶಿಲ್ಪಗಳಲ್ಲೂ ಸೂರ್ಯ, ಚಂದ್ರ, ಲಿಂಗ ಇತ್ಯಾದಿ ವಿವರಗಳೂ ಕೆತ್ತಲ್ಪಟ್ಟಿರುತ್ತವೆ.

ಹೀಗೆ, ನಮ್ಮ ಜನಪದರು ಅನೇಕ ಪ್ರಾಣಿಗಳೊಂದಿಗೆ ಹೋರಾಡಿ ಮಡಿದ ವೀರರ ವಿವರಗಳನ್ನು ಶಿಲ್ಪದಲ್ಲಿ ಕಂಡರಿಸಿದ್ದಾರೆ. ಇಂದು ಅವೆಲ್ಲ ನಮ್ಮ ಜನಪದ ಸಂಸ್ಕೃತಿಯ ಅಪೂರ್ವವಾದ ದಾಖಲೆಗಳಾಗಿ

---

೨೨೩. ಡಾ. ಸೂರ್ಯನಾಥ್ ಕಾಮತ, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ) : ಇತಿಹಾಸ ದರ್ಶನ, ಸಂಪುಟ - ೧೧, ಪುಟ - ೧೬,೧೭
೨೨೪. ..... ಅದೇ .....
೨೨೫. ವಿವರಗಳಿಗೆ ನೋಡಿ : ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನಶಿಲ್ಪ, ಪುಟ - ೧೦೭
೨೨೬. ವಿವರಗಳಿಗೆ ನೋಡಿ : ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನಶಿಲ್ಪ, ಪುಟ - ೧೦೭


ವೀರಮಾಸ್ತಿ ಶಿಲ್ಪ ( ಕೆರೆಹಳ್ಳಿ )


ವೀರಮಾಸ್ತಿ ಶಿಲ್ಪ ( ಕೆರೆಹಳ್ಳಿ )




ಮಾಸ್ತಿ ಶಿಲ್ಪ ( ಸಹಗಮನ )



ಮಾಸ್ತಿ ಶಿಲ್ಪ

ಕಮಲಾಪುರ ವಸ್ತುಸಂಗ್ರಹಾಲಯ



ವೀರಮರಣ ಶಿಲ್ಪ ( ಆನೆಯೊಡನೆ ಹೋರಾಟ ಕಮಲಾಪುರ )



ವೀರಮರಣ ಶಿಲ್ಪ ( ಬಾದಾಮಿ ಮ್ಯೂಸಿಯಂ )



ವೀರ ಮರಣ ಶಿಲ್ಪ ( ಕ.ವಿ.ವಿ. ಹಂಪಿ )



ವೀರಮರಣ ಶಿಲ್ಪ ( ಕಾಳಗಿ )



ವೀರಮರಣ ಶಿಲ್ಪ ( ಮಸ್ಕಿ )



ಇತ್ತೀಚಿನ ವೀರಮರಣ ಶಿಲ್ಪ ( ಚೊಳಚಗುಡ್ಡ)

ನಮ್ಮ ಕಣ್ಣ ಮುಂದಿವೆ.

## ೪. ವೀರಸ್ಥಂಭ ಶಿಲ್ಪಗಳು

ವೀರಸ್ಥಂಭ ಶಿಲ್ಪಗಳು ಅಗಲವಾದ ಫಲಕದ ರೂಪದಲ್ಲಿರದೆ ಚೌಕಾಕಾರದ ಕಂಬದಂತೆ ಇರುತ್ತವೆ. ಇವು ಸುಮಾರು ನಾಲ್ಕರಿಂದ ಏಳು ಅಡಿಯವರೆಗೆ ಎತ್ತರವಾಗಿರುತ್ತವೆ. ಈ ಸ್ಥಂಭದ ನಾಲ್ಕೂ ಬದಿಗೆ ಶಿಲ್ಪಗಳ ಕೆತ್ತನೆಯಿರುತ್ತದೆ. ಇದರಲ್ಲಿ ವೀರನ ವ್ಯಕ್ತಿತ್ವದ ದರ್ಶನಗಳಿರುತ್ತವೆ. ಇಂತಹ ಶಿಲ್ಪಗಳು ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೆಲವೆಡೆ ಸಿಗುತ್ತವೆ.[೨೨೭]

## ೫. ಇತ್ತೀಚಿನ ವೀರಮರಣ ಶಿಲ್ಪಗಳು

ಬಾದಾಮಿ ಸಮೀಪದ ಚೊಳಚಗುಡ್ಡ[೨೨೮] ಗ್ರಾಮದಲ್ಲಿ ಇತ್ತೀಚಿಗೆ ಒಂದು ವೀರಮರಣ ಶಿಲ್ಪವನ್ನು ನಿಲ್ಲಿಸಲಾಗಿದೆ. ಕ್ರಿ.ಶ. ೨೦೦೦ ನೇ ಇಸವಿಯಲ್ಲಿ ಭಾರತ-ಪಾಕಿಸ್ತಾನ ಗಡಿಯಲ್ಲಿ ನಡೆದ ಕಾರ್ಗಿಲ್ ಯುದ್ಧದಲ್ಲಿ ಮಡಿದ ಇದೇ ಗ್ರಾಮದ ವೀರಯೋಧ ಶಿವಬಸಯ್ಯ ಕುಲಕರ್ಣಿಯವರ ಸ್ಮರಣೆಗಾಗಿ ನಿಲ್ಲಿಸಲಾಗಿದೆ. ಇದು ವ್ಯಕ್ತಿ-ವ್ಯಕ್ತಿಗಳ ಕಾದಾಟ ಶಿಲ್ಪವಾಗಿದೆ.

ಚಾಲುಕ್ಯರ ವೀರಮರಣ ಶಿಲ್ಪದ ಮಾದರಿಯಲ್ಲಿ ಈ ಶಿಲ್ಪವನ್ನು ನಿರ್ಮಿಸಲಾಗಿದ್ದು, ಇದು ಮೂರು ಹಂತಗಳಿಂದ ಕೂಡಿದೆ. ಮೇಲಿನೆರಡು ಪಟ್ಟಿಕೆಗಳು ಸಾಂಪ್ರದಾಯಿಕ ಶೈಲಿಯಲ್ಲಿದ್ದರೆ. ಕೆಳಗಿನ ಪಟ್ಟಿಕೆಯಲ್ಲಿನ ಶಿಲ್ಪ ಆಧುನಿಕ ರೂಪದ ಅಳವಡಿಕೆಯಾಗಿದೆ. ಸಮಕಾಲೀನ ಯೋಧನು ಪ್ಯಾಂಟು, ಶರ್ಟು, ಹ್ಯಾಟು ಧರಿಸಿ ಕೈಯಲ್ಲಿ ಬಂದೂಕು ಹಿಡಿದು ವೈರಿಗಳೊಡನೆ ಕಾದಾಡುವಂತೆ ಕೆತ್ತಲಾಗಿದೆ. ಹಿನ್ನೆಲೆಯಲ್ಲಿ ಗುಡ್ಡಗಳು, ಗುಡ್ಡದ ಹಿಂದೆ ವೈರಿ ಸೈನಿಕರು, ಯೋಧನ ಮುಂದುಗಡೆ ಯುದ್ಧ ಟ್ಯಾಂಕರ್, ಬಲ ಹಿಂಬದಿಯಲ್ಲಿ ಭಾರತದ ನಕ್ಷೆ, ತ್ರಿವರ್ಣ ದ್ವಜ, ವೀರನು ವೀರ ಸ್ವರ್ಗವೇರಿದ ಸಂಕೇತ ಮುಂತಾದವುಗಳನ್ನು ಕೆತ್ತಲಾಗಿದೆ. ಆ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಡಾ.ಎಂ.ಎಂ. ಕಲಬುರ್ಗಿಯವರ ನಿರ್ದೇಶನದಂತೆ, ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗ ಬಾದಾಮಿ-ಬನಶಂಕರಿ ಶಾಖೆಯ ಮುಖ್ಯಸ್ಥರಾಗಿರುವ ಡಾ.ಎಸ್.ಸಿ.ಪಾಟೀಲ ಅವರ ಮೇಲ್ವಿಚಾರಣೆಯಲ್ಲಿ ಈ ಶಿಲ್ಪ ನಿರ್ಮಿಸಲಾಗಿದೆ. ಇದನ್ನು ಕಂಡರಿಸಿದವರು ಬಿ.ಬಾಸ್ಕರಾಚಾರ್ಯ ಹಾಗೂ ಕೆ.ಬಿ.ಸಾಬಣ್ಣವರ ಅವರುಗಳು. ಸಾಮಾನ್ಯವಾಗಿ ಕರ್ನಾಟಕದಲ್ಲಿ ಸಾಂಪ್ರದಾಯಿಕ ವೀರಮರಣ ಶಿಲ್ಪಗಳ ನಿರ್ಮಾಣ ಪದ್ಧತಿ ನಿಂತು ಹೋಗಿ ಸುಮಾರು ಮೂರು ನೂರು ವರ್ಷಗಳಾದರೂ ಸಂದಿರಬೇಕು.[೨೨೯] ಆದರೆ ಇಲ್ಲಿ ಮತ್ತೆ ಈ ಪರಂಪರೆ ಮರುಹುಟ್ಟು ಪಡೆದಿದೆ ಎನ್ನಬಹುದಾಗಿದೆ.

---

೨೨೭. ಡಾ. ಡಿ.ವಿ. ಪರಮಶಿವಮೂರ್ತಿ, ಕನ್ನಡ ಶಾಸನ ಶಿಲ್ಪ, ಪುಟ - ೧೦೮

೨೨೮. ಚೊಳಚಗುಡ್ಡ, ತಾ. ಬಾದಾಮಿ, ಜಿ. ಬಾಗಲಕೋಟ

೨೨೯. ಆನಂದ ಕೆ. ಪೂಜಾರ : ಐತಿಹಾಸಿಕ ಬಾದಾಮಿ ಪರಿಚಯ, ಪುಟ - ೭೧

## ವೀರನಾಯಕ ಕುಮಾರರಾಮನ ಶಿಲ್ಪಗಳು

ಕುಮಾರರಾಮ ಒಬ್ಬ ಐತಿಹಾಸಿಕ ವ್ಯಕ್ತಿ. ವೀರನಾಯಕ. ಈತನನ್ನು ಕುರಿತು ಕನ್ನಡದಲ್ಲಿ ಮೂರು ಸಾಂಗತ್ಯ ಕಾವ್ಯಗಳು, ಹಲವಾರು ಶಾಸನ, ವಿಗ್ರಹಗಳು, ಕೈಫಿಯತ್ತುಗಳು, ದೇವಾಲಯಗಳು, ಜಾತ್ರೆ, ಜನಪದ ಸಾಹಿತ್ಯ, ಮೊದಲಾದವು ಸೃಷ್ಟಿಯಾಗಿವೆ.[೨೩೦] ಈತ ಧರ್ಮಶ್ರದ್ಧೆ, ದೇಶಪ್ರೇಮ ಮತ್ತು ಪರಾಕ್ರಮಕ್ಕೆ ಹೆಸರಾಗಿದ್ದವನು. ೧೪ ನೇ ಶತಮಾನದಲ್ಲಿ ಪರಕೀಯರ ಆಕ್ರಮಣದ ವಿರುದ್ಧ ಹೋರಾಡಿ ವೀರತನವನ್ನು ಮೆರೆದವನು. ಹಿಂದೂ ಸಂಸ್ಕೃತಿಯನ್ನು ಮೇಲೆತ್ತಿ ವಿಜಯನಗರ ಸಾಮ್ರಾಜ್ಯಕ್ಕೆ ಪೀಠಿಕೆ ಹಾಕಿದವನೆನ್ನಬೇಕು.

ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಜನಪದರಲ್ಲಿ ಕುಮಾರರಾಮನ ಹೆಸರನ್ನು ಚೆಲುವಿಗೆ, ಬಡಾಯಿಗೆ ಮತ್ತು ಕಾಮಕ್ಕೆ ಸಂಕೇತವಾಗಿ ಬಳಸುತ್ತಾರೆ. ಈತನ ಶಿಲ್ಪಗಳನ್ನು ಶಿಲೆಯಲ್ಲಿ ನಿರ್ಮಿಸಿ ಪೂಜಿಸುತ್ತಾರೆ. ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ಕುಮಾರರಾಮನ ವೈವಿಧ್ಯಮಯ ಶಿಲ್ಪಗಳು ಗೋಚರಿಸುತ್ತವೆ. ವಿಶೇಷವಾಗಿ ಹಾನಗಲ್ಲಿನ[೨೩೧] ಪರಿಸರದಲ್ಲಿ ಕಂಡು ಬರುವ ಕೆಲವು ಶಿಲ್ಪಗಳನ್ನಿಲ್ಲಿ ನೋಡಬಹುದು.

**೧. ಮೂಡೂರು ಶಿಲ್ಪ :**[೨೩೨] ಇಲ್ಲಿ ಕುಮಾರ ರಾಮನ ಶಿಲ್ಪವೊಂದಿದೆ. ಆತ ಅಶ್ವಾರೋಹಿಯಾಗಿದ್ದು ಬಲಗೈಯಲ್ಲಿ ಭಲ್ಲೆಯಿದೆ. ಸುಮಾರು ಒಂದೂವರೆ X ಮೂರು ಅಡಿ ಅಳತೆಯಲ್ಲಿದೆ. ಸ್ಥಳೀಯ ಜನಪದರು ಈ ಶಿಲ್ಪವನ್ನು ಕೋದಂಡರಾಮ ದೇವರೆಂದು ಪೂಜಿಸುತ್ತ ಬಂದಿದ್ದಾರೆ. ಈ ಶಿಲ್ಪ ಸೊಗಸಾಗಿದೆ.

**೨. ಶಿರಗೋಡು ಶಿಲ್ಪ :**[೨೩೩] ಊರ ಹೊರಗಿನ ಪ್ರದೇಶದಲ್ಲಿ ಈ ಶಿಲ್ಪವಿದೆ. ಕುಮಾರರಾಮನ ಇಬ್ಬದಿಯಲ್ಲೂ ಇಬ್ಬರು ಮಹಿಳೆಯರು ನಿಂತಿರುವರು. ಅವರು ಕುಮಾರರಾಮನ ಮಡದಿಯರಿರಬಹುದು. ಅವರ ತಲೆಯ ಹಿಂದೆ ಜ್ವಾಲೆಯ ಅಲೆಗಳನ್ನು ಕಂಡರಿಸಿದ್ದು ಅವು ಚಿತೆಯೇರಿದ ಸತಿಯರ ಶಿಲ್ಪಗಳೆಂದು ಹೇಳಬಹುದು. ಸುಮಾರು ಎರಡು X ಎರಡೂವರೆ ಅಡಿ ಆಕಾರದಲ್ಲಿ ಈ ಶಿಲ್ಪವಿದ್ದು ಭಗ್ನಗೊಂಡಿದೆ.

**೩. ಚಿಕ್ಕಾಂಶಿ ಶಿಲ್ಪ :**[೨೩೪] ಚಿಕ್ಕಾಂಶಿ ಗ್ರಾಮದ ಹೊರವಲಯದಲ್ಲಿ ಈ ಶಿಲ್ಪವಿದೆ. ಇದು ಮಡೂರಿನ ಶಿಲ್ಪದಂತೆ ಭಲ್ಲೆಧಾರಿ ಕುಮಾರರಾಮನ ಶಿಲ್ಪವಾಗಿದೆ. ಅಶ್ವಾರೋಹಿ ಕುಮಾರರಾಮನ

---

೨೩೦. ಡಾ. ಎಂ.ಜಿ. ನಾಗರಾಜ್‌ರಾವ್, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ) : ಇತಿಹಾಸ ದರ್ಶನ-೧೪, ಪುಟ - ೫೫

೨೩೧. ..... ಅದೇ ....., ಪುಟ - ೫೬

೨೩೨. ..... ಅದೇ .....

೨೩೩. ..... ಅದೇ .....

೨೩೪. ಡಾ. ಎಂ.ಜಿ. ನಾಗರಾಜ್‌ರಾವ್, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ) : ಇತಿಹಾಸ ದರ್ಶನ-೧೪, ಪುಟ - ೫೬

[illegible]

[illegible]

[illegible]

[illegible]

[illegible]

[illegible]

[illegible]

[illegible]

ಹಿಂಬದಿಯಲ್ಲಿ ಇಬ್ಬರು ಸ್ಥಾನಿಕ ವೀರರನ್ನು ಶಿಲ್ಪಿಸಲಾಗಿದೆ. ಸ್ಥಳೀಯರು ಇದನ್ನು ಕೋಮರಾಮದೇವರೆಂದು ಈ ಶಿಲ್ಪವನ್ನು ಪೂಜಿಸುತ್ತಾರೆ.

**೪. ಹಿರೇಕಾಂಶಿ ಶಿಲ್ಪ :** [೨೩೫] ಇದೂ ಕೂಡ ಅಶ್ವಾರೋಹಿ ಭಂಗಿಯಲ್ಲಿದ್ದು, ಸ್ಥಳೀಯರಿಂದ ಕೋಮರಾಮದೇವರೆಂದು ಪೂಜಿಸಲ್ಪಡುತ್ತದೆ.

ಹೀಗೆ ಕುಮಾರರಾಮನು ಜನಪದರಲ್ಲಿ ವೀರನಾಗಿ, ದೇವನಾಗಿ ಆರಾಧನೆಗೊಳ್ಳುವವನಾಗಿದ್ದು ಆತನ ಶಿಲ್ಪಗಳು ಅನೇಕ ಕಡೆ ಕಂಡು ಬರುತ್ತವೆ.

## IV. ದಾನ-ದತ್ತಿ ಶಿಲ್ಪಗಳು

ಕೆಲವು ದಾನಗಳನ್ನು ಮಹಾದಾನ ಎಂದು ಶಾಸನಗಳಲ್ಲಿ ಉಲ್ಲೇಖವಿದೆ. ಹತ್ತು ಪ್ರಕಾರದ ವಿವಿಧ ದಾನಗಳು ಮಹಾದಾನಗಳು ಎಂದು ಅಗ್ನಿಪುರಾಣದಲ್ಲಿ ಹೇಳಲಾಗಿದೆ. ಬಂಗಾರ, ಕುದುರೆ, ಎಳ್ಳು, ಆನೆ, ಕನ್ಯೆ, ರಥ, ಮನೆ, ವಧು ಮತ್ತು ಕಂದು ಬಣ್ಣದ ಹಸು ಇವಿಷ್ಟು ಮಹಾದಾನಗಳು. ಆದರೆ ಹಲವು ಪುರಾಣಗಳಲ್ಲಿ ಮಹಾದಾನಗಳು ಹದಿನಾರು [೨೩೬] ಎಂದು ಹೇಳಲಾಗಿದೆ. ನಮ್ಮ ಜನಪದರಿಗೆ ಜೀವನದ ಅನೇಕ ಮೌಲ್ಯಗಳಂತೆ ದಾನವೂ ಒಂದು ಮೌಲ್ಯವಾಗಿದೆ. ದಾನವನ್ನು ನೀಡಿದ ವಿಷಯ ಅನೇಕ ಶಿಲ್ಪಗಳಲ್ಲಿ ಕೆತ್ತಲ್ಪಟ್ಟಿವೆ.

ದಾನ-ದತ್ತಿ ಶಿಲ್ಪಗಳನ್ನು ಶಾಸನ ಸಹಿತ - ಶಾಸನ ರಹಿತ ಶಿಲ್ಪಗಳೆಂದು ವಿಭಾಗಿಸಬಹುದಾದರೂ ಈ ಎರಡೂ ಬಗೆಯ ದಾನ ಶಿಲ್ಪಗಳನ್ನು ಇಲ್ಲಿ ಶಿಲ್ಪದ ದೃಷ್ಟಿಯಿಂದ ಮುಖ್ಯವಾಗಿ ಪರಿಗಣಿಸಲಾಗುವದು. ಧಾರ್ಮಿಕ ದೃಷ್ಟಿಯಿಂದ ಜೈನ, ಶೈವ, ವೈಷ್ಣವ ಎಂದು ಮೂರು ಬಗೆಯಲ್ಲಿ, ಶಿಲ್ಪಗಳ ವೈವಿಧ್ಯತೆಯ ದೃಷ್ಟಿಯಿಂದ ಧರ್ಮಸಮನ್ವಯ ದಾನ ಶಿಲ್ಪವೆಂದು, ವಿಶೇಷತೆಯ ದೃಷ್ಟಿಯಿಂದ ಗೋ ಸಹಸ್ರ ದಾನಶಿಲ್ಪವೆಂದು ವಿಂಗಡಿಸಬಹುದು. [೨೩೭] ಅಧ್ಯಯನದ ದೃಷ್ಟಿಯಿಂದ ಈ ಬಗೆಯ ವಿಂಗಡಣೆ ಅಗತ್ಯವಾಗುತ್ತದೆ.

ದಾನಶಿಲ್ಪಗಳಲ್ಲಿ ಪಠ್ಯವನ್ನು ಹೊರತಾದ ಶಿಲ್ಪಗಳ ವಿವರ ಕಷ್ಟಸಾಧ್ಯ. ಆದರೆ ಶಿಲ್ಪದ ಕೌಶಲ್ಯದ ದೃಷ್ಟಿಯಿಂದ ಅಧ್ಯಯನ ಸರಳವಾಗಬಹುದು. ಏಕೆಂದರೆ ಸ್ಮಾರಕ ಶಿಲ್ಪಗಳಲ್ಲಿ ಪ್ರಸಂಗಗಳನ್ನು ನಿರೂಪಿಸುವಂತೆ ದಾನದ ವಿಷಯಗಳನ್ನು ದಾನ ಶಿಲ್ಪಗಳಲ್ಲಿ ದೃಷ್ಯಾತ್ಮಕವಾಗಿ ನಿರೂಪಿಸಲು ಕಷ್ಟಸಾಧ್ಯ. ಹೀಗಾಗಿ ಸಾಂಕೇತಿಕವಾಗಿ ದಾನದ ಮಹತ್ವ, ಶಿವಸಾನಿಧ್ಯ ಮತ್ತು ಇನ್ನಿತರ ಅಂಶಗಳನ್ನು ಮಾತ್ರ

---

೨೩೫. ಡಾ. ಎಂ.ಜಿ. ನಾಗರಾಜ್‌ರಾವ್, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ) : ಇತಿಹಾಸ ದರ್ಶನ-೧೪, ಪುಟ - ೫೬

೨೩೬. ವಿವರಗಳಿಗೆ ನೋಡಿ : ಡಾ. ಸೂರ್ಯನಾಥ್ ಕಾಮತ, ಡಾ. ಪಿ.ವಿ. ಕೃಷ್ಣಮೂರ್ತಿ (ಸಂ) : ಇತಿಹಾಸ ದರ್ಶನ, ಸಂಪುಟ - ೧೦, ಪುಟ - ೧೦೮

೨೩೭. ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನಶಿಲ್ಪ, ಪುಟ -೫೫

[illegible]

ನಿರೂಪಿಸಲು ಸಾಧ್ಯ. ದಾನ-ದತ್ತಿ ಶಿಲ್ಪಗಳನ್ನು ೧. ಜೈನ ದಾನ-ದತ್ತಿ ಶಿಲ್ಪಗಳು, ೨. ಶೈವ ದಾನ-ದತ್ತಿ ಶಿಲ್ಪಗಳು, ೩. ವೈಷ್ಣವ ದಾನ-ದತ್ತಿ ಶಿಲ್ಪಗಳು ಎಂದು ಮುಖ್ಯವಾಗಿ ಮೂರು ಬಗೆಯಾಗಿ ವಿಂಗಡಿಸಿ ಅಧ್ಯಯನ ಮಾಡಲಾಗಿದೆ.

### ೧. ಜೈನ ದಾನ ದತ್ತಿ ಶಿಲ್ಪಗಳು

ಕರ್ನಾಟಕದ ಪ್ರಾಚೀನ ಧರ್ಮಗಳಲ್ಲಿ ಒಂದಾದ ಜೈನ ಧರ್ಮದಲ್ಲಿ ದಾನಕ್ಕೆ ಬಹಳ ಮಹತ್ವವನ್ನು ನೀಡಲಾಗಿದೆ. ಜೈನಾಗಮಗಳಲ್ಲಿ ಲೌಕಿಕ ದಾನ ಮತ್ತು ಪಾರಮಾರ್ಥಿಕ ದಾನವೆಂದು ಎರಡು ಬಗೆಯಿದೆ. ಇಲ್ಲಿ ಜೈನರ ದಾನ-ದತ್ತಿ ಶಿಲ್ಪದ ಬಗೆಗೆ ಚರ್ಚಿಸಲಾಗಿದೆ. ಜೈನರ ದಾನ-ದತ್ತಿ ಶಿಲ್ಪಗಳಲ್ಲಿ ಸಾಮಾನ್ಯವಾಗಿ ತೀರ್ಥಂಕರನು ನಿಂತ ಅಥವಾ ಕುಳಿತ ಭಂಗಿಯ ಶಿಲ್ಪವಿರುತ್ತದೆ. ಎಡಬಲಗಳಲ್ಲಿ ಸೂರ್ಯ, ಚಂದ್ರರನ್ನು ಕೆತ್ತಲಾಗಿರುತ್ತದೆ. ಜಿನನ ತಲೆಯ ಮೇಲುಗಡೆ ಮುಕ್ಕೊಡೆಯನ್ನು,ಕೊಡೆಯ ಎರಡೂ ಬದಿಗೆ ಚಾಮರಗಳನ್ನು ಶಿಲ್ಪಿಸಲಾಗಿರುತ್ತದೆ. ಇವು ಶಿಲ್ಪಗಳ ಸಾಮಾನ್ಯ ವಿವರಗಳು. ಲಕ್ಕುಂಡಿಯ[೨೩೮] ಒಂದು ಶಿಲ್ಪ ಈ ವಿವರಗಳಿಗೆ ನಿದರ್ಶನವಾಗಿದೆ. ಕೆಲವು ಶಿಲ್ಪಗಳಲ್ಲಿ ಎಡ ಭಾಗದಲ್ಲಿ ಆನೆ, ಬಲ ಭಾಗದಲ್ಲಿ ಆಕಳ ಶಿಲ್ಪವಿರುತ್ತದೆ. ಲಕ್ಕುಂಡಿಯ[೨೩೯] ಅತ್ತಿಮಬ್ಬೆ ಶಾಸನ ಶಿಲ್ಪವೊಂದರಲ್ಲಿ ಶಿಲ್ಪ ಭಾಗವನ್ನು ಮೂರು ಮಂಟಪಗಳನ್ನಾಗಿ ವಿಭಾಗಿಸಿ ಮಧ್ಯದ ಮಂಟಪದಲ್ಲಿ ಯಕ್ಷರಿಂದ ಕೂಡಿದ ಜಿನ ಮೂರ್ತಿಯೂ, ಎಡ ಹಾಗೂ ಬಲ ಭಾಗಗಳ ಮಂಟಪದಲ್ಲಿ ಹಾಲುಣಿಸುತ್ತಿರುವ ಆಕಳಿನ ಶಿಲ್ಪವೂ ಇದೆ.

ಜೈನರಿಗೆ ದಾನ ನೀಡಿದ್ದ ಭೂಮಿಯ ಮೇರೆಯನ್ನು ಗುರುತಿಸಲು ಮುಕ್ಕೊಡೆಯ ಶಿಲ್ಪವನ್ನು ನಿಲ್ಲಿಸುತ್ತಿದ್ದರು. ಇವುಗಳನ್ನು ಮುಕ್ಕೊಡೆ ಕಲ್ಲು ಎಂದೇ ಕರೆಯಲಾಗುತ್ತದೆ. ವೈಷ್ಣವರಿಗೆ ನೀಡಿದ ದಾನವನ್ನು ವಾಮನ ಮುದ್ರೆ ಕಲ್ಲು, ಶೈವರಿಗೆ ನೀಡಿದ ದಾನವನ್ನು ಲಿಂಗಮುದ್ರೆ ಕಲ್ಲುಗಳ ಮುಖಾಂತರ ಗುರುತಿಸುವ ರೀತಿಯಲ್ಲಿಯೇ ಜೈನರಿಗೆ ನೀಡಿದ ದಾನವನ್ನು ಮುಕ್ಕೊಡೆ ಕಲ್ಲುಗಳ ಮುಖಾಂತರ ಗುರುತಿಸಬಹುದು.[೨೪೦] ಲಕ್ಕುಂಡಿಯ[೨೪೧] ಒಂದು ಮುಕ್ಕೊಡೆ ಕಲ್ಲಿನಲ್ಲಿ ಶಾಪಾಶಯದ ಧ್ವನಿರೂಪವಾದ ಕೈಗತ್ತಿಯನ್ನು ಹಾಗೂ ಹಾಲೂಡಿಸುತ್ತಿರುವ ಹಸುವನ್ನು ಕೆತ್ತಲಾಗಿದೆ. ಇದರ ಅರ್ಥ ಈ ದಾನವನ್ನು ಅಪಹರಿಸಿದರೆ ಗೋವನ್ನು ಕೊಂದ ದೋಷ ಬರುತ್ತದೆ ಎಂಬುದಾಗಿದೆ.

### ೨. ಶೈವ ದಾನ-ದತ್ತಿ ಶಿಲ್ಪಗಳು

ಈ ವಿಭಾಗದಲ್ಲಿ ಶೈವ ಮತ್ತು ವೀರಶೈವವೆಂಬ ಭೇದವನ್ನು ಮಾಡದೆ ಈ ಶಿಲ್ಪಗಳನ್ನು ಪರಿಗಣಿಸಬೇಕು. ಏಕೆಂದರೆ ಇವೆರಡರಲ್ಲಿ ವ್ಯತ್ಯಾಸಗಳು ಎದ್ದು ಕಾಣುವ ಹಾಗೆ ಇಲ್ಲ. ಶೈವ ದಾನ

---

೨೩೮. ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನಶಿಲ್ಪ, ಪುಟ -೫೭

೨೩೯. ..... ಅದೇ ....., ಪುಟ -೫೯

೨೪೦. ಆರ್. ಶೇಷಶಾಸ್ತ್ರಿ : ಶಾಸನ ಪರಿಚಯ, ಪುಟ - ೪೩

೨೪೧. ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನಶಿಲ್ಪ, ಪುಟ -೬೦

[illegible]

[illegible]

[illegible]

[illegible]

[illegible]

[illegible]

ಶಿಲ್ಪಗಳನ್ನು ೨.೧ ಶಿವಲಿಂಗವಿರುವ ಶಿಲ್ಪಗಳು, ೨.೨ ಶಿವಲಿಂಗದ ಜೊತೆ ಆಕಳು ಮತ್ತು ನಂದಿಯ ಶಿಲ್ಪಗಳು, ೨.೩ ಮಂಟಪದಲ್ಲಿನ ಶಿವಲಿಂಗ ಭಕ್ತ ಹಾಗೂ ನಂದಿ ಶಿಲ್ಪಗಳು, ೨.೪ ಶಿವಲಿಂಗ - ಭಕ್ತ - ಆಕಳ ಶಿಲ್ಪಗಳು, ೨.೫ ಲಿಂಗ ಮುದ್ರೆ ಶಿಲ್ಪಗಳು ಎಂದೂ ವಿಂಗಡಿಸಬಹುದು.[೨೪೨]

**೨.೧ ಶಿವಲಿಂಗವಿರುವ ಶಿಲ್ಪಗಳು :** ಶೈವ ಧರ್ಮಕ್ಕೆ ಸಂಬಂಧಿಸಿದ ದಾನ ದತ್ತಿ ಶಿಲ್ಪಗಳಲ್ಲಿ ಶಿವಲಿಂಗದ ಶಿಲ್ಪ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಲಿಂಗದ ಅಕ್ಕ ಪಕ್ಕ ಸೂರ್ಯ ಚಂದ್ರರ ಚಿತ್ರವಿದ್ದು, ಕೆಲವು ಶಿಲ್ಪಗಳಲ್ಲಿ ಲಿಂಗದ ಕೊರೆ ಚಿತ್ರಗಳಿರುತ್ತವೆ. ದೇವಗಿರಿಯಲ್ಲಿರುವ[೨೪೩] ಒಂದು ಶಾಸನ ಶಿಲ್ಪದ ಮೇಲೆ ಶಿವಲಿಂಗವನ್ನು ಬಿಡಿಸಲಾಗಿದ್ದು, ಹೂವಿನಿಂದ ಅಲಂಕೃತವಾದ ಕಿರೀಟವನ್ನು ಧರಿಸಲಾಗಿದೆ.

**೨.೨ ಶಿವಲಿಂಗದ ಜೊತೆ ಆಕಳು ಮತ್ತು ನಂದಿಯ ಶಿಲ್ಪಗಳು :** ಕೆಲವು ಶಿಲ್ಪಗಳಲ್ಲಿ ಶಿವಲಿಂಗದ ಪಕ್ಕದಲ್ಲಿ ಕರುವಿಗೆ ಹಾಲು ಕುಡಿಸುತ್ತಿರುವ ಹಸುವಿನ ಶಿಲ್ಪವಿರುತ್ತದೆ. ಹಂಪಿಯ[೨೪೪] ವಿರೂಪಾಕ್ಷ ದೇವಾಲಯದ ಮುಂದಿರುವ ಕೃಷ್ಣ ದೇವರಾಯನ ಶಾಸನ ಶಿಲ್ಪವೊಂದರಲ್ಲಿ ಪೀಠವೊಂದರ ಮೇಲೆ ಕುಳಿತ ನಂದಿಯನ್ನು ಮಾತ್ರ ಬಿಡಿಸಲಾಗಿದೆ.

**೨.೩ ಮಂಟಪದಲ್ಲಿ ಶಿವಲಿಂಗ- ಭಕ್ತ ಮತ್ತು ನಂದಿಯ ಶಿಲ್ಪಗಳು :** ಕೆಲವು ಶಿಲ್ಪಗಳಲ್ಲಿ ಮಂಟಪದಲ್ಲಿ ಶಿವಲಿಂಗವನ್ನು ಸ್ಥಾಪಿಸಿ, ಪೂಜೆ ಮಾಡುತ್ತಿರುವ ಭಕ್ತನ ಶಿಲ್ಪವಿದೆ. ಇಲ್ಲಿನ ಮಂಟಪಗಳಲ್ಲಿ ದೇವಾಲಯಗಳಿರುವಂತೆ ಗೋಪುರವನ್ನು ಶಿಲ್ಪಿಸಲಾಗಿದ್ದು ಮಂಟಪದ ಎಡ ಬಲದಲ್ಲಿ ನಂದಿ ಹಾಗೂ ಹಸುವಿನ ಶಿಲ್ಪವಿರುತ್ತದೆ. ಇವಕ್ಕೆ ಉದಾಹರಣೆಯೆಂದರೆ ಕಾಗಿನೆಲೆಯ[೨೪೫] ಒಂದು ಶಿಲ್ಪ. ಇದರಲ್ಲಿ ಶಿವಲಿಂಗ ಪಾರ್ಶ್ವದ ಮಂಟಪದಲ್ಲಿ ಬ್ರಹ್ಮ ಹಾಗೂ ವಿಷ್ಣುವನ್ನು ಕೆತ್ತಲಾಗಿದೆ.

**೨.೪ ಶಿವಲಿಂಗ- ಭಕ್ತ -ಆಕಳ ಶಿಲ್ಪಗಳು :** ಹೆಚ್ಚಾಗಿ ಶೈವ ದಾನ ಶಿಲ್ಪಗಳಲ್ಲಿ ಶಿವಲಿಂಗ, ಅದರ ಬಳಿ ನಿಂತ ಅಥವಾ ಕುಳಿತ ಭಕ್ತ ಮತ್ತು ಹಸುವಿನ ಶಿಲ್ಪ ಕಂಡು ಬರುತ್ತವೆ. ಕಾಗಿನೆಲೆ,[೨೪೬] ಹಂಪಿ[೨೪೭] ಮೊದಲಾದೆಡೆ ಈ ರೀತಿಯ ಶಿಲ್ಪ ಕಂಡು ಬರುತ್ತವೆ.

**೨.೫ ಲಿಂಗಮುದ್ರೆ ಶಿಲ್ಪಗಳು :** ಶೈವರಿಗೆ ದಾನ ನೀಡಿದ ಭೂಮಿಯನ್ನು ಗುರುತಿಸಲು ಶಿವಲಿಂಗದ ಚಿತ್ರವುಳ್ಳ ಕಲ್ಲುಗಳನ್ನು ನೆಡುತ್ತಿದ್ದರು. ಇಂತಹ ಕಲ್ಲುಗಳೇ ಲಿಂಗಮುದ್ರೆ ಶಿಲ್ಪಗಳು.

---

೨೪೨. ..... ಅದೇ ......

೨೪೩. ..... ಅದೇ ....., ಪುಟ - ೬೧

೨೪೪. ಹಂಪಿ : ತಾ. ಹೊಸಪೇಟೆ, ಜಿ. ಬಳ್ಳಾರಿ

೨೪೫. ಕಾಗಿನೆಲೆ, ತಾ. ಬ್ಯಾಡಗಿ, ಜಿ. ಹಾವೇರಿ

೨೪೬. ಕಾಗಿನೆಲೆ, ತಾ. ಬ್ಯಾಡಗಿ, ಜಿ. ಹಾವೇರಿ

೨೪೭. ಹಂಪಿ : ತಾ. ಹೊಸಪೇಟೆ, ಜಿ. ಬಳ್ಳಾರಿ

[illegible]

[illegible]

[illegible]

[illegible]

[illegible]

[illegible]

[illegible]

ಹಂಸಭಾವಿ,[೨೪೮] ಕಲಕೇರಿ, ತಿಳವಳ್ಳಿ,[೨೪೯] ಹಿರೇಕೊಣತಿ,[೨೫೦] ದೇವಗಿರಿ[೨೫೧] ಮುಂತಾದೆಡೆ ಇಂಥ ಶಿಲ್ಪಗಳನ್ನು ಕಾಣಬಹುದು.

## ೩. ವೈಷ್ಣವ ದಾನ-ದತ್ತಿ ಶಿಲ್ಪಗಳು

ಕರ್ನಾಟಕದ ಪ್ರಾಚೀನ ಧರ್ಮಗಳಲ್ಲಿ ವೈಷ್ಣವ ಧರ್ಮವೂ ಒಂದು. ಅನೇಕ ರಾಜ ಮನೆತನಗಳು ಈ ಧರ್ಮವನ್ನು ಅನುಸರಿಸಿದ್ದವು. ಈ ಧರ್ಮದ ದಾನ ಶಿಲ್ಪಗಳ ಮೇಲೆ ಸಾಮಾನ್ಯವಾಗಿ ಶಂಖ, ಚಕ್ರ ಹಾಗೂ ಕೆಲವು ಶಿಲ್ಪಗಳಲ್ಲಿ ವೈಷ್ಣವ ದೇವತೆಗಳು, ಗರುಡ ಮೊದಲಾದ ಶಿಲ್ಪಗಳೂ ಇರುತ್ತವೆ. ವೈಷ್ಣವ ದಾನ ಶಿಲ್ಪಗಳನ್ನು ಅ. ಶಂಖ, ಚಕ್ರ ಮತ್ತು ನಾಮದ ಶಿಲ್ಪ, ಹಾಗೂ ಆ. ವೈಷ್ಣವ ದೇವತೆಗಳ ಶಿಲ್ಪ ಎಂದು ಎರಡು ಮುಖ್ಯ ಭಾಗಗಳಾಗಿ ಮಾಡಬಹುದು.[೨೫೨]

**ಅ. ಶಂಖ, ಚಕ್ರ ಮತ್ತು ನಾಮದ ಶಿಲ್ಪಗಳು :** ವೈಷ್ಣವ ಧರ್ಮದ ಸಂಕೇತ ವಿಷ್ಣುವಿನ ಆಯುಧಗಳಾದ ಶಂಖ ಮತ್ತು ಚಕ್ರಗಳು. ಇವು ಆ ಧರ್ಮದ ಲಾಂಛನವೂ ಆಗಿವೆ. ಹಂಪಿ, ಆನೆಗೊಂದಿ ಮುಂತಾದೆಡೆಗಳಲ್ಲಿನ ದಾನಶಿಲ್ಪಗಳಲ್ಲಿ ಈ ಚಿನ್ಹೆಗಳನ್ನು ಕೆತ್ತಿರುವುದನ್ನು ಕಾಣಬಹುದು. ಆನೆಗೊಂದಿಯ ಶಾಸನದಲ್ಲಿ ಶಂಖ, ಚಕ್ರದ ಮೇಲ್ಭಾಗದಲ್ಲಿ ನಾಮವನ್ನು ಬೆಸೆಯಲಾಗಿದೆ.[೨೫೩]

**ಆ. ವೈಷ್ಣವ ದೇವತೆಗಳ ಶಿಲ್ಪಗಳು :** ಕೆಲವು ಶಿಲ್ಪಗಳಲ್ಲಿ ಶಂಖ, ಚಕ್ರದ ಬದಲಿಗೆ ವೈಷ್ಣವ ಧರ್ಮದ ದೇವರುಗಳ ಶಿಲ್ಪವಿರುತ್ತದೆ. ಮುಖ್ಯವಾಗಿ ವಿಷ್ಣು, ಗರುಡ, ಲಕ್ಷ್ಮಿ, ಅಪ್ಸರೆಯರು, ರಾಮ, ಹನುಮಂತ ಮುಂತಾದ ದೇವತಾ ಶಿಲ್ಪಗಳು ಕೆತ್ತಲ್ಪಟ್ಟಿರುತ್ತವೆ. ಹಾವೇರಿ ತಾಲೂಕಿನ ಸಂಗನೂರಿನಲ್ಲಿ ಒಂದು ಶಿಲ್ಪದಲ್ಲಿ ಹಸನ್ಮುಖಳಾಗಿ ಕುಳಿತಿರುವ ಲಕ್ಷ್ಮಿಯ ಶಿಲ್ಪ[೨೫೪]ವಿರುವುದನ್ನು ಕಾಣಬಹುದು.

**ವಾಮನಮುದ್ರೆ ಕಲ್ಲುಗಳು :**[೨೫೫] ವೈಷ್ಣವರಿಗೆ ದಾನ ನೀಡಿದ ಭೂಮಿಯನ್ನು ಗುರುತಿಸಲು ನೆಡುತ್ತಿದ್ದ ಕಲ್ಲುಗಳೇ ವಾಮನಮುದ್ರೆ ಕಲ್ಲುಗಳು. ಬಹುತೇಕ ವಾಮನಮುದ್ರೆ ಕಲ್ಲುಗಳಲ್ಲಿ ಛತ್ರಿ ಹಿಡಿದ ಬ್ರಾಹ್ಮಣನನ್ನು ಶಿಲ್ಪಿಸಿರುತ್ತಾರೆ. ಇದು ವಿಷ್ಣುವು ಬ್ರಾಹ್ಮಣನ ವೇಷದಿಂದ ಬಲಿ ಚಕ್ರವರ್ತಿಯ ಬಳಿ ದಾನ ಬೇಡಿದುದರ ಸಂಕೇತವಾಗಿದೆ. ಈ ರೀತಿಯ ವಾಮನ ಮುದ್ರೆ ಕಲ್ಲುಗಳು ಹೆಚ್ಚಾಗಿ ರೇಖಾಚಿತ್ರದಲ್ಲೇ ಕೊರೆಯಲಾಗಿರುತ್ತದೆ.

---

೨೪೮. ಹಂಸಬಾವಿ, ತಾ. ಹಿರೇಕೆರೂರು, ಜಿ. ಹಾವೇರಿ
೨೪೯. ಕಲಕೇರಿ, ತಿಳವಳ್ಳಿ, ತಾ. ಹಾನಗಲ್, ಜಿ. ಹಾವೇರಿ
೨೫೦. ಹಿರೇಕೊಣತಿ, ತಾ. ಹಿರೇಕೆರೂರು, ಜಿ. ಹಾವೇರಿ
೨೫೧. ದೇವಗಿರಿ, ತಾ. ಜಿ.ಹಾವೇರಿ
೨೫೨. ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನಶಿಲ್ಪ, ಪುಟ - ೬೪
೨೫೩. ..... ಅದೇ ....., ಪುಟ -೬೫
೨೫೪. ..... ಅದೇ ....., ಪುಟ -೬೫

[illegible]

[illegible]

[illegible]

[illegible]

[illegible]

[illegible]

[illegible]

**ಗೋಸಾಸ ದಾನ ಶಿಲ್ಪಗಳು :** [೨೫೬] ಗೋವುಗಳನ್ನು ದಾನ ಮಾಡಿದ ಸಂದರ್ಭದಲ್ಲಿ ನಿಲ್ಲಿಸುತ್ತಿದ್ದ ಶಿಲ್ಪಗಳನ್ನು ಗೋಸಾಸ ಶಿಲ್ಪಗಳೆಂದು ಕರೆಯುತ್ತಾರೆ. ದಾನಗಳಲ್ಲೇ ಶ್ರೇಷ್ಠವಾದ ದಾನವೆಂದರೆ ಗೋದಾನ ಎಂದು ಪ್ರಾಚೀನ ಜನಪದರ ಅಭಿಮತ. ಮಹಾ ದಾನಗಳಲ್ಲಿ ಗೋಸಹಸ್ರದಾನವೂ ಒಂದು ಪ್ರಮುಖ ದಾನವಾಗಿದೆ. [೨೫೭] ಗೋಸಾಸ ಎಂಬುದು ಗೋಸಹಸ್ರದ ತದ್ಭವ ರೂಪವೆಂದು ವಿದ್ವಾಂಸರು ತೀರ್ಮಾನಿಸಿದ್ದಾರೆ. ಈ ಬಗೆಯ ಶಿಲ್ಪಗಳ ಬಗೆಗೆ ಮೊದಲ ಬಾರಿಗೆ ವಿಸ್ತೃತವಾದ ಲೇಖನ ಪ್ರಕಟಿಸಿದ ಕೀರ್ತಿ ಡಾ.ಎಂ.ಎಂ.ಕಲಬುರ್ಗಿ [೨೫೮] ಅವರದು.

ಗೋಸಾಸ ಶಿಲ್ಪಗಳು ಫಲಕದ ಆಕಾರದಲ್ಲಿರದೆ ಸ್ತಂಭದ ಮಾದರಿಯಲ್ಲಿರುತ್ತವೆ. ಆದರೆ ಸ್ತಂಭದಂತೆ ತೀರ ಎತ್ತರವಾಗಿರುವುದಿಲ್ಲ. ಸುಮಾರು ೩ - ೪ ಅಡಿ ಮಾತ್ರ ಎತ್ತರವಾಗಿರುತ್ತವೆ. ತಳಭಾಗವು ಚೌಕಾಕಾರದಲ್ಲಿ ಮತ್ತು ಆಯತಾಕಾರದಲ್ಲಿ ಎರಡೂ ರೀತಿಯಲ್ಲಿ ದೊರೆಯುತ್ತವೆ. ಉಳಿದ ಮೇಲ್ಭಾಗವು ಅರ್ಧವೃತ್ತಾಕಾರದ ತುದಿಯನ್ನು ಹೊಂದಿದ್ದು, ಆಯತಾಕಾರದ ಮೈಯನ್ನು ಹೊಂದಿರುತ್ತವೆ. ಹೂಲಿಹಳ್ಳಿ [೨೫೯] ಹಾಗೂ ಹೊಲಬಿಕೊಂಡ [೨೬೦] ಮುಂತಾದೆಡೆ ಗೋಸಾಸ ಶಿಲ್ಪಗಳು ಗುಂಪು ಗುಂಪಾಗಿವೆ. ಹೂಲಿಹಳ್ಳಿ ಗ್ರಾಮದ ಹತ್ತಿರವಿರುವ ಹೊಲಗಳ ಮಧ್ಯೆ ರಾಮಲಿಂಗೇಶ್ವರ ಗುಡಿಯಿದ್ದು ಇದರ ಹತ್ತಿರ ಅನೇಕ ಗೋಸಾಸ ಶಿಲ್ಪಗಳಿವೆ. ಇವು ಮೂರು ಅಡಿ ಎತ್ತರ ಹಾಗೂ ಎರಡು ಅಡಿ ಅಗಲವಿದ್ದು ಮೇಲ್ಭಾಗದಲ್ಲಿ ಕಳಸಗಳನ್ನು ಶಿಲ್ಪಿಸಲಾಗಿದೆ. ಸಿರಗಂಬಿ, [೨೬೧] ಹುನಗುಂದ ತಾಲೂಕಿನ ಐಹೊಳೆಯಲ್ಲೂ ಸಾಮಾನ್ಯ ಶೈಲಿಯ ಗೋಸಾಸ ಶಿಲ್ಪಗಳು ಕಂಡು ಬರುತ್ತವೆ.

ಧಾರವಾಡ ಜಿಲ್ಲೆಯ ಮುತ್ತಳ್ಳಿಯಲ್ಲಿ ಎರಡು, ಹಾವೇರಿ ತಾಲೂಕು ದೇವಿಹೊಸೂರಿನಲ್ಲಿ ಆರು, ದೇವಗಿರಿಯಲ್ಲಿ ಎಂಟು, ಹಳೇರಿತ್ತಿಯಲ್ಲಿ ಎರಡು, ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಸೊಡಂಬಿಯಲ್ಲಿ ಮೂರು, ರಾಣೇಬೆನ್ನೂರು ತಾಲೂಕು ಹಳೇಹೊನ್ನತ್ತಿಯಲ್ಲಿ ಒಂದು, ಹಿರೇ ಮಾಗನೂರಿನಲ್ಲಿ ಒಂಭತ್ತು, ಹಿರೇಕೆರೂರಿನಲ್ಲಿ ಎರಡು, ಹಿರೇಕೆರೂರು ತಾಲೂಕು ಸಾತೇನಹಳ್ಳಿ, ಶಿಗ್ಗಾಂವ ತಾಲೂಕು ಹನುಮನಹಳ್ಳಿಯಲ್ಲಿ ಮೂರು, ಕುಂದಗೋಳ ತಾಲೂಕು ಗುಡಗೇರಿಯಲ್ಲಿ ಒಂದು, [೨೬೨] ಹೀಗೆ ಗೋಸಾಸ ಶಿಲ್ಪಗಳು ಕಂಡು ಬರುತ್ತವೆ.

---

೨೫೫. ಡಾ. ಸೂರ್ಯನಾಥ್ ಕಾಮತ, ಡಾ. ದೇವರಕೊಂಡಾರೆಡ್ಡಿ (ಸಂ) : ಇತಿಹಾಸ ದರ್ಶನ, ಸಂಪುಟ -೯, ಪುಟ - ೧೨೮

೨೫೬. ವಿವರಗಳಿಗೆ ನೋಡಿ : ಡಾ. ಎಂ.ಎಂ. ಕಲಬುರ್ಗಿ : ಮಾರ್ಗ, ಸಂಪುಟ - ೨, ಪುಟ - ೧೧

೨೫೭. ..... ಅದೇ ....., ಪುಟ - ೧೨


೨೫೮. ..... ಅದೇ .....

೨೫೯. ಹೂಲಿಹಳ್ಳಿ, ತಾ. ರಾಣೇಬೆನ್ನೂರು, ಜಿ. ಹಾವೇರಿ

೨೬೦. ಹಲಬಿಕೊಂಡ, ತಾ. ಹಿರೇಕೆರೂರು, ಜಿ. ಧಾರವಾಡ

೨೬೧. ಸಿರಗುಂಬಿ, ತಾ. ಹಿರೇಕೆರೂರು, ಜಿ. ಧಾರವಾಡ


೨೬೨. ಡಾ. ಸೂರ್ಯನಾಥ್ ಕಾಮತ, ಡಾ. ದೇವರಕೊಂಡಾರೆಡ್ಡಿ (ಸಂ) : ಇತಿಹಾಸ ದರ್ಶನ, ಸಂಪುಟ -೯, ಪುಟ - ೮೦,೮೧



ಮಾಸ್ತಿ ಶಿಲ್ಪ ( ಕ. ವಿ. ಹಂಪಿ )




ಮಾಸ್ತಿ ಶಿಲ್ಪಗಳು ( ಹಿರೇಕೊಣತಿ )




ಮಾಸ್ತಿ ಶಿಲ್ಪ ( ಸಹಗಮನ )




ಪೂರ್ಣಸತಿ ಶಿಲ್ಪಗಳು



ವೀರಮರಣ ಶಿಲ್ಪ ( ಆನೆಗೆ ಬಲಿಯಾದುದು, ಧಾರವಾಡ )




ಹರಕೆ ಬಲಿದಾನದ ಶಿಲ್ಪ ( ಸೂರ್ಯಗ್ರಹಣದ ಸಂಧರ್ಭ, ಧಾರವಾಡ )




ವೀರಮರಣ ಶಿಲ್ಪ ( ದನದ ರಕ್ಷಣೆಗೆಂದು ಹುಲಿಯ ಜೊತೆ ಹೋರಾಟ , ನಿಜಗಲ್ಲು)




ವೀರ ಮರಣ ಶಿಲ್ಪ ( ಹುಲಿಬೇಟೆ ಹಾಲಳ್ಳಿ )



ವೀರಮರಣ ಶಿಲ್ಪ ( ಹಾವಿನೊಂದಿಗೆ ಹೋರಾಟ )



ವೀರಮರಣ ಶಿಲ್ಪ ( ಪೆಣ್ಬುಯ್ಯಲ್, ಅಬ್ಬಲೂರು )



ಗೋಸಾಸ ಶಿಲ್ಪ ( ಆನೆಗೊಂದಿ )

## ಶಿಲಾ ತೇರು ಶಿಲ್ಪ

ತೇರು ಎಂದರೆ ನಾಲ್ಕು ಗಾಲಿ ಜೋಡಿಸಿದ ಚಿಕ್ಕದೇವಾಲಯವಿದ್ದಂತೆ ಇರುತ್ತದೆ. ದೇವಾಲಯದ ವಿವಿಧ ಭಾಗಗಳನ್ನು ತೇರಿನಲ್ಲಿಯೂ ಗುರುತಿಸಬಹುದು. ಮಹಾಭಾರತ, ರಾಮಾಯಣದ ಸನ್ನಿವೇಷಗಳು, ಸಾಮಾಜಿಕ ಜೀವನ, ಶೃಂಗಾರ ಚಿತ್ರಗಳು ತೇರಿನ ಹೊರಮೈಯಲ್ಲಿ ಶಿಲ್ಪಿಸಲ್ಪಟ್ಟಿರುತ್ತವೆ.

ಚಲಿಸುವದಕ್ಕಾಗಿಯೇ ನಿರ್ಮಿಸಿದ ತೇರು ಕರ್ನಾಟಕದ ವಾಸ್ತುಶಿಲ್ಪ, ಭಿತ್ತಿಶಿಲ್ಪಗಳಲ್ಲಿ ಸ್ಥಾಯಿಯಾಗಿರುವಂತೆ ಮಾಡಿದ್ದೂ ನಮ್ಮಲ್ಲಿ ಕಾಣಬಹುದು. ಹಂಪೆಯ ವಿಜಯವಿಠ್ಠಲ ದೇವಾಲಯದ ಆವರದಲ್ಲಿ ಎರಡನೇ ದೇವರಾಯನ ಕಾಲದಲ್ಲಿ[೨೬೩] ( ಕ್ರಿ.ಶ. ೧೪೨೨-೪೬ ) ನಿರ್ಮಾಣವಾದ ಶಿಲಾ ತೇರು ಶಿಲ್ಪವಿದೆ. ಹಿಂದೆ ಇದರ ಇಟ್ಟಿಗೆಯ ಗೋಪುರವಿದ್ದಿತು. ಈಗ ಅದು ಬಿದ್ದು ಹೋಗಿ ಕೆಳಗಿನ ಶಿಲಾ ಭಾಗ ಮಾತ್ರ ಉಳಿದುಕೊಂಡಿದೆ. ಈ ತೇರು ಶಿಲ್ಪದ ಪ್ರವೇಶ ದ್ವಾರದ ಅಕ್ಕಪಕ್ಕದಲ್ಲಿ ಜೋಡಿ ಆನೆಗಳಿವೆ. ಈ ಆನೆಗಳ ಜಾಗದಲ್ಲಿ ಹಿಂದೆ ಕುದುರೆಗಳಿದ್ದವು. ಅವು ಏನಾದವೆಂದು ತಿಳಿಯುವದಿಲ್ಲ. ಕುದುರೆಗಳು ಇದ್ದವು ಎಂಬುದಕ್ಕೆ ಕುದುರೆಯ ಹಿಂಗಾಲು ಹಾಗೂ ಬಾಲದ ಅವಶೇಷ ಮಾತ್ರ ಅಲ್ಲಿ ಕಂಡು ಬರುತ್ತದೆ. ತೇರಿಗೆ ಎಡಬಲಗಳಲ್ಲಿ ಎರಡೆರಡು ಗಾಲಿಗಳಿವೆ. ಇವುಗಳ ಮೇಲೂ ಹೂಬಳ್ಳಿಗಳನ್ನು ಕೊರೆಯಲಾಗಿದೆ. ಗರ್ಭಗುಡಿಯಲ್ಲಿ ಗರುಡನ ಶಿಲ್ಪವಿದೆ.

**ಜನಪದ ನಂಬಿಕೆ :** ಈ ಶಿಲಾ ತೇರಿನ ಗಾಲಿಗಳನ್ನು ತಿರುಗಿಸಿದರೆ ಮನದ ಆಕಾಂಕ್ಷೆಗಳು ಈಡೇರುತ್ತವೆ ಎಂದೂ ನಂಬಲಾಗುತ್ತದೆ.[೨೬೪]

ಕರ್ನಾಟಕದ ಅನೇಕ ದೇವಾಲಯಗಳಲ್ಲಿ, ದೇವಾಲಯದ ಜಗತಿ, ಒಳಗೋಡೆ ಮತ್ತು ಹೊರಗೋಡೆಗಳ ಮೇಲೆ ಉಬ್ಬು ಶಿಲ್ಪ ಮಾದರಿಯಲ್ಲಿ ತೇರು ಶಿಲ್ಪಗಳನ್ನು ಕೆತ್ತಲಾಗಿದ್ದನ್ನು ಕಾಣಬಹುದು. ಇವು ಹೆಚ್ಚಾಗಿ ತೇರಿನ ಉತ್ಸವದ ಸನ್ನಿವೇಶವನ್ನೇ ಶಿಲ್ಪಿಸಿದವುಗಳಾಗಿವೆ. ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿರುವ ಕೇತಪ್ಪಯ್ಯ ದೇವಾಲಯದ ಹೊರ ಜಗತಿಯ ಮೇಲೆ ಒಂದು ತೇರನ್ನು ಎಳೆಯುತ್ತಿರುವ ಸನ್ನಿವೇಷದ ಉಬ್ಬು ಶಿಲ್ಪವಿದೆ. ಹಗ್ಗದ ನೆರವಿನಿಂದ ಭಕ್ತಾದಿಗಳು ತೇರನ್ನು ಎಳೆಯುತ್ತಿರುವುದನ್ನು ಶಿಲ್ಪಿಸಲಾಗಿದೆ. ಇದೇ ಜಿಲ್ಲೆಯ ವೆಂಕಟಾಪುರದ ವೆಂಕಟರಮಣ ದೇವಾಲಯದ ಗರ್ಭಗುಡಿಯ ಹೊರಗಡೆಯಲ್ಲಿ ಸಾಲಂಕೃತ ತೇರಿನ ಉಬ್ಬು ಶಿಲ್ಪವಿದೆ. ಹಾಗೇ ಶ್ರವಣಬೆಳಗೊಳದ ಜೈನ ಮಠದ ಒಳಾಂಗಣವನ್ನು ಸುತ್ತುವರಿದ ಗೋಡೆಗಳಲ್ಲಿ ತೇರಿನ ಉತ್ಸವದ ಆಚರಣೆಯ ಭಿತ್ತಿ ಶಿಲ್ಪಗಳನ್ನು ಕಾಣಬಹುದು.[೨೬೫] ಆದರೆ ಮರದ ಹಾಗೂ ಲೋಹದ ತೇರುಗಳಂತೆ ಕಲ್ಲಿನ ತೇರುಗಳ ಉತ್ಸವ ನಡೆದ

---

೨೬೩. ಡಾ. ಸೂರ್ಯನಾಥ್ ಕಾಮತ, ಡಾ. ದೇವರಕೊಂಡಾರೆಡ್ಡಿ, ಜಗನ್ನಾಥ ಎಸ್.ಎ. (ಸಂ) : ಇತಿಹಾಸ ದರ್ಶನ, ಸಂಪುಟ - ೭, ಪುಟ - ೬೪

೨೬೪. ..... ಅದೇ .....


೨೬೫. ವಿವರಗಳಿಗೆ ನೋಡಿ : ಡಾ. ಸೂರ್ಯನಾಥ್ ಕಾಮತ, ಡಾ. ದೇವರಕೊಂಡಾರೆಡ್ಡಿ, ಜಗನ್ನಾಥ ಎಸ್.ಎ. (ಸಂ) : ಇತಿಹಾಸ ದರ್ಶನ, ಸಂಪುಟ - ೭, ಪುಟ - ೬೫

[illegible]

[illegible]

[illegible]

[illegible]



ಕಲ್ಲಿನ ತೇರು ಹಂಪೆ



ಉದಾಹರಣೆಗಳು ಸಿಗುವುದಿಲ್ಲ. ಮರ ಮತ್ತು ಲೋಹದ ತೇರುಗಳು ಚಲಿಸುವ ದೇವಾಲಯದಂತೆ ಸ್ವತಂತ್ರವಾಗಿ ಕಂಡು ಬಂದರೆ ಕಲ್ಲಿನ ತೇರುಗಳು ಹೆಚ್ಚಾಗಿ ದೇವಾಲಯ ಭಿತ್ತಿಗಳ ಮೇಲೆ ಕಂಡರಿಸಲ್ಪಟ್ಟವುಗಳಾಗಿವೆ. ಹಂಪೆಯ ವಿಜಯ ವಿಠ್ಠಲ ದೇವಾಲಯದಲ್ಲಿ ಇರುವ ಕಲ್ಲಿನ ತೇರು ಸ್ವತಂತ್ರವಾಗಿದ್ದು ಚಲಿಸುವಂತೆ ಕಂಡು ಬಂದರೂ ಅದನ್ನು ಹಿಂದೆಂದೂ ಎಳೆದಿರುವ ಸಾಧ್ಯತೆಗಳಿಲ್ಲ. ಮತ್ತು ಹಾಗೆ ಎಳೆಯುವದೂ ಸಾಧ್ಯವಿಲ್ಲ.

ಹೀಗೆ ಶಿಲಾ ಮಾಧ್ಯಮದಲ್ಲಿ ಧರ್ಮಮೂಲವಾಗಿ ನೂರಾರು ಶಿಲ್ಪಗಳು ರೂಪ ತಳೆದು ನಮ್ಮ ಜನಪದರ ಧಾರ್ಮಿಕ ಮನೋಭಾವದಿಂದ ಕೂಡಿದ ಬದುಕಿನ ಕುರುಹುಗಳಾಗಿ ಬೆಳೆದು ಬಂದಿವೆ. ಅನೇಕ ಬಗೆಯ ಪುರುಷ ದೇವತಾ ಶಿಲ್ಪಗಳು, ಸ್ತ್ರೀ ದೇವತಾ ಶಿಲ್ಪಗಳು ಮತ್ತು ಪ್ರಾಣಿ ದೇವತಾ ಶಿಲ್ಪಗಳು, ಅಲ್ಲದೆ ಆತ್ಮ ಬಲಿದಾನ, ವೀರ ಮರಣ, ದಾನ-ದತ್ತಿ ಶಿಲ್ಪಗಳು ಹೇಗೆ ನಮ್ಮ ಜನಪದರಲ್ಲಿ ಹುಟ್ಟಿ ರೂಪ ತಳೆದು ಬೆಳೆದು ಬಂದುವು ಎಂಬುದರ ಬಗ್ಗೆ ಕುತೂಹಲ ಹಾಗೂ ಆಶ್ಚರ್ಯ ಹುಟ್ಟಿಸುತ್ತವೆ. ದೇವತಾ ಶಿಲ್ಪಗಳು ಮನುಷ್ಯನು ಪ್ರಕೃತಿಯ ವಿವಿಧ ಶಕ್ತಿಗಳ ಬಗ್ಗೆ ಕಲ್ಪಿಸಿಕೊಂಡು ರೂಪಿಸಿದ ರೂಪಾಕಾರಗಳಾಗಿ ವಿಕಾಸಗೊಂಡವುಗಳಾದರೆ, ಆತ್ಮ ಬಲಿದಾನ, ವೀರ ಮರಣದಂತಹ ಶಿಲ್ಪಗಳು ಮನುಷ್ಯನ ಸಾಹಸ, ತ್ಯಾಗ, ಆದರ್ಶ ಗುಣಗಳನ್ನು ಮೆರೆದ ದಾಖಲೆಗಳಾಗಿವೆ. ಇಂಥ ಶಿಲ್ಪಗಳಲ್ಲಿ ನಮ್ಮ ಜನಪದ ಶಿಲ್ಪಕಲಾವಿದರೂ ತಮ್ಮ ಕಲಾ ಕೌಶಲ್ಯವನ್ನು ಮೆರೆದುದೂ ಅದ್ಭುತವಾಗಿ ನಮ್ಮ ಕಣ್ಣೆದುರಿಗೆ ಇದೆ ಎಂದರೆ ಅತಿಶಯೋಕ್ತಿಯಲ್ಲ. ಶಿಲ್ಪಗಳ ಕೆತ್ತನೆ, ಸಂಯೋಜನೆ, ಅವಕಾಶದ ಹಂಚಿಕೆ, ಶಿಲೆಯ ಆಯ್ಕೆ ಎಲ್ಲವುಗಳಲ್ಲಿ ಶಿಲ್ಪಿಗಳು ತೋರಿದ ಜಾಣ್ಮೆ ಮತ್ತು ಪ್ರಾಮಾಣಿಕತೆ ಮೆಚ್ಚುವಂತಹವುಗಳಾಗಿವೆ. ಇಂತಹ ನೂರಾರು ಶಿಲ್ಪಗಳಲ್ಲಿ ಜನಪದ ವಸ್ತುವಿಗೆ ಶಿಷ್ಟ ಶಿಲ್ಪಿಗಳೇ ರೂಪ ನೀಡಿದ್ದೂ ಇದೆ.

ಅಧ್ಯಾಯ : ಆರು

# ಲೋಹ ಮಾಧ್ಯಮದ ಜನಪದ ಶಿಲ್ಪಕಲೆ

[illegible]

---

[illegible]

ಲೋಹಗಳ ಶೋಧ ಪ್ರಾಚೀನವಾದುದು. ಹಾಗೆಂದರೂ ಅದು ಶಿಲ್ಪಗಳ ಸೃಷ್ಟಿಗೆ ಮಣ್ಣು ಹಾಗೂ ಮರದ ಮಾಧ್ಯಮಗಳ ನಂತರ ಬಳಕೆಗೆ ಬಂದಿದೆ. ಮಾನವನು ಪ್ರಾಚೀನ ಕಾಲದಿಂದಲೂ ಶಿಲ್ಪಗಳ ಸೃಷ್ಟಿಗೆ ಲೋಹಗಳನ್ನು ಬಳಸಿಕೊಂಡು ಬಂದಿರುವುದಕ್ಕೆ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ.

ಭಾರತದಾದ್ಯಂತವೂ ನಡೆಸಲಾದ ಪ್ರಾಚೀನ ನೆಲೆಗಳಲ್ಲಿನ ಶೋಧಗಳಲ್ಲಿ ಲೋಹದ ಖಡ್ಗ, ಭರ್ಚಿ, ಉಳಿ ಮುಂತಾದ ಆಯುಧ, ಉಪಕರಣಗಳು ದೊರೆತಿವೆ. ಮಧ್ಯಪ್ರದೇಶದ ಗುಂಗೇರಿಯ, ದಕ್ಷಿಣದ ತಿನ್ನವಳ್ಳಿ ಹಾಗೂ ಮಸ್ಕಿಗಳಲ್ಲಿ, ಹಾಗೆಯೇ ಪ್ರಾಚೀನ ಸಂಸ್ಕೃತಿಯ ನೆಲೆಗಳಾದ ಹರಪ್ಪಾ, ಮೊಹೆಂಜೋದಾರೊಗಳಲ್ಲಿ ಬೆಳ್ಳಿ, ಕಂಚು, ಹಿತ್ತಾಳೆ ಹಾಗೂ ಕಬ್ಬಿಣದ ನಿತ್ಯ ಬಳಕೆಯ ಸಾಧನೋಪಕರಣಗಳು, ಅಲಂಕಾರ ವಸ್ತುಗಳು, ವಿಗ್ರಹಗಳು ಮತ್ತು ಆಟಿಕೆಗಳು ದೊರಕಿವೆ. ಇವು ಲೋಹ ಮಾಧ್ಯಮದ ಶಿಲ್ಪಕಲೆಯ ವಿಕಾಸದ ಹಂತಗಳನ್ನು ತಿಳಿಸುತ್ತವೆ. ಅದರಲ್ಲಿಯೂ ಕಂಚಿನ ನರ್ತಕಿಯ ವಿಗ್ರಹ ಮತ್ತು ಚಕ್ಕಡಿಗಳು ಕಲಾಪೂರ್ಣ ರಚನೆಗಳಾಗಿವೆ.[೧]

ಋಗ್ವೇದ ಕಾಲದಲ್ಲಿಯೂ ಲೋಹಗಳ ಉತ್ಪಾದನೆ ಹಾಗೂ ಬಳಕೆಯು ಇತ್ತೆಂಬುದು ತಿಳಿಯುತ್ತದೆ. ಕ್ರಿ.ಪೂ. ಸುಮಾರು ೩೦೦ ರಲ್ಲಿದ್ದ ಸುಶ್ರುತನಲ್ಲಿ ಅತ್ಯಂತ ನೈಪುಣ್ಯದಿಂದ ತಯಾರಿಸಲಾದ ೧೨೭ ಶಸ್ತ್ರ ಚಿಕಿತ್ಸಾ ಉಪಕರಣಗಳ ಪ್ರಸ್ತಾಪವಿದೆ. ಹೆರಡೊಟಸ್ ಮತ್ತು ಕೆಲ್ಸಿಯಸ್‌ರು ಲೋಹದ ರಥ ಹಾಗೂ ಖಡ್ಗಗಳ ಬಗೆಗೆ ಹೇಳುತ್ತಾರೆ.[೨] ಮೌರ್ಯರ ಕಾಲದಲ್ಲಂತೂ ಚಿನ್ನ, ಬೆಳ್ಳಿ ಹಾಗೂ ಕಬ್ಬಿಣಗಳ ಉತ್ಪಾದನೆಯು ರಾಜ್ಯದ ಸ್ವಾಮ್ಯದಲ್ಲಿದ್ದುದು ಮತ್ತು ಈ ಲೋಹಗಳನ್ನು ಆಭರಣ, ಪಾತ್ರೆ ಇತ್ಯಾದಿ ಅಲಂಕಾರ ಹಾಗೂ ಗೃಹೋಪಯೋಗಿ ವಸ್ತುಗಳ ತಯಾರಿಕೆಗಾಗಿಯೂ, ಆಯುಧ ರಥಾದಿ ಯುದ್ಧೋಪಕರಣಗಳಿಗಾಗಿಯೂ ಬಳಸಿಕೊಳ್ಳುತ್ತಿದ್ದುದು ತಿಳಿದು ಬರುತ್ತದೆ.[೩]

ಪ್ರಾಚೀನ ಭಾರತದಲ್ಲಿ ಮತ್ತು ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯಾನಂತರದ ಭಾರತದ ಅವಧಿಯಲ್ಲಿ ಚಿನ್ನ, ಬೆಳ್ಳಿಯಂತಹ ಲೋಹಗಳನ್ನು ದೇವತಾ ವಿಗ್ರಹಗಳಿಗಾಗಿ, ಪೂಜಾ ಪರಿಕರ ಹಾಗೂ ಗೃಹೋಪಯೋಗಿ ಪಾತ್ರೆ ಪರಿಕರಗಳಿಗಾಗಿ, ನಾಣ್ಯಗಳಿಗಾಗಿ, ವಿಶೇಷವಾಗಿ ಆಭರಣಗಳು ಮತ್ತು ಕಬ್ಬಿಣ

---

೧. ಡಾ. ಕರೀಗೌಡ ಬೀಚನಹಳ್ಳಿ (ಸಂ) : ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ - ೨, ಪುಟ - ೬
೨. ..... ಅದೇ .....
೩. ..... ಅದೇ ..... ಪುಟ -7

[illegible]

[illegible]

[illegible]

[illegible]

[illegible]

ಮುಂತಾದ ಇತರ ಲೋಹಗಳಿಂದ ತಯಾರಿಸಲಾದ ನಿತ್ಯ ಬಳಕೆಯ ವಸ್ತುಗಳಿಗಾಗಿ ಮತ್ತು ಅಲಂಕಾರಿಕ ವಸ್ತುಗಳ ರಚನೆಗಾಗಿ ಬಳಕೆ ಮಾಡುತ್ತ ಬಂದಿದೆ. ವಿವಿಧ ಲೋಹಗಳಲ್ಲಿ ಕುಶಲ ಶಿಲ್ಪಿಗಳು ನಡೆಸಿದ ಪ್ರಯೋಗಗಳಿಂದಾಗಿ ಇಂದು ಲೋಹಶಿಲ್ಪಕಲೆಯ ಪರಿಧಿಯು ವಿಸ್ತಾರ ಹಾಗೂ ವೈವಿಧ್ಯತೆಯನ್ನು ಪಡೆದಿದೆಯೆನ್ನಬಹುದು. ನಮ್ಮ ಜನಪದರು ಅನೇಕ ವರ್ಷಗಳಿಂದ ಇತರ ಮಾಧ್ಯಮಗಳ ಶಿಲ್ಪಗಳ ಹಾಗೆಯೇ ಲೋಹ ಮಾಧ್ಯಮದಲ್ಲಿಯೂ ಶಿಲ್ಪಗಳನ್ನು ರಚಿಸಿ ಜನಪದ ಆಚರಣೆ ವಿಧಿಕ್ರಿಯೆಗಳ ಸಂದರ್ಭದಲ್ಲಿ ಆಕರ್ಷಣೆಯ ಕೇಂದ್ರವಾಗಿಸಿದ್ದು ಗಮನಸೆಳೆಯುತ್ತವೆ.

## ಲೋಹಶಿಲ್ಪ ರಚನಾ ವಿಧಾನ

ಲೋಹಶಿಲ್ಪ ರಚನೆಯಲ್ಲಿ ಮುಖ್ಯವಾಗಿ ಎರಡು ವಿಧಾನಗಳನ್ನು ಅನುಸರಿಸಲಾಗುತ್ತದೆ. ೧. ಎರಕ ಹೊಯ್ಯುವ ಮೂಲಕ ಶಿಲ್ಪ ರಚಿಸುವ ವಿಧಾನ, ೨. ಲೋಹದ ಹಾಳೆಯಿಂದ ಶಿಲ್ಪ ರಚಿಸುವ ವಿಧಾನ.

**೧. ಎರಕ ಹೊಯ್ಯುವಿಕೆ :** ಎರಕ ಹೊಯ್ಯುವಿಕೆ ಅತ್ಯಂತ ಪ್ರಾಚೀನ ಕಾಲದಿಂದ ಬಂದುದು. ಕಂಚಿನ ಯುಗದ ಮನುಷ್ಯನಿಗೆ ಈ ತಂತ್ರದ ಅರಿವು ಇತ್ತೆಂದು ಭಾವಿಸಲಾಗಿದೆ.[೪] ಈಗಲೂ ಈ ವಿಧಾನ ಜನಪ್ರೀಯವೇ ಆಗಿದೆ. ಈ ಎರಕ ಹೊಯ್ಯುವಿಕೆಯ ವಿಧಾನದಿಂದ ಎರಡು ಬಗೆಯಲ್ಲಿ ಶಿಲ್ಪಗಳನ್ನು ರಚಿಸಲಾಗುತ್ತದೆ.

**ಅ.** ಮೇಣದಂತಹ ಸುಲಭವಾಗಿ ಕರಗುವಂತಹ ವಸ್ತುವಿನಿಂದ ಮೂಲ ಶಿಲ್ಪಕೃತಿಯನ್ನು ರಚಿಸಲಾಗುತ್ತದೆ. ನಂತರ ಇದರ ಸುತ್ತ ಜೇಡಿ ಮಣ್ಣು ಮತ್ತಿತರ ವಸ್ತುಗಳಿಂದ ಅಚ್ಚಿನ ಗೂಡು ಕಟ್ಟುತ್ತಾರೆ. ನಂತರ ಅದನ್ನು ಬಿಸಿ ಮಾಡುವುದರ ಮೂಲಕ ಒಳಗಿನ ಮೇಣವನ್ನೆಲ್ಲ ಹೊರ ತೆಗೆಯಲಾಗುತ್ತದೆ. ಆಗ ಮೇಣವಿದ್ದ ಭಾಗವೆಲ್ಲ ಟೊಳ್ಳಾಗಿ ಉಳಿಯುತ್ತದೆ. ನಂತರ ಈ ಟೊಳ್ಳು ಭಾಗಕ್ಕೆ ಕಾಯಿಸಿ ದ್ರವರೂಪಮಾಡಿಕೊಂಡಿರುವ ಲೋಹವನ್ನು ಸುರಿಯಲಾಗುತ್ತದೆ. ಸ್ವಲ್ಪ ಸಮಯದ ನಂತರ ಅಚ್ಚನ್ನು ಒಡೆದು,ಪ್ರತಿಕೃತಿಯನ್ನು ಪಡೆಯಲಾಗುತ್ತದೆ. ಕೆಲವೊಮ್ಮೆ ಜಾಣ್ಮೆಯಿಂದ ಒಂದೇ ಅಚ್ಚಿನಿಂದ ಹಲವು ಪ್ರತಿ ತೆಗೆಯಲೂ ಸಾಧ್ಯವಿದೆ. ಇದು ಒಂದು ವಿಧಾನ.

**ಆ.** ಎರಕ ಹೊಯ್ಯುವಿಕೆಯ ಇನ್ನೊಂದು ವಿಧಾನದಲ್ಲಿ ಮೊದಲು ಮೇಣದಲ್ಲಿ ಬೇಕಾದ ಆಕೃತಿಯನ್ನು ಟೊಳ್ಳಾಗಿರುವಂತೆ ಮಾಡಿಕೊಂಡಿರುತ್ತಾರೆ. ಆ ಟೊಳ್ಳು ಜಾಗಕ್ಕೆ ಜೇಡಿ ಮಣ್ಣನ್ನು ತುಂಬಿರುತ್ತಾರೆ. ಇಲ್ಲವೆ ಮೊದಲೇ ಕೆಸರಿನಿಂದ ಮಾಡಬೇಕೆಂದಿರುವ ಶಿಲ್ಪದ ಕರಡು ರೂಪವನ್ನು ರಚಿಸಿಕೊಂಡು ಅದರ ಮೇಲೆ ಮತ್ತೆ ಮೇಣದ ಹೊದಿಕೆಯಿಂದ ಶಿಲ್ಪವನ್ನು ಪೂರ್ಣಗೊಳಿಸಿಕೊಂಡು ಆ

---

೪. ಪಿ.ಆರ್. ತಿಪ್ಪೇಸ್ವಾಮಿ : ಕಲಾಕೋಶ : ಪುಟ - ೫೩

[illegible]

[illegible]

[illegible]

[illegible]

[illegible]

[illegible]

ಮೇಣದ ಶಿಲ್ಪದ ಹೊರ ಭಾಗಕ್ಕೆ ಮತ್ತೆ ವಿಶೇಷವಾಗಿ ಹದಗೊಳಿಸಿದ ಜೇಡಿ ಮಣ್ಣಿನ ಕೆಸರಿನಿಂದ[೫] ಮೆತ್ತುತ್ತಾರೆ. ಅನಂತರ ಈ ಗೂಡನ್ನು ಉಬ್ಬೆಯಲ್ಲಿ ಕಾಯಿಸುವರು. ಆಗ ಮೇಣವೆಲ್ಲ ಕರಗಿ ಹೋಗಿ ಮೇಣದ ಶಿಲ್ಪವಿದ್ದ ಭಾಗ ಟೊಳ್ಳಾಗಿ ಉಳಿಯುತ್ತದೆ. ಆ ಟೊಳ್ಳಾಗಿರುವ ಜಾಗಕ್ಕೆ ಲೋಹದ ದ್ರವವನ್ನು ಎರಕ ಹೊಯ್ಯಲಾಗುತ್ತದೆ. ಶಿಲ್ಪವು ಸೂಕ್ಷ್ಮ ಇಲ್ಲವೆ ಆಕಾರದಲ್ಲಿ ದೊಡ್ಡದಿದ್ದರೆ ಅಲ್ಲಲ್ಲಿ ಕೊಳವೆಗಳನ್ನು ಇಟ್ಟಿರುತ್ತಾರೆ. ಲೋಹ ತಣ್ಣಗಾಗಿ ಗಟ್ಟಿಗೊಂಡ ಮೇಲೆ ಅಚ್ಚನ್ನು ಒಡೆದು ಶಿಲ್ಪವನ್ನು ಪಡೆಯಲಾಗುವುದು. ಈ ವಿಧಾನದಿಂದ ಒಂದಕ್ಕಿಂತ ಹೆಚ್ಚು ಪ್ರತಿಗಳನ್ನು ತೆಗೆಯಲು ಸಾಧ್ಯವಿಲ್ಲ.

ಇನ್ನೊಂದು ವಿಧಾನದಲ್ಲಿ ಹಲವಾರು ಸಣ್ಣ ಸಣ್ಣ ಅಚ್ಚುಗಳನ್ನು ಮಾಡಿ ಅವುಗಳನ್ನು ಜೋಡಿಸಿ ಎರಕ ಹೊಯ್ದು ಶಿಲ್ಪಗಳನ್ನು ರಚಿಸಲಾಗುತ್ತದೆ. ಸಾಮಾನ್ಯವಾಗಿ ದೊಡ್ಡ ಪ್ರಮಾಣದ ಶಿಲ್ಪ, ಇಲ್ಲವೆ ಶಿಲ್ಪದ ಸೂಕ್ಷ್ಮ ವಿವರಗಳನ್ನು ಮಾಡಲು ಈ ಪದ್ಧತಿಯನ್ನು ಶಿಲ್ಪಿಗಳು ಅನುಸರಿಸುತ್ತಾರೆ. ಜನಪದ ಶಿಲ್ಪಗಳನ್ನು ರಚಿಸುವಲ್ಲಿ ಈ ಪದ್ಧತಿಯೂ ಅಪರೂಪವಾಗಿ ಕಂಡು ಬರುತ್ತದೆ.

**೨. ಲೋಹದ ಹಾಳೆಯಿಂದ ಶಿಲ್ಪ ರಚಿಸುವ ವಿಧಾನ :** ಲೋಹವನ್ನು ಹಾಳೆಯಂತೆ ತೆಳ್ಳಗೆ ಮಾಡಿಕೊಂಡು ಒತ್ತುವಿಕೆ ಇಲ್ಲವೆ ಬಾಗಿಸುವಿಕೆಯಿಂದ ಉಬ್ಬು ಇಲ್ಲವೆ ದುಂಡು ಶಿಲ್ಪಗಳನ್ನು ರಚಿಸುವರು. ಲೋಹದ ಹಾಳೆಯಿಂದ ಶಿಲ್ಪ ರಚಿಸುವ ವಿಧಾನದಲ್ಲೂ ಎರಡು ಬಗೆಗಳಿವೆ. ಅ. ಲೋಹದ ಹಾಳೆಯ ಒಂದು ಬದಿಯಿಂದ ಒತ್ತುವಿಕೆಯಿಂದ ರೂಪಿಸುವುದು. ಆ. ಲೋಹದ ಹಾಳೆಯಿಂದ ಬಿಡಿ ಬಿಡಿ ಭಾಗಗಳನ್ನು ಮಾಡಿಕೊಂಡು ಜೋಡಿಸಿ ದುಂಡು ಶಿಲ್ಪವನ್ನು ರಚಿಸುವುದು.

ಅ. ಲೋಹದ ಹಾಳೆಯ ಒಂದು ಬದಿಯಿಂದ ಒತ್ತುವಿಕೆಯಿಂದ ರೂಪಿತವಾಗುವುದು ಉಬ್ಬು ಶಿಲ್ಪವಾಗುತ್ತದೆ. ಇದರಲ್ಲಿ ಕಲ್ಪನೆಗೇ ಹೆಚ್ಚಿನ ಒತ್ತು. ಏಕೆಂದರೆ ಹಿಮ್ಮೈ ಕೆಲಸವೇ ಇಲ್ಲಿ ಹೆಚ್ಚಾಗಿ ಇರುವುದರಿಂದ ಶಿಲ್ಪಕಾರನಿಗೆ ತಾನು ಮೂಡಿಸುತ್ತಿರುವ ಶಿಲ್ಪದ ಬಗೆಗೆ ಖಚಿತ ಜ್ಞಾನ ಅಗತ್ಯವಾಗಿ ಇರಬೇಕಾಗುತ್ತದೆ. ಹೀಗಾಗಿ ರಚಿಸಬೇಕಾಗಿರುವ ಶಿಲ್ಪದ ಚಿತ್ರವನ್ನು ಮೊದಲೇ ಕಾಗದದ ಹಾಳೆಯ ಮೇಲೆ ರೂಪಿಸಿಕೊಂಡು ಅನಂತರ ಲೋಹದ ಹಾಳೆಗೆ ವರ್ಗಾಯಿಸುತ್ತಾರೆ. ಹೀಗೆ ಲೋಹದ ಹಾಳೆಯ ಒತ್ತುವಿಕೆಯ ಕ್ರಮ ಎರಡು ರೀತಿಯಲ್ಲಿದೆ.

ಕ್ರಮ - ೧. ಹಾಸಿಗೆ ಇಲ್ಲವೆ ಇನ್ನಾವುದೇ ಮೆತ್ತಗಿನ ವಸ್ತುವಿನ ಮೇಲೆ ಚಿತ್ರಿತ ಲೋಹದ ಹಾಳೆಯನ್ನಿಟ್ಟು ಮರದ ಕೈ ಸಾಧನಗಳಿಂದ ಲೋಹದ ಹಾಳೆಯ ಮೇಲಿರುವ ಚಿತ್ರದ ಮೇಲೆ ಒತ್ತುವಿಕೆಯಿಂದ ಉಬ್ಬು ಶಿಲ್ಪವಾಗಿ ರೂಪಿಸುವುದು ಒಂದು ವಿಧಾನ. ಇದು ಸರಳ ವಿಧಾನವೂ ಹೌದು.

---

೫. ಈ ಕೆಸರನ್ನು ಸಾಧಾರಣವಾಗಿ ಸಮ ಪ್ರಮಾಣದಲ್ಲಿ ಬೂದಿಯಾದ ಮತ್ತು ತಾಜಾ ಇಟ್ಟಿಗೆ ಚೂರುಗಳನ್ನು ಬೆರೆಸಿ ತಯಾರಿಸುತ್ತಾರೆ. ಇದು ಬಿರುಕು ಬಿಡದಂತೆ ಮಾಡಲು ಸಹಾಯವಾಗುತ್ತದೆ. ಕೆಲವೊಮ್ಮೆ ನಾರು, ಹುಲ್ಲು ಇಲ್ಲವೆ ಸಗಣಿ, ಕುದುರೆ ಲದ್ದಿಯನ್ನು ಸಹ ಈ ಕೆಸರಿನಲ್ಲಿ ಮಿಶ್ರಣ ಮಾಡಿರುತ್ತಾರೆ.

ಕ್ರಮ - ೨. ಚದರಸದ ನೆಲೆಗಟ್ಟಿನ[೬] ಸಹಾಯದಿಂದ ಉಬ್ಬು ಶಿಲ್ಪ ರಚಿಸುವುದು. ಇದು ಒಂದು ಬಗೆಯ ಮರದಿಂದ ದೊರೆಯುವ ಅಂಟು ಪದಾರ್ಥ. ಇದು ಅರಗು ಅಥವಾ ರ್‍ಯಾಳದಂತೆ ಇರುತ್ತದೆ. ಇದರ ಜಿಗುಟುತನವು ಮೃದು ಮತ್ತು ಕಠಿಣವಾಗುವುದಕ್ಕೋಸುಗ ಸಸ್ಯಮೂಲದ ಎಣ್ಣೆ ಮತ್ತು ನಯವಾದ ಮಣ್ಣನ್ನು ಬಳಸಿರುತ್ತಾರೆ. ಈ ಮಿಶ್ರಣ ಬೆಂಕಿಯಿಂದ ಕಾಯಿಸಿದಾಗ ಬೆಲ್ಲದ ಪಾಕದಂತೆ ಮೃದುವಾಗುತ್ತದೆ. ಇದನ್ನು ರ್‍ಯಾಳ ಎಂದೂ ಕರೆಯಲಾಗುತ್ತದೆ. ಈ ರ್‍ಯಾಳ ಅಥವಾ ಅರಗಿನ ಮೇಲೆ ಮೊದಲೇ ಚಿತ್ರ ಮಾಡಿಟ್ಟುಕೊಂಡಿರುವ ಲೋಹದ ಹಾಳೆ ಅಥವಾ ಫಲಕವನ್ನಿಟ್ಟು, ಮೊನಚಾದ ಸಾಧನದಿಂದ ಅಥವಾ ಚಾಣದ ಸಹಾಯದಿಂದ ಚಿತ್ರದ ಮೇಲೆ ಕಚ್ಚುಗಳ ಮೂಲಕ ಗುರುತು ಮಾಡಿಕೊಂಡು ನಂತರ ಅರ್ಧ ಚಂದ್ರಾಕೃತಿಯ ಹಾಗೆ ಎರಡೂ ಮೊನೆಗಳು ಗುಂಡಾಗಿರುವ ಸುತ್ತಿಗೆಯಿಂದ ಲೋಹದ ಫಲಕದ ಹಿಂಬದಿಯನ್ನು ದಪ್ಪವಾಗಿ ಉಬ್ಬುವಂತೆ ಬಡೆಯಲಾಗುವುದು. ಇದರಿಂದ ಮೇಲೆ ಸ್ಥೂಲ ಶಿಲ್ಪಾಕೃತಿ ನಿರ್ಮಾಣವಾಗುತ್ತದೆ. ಇದನ್ನು ಆಗಾಗ ಪರಿಶೀಲಿಸುತ್ತ ಬಡಿಯುತ್ತ ಹೋಗುವರು. ಈ ಹಂತದಲ್ಲಿ ಪೂರ್ಣ ಆಕೃತಿಯನ್ನು ಪಡೆಯಲು ಆಗಾಗ್ಗೆ ನೆಲಗಟ್ಟಿನಿಂದ ಬೇರ್ಪಡಿಸುವುದೂ ಮತ್ತು ಅಂಟಿಸುವುದೂ ನಡೆಯುತ್ತದೆ. ಲೋಹದ ಜಿಗುಟನ್ನು ಕಾಯ್ದುಕೊಳ್ಳಲು ಆಗಾಗ ಲೋಹವನ್ನು ಕಾಯಿಸುತ್ತಿರಬೇಕಾಗುತ್ತದೆ. ನಂತರ ಉಬ್ಬಿದ ಲೋಹದ ತಗಡಿನ ಮೇಲೆ ಸೂಕ್ಷ್ಮ ವಿವರಗಳನ್ನು ಬಿಡಿಸಿ ಕೊನೆಯಲ್ಲಿ ಹೊಳಪನ್ನು ನೀಡಲಾಗುತ್ತದೆ.


ಆ. ಇನ್ನೊಂದು ವಿಧಾನದಲ್ಲಿ ಚದರಸದ ನೆಲೆಗಟ್ಟಿನ ಸಹಾಯದಿಂದ ಶಿಲ್ಪದ ಬಿಡಿ ಭಾಗಗಳನ್ನು ರಚಿಸಿಕೊಂಡು ಅವುಗಳನ್ನು ಒಂದಕ್ಕೊಂದು ಜೋಡಿಸಿ, ಬೆಸೆದು ಶಿಲ್ಪಗಳನ್ನು ರಚಿಸುವರು. ಇವು ಒಳಗೆ ಟೊಳ್ಳಾಗಿರುತ್ತವೆ ಮತ್ತು ಹೆಚ್ಚಾಗಿ ದೊಡ್ಡ ಆಕಾರದ ಶಿಲ್ಪಗಳಾಗಿರುತ್ತವೆ.

ಲೋಹ ಮಾಧ್ಯಮದ ಜನಪದ ಶಿಲ್ಪಕಲೆಯ ರಚನೆ ಹೇಗಾದರೂ ಆಗಿರಲಿ ಅದು ಸೌಂದರ್ಯಮೂಲ, ಧರ್ಮಮೂಲ ಹಾಗೂ ವೃತ್ತಿಮೂಲದಲ್ಲಿಯೇ ಹುಟ್ಟಿ, ಬೆಳೆದು ವಿಕಾಸಗೊಂಡಿದೆ. ಹೀಗಾಗಿ ಈ ಮಾಧ್ಯಮದ ಶಿಲ್ಪಕಲೆಯನ್ನು ಮೇಲಿನ ಮೂರು ಪ್ರಕಾರಗಳಲ್ಲಿ ವಿಂಗಡಿಸಿ ಅಧ್ಯಯನ ಮಾಡುವುದು ಸೂಕ್ತವೆನಿಸುತ್ತದೆ. ಅವುಗಳನ್ನು I. ಲೋಹ ಮಾಧ್ಯಮದ ಸೌಂದರ್ಯಮೂಲ ಜನಪದ ಶಿಲ್ಪಕಲೆ. II. ಲೋಹ ಮಾಧ್ಯಮದ ಧರ್ಮಮೂಲ ಜನಪದ ಶಿಲ್ಪಕಲೆ ಹಾಗೂ III. ಲೋಹ ಮಾಧ್ಯಮದ ವೃತ್ತಿಮೂಲ ಜನಪದ ಶಿಲ್ಪಕಲೆ ಎಂದು ಕರೆದು ಇಲ್ಲಿ ಅಧ್ಯಯನ ಮಾಡಲಾಗಿದೆ. ಇವುಗಳಲ್ಲಿ ಮತ್ತೆ ಉಪವಿಂಗಡನೆಗಳೂ ಬರುತ್ತವೆ.

---

೬. ಡಾ. ಡಿ.ವಿ. ಪರಮಶಿವಮೂರ್ತಿ : ಕನ್ನಡ ಶಾಸನ ಶಿಲ್ಪ, ಪುಟ -೧೪

# ಲೋಹ ಮಾಧ್ಯಮದ ಜನಪದ ಶಿಲ್ಪಕಲೆ



## I. ಲೋಹ ಮಾಧ್ಯಮದ ಸೌಂದರ್ಯಮೂಲ ಜನಪದ ಶಿಲ್ಪಕಲೆ[೭]

ಲೋಹ ಮಾಧ್ಯಮದ ಜನಪದ ಶಿಲ್ಪಕಲೆಯು ಸೌಂದರ್ಯಮೂಲವಾಗಿಯೂ ರಚನೆಗೊಂಡಿದೆ. ಮನುಷ್ಯನು ತಾನು ಉಪಯೋಗಿಸುವ ವಸ್ತುಗಳು, ತಾನು ಪೂಜಿಸಿ ಆರಾಧಿಸುವ ದೇವತಾ ಶಿಲ್ಪಗಳು, ದೇವಾರ್ಚನೆಗೆ ಬಳಸುವ ಪೂಜಾ ಸಾಮಗ್ರಿಗಳು ಮತ್ತು ತನ್ನ ದೈನಂದಿನ ಚಟುವಟಿಕೆಗಳಲ್ಲಿ ಬಳಸುವ ಕೃಷಿ ಮತ್ತಿತರ ಉಪಕರಣಗಳೆಲ್ಲ ಅವನಿಗೆ ಸುಂದರವಾಗಿ, ಕಲಾತ್ಮಕವಾಗಿಯೇ ಕಾಣಬೇಕೆಂದು ಬಯಸಿದವನು. ಹೀಗಾಗಿ ಅವನು ಯಾವುದೇ ವಸ್ತುಗಳನ್ನು ಬಳಸಲಿ, ಯಾವುದೇ ದೇವತೆ ಅಥವಾ ದೇವರನ್ನು ಪೂಜಿಸಿ ಆರಾಧಿಸಲಿ, ಅವೆಲ್ಲವೂ ಅಲಂಕಾರಯುತವಾಗಿ, ಸೌಂದರ್ಯಪೂರ್ಣವಾಗಿ ಕಾಣಬೇಕೆಂಬುದು ಆತನ ಮುಖ್ಯ ಆಶಯ. ಆದ್ದರಿಂದ ಆತ ಬಳಸಲ್ಪಡುವ ವಸ್ತುಗಳು, ದೇವತಾ ಶಿಲ್ಪಗಳನೇಕ ಲೋಹ ಮಾಧ್ಯಮದಲ್ಲಿ ಇದ್ದು, ಜನಪದ ಶೈಲಿಯಿಂದ ಅಲಂಕೃತಗೊಂಡು ಆಕರ್ಷಕವಾಗಿ ಕಾಣುತ್ತವೆ. ಹೀಗಾಗಿ ಲೋಹ ಮಾಧ್ಯಮದ ಜನಪದ ಶಿಲ್ಪಕಲೆಯನ್ನು ಸೌಂದರ್ಯಮೂಲದ ನೆಲೆಯಿಂದಲೇ ನೋಡಬೇಕು. ಇದನ್ನು ಮತ್ತೆ ೧. ಲೋಹ ಮಾಧ್ಯಮದ ಪ್ರಯೋಜನಮೂಲ ಜನಪದ ಶಿಲ್ಪಕಲೆ ೨. ಲೋಹ ಮಾಧ್ಯಮದ ಮನರಂಜನ ಮೂಲ ಜನಪದ ಶಿಲ್ಪಕಲೆಯೆಂದು ವಿಂಗಡಿಸಿ ನೋಡುವುದು ಉಚಿತವಾಗುತ್ತದೆ.

### ೧. ಲೋಹ ಮಾಧ್ಯಮದ ಪ್ರಯೋಜನ ಮೂಲ ಜನಪದ ಶಿಲ್ಪಕಲೆ[೮]

ಜನಪದರು ದಿನನಿತ್ಯ ನೂರಾರು ಬಗೆಯ ಸಲಕರಣೆಗಳನ್ನು ಬಳಸುತ್ತಾರೆ. ಇವುಗಳು ಲೋಹ ಮಾಧ್ಯಮದಲ್ಲೇ ಹೆಚ್ಚಾಗಿರುವುದನ್ನು ಕಾಣಬಹುದು. ಈ ಎಲ್ಲ ಸಾಧನ ಸಲಕರಣೆಗಳನ್ನು ನಮ್ಮ ಜನಪದರು ಔಪಯೋಗಿಕ ಅಥವಾ ಪ್ರಾಯೋಜನಿಕ ದೃಷ್ಟಿಯಿಂದಲೇ ರಚಿಸಿಕೊಂಡಿರುತ್ತಾರಾದರೂ ಸೌಂದರ್ಯ ಪ್ರಜ್ಞೆಯಿಂದಲೇ ಇವುಗಳನ್ನು ನಿರ್ಮಿಸಿರುತ್ತಾರೆ. ಅವರು ಬಳಸುವ ಪ್ರತಿಯೊಂದು ವಸ್ತುವೂ ಕಲಾತ್ಮಕವೇ ಆಗಿರುತ್ತದೆ.

ಜನಪದರು ಬಳಸುವ ಪ್ರಯೋಜನ ಮೂಲದ ಲೋಹ ಮಾಧ್ಯಮದ ಜನಪದ ಶಿಲ್ಪಗಳನ್ನು (ಉಪಕರಣಗಳ ಹಿನ್ನೆಲೆಯಲ್ಲಿ) ಈ ಕೆಳಗಿನಂತೆ ವಿಂಗಡಿಸಬಹುದು.

೧.೧ ಗೃಹೋಪಕರಣಗಳಲ್ಲಿನ ಶಿಲ್ಪ ವಿನ್ಯಾಸಗಳು

೧.೨ ಅಡಕೊತ್ತುಗಳಲ್ಲಿನ ಶಿಲ್ಪ ವಿನ್ಯಾಸಗಳು

೧.೩ ಆಯುಧಗಳಲ್ಲಿನ ಶಿಲ್ಪ ವಿನ್ಯಾಸಗಳು, ಇತ್ಯಾದಿ.

---

೭. ವಿವರಗಳಿಗೆ ನೋಡಿ : ಇದೇ ಮಹಾ ಪ್ರಬಂಧದ ಅಧ್ಯಾಯ ನಾಲ್ಕು : ಮರದ ಮಾಧ್ಯಮದ ಜನಪದ ಶಿಲ್ಪಕಲೆ, ಪುಟ -೯೩

೮. ..... ಅದೇ .....

[illegible]

**೧.೧ ಗೃಹೋಪಕರಣಗಳಲ್ಲಿನ ಶಿಲ್ಪ ವಿನ್ಯಾಸಗಳು :** ಗ್ರಾಮೀಣ ಜನಪದರು ಮನೆಯಲ್ಲಿ ಕುಟ್ಟಲು, ಬೀಸಲು, ಕತ್ತರಿಸಲು, ಅರೆಯಲು, ಅಲ್ಲದೆ ಇನ್ನೂ ಹಲವಾರು ಉದ್ದೇಶಗಳಿಗಾಗಿ ಲೋಹ ಮಾಧ್ಯಮದ ಉಪಕರಣಗಳನ್ನು ಬಳಸುತ್ತಾರೆ. ಅವು ಕೇವಲ ಉಪಕರಣಗಳಾದರೂ ಅವುಗಳಲ್ಲಿ ಶಿಲ್ಪ, ಉಬ್ಬುಶಿಲ್ಪದ ಅನೇಕ ತರಹದ ರಚನೆಯಾಗಿರುವುದನ್ನು ಕಾಣಬಹುದು. ಇಂಥ ಶಿಲ್ಪಗಳನ್ನು ಹೊಂದಿರುವಂತಹ ಉಪಕರಣಗಳೆಂದರೆ ವಿಭೂತಿ ಬುಟ್ಟಿ, ಪ್ರಸಾಧನ ಪೆಟ್ಟಿಗೆಗಳು, ಅಂತರ್ದಾನ ಪೆಟ್ಟಿಗೆಗಳು, ಬೆತ್ತದ ಹಿಡಿಕೆಗಳು, ಕುಳಿತುಕೊಳ್ಳುವ ಫೀಠೋಪಕರಣಗಳು ಇಂಥ ಉಪಕರಣಗಳಲ್ಲಿ ಸೂಕ್ಷ್ಮವಾದ ಶಿಲ್ಪಗಳಿರುವುದನ್ನು ಕಾಣಬಹುದು.

**೧.೨ ಅಡಕೊತ್ತುಗಳಲ್ಲಿನ ಶಿಲ್ಪ ವಿನ್ಯಾಸಗಳು :** ಕಲಾತ್ಮಕವಾದ ಅಡಕೊತ್ತುಗಳಲ್ಲಿ ಆನೆ, ಟಗರು, ಕುದುರೆ, ಕುದುರೆ ಸವಾರ, ನಂದಿ, ಮೊಸಳೆ, ಮೀನು ಮುಂತಾದ ಪ್ರಾಣಿಶಿಲ್ಪಗಳು ಎರಕ ಹೊಯ್ಯುವಿಕೆಯಿಂದ ರಚಿಸಲಾಗಿರುತ್ತವೆ. ಅಲ್ಲದೆ ಮಿಥುನಕ್ಕೆ ಸಂಬಂಧಿಸಿದ ಅಪ್ಪಿಕೊಂಡಿರುವ ದಂಪತಿಗಳು, ದಂಪತಿಗಳು ಪ್ರೀತಿಸುತ್ತಿರುವುದು, ದಂಪತಿಗಳು ರಾಸಕ್ರೀಡೆಯಲ್ಲಿ ತಲ್ಲೀನವಾಗಿರುವಂತೆಯೂ ರಚಿಸಲಾಗಿವೆ. ಇನ್ನೂ ಕೆಲವು ಅಡಕೊತ್ತುಗಳಲ್ಲಿ ರಾಶಿಚಕ್ರಗಳಿವೆ. ಅಲ್ಲಿ ಮಿಥುನ, ಸಿಂಹ, ವೃಶ್ಚಿಕ ಮುಂತಾದವುಗಳನ್ನು ಎರಕಹೊಯ್ದು ರಚಿಸಲಾಗಿದೆ. ಕೆಲವು ಶಿಲ್ಪಗಳಲ್ಲಿ ಯುದ್ಧವೀರರನ್ನು ಶಿಲ್ಪಿಸಲಾಗಿದೆ.

**೧.೩ ಆಯುಧಗಳಲ್ಲಿನ ಶಿಲ್ಪ ವಿನ್ಯಾಸಗಳು :** ಕತ್ತರಿಸಲು, ಕೊಲ್ಲಲು, ಬಳಸಲ್ಪಡುವ ವಸ್ತುಗಳಾದ ಕತ್ತಿ, ಪರಶು, ಗುರಾಣಿ, ಬಿಲ್ಲು, ಬಾಣ, ತ್ರಿಶೂಲ, ಕಠಾರಿ, ಹಲಾಯುಧ, ಈಟಿ, ಗಂಡು ಕೊಡಲಿ, ಮುಂತಾದವುಗಳಲ್ಲಿ ಕಲಾತ್ಮಕವಾದ ಉಬ್ಬುಶಿಲ್ಪಗಳು ರಚಿಸಲ್ಪಟ್ಟಿರುತ್ತವೆ. ಹುಲಿ, ಉಡ, ಆನೆ ಮುಂತಾದ ಕಾಡು ಪ್ರಾಣಿಗಳಲ್ಲದೆ ಸರ್ಪದಂತಹ ವಿಷಜಂತುಗಳ ಶಿಲ್ಪಗಳನ್ನೂ ರಚಿಸಲಾಗಿರುತ್ತದೆ.

## ೨. ಲೋಹ ಮಾಧ್ಯಮದ ಮನರಂಜನ ಮೂಲ ಜನಪದ ಶಿಲ್ಪಕಲೆ[೯]

ಜನಪದರು ಲೋಹಮಾಧ್ಯಮದ ಜನಪದ ಶಿಲ್ಪಕಲೆಯನ್ನು ಸೌಂದರ್ಯ ಮೂಲದಲ್ಲಿ ಬೆಳೆಸಿಕೊಂಡು ಬಂದಿರುವರು. ಈ ಸೌಂದರ್ಯ ಮೂಲದ ಜನಪದ ಶಿಲ್ಪಕಲೆಯನ್ನು ಅವರು ಪ್ರಯೋಜನದ ಹಿನ್ನೆಲೆಯಲ್ಲಿ ಬೆಳೆಸಿಕೊಂಡು ಬಂದಂತೆ ಮನರಂಜನೆಯ ಸಾಧನವಾಗಿಯೂ ಬಳಸಿಕೊಂಡು ಬಂದಿರುವರು. ದೈನಂದಿನ ಸಂಘರ್ಷಯುತ ಬದುಕಿನಲ್ಲಿ ಸಂಕುಚಿತಗೊಂಡ ಮನಸ್ಸಿಗೆ ವಿಶ್ರಾಂತಿ ನೀಡಲು ಜನಪದರು ತಮ್ಮದೇ ಆದ ಸಾಧನ ಸಲಕರಣೆಹಳನ್ನು ಬಳಕೆಗೆ ತಂದರು.[೧೦] ಮತ್ತು ಅವು ತಮಗೂ ಹಾಗೂ ಇತರರಿಗೂ ಆಕರ್ಷಕವಾಗಿ ಕಾಣಲೆಂಬ ಆಶಯದಿಂದ ಕೂಡಿದವುಗಳಾಗಿ

---

೯. ವಿವರಗಳಿಗೆ ನೋಡಿ : ಇದೇ ಮಹಾ ಪ್ರಬಂಧದ ಅಧ್ಯಾಯ ನಾಲ್ಕು : ಮರದ ಮಾಧ್ಯಮದ ಜನಪದ ಶಿಲ್ಪಕಲೆ, ಪುಟ -೧೦೫

೧೦. ಡಾ. ಎಸ್.ಸಿ.ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ - ೧೫೪

[illegible]


[illegible]

[illegible]

[illegible]

[illegible]


[illegible]



ವೀರಭದ್ರನ ಶಿಲ್ಪ ( ಹಲಕಟ್ಟಿ)



ನಂದಿಯ ಶಿಲ್ಪ.



ಆಭರಣಗಳಲ್ಲಿನ ಶಿಲ್ಪಗಳು.



ಅಡಕೊತ್ತುಗಳಲ್ಲಿನ ಶಿಲ್ಪಗಳು.

ಮನರಂಜನ ಮೂಲದ ಜನಪದ ಶಿಲ್ಪಗಳು ಗಮನ ಸೆಳೆಯುತ್ತವೆ. ಮುಖ್ಯವಾಗಿ ತಾನು ತೊಡುವ ಆಭರಣಗಳು, ಬಳಸುವ ವಾದ್ಯಗಳು, ಇತರೆಲ್ಲ ಮನರಂಜನೆ ನೀಡಬಲ್ಲ ವಸ್ತುಗಳೆಲ್ಲ ಕಲಾತ್ಮಕ ವಿನ್ಯಾಸಗಳಿಂದ ಕೂಡಿ ರಚನೆಗೊಂಡವುಗಳಾಗಿವೆ.

**೨.೧ ಆಭರಣಗಳಲ್ಲಿನ ಶಿಲ್ಪವಿನ್ಯಾಸಗಳು :** ಆಭರಣಗಳು ವಿವಿಧ ಬಗೆಯಲ್ಲಿರುತ್ತವೆ. ದೇವರಿಗೆ ಧರಿಸುವ ಆಭರಣಗಳು, ಮನುಷ್ಯರು ಅದರಲ್ಲೂ ಮಹಿಳೆಯರು ಧರಿಸುವ ಆಭರಣಗಳು ಎಂದು ಆಭರಣಗಳನ್ನು ವಿಂಗಡಿಸಬಹುದು. ಆಭರಣಗಳನ್ನು ಸಾಮಾನ್ಯವಾಗಿ ಬೆಳ್ಳಿ, ಬಂಗಾರ, ಹಿತ್ತಾಳೆ, ತಾಮ್ರ ಇತ್ಯಾದಿ ಲೋಹಗಳಲ್ಲಿ ರಚಿಸಲ್ಪಟ್ಟವುಗಳಾಗಿರುತ್ತವೆ.

**೨.೨ ವಾದ್ಯಗಳಲ್ಲಿನ ಶಿಲ್ಪವಿನ್ಯಾಸಗಳು :** ಗ್ರಾಮೀಣ ಜನತೆ ಬಳಸುವ ವಾದ್ಯಗಳಲ್ಲಿ ಉಬ್ಬು ಶಿಲ್ಪ ವೈವಿಧ್ಯವನ್ನು ಕಾಣಬಹುದು. ಕಿನ್ನರಿ, ತಂಬೂರಿ, ಏಕದಾರಿ, ಚೌಡಿಕೆ ಇತ್ಯಾದಿ ತಂತೀ ವಾದ್ಯಗಳಾದರೆ, ಓಲಗ, ತುತ್ತೂರಿ, ಕೊಂಬು, ಶಂಖ, ಪಿಳ್ಳಂಗೋವಿ, ಕಹಳೆ, ದಮ್ಮಡಿ, ಜಾಗಟೆ, ತಾಳಗಳಲ್ಲಿ ಉಬ್ಬು ಶಿಲ್ಪಗಳನ್ನು ಕಾಣಬಹುದು.

ಬಹು ಕಾಲ ಬಾಳಿಕೆ ಬರುಘಲೋಹ ಮಾಧ್ಯಮದಲ್ಲಿ ಸೌಂದರ್ಯ ಮೂಲದ ಹಿನ್ನೆಲೆಯಲ್ಲಿ ಹಲವಾರು ಬಗೆಯ ಶಿಲ್ಪಗಳು ರೂಪ ತಳೆದಿವೆ. ಆ ಶಿಲ್ಪಗಳು ಮುಖ್ಯವಾಗಿ ಪ್ರಯೋಜನಮೂಲ ಹಾಗೂ ಮನರಂಜನ ಮೂಲದಲ್ಲಿ ಹುಟ್ಟಿ ವಿಕಾಸ ಹೊಂದಿ ಜನಪದರ ಬದುಕನ್ನು ಆವರಿಸಿಕೊಂಡವುಗಳಾಗಿವೆ. ಜನಪದರು ತಾವು ದಿನನಿತ್ಯ ವಿವಿಧ ಉದ್ದೇಶಗಳಿಗಾಗಿ ಉಪಯೋಗಿಸುವ ಉಪಕರಣಗಳಲ್ಲಿ ಹಲವಾರು ಬಗೆಯ ಪ್ರಾಣಿ, ಪಕ್ಷಿಗಳ ಶಿಲ್ಪಗಳನ್ನು ಕಂಡರಿಸಿದ್ದಾರೆ. ಇಂತಹ ಶಿಲ್ಪಗಳು ಅವರ ಸೌಂದರ್ಯ ಪ್ರಜ್ಞೆಯ ಧ್ಯೋತಕವಾಗಿಯೂ ಮುಖ್ಯವಾಗಿವೆ.

## II. ಲೋಹಮಾಧ್ಯಮದ ಧರ್ಮಮೂಲ ಜನಪದ ಶಿಲ್ಪಕಲೆ[೧೧]

ದೇವರು, ಧರ್ಮವನ್ನು ಕಲ್ಪಿಸಿಕೊಂಡ ಮನುಷ್ಯ, ಅವುಗಳಿಗೆ ತನ್ನದೇ ಆದ ರೂಪ, ಆಕಾರಗಳನ್ನು ಕೊಟ್ಟು ಪೂಜಿಸಲು ಆರಂಭಿಸಿದನು. ಈ ಹಂತದಲ್ಲಿ ಆತ ಮಣ್ಣು, ಮರ ಮತ್ತು ಶಿಲೆಗಳಲ್ಲಿ ತಾನು ಕಲ್ಪಿಸಿಕೊಂಡ ದೇವರುಗಳನ್ನು ನಿರ್ಮಿಸಿದನು. ಕಾಲಕ್ರಮೇಣ ಲೋಹದ ಅವಿಷ್ಕಾರದ ನಂತರ ಇತರೆಲ್ಲ ಮಾಧ್ಯಮಗಳಿಗಿಂತ ಹೆಚ್ಚು ಬಾಳಿಕೆ ಬರುವುದು ಲೋಹ ಮಾಧ್ಯಮ ಎಂದು ಗೊತ್ತಾದ ಬಳಿಕ ಲೋಹಮಾಧ್ಯಮದಲ್ಲೂ ದೇವರ ಶಿಲ್ಪಗಳನ್ನು ಮತ್ತು ತನಗೆ ಬೇಕಾದ ಅನೇಕ ಶಿಲ್ಪಗಳನ್ನು ರಚಿಸಿದನು. ಹೀಗೆ ಲೋಹಮಾಧ್ಯಮದ ಜನಪದ ಶಿಲ್ಪಕಲೆಯನ್ನು ನಮ್ಮ ಜನಪದರು ಇಂದಿಗೂ ಮುಂದುವರೆಸಿಕೊಂಡು ಬಂದಿದ್ದಾರೆ. ಈ ಧರ್ಮಮೂಲ ಜನಪದ ಶಿಲ್ಪಕಲೆಯನ್ನು ೧. ಧಾರ್ಮಿಕ

---

೧೧. ವಿವರಗಳಿಗೆ ನೋಡಿ : ಇದೇ ಮಹಾ ಪ್ರಬಂಧದ ಅಧ್ಯಾಯ ನಾಲ್ಕು : ಮರದ ಮಾಧ್ಯಮದ ಜನಪದ ಶಿಲ್ಪಕಲೆ, ಪುಟ -೧೧೨

[illegible]

[illegible]

[illegible]

[illegible]

[illegible]

ಹಿನ್ನೆಲೆಯ ಜನಪದ ಶಿಲ್ಪಕಲೆ ೨. ತಾಂತ್ರಿಕ ಹಿನ್ನೆಲೆಯ ಜನಪದ ಶಿಲ್ಪಕಲೆಯೆಂದು ವಿಂಗಡಿಸಿ ಅಧ್ಯಯನ ಮಾಡಬಹುದು.

## ೧. ಲೋಹ ಮಾಧ್ಯಮದ ಧಾರ್ಮಿಕ ಹಿನ್ನೆಲೆಯ ಜನಪದ ಶಿಲ್ಪಕಲೆ

ಲೋಹಮಾಧ್ಯಮದ ಜನಪದ ಶಿಲ್ಪಕಲೆಯು ಧಾರ್ಮಿಕ ಮನೋಭಾವದ ಹಿನ್ನೆಲೆಯಲ್ಲೂ ಬೆಳೆದು ಬಂದಿದೆ. ಇಂಥ ಕೆಲವು ಶಿಲ್ಪಗಳನ್ನು ಇಲ್ಲಿ ನೋಡಬಹುದು. ಈ ಎಲ್ಲ ಶಿಲ್ಪಗಳಿಗೂ ಒಂದಿಲ್ಲಾ ಒಂದು ಬಗೆಯ ಧಾರ್ಮಿಕ ಹಿನ್ನೆಲೆ ಇದ್ದೇ ಇರುತ್ತದೆ. ಈ ಧಾರ್ಮಿಕ ಹಿನ್ನೆಲೆಯ ಜನಪದ ಶಿಲ್ಪಕಲೆಯನ್ನು ಹಲವು ದೇವತಾ ಶಿಲ್ಪಗಳ ಆಧಾರದಿಂದ ಉಪವಿಂಗಡಣೆ ಮಾಡಿಕೊಂಡು ಅಧ್ಯಯನ ಮಾಡಬಹುದಾಗಿದೆ. ಆ ವಿಂಗಡಣೆ ಹೀಗಿರುತ್ತದೆ ೧. ದೇವತಾ ಶಿಲ್ಪಗಳು ೨. ದೇವರ ವಾಹನ ಶಿಲ್ಪಗಳು. ಇವುಗಳಲ್ಲಿ ಮತ್ತೆ ಉಪ ವಿಂಗಡಣೆಗಳು ಬರುತ್ತವೆ.

**೧.೧ ದೇವತಾ ಶಿಲ್ಪಗಳು :** ಲೋಹಮಾಧ್ಯಮದಲ್ಲಿ ಮನುಷ್ಯ ಕೋಟೆ ಕೊತ್ತಲಗಳನ್ನು ಕಟ್ಟಿಕೊಂಡು ಜೀವಿಸುತ್ತಿರುವಾಗ ಒಬ್ಬ ರಾಜ, ಇನ್ನೊಬ್ಬ ರಾಜನನ್ನು ಗೆಲ್ಲಲು ಯುದ್ಧ ಮಾಡಲು ಬಿಲ್ಲು, ಬಾಣ, ಭರ್ಚಿ, ರಥ, ಚಕ್ರ, ಕೊಡಲಿ, ಕತ್ತಿ ಮುಂತಾದ ಆಯುಧ ಮತ್ತಿತರ ಸಾಧನಗಳನ್ನು ಮಾಡಲು ಲೋಹವನ್ನು ಬಳಸತೊಡಗಿದನು. ಆಮೇಲೆ ದೈವಗಳ ಮೂರ್ತಿಗಳನ್ನು ಸಹ ಲೋಹದಿಂದ ಮಾಡಲಾರಂಭಿಸಿದನು. ಉತ್ತರ ಕರ್ನಾಟಕದ ಕೆಲವು ದೇವತಾ ಶಿಲ್ಪಗಳನ್ನು ಇಲ್ಲಿ ಗಮನಿಸಬಹುದು. ಸಾಮಾನ್ಯವಾಗಿ ಅವುಗಳನ್ನು ಅ. ಪುರುಷ ದೇವತಾ ಶಿಲ್ಪಗಳು ಆ. ಸ್ತ್ರೀದೇವತಾ ಶಿಲ್ಪಗಳು ಇ. ದೇವರ ವಾಹನ ಶಿಲ್ಪಗಳು ಎಂದು ವಿಂಗಡಿಸಬಹುದು.

**ಅ. ಪುರುಷ ದೇವತಾ ಶಿಲ್ಪಗಳು :** ಮಾನವನಿಂದ ಸೃಷ್ಟಿಕೊಂಡ ಜನಪದ ದೇವತಾ ಶಿಲ್ಪಗಳು ನೂರಾರು ಬಗೆಯವು. ಅವುಗಳಲ್ಲಿ ಲೋಹಮಾಧ್ಯಮದಲ್ಲಿ ಹುಟ್ಟಿಕೊಂಡು ಪೂಜೆಗೊಳ್ಳುವ ಪುರುಷ ದೇವತಾ ಶಿಲ್ಪಗಳು ಪ್ರಮುಖವಾಗಿ ಗಮನ ಸೆಳೆಯುತ್ತವೆ. ಪುರುಷ ದೇವತಾ ಶಿಲ್ಪಗಳಲ್ಲಿ ಮತ್ತೆ ೧. ಹಿಂದೂ ದೇವತಾ ಶಿಲ್ಪಗಳು ೨. ಮುಸ್ಲಿಂ ದೇವತಾ ಶಿಲ್ಪಗಳು ಮತ್ತು ೩. ಹಿಂದೂ-ಮುಸ್ಲಿಂ ಸಂಕೀರ್ಣ ಶಿಲ್ಪಗಳು ಎಂದು ವಿಂಗಡಿಸಿ ಅಧ್ಯಯನ ಮಾಡಬಹುದು.

## ೧. ಹಿಂದೂ ದೇವತಾ ಶಿಲ್ಪಗಳು

ಲೋಹ ಮಾಧ್ಯಮದಲ್ಲಿ ಹಿಂದೂ ದೇವತಾ ಶಿಲ್ಪಗಳು ಹಲವಾರು ಬಗೆಯಲ್ಲಿ ಕಂಡುಬರುತ್ತವೆ. ಅಂತಹವುಗಳಲ್ಲಿ ಅ. ಮಲ್ಲಯ್ಯನ ಶಿಲ್ಪಗಳು, ಆ. ವೀರಭದ್ರನ ಶಿಲ್ಪಗಳು, ಇ. ಹಿರೋಡ್ಯಾನ ಶಿಲ್ಪಗಳು ಇವುಗಳನ್ನು ಇಲ್ಲಿ ಮಾದರಿಗಾಗಿ ನೋಡಬಹುದಾಗಿದೆ.



ಗೊಲ್ಲಾಳನ ಶಿಲ್ಪಗಳು ( ಖೈನೂರ )



ಲೋಹ ಶಿಲ್ಪ ( ಬೇಲೂರು )

**ಅ. ಮಲ್ಲಯ್ಯನ ಶಿಲ್ಪಗಳು :** ಬಹುತೇಕ ಜನಪದ ದೈವಗಳಂತೆ ಜಾತಿ, ಮತ, ಪಂಥಗಳನ್ನು ಮೀರಿ ನಿಂತು ಪೂಜಿಸಿಕೊಳ್ಳುವ ದೈವ ಮಲ್ಲಯ್ಯ. ಈತನಿಗೆ ಮಲ್ಲಾರಿ, ಮಾರ್ತಾಂಡ, ಮಾರ್ತಾಂಡ ಭೈರವ, ಮೈಲಾರ, ಮೈಲಾರಲಿಂಗ, ಮೈಲಾರ ದೇವರು ಮೊದಲಾದ ಹೆಸರುಗಳುಂಟು. ಈ ದೇವತೆಯ ಮೂಲವನ್ನು ಕುರಿತು ಹಲವು ಕಥೆಗಳು, ಕಲ್ಪನೆಗಳು ಹುಟ್ಟಿಕೊಂಡಿವೆ. [೧೨] ವಚನಗಳ ಕಾಲದಿಂದಲೂ (ಕ್ರಿ.ಶ.-೧೨೦೦) ಈ ಮೈಲಾರ ಅಥವಾ ಮಲ್ಲಯ್ಯ ಶಿವನ ಅವತಾರವೆಂದು ನಂಬಿಕೆ ಬೆಳೆದು ಬಂದಿದೆ. ಆದರೆ ಬಸವಾದಿ ಶರಣರು ಮಲ್ಲಯ್ಯ ಶಿವನ ಅವತಾರವೆಂಬುದನ್ನು ಒಪ್ಪಿದಂತಿಲ್ಲ. [೧೩] ಅದೇನೇ ಇದ್ದರು ಜನಪದರ ನಂಬಿಕೆಯಂತೆ ಮಲ್ಲಯ್ಯ ಶಿವನ ಅವತಾರ. ಆತ ಕರ್ನಾಟಕದಲ್ಲಿ ಮಲ್ಲಯ್ಯನಾಗಿ, ಮಹಾರಾಷ್ಟ್ರದಲ್ಲಿ ಖಂಡೋಬನಾಗಿ ಕರೆಯಲ್ಪಡುತ್ತಿದ್ದಾನೆ.

ಈಗ ಗುಲಬರ್ಗಾ ಜಿಲ್ಲೆಯ ಯಾದಗಿರಿ ತಾಲೂಕಿನ ಮೈಲಾರಪುರ, ಬೀದರ ಜಿಲ್ಲೆಯ ಬಾಲ್ಕಿ ತಾಲೂಕಿನ ಮಲ್ಲಾಪೂರದ ಮಲ್ಲಯ್ಯ ಹಾಗೂ ಬಿಜಾಪುರ ಜಿಲ್ಲೆಯ ದೇವರ ಹಿಪ್ಪರಗಿಯ ಮಲ್ಲಯ್ಯರು ತುಂಬ ಪ್ರಸಿದ್ಧರಾಗಿದ್ದಾರೆ. ಈ ದೇವರ ಆರಾಧಕರು ತಮ್ಮ ಮನೆಯ ಜಗುಲಿಯ ಮೇಲೆ ಕುದುರೆಯ ಮೇಲೆ ಕುಳಿತ ಮಲ್ಲಯ್ಯನ ಕಂಚಿನ ಇಲ್ಲವೆ ಬೆಳ್ಳಿಯ ಮೂರ್ತಿಶಿಲ್ಪವನ್ನು ಇಟ್ಟು ಪೂಜಿಸುವರು. ಈ ಮಲ್ಲಯ್ಯ ಅಪ್ಪಟ ಜನಪದ ದೈವ. ಶಿಲ್ಪವೂ ಜನಪದ ಶೈಲಿಯಲ್ಲೇ ರಚನೆಯಾಗಿರುತ್ತದೆ. ಅವನ ವಸ್ತ್ರಾಲಂಕಾರಗಳು ಹಾಗೂ ಮಲ್ಲಯ್ಯನೆಂಬ ಹೆಸರೂ ಜನಪದವೇ ಆಗಿದೆ. ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಬಿಜಾಪುರ ಮತ್ತು ಗುಲಬರ್ಗಾ ಜಿಲ್ಲೆಗಳ ಹಳ್ಳಿ-ಹಳ್ಳಿಗಳ ಮನೆ ಮನೆಗಳಲ್ಲಿ ಜಗುಲಿಯ ಮೇಲೆ ಈತನ ಶಿಲ್ಪಗಳು ಕಂಡುಬರುತ್ತವೆ. ಹೆಚ್ಚಾಗಿ ಶೈವ ಪರಂಪರೆಯ ಜನರ ಮನೆಯಲ್ಲಿ ಮಾತ್ರ ಪೂಜೆಗೊಳ್ಳುತ್ತವೆ.

**ರಚನೆ :** ಮಲ್ಲಯ್ಯನ [೧೪] ಶಿಲ್ಪಗಳೆಲ್ಲ ಹೆಚ್ಚಾಗಿ ಎರಕ ಹೊಯ್ಯುವ ಪದ್ಧತಿಯಿಂದ ರಚನೆಗೊಂಡವುಗಳಾಗಿರುತ್ತವೆ. ಮತ್ತು ಚಿಕ್ಕ ಪ್ರಮಾಣದ ಈ ಶಿಲ್ಪಗಳು ಟೊಳ್ಳಾಗಿರದೇ ಘಟ್ಟಿಯಾಗಿರುತ್ತವೆ. ಸಾಮಾನ್ಯವಾಗಿ ಮಲ್ಲಯ್ಯನದು ಮೀಸೆ ಹೊತ್ತು ತಲೆಗೆ ರುಮಾಲು ಸುತ್ತಿ ಕೈಯಲ್ಲಿ ಖಡ್ಗ ಹಿಡಿದು, ಕುದುರೆಯ ಮೇಲೆ ಕುಳಿತ ಭಂಗಿಯ ಶಿಲ್ಪವಾಗಿರುತ್ತದೆ.

**ಆ. ವೀರಭದ್ರನ ಶಿಲ್ಪಗಳು :** ವೀರಭದ್ರನು ಗ್ರಾಮೀಣರ ಉಗ್ರ ದೈವ. [೧೫] ವಿಶೇಷವಾಗಿ ವೀರಶೈವರಲ್ಲಿ ಮಹತ್ವ ಪಡೆದ ದೈವವಾದರೂ ಹಳ್ಳಿಗರೆಲ್ಲರಿಗೂ ಹತ್ತಿರದ ದೈವ. ಈ ದೈವದ ಶಿಲ್ಪಗಳು ಸಾಮಾನ್ಯವಾಗಿ ಶಿಲೆ ಮತ್ತು ಲೋಹ ಮಾಧ್ಯಮಗಳಲ್ಲಿ ರಚನೆಯಾಗಿರುತ್ತವೆ. ಶಿಲೆಯಲ್ಲಿ ದೊಡ್ಡ ಆಕಾರದ ಶಿಲ್ಪಗಳು ರಚನೆಯಾಗಿದ್ದು ಕಂಡು ಬಂದರೆ, ಲೋಹಮಾಧ್ಯಮದ ಚಿಕ್ಕ ಆಕಾರದ ಶಿಲ್ಪಗಳು

---

೧೨. ವಿವರಗಳಿಗೆ ನೋಡಿ : ಇತಿಹಾಸ ದರ್ಶನ ಸಂಪುಟ - ೧೬, ಪುಟ - ೧೩೯

೧೩. ಡಾ. ಸಿ.ಕೆ. ನಾವಲಗಿ : ವಚನ ಸಾಹಿತ್ಯ ಮತ್ತು ಜಾನಪದ, ಪುಟ - ೬೯

೧೪. ಮಲ್ಲಯ್ಯನ ಹೆಂಡತಿ ಮಾಳಮ್ಮ, ಇವರಿಬ್ಬರೂ ಬೇರಾರೂ ಅಲ್ಲ, ಶಿವ-ಪಾರ್ವತಿಯರು

೧೫. ವಿವರಗಳಿಗೆ ನೋಡಿ : ಇದೇ ಮಹಾಪ್ರಬಂಧದ ಅಧ್ಯಾಯ ಐದು, ಶಿಲಾ ಮಾಧ್ಯಮದ ಜನಪದ ಶಿಲ್ಪಕಲೆ, ಪುಟ -೧೬೫

ರಚನೆಯಾದದ್ದು ಹೆಚ್ಚಾಗಿ ಕಂಡು ಬರುತ್ತವೆ. ಲೋಹ ಮಾಧ್ಯಮದ ವೀರಭದ್ರನ ಶಿಲ್ಪಗಳು ಉಬ್ಬು ಹಾಗೂ ದುಂಡು ಎರಡೂ ಪದ್ಧತಿಯಲ್ಲಿ ರಚನೆಯಾಗಿದ್ದು ಕಂಡುಬರುತ್ತವೆ.

ವೀರಭದ್ರನ ಈ ಶಿಲ್ಪಗಳು ಹಿತ್ತಾಳೆ, ಕಂಚು ಹಾಗೂ ತಾಮ್ರಗಳಲ್ಲಿ ರಚನೆಯಾಗಿರುತ್ತವೆ. ಲೋಹದ ಈ ಶಿಲ್ಪಗಳನ್ನು ಕರ್ನಾಟಕದ ಎಲ್ಲ ಭಾಗಗಳಲ್ಲೂ ಶೈವ ಸಂಪ್ರದಾಯದವರು ಮನೆಯಲ್ಲಿ ಜಗಲಿಯ ಮೇಲಿಟ್ಟು ಪೂಜಿಸುವ ಪದ್ಧತಿ ರೂಢಿಯಲ್ಲಿದೆ.

**ರಚನೆ :** ಉಬ್ಬು ಶಿಲ್ಪವೇ ಇರಲಿ, ದುಂಡು ಶಿಲ್ಪವೇ ಆಗಿರಲಿ ಎರಕ ಹೊಯ್ಯುವಿಕೆಯ ತಂತ್ರದಿಂದ ಹೆಚ್ಚಾಗಿ ಈ ಶಿಲ್ಪಗಳು ರಚನೆಯಾಗಿದ್ದು ಕಂಡುಬರುತ್ತವೆ. ಕೆಲವೊಮ್ಮೆ ತಾಮ್ರ ಅಥವಾ ಹಿತ್ತಾಳೆಯ ಲೋಹದ ಹಾಳೆಯಲ್ಲಿ ಉಬ್ಬೊತ್ತು ತಂತ್ರದಿಂದ ರಚಿಸಿರುತ್ತಾರೆ. ಇಂಥ ಶಿಲ್ಪಗಳು ತೀರ ಚಿಕ್ಕ ಪ್ರಮಾಣದವುಗಳಾಗಿರುತ್ತವೆ. ವೀರಭದ್ರನ ಉಗ್ರಾವತಾರದ ಪ್ರದರ್ಶನ ಮಾಡುವ ಪುರಂತಿಕೆಯವರು ವೇಷಧರಿಸಿದ್ದಾಗ ಸೊಂಟಕ್ಕೆ ವೀರಭದ್ರನ ಉಬ್ಬುಶಿಲ್ಪವನ್ನು ಕಟ್ಟಿಕೊಂಡಿರುತ್ತಾರೆ.

ಸಾಮಾನ್ಯವಾಗಿ ವೀರಭದ್ರನ ಶಿಲ್ಪಗಳು ನಿಂತ ಭಂಗಿಯಲ್ಲೇ ಇರುತ್ತವೆ. ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಕತ್ತರಿಸಲ್ಪಟ್ಟ ರುಂಡ ಇಲ್ಲವೆ ಕಠಾರಿ ಇರುತ್ತದೆ. ಸಾಮಾನ್ಯವಾಗಿ ವೀರಭದ್ರನ ಶಿಲ್ಪಕ್ಕೆ ಎರಡು ಇಲ್ಲವೆ ನಾಲ್ಕು ಕೈಗಳಿರುತ್ತವೆ. ನಾಲ್ಕು ಕೈಗಳಿರುವ ವೀರಭದ್ರನ ಇನ್ನೆರಡು ಕೈಗಳಲ್ಲಿ ಬಲಗೈಯಲ್ಲಿ ತ್ರಿಶೂಲ ಇಲ್ಲವೆ ಬಾಣ, ಎಡಗೈಯಲ್ಲಿ ಬಿಲ್ಲು ಇರುತ್ತವೆ. ಮತ್ತು ಸೊಂಟದಲ್ಲಿ ರುಂಡಗಳ ಮಾಲೆ, ಕೊರಳಲ್ಲಿ ರುದ್ರಾಕ್ಷಿ ಸರ ಇರುತ್ತವೆ. ಮುಖದಲ್ಲಿ ಅಗಲವಾದ ಕಣ್ಣುಗಳು ಕೋರೆ ಮೀಸೆಯಿರುವ ಗಂಭೀರ ಮುಖಭಾವವಿರುತ್ತದೆ. ತಲೆಗೆ ಕಿರೀಟವಿರುತ್ತದೆ. ನಿಂತುಕೊಂಡ ವೀರಭದ್ರನ ಬಲಕ್ಕೆ ಆಡಿನ ತಲೆಯಿರುವ ದಕ್ಷಬ್ರಹ್ಮನು ಕೈಮುಗಿದು ನಿಂತುಕೊಂಡಿರುವ ಚಿಕ್ಕ ಆಕಾರದ ಶಿಲ್ಪವು ರೂಪ ತಳೆದಿರುತ್ತದೆ. ಬೀದರ ಜಿಲ್ಲೆಯ ಹುಮನಾಬಾದನಲ್ಲಿರುವ ವೀರಭದ್ರ ದೇವಸ್ಥಾನದಲ್ಲಿ ಲೋಹಮಾಧ್ಯಮದ ದುಂಡು ಶಿಲ್ಪ[೧೬]ವಿದ್ದು ಇದು ಉತ್ಸವ ಮೂರ್ತಿಯಾಗಿದೆ. ಇದೇ ರೀತಿ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಚೊಳಚಗುಡ್ಡದ ವೀರಭದ್ರ ದೇವಸ್ಥಾನದಲ್ಲಿನ ವೀರಭದ್ರನ ಶಿಲ್ಪವು ಗಮನಾರ್ಹವಾಗುತ್ತದೆ.

**ಇ. ಹಿರೋಡ್ಯಾನ ಶಿಲ್ಪಗಳು :** ಏಳು ಹೆಡೆಗಳ ಹಿರಿಯ ಒಡೆಯನೇ ಹಿರೋಡ್ಯಾ.[೧೭] ಇವನು ಹೆಣ್ಣು ಮಕ್ಕಳ ದೇವತೆ. ಫಲಸಂತಾನ ನೀಡುವವನು. ಮತ್ತು ಹೆಣ್ಣುಮಕ್ಕಳನ್ನು ಕಾಪಾಡುವವನು, ಎಂದು ಜನಪದರು ನಂಬುತ್ತಾರೆ. ಈ ಲೋಹಶಿಲ್ಪವು ಏಳು ಹೆಡೆಗಳ ರೂಪದಲ್ಲಿ ಇರುವುದು. ಗುಲಬರ್ಗಾ ಜಿಲ್ಲೆಯ, ಚಿತ್ತಾಪೂರ ತಾಲೂಕಿನ ಸಂಕರಡಗಿ ಗ್ರಾಮದ ಹಿರೋಡ್ಯಾನಿಗೆ ಯುಗಾದಿಯ ದಿನ, ಮಾಲಗಿತ್ತಿ ಹಿರೋಡ್ಯಾನಿಗೆ ವೈಶಾಖದಲ್ಲಿ ಹೊಳಿ ಜಾತ್ರೆ ಮಾಡಿಸುತ್ತಾರೆ. ಅಂದು ಅವನಿಗೆ ಗಂಗಾ ಸ್ನಾನ ಮಾಡಿಸಿ,

---

೧೬. ಚಿತ್ರಕೃಪೆ : ವೀರೇಂದ್ರ ಶಾ, ಕಲಾವಿದರು, ಗುಲಬರ್ಗಾ

೧೭. ವಿವರಗಳಿಗೆ ನೋಡಿ : ಇದೇ ಮಹಾ ಪ್ರಬಂಧದ ಅಧ್ಯಾಯ ಐದು, ಶಿಲಾ ಮಾಧ್ಯಮದ ಜನಪದ ಶಿಲ್ಪಕಲೆ, ಪುಟ -೧೭೩

ಮೆರವಣಿಗೆ ಮಾಡುವರು. ಸದಾ ಹೆಣ್ಣು ಮಕ್ಕಳೊಡನೆ ಇರುವವನಿಗೆ ಹೆಂಗಸರ ಬಲ್ಲಿರುವ ಹಿರೋಡ್ಯಾ ಎಂದು ಹಳ್ಳಿಗಳಲ್ಲಿ ವ್ಯಂಗ್ಯವಾಡುವರು. ಈತ ಸರ್ವ ಸ್ತ್ರೀಯರ ದೈವ. ಈ ಶಿಲ್ಪವು ತಾಮ್ರ ಇಲ್ಲವೆ, ಕಂಚಿನದಾಗಿರುತ್ತದೆ.

ಬಿಜಾಪುರದ ಸಿಂದಗಿ ತಾಲೂಕಿನ ಗೋಲಗೇರಿ ಮತ್ತು ಖೈನೂರು, ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಬೇಲೂರಿನಲ್ಲಿ ಹೀಗೆ ಅನೇಕ ಊರುಗಳಲ್ಲಿನ ದೇವಾಲಯಗಳಲ್ಲಿ ಈ ಶಿಲ್ಪಗಳನ್ನು ಕಾಣಬಹುದಾಗಿದೆ. ಬಿಜಾಪುರ ತಾಲೂಕಿನ ಮನಗೂಳಿಯು ಎರಕ ಪದ್ಧತಿಯಲ್ಲಿ ಲೋಹಶಿಲ್ಪಗಳನ್ನು ತಯಾರಿಸುವಲ್ಲಿ ಪ್ರಸಿದ್ಧವಾಗಿದೆ. ಅನೇಕ ಹಿರೋಡ್ಯಾನ ಶಿಲ್ಪಗಳನ್ನು ಇಲ್ಲಿನ ಶಿಲ್ಪಿಗಳು ರಚಿಸಿದ್ದಾರೆ.

## ೨. ಮುಸ್ಲಿಂದೇವತಾ ಶಿಲ್ಪಗಳು

ಮುಸ್ಲಿಂ ಧರ್ಮೀಯರು ಆಚರಿಸುವ ಹಬ್ಬಗಳಲ್ಲಿ ಮೊಹರಂ ಕೂಡಾ ಒಂದು. ಮೊಹರಂ ಮಹಮ್ಮದೀಯರ ಒಂದು ತಿಂಗಳ ಹೆಸರು. ಅದು ಇಸ್ಲಾಂ ಹಿಜರಿ ಶಕೆಯ ವರ್ಷದ ಆರಂಭದ ತಿಂಗಳು.[೧೮] ಮೊಹರಂ ತಿಂಗಳಲ್ಲಿ ಅರಬಸ್ಥಾನದ ಕರ್ಬಲಾ ಮೈದಾನದಲ್ಲಿ ಜರುಗಿದ ಧರ್ಮಯುದ್ಧದಲ್ಲಿ ಹುತಾತ್ಮರಾದ ಪ್ರವಾದಿಗಳನ್ನು ಕುರಿತು ನಡೆಸಲಾಗುವ ಶೋಕಾಚರಣೆಯೇ ಈ ಮೊಹರಂ ಹಬ್ಬವಾಗಿದ್ದು ಈ ಸಂದರ್ಭದಲ್ಲಿ ಲೋಹದ ಪಾಂಜಾ ಶಿಲ್ಪಗಳನ್ನು ಪೂಜಿಸುವರು.

**ಹಿನ್ನೆಲೆ :** ಮದೀನಾದ ಇಸ್ಲಾಂ ಧರ್ಮದಲ್ಲಿ ರಾಜನನ್ನು ಜನರು ತಮ್ಮ ಇಚ್ಛೆಯಿಂದ ಆರಿಸುವ ವಾಡಿಕೆಯಿತ್ತು. ಪೈಂಗಬರ್ ಮಹಮ್ಮದ ಸಲ್ಲಲಾಹು ಅಲಿ-ಯೆ ಸೆಲ್ಲಮ್ ಅವರು ದೇಹತ್ಯಾಗ ಮಾಡಿದ ನಂತರ ಇಸ್ಲಾಂ ಧರ್ಮದ ಜನತೆಯ ಒಪ್ಪಿಗೆಯಿಂದ ನಾಯಕನನ್ನು ಆರಿಸಿದರು. ಖಲೀಫ್ ಅಬೂಬಕರ, ಖಲೀಫ್ ಉಮರ್‌ಬಿನ್ ಬತ್ತಾಲ, ಖಲೀಫ್ ಉಸ್ಮಾನ್ ಘನಿ, ಖಲೀಫ್ ಬಿನ್ ಅಲಿ ಪೈಂಗಬರ್‌ರ ನಂತರ ಆಳಿದರು. ಅಲಿಯವರ ಮುಖಂಡತ್ವದ ನಂತರ ಅಮೀರ್‌ಮೊಆವಿಯಾ ಎಂಬುವವರು ತಾವೇ ಅಧಿಕಾರ ವಹಿಸಿಕೊಂಡರು. ಅಲ್ಲದೆ ರಾಜಧಾನಿಯಾಗಿದ್ದ ಮದೀನಾವನ್ನು ತೊರೆದು ದಮಸ್ಕಸನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ವಂಶಪಾರಂಪರ್ಯ ರೀತಿಯಲ್ಲಿ ತಮ್ಮ ತರುವಾಯ ಮಗನಾದ ಯಜೀದನನ್ನೇ ಖಲೀಫನನ್ನಾಗಿ ನೇಮಿಸಿದರು. ಈತ ವಿಲಾಸಿ ಹಾಗೂ ಕ್ರೂರಿಯಾಗಿದ್ದನು.

ಇತ್ತ ಮದೀನಾದಲ್ಲಿ ಹಜರತ್ ಅಲಿ ಮತ್ತು ಫಾತೀಮಾ ಅವರ ಸಣ್ಣ ಮಗ ಅಂದರೆ ಪೈಂಗಬರ್‌ರ ಮಗಳ ಮಗ ಹಜರತ್ ಇಮಾಮ್ ಹುಸೇನ್‌ರು ಇದ್ದರು. ಇವರಿಗೆ ಆ ಪ್ರದೇಶದ ವಿವಿಧ ಭಾಗಗಳಿಂದ 'ರಾಜರುಗಳು, ಜನರಿಂದ ನೇಮಕವಾಗಬೇಕು' ಎಂಬ ಒತ್ತಾಯದ ಪತ್ರಗಳು ಬರಲಾರಂಭಿಸಿದವು. ಇದೇ ಸಂದರ್ಭದಲ್ಲಿ ರಾಜಧಾನಿ ಕೂಫಾದಲ್ಲಿ ಮಜೀದನು ಓಬೇದುಲ್ಲಾಖಾನ್ ಜಿಯಾದ್‌ನನ್ನು

---

೧೮. ಡಾ. ಎಸ್.ಎಂ. ವೃಷಭೇಂದ್ರ ಸ್ವಾಮಿ : ಜಾನಪದ ಸಾಹಿತ್ಯ ದರ್ಶನ, ಭಾಗ ಹತ್ತು, ಪುಟ - ೧೭೯

[illegible]

[illegible]

[illegible]

[illegible]

[illegible]

[illegible]

ಗೌರ್ನರ್‌ನನ್ನಾಗಿ ನೇಮಕ ಮಾಡಿ ಕಳುಹಿಸಿದನು. ಕೂಪಾದ ಜನರು ಇದನ್ನು ಒಪ್ಪಲಿಲ್ಲ. ಜನತೆ ಇಮಾಮ್ ಹುಸೇನರಿಗೆ ಈ ಬಗ್ಗೆ ತಿಳಿಸಿ ಧರ್ಮ ಮತ್ತು ಸತ್ಯವನ್ನು ರಕ್ಷಿಸಬೇಕೆಂದು ಮನವಿ ಮಾಡಿಕೊಂಡರು. ಅವರ ಮಾತಿಗೆ ಸಮ್ಮತಿಸಿದ ಇಮಾಮ್ ಹುಸೇನ್‌ರು ಮೊಹರಂ ತಿಂಗಳ ೧ನೇ ತಾರೀಖು ಹಿಜರಿ ಶಕೆ ೬೧ ರಲ್ಲಿ ತಮ್ಮ ಮನೆತನದವರೊಡನೆ ಹಾಗೂ ಗೆಳೆಯರೊಡನೆ ಕೂಪಾಕ್ಕೆ ಹೊರಟರು.

ಜಿಯಾದ್‌ಗೆ ಈ ವಿಷಯ ತಿಳಿದು ೪೦೦ ಸೈನಿಕರನ್ನು ಕಳುಹಿಸಿದನು. ಇಮಾಮ್ ಹುಸೇನರ ಜೊತೆ ೭೨ ಜನ ಇದ್ದರು. ಇಬ್ಬರ ನಡುವೆ ಒಪ್ಪಂದದ ಮಾತುಕತೆಗಳು ವಿಫಲಗೊಂಡ ಪರಿಣಾಮವಾಗಿ ಕರ್ಬಲಾ ಮೈದಾನದಲ್ಲಿ ಘೋರ ಯುದ್ಧ ನಡೆಯಿತು. ಜಿಯಾದ್‌ನ ಕಡೆಯ ಮೂರು ಸಾವಿರ ಸೈನಿಕರು ಮೃತಪಟ್ಟರು. ಈ ಸಂದರ್ಭದಲ್ಲಿ ಇಮಾಮ್ ಹುಸೇನ್‌ರಿಗೆ ಜಯ ಖಚಿತ ಎಂದರಿತ ಜಿಯಾದ್‌ನ ಪಂಗಡದವರು ಇಮಾಮ್‌ರನ್ನು ವಂಚನೆಯಿದ ಕೊಂದರು.

ಈ ಯುದ್ಧ ಘನಘೋರವಾಗಿತ್ತು. ಅಲ್ಲಿ ರಕ್ತದೋಕುಳಿಯಾಗಿತ್ತು. ಮಿಥ್ಯದ ಮುಂದೆ ಇಮಾಮ್‌ರು ತಲೆ ಬಾಗಲಿಲ್ಲ. ಯುದ್ಧದಲ್ಲಿ ಅಮರರಾದರು. ಇವರ ಸಂಗಡಿಗರಾಗಿದ್ದ ಅಬ್ಬಾಸ್ ಅಲಿ, ಇಮಾಮ್ ಹಸೇನ್‌ರ ಮಗ ಕಾಶೀಮ್ ಧೂಲಾ, ಅಲಿ ಅಕ್ಬರರೂ ಹೋರಾಡಿ ಮಡಿದರು. ಇವರ ಸ್ಮರಣೆಯೇ ಇಂದು ಮೊಹರಂ ಆಚರಣೆಯಾಗಿ ರೂಢಿಗೆ ಬಂದಿದೆ. ಇಮಾಮ್ ಹಸೇನ್‌ರ ಆತ್ಮಬಲಿದಾನದ ಆದರ್ಶ ಜನಮನದಲ್ಲಿ ಉಳಿದು ಮೊಹರಂ ಆಗಿ ಆಚರಿಸಲ್ಪಡುತ್ತಿದೆ.

**ಭಾರತದಲ್ಲಿ ಮೊಹರಂ :** ಮಸಾಲೆ ವ್ಯಾಪಾರಕ್ಕೆಂದು ಭಾರತಕ್ಕೆ ಬಂದ ಅರಬ್‌ರು ಇಲ್ಲಿಯೇ ನೆಲೆಯೂರಿದರು. ಮತ್ತು ಸರ್ವಕಾಲಿಕ ಸತ್ಯದಿಂದ ಕೂಡಿದ ಕರ್ಬಲಾ ಕಾಳಗದ ಕಥೆಯನ್ನು ಮೊಹರಂ ತಿಂಗಳಿನಲ್ಲಿ ಹುತಾತ್ಮರ ಆತ್ಮಕ್ಕೆ ಶಾಂತಿ ಸಿಗಲೆಂದು ಉಪವಾಸ, ಕುರಾನ್ ಪಠಣ, ದಾನ, ಧರ್ಮ ಮಾಡುತ್ತ ಬಂದರು. ಇಂಥ ಆಚರಣೆ ತೈಮೂರನ ಕಾಲದಲ್ಲಿ (ಕ್ರಿ.ಶ. ೧೩೬೯) ವಿಕಾರ ರೂಪ ತಾಳಿತೆಂದೂ, ಸಾಮ್ರಾಟ ಅಕ್ಬರನು (ಕ್ರಿ.ಶ೧೫೫೬) ದೀನ್-ಎ-ಇಲಾಹಿ ಸ್ಥಾಪಿಸಿದ ನಂತರ ಮೊಹರಂ ಹಬ್ಬ ರಾಷ್ಟ್ರೀಯ ಹಬ್ಬವನ್ನಾಗಿ[೧೯] ಜನಪದರು ಆಚರಿತೊಡಗಿದರೆಂದು ಹೇಳಲಾಗುತ್ತದೆ. ಸದ್ಯ ಭಾರತದ ವಿವಿಧ ಭಾಗಗಳಲ್ಲಿ ಮೊಹರಂ ಹಬ್ಬವನ್ನು ವಿಭಿನ್ನ ರೀತಿಯಲ್ಲಿ ಆಚರಿಸಲಾಗುತ್ತದೆ. ಮುಸ್ಲಿಂ ಜನಾಂಗದವರೊಂದಿಗೆ ಹಿಂದೂಗಳು ಸಹ ಬೆರೆತು ಈ ಹಬ್ಬವನ್ನು ಆಚರಿಸುವುದು ವಿಶೇಷವಾಗಿ ಕಂಡು ಬರುತ್ತದೆ.

ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ವ್ಯಾಪಕವಾಗಿರುವ ಈ ಆಚರಣೆ ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮೊಹರಂದ ಯಾವುದೇ ವಿಧವಾದ ಆಚರಣೆ ಬಳಕೆಯಲ್ಲಿ ಇಲ್ಲವೆಂದು[೨೦] ಹೇಳುತ್ತಾರೆ. ಸಾಮಾನ್ಯವಾಗಿ ಮುಸ್ಲಿಂ ಬಾಂಧವರು ಈ ಮೊಹರಂನ್ನು ಹತ್ತು ದಿನಗಳ ಕಾಲ ಆಚರಿಸುವರು.

---

೧೯. ವಿವರಗಳಿಗೆ ನೋಡಿ: ಇದೇ ಮಹಾ ಪ್ರಬಂಧದ ಅಧ್ಯಾಯ ಐದು, ಶಿಲಾ ಮಾಧ್ಯಮದ ಜನಪದ ಶಿಲ್ಪಕಲೆ, ಮೊಹರಂ ಆಚರಣೆ
೨೦. ಡಾ. ಚೆನ್ನಣ್ಣ ವಾಲೀಕಾರ : ಮೊಹರಂ ಪದಗಳು, ಪುಟ -೭

ಮೊದಲ ದಿನವನ್ನು ಗುದ್ದಲಿ ಹಾಕುವುದು ಎಂದು ಕರೆಯುವರು. ಹತ್ತು ದಿನಗಳ ಕಾಲವೂ ಉಪವಾಸವನ್ನು (ರೋಜಾ) ಆಚರಿಸುವುದು ಇತ್ಯಾದಿ ಕ್ರಿಯೆಗಳು ನಡೆಯುತ್ತವೆ. ಈ ಮೊಹರಂ ಸಂದರ್ಭದಲ್ಲಿ ಅಲಾವಿ ದೇವರ ಶಿಲ್ಪಗಳನ್ನು ಮಸೀದಿಗಳಲ್ಲಿ ಪ್ರತಿಷ್ಠಾಪಿಸಿ ಪೂಜಿಸುವುದು ವಿಶೇಷವಾಗಿರುತ್ತದೆ.

**ಅಲಾವಿ ದೇವರ ಶಿಲ್ಪಗಳು ಮತ್ತು ಆಚರಣೆ :** ಮುಸ್ಲಿಂರು ಆಚರಿಸುವ ೧೦ ದಿನಗಳ ಮೊಹರಂ ಆಚರಣೆಯಲ್ಲಿ ಐದನೇ ದಿನಕ್ಕೆ ಅಲಾವಿ ದೇವರೆಂದು ಕರೆಯಲಾಗುವ ಲೋಹ ಮಾಧ್ಯಮದ ಶಿಲ್ಪಗಳನ್ನು ಪ್ರತಿಷ್ಠಾಪಿಸುವರು. ಇವುಗಳನ್ನು ಪೀರಾಗಳು, ಅಲಂಗಳು, ಪಂಜಾಗಳು, ಕೈದೇವರು ಎಂದು (ದೇವರ ಶಿಲ್ಪಗಳನ್ನು) ಕರೆಯುವರು.

**ರಚನೆ :** ಈ ಅಲಾವಿ ದೇವರುಗಳ ಶಿಲ್ಪಗಳು ಒಂದು, ಎರಡು, ಮೂರು, ನಾಲ್ಕು, ಐದು ಹೀಗೆ ತೆರೆದ ಅಂಗೈ ಹಾಗೂ ಅಂಗೈಗೆ ಹೊಂದಿರುವ ಬೆರಳುಗಳನ್ನು ನೆನಪಿಸುವಂತಹ ಆಕಾರದ ಹಾಗೂ ಅರ್ಧಚಂದ್ರಾಕಾರದ ಆಕೃತಿಯ ರೂಪದಲ್ಲಿದ್ದು ಎಲ್ಲವೂ ಚಪ್ಪಟೆ ಲೋಹದ ಹಾಳೆಯಲ್ಲಿ ಕೊರೆದು ಮಾಡಿದಂತಹ ಶಿಲ್ಪಗಳಾಗಿರುತ್ತವೆ. ಇವೆಲ್ಲ ಸಾಮಾನ್ಯವಾಗಿ ತಾಮ್ರ, ಹಿತ್ತಾಳೆ, ತವರು, ಬೆಳ್ಳಿ ಮುಂತಾದ ಲೋಹದವುಗಳಾಗಿರುತ್ತವೆ. ಈ ಪಂಜಾಗಳಿಗೆ ಪ್ರತಿಯೊಂದಕ್ಕೂ ಕೆಳಗೆ ೩-೪ ಅಡಿಗಳ ಉದ್ದದ ಒಂದೊಂದು ಕೋಲನ್ನು ಸಿಕ್ಕಿಸಿ ಸಾಲಾಗಿ ನಿಲ್ಲಿಸಲಾಗಿರುತ್ತದೆ.

ಈ ಶಿಲ್ಪಗಳು ಕರ್ಬಲಾ ಕಾಳಗದಲ್ಲಿ ವೀರಮರಣ ಹೊಂದಿದ ಹಸನ್, ಹುಸೇನ್, ಮದಾರಸಾಬ, ಅಬ್ಬಾಸ್ ಅಲಿ, ಖಲೀಮ್ ಸಾಬ್, ಅಲಿ ಅಕ್ಬರ್‌ರ ಹಸ್ತಗಳ ನೆನಪು ತರುವ ಸಂಕೇತ[೨೧]ಗಳಾಗಿರುತ್ತವೆ ಎಂದು ಹೇಳುತ್ತಾರೆ. ಈ ಸಂಕೇತ ಶಿಲ್ಪಗಳನ್ನು ರಂಗು ರಂಗಿನ ಬಟ್ಟೆಗಳಿಂದ ಸಿಂಗರಿಸಿ ಹೂಮಾಲೆ ಹಾಕಿರುವರು. ಊರಲ್ಲಿನ ಮುಲ್ಲಾನವರ ಮಹಿಳೆ, ಮಕ್ಕಳಾದಿಯಾಗಿ ಎಲ್ಲರೂ ಪೀರಾಂಗಳನ್ನಿಟ್ಟ ಮಸೀದಿಗಳಿಗೆ ಬಂದು ಫಾತಿಹಾ ಹಾಕಿಸಿ ಕೈದೇವರಿಗೆ ನಮಸ್ಕರಿಸಿ ನವಿಲು ಗರಿಗಳಿಂದ ಆಶೀರ್ವಾದ ಪಡೆದು ಅಂಗಾರ ಹಚ್ಚಿಸಿಕೊಳ್ಳುವರು. ಇನ್ನೂ ಅನೇಕ ಕ್ರಿಯೆಗಳು ಜರುಗುವವು.[೨೨]

ಮೊಹರಂದ ಚಾಂದರಾತ ಕಂಡ ದಿನ ಪ್ರತಿಷ್ಠಾಪಿಸಲ್ಪಟ್ಟ ಕೆಲ ಅಲಮ್(ಶಿಲ್ಪಗಳು)ಗಳು ಏಳನೆಯ ದಿನಕ್ಕೆ ಹಳ್ಳಕ್ಕೆ ಇಲ್ಲವೆ ಹೊಳೆಗೆ ಹೋಗಿ ಬರುವವು. ಇವು ಹಜರತ್ ಇಮಾಮ್ ಹುಸೇನ್‌ರ ಅನುಯಾಯಿಗಳ ಸಂಕೇತ ಶಿಲ್ಪಗಳಾಗಿದ್ದು ಹುತಾತ್ಮರಾದವರ ನೆನಪಿಗಾಗಿಡುವ ಪೀರಾಂಗಳು. ಇವಕ್ಕೆ ಏಳು ದಿನದ ದೇವರೆಂದೂ ಹೆಸರಿದೆ. ಎಂಟನೆಯ ದಿನ ಸಂದಲ (ಗಂಧ) ರಾತ್ರಿ. ಇದಕ್ಕೆ ಖಾಸೀಂ ಖತಲ್ ಎಂದೂ ಕರೆಯುವರು. ಈ ದಿನ ಗಂಧ, ಊದು, ಜೋಳದ ಕಿಚಡಿಯ ಎಡೆಯನ್ನು ಅಲಾಯಿ ದೇವರಿಗೆ ಅರ್ಪಿಸುವರು. ಮರುದಿನವೇ ಖತಲ್ ರಾತ್ರಿ. ಅಂದು ಅಗ್ನಿ ತುಳಿಯುವದು, ಶೋಕ ಗೀತೆ ಹಾಡುವದು

---

೨೧. ಡಾ. ಎಸ್.ಎಂ. ವೃಷಭೇಂದ್ರ ಸ್ವಾಮಿ (ಸಂ) : ಜಾನಪದ ಸಾಹಿತ್ಯ ದರ್ಶನ, ಭಾಗ ಹತ್ತು
೨೨. ..... ಅದೇ .....

[illegible]

[illegible]

[illegible]

[illegible]

[illegible]

ನಡೆಯುತ್ತದೆ.

**ವಿಸರ್ಜನೆ :** ಮೊಹರಂ ತಿಂಗಳ ಹತ್ತನೆಯ ದಿನ ಹಬ್ಬದ ಕೊನೆಯ ದಿನವಾಗಿದ್ದು, ಪೀರಾಂಗಳು ಹೊಳೆಗೆ ಹೋಗುವವು. ಇಮಾಮ್ ಹುಸೇನ್‌ರು ಹತರಾದ ಈ ದಿನಕ್ಕೆ ಶಾದಲ್ ಎಂದೂ, ದಫನ್ ಎಂದೂ ಕರೆಯುವರು. ಇಮಾಮ್ ಹಸನ್ ಮತ್ತು ಇಮಾಮ್ ಹುಸೇನ್‌ರನ್ನು ಒಕ್ಕೊರಲಿನಿಂದ ನೆನಪಿಸಿಕೊಳ್ಳುತ್ತ ಡೋಲಿ ಹೊತ್ತು, ಕೈದೇವರುಗಳನ್ನು ಹಿಡಿದು ನಂತರ ಅಗ್ನಿ ತುಳಿದು ಸಾಗುತ್ತಾ, ಕರ್ಬಲಾ ಕಾಳಗದ ಕಣ್ಣೀರ ಕಥೆಯನ್ನು ಹಾಡುತ್ತ ಹೊರಟು, ಹೊಳೆ ಅಥವಾ ಹಳ್ಳ ಸೇರಿ ಅಲ್ಲಿ ದೇವರುಗಳನ್ನು ಬಿಚ್ಚಿ, ಮುಖ ತೊಳೆದು ಡೋಲಿಯಲ್ಲಿಟ್ಟು, ಬಟ್ಟೆ ಅಥವಾ ಅರಿವೆಯನ್ನು ಡೋಲಿಯ ಸುತ್ತ ಕಟ್ಟುವರು. ಇದರರ್ಥ ಇಮಾಮ್ ಹಸನ್ ಮತ್ತು ಇಮಾಮ್ ಹುಸೇನ್ ಅವರ ಅನುಯಾಯಿಗಳು ಇಲ್ಲಿಗೆ ಶಹೀದ್‌ರಾದರೆಂದು ನಂಬಿಕೆ. ಈ ಸಂದರ್ಭದಲ್ಲಿ ಚೊಂಗ್ಯಾ-ಮಂಡಕ್ಕಿಗಳನ್ನು ಓದಿಕೆ ಹಾಕಿ ಹಿಂದೂ ಮುಸ್ಲಿಂರೆಲ್ಲರಿಗೂ ಹಂಚುವರು.

ಈ ಪೀರಾಂಗಳು ಹೊಳೆಗೆ ಹೋದ ಮೂರು ದಿನಕ್ಕೆ ಚಿಕ್ಕಮಕ್ಕಳು ತಗಡಿನ ಕೈದೇವರು ಮಾಡಿ ಓಣಿ ಓಣಿ ತಿರುಗಿ ವಂತಿಗೆ ಸಂಗ್ರಹಿಸಿ ಹೊಳೆಗೆ ಕಳಿಸುವರು. ಇವನ್ನು ಕವಡಿ ಪೀರಾ ಎಂದು ಕರೆಯುವರು. ಕೊಪ್ಪಳ ಜಿಲ್ಲೆಯ ಮುದಗಲ್, ಬಾಗಲಕೋಟ ಜಿಲ್ಲೆಯ ಬಾದಾಮಿ, ಹೆಬ್ಬಳ್ಳಿ, ಮಾಲಗಿತ್ತಿ, ಮಾಲಿಗಿ ಹಾಗೂ ಚಿಮ್ಮನಕಟ್ಟಿ ಮುಂತಾದ ಊರುಗಳಲ್ಲಿ ಮೊಹರಂನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಬಿಜಾಪುರ ಜಿಲ್ಲೆಯ ಸಿಂದಗಿ, ಇಂಡಿ, ಮುದ್ದೇಬಿಹಾಳ ಮುಂತಾದ ತಾಲೂಕುಗಳಲ್ಲಿನ ಅನೇಕ ಊರುಗಳಲ್ಲಿ ಮೊಹರಂ ಸಂದರ್ಭದಲ್ಲಿ ಈ ಅಲಾವಿ ದೇವರುಗಳನ್ನು ಇಟ್ಟು ಪೂಜಿಸುವದು ವಿಶೇಷವಾಗಿ ನಡೆಯುತ್ತದೆ.

## ೩. ಹಿಂದೂ-ಮುಸ್ಲಿಂ ಸಂಕೀರ್ಣ ಶಿಲ್ಪಗಳು

ಮತೀಯ ಭಾವೈಕ್ಯ ಸಾರುವಂತಹ ಹಿಂದೂ-ಮುಸ್ಲಿಂ ದೇವತೆಗಳ ಸಂಕೀರ್ಣ ಶಿಲ್ಪಗಳೂ ಲೋಹ ಮಾಧ್ಯಮದಲ್ಲಿ ಕಂಡು ಬರುತ್ತವೆ.

**ಅ. ಚಾಂಗದೇವರ ಶಿಲ್ಪಗಳು :** ಯಮನೂರಿನಲ್ಲಿ [೨೩] ಹಿಂದೂ-ಮುಸ್ಲಿಂ ಭಾವೈಕ್ಯ ಸಾರುವ ಚಾಂಗದೇವರ ದೇವಸ್ಥಾನದಲ್ಲಿ ಮುಸ್ಲಿಂ ಅಲಾವಿ ದೇವರ ಅಥವಾ ಪೀರಾಂಗಳ ಶಿಲ್ಪಗಳಿವೆ. ಇವು ಗದ್ದುಗೆಯ ಮೇಲೆ ಪ್ರತಿಷ್ಠಾಪಿಸಲ್ಪಟ್ಟಿವೆ. ಇವು ಶಾಶ್ವತವಾಗಿ ಇಲ್ಲಿ ದರ್ಶನಕ್ಕೆ ಲಭ್ಯ. ಇಲ್ಲಿ ಒಟ್ಟು ಐದು ಶಿಲ್ಪಗಳಿದ್ದು ಎಲ್ಲವೂ ಹಿತ್ತಾಳೆಯವುಗಳಾಗಿವೆ. ಎಲ್ಲವೂ ಮೂರು ಮೂರು ಟಿಸಿಲುಗಳನ್ನು ಹೊಂದಿದ ಕೈದೇವರುಗಳಾಗಿವೆ. ಅವುಗಳಲ್ಲಿ ಒಂದು ಮಧ್ಯದಲ್ಲಿ ಎತ್ತರದ ಸ್ಥಾನದಲ್ಲಿ ಇಡಲ್ಪಟ್ಟಿದ್ದು ಅದು ಇನ್ನುಳಿದ ಶಿಲ್ಪಗಳಿಗಿಂತಲೂ ದೊಡ್ಡದಾಗಿದೆ. ಇವುಗಳೊಂದಿಗೆ ನವಿಲು ಗರಿಯನ್ನೂ ಇಡಲಾಗಿದೆ.

---

೨೩. ಯಮನೂರು : ತಾ. ನವಲಗುಂದ, ಜಿ. ಧಾರವಾಡ



ಚಾಂಗದೇವರ ಶಿಲ್ಪಗಳು ( ಯಮನೂರ )



ಲೋಹದ ಹಾಳೆಯ ಕುದುರೆ ಶಿಲ್ಪ

ಪೀರಾಂಗಳೊಂದಿಗೆ ಚಾಂಗದೇವರು ಹುಲಿ ಸವಾರಿ ಮಾಡಿದ ಲೋಹದ ಉಬ್ಬುಶಿಲ್ಪವೂ ಇದೆ ಮಾತ್ರವಲ್ಲದೆ, ಲೋಹದ ಎರಕ ಹೊಯ್ದು ರಚಿಸಲಾದ ಐದು ಕುದುರೆಯ ಶಿಲ್ಪಗಳೂ, ಎರಡು ಬೆಳ್ಳಿಯ ಬೆತ್ತ (ಕೋಲು)ಗಳೂ ಇಡಲ್ಪಟ್ಟಿವೆ. ಈ ದೇವರಿಗೆ ಯಮನೂರಪ್ಪ ಎಂದೂ ಸ್ಥಳೀಯರು ಕರೆಯುತ್ತಾರೆ. ಪ್ರತಿ ವರ್ಷ ಉರುಸ್(ಜಾತ್ರೆ) ನಡೆಯುತ್ತದೆ. ಈ ದೇವರ ಬಗ್ಗೆ ಸಾಕಷ್ಟು ಕಥೆ, ಐತಿಹ್ಯಗಳು ಇವೆ. ಅವನ್ನು ನಂಬಲು ಅಸಾಧ್ಯ. ಈ ಚಾಂಗದೇವರನ್ನು ಮುಸ್ಲಿಂರು ರಾಜಾ ಬಾಗ್ (ಹುಲಿ) ಸವಾರ್ ಎಂದು ಕರೆಯುತ್ತಾರೆ.

## ಆ. ಸ್ತ್ರೀ ದೇವತಾ ಶಿಲ್ಪಗಳು

ನೂರಾರು ಬಗೆಯ ಸ್ತ್ರೀ ದೇವತಾ ಶಿಲ್ಪಗಳೂ ಲೋಹ ಮಾಧ್ಯಮದಲ್ಲಿ ರಚನೆಗೊಂಡಿದ್ದು ಗಮನ ಸೆಳೆಯುತ್ತವೆ. ನಮ್ಮ ಜನಪದರು ಸ್ತ್ರೀ ದೇವತಾ ಶಿಲ್ಪಗಳನ್ನು ಎರಕ ಹೊಯ್ಯುವಿಕೆ ಹಾಗೂ ಲೋಹದ ಹಾಳೆಯಲ್ಲಿ ಉಬ್ಬೊಬ್ಬು ತಂತ್ರ, ಈ ಎರಡೂ ಬಗೆಯಲ್ಲಿ ರಚಿಸಿದ್ದಾರೆ.

ತೊಟ್ಟಿಲ ಗೌರಮ್ಮನಂತಹ ಶಿಲ್ಪಗಳು ಎರಕ ಪದ್ಧತಿಯಿಂದ ರಚನೆಗೊಂಡಿದ್ದರೆ, ಭಾಗಮ್ಮ, ಎಲ್ಲಮ್ಮರಂತಹ ಅನೇಕ ಸ್ತ್ರೀ ದೇವತಾ ಶಿಲ್ಪಗಳು ಲೋಹದ ಹಾಳೆಯಲ್ಲಿ ರಚನೆಗೊಂಡು ಗಮನ ಸೆಳೆಯುತ್ತವೆ. ಪ್ರಾತಿನಿಧಿಕವಾಗಿ ಕೆಲವು ಶಿಲ್ಪಗಳನ್ನು ಇಲ್ಲಿ ನೋಡಬಹುದು.

**೧. ಗೌರಮ್ಮನ ಶಿಲ್ಪಗಳು :** ಗೌರಮ್ಮನ ಶಿಲ್ಪಗಳು [೨೪] ಉತ್ತರ ಕರ್ನಾಟಕದಲ್ಲಿ ಪ್ರತಿಯೊಂದು ಊರಿನ ಮನೆ ಮನೆಗಳಲ್ಲಿ ಸಿಗುತ್ತವೆ. ಗೌರಮ್ಮನ ಶಿಲ್ಪಗಳು ಬಹುಪಾಲು ಮರದ ಮಾಧ್ಯಮದಲ್ಲೇ ಸೃಷ್ಟಿಯಾಗಿವೆ. ಶಿಲಾ ಮಾಧ್ಯಮದಲ್ಲಿ ಗೌರಮ್ಮನ ಶಿಲ್ಪಗಳು ಕಂಡು ಬರುವುದಿಲ್ಲ. ಆದರೆ ಕ್ವಚಿತ್ತಾಗಿ ಲೋಹ ಮಾಧ್ಯಮದಲ್ಲೂ ರಚನೆಗೊಂಡ ಗೌರಮ್ಮನ ಶಿಲ್ಪಗಳು [೨೫] ಕಂಡು ಬಂದಿವೆ. ಬಾದಾಮಿಯಲ್ಲಿ ದೊರೆತ ಒಂದು ಶಿಲ್ಪವು ಕಂಚಿನದ್ದಾಗಿದೆ. ಇದನ್ನು ಎರಕ ಹೊಯ್ಯುವ ಪದ್ಧತಿಯಿಂದ ರಚಿಸಿದುದಾಗಿದೆ. ಈ ಕಂಚಿನ ಗೌರಮ್ಮನ ಶಿಲ್ಪ ತೊಟ್ಟಿಲ ಗೌರಮ್ಮ ಆಗಿದ್ದು, ಈ ಗೌರಮ್ಮಳನ್ನು ಮುತ್ತೈದೆಯರು ಪೂಜಿಸಿ ತೂಗಿದರೆ ಮಕ್ಕಳಿಲ್ಲದಿದ್ದಲ್ಲಿ ಮಕ್ಕಳು ಪ್ರಾಪ್ತವಾಗುತ್ತವೆ, ಸಂಪತ್ತು ವೃದ್ಧಿಸುತ್ತದೆ ಎಂಬ ನಂಬಿಕೆ ಇದೆ. ಇಂಥದೇ ಲೋಹ ಮಾಧ್ಯಮದ ಗೌರಮ್ಮನ ಪುಟ್ಟ ಶಿಲ್ಪವೊಂದು ಗುಲಬರ್ಗಾದ ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ವಸ್ತು ಸಂಗ್ರಹಾಲಯದಲ್ಲಿ [೨೬] ನೋಡಲು ಸಿಗುತ್ತದೆ.

**೨. ಭಾಗಮ್ಮನ ಶಿಲ್ಪಗಳು :** ಭಾಗಮ್ಮ ಅಂದರೆ ಸಂಪತ್ತಿನ ದೇವತೆ. ಘತ್ತರಗಿಯಲ್ಲಿ [೨೭] ಈಕೆ

೨೪. ವಿವರಗಳಿಗೆ ನೋಡಿ : ಇದೇ ಮಹಾ ಪ್ರಬಂಧದ ಅಧ್ಯಾಯ ನಾಲ್ಕು : ಮರದ ಮಾಧ್ಯಮದ ಜನಪದ ಶಿಲ್ಪಕಲೆ, ಪುಟ -೧೨೫

೨೫. ಶ್ರೀ ಆನಂದ ಪೂಜಾರ ಅವರು ಒದಗಿಸಿದ್ದು

೨೬. ಪ್ರೊ. ವ್ಹಿ.ಜಿ. ಅಂದಾನಿಯವರು ಒದಗಿಸಿದ್ದು

೨೭. ಘತ್ತರಗಿ : ತಾ. ಅಪಜಲಪೂರ, ಜಿ. ಗುಲಬರ್ಗಾ

ಕಂಬದಲ್ಲಿ ನೆಲೆಸಿರುವಳೆಂದು ಭಾವಿಸಿ, ಮೊದಲು ಕಂಬಕ್ಕೆ ಪೂಜಿಸುತ್ತಿದ್ದರು. ಈಗ ಈಕೆಯ ಬೆಳ್ಳಿಯ ಮೂರ್ತಿಯನ್ನು ಮಾಡಿಟ್ಟು ಪೂಜಿಸಲಾಗುತ್ತಿದೆ. ಉತ್ಸವ ಕಾಲದಲ್ಲಿ ವಸ್ತ್ರ, ಒಡವೆಗಳಿಂದ ಅಲಂಕರಿಸುವರು. ಪ್ರತಿ ವರ್ಷ ದೀಪಾವಳಿಯಿಂದ ಆರಂಭವಾಗಿ ಕಾರ ಹುಣ್ಣಿಮೆಯವರೆಗೆ ಸಿಡಿ ಆಡುವುದು ನಡೆಯುವುದು. ಈ ಭಾಗಮ್ಮನ ಪ್ರತಿರೂಪದ ಶಿಲ್ಪಗಳನ್ನು ಆ ಭಾಗದಲ್ಲಿ ಅನೇಕ ಭಕ್ತರ ಮನೆ ಮನೆಗಳಲ್ಲೂ ಕಾಣಬಹುದು.

**೩. ಎಲ್ಲಮ್ಮನ ಶಿಲ್ಪಗಳು :** ಸುಪ್ರಸಿದ್ದ ಸೌಂದತ್ತಿಯ ಎಲ್ಲಮ್ಮ ದೇವತೆಯನ್ನು ಶಿಷ್ಟರು ರೇಣುಕೆ ಎಂದುಕರೆದರೆ, ಜನಪದರು ಮಾತ್ರ ಎಲ್ಲಮ್ಮ ಎಂದೇ ಕರೆಯುತ್ತಿದ್ದಾರೆ.[೨೮] ಎಲ್ಲಮ್ಮನ ಕುರಿತು ಅನೇಕ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ.[೨೯] ಅದರ ಚರ್ಚೆ ಇಲ್ಲಿ ಅಪ್ರಸ್ತುತವೆಂದು ಭಾವಿಸುತ್ತೇನೆ. ಜನಪದೀಯವಾಗಿ ಎಲ್ಲರ ಅಮ್ಮ ಎಲ್ಲಮ್ಮ, ಎಲ್ಲೆಯ ಅಮ್ಮ (ಎಲ್ಲೆ, ಸೀಮೆ) ಎಲ್ಲಮ್ಮ ಎಂದು ಅರ್ಥ ಹೇಳುತ್ತಾರೆ.[೩೦] ಸೌಂದತ್ತಿಯಲ್ಲಿನ ಎಲ್ಲಮ್ಮನ ಗುಡಿಯಲ್ಲಿ ಶಿಲಾ ಮಾಧ್ಯಮದ ದೇವಿಯ ಶಿಲ್ಪವಿದೆ. ಇದು ಶಿಷ್ಟ ಶಿಲ್ಪದಂತೆ ಕಂಡುಬರುತ್ತದೆ. ಆದರೆ ಈ ದೇವಿ ಎಲ್ಲಮ್ಮನ ಪ್ರತಿರೂಪಗಳು[೩೧] ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ಕಂಡುಬರುತ್ತವೆ.

## ೧.೨ ಪೂಜಾ ಸಾಮುಗ್ರಿಗಳಲ್ಲಿನ ಶಿಲ್ಪಗಳು

ನಮ್ಮ ಜನಪದರು ದೈವೀ ಆರಾಧನೆಯ ಹಿನ್ನೆಲೆಯಲ್ಲಿ, ಪೂಜಾ ಸಂದರ್ಭಗಳಲ್ಲಿ ವಿವಿಧ ರೀತಿಯ ಪೂಜಾ ಸಾಮುಗ್ರಿ, ಸಲಕರಣೆಗಳನ್ನು ಬಳಸುತ್ತ ಬಂದಿದ್ದಾರೆ. ಇಂಥ ಲೋಹ ಮಾಧ್ಯಮದ ಪೂಜಾ ಸಾಮಗ್ರಿಗಳಲ್ಲಿ ಅನೇಕ ತರಹದ ದುಂಡು ಹಾಗೂ ಉಬ್ಬು ಮಾದರಿಯ ಶಿಲ್ಪಗಳನ್ನು ರಚಿಸಿರುತ್ತಾರೆ. ಇವು ನಮ್ಮ ಜನಪದರ ಸೌಂದರ್ಯ ಪ್ರಜ್ಞೆಯ ದ್ಯೋತಕವಾಗಿ ಗಮನ ಸೆಳೆಯುತ್ತವೆ. ಮುಖ್ಯವಾಗಿ ಪೂಜೆಯ ಸಂದರ್ಭದಲ್ಲಿ ಬಳಸಲ್ಪಡುವ ಆರತಿ, ದೂಪಾರತಿ, ಶಂಖ, ಘಂಟೆ, ಜಾಗಟೆ, ಸಮೆ, ದೀಪಸ್ತಂಭ, ಕಮಲಕುಂಡಲ ಮುಂತಾದವುಗಳಲ್ಲಿ ಸುಂದರ ಶಿಲ್ಪಗಳು ಇರುತ್ತವೆ.

**ಅ. ಆರತಿ ಮತ್ತಿತರ ವಸ್ತುಗಳಲ್ಲಿನ ಶಿಲ್ಪಗಳು :** ಆರತಿಗಳಲ್ಲಿ ಏಕಾರತಿ, ಪಂಚಾರತಿ, ಮಹಾರತಿಗಳು ಇರುತ್ತವೆ. ಈ ಆರತಿಗಳಲ್ಲಿ ಪವಿತ್ರ ಮುದ್ರೆಯ ರಚನೆ ಒಂದು ಸಂಪ್ರದಾಯ. ಇದು ಉಬ್ಬು ಶಿಲ್ಪವಾಗಿರುತ್ತದೆ. ಧೂಪಾರತಿಯ ರೂಪವೇ ಮೋಹಕವಾಗಿರುತ್ತದೆ. ಶಂಖಾರತಿ, ಚಕ್ರಾರತಿ, ಕೂರ್ಮಾರತಿಗಳನ್ನು ವಿವಿಧ ಸಂಪ್ರದಾಯದವರು ಬಳಸುತ್ತಾರೆ.

---

೨೮. ಡಾ. ಎಂ.ಎಂ. ಕಲಬುರ್ಗಿ: ಮಾರ್ಗ, ಸಂಪುಟ -೨, ಪುಟ -೩೪೧

೨೯. ನೋಡಿ, ಡಾ.ಎಂ.ಎಂ. ಕಲಬುರ್ಗಿ (ಸಂ) : ಜಾನಪದ ಸಾಹಿತ್ಯ ದರ್ಶನ, ಭಾಗ -೨

೩೦. ಡಾ. ಚೆನ್ನಣ್ಣ ವಾಲಿಕಾರ : ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ, ಪುಟ -೧೪೫

೩೧. ರಾಯಚೂರು ಜಿಲ್ಲೆಯ ಆರೋಲಿ ಹುಲಿಗೆಮ್ಮ, ಬಳ್ಳಾರಿ ಜಿಲ್ಲೆಯ ಮುನಿರಾಬಾದ ಹುಲಿಗೆಮ್ಮ, ಗುಲಬರ್ಗಾ ಜಿಲ್ಲೆಯ ಚುಂಚುರ ಮಾಪುರತಾಯಿ, ಬೀದರ ಜಿಲ್ಲೆಯ ಬಗದುರಿ ಎಲ್ಲಮ್ಮರು ಎಲ್ಲಮ್ಮನ ರೀತಿಯಲ್ಲಿ ಬರುವ ದೇವತೆಗಳಾಗಿದ್ದಾರೆಂದು ಡಾ. ಚೆನ್ನನ್ನ ವಾಲೀಕಾರರು ಹೇಳುತ್ತಾರೆ.

**ನಾಗಶಿಲ್ಪಗಳು :** ದೇವರಿಗೆ ನಾಗನು ಪ್ರಿಯ. ಶಿವನಿಗೆ ನಾಗಗಳೇ ಆಭರಣ, ಜನಪದರಿಗೆ ನಾಗನು ಸಮೃದ್ಧಿಯ ಮತ್ತು ರಕ್ಷಣೆಯ ಸಂಕೇತ. ಹೀಗಾಗಿ ಆರತಿಗಳಲ್ಲೂ ನಾಗನಿಗೆ ಉನ್ನತ ಸ್ಥಾನದೊರಕಿದೆ. ನಾಗನ ಶಿಲ್ಪಗಳನ್ನು ನಾನಾ ಭಂಗಿಗಳಲ್ಲಿ ಶಿಲ್ಪಿಸಲಾಗಿರುತ್ತದೆ.

**ಕೂರ್ಮ ಶಿಲ್ಪಗಳು :** ಭಗವಂತನ ಒಂದು ಅವತಾರ ಕೂರ್ಮ. ಧ್ವಜಸ್ತಂಭದ ಬುಡದಲ್ಲಿ ಕೂರ್ಮವನ್ನು ರಚಿಸಿರುವುದುಂಟು. ಆರತಿಯಲ್ಲೂ ಕೂರ್ಮವನ್ನು ವಿಶೇಷವಾಗಿ ರಚಿಸಿರುತ್ತಾರೆ. ಶಿರವೆತ್ತಿ ಚಲಿಸುವ ಕೂರ್ಮದ ರೂಪವು ನೈಜತೆಗೆ ತೀರ ಸಮೀಪವಿದೆ. ಇದರ ಬೆನ್ನ ಮೇಲೆ ದೀಪಗಳ ವೃತ್ತವೇ ರಚಿಸಲಾಗಿರುತ್ತದೆ.

**ಗಜಲಕ್ಷ್ಮಿ ಶಿಲ್ಪಗಳು :** ದೀಪ ಮತ್ತು ತೂಗುದೀಪಗಳಲ್ಲಿ ಗಜಗಳು ಮತ್ತು ಗಜ ಲಕ್ಷ್ಮಿಯ ಶಿಲ್ಪವಿನ್ಯಾಸಗಳಿರುತ್ತವೆ. ಕೆಲವು ಮಯೂರ (ನವಿಲು) ದೀಪಗಳೂ ಇರುತ್ತವೆ.

**ಕಲಶಗಳಲ್ಲಿನ ಶಿಲ್ಪಗಳು :** ಕಲಶಗಳಲ್ಲಿ ಹೂ-ಬಳ್ಳಿಯ ಅಲಂಕಾರಿಕ ಉಬ್ಬುಗೆತ್ತನೆಯಲ್ಲದೆ, ಅಷ್ಟಲಕ್ಷ್ಮಿ, ದಶಾವತಾರದ ಸುಂದರ ಚಿತ್ರಣವೂ ಕಲಶಗಳಲ್ಲಿರುತ್ತವೆ. ಹೂ-ಬಳ್ಳಿಗಳ ಮಧ್ಯೆ ರಾರಾಜಿಸುವ ಅಷ್ಟಲಕ್ಷ್ಮಿಯರು ಮತ್ತು ದಶಾವತಾರದ ಉಬ್ಬುಶಿಲ್ಪದಲ್ಲಿ ಜಾನಪದ ಶೈಲಿಯ ಶಿಲ್ಪಗಳ ಸೊಗಸು ಅಳವಟ್ಟಿರುತ್ತದೆ. ಈ ಎಲ್ಲ ಶಿಲ್ಪಗಳನ್ನು ಎರಕ ಹೊಯ್ದು ರಚಿಸಲಾಗಿರುತ್ತದೆ. ಇಲ್ಲಿ ಹಿತ್ತಾಳೆ, ಕಂಚುಗಳನ್ನೇ ಉಪಯೋಗಿಸಿರುತ್ತಾರೆ.

**ಸಮೆಗಳಲ್ಲಿನ ಶಿಲ್ಪಗಳು :** ಇವು ಚಿಕ್ಕ ಸ್ತಂಭಗಳಂತಿರುತ್ತವೆ. ಕೆಲವು ಅಂತಸ್ತುಗಳಲ್ಲಿರುತ್ತವೆ. ತುದಿಯಲ್ಲಿ ಹಂಸ, ಕಿನ್ನರಿ, ಮೊದಲಾದ ಆಕೃತಿಗಳನ್ನು ರಚಿಸಿರುತ್ತಾರೆ. ಹುಬ್ಬಳ್ಳಿಯ ಸಿದ್ಧಾರೂಢ ಮಠದ ಬೆಳ್ಳಿ ಕಾಲು ದೀಪದಲ್ಲಿ ಮೂರು ಸಿಂಹಗಳು ಕಂಬಗಳನ್ನು ಹೊತ್ತಿವೆ.

**ತೂಗುದೀಪಗಳಲ್ಲಿನ ಶಿಲ್ಪಗಳು :** ಇವುಗಳಲ್ಲೂ ಸರಪಣಿಯ ಮಧ್ಯೆ ಶ್ರೀವೈಷ್ಣವ ಚಿನ್ಹೆಗಳಾದ ಶಂಖ, ಚಕ್ರ ಹಾಗೂ ನಂದಿಯ ಮುಖವಿರುವ ಪಂಚದಳದ ದೀಪ ಪಾತ್ರೆ ಮುಂತಾದ ಶಿಲ್ಪಗಳಿರುತ್ತವೆ.

## ಆ. ಗಂಟೆ-ಜಾಗಟೆಗಳಲ್ಲಿನ ಶಿಲ್ಪ ವಿನ್ಯಾಸಗಳು

ದೇವಸ್ಥಾನಗಳಲ್ಲಿ ಗಂಟಾ ಸೇವೆ ಅತ್ಯವಶ್ಯವೆಂದು ಆಗಮ ಶಾಸ್ತ್ರಗಳಲ್ಲಿ ಹೇಳಲಾಗಿದೆ. ಶುದ್ಧವಾದ ಲೋಹ ಅಥವಾ ಕಂಚಿನಿಂದ ತಯಾರಾದ ಗಂಟೆಗಳ ನಾದದಲ್ಲಿ ಕಿವಿಗೆ ಕೇಳಲು ಇಂಪಾದ ಮತ್ತು ಮನಕ್ಕೆ ಹಿತವಾದ ಓಂಕಾರನಾದ ಹೊರ ಹೊಮ್ಮುತ್ತದೆ. ಈ ನಾದದಿಂದ ಇಡೀ ವಾತಾವರಣದಲ್ಲಿನ ರಾಕ್ಷಸೀ ಶಕ್ತಿಗಳು ದೂರವಾಗಿ, ದೈವಿಕ ಭಾವನೆಗಳು ಜನಿಸುತ್ತವೆ ಎಂದು ನಂಬಲಾಗುತ್ತದೆ. ಗಂಟೆಯ ನಾಲಿಗೆಯಲ್ಲಿ, ಮುಖದಲ್ಲಿ, ಉದರದಲ್ಲಿ ಅನೇಕ ದೇವಾದಿದೇವತೆಗಳು ನೆಲೆಸಿರುವುದರಿಂದ ಇದನ್ನು ಬಾರಿಸಿದಾಗ ಸ್ಪುರಿಸುವ ನಾದತತ್ವವು ಭಗವಂತನನ್ನು ಸುಪ್ರೀತಗೊಳಿಸುತ್ತದೆ ಎಂಬ ನಂಬಿಕೆಯೂ ಇದೆ.

[illegible]

ದೇವಾಲಯಗಳ ಗಂಟೆಗಳಲ್ಲಿ ಎರಡು ವರ್ಗಗಳಿವೆ. ೧. ಮಹಾಗಂಟೆ ೨. ಕೈಗಂಟೆ. ಮಹಾಗಂಟೆಗಳು ಸಾಧಾರಣವಾಗಿ ಸರಳ ವಿನ್ಯಾಸ ಹೊಂದಿರುತ್ತವೆ. ಕೆಲವೊಂದರ ಮೇಲೆ ಪುಷ್ಪ ರೇಖೆಗಳು ಶ್ಲೋಕಗಳನ್ನು ಮತ್ತು ಇತರವುಗಳ ಮೇಲೆ ದೇವಸ್ಥಾನದ ಹೆಸರು ಇರುತ್ತವೆ. ಶಿವಗಂಗೆಯ ಗಂಗಾಧರೇಶ್ವರನ ದೇವಸ್ಥಾನದಲ್ಲಿರುವ ಮಹಾಗಂಟೆ ೮೦ ಮಣಗಳ ತೂಕ [೩೨] ಹೊಂದಿದ್ದು ಮಹಾಗಂಟೆಯಾಗಿದೆ.

ಕೈಗಂಟೆಗಳನ್ನು ಗರ್ಭಗುಡಿಯಲ್ಲಿ ಮಾತ್ರ ಉಪಯೋಗಿಸುತ್ತಾರೆ. ಆದ್ದರಿಂದಲೇ ಆಯಾ ದೇವರಿಗೆ ಸಂಬಂಧಪಟ್ಟ ವಿಶೇಷ ಲಾಂಛನ ಹೊಂದಿರುವ ಕೈಗಂಟೆಯನ್ನು ಪ್ರತ್ಯೇಕವಾಗಿ ಉಪಯೋಗಿಸುತ್ತಾರೆ. ಈ ರೀತಿ ಶಂಖ ಮತ್ತು ಚಕ್ರವುಳ್ಳ ಕೈಗಂಟೆಯನ್ನು ಶ್ರೀ ವೈಷ್ಣವ ದೇವಸ್ಥಾನದಲ್ಲಿ ಬಳಸುವ ಸಮಯದಲ್ಲೇ ಗರುಡ ಮತ್ತು ಪ್ರಾಣಿ ದೇವರುಳ್ಳ ಕೈಗಂಟೆಗಳನ್ನು ಶ್ರೀ ವೈಷ್ಣವ-ವೆಷ್ಣವ ಗುಡಿಗಳಲ್ಲಿ ಕಾಣಬಹುದು. ಶಿವನ ವಾಹನವಾದ ನಂದಿ ಶೈವ, ಸ್ಮಾರ್ತ್, ಶಾಕ್ತ, ಧಾರ್ಮಿಕ ಆಚರಣೆಯಲ್ಲಿ ಬಳಸಲಾಗುವ ಕೈಗಂಟೆಯನ್ನು ಅಲಂಕರಿಸಿರುತ್ತದೆ. ಗಂಟೆಯ ಹಿಡಿಕೆಯು ಆಂಜನೇಯ, ಗರುಡ, ನಂದಿ ಅಥವಾ ಚಕ್ರದಾಕಾರದಲ್ಲಿನ ಪ್ರಾಣಶಕ್ತಿಯ ಪ್ರತೀಕ, ಹಾಗಾಗಿ ಇವುಗಳ ಪೈಕಿ, ಯಾವುದೇ ಆಕೃತಿಯನ್ನು ಹೊಂದಿಲ್ಲದಂತಹ ಕೈಹಿಡಿಕೆ ಇಲ್ಲದ ಗಂಟೆಯು ಅಮಂಗಳಕರ ಎಂದು ಪರಿಗಣಿಸಲಾಗಿದೆ. ಈ ಗಂಟೆಗಳನ್ನು ಹಿತ್ತಾಳೆ ಅಥವಾ ಬೆಳ್ಳಿಯಲ್ಲಿ ತಯಾರಿಸಲಾಗುತ್ತದೆ.

## ೧.೩ ದೇವರ ವಾಹನ ಶಿಲ್ಪಗಳು

ದೇವರ ವಾಹನಗಳಲ್ಲಿ ವಿವಿಧ ಪ್ರಕಾರಗಳಿವೆ. ಪ್ರಾತಿನಿಧಿಕವಾಗಿ ಕೆಲವನ್ನು ನೋಡಬಹುದು. ಅ. ಪ್ರಾಣಿ ವಾಹನ ಶಿಲ್ಪಗಳು, ಆ. ಪಕ್ಷಿ ವಾಹನ ಶಿಲ್ಪಗಳು, ಇ. ಜಲಚರ ಸಸ್ತನಿಗಳು, ಇತರ ಶಿಲ್ಪಗಳು.

### ಅ. ಪ್ರಾಣಿವಾಹನ ಶಿಲ್ಪಗಳು

ಪ್ರಾಣಿ ವಾಹನ ಶಿಲ್ಪಗಳು ಹಲವು ರೀತಿಯಲ್ಲಿ ಕಂಡು ಬರುತ್ತವೆ. ಈ ಕೆಳಗೆ ಕಾಣಿಸಿದ ಕೆಲವು ಶಿಲ್ಪಗಳನ್ನು ನೋಡಬಹುದು.

**ನಂದಿ ಶಿಲ್ಪಗಳು :** ಶಿವನ ವಾಹನವಾದ ನಂದಿಯ ಶಿಲ್ಪಗಳು ಅನೇಕ ಕಡೆ ಲೋಹ ಮಾಧ್ಯಮದಲ್ಲಿ ರಚನೆಯಾಗಿವೆ. ಚಿಕ್ಕ ಚಿಕ್ಕ ನಂದಿ ಶಿಲ್ಪಗಳು ಅಸಂಖ್ಯಾತವಾಗಿ ದೊರೆಯುತ್ತವೆ. ಕೊಟ್ಟೂರಿನಲ್ಲಿ [೩೩] ಮೊದಲ ಉಚ್ಚಯ್ಯ ಎಳೆಯುವಾಗ ಉಪಯೋಗಿಸುವ ಹಿತ್ತಾಳೆಯ ನಂದಿಶಿಲ್ಪವು ೪ ಅಡಿ ಎತ್ತರವಾಗಿದೆ. ಇದು ಲೋಹದ ಹಾಳೆಯಲ್ಲಿ ನಿರ್ಮಿತವಾಗಿದ್ದು, ಒಳಗೆ ಟೊಳ್ಳಾಗಿದೆ. ಮೈಮೇಲೆ, ಜೂಲ, ಮುಖಕ್ಕೆ ಮೊಗಡ, ಕೊರಳಲ್ಲಿ ಗಂಟೆಸರಗಳು ಹಾಗೂ ಗೆಜ್ಜೆಗಳಿಂದ ಕೂಡಿದ ಹಣೆಪಟ್ಟಿ

---

೩೨. ಕರೀಗೌಡ ಬೀಚನಹಳ್ಳಿ : ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ -೨, ಪುಟ -೨೪೦

೩೩. ಕೊಟ್ಟೂರು : ತಾ. ಕೂಡ್ಲಿಗಿ, ಜಿ. ಬಳ್ಳಾರಿ



ನಂದಿಯ ಶಿಲ್ಪ ( ಕೊಟ್ಟೂರು )



ಲೋಹದ ಹಾಳೆಯ ಹನುಮಂತ ಮತ್ತು ಗರುಡನ ಶಿಲ್ಪಗಳು ( ಬೇಲೂರು )

ಇವುಗಳಿಂದ ನಂದಿ ಶಿಲ್ಪ ಅಲಂಕೃತವಾಗಿವೆ. ಚಿಕ್ಕ ಆಕಾರದ ಶಿಲ್ಪಗಳು ಸಾಮಾನ್ಯವಾಗಿ ಎರಕ ಹೊಯ್ದು ರಚಿಸಲಾಗಿರುತ್ತವೆ ಮತ್ತು ಅವು ಟೊಳ್ಳಾಗಿರದೆ ಘಟ್ಟಿಯಾಗಿರುತ್ತವೆ.

**ಕುದುರೆ ಶಿಲ್ಪಗಳು :** ದೇವ ದಾನವರು ಕ್ಷೀರ ಸಾಗರ ಕಡೆದಾಗ ಹದಿನಾಲ್ಕು ಅಮೂಲ್ಯ ವಸ್ತುಗಳಲ್ಲಿ ಉಚ್ಚೈಶ್ರವಸ್ ಎಂಬ ಕುದುರೆಯು ದೊರೆಯಿತೆಂದು ಪುರಾಣಗಳಿಂದ ತಿಳಿದು ಬರುತ್ತದೆ. ಇಂದ್ರನು ಇದಕ್ಕೆ ಅಮೃತವನ್ನು ಕುಡಿಸುತ್ತಿದ್ದನಂತೆ. ಇಂದ್ರ, ಸೂರ್ಯ, ರಾಹು ಕೇತು ಇತ್ಯಾದಿಗಳ ರಥಕ್ಕೆ ಕುದುರೆಗಳನ್ನು ಕಟ್ಟಲಾಗಿರುತ್ತದೆ. ಇವೆಲ್ಲ ಶಿಷ್ಟ ಸಂಪ್ರದಾಯಕ್ಕೇ ಸೇರಿದವುಗಳಾಗಿರುತ್ತವೆ. ಮೈಲಾರ ಲಿಂಗನ ಸಂಪ್ರದಾಯದಲ್ಲಿ 'ಕುದುರೆ ಗೊರವನ ದೀಕ್ಷೆ' ಎಂಬ ಪದ್ಧತಿ ಇದೆ. ಗುಡ್ಡದ ಎಲ್ಲಮ್ಮ ಕುದುರೆಯ ಮೇಲೆ ಆಸೀನಳಾಗಿರುತ್ತಾಳೆ.

**ಆನೆ ಶಿಲ್ಪಗಳು :** ಆನೆ ಇಂದ್ರನ ವಾಹನ. ಇದು ಬಿಳಿಯ ಬಣ್ಣದ್ದಂತೆ, ಇದನ್ನು ಐರಾವತವೆಂತಲೂ ಕರೆಯುತ್ತಾರೆ. ಇಂದ್ರನಿಗೆ ಮೊದಲು ಕುದುರೆ ವಾಹನವಾಗಿತ್ತು. ನಂತರ ಐರಾವತವನ್ನು ವಾಹನವಾಗಿ ಮಾಡಿಕೊಂಡನೆಂಬ ಕಥೆಯಿದೆ.

**ಸಿಂಹ ಶಿಲ್ಪಗಳು :** ಅನೇಕ ಗ್ರಾಮದೇವತೆಗಳಿಗೆ ಸಿಂಹ ವಾಹನವಾಗಿರುತ್ತದೆ. ಮೈಸೂರಿನ ಚಾಮುಂಡಿಯ ವಾಹನ ಸಿಂಹವಾಗಿದ್ದು ಲೋಹದ ಹಾಳೆಯಲ್ಲಿದೆ.

**ಹುಲಿ ಶಿಲ್ಪಗಳು :** ದುರ್ಗೆ, ಕಾಳಿ, ದ್ಯಾವಮ್ಮ ಮುಂತಾದ ಸ್ತ್ರೀ ಗ್ರಾಮ ದೇವತೆಗಳಿಗೆ ಹುಲಿ ವಾಹನವಾಗಿರುತ್ತದೆ. ಇಂಥ ನೂರಾರು ಶಿಲ್ಪಗಳು ಕರ್ನಾಟಕದಲ್ಲಿ ನೋಡಲು ಸಿಗುತ್ತವೆ.

**ಇಲಿ ಶಿಲ್ಪಗಳು :** ಇಲಿ ಗಣೇಶನ ವಾಹನ. ಇಳಕಲ್ಲಿನಲ್ಲಿ (ಬಾಗಲಕೋಟೆ ಜಿಲ್ಲೆ) ವರ್ಷಕ್ಕೊಮ್ಮೆ ಇಲಿ ಪೂಜೆಯ ಹಬ್ಬ ನಡೆಯುತ್ತದೆ. ಇದನ್ನು ಇಲಿವಾರ, ಇಲಿ ಹಬ್ಬ ಎನ್ನುತ್ತಾರೆ. ಇಳಕಲ್ಲಿನ ನೇಕಾರರು, ವ್ಯಾಪಾರಿಗಳು ಈ ಪೂಜೆ ನಡೆಸಿಕೊಂಡು ಬರುವುದಕ್ಕೆ ಕಾರಣ ಇವರ ಉಪಜೀವನದ ಕುಲಕಸುಬಾದ ನೇಕಾರಿಕೆಯಲ್ಲಿ ಇಲಿಗಳು ತೊಂದರೆ ಕೊಟ್ಟು, ಬೆಲೆ ಬಾಳುವ ಸೀರೆಗಳನ್ನು ಕಡಿದು ಹಾಳು ಮಾಡದಿರಲಿ ಎಂದು ಇಲಿಯನ್ನು ತೃಪ್ತಿಪಡಿಸುವ ಆಚರಣೆಯಾಗಿದೆ. ಈ ಪರಂಪರೆ ಬಾದಾಮಿ, ಕಮತಗಿ, ಕೊಪ್ಪಳಗಳಲ್ಲಿಯೂ ನಡೆಯುತ್ತದೆ.

**ನಾಯಿ ಶಿಲ್ಪಗಳು :** ಕ್ವಚಿತ್ತಾಗಿ ನಾಯಿ ಶಿಲ್ಪ ಲೋಹದಲ್ಲಿ ರಚನೆಯಾಗಿರುತ್ತದೆ. ತ್ರಿಮೂರ್ತಿ ದತ್ತಾತ್ರೇಯನ ವಾಹನಗಳಲ್ಲಿ ನಾಯಿಯೂ ಒಂದಾಗಿದೆ. ಜನಪದರು ನಾಯಿಯನ್ನು ನಾರಾಯಣನೆಂದು ಕರೆಯುತ್ತಾರೆ.

**ನರನಶಿಲ್ಪಗಳು :** ನರನನ್ನು ಕಂಚು, ಹಿತ್ತಾಳೆ ಲೋಹಗಳಲ್ಲಿ ಮಾಡಿರುತ್ತಾರೆ. ಕುಬೇರನ ರಥವನ್ನು ಮಾನವರು ಎಳೆಯಬಹುದಾದ್ದರಿಂದ ಈತನನ್ನು ನರವಾಹನನೆಂದು ಹೆಸರಿಸಿದೆ.

## ಆ. ಪಕ್ಷಿ ವಾಹನ ಶಿಲ್ಪಗಳು

ಪ್ರಾಣಿಗಳಂತೆ ಪಕ್ಷಿಸಂಕುಲಗಳಲ್ಲಿ ಕೆಲವು ದೇವರ ವಾಹನಗಳೆಂದು ಪುರಾಣಗಳಲ್ಲಿ ಮಾನ್ಯತೆ ಪಡೆದಿವೆ. ಅವು ಜನಪದರಲ್ಲೂ ಆಚರಣೆಯಲ್ಲಿವೆ. ನವಿಲು, ಗರುಡ, ಕಾಗೆ ಶಿಲ್ಪಗಳು ಗಮನಾರ್ಹವಾಗುತ್ತವೆ.

**ನವಿಲು ಶಿಲ್ಪಗಳು :** ಕುಮಾರಸ್ವಾಮಿ ಅಥವಾ ಷಣ್ಮುಖಸ್ವಾಮಿ ಹಾಗೂ ಸರಸ್ವತಿಯರ ವಾಹನ ನವಿಲಾಗಿದೆ. ಈ ನವಿಲು ಶಿಲ್ಪವನ್ನು ವಿವಿಧ ಕಲ್ಲು, ಕಟ್ಟಿಗೆ-ಗಚ್ಚುಗಳಲ್ಲಿಯೂ ರಚನೆಗೊಂಡಿರುವಂತೆ ಲೋಹ ಮಾಧ್ಯಮದಲ್ಲೂ ರಚನೆಗೊಂಡಿರುತ್ತವೆ.

**ಗರುಡ ಶಿಲ್ಪಗಳು :** ಪಕ್ಷಿರಾಜನೆಂದು ಕರೆಸಿಕೊಳ್ಳುವ ಗರುಡ ವಿಷ್ಣುವಿನ ವಾಹನ. ಅರ್ಧಮನುಷ್ಯ ದೇಹ, ಅರ್ಧ ಪಕ್ಷಿಯಾಕಾರದ್ದಾಗಿರುತ್ತದೆ. ಲೋಹದ ಹಾಳೆಗಳಲ್ಲಿ ರಚಿಸಲಾಗಿರುವ ಇಂಥ ಶಿಲ್ಪಗಳನ್ನು ಅನೇಕ ದೇವಸ್ಥಾನಗಳಲ್ಲಿ ಕಾಣಬಹುದು.

**ಕಾಗೆ ಶಿಲ್ಪಗಳು :** ಶನಿದೇವರ ವಾಹನ ಕಾಗೆ. ಶನಿಯನ್ನು ಕಾಕವಾಹನ ಎಂದು ಕರೆಯುತ್ತಾರೆ. ಶನಿಶಾಪಕ್ಕೆ ಒಳಗಾದವರು ಕಾಗೆಗಳಿಗೆ ಭಕ್ಷ್ಯಭೋಜ್ಯಗಳನ್ನು ತಿನ್ನಿಸಿ ಶಾಪದಿಂದ ಮುಕ್ತರಾದೆವೆಂದು ಸಂತಸ ಪಡುವುದುಂಟು. ಇವು ಹಾರುವ ಭಂಗಿಯಲ್ಲಿ ರಚನೆಯಾಗಿರುತ್ತವೆ.

## ೨. ಲೋಹಮಾಧ್ಯಮದ ತಾಂತ್ರಿಕ ಹಿನ್ನೆಲೆಯ ಜನಪದ ಶಿಲ್ಪಕಲೆ

ಧರ್ಮಮೂಲ ಜನಪದ ಶಿಲ್ಪಕಲೆಯ ಮತ್ತೊಂದು ಪ್ರಮುಖ ಅಂಗವಾಗಿ ತಾಂತ್ರಿಕ ಹಿನ್ನೆಲೆಯ ಲೋಹ ಮಾಧ್ಯಮದ ಜನಪದ ಶಿಲ್ಪಕಲೆ ಬೆಳೆದು ಬಂದುದು ಕಂಡುಬರುತ್ತದೆ.

**ತಾಯತಗಳಲ್ಲಿನ ಶಿಲ್ಪಗಳು :** ದೆವ್ವ, ಭೂತ, ಮಾಟ, ಮಂತ್ರಗಳ ಹಿನ್ನೆಲೆಯಲ್ಲಿ ನಮ್ಮ ಜನಪದರು ಹಲವಾರು ಬಗೆಯ ಲೋಹದ ತಾಯತಗಳನ್ನು ತಯಾರಿಸಿ, ಅವುಗಳನ್ನು ಕೊರಳು, ಸೊಂಟ, ತೋಳು ಮುಂತಾದೆಡೆಗಳಲ್ಲಿ ಕಟ್ಟಿಕೊಳ್ಳುತ್ತಾರೆ. ಕೆಲವೊಮ್ಮೆ, ತಾವು ವಾಸಿಸುವ ಮನೆಯ ಬಾಗಿಲು, ಜಂತಿ, ಕಂಬ ಇತ್ಯಾದಿ ಸ್ಥಳಗಳಲ್ಲಿ ಇಂಥವುಗಳನ್ನು ಕಟ್ಟುತ್ತಾರೆ. ಹೀಗೆ ಮಾಡುವುದರಿಂದ ಭೂತ ಪ್ರೇತಗಳಿಂದ ಭಯ, ಬೇರೆಯವರು ಮಾಡಿದ ಮಾಟ-ಮಂತ್ರ, ಚಾಡಿ ಮುಂತಾದ ದುಷ್ಟ ಶಕ್ತಿಗಳಿಂದ ಮುಕ್ತಿ ಪಡೆಯಲು ಅಥವಾ ಅಂಥವುಗಳಿಂದ ದೂರವಿರಲು ಇಂಥ ವಸ್ತುಗಳನ್ನು ಬಳಸುತ್ತಾರೆ. ಇಂಥ ಲೋಹದ ವಸ್ತುಗಳ ಮೇಲೆ ಉಬ್ಬೊತ್ತಿನ ಹನುಮಂತ, ಇಲ್ಲವೆ ಅನೇಕ ವಿಧದ ಆಕೃತಿಗಳನ್ನು ಶಿಲ್ಪಿಸಲಾಗಿರುತ್ತದೆ. ಅಲ್ಲದೆ ಅನೇಕ ಮಂತ್ರ, ತಂತ್ರ ವಿದ್ಯೆಗಳಲ್ಲೂ ಶಿಲ್ಪಗಳನ್ನು ರಚಿಸಲಾಗಿರುತ್ತದೆ.

### ದೀಪಸ್ಥಂಭಗಳಲ್ಲಿನ ಶಿಲ್ಪಗಳು

ದೀಪಸ್ಥಂಭಗಳೂ ಅನೇಕ ವಿಧದಲ್ಲಿ ತಾಂತ್ರಿಕ ಹಿನ್ನೆಲೆಯಿಂದ ಮುಖ್ಯವಾಗುತ್ತವೆ. ಇವುಗಳಲ್ಲೂ

[illegible]

[illegible]

[illegible]

[illegible]

[illegible]

[illegible]

[illegible]



ಧೂಪಾರತಿಯಲ್ಲಿ ಗಜಲಕ್ಷ್ಮಿ ಶಿಲ್ಪ



ದೀಪಸ್ತಂಭದಲ್ಲಿ ಆಮೆ ಮತ್ತು ಆನೆ ಶಿಲ್ಪಗಳು.( ಕೊಲ್ಲೂರು )



ತೊಟ್ಟಲಗೌರಮ್ಮನ ಶಿಲ್ಪ (ಬಾದಾಮಿ)



ಮಲ್ಲಯ್ಯ ಮತ್ತಿತರ ಶಿಲ್ಪಗಳು. (ದೇವರಹಿಪ್ಪರಗಿ)

ಜನಪದ ಶೈಲಿಯ ಹಲವು ಬಗೆಯ ಶಿಲ್ಪ, ಉಬ್ಬು ಶಿಲ್ಪಗಳನ್ನು ಕಾಣಬಹುದು. ದೇವಾಲಯದ ಮುಖದ್ವಾರದಲ್ಲಿ ಸುಮಾರು ೨೦-೩೦ ಅಡಿ ಎತ್ತರದ ದೀಪಸ್ಥಂಭಗಳನ್ನು ಕಾಣಬಹುದು. ಇವುಗಳನ್ನು ಕಲ್ಲಿನ ಸ್ಥಂಭಗಳನ್ನು ಹೊರತುಪಡಿಸಿ, ಕಂಚು ಇಲ್ಲವೆ ಹಿತ್ತಾಳೆಯಲ್ಲಿ ನಿರ್ಮಿಸಿದವುಗಳಾಗಿರುತ್ತವೆ. ಬೆಳಗಾವಿ ಜಿಲ್ಲೆಯ ಮಠವೊಂದರಲ್ಲಿನ ದೀಪಸ್ಥಂಭಕ್ಕೆ ಮಾರುತಿಯ ಶಿಲ್ಪವನ್ನು ಪೀಠವಾಗಿ ನಿರ್ಮಿಸಲಾಗಿದೆ. ಕೆಲವೆಡೆ ನಾಗಗಳು, ಆನೆಗಳು, ಮಾವುತ, ಗರುಡ, ನರಸಿಂಹಾವತಾರಗಳನ್ನು ಶಿಲ್ಪಿಸಲಾಗಿರುತ್ತವೆ. ಈ ಸ್ಥಂಭ ಶಿಲ್ಪಗಳು ಎರಕ ಹೊಯ್ದು, ಇಲ್ಲವೆ ಲೋಹದ ಹಾಳೆಯಿಂದ ನಿರ್ಮಿಸಿದವುಗಳಾಗಿರುತ್ತವೆ.

ಕೊಲ್ಲೂರಿನ ಮೂಕಾಂಬಿಕೆ ದೇವಸ್ಥಾನದ ಎದುರಿಗಿನ ಆವರಣದಲ್ಲಿರುವ ದೀಪಸ್ಥಂಭ ಲೋಹಮಾಧ್ಯಮದಲ್ಲಿ ರಚನೆಯಾಗಿದ್ದು ಉತ್ತಮ ಉದಾಹರಣೆಯಾಗಿದೆ. ಇವಲ್ಲದೆ ತಾಂತ್ರಿಕ ಆಚರಣೆಯಲ್ಲಿ ಕಾಗೆ, ಬೆಕ್ಕು, ಇಲಿ ಮುಂತಾದ ಪ್ರಾಣಿಗಳ ಶಿಲ್ಪಗಳೂ ಲೋಹಮಾಧ್ಯಮದಲ್ಲಿ ರಚನೆಗೊಂಡಿರುತ್ತವೆ.

ಸೌಂದರ್ಯ ಮೂಲದಲ್ಲಿ ಬೆಳೆದು ಬಂದ ಲೋಹ ಮಾಧ್ಯಮದ ಜನಪದ ಶಿಲ್ಪಗಳು ಕ್ರಮೇಣ ಧರ್ಮ ಮೂಲದಲ್ಲೂ ಜನಿಸಿ ವಿಕಾಸ ಹೊಂದಿವೆ. ಧರ್ಮ ಮೂಲದ ಜನಪದ ಶಿಲ್ಪಕಲೆಯು ಧಾರ್ಮಿಕ ಹಾಗೂ ತಾಂತ್ರಿಕ ಹಿನ್ನೆಲೆಯಲ್ಲಿ ಮೈಚಾಚಿವೆ. ಧಾರ್ಮಿಕ ಹಿನ್ನೆಲೆಯಲ್ಲಿ ಪ್ರಸ್ತುತವಾಗುವ ಹಿಂದೂ ದೇವತಾ ಶಿಲ್ಪಗಳು, ಮುಸ್ಲಿಂ ದೇವತಾ ಶಿಲ್ಪಗಳು, ಹಿಂದೂ ಮುಸ್ಲಿಂ ಸಂಕೀರ್ಣ ಶಿಲ್ಪಗಳೆಲ್ಲ ಜನಪದರ ಆರಾಧ್ಯ ದೇವರುಗಳಾಗಿ, ಮನೆಯ ಕುಲ ದೇವರುಗಳಾಗಿ, ಊರ ದೇವರುಗಳಾಗಿ ಜನಪದರ ಧರ್ಮ ಪ್ರಜ್ಞೆಯನ್ನು ಜೀವಂತವಾಗಿರಿಸಿಕೊಂಡು ಬಂದವುಗಳಾಗಿವೆ.

## III. ಲೋಹ ಮಾಧ್ಯಮದ ವೃತ್ತಿಮೂಲ ಜನಪದ ಶಿಲ್ಪಕಲೆ

ವೃತ್ತಿಯಲ್ಲಿ ಅನೇಕ ವಿಧಗಳಿವೆ. ಹೊಟ್ಟೆ ಹೊರೆಯುವುದಕ್ಕಾಗಿ ಮಾಡುವ ವೃತ್ತಿಗಳು ಒಂದು ಬಗೆಯಾದರೆ, ಧಾರ್ಮಿಕವಾಗಿ ದೇವರ ಮೇಲಿನ ಭಕ್ತಿಗಾಗಿ ಕೈಗೊಳ್ಳುವ ವೃತ್ತಿಗಳೂ ಇರುತ್ತವೆ. ಇವೂ ಒಂದು ಬಗೆಯ ವೃತ್ತಿಗಳಾಗಿರುತ್ತವೆ. ಇವನ್ನು ದೇವರ ಸೇವಾ ವೃತ್ತಿ ಎಂದು ಕರೆಯಬಹುದು. ಇನ್ನೂ ಕೆಲವೊಮ್ಮೆ ದುಡಿಯದೇ, ಇನ್ನೊಬ್ಬರಿಂದ ಹಣ ಹಾಗೂ ವಸ್ತುಗಳನ್ನು ಬೇಡಿ ಪಡೆದುಕೊಂಡು ಹೊಟ್ಟೆ-ಹೊರೆಯುವವರೂ ಇದ್ದಾರೆ. ಇವರನ್ನು ಭಿಕ್ಷುಕರು ಎಂದೂ ಇವರ ವೃತ್ತಿಗೆ ಭಿಕ್ಷಾವೃತ್ತಿ ಎಂದೂ ಕರೆಯಬಹುದು.

ಇಲ್ಲಿ ಮುಖ್ಯವಾಗಿ ೧. ದೇವರ ಸೇವಾವೃತ್ತಿಗಳಲ್ಲಿ ಬಳಸಲ್ಪಡುವ ಶಿಲ್ಪಗಳು ೨. ಭಿಕ್ಷಾ ವೃತ್ತಿಯಲ್ಲಿ ಬಳಸಲ್ಪಡುವ ಶಿಲ್ಪಗಳು ಎಂದು ವಿಂಗಡಿಸಿ ನೋಡಬಹುದು.

[illegible]

[illegible]

[illegible]

[illegible]

[illegible]



ವೀರಭದ್ರನ ಶಿಲ್ಪಗಳು



ವೀರಭದ್ರನ ಶಿಲ್ಪಗಳ ವಿವಿಧ ಭಂಗಿಗಳ ರೇಖಾಚಿತ್ರಗಳು .

## ೧. ದೇವರ ಸೇವಾವೃತ್ತಿಗಳಲ್ಲಿ ಬಳಸಲ್ಪಡುವ ಶಿಲ್ಪಗಳು

ದೇವರ ಸೇವೆಗಾಗಿ ಹಲವು ಬಗೆಯ ಸೇವಾವೃತ್ತಿಗಳನ್ನು ನಮ್ಮ ಜನಪದರು ಕೈಕೊಂಡು ಬಂದಿರುತ್ತಾರೆ. ಈ ಸೇವೆಗಾಗಿ ಕೆಲವು ನಿರ್ಧಿಷ್ಟ ಜನವರ್ಗದವರಿರುತ್ತಾರೆ. ಅಂಥವುಗಳಲ್ಲಿ ವೇಶಭೂಷಣಗಳು ಮತ್ತು ಆ ವೇಷಭೂಷಣಗಳಲ್ಲಿ ಚಿಕ್ಕ ಚಿಕ್ಕ ಶಿಲ್ಪಗಳು ರಚಿಸಲ್ಪಟ್ಟಿರುತ್ತವೆ. ಉದಾಹರಣೆಗೆ, ಪುರವಂತಿಗೆಯವರ ವೇಷಗಳಲ್ಲಿ ಶಿಲ್ಪಗಳು ಸ್ಥಾನ ಪಡೆದಿರುತ್ತವೆಂಬುದನ್ನು ಅರಿತುಕೊಳ್ಳಬಹುದು.

**ಪುರವಂತಿಕೆ ವೇಷದಲ್ಲಿ ಶಿಲ್ಪಗಳು :** ಶೈವ ಪರಂಪರೆಯ ವಿಶಿಷ್ಟವಾದ ಧಾರ್ಮಿಕ ಆಚರಣೆ ಪುರವಂತಿಕೆ. ಇದನ್ನು ಜನಪದ ಕಲೆಯಂದೇ ಗುರುತಿಸಲಾಗಿದೆ. ಇದನ್ನು ಪ್ರದರ್ಶಿಸುವವರಿಗೆ ಪುರವಂತರೆಂದು ಕರೆಯುತ್ತಾರೆ. ಇವರ ವೇಷಭೂಷಣಗಳಲ್ಲಿ ಜನಪದ ಶಿಲ್ಪಗಳೂ ಸೇರಿಕೊಂಡಿರುತ್ತವೆ. ಇವು ಲೋಹ ಶಿಲ್ಪಗಳಾಗಿರುತ್ತವೆ.

**ತೋಳು ನಾಗರಶಿಲ್ಪ :** ಇದು ಕಂಚಿನದಾಗಿರುತ್ತದೆ. ಐದು ಸುರುಳಿಯ ನಾಗರ ಹೆಡೆ ಎತ್ತಿ ನಾಲಗೆ ಹೊರಚಾಚಿರುವಂತೆ ಇದ್ದು, ರಟ್ಟೆಗೆ ಕಟ್ಟುವಂತಿರುತ್ತದೆ. ತೋಳಿಗೆ ರಕ್ಷಾ ಕವಚದಂತೆ ಈ ಆಭರಣವಿರುತ್ತದೆ. ಇವು ಅಪ್ಪಟ ಎರಕ ಹೊಯ್ದವುಗಳಾಗಿರುತ್ತವೆ.

**ನರಸಿಂಹ :** ಮನುಷ್ಯ ದೇಹ ಹಾಗೂ ಸಿಂಹದ ಮುಖ ಸೇರಿದ್ದು ಪುರವಂತರು ಇದನ್ನು ಸೊಂಟಕ್ಕೆ ಕಟ್ಟಿಕೊಂಡಿರುತ್ತಾರೆ. ಅಗಲ ಕಣ್ಣು, ಚಾಚಿದ ನಾಲಿಗೆ, ಉಗ್ರರೂಪವಿರುತ್ತದೆ. ತಲೆಯ ಮೇಲೆ ನಾಗದೇವತೆ ಇರುತ್ತದೆ.

**ದಕ್ಷಪ್ರಸೂತಿ ಶಿಲ್ಪ :** ನರಸಿಂಹ ಶಿಲ್ಪದ ಎಡಬಲಕ್ಕೂ ದಕ್ಷ ಹಾಗೂ ಪ್ರಸೂತಿ ಶಿಲ್ಪಗಳು ಇರುತ್ತವೆ. ಎರಡಕ್ಕೂ ದಪ್ಪ ಮೀಸೆ ಇರುತ್ತವೆಯಾದರೂ ದಕ್ಷ ಗಂಡು, ಪ್ರಸೂತಿ ಹೆಣ್ಣು ಶಿಲ್ಪವೆಂದು ಹೇಳುತ್ತಾರೆ.

**ದರ್ಪಣಗಳು :** ದುಂಡಾಕಾರದ ನುಣುಪು ಮೈವುಳ್ಳ ಕಂಚಿನ ಈ ಶಿಲ್ಪ, ಮೇಲೆ ಐದು ಹೆಡೆಯ ನಾಗರಶಿಲ್ಪ ಹೊಂದಿರುತ್ತದೆ. ಕೆಳಗೆ ನರಸಿಂಹ ಶಿಲ್ಪವಿದ್ದರೆ ದರ್ಪಣ ಹಾಗೂ ನರಸಿಂಹನ ಎಡಬಲಗಳಲ್ಲಿ ದಕ್ಷ ಪ್ರಸೂತಿ ಶಿಲ್ಪಗಳಿರುತ್ತವೆ.

## ೨. ಭಿಕ್ಷಾ ವೃತ್ತಿಯಲ್ಲಿ ಬಳಸಲ್ಪಡುವ ಶಿಲ್ಪಗಳು

ಬಿಕ್ಷಾ ವೃತ್ತಿಯಲ್ಲಿ ಲೋಹಶಿಲ್ಪಗಳ ಬಳಕೆ ಅಪರೂಪವಾಗಿ ಕಂಡುಬರುತ್ತದೆ. ಸ್ತ್ರೀ ದೇವತೆ ಎಲ್ಲಮ್ಮನನ್ನು ಹೊತ್ತು ತಿರುಗುವ ಜೋಗತಿಯರಲ್ಲಿನ ಕೊಡದ ಎಲ್ಲಮ್ಮನನ್ನು ಹಾಗೇ ಅಂಬಾಭವಾನಿ, ಇಂಥ ಕೆಲವು ಶಿಲ್ಪಗಳನ್ನು ಉದಾಹರಿಸಬಹುದಾಗಿದೆ.

**ಕೊಡದ ಎಲ್ಲಮ್ಮನ ಶಿಲ್ಪಗಳು :** ಎಲ್ಲಮ್ಮನ ಸಂಪ್ರದಾಯದಲ್ಲಿ ಜೋಗಮ್ಮ, ಜೋಗಪ್ಪರು ತಲೆಯ ಮೇಲೆ ಹೊರುವ ಲೋಹದ ಈ ಶಿಲ್ಪವನ್ನು ಜಗದ ಎಲ್ಲಮ್ಮ ಅಥವಾ ಜೋಗದ ಎಲ್ಲಮ್ಮ ಎಂದು ಕರೆಯುತ್ತಾರೆ. ಈ ಶಿಲ್ಪಗಳು ಬೆಳ್ಳಿ, ತಾಮ್ರ, ಕಂಚು ಮುಂತಾದ ಲೋಹಗಳಲ್ಲಿ ರಚಿಸಲ್ಪಟ್ಟವುಗಳಾಗಿರುತ್ತವೆ.

**ಅಂಬಾಭವಾನಿ ಶಿಲ್ಪಗಳು :** ಅಂಬಾಭವಾನಿಯ ಶಿಲ್ಪಗಳು ಕಂಚು, ಬೆಳ್ಳಿ ಇಲ್ಲವೆ ಹಿತ್ತಾಳೆಯವುಗಳಾಗಿರುತ್ತವೆ. ಒಂದು ಸಣ್ಣದಾದ ಬುಟ್ಟಿಯಲ್ಲಿ ಈ ದೇವತಾ ಶಿಲ್ಪವನ್ನಿಟ್ಟು ಹಿಂಭಾಗದಲ್ಲಿ ನವಿಲುಗರಿ, ಇಲ್ಲವೆ ಚಿಕ್ಕ ಹಲಗೆಯನ್ನಿಟ್ಟು ಪ್ರತಿಷ್ಠಾಪಿಸಿರುತ್ತಾರೆ. ಅಂಬಾಭವಾನಿಯ ಜೋಗಮ್ಮಗಳೆಂದು ಹೇಳಿಕೊಂಡು ದೇವತಾ ಶಿಲ್ಪವಿರುವ ಬುಟ್ಟಿಯನ್ನು ಕೈಯಲ್ಲಿ ಹಿಡಿದುಕೊಂಡು ಇಲ್ಲವೆ ತಲೆಯ ಮೇಲೆ ಹೊತ್ತು ತಿರುಗಿ ಜೋಗ ನೀಡಿಸಿಕೊಳ್ಳುತ್ತಾರೆ.

## ತೇರು ಶಿಲ್ಪಗಳು ★

ಉತ್ತರ ಕರ್ನಾಟಕದಲ್ಲಿ ಲೋಹ ಮಾಧ್ಯಮದ ತೇರಿನ ಶಿಲ್ಪಗಳನ್ನು ಮರದ ಮಾಧ್ಯಮದ ತೇರಿನ ಶಿಲ್ಪಗಳಿಗೆ ಹೋಲಿಸಿದರೆ ತುಂಬ ಕಡಿಮೆ ಸಂಖ್ಯೆಯಲ್ಲಿ ದೊರೆಯುತ್ತವೆ. ಲೋಹ ಮಾಧ್ಯಮದ ತೇರಿನ ಶಿಲ್ಪಗಳು ಕೂಡ ಮರದ ತೇರು ಶಿಲ್ಪಗಳ ಹಾಗೆ ದೊಡ್ಡದಾಗಿಯೂ, ಕೆಲವೊಮ್ಮೆ ಕಿರಿದಾಗಿಯೂ ಇರುತ್ತವೆ. ಅಲ್ಲದೆ ಮರದ ತೇರು ಶಿಲ್ಪಗಳಂತೆ ಷಡ್ಭುಜಾಕಾರ, ಚತುಷ್ರ್ಕಾಕಾರ, ಅಷ್ಟಭುಜಾಕಾರ ಮತ್ತು ವೃತ್ತಾಕಾರಗಳಾಕಾರಗಳಲ್ಲಿರುತ್ತವೆ. ಮತ್ತು ಇವು ಕೂಡ ಐದು ಹಂತಗಳಿಂದ ಕೂಡಿರುತ್ತವೆ. ಒಂದು ವ್ಯತ್ಯಾಸವೆಂದರೆ ಲೋಹದ ತೇರುಗಳು ಬಹುತೇಕವಾಗಿ ತಳದಲ್ಲಿ ಅಗಲವಾಗಿ ಕೆಳ ಅಂತಸ್ತಿನಿಂದ ಮೇಲಕ್ಕೆ ಹೋದಂತೆ ಅಂತಸ್ತುಗಳು ಕಿರಿದಾಗುತ್ತ ಹೋಗಿ ಗೋಪುರದಂತೆ ಕಾಣುತ್ತವೆ. ಈ ತೇರು ಶಿಲ್ಪಗಳಿಗೆ ಮರದ ಇಲ್ಲವೆ ಕಲ್ಲಿನ ಕೆಲವೊಮ್ಮೆ ಲೋಹದ ಗಾಲಿಗಳಿರುತ್ತವೆ. ಈ ಗಾಲಿಗಳು ನಾಲ್ಕರಿಂದ ಏಳು ಅಡಿಗಳಷ್ಟು ವ್ಯಾಸವನ್ನು ಹೊಂದಿರುತ್ತವೆ. ಲೋಹದ ತೇರು ಶಿಲ್ಪಗಳು ರಚನೆಯಲ್ಲಿ ತುಂಬ ಸರಳವಾಗಿರುತ್ತವೆ. ಸಾಮಾನ್ಯವಾಗಿ ದಪ್ಪ ಲೋಹದ ಹಾಳೆಯನ್ನು ಕತ್ತರಿಸಿ, ಬೆಸೆದು ಹಾಗೂ ನಟ್ಟು ಬೋಲ್ಟುಗಳಿಂದ ಬಿಗಿದು ರಚಿಸಿದವುಗಳಾಗಿರುತ್ತವೆ. ಕಮಾನು ಮಂಟಪಗಳಿಂದ ಕೂಡಿ ಸುಂದರವಾಗಿರುತ್ತವೆ. ಮರದ ತೇರು ಶಿಲ್ಪದಂತೆ ವಿವಿಧ ಶಿಲ್ಪಗಳು ಇದರಲ್ಲಿ ಅಳವಡಿಸಲ್ಪಟ್ಟಿರುವುದು ಕಡಿಮೆ. ಉತ್ಸವದ ಸಂದರ್ಭದಲ್ಲಿ ಇವು ವಿಶೇಷವಾಗಿ ಅಲಂಕರಿಸಲ್ಪಟ್ಟಿರುತ್ತವೆ.

ಬಳ್ಳಾರಿ ಜಿಲ್ಲೆಯ ಕೂಡ್ಲಿಯ ತೇರು ಚತುಸ್ರಾಕಾರದಲ್ಲಿದ್ದು ಸರಳ ರಚನೆಯಾಗಿದೆ. ಹೊನ್ನ ಕೀರಣಗಿಯ (ತಾ.ಜಿ. ಗುಲಬರ್ಗಾ) ವೀರಭದ್ರೇಶ್ವರನ ತೇರು ಕೂಡ ಚತುಷ್ಕಾರವಾಗಿದ್ದು ಎತ್ತರವಾಗಿದೆ. ಈ ಎರಡೂ ಲೋಹದ ತೇರುಗಳಿಗೆ ಕಲ್ಲಿನ ಗಾಲಿಗಳನ್ನು ಅಳವಡಿಸಲಾಗಿದೆ. ಲೋಹ

---

★ ವಿವರಗಳಿಗೆ ನೋಡಿರಿ : ಇದೇ ಮಹಾಪ್ರಬಂಧದ ಅಧ್ಯಾಯ ನಾಲ್ಕು : ಮರದ ಮಾಧ್ಯಮದ ಜನಪದ ಶಿಲ್ಪಕಲೆ, ಪುಟ -೧೫೪



ಹಡಲಗಹಳ್ಳಿ (ಹಾವೇರಿ)



ತೇರು ಹಳ್ಳಿ (ಶಿಶಿನ ಜಿ.)

ಮಾಧ್ಯಮದ ಹೆಸರಿಸಬಹುದಾದ ಕೆಲವು ತೇರುಗಳೆಂದರೆ ತಿಂಥಣಿಯ ಮೌನೇಶ್ವರರ ತೇರು (ತಾ. ಸುರಪುರ, ಜಿ. ಗುಲಬರ್ಗಾ), ಕೊಟ್ಟೂರಿನ ಬಸವೇಶ್ವರರ ತೇರು (ತಾ. ಕೂಡ್ಲಿಗಿ, ಜಿ. ಬಳ್ಳಾರಿ ), ಗೊಲ್ಲರಹಳ್ಳಿಯ ಕಾಳಿಕಾ ದೇವಿಯ ತೇರು (ತಾ. ಹೊಸಪೇಟೆ, ಜಿ. ಬಳ್ಳಾರಿ), ಗೋಡಗೇರಿಯ ಶಿವಾನಂದ ಮಠದ ತೇರು (ತಾ. ಹುಕ್ಕೇರಿ, ಜಿ. ಬೆಳಗಾವಿ), ಕುರುಣಿಯ ಗಂಗಾಬಾಯಿ ತೇರು (ತಾ. ಹುಕ್ಕೇರಿ, ಜಿ.ಬೆಳಗಾವಿ), ಅಕ್ಕತಂಗೇರ ಹಾಳದ ಧುರ್ಗಾದೇವಿಯ ತೇರು, ಸುಲ್ದಾಳದ ಜಡಿಸಿದ್ಧೇಶ್ವರ ಹಾಗೂ ಅಂಕಲಗಿಯ ಲಕ್ಷ್ಮೀ ದೇವಿಯ ತೇರು ಶಿಲ್ಪಗಳು (ತಾ. ಗೋಕಾಕ, ಜಿ. ಬೆಳಗಾವಿ) ಕ್ರಮವಾಗಿ ಚತುಷ್ಪ್ರಾಕಾರ, ಅಷ್ಟಮಾಕಾರ ಹಾಗೂ ಷಡ್ಭುಜಾಕಾರದಲ್ಲಿದ್ದು ಉಲ್ಲೇಖಾರ್ಹವಾದವುಗಳಾಗಿವೆ.

ಅಧ್ಯಾಯ - ಏಳು

# ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಕಲೆ

ಮಣ್ಣು, ಕಟ್ಟಿಗೆ, ಕಲ್ಲು, ಲೋಹ ಇತ್ಯಾದಿ ಘಟ್ಟಿಯಾದ ಮಾಧ್ಯಮಗಳನ್ನು ಬಳಸಿಕೊಂಡು ಸೃಷ್ಟಿಸುವ ಜನಪದ ಶಿಲ್ಪಗಳನ್ನು ಹೊರತುಪಡಿಸಿ ಸಗಣಿ, ಹಿಟ್ಟು, ನಾರು, ಚಿಂದಿ ಬಟ್ಟೆ, ಸಕ್ಕರೆ, ಬೆಲ್ಲ, ಕಾಗದ, ಮಡಕೆ, ಬೆತ್ತ, ದಂಟು, ಬಿದಿರು ಮುಂತಾದ ತೀರ ಘಟ್ಟಿಯಲ್ಲದ, ಅಖಂಡವಲ್ಲದ ಪದಾರ್ಥಗಳನ್ನು ಮಾಧ್ಯಮಗಳನ್ನಾಗಿ ಬಳಸಿಕೊಂಡೂ ನಮ್ಮ ಜನಪದರು ಶಿಲ್ಪಗಳನ್ನು ರಚಿಸುತ್ತ ಬಂದಿರುವುದುಂಟು. ಇವನ್ನೆಲ್ಲ ಒಟ್ಟಾಗಿ ಅಧ್ಯಯನದ ದೃಷ್ಟಿಯಿಂದ ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಕಲೆಯೆಂದು ಕರೆದು ವಿವೇಚನೆ ಮಾಡಲಾಗಿದೆ.

ವರ್ಷದುದ್ದಕ್ಕೂ ಆಗಾಗ ಆಚರಿಸಲ್ಪಡುವ ಹಬ್ಬ ಹರಿದಿನಗಳಂತಹ ಸಂದರ್ಭಗಳಲ್ಲಿ ನಮ್ಮ ಜನಪದರು ಇಂತಹ (ಸಂಕೀರ್ಣ) ಮಾಧ್ಯಮಗಳಲ್ಲಿ ವೈವಿಧ್ಯಮಯ ಶಿಲ್ಪಗಳನ್ನು ರಚಿಸಿ ಆಚರಿಸುತ್ತಾರೆ. ಅವು ಧಾರ್ಮಿಕ ಆಚರಣೆಯ ಕೇಂದ್ರವಾಗಿಯೋ, ಹಬ್ಬದ ನಿಮಿತ್ತ ಮನರಂಜನೆಯ ವಸ್ತುವಾಗಿಯೋ, ಇಲ್ಲವೆ ಕೆಟ್ಟದ್ದನ್ನು ದೂರ ಮಾಡಲು, ಸಂಕಷ್ಟವನ್ನು ಪರಿಹರಿಸಿಕೊಳ್ಳಲೋ, ಆ ಮೂಲಕ ಮಂಗಳವನ್ನು, ಸುಖ, ಶಾಂತಿ, ನೆಮ್ಮದಿಯನ್ನು ಪಡೆಯಲೋ ಹೀಗೆ ಹಲವಾರು ನಂಬಿಕೆಗಳ ಹಿನ್ನೆಲೆಯಲ್ಲಿ ನಮ್ಮ ಗ್ರಾಮೀಣರು ಇಂಥ ಸಂಕೀರ್ಣ ಮಾಧ್ಯಮದ ಶಿಲ್ಪಗಳನ್ನು ರಚಿಸಿ ಆಚರಿಸುತ್ತ ಬಂದಿದ್ದಾರೆ, ಮಾತ್ರವಲ್ಲ ಇವೆಲ್ಲ ಗ್ರಾಮೀಣ ಜನರ ಆಕರ್ಷಣೆಯ ಕೇಂದ್ರ ಬಿಂದುವಾಗಿ ಮನರಂಜನೆಯನ್ನು ನೀಡುವುದರೊಂದಿಗೆ ಜನಪದರ ಕಲಾ ಕೌಶಲ್ಯಕ್ಕೂ ಸಾಕ್ಷಿಯಾಗಿ ಪುನಃ ಪುನಃ ಸೃಷ್ಟಿಯಾಗುತ್ತ ಪರಂಪರೆಯಲ್ಲಿ ಉಳಿದುಕೊಂಡು ಬಂದಿವೆ.

ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಗಳು ತುಂಬ ವೈವಿಧ್ಯಮಯವಾಗಿದ್ದು ಗಮನ ಸೆಳೆಯುತ್ತವೆ. ಈ ವೈವಿಧ್ಯಮಯ ಶಿಲ್ಪಗಳ ರಚನೆಗೆ ಬಳಸುವ ಮಾಧ್ಯಮಗಳು, ರಚನಾಕ್ರಮ, ಎಲ್ಲವೂ ವೈವಿಧ್ಯಮಯವಾಗಿರುತ್ತವೆ. ಮಣ್ಣು, ಕಟ್ಟಿಗೆ, ಕಲ್ಲು, ಲೋಹಮಾಧ್ಯಮದ ಶಿಲ್ಪಗಳಂತೆ ಇಲ್ಲಿ ಕೇವಲ ಕೆತ್ತುವುದೋ, ಮೆತ್ತುವುದೋ ಇಲ್ಲವೆ ಎರಕ ಹೊಯ್ಯುವುದು ಮಾತ್ರವೇ ಇರುವುದಿಲ್ಲ. ಸಂಕೀರ್ಣ ಮಾಧ್ಯಮದಲ್ಲಿ ಕೆತ್ತುವುದು, ಮೆತ್ತುವುದು, ಒತ್ತಿ ರೂಪಿಸುವುದು, ಹೆಣೆಯುವುದು, ಜೋಡಿಸುವುದು ಮುಂತಾದ ಹಲವಾರು ವಿಧದ ರಚನಾ ಕ್ರಮಗಳು ಇರುತ್ತವೆ. ಅಲ್ಲದೆ ಸಂಕೀರ್ಣ ಮಾಧ್ಯಮದಲ್ಲಿ ಅತ್ಯಂತ ಚಿಕ್ಕ ಪ್ರಮಾಣದ ಶಿಲ್ಪಗಳಿಂದ ಹಿಡಿದು ಅತ್ಯಂತ ದೊಡ್ಡ ಆಕಾರದ ಶಿಲ್ಪಗಲೂ ರಚನೆಗೊಳ್ಳುವುದುಂಟು. ಈ ಶಿಲ್ಪಗಳನ್ನು ಅಶಾಶ್ವತ ಮಾಧ್ಯಮದ ಶಿಲ್ಪಗಳೆಂದೂ ಕರೆಯಬಹುದು. ನಮ್ಮ ಜನಪದರು ಆಚರಿಸುವ

ಹಬ್ಬ ಹರಿದಿನಗಳು ಎಷ್ಟೊಂದು ವೈವಿಧ್ಯಮಯವಾಗಿವೆಯೋ, ಈ ಶಿಲ್ಪಗಳೂ ಹಾಗೇ ವೈವಿಧ್ಯಮಯವಾಗಿ ರಚನೆಗೊಂಡು ಗಮನ ಸೆಳೆಯುತ್ತವೆ.

ಹೋಳಿ ಹಬ್ಬದಲ್ಲಿ ರಚನೆಗೊಳ್ಳುವ ಕಾಮ, ಬೂದಗಾಮ, ದೀಪಾವಳಿ ಹಬ್ಬದಲ್ಲಿ ರಚಿಸಲ್ಪಡುವ ಹಟ್ಟಿ ಹಬ್ಬದ ಸಗಣಿ ಪಾಂಡವ-ಕೌರವರು, ಬೆಳೆಕಾಯುವ ಬೆದರು ಗೊಂಬೆ, ಆಣಿ ಪೀಣಿ, ತೊಗಲು ಗೊಂಬೆಗಳು, ಮಳಲ ಶಿಲ್ಪಗಳು, ಗಾರುಡಿ ಗೊಂಬೆಗಳು, ಹಿಟ್ಟಿನ ಗೊಂಬೆಗಳು, ಮಕ್ಕಳಾಟಿಕೆಯ ಶಿಲ್ಪಗಳು, ಸೌಂದತ್ತಿಯಲ್ಲಿ ಹುಟ್ಟಿಕೊಳ್ಳುವ ಪೌರಾಣಿಕ ಪಾತ್ರಗಳು, ಸನ್ನಿವೇಶಗಳ ವಿವಿಧ ಮಾಧ್ಯಮದ ಶಿಲ್ಪಗಳು, ಮನರಂಜನೆಯ ಕೇಂದ್ರವಾಗಿರುವ ಕರ್ಚಿ ಗೊಂಬೆಗಳು, ಅಲ್ಲದೆ ಅನ್ನದ, ರಾಗಿಯ ಶಿಲ್ಪಗಳು, ಅರಿವೆ-ಅರಳೆಯ ಅಲಂಕಾರಿಕ ಶಿಲ್ಪಗಳು, ಮುಂತಾದುವೆಲ್ಲ ಸಂಕೀರ್ಣ ಮಾಧ್ಯಮದ ಶಿಲ್ಪಗಳಾಗಿ ಗಮನ ಸೆಳೆಯುತ್ತವೆ. ಈ ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಗಳು ಸೌಂದರ್ಯ, ಧರ್ಮ ಹಾಗೂ ವೃತ್ತಿಯ ನೆಲೆಯಲ್ಲಿ ಬೆಳೆದು ಬಂದುದರಿಂದ ೧. ಸಂಕೀರ್ಣ ಮಾಧ್ಯಮದ ಸೌಂದರ್ಯ ಮೂಲ ಜನಪದ ಶಿಲ್ಪಕಲೆ, ೨. ಸಂಕೀರ್ಣ ಮಾಧ್ಯಮದ ಧರ್ಮ ಮೂಲ ಜನಪದ ಶಿಲ್ಪಕಲೆ, ೩. ಸಂಕೀರ್ಣ ಮಾಧ್ಯಮದ ವೃತ್ತಿ ಮೂಲ ಜನಪದ ಶಿಲ್ಪಕಲೆ ಎಂದು ವಿಂಗಡಿಸಿಕೊಂಡು ಮತ್ತೆ ಈ ಮುಖ್ಯ ವಿಂಗಡಣೆಗಳಲ್ಲಿ ಉಪವಿಂಗಡಣೆಗಳನ್ನು ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

## ೧. ಸಂಕೀರ್ಣ ಮಾಧ್ಯಮದ ಸೌಂದರ್ಯ ಮೂಲ ಜನಪದ ಶಿಲ್ಪಕಲೆ

ದುಡಿಮೆಯ ಬದುಕಿನ ದಾರಿಯಲ್ಲೂ ಆನಂದದ ಆಸ್ವಾದನೆ ಮನುಷ್ಯನು ಸಹಜವಾಗಿ ಪ್ರಯತ್ನಿಸಿದನು. ಅದಕ್ಕಾಗಿ ಅವನು ದುಡಿಮೆಯ ಹಾಗೂ ಬಿಡುವಿನ ವೇಳೆಯನ್ನು ಬಳಸಿಕೊಂಡನು. ಈ ವೇಳೆಯಲ್ಲಿ ಹಲವಾರು ಕಲೆಗಳು ಉಗಮಿಸಿ ವಿಕಾಸ ಹೊಂದಿದವು. ಅವುಗಳಲ್ಲಿ ಹಲವು ಬಗೆಯ ಸಂಕೀರ್ಣ ಮಾಧ್ಯಮದ ಶಿಲ್ಪಗಳೂ ಆತನ ಸೃಜನಶೀಲ ಸಣಷ್ಟಿಯ ಸಂಕೇತವಾಗಿ ರೂಪುಗೊಂಡವು. ಈ ಶಿಲ್ಪಗಳೆಲ್ಲ ನೋಡುವ ಕಣ್ಣುಗಳನ್ನು ತಣಿಸುವಂತ ಕಂಡ ದೃಷ್ಯವೆಲ್ಲ ಶೃಂಗಾರವಾಗಿರುವಂತೆ ವಿವಿಧ ರೀತಿಯ ಶಿಲ್ಪಗಳನ್ನು ನಮ್ಮ ಜನಪದರು ಸೃಷ್ಟಿಸಿದರು. ಹೀಗಾಗಿ ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಗಳನ್ನು ಸೌಂದರ್ಯ ಪ್ರಜ್ಞೆಯಿಂದ ಪರಿಗಣಿಸಬೇಕಾಗುತ್ತದೆ. ಹೀಗೆ ಸೌಂದರ್ಯ ಪ್ರಜ್ಞೆಯನ್ನೇ ಮೂಲ ಘಟಕವಾಗಿ ಇಟ್ಟುಕೊಂಡರೂ ಇದನ್ನು ಎರಡು ರೀತಿಯಿಂದ ವಿಂಗಡಿಸಬಹುದು.

೧. ಸಂಕೀರ್ಣ ಮಾಧ್ಯಮದ ಪ್ರಯೋಜನ ಮೂಲ ಜನಪದ ಶಿಲ್ಪಕಲೆ


೨. ಸಂಕೀರ್ಣ ಮಾಧ್ಯಮದ ಮನರಂಜನ ಮೂಲ ಜನಪದ ಶಿಲ್ಪಕಲೆ.

[illegible]

[illegible]

[illegible]

# ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಕಲೆ



## ೧. ಸಂಕೀರ್ಣ ಮಾಧ್ಯಮದ ಪ್ರಯೋಜನ ಮೂಲ ಜನಪದ ಶಿಲ್ಪಕಲೆ

ಮಾನವನ ಮೂಲಭೂತ ಅಗತ್ಯಗಳೆಂದರೆ ಅನ್ನ, ವಸ್ತ್ರ, ವಸತಿ ಈ ಅಗತ್ಯಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಆತ ನಿರಂತರವಾಗಿ ನಡೆಸಿದ ಹೋರಾಟವೇ ಆತನ ಬದುಕು. ಈ ಬದುಕು ಜಾಳು-ಜಾಳಾಗದಂತೆ ಸೌಂದರ್ಯದಿಂದ ಕೂಡಿ ಸಹ್ಯವಾಗುವಂತೆ ಮಾರ್ಪಡಿಸಿಕೊಳ್ಳುವಲ್ಲಿ ಅನೇಕ ಶಿಲ್ಪಗಳನ್ನೂ ಸೃಷ್ಟಿಸಿ ಸಂತೋಷಪಟ್ಟನು. ಆತನ ಭೌತಿಕ, ಪ್ರಾಯೋಜನಿಕ ಅಗತ್ಯಗಳನ್ನು ಪೂರೈಸುವುದರೊಂದಿಗೆ ನೋಟಕ್ಕೆ ಶೃಂಗಾರಮಯವಾಗಿಯೂ ಕಾಣುವಂತೆ ಮಾಡಿದುದೇ ಇವುಗಳ ಹಿಂದಿನ ಸದುದ್ದೇಶವಾಗಿದೆ. ಈ ಪ್ರಯೋಜನ ಮೂಲದ ಶಿಲ್ಪಗಳಲ್ಲಿ ೧.೧ ಬೆದರು ಗೊಂಬೆ ಶಿಲ್ಪಗಳು, ೧.೨ ಆಣೀ ಪೀಣಿ ಶಿಲ್ಪಗಳು, ೧.೩ ಕಾಗದದ ಕೆಸರಿನ ಶಿಲ್ಪಗಳು ಪ್ರಮುಖವಾಗಿ ಗಮನ ಸೆಳೆಯುತ್ತವೆ.

**೧.೧ ಬೆದರು ಗೊಂಬೆ ಶಿಲ್ಪಗಳು :** ಬೆದರು ಇದರ ಮೂಲ ಆಶಯ ಕೆಟ್ಟದರಿಂದ ರಕ್ಷಣೆ ಪಡೆಯುವುದೇ ಆಗಿದೆ. [೧] ಇದನ್ನು ಹೊಲಗಳಲ್ಲಿ ಹಕ್ಕಿಗಳನ್ನು ಬೆದರಿಸಲು ಬಳಸಲಾಗುತ್ತದೆ. ಹಳೆಯ ಅಂಗಿ, ಸುಣ್ಣ ಬಳೆಯಲಾದ ಗಡಿಗೆ ಅಥವಾ ಮರ, ಅವುಗಳ ಮೇಲೆ ಮುಖ ಬರೆಯಲಾಗಿರುವಂಥದು. ಕೆಲವು ಸಲ ಒಳಗೆಲ್ಲ ಹುಲ್ಲು ತುಂಬಿ, ದಪ್ಪವಾಗಿಸಿರುವುದರಿಂದ ದೂರದಿಂದ ನೋಡುವಾಗ ನಿಜವಾದ ಮನುಷ್ಯನ ಹಾಗೆ ಭ್ರಮೆಯುಂಟಾಗುವುದು. ಬಣವಿಗಳ ಮೇಲೆ ನಿಲ್ಲಿಸುವ ಈ ಗೊಂಬೆ ಶಿಲ್ಪಗಳು ರಾತ್ರಿಯ ಸಮಯದಲ್ಲಿ ಭಯ ಹುಟ್ಟಿಸುವಂತೆ ರೂಪಿತವಾಗಿರುತ್ತವೆ. ಈ ಬೆದರು ಗೊಂಬೆಗಳು ಉತ್ತರ ಕರ್ನಾಟಕ ಮಾತ್ರವಲ್ಲ ಕರ್ನಾಟಕಾದ್ಯಾಂತ ಮತ್ತು ಬೇರೆ ಕಡೆಗೂ ಕಂಡು ಬರುವ ಜನಪದ ಶಿಲ್ಪಗಳಾಗಿವೆ.

**೧.೨ ಆಣೀ ಪೀಣಿ ಶಿಲ್ಪಗಳು :** ದೀಪಾವಳಿಯ ಹಬ್ಬದಾಚರಣೆಯಲ್ಲಿ ಈ ಶಿಲ್ಪಗಳು ರೂಪ ತಳೆಯುತ್ತವೆ. ಉತ್ತರ ಕರ್ನಾಟಕದ ಭಾಗದಲ್ಲಿ ಪೀಡೆಯ ಹಾಡುಗಳು ಅಥವಾ ಆಣೀ ಪೀಣಿ ಹಾಡುಗಳು[೨] ಕಂಡುಬರುತ್ತವೆ. ಈ ಹಾಡುಗಳೊಟ್ಟಿಗೆ ಈ ಶಿಲ್ಪವೂ ಕಾಣಿಸಿಕೊಳ್ಳುತ್ತದೆ. ರೈತನು ತನ್ನ ಎತ್ತುಗಳಿಗೆ ದೀಪಾವಳಿ ಹಬ್ಬದಲ್ಲಿ ಪೂಜೆ ಮಾಡಿ ದೀಪ ಬೆಳಗುತ್ತಾನೆ. ಹೀಗೆ ದೀಪ ಬೆಳಗಲು ವಿಶೇಷವಾದ ಒಂದು ಹೆಣಿಕೆಯ ಶಿಲ್ಪ ರಚನೆಗೊಂಡಿರುತ್ತದೆ. ಅದೇ ಆಣೀ ಪೀಣಿ ಶಿಲ್ಪ.

**ರಚನೆ :** ಹಸಿಯಾದ ಗಣಜಿ ಹುಲ್ಲು, ಪುಂಡಿ ದಂಟು, ಬೇವಿನ ಮರ ಅಥವಾ ಜೇಕುಗಳಿಂದ ಕಲಾತ್ಮಕವಾಗಿ ಗೂಡಿನಂತೆ ಇದನ್ನು ಹೆಣೆಯುತ್ತಾರೆ. ದೀಪವಿಡಲು ಅನುಕೂಲವಾಗುವಂತೆ ಒಂದು ಚಿಕ್ಕ ಬುಟ್ಟಿಯಾಕಾರ ಮಾಡುತ್ತಾರೆ. ಅದು ನಾಗರ ಹಾವಿನ ಹೆಡೆಯ ಆಕಾರದಂತೆ ತೋರುತ್ತದೆ. ಎಣ್ಣೆ-ಪಣತಿಯಿಂದ ಬತ್ತಿಗೆ ದೀಪ ಹೊತ್ತಿಸಿ ಒಳಗೆ ಇಟ್ಟು ಎತ್ತು, ಹೋರಿಗಳಿಗೆ ಬೆಳಗುತ್ತಾರೆ.

**ಆಚರಣೆ :** ಈ ಶಿಲ್ಪದಲ್ಲಿ ದೀಪ-ಪಣತಿಯನ್ನಿಟ್ಟುಕೊಂಡು ಹುಡುಗರೆಲ್ಲ ಸೇರಿಕೊಂಡು

---

೧. ಡಾ. ಚಂದ್ರಶೇಖರ ಕಂಬಾರ (ಸಂ): ಕನ್ನಡ ಜಾನಪದ ವಿಶ್ವಕೋಶ, ಸಂಪುಟ -೨, ಪುಟ - ೧೪೩೭

೨. ಹಾಡುಗಳಿಗಾಗಿ ನೋಡಿ : ಡಾ. ಎಂ.ಎಂ. ಕಲಬುರ್ಗಿ : ಮಾರ್ಗ, ಸಂಪುಟ -೨, ಪುಟ -೪೩೪

[illegible]



ಬೆದರು ಶಿಲ್ಪ ( ಜೋಳದ ಹೊಲ, ಹಡುಗಿ )



ಬೆದರು ಶಿಲ್ಪ ( ಕಲ್ಲಂಗಡಿ ತೋಟ, ಐಹೊಳೆ )

ಸಂಜೆಯ ವೇಳೆಯಲ್ಲಿ ಮೊದಲು ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಜ್ಯೋತಿ ಹೊತ್ತಿಸಿಕೊಂಡು ಮನೆ ಮನೆಗೆ ಹೋಗುತ್ತಾರೆ. ಅಲ್ಲಿ ದನಕರುಗಳಿಗೆ, ಎತ್ತು, ಹೋರಿಗಳಿಗೆ ಈ ದೀಪಗಳನ್ನು ಬೆಳಗುತ್ತ ಹಾಡು ಹೇಳುತ್ತಾರೆ. ಅದಕ್ಕೆ ಪ್ರತಿಯಾಗಿ ಪ್ರತಿಯೊಂದು ಮನೆಯ ಹೆಂಗಸರು ಈ ಜ್ಯೋತಿಯಿಂದ ತಮ್ಮ ಮನೆಯ ದೀಪ ಹೊತ್ತಿಸಿಕೊಂಡು, ಹುಡುಗರಿಗೆ ದವಸ- ಧಾನ್ಯ ಕೊಟ್ಟು ಕಳುಹಿಸುತ್ತಾರೆ. ಮಲೆನಾಡಿನಲ್ಲಿ ಇದನ್ನು ಹೋಲುವ ಆಚರಣೆಗೆ ಅಂಟಿಕೆ-ಪಂಟಿಕೆ ಸಂಪ್ರದಾಯ ಎಂದು ಕರೆಯುತ್ತಾರೆ. ಇಲ್ಲವೆ, ಜ್ಯೋತಿ ನೀಡುವುದು, ದೀಪ ಕೊಡುವುದು ಎಂದೂ ಕರೆಯುವರು. ಈ ದೀಪ ಕೊಡುವ ಹುಡುಗರ ದೊಡ್ಡ ತಂಡವೇ ಇರುತ್ತದೆ. ಅಷ್ಟೇ ಅಲ್ಲದೆ ಈ ತಂಡಗಳು ದೀಪಧಾರಿಗಳಾಗಿ ದಾರಿಯ ಊರುಗಳಿಗೂ ಹೋಗಿ ಬರುತ್ತಾರೆ. ಹೀಗೆ ನೆರೆ ಹೊರೆ ಊರುಗಳಿಗೆ ಹೋಗುವಾಗ ದಾರಿಯಲ್ಲಿ ರಾತ್ರಿಯ ವೇಳೆ ದೀಪ್ ದೀಪೊಳ್ಗಿ ಎಂದು ಕೂಗುತ್ತ ಸಾಗುತ್ತಾರೆ. ಹೀಗೆ ಮೂರು ದಿನ ನಡೆಯುತ್ತದೆ. ಈ ದೀಪಾವಳಿಯಲ್ಲಿ ಜ್ಯೋತಿ ನಂದಬಾರದೆಂದೂ, ನಂದಿದರೆ ನಾಡಿಗೆ ಕೇಡೆಂದೂ ನಂಬಿಕೆಯಿದೆ.

ಉತ್ತರ ಕರ್ನಾಟಕದ ಅದರಲ್ಲೂ ಬಿಜಾಪುರ, ಧಾರವಾಡ, ಬೆಳಗಾವಿ ಮತ್ತು ಗುಲಬರ್ಗಾ ಪ್ರದೇಶಗಳಲ್ಲಿ ಈ ದೀಪವನ್ನು ಎತ್ತು-ದನಕರುಗಳಿಗೆ ಹಾಡುಗಳನ್ನು ಹೇಳುತ್ತ ಬೆಳಗುವುದು ರೂಢಿಯಲ್ಲಿದೆ.[೩] ಮನೆಯವರು ದೀಪಗಳಿಗೆ ಎಣ್ಣೆ ಸುರಿಯುತ್ತಾರೆ.

**ನಂಬಿಕೆ :** ದೀಪ, ಪಂಜು ಏನೇ ಇರಲಿ, ಅದೊಂದು ಬೆಳಕು, ಜ್ಞಾನದ ಸಂಕೇತ. ಜನರು ತಮ್ಮ ಅಜ್ಞಾನದ, ಅಂಧಕಾರದ ಅರಿವನ್ನು ಮೂಡಿಸುವಲ್ಲಿ ಒಂದು ಸಂಪ್ರದಾಯವಾಗಿ ಅದು ರೂಢಿಗೆ ಬಂದಿರಬೇಕು. ದನಗಳಿಗೆ ರೋಗ ರುಜಿನಗಳು ಬರದಿರಲೆಂದೂ, ಬಂದ ರೋಗಗಳು ತೊಲಗುತ್ತವೆಯೆಂದೂ ಅವರು ನಂಬಿರುವರು. ಈ ನಂಬಿಕೆಯ ಹಿನ್ನೆಲೆಯಲ್ಲಿ ಇದನ್ನು ಆಚರಿಸುವರು ಎಂತಲೂ ಹೇಳಲಾಗುತ್ತದೆ.

**೧.೩ ಕಾಗದದ ಕೆಸರಿನ ಶಿಲ್ಪಗಳು :** ಬೇಡವಾದ ಕಾಗದವನ್ನು ಚಿಂದಿ ಮಾಡುವುದು, ಒಲೆಗೆ ಹಾಕುವುದು, ಮುದುರಿ ಬಿಸಾಡುವುದು ಸಾಮಾನ್ಯ ಪ್ರವೃತ್ತಿ. ಆದರೆ ಆ ಚಿಂದಿಯೇ ಕಲಾತ್ಮಕ ಶಿಲ್ಪವೂ ಆಗಿ ರೂಪ ತಳೆಯುವುದು ಕುತೂಹಲದ ಸಂಗತಿಯಾಗಿದೆ.

ಪೌರಾಣಿಕ ನಾಟಕಗಳಲ್ಲಿ ಪಾತ್ರಧಾರಿಗಳಿಗೆ ತೊಡಿಸುವ ವೇಷಭೂಷಣಗಳಿಗೆ ಮತ್ತು ಪ್ರದರ್ಶನದಲ್ಲಿ ಇಡುವ ಹಲವು ಕಲಾತ್ಮಕ ಆಕೃತಿಗಳನ್ನು ಅಲ್ಲದೆ, ಅನೇಕ ಬಗೆಯ ಪ್ರಾಣಿ, ಪಕ್ಷಿ ಶಿಲ್ಪಗಳು, ಮಕ್ಕಳಾಟಿಕೆಗಳು ಮುಂತಾದವು ಕಾಗದದಿಂದ ರೂಪ ತಳೆಯುವುದು ಒಂದು ಕಲೆಯಾಗಿ ಬೆಳೆದಿದೆ. ಸಿಂಹಾಸನ, ತೊಟ್ಟಿಲು, ಭವತಾ ಣಿ, ಕಾಳಿಕಾ ಮಾತೆ, ಹನುಮಂತ, ರಾವಣ, ತಿರುಪತಿ ವೆಂಕಟರಮಣ, ನಂದಿ, ಕುದುರೆ, ಆಡು ಮುಂತಾದ ಮನುಷ್ಯ ಹಾಗೂ ಪ್ರಾಣಿ ಶಿಲ್ಪಗಳು, ಅಲ್ಲದೆ ವಿವೇಕಾನಂದ, ಶಾರದೆ

---

೩. ಜನಪದ ಸಾಹಿತ್ಯ ದರ್ಶನ : ಜಾನಪದ ಹಬ್ಬಗಳು, ಭಾಗ -೧೦, ಪುಟ -೧೩೫

[illegible]

ಮುಂತಾದವು ಈ ಕಾಗದದಲ್ಲಿ ರಚನೆಯಾಗಿವೆ.

**ರಚನೆ :** ಕಾಗದ ಶಿಲ್ಪಗಳನ್ನು ರಚಿಸಲು ಅನುಸರಿಸುವ ವಿಧಾನಗಳು ಪ್ರಮುಖವಾಗಿ ಎರಡು. ಜೇಡಿ ಮಣ್ಣಿನಲ್ಲಿ ಅವಶ್ಯವೆನಿಸುವ ಆಕೃತಿಗಳನ್ನು ಮೊದಲು ಮಾಡಿಕೊಂಡು ಅದರ ಮೇಲೆ ಒಂದರ ಮೇಲೊಂದು ತುಂಡು ಕಾಗದಗಳನ್ನು ಹಿಟ್ಟಿನ ಸರಿಯಿಂದ ಅಂಟಿಸುವುದು ಒಂದು ಕ್ರಮವಾದರೆ, ಸಿಮೆಂಟಿನಲ್ಲಿ ಆಕೃತಿಯ ಅಚ್ಚು ಮಾಡಿಕೊಂಡು ಅದರ ಮೇಲೆ ತುಂಡು ಕಾಗದವನ್ನು ಲೇಪನ ಮಾಡುವುದು ಮತ್ತೊಂದು ಕ್ರಮ. ನಂತರ ಅಂಟು ಒಣಗಿದ ಮೇಲೆ ಕಾಗದ ಬೇರ್ಪಡಿಸಿದಾಗ ತಕ್ಕುದಾದ ಆಕಾರ ಸಿಗುತ್ತದೆ. ಸ್ವಲ್ಪ ಮಟ್ಟಿಗೆ ವ್ಯತ್ಯಾಸವೇನಾದರೂ ಕಂಡು ಬಂದಲ್ಲಿ ಕಾಗದವನ್ನು ಮೇಣದಿಂದ ಸರಿಪಡಿಸಿಕೊಳ್ಳಬಹುದು. ( ಇದನ್ನು ಪೇಪರ್ ಫಲ್ಪ ಎನ್ನುವರು )[೪] ನಂತರ ಅದಕ್ಕೆ ಒಪ್ಪುವ ಬಣ್ಣವನ್ನು ಹಾಕಲಾಗುವುದು.

ಹೀಗೆ ಬಳಸಿದ ಕಾಗದಗಳನ್ನೇ ಪುನಃ ಬಳಸಿ ಕಲಾತ್ಮಕವಾದ ಶಿಲ್ಪಗಳನ್ನು, ವಸ್ತುಗಳನ್ನು ತಯಾರಿಸುವ ಕಲೆ ಕರ್ನಾಟಕಾದ್ಯಂತ ಅನೇಕ ಕಡೆಗಳಲ್ಲಿ ಕಾಣಬಹುದು.

**ದುಲಹನಕಿ ಡೋಲಿ :** ( ಇದಕ್ಕೆ ಮಿಯಾನ ಎಂದು ಹೇಳುವರು ) ಮುಸ್ಲಿಂರು, ರಜಪೂತರು, ಮತ್ತಿತರ ಸಂಪ್ರದಾಯಗಳಲ್ಲಿ ಈ ಡೋಲಿಗಳು ಕಂಡು ಬರುತ್ತವೆ. ಸಾಮಾನ್ಯವಾಗಿ ಬಿದಿರನ್ನು ಸೀಳಿ, ಕಡ್ಡಿಯನ್ನು ಮಾಡಿಕೊಂಡು, ತಮಗೆ ಬೇಕಾದಂತೆ ಬಾಗಿಸಿ, ದಾರದಿಂದ ಕಟ್ಟಿ ಆಕಾರಗಳನ್ನು ಮಾಡಿಕೊಳ್ಳಲಾಗುವುದು. ನಂತರ ಅವುಗಳಿಗೆ ತರ ತರಹದ ಬಣ್ಣದ ಆರದರ್ಶಕ ಹಾಳೆಗಳನ್ನು ಮೆತ್ತಿ ಅಲಂಕಾರಗೊಳಿಸುತ್ತಾರೆ. ಇದೇ ರೀತಿ, ದೀಪದ ಬುಟ್ಟಿ ಮುಂತಾದ ಶಿಲ್ಪಗಳನ್ನು ಹೆಸರಿಸಬಹುದು. ಹಿಂದೆ ರಾಜ ಮಹಾರಾಜರ ಕಾಲದಲ್ಲಿ ರಾಣಿಯರನ್ನು ಕುಳ್ಳಿರಿಸಿ ಹೊತ್ತುಕೊಂಡು ಹೋಗಲು ಬಳಸುತ್ತಿದ್ದರು. ಅದರ ಸಂಕೇತವಾಗಿ ಹಿಂದು, ಮುಸ್ಲಿಂರು ಈಗಲೂ ಈ ಡೋಲಿಯ ಆಕಾರ ರಚಿಸಿ ಆಚರಿಸುತ್ತಾರೆ. ಈಗ ಮದುವೆ ಸಮಾರಂಭಗಳಲ್ಲಿ ಇದನ್ನು ಕೊಡುವ ಪದ್ಧತಿ ಕೆಲವು ಕಡೆ ಇದೆ. ಇಂತಹವುಗಳು ಬೀದರ ಜಿಲ್ಲೆಯಲ್ಲಿ ಆರ್ಯಹೋಮ ಕ್ಷತ್ರಿಯ ಜನಾಂಗದಲ್ಲಿ ತಲೆ ತಲಾಂತರದಿಂದ ರಚಿಸುತ್ತ ಬರುತ್ತಿದ್ದಾರೆ.

ದುಡಿಮೆಯಿಂದ ಬೇಸತ್ತ ಮನಸ್ಸಿಗೆ ವಿಶ್ರಾಂತಿ ದೊರಕಿಸಿ, ಉಲ್ಲಸಿತಗೊಳಿಸಲು ಜನಪದರು ತಮ್ಮದೇ ಆದ ಅನೇಕ ರೀತಿಯ ಮನರಂಜನೆಯ ಸಾಧನ-ಸಲಕರಣೆಗಳನ್ನು ಬೆಳಸಿಕೊಂಡು ಬಂದಿರುವರು. ವ್ಯಯಕ್ತಿಕವಾಗಿ ತನಗಷ್ಟೇ ಅಲ್ಲದೆ, ಸಮಷ್ಟಿಗತವಾಗಿ ಇತರರಿಗೂ ಆಕರ್ಷಕವಾಗಿ ಕಾಣಲೆಂಬ ಸಧಿಚ್ಛೆಯ ನೆರಳಿನಲ್ಲಿ ಮನರಂಜನ ಮೂಲದ ಜನಪದ ಶಿಲ್ಪಕಲೆಯು ಸಂಕೀರ್ಣ ಮಾಧ್ಯಮದಲ್ಲೂ ಬೆಳೆದು ಬಂದುದನ್ನು ಗುರುತಿಸಬಹುದಾಗಿದೆ. ಹಲವು ಶತಮಾನಗಳ ಕಾಲದಿಂದಲೂ ಮನರಂಜನೆಯ ಸಲುವಾಗಿ ಅನೇಕ ಪ್ರದರ್ಶನ ಕಲೆಗಳು ಮತ್ತು ಆಟಗಳು ಹುಟ್ಟಿ ಅಸ್ತಿತ್ವದಲ್ಲಿವೆ. ಈ

೪. ಪ್ರಜಾವಾಣಿ ದಿನಪತ್ರಿಕೆ : ತೈಲೂರು ವೆಂಕಟಕೃಷ್ಣ, ನವೆಂಬರ್ -೧೯೯೩, ಪುಟ -೩

[illegible]

[illegible]

[illegible]

[illegible]

[illegible]

[illegible]

[illegible]



ದೃಷ್ಟಿ ಬೊಂಬೆ ಶಿಲ್ಪ



ಆಣೇ - ಪೀಣೆ ಶಿಲ್ಪ ( ಬನ್ನೆಟ್ಟಿ )



ದುಲಹನಕಿ ಡೋಲಿ ಶಿಲ್ಪಗಳು ( ಬೀದರ )

ಆಟಗಳಲ್ಲಿ ಅನೇಕ ಬಗೆಯ ಶಿಲ್ಪಗಳು ಕೇಂದ್ರವೆಂಬಂತಿದ್ದು ಆಕರ್ಷಕವಾಗಿರುತ್ತವೆ. ಅವುಗಳನ್ನು ೨.೧ ಪ್ರದರ್ಶನ ಕಲೆಗಳಲ್ಲಿ ಬಳಸಲ್ಪಡುವ ಶಿಲ್ಪಗಳು, ೨.೨ ಆಟಗಳಲ್ಲಿ ಬಳಸಲ್ಪಡುವ ಶಿಲ್ಪಗಳು ಎಂದು ವಿಂಗಡಿಸಿ ಅವುಗಳನ್ನು ಮತ್ತೆ ಉಪ ವಿಂಗಡಣೆ ಮಾಡಿಕೊಂಡು ವಿವೇಚಿಸಬಹುದು.

**೨.೧ ಪ್ರದರ್ಶನ ಕಲೆಗಳಲ್ಲಿ ಬಳಸಲ್ಪಡುವ ಶಿಲ್ಪಗಳು :** ಜನಪದರು ಮನೋರಂಜನೆಗಾಗಿ ಹಲವು ಪ್ರದರ್ಶನಾತ್ಮಕ ಕಲೆಗಳನ್ನು ರೂಢಿಸಿಕೊಂಡು ಬಂದಿದ್ದಾರೆ. ಈ ಕಲೆಗಳನ್ನು ನೂರಾರು ಜನರು ಏಕ ಕಾಲಕ್ಕೆ ಇವುಗಳನ್ನು ವೀಕ್ಷಿಸಬಹುದು. ಇಂಥ ಕೆಲವು ಪ್ರದರ್ಶನ ಕಲೆಗಳಲ್ಲಿ ಶಿಲ್ಪಗಳೇ ಮುಖ್ಯ ಕೇಂದ್ರಗಳಾಗಿರುತ್ತವೆ. ಅವು ಅಪ್ಪಟ ಜನಪದ ಶೈಲಿಯಿಂದ ಕೂಡಿದ್ದು ಆಕರ್ಷಣೀಯವಾಗಿರುತ್ತವೆ. ಈ ಶಿಲ್ಪಗಳು ಐತಿಹಾಸಿಕ, ಕಾಲ್ಪನಿಕ, ಧಾರ್ಮಿಕ, ಪೌರಾಣಿಕ ಇಲ್ಲವೆ ಸಾಮಾಜಿಕ ವ್ಯಕ್ತಿಗಳ ಪಾತ್ರಗಳಾಗಿ ನಿರ್ಮಿಸಲ್ಪಟ್ಟಿರುತ್ತವೆ. ಇಂಥವುಗಳಲ್ಲಿ ತೊಗಲುಗೊಂಬೆ [೫] ಶಿಲ್ಪಗಳು, ಗಾರುಡಿ ಗೊಂಬೆ ಶಿಲ್ಪಗಳಂಥವು ಮುಖ್ಯವಾಗುತ್ತವೆ. ಇವು ಒಂದು ಬಗೆಯಾದರೆ, ಇನ್ನೂ ಕೆಲವು ಪ್ರದರ್ಶನ ಕಲೆಗಳಲ್ಲಿ ಮನುಷ್ಯರೇ ಪಾತ್ರ ನಿರ್ವಹಿಸುವರು. ಇಲ್ಲಿ ಆ ಪಾತ್ರಗಳು ತೊಡುವ ವೇಷ ಭೂಷಣ, ಸಾಧನ ಸಲಕರಣೆಗಳಲ್ಲಿ ಶಿಲ್ಪಗಳು ರೂಪಿಸಲ್ಪಟ್ಟಿರುತ್ತವೆ. ಅವುಗಳಲ್ಲಿ ಯಕ್ಷಗಾನ, ದೊಡ್ಡಾಟ, ಸಣ್ಣಾಟ ಮುಂತಾದ ಪ್ರದರ್ಶನ ಶಿಲ್ಪಗಳು ಮುಖ್ಯವಾಗುತ್ತವೆ. ಇಲ್ಲಿ ಮುಖ್ಯವಾಗಿ ೧. ತೊಗಲು ಗೊಂಬೆ ಶಿಲ್ಪಗಳು, ೨. ಯಕ್ಷಗಾನ ಮೇಳಗಳಲ್ಲಿನ ಶಿಲ್ಪಗಳು, ೩. ಗಾರುಡಿ ಗೊಂಬೆ ಶಿಲ್ಪಗಳನ್ನು ನೋಡಬಹುದು.

## ೧. ತೊಗಲು ಗೊಂಬೆ ಶಿಲ್ಪಗಳು

ಸಾಮಾನ್ಯವಾಗಿ ಪ್ರಾಣಿಗಳ ಚರ್ಮವನ್ನು ಹಾಳೆಯಂತೆ ಮಾಡಿಕೊಂಡು ಮನುಷ್ಯ, ಪ್ರಾಣಿ, ಪಕ್ಷಿಗಳ ನೆರಳಿನಂತೆ ಕಾಣುವ ಆಕಾರಗಳನ್ನು ಚಪ್ಪಟೆಯಾಗಿರುವಂತೆ ಕತ್ತರಿಸಿಕೊಂಡು ಅವುಗಳ ಮೇಲೆ ವಿವಿಧ ವರ್ಣಗಳಿಂದ ಆಕಾರಗಳ ಚಿತ್ರಗಳನ್ನು ಬರೆದು ಪ್ರದರ್ಶನಕ್ಕೆ ಬಳಸುವ ಕೃತಿಗಳನ್ನು ತೊಗಲು ಗೊಂಬೆಗಳು ( Lether Popets ) ಎಂದೂ, ಅವುಗಳನ್ನು ಬಳಸಿಕೊಂಡು ಪ್ರದರ್ಶಿಸುವ ಆಟಕ್ಕೆ ತೊಗಲು ಗೊಂಬೆಯಾಟವೆಂದೂ ಕರೆಯುತ್ತಾರೆ. ಆಟವಾಡಿಸುವವರು ತೆರೆಯ ಮರೆಯಲ್ಲೇ ಉಳಿದು ಪ್ರದರ್ಶನ ನೀಡುವುದರಿಂದ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಸೂತ್ರದ ಗೊಂಬೆಯಾಟಕ್ಕೂ ಮತ್ತು ತೊಗಲು ಗೊಂಬೆಯಾಟಕ್ಕೂ ಅನೇಕ ಸಾಮ್ಯತೆಗಳಿರುವುದನ್ನು ಕಾಣುತ್ತೇವೆ. ಆದರೆ, ಗೊಂಬೆ ಎನ್ನುವ ಶಬ್ಧವು ಶಿಲ್ಪ [೬] ಎಂಬುದಕ್ಕೆ ಇರಬೇಕಾದ ಸಮಾನ ಇಲ್ಲವೆ ಹತ್ತಿರವಾಗಿದೆ. ವಾಸ್ತವವಾಗಿ ತೊಗಲು ಗೊಂಬೆ ಶಿಲ್ಪವೆಂದು ಹೇಳಬೇಕಾದುದಕ್ಕೆ ಇರಬೇಕಾದ ತ್ರಿಮಾನ ಪ್ರಮಾಣದ ಯಾವ ಆಯಾಮವನ್ನೂ ಹೊಂದಿಲ್ಲ. ಬದಲಾಗಿ ಅದು ಸಂಪೂರ್ಣವಾಗಿ ಚಪ್ಪಟೆಯಾದ ಅವಕಾಶದ ಮೇಲೆ ನಿರ್ಮಾಣಗೊಂಡ ಚಿತ್ರವೇ

---

೫. ವಿವರಗಳಿಗೆ ನೋಡಿ : ಶ್ರೀ ಎಂ.ಎಸ್. ನಂಜುಂಡರಾವ್ : ತೊಗಲು ಗೊಂಬೆ

೬. ಕೆತ್ತುವಿಕೆ, ಮೆತ್ತುವಿಕೆ ಇಲ್ಲವೆ ಒತ್ತುವಿಕೆ ಪದ್ಧತಿಯಿಂದ ರೂಪಿತವಾದ ತ್ರಿಮಾನಗಳಿಂದ ಕೂಡಿದ್ದು

ಆಗಿರುತ್ತದೆ. ಈ ಅರ್ಥದಲ್ಲಿ ತೊಗಲು ಗೊಂಬೆ ತೊಗಲು ಚಿತ್ರವೆಂದು ಹೇಳುವುದು ಹೆಚ್ಚು ಸೂಕ್ತವೆನಿಸುತ್ತದೆ.

**ರಚನೆ :** ತೊಗಲು ಗೊಂಬೆಗಳನ್ನು ಚಿಗರೆ, ಜಿಂಕೆ, ಆಡು[೭] ಇಲ್ಲವೆ, ಎಳೆ ಎಮ್ಮೆ ಗಳ ಚರ್ಮದಿಂದ ತಯಾರಿಸಿರುತ್ತಾರೆ. ಈ ಪ್ರಾಣಿಗಳ ಚರ್ಮವನ್ನು ಕೆಲವು ಗಿಡ ಮೂಲಿಕೆಗಳ ಬೇರುಗಳೊಂದಿಗೆ ನೀರಿನಲ್ಲಿ ನೆನೆಸಿ, ಹದಗೊಳಿಸಿ ತಿಕ್ಕಿ ಚರ್ಮದ ಮೇಲಿನ ರೋಮಗಳನ್ನು ತಗೆದು ಪಾರದರ್ಶಕವಾಗಿಸಿಕೊಳ್ಳಲಾಗುತ್ತದೆ.[೮] ನಂತರ ತಮಗೆ ಬೇಕಾದ ಚಿತ್ರದ ಆಕಾರಗಳನ್ನು ಕತ್ತರಿಸಿಕೊಳ್ಳಲಾಗುತ್ತದೆ. ಒಂದು ವಸ್ತು ಇಲ್ಲವೆ ಪ್ರಾಣಿಗಳ ನೆರಳು, ಗೋಡೆ ಇಲ್ಲವೆ ನೆಲದ ಮೇಲೆ ಆ ಆಕಾರದ ಎತ್ತರ ಮತ್ತು ಅಗಲಕ್ಕೆ ತಕ್ಕಷ್ಟು ಪ್ರಮಾಣದಲ್ಲಿ ಹೇಗೆ ಗೋಚರಿಸುತ್ತದೋ ಹಾಗೆ ಕತ್ತರಿಸಿಕೊಂಡು ಕಬ್ಬಿಣದ ಮೊಳೆಯ ತುದಿಯಿಂದ ರೇಖೆಗಳನ್ನು ಗುರುತಿಸಿಕೊಂಡು, ಆಭರಣಗಳನ್ನು ತೋರಿಸುವ ಕಡೆಗಳಲ್ಲಿ ಕೈಮೊಳೆಯಿಂದ ರಂಧ್ರಗಳನ್ನು ಮಾಡಲಾಗುತ್ತದೆ. ನಂತರ ಉಳಿದ ಭಾಗಕ್ಕೆ ಕೆಂಪು, ಹಸಿರು, ಹಳದಿ, ಕಪ್ಪು, ನೀಲಿ ಬಣ್ಣವನ್ನು ಬಳೆದು ಮನುಷ್ಯ, ಪ್ರಾಣಿ, ಪಕ್ಷಿ, ವಸ್ತು ರೂಪಗಳನ್ನು ಚಿತ್ರಿಸಿ ಮೂರ್ತರೂಪ ಕೊಟ್ಟು ಆಕರ್ಷಕವಾಗಿ ಕಾಣುವಂತೆ ಮಾಡುತ್ತಾರೆ.[೯] ಒಂದೊಂದು ಗೊಂಬೆ ಸುಮಾರು ಎರಡು ಅಡಿಯಷ್ಟು ಉದ್ದ ಮತ್ತು ಅಗಲ ಹೊಂದಿರುತ್ತವೆ. ಆಳೆತ್ತರದ ಗೊಂಬೆಗಳನ್ನೂ ನಿರ್ಮಿಸುವದಿದೆ. ಗೊಂಬೆಯ ಮುಖ್ಯ ಶರೀರದುದ್ದಗಲಕ್ಕೂ ಆಧಾರವಾಗಿ ಬಿದಿರಿನ ಕಡ್ಡಿಗಳಿರುತ್ತವೆ. ಕೈಕಾಲುಗಳು ಪ್ರತ್ಯೇಕವಾಗಿ ಅಲುಗಾಡುವಂತೆ ಮುಖ್ಯ ಶರೀರಕ್ಕೂ, ಕೈಕಾಲುಗಳಿಗೂ ದಾರದಿಂದ ಕಟ್ಟಲಾಗಿರುತ್ತದೆ. ಪ್ರದರ್ಶಕನಿಗೆ ಹಿಡಿಯಲು ಅನುವಾಗುವಂತೆ ಗೊಂಬೆಯ ಕೆಳಭಾಗದಲ್ಲಿ ಕಡ್ಡಿ ಹೊರಕ್ಕೆ ಚಾಚಿರುತ್ತದೆ.[೧೦]

ಕೀಚಕನ ವಧೆ, ದ್ರೌಪದಿ ವಸ್ತ್ರಾಪಹರಣ ಮುಂತಾದ ಪೌರಾಣಿಕ ಕಥಾ ಪ್ರಸಂಗಗಳನ್ನು ಆಡುವುದು ಹೆಚ್ಚು. ಈಚೆಗೆ ಗೊಂಬೆಯಾಟದಲ್ಲಿ ಸಾಕಷ್ಟು ಪ್ರಯೋಗಶೀಲತೆ ನಡೆದಿದ್ದು ಬದಲಾವಣೆಗಳಾಗಿವೆ. ಆಧುನಿಕವಾದ ವಸ್ತು, ವಿಷಯ, ಸಂಗತಿಗಳನ್ನು ತೊಗಲು ಗೊಂಬೆಯಾಟದ ಮೂಲಕ ಪ್ರದರ್ಶಿಸಲಾಗುತ್ತಿದೆ. ತೊಗಲು ಗೊಂಬೆಯ ರಚನೆ, ಬಣ್ಣಗಾರಿಕೆಯಲ್ಲಿ ವಿಜಯನಗರ, ಲೇಪಾಕ್ಷಿ, ಅಜಂತಾ ಹಾಗೂ ಮೊಗಲ್ ಶೈಲಿಯ ಪ್ರಭಾವ ಎದ್ದು ಕಾಣುತ್ತದೆ ಎಂದು ಪಿ.ಆರ್. ತಿಪ್ಪೇಸ್ವಾಮಿಯವರು ಹೇಳುತ್ತಾರೆ.[೧೧] ತೊಗಲು ಗೊಂಬೆ ಚಿತ್ರಗಳಿಗೆ ಹಿಂದೆ ಗಿಡಮೂಲಿಕೆಗಳಿಂದ ತಯಾರಿಸಿದ ಬಣ್ಣವನ್ನೇ ಬಳಸುತ್ತಿದ್ದರು. ಈಗ ರಸಾಯನಿಕ ಬಣ್ಣಗಳನ್ನು ಬಳಸುತ್ತಿರುವುದನ್ನು

---

೭. ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಪುರುಷೋತ್ತಮ ಬಿಳಿಮಲೆ(ಸಂ) : ಜಾನಪದ ಕೈಪಿಡಿ, ಪುಟ -೧೦೦

೮. ..... ಅದೇ ....., ಪಟ -೧೦೧

೯. ಪಿ.ಆರ್. ತಿಪ್ಪೇಸ್ವಾಮಿ : ಸರ್ವಾಧ್ಯಕ್ಷರು, ಇಪ್ಪತ್ತೈದನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ, ಕ.ವಿ.ವಿ. ಧಾರವಾಡ, ಪುಟ -೧೫

೧೦. ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಪುರುಷೋತ್ತಮ ಬಿಳಿಮಲೆ(ಸಂ) : ಜಾನಪದ ಕೈಪಿಡಿ, ಪುಟ -೧೦೧

೧೧. ಪಿ.ಆರ್. ತಿಪ್ಪೇಸ್ವಾಮಿ : ಸರ್ವಾಧ್ಯಕ್ಷರು, ಇಪ್ಪೈತದನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ, ಕ.ವಿ.ವಿ. ಧಾರವಾಡ, ಪುಟ -೧೫

ಕಾಣಬಹುದು. ಈ ತೊಗಲು ಗೊಂಬೆ ಪ್ರದರ್ಶನ ನೀಡುವ ಸಾಂಪ್ರದಾಯಿಕ ಜನಾಂಗದವರನ್ನು ಕಿಳ್ಳೇಕ್ಯಾಕರೆಂದು ಕರೆಯುತ್ತಾರೆ.[೧೨] ಉತ್ತರ ಕರ್ನಾಟಕದಲ್ಲಿ ಇವರನ್ನು ಕಟಬರು ಎಂದು ಕರೆಯುತ್ತಾರೆ. ಮಾನ್ವಿ ತಾಲೂಕಿನ ಕುರಡಿ ಕೃಷ್ಣಪ್ಪ, ಕೊಪ್ಪಳ ಜಿಲ್ಲೆಯ ಮೋರನ ಹಳ್ಳಿಯ ದೊಡ್ಡ ಬಾಳಪ್ಪ ಇವರದು ತೊಗಲು ಗೊಂಬೆಯಾಟದ ಪ್ರದರ್ಶನಗಳಿಗೆ ಎತ್ತಿದ ಕೈ. ರಾಯಚೂರು ತಾಲೂಕಿನಲ್ಲಿ ಬರುವ ಗುಂಜಳ್ಳಿಯಲ್ಲೂ ಗೋಪ್ಪೇರ ಜನ ಈ ಆಟಗಳನ್ನು ಆಡುವರು. ಇವರು ತಾವೇ ಸ್ವತಃ ತೊಗಲು ಗೊಂಬೆ ಶಿಲ್ಪಗಳನ್ನು ರಚಿಸಿ, ಬಣ್ಣದಿಂದ ಚಿತ್ರಗಳನ್ನು ಬರೆದು ಆಟವನ್ನು ಪ್ರದರ್ಶಿಸುವರು.[೧೩] ಇವರನ್ನು ಕಿಳ್ಳೇಕ್ಯಾತರೆಂದು ಕರೆಯುವರು. ಮಹಾರಾಷ್ಟ್ರದಲ್ಲಿ ಕಟಪುತಲಿ, ತಮಿಳುನಾಡಿನಲ್ಲಿ ಸೂತ್ರ ಬೊಮ್ಮೈ, ಮಲಯಾಳಂದಲ್ಲಿ ಪಾವೈಕೊತ್ತು, ಆಂಧ್ರದಲ್ಲಿ ತೋಲು ಬೊಮ್ಮಲಾಟ, ಕೇರಳದಲ್ಲಿ ತೋಲುಪವಕೂತು, ಓರಿಸ್ಸಾದಲ್ಲಿ ರಾವಣಛಾಯಾ ಎಂದು ಕರೆಯುವರು. ಚೀನಾ, ಭಾರತ, ಥೈಲ್ಯಾಂಡ, ಮಲೇಷಿಯಾ, ಗ್ರೀಸ, ಪರ್ಷಿಯಾ, ಟರ್ಕಿ, ಇಟಲಿ. ಓಮನ್, ಫ್ರಾನ್ಸ ಮುಂತಾದ ದೇಶಗಳಲ್ಲಿ ತೊಗಲು ಗೊಂಬೆಯಾಟ ಕಂಡು ಬರುತ್ತದೆ.[೧೪]

## ೨. ಯಕ್ಷಗಾನ ವೇಷಗಳಲ್ಲಿನ ಶಿಲ್ಪಗಳು

ಜನಪದ ಪ್ರದರ್ಶನ ಕಲೆಗಳಾದ ಮೂಡಲಪಾಯ, ಯಕ್ಷಗಾನ, ಬಯಲಾಟಗಳಲ್ಲಿ ಕಿರೀಟ, ಭುಜಕೀರ್ತಿ, ಎದೆಹಾರ ಮತ್ತು ವೀರಗಾಸೆಗಳು ಮುಖ್ಯ ಒಡವೆಗಳು. ಇವೆಲ್ಲ ಮರದ ಸಾಧನಗಳಾಗಿರುತ್ತವೆ.

**ರಚನೆ :** ಈ ಪ್ರದರ್ಶನ ಕಲೆಗಳಲ್ಲಿ ಪಾತ್ರಧಾರಿಗಳ ವೇಷಗಳಿಗೆ ತೊಡಿಸಲಾಗುವ ವಿಧ ವಿಧದ ಸಾಧನಗಳೆಲ್ಲ ಹಗುರಾದ ಮರಗಳಲ್ಲಿ ಮಾಡಿದವುಗಳಾಗಿರುತ್ತವೆ. ಒಡವೆಗಳ ಮೇಲೆ ಗಾಜನ್ನು ಕೂಡ್ರಿಸಿ ಜೀರಿಂಬೆ ರೆಕ್ಕೆಗಳನ್ನು ಅಂಟಿಸಿ, ಬಣ್ಣದ ಕಾಗದಗಳನ್ನು ಅಂಟಿಸಿ ಸಿದ್ಧಗೊಳಿಸಲಾಗಿರುತ್ತದೆ. ಚಿನ್ನದ ಆಭರಣಗಳಂತೆ ದೀಪದ ಬೆಳಕಿನಲ್ಲಿ ಹೊಳಪನ್ನು ನೀಡುತ್ತವೆ.

ಯಕ್ಷಗಾನದ ಒಡವೆಗಳ ಬಳಕೆ ವಿಶೇಷವಾಗಿ ಘೋರ ಮತ್ತು ವೀರ ಪಾತ್ರಗಳಿಗೆ ಮಾತ್ರ. ಇವೆಲ್ಲ ಒಂದು ಕಾಲಕ್ಕೆ ಯುದ್ಧದ ಪೋಷಾಕುಗಳಾಗಿದ್ದರೂ ಆಶ್ಚರ್ಯವಿಲ್ಲ. ಲೋಹದ ಕಿರೀಟ, ಶಿರಸ್ತ್ರಾಣ, ಭುಜದ ರಕ್ಷಣೆಗೆ ಭುಜಕೀರ್ತಿ, ಎದೆಯ ರಕ್ಷಣೆಗೆ ಎದೆಹಾರ, ಮರ್ಮಾಂಗಗಳ ರಕ್ಷಣೆಗೆ ಮರದ ಕಿರು ವೀರಗಾಸೆ, ಸೊಂಟದ ರಕ್ಷಣೆಗೆ ಸೊಂಟಪಟ್ಟಿ ಹೀಗೆ ಒಡವೆಗಳು ಅಲಂಕಾರ ಸಾಧನಗಳಾಗಿಯೂ, ದೇಹ ರಕ್ಷಣಾ ಸಾಧನಗಳಾಗಿಯೂ ರೂಪುಗೊಂಡಂತೆ ತೋರುತ್ತದೆ. ಸಾಧಾರಣ ಪಾತ್ರಗಳಿಗೆ ವಿಶೇಷ

---

೧೨. ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಪುರುಷೋತ್ತಮ ಬಿಳಿಮಲೆ(ಸಂ) : ಜಾನಪದ ಕೈಪಿಡಿ, ಪುಟ -೧೦೧

೧೩. ತಿರುಳ್ಗನ್ನಡ - ಸವಿಸಂಚಿಕೆ : ಎಚ್.ಎನ್. ಪಾಟೀಲ, ಅಲ್ಲಮಪ್ರಭು ಬೆಟ್ಟದೂರು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಕೊಪ್ಪಳ, ಪುಟ -೩೧

೧೪. ಕಲಾ ಕೋಶ (ಸಂ) : ಪಿ.ಆರ್. ತಿಪ್ಪೇಸ್ವಾಮಿ, ಪುಟ -೧೭೭

[illegible]

[illegible]

[illegible]

[illegible]

[illegible]



ಯಕ್ಷಗಾನ ವೇಷಗಳಲ್ಲಿನ ಶಿಲ್ಪಗಳು (ಕ. ವಿ.ವಿ. ಹಂಪಿ, ಜಾನಪದ ವಸ್ತುಸಂಗ್ರಹಾಲಯ)



ಒಡವೆಗಳಿರುವುದಿಲ್ಲ. ರಾಕ್ಷಸಪಾತ್ರಗಳಿಗೆ ಬಳಸುವ ಮುಖವಾಡಗಳೂ ಉಂಟು. ಕೃತಕ ಮೂಗು, ಕೋರೆ ದಂಡೆ, ಮೀಸೆ, ಲೋಹದ ಕಣ್ಣುಗಳಿಂದ ಕೂಡಿದ ಮುಖವಾಡವನ್ನು ದೈತ್ಯ ಪಾತ್ರಗಳು ಧರಿಸಿಕೊಂಡಿರುತ್ತವೆ. ಈ ಎಲ್ಲ ಶಿಲ್ಪಗಳು ಒಂದು ರೀತಿಯಲ್ಲಿ ಸಮ್ಮಿಶ್ರ ಮಾಧ್ಯಮದ ಶಿಲ್ಪಗಳಾಗಿರುತ್ತವೆ. ಇವು ಹೆಚ್ಚಾಗಿ ಕರಕುಶಲತೆಯನ್ನು ಅವಲಂಭಿಸಿ ಸೃಷ್ಟಿಯಾಗಿರುತ್ತವೆ.

## ೩. ಗಾರುಡಿ ಗೊಂಬೆ ಶಿಲ್ಪಗಳು

ಜನಪದ ಕುಣಿತವೊಂದರಲ್ಲಿ ಸೃಷ್ಟಿಯಾಗುವ ಒಂದು ಬಗೆಯ ಗೊಂಬೆಗಳಿಗೆ ಗಾರುಡಿ ಗೊಂಬೆಗಳೆಂದು ಹೇಳುತ್ತಾರೆ. ಈ ಗೊಂಬೆಗಳ ಕುಣಿತದ ಆಟಕ್ಕೆ ಗಾರುಡಿಗನ ಕುಣಿತ ಎಂದು ಕರೆಯುತ್ತಾರೆ. ಕೋಲಾರ ಜಿಲ್ಲೆಯ ಕಡೆ ಮಾನು ಬೊಂಬಲು ಎಂದು, ಮಲೆನಾಡಿನ ಕಡೆ ತಟ್ಟೆರಾಯನ ಕುಣಿತ ಎಂದೂ ಕರೆಯುವರು. ಹಬ್ಬ ಹರಿದಿನಗಳಲ್ಲಿ ವಿಶೇಷವಾಗಿ ಸಂಕ್ರಾಂತಿಯ ಸಂದರ್ಭದಲ್ಲಿ ದೇವರ ಜಾತ್ರೆ, ಉತ್ಸವಗಳಲ್ಲಿ ಹಳ್ಳಿಯ ಬಯಲು ಪ್ರದೇಶಗಳಲ್ಲಿ ಈ ಗೊಂಬೆಗಳ ಪ್ರದರ್ಶನ ನಡೆಯುತ್ತದೆ. ಉತ್ತರ ಕರ್ನಾಟಕದಲ್ಲಿ ಅಪರೂಪವಾಗಿ ಕಂಡು ಬರುವ ಈ ಕುಣಿತ ದಕ್ಷಿಣ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಹೆಚ್ಚು ಪ್ರಚಲಿತದಲ್ಲಿದೆ. ಕೋಲಾರ ಜಿಲ್ಲೆಯಲ್ಲಂತೂ ಬಹುತೇಕ ಹಳ್ಳಿಗಳಲ್ಲಿ ಅನೇಕ ವರ್ಷಗಳಿಂದ ಈ ಕಲೆ ಅಸ್ತಿತ್ವದಲ್ಲಿದೆ.[೧೫] ಈ ಕುಣಿತದಲ್ಲಿ ಎರಡು ಗೊಂಬೆ ಶಿಲ್ಪಗಳಿರುತ್ತವೆ. ಅದರಲ್ಲಿ ಒಂದು ಗಂಡು ಶಿಲ್ಪವಿದ್ದರೆ, ಇನ್ನೊಂದು ಹೆಣ್ಣು ಶಿಲ್ಪವಾಗಿರುತ್ತದೆ.

**ರಚನೆ :** ಗಾರುಡಿ ಗೊಂಬೆಗಳು ಗಂಡು-ಹೆಣ್ಣು ಜೊತೆಯಾಗಿಯೇ ಸೃಷ್ಟಿಗೊಂಡಿರುತ್ತವೆ. ಈ ಗೊಂಬೆಗಳು ಸುಮಾರು ಹತ್ತರಿಂದ ಹದಿನೈದು ಅಡಿ ಎತ್ತರವಾಗಿರುತ್ತವೆ. ಇವನ್ನು ಬಿದಿರಿನ ತಡಿಕೆಯಿಂದ ಮಾಡಲಾಗಿರುತ್ತದೆ. ಕೈಗಳನ್ನು ಹಾಗೂ ತಲೆಯನ್ನು ಹಗುರವಾದ ಮರದಿಂದ ತಯಾರಿಸಲಾಗಿರುತ್ತದೆ. ಕೈಯಲ್ಲಿ ಪುಂಗಿಯಿರುತ್ತದೆ. ಮುಖಕ್ಕೆ ಕೆಂಪು ಬಣ್ಣ ಬಳೆಯಲಾಗಿದ್ದು ಸೌಮ್ಯಮುಖಭಾವವಿರುತ್ತದೆ.

ಪ್ರದರ್ಶನದ ಸಂದರ್ಭದಲ್ಲಿ ಗೊಂಬೆ ಪ್ರದರ್ಶಕನು ಅಥವಾ ಗೊಂಬೆ ಹೊತ್ತವನು ಸಂಪೂರ್ಣವಾಗಿ ಕಾಣದಂತೆ ಮುಚ್ಚುವ ಹಾಗೆ ಗೊಂಬೆಗೆ ಲಂಗದ ಮಾದರಿಯ ಬಟ್ಟೆಯನ್ನು ಕೆಳಭಾಗಕ್ಕೆ ಸುತ್ತಲಾಗಿರುತ್ತದೆ. ಸಾಮಾನ್ಯವಾಗಿ ಗಂಡು ಗೊಂಬೆ ಹೆಣ್ಣು ಗೊಂಬೆಗಿಂತ ದೊಡ್ಡದಾಗಿರುತ್ತದೆ. ಗಂಡು ಗೊಂಬೆಯ ಕೈಯಲ್ಲಿ ಪುಂಗಿಯಿದ್ದು ಊದುವ ಭಂಗಿಯಲ್ಲಿರುತ್ತದೆ. ಹೆಣ್ಣುಗೊಂಬೆಯ ಕೈಯಲ್ಲಿ ಆರತಿಯ ತಟ್ಟೆಯಿರುತ್ತದೆ. ಚಿಕ್ಕಮಂಗಳೂರು ಕಡೆಯ ತಟ್ಟೆರಾಯನ ಗೊಂಬೆಗಳು, ಮೈಸೂರು ಕಡೆಯ ಗಾರುಡಿಗೊಂಬೆಗಳಿಗಿಂತ ಚಿಕ್ಕದಾಗಿರುತ್ತವೆ. ಕೆಲವೆಡೆ ಈ ಗೊಂಬೆಗಳ ಕೈಗಳನ್ನು ಸೊಂಟದ ಮೇಲೆ ಇಟ್ಟುಕೊಂಡಿರುವಂತೆ ರಚಿಸಲಾಗಿರುತ್ತದೆ. ಹಂಪೆಯ ವಿರೂಪಾಕ್ಷನ ಜಾತ್ರೆ, ಉತ್ಸವಗಳಲ್ಲಿ ಈ ರೀತಿಯ ಗೊಂಬೆಗಳನ್ನು ರಚಿಸಿ ಪ್ರದರ್ಶಿಸಲಾಗುತ್ತದೆ. ಈ ಗೊಂಬೆಗಳ ರಚನೆ, ಆಕಾರ, ರೂಪಗಳಲ್ಲಿ ಪ್ರಾದೇಶಿಕ

---

೧೫. ವಿಶ್ವ ಕನ್ನಡ : ಎಂ.ಎನ್. ರಾಮಯ್ಯ, ತುಮಕೂರು ಜಿಲ್ಲೆಯ ಜಾನಪದ ಕಲೆಗಳು, ಸಂಪುಟ -೩, ಪುಟ -೧೪೦

[illegible]

[illegible]

[illegible]

[illegible]

ವ್ಯತ್ಯಾಸಗಳು ಕಂಡುಬರುತ್ತವೆ. ವಾಲಗದೊಂದಿಗೆ ತಾಳಕ್ಕೆ ತಕ್ಕಂತೆ ಈ ಗೊಂಬೆಗಳನ್ನು ಹೊತ್ತವರು ಕುಣಿಯುತ್ತಾರೆ. ಈ ನೃತ್ಯ ಹಬ್ಬಹರಿದಿನಗಳಲ್ಲಿ ಮಾತ್ರ ನಡೆಯುತ್ತದೆ. ಹೀಗಾಗಿ ಈ ಗೊಂಬೆಗಳ ರಚನೆ ಮತ್ತು ಕುಣಿತದ ಉದ್ದೇಶ ಹೆಣ್ಣು-ಗಂಡು ಜೀವನದಲ್ಲಿ ಜೊತೆಯಾಗಿ ಸುಖ ಸಂತೋಷದಿಂದ ಇರಬೇಕೆಂಬುದರ ಸಂಕೇತವಾಗಿರಬಹುದು. ನೋಡುಗರಿಗೆ ಮನರಂಜನೆಯನ್ನಂತೂ ಖಂಡಿತ ನೀಡುತ್ತವೆ.

## ೨.೨ ಆಟಗಳಲ್ಲಿ ಬಳಸಲ್ಪಡುವ ಶಿಲ್ಪಗಳು

ಮನರಂಜನೆಯ ಸಲುವಾಗಿ ಆಡುವ ಆಟಗಳು ಹಲವಾರು ಇವೆ. ಅವುಗಳಲ್ಲಿನ ಕೆಲವು ಆಟಗಳಲ್ಲಿ ಆಕರ್ಷಕವಾದ ಶಿಲ್ಪಗಳು ಆಟದ ವಸ್ತುಗಳಾಗಿ ಬಳಸಲ್ಪಡುತ್ತವೆ. ಅವುಗಳನ್ನು ಅ. ಮಕ್ಕಳಾಟದಲ್ಲಿನ ಶಿಲ್ಪಗಳು, ಆ. ದೊಡ್ಡವರ ಆಟಗಳಲ್ಲಿನ ಶಿಲ್ಪಗಳು ಎಂದು ಶಿಲ್ಪಗಳಾಧಾರದಿಂದ ವಿಂಗಡಿಸಬಹುದು.

### ಅ. ಮಕ್ಕಳಾಟದಲ್ಲಿನ ಶಿಲ್ಪಗಳು

ಮಕ್ಕಳಾಟದಲ್ಲಿ ಅನೇಕ ವಿಧದ ಆಟಿಗೆ ಶಿಲ್ಪಗಳಿರುತ್ತವೆ. ಆದರೆ ಜನಪದ ಶಿಲ್ಪದ ದೃಷ್ಟಿಯಿಂದ ಗೊಂಬೆಶಿಲ್ಪಗಳು ಮುಖ್ಯವಾಗುತ್ತವೆ. ಅದರಲ್ಲೂ ಸಂಕೀರ್ಣ ಮಾಧ್ಯಮದ ಕಿಸಗಾಲು ಗೊಂಬೆ ಶಿಲ್ಪಗಳು ಗಮನಾರ್ಹವಾಗುತ್ತವೆ. ಈ ಗೊಂಬೆಗಳಲ್ಲೂ ಕೂಸಿನ ಗೊಂಬೆ, ಕೊಡದ ಗೊಂಬೆ ಎಂದು ವಿಂಗಡಿಸಬಹುದು. ಇವೆಲ್ಲ ಸಾಮಾನ್ಯವಾಗಿ ಮಕ್ಕಳಿಗೆ ಆಟದೊಂದಿಗೆ ಮನರಂಜನೆಯನ್ನೂ ಒದಗಿಸುತ್ತವೆ. ಈ ಗೊಂಬೆ ಶಿಲ್ಪಗಳ ಮಾಧ್ಯಮ, ರಚನಾ ಕ್ರಮ ಎಲ್ಲವೂ ಕುತೂಹಲಕರವಾಗಿರುತ್ತವೆ.

**ಕಿಸಗಾಲು ಗೊಂಬೆ ಶಿಲ್ಪಗಳು :** ಉತ್ತರ ಕರ್ನಾಟಕದ ಪ್ರತಿಯೊಂದು ಊರಿನ ಮನೆ ಮನೆಗಳಲ್ಲಿ ಕಂಡು ಬರುವ ಕಿಸಗಾಲು ಗೊಂಬೆ ಶಿಲ್ಪಗಳು ಸಗಣಿಯ ಮಾಧ್ಯಮದವುಗಳಾಗಿದ್ದು, ಅಪ್ಪಟ ಜಾನಪದ ಸೊಗಡನ್ನು ಉಳಿಸಿಕೊಂಡು ಬಂದವುಗಳಾಗಿವೆ. ಬನಶಂಕರಿ ಜಾತ್ರೆ [೧೬] ಹಾಗೂ ಇಟಗಿ [೧೭] ಜಾತ್ರೆಗಳಲ್ಲಿ ಮಾರಾಟವಾಗಿ ಆ ಮೂಲಕ ಜನಪದರ ಮನೆ-ಮನೆಗಳನ್ನು ಸೇರಿ ಹೋಗುವೆ. ಅವುಗಳ ಸೌಂದರ್ಯವನ್ನು ಸವಿಯುವದೇ ಒಂದು ಸೊಗಸಾದರೆ, ಅವುಗಳ ರಚನೆ, ಮಾಧ್ಯಮ, ಮಾಡುವ ವಿಧಾನಗಳು ಬೆರಗುಗೊಳಿಸುವಂತಹವುಗಳಾಗಿವೆ. ಜಾಲಿಹಾಳದಲ್ಲಿ[೧೮] ತಯಾರಿಸಲಾಗುವ ಕಿಸಗಾಲು ಗೊಂಬೆಗಳಂತೂ ಉತ್ತರ ಕರ್ನಾಟಕದಲ್ಲಿಯೇ ಪ್ರಸಿದ್ಧವಾಗಿವೆ. [೧೯] ಈ ಕಿಸಗಾಲು ಗೊಂಬೆಶಿಲ್ಪಗಳನ್ನು ಕೈಕಾಲು ಗೊಂಬೆ, ಕೂಸಿನ ಗೊಂಬೆ, ಕೊಡದ ಗೊಂಬೆಗಳೆಂದು ಕರೆಯಲಾಗುತ್ತದೆ. ಕೈಕಾಲುಗಳನ್ನು ಅಗಲವಾಗಿಸಿ ಮುಂದಕ್ಕೆ ಚಾಚಿ ಕುಳಿತ ಭಂಗಿಯಲ್ಲಿರುವ ಗೊಂಬೆ ಶಿಲ್ಪಗಳನ್ನು ಕಿಸಗಾಲು ಅಥವಾ ಕೈಕಾಲು,

---

೧೬. ಬನಶಂಕರಿ : ತಾ. ಬಾದಾಮಿ, ಜಿ. ಬಾಗಲಕೋಟ

೧೭. ಇಟಗಿ : ತಾ. ರೋಣ, ಜಿ. ಗದಗ

೧೮. ಜಾಲಿಹಾಳ : ತಾ. ಬಾದಾಮಿ, ಜಿ. ಬಾಗಲಕೋಟ

೧೯. ಶಂಕ್ರಪ್ಪ ಚಿತ್ರಗಾರ ಮತ್ತು ಬಾಳಪ್ಪ ಚಿತ್ರಗಾರ ಕುಟುಂಬಗಳವರು ಕಿಸಗಾಲು ಗೊಂಬೆಗಳನ್ನು ರಚಿಸುತ್ತಾರೆ



ಕಿಸಗಾಲು ಗೊಂಬೆ (ಘಾಲದಾಳ)



ಕೂಸಿನ ಗೊಂಬೆ ಶಿಲ್ಪ ( ಕಿನ್ನಾಳ )



ಕೊಡದ ಗೊಂಬೆ ಶಿಲ್ಪ ( ಕಿನ್ನಾಳ )



ಕಿಸಗಾಲು ಗೊಂಬೆಗಳ ರಾಶಿ ( ಜಾಲಿಹಾಳ )



ಸಗಣಿ ಗೊಂಬೆ ಶಿಲ್ಪಗಳ ಮಾರಾಟ ( ಬನಶಂಕರಿ ಜಾತ್ರೆ, ಬಾದಾಮಿ )

ಕೂಸನ್ನು ಹೊತ್ತು ನಿಂತ ಭಂಗಿಯ ಗೊಂಬೆಗಳನ್ನು ಕೂಸಿನ ಗೊಂಬೆಗಳೆಂದೂ, ಕೊಡವನ್ನು ಹೊತ್ತ ಗೊಂಬೆಗಳನ್ನು ಕೊಡದ ಗೊಂಬೆಗಳೆಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಎಲ್ಲ ಗೊಂಬೆಗಳೊಂದಿಗೂ ಕೂಸು ಇರುತ್ತದೆ. ಜಾಲಿಹಾಳದಲ್ಲಿ ಚಿತ್ರಗಾರರೆಂಬ ಎರಡು ಕುಟುಂಬಗಳವರು ಈ ಶಿಲ್ಪಗಲನ್ನು ವಂಶಪಾರಂಪರ್ಯವಾಗಿ ಮಾಡಿಕೊಂಡು ಬಂದಿದ್ದಾರೆ. [೨೦]

ರಚನಾ ಕ್ರಮ : ಈ ಗೊಂಬೆ ಶಿಲ್ಪಗಳನ್ನು ಪ್ರಧಾನವಾಗಿ ಸಗಣಿಯಿಂದಲೇ ತಯಾರಿಸಿಲಾಗುತ್ತದೆ. ಮೊದಲು ದನಗಳ ಸಗಣಿಯನ್ನು ಬೇಕಾದಷ್ಟು ಪ್ರಮಾಣದಲ್ಲಿ ಕೂಡಿ ಹಾಕಿ ಅದರೊಂದಿಗೆ ಮರದ ಹೊಟ್ಟನ್ನು ಮಿಶ್ರಮಾಡಿ ಸಗಣಿಯನ್ನು ಹದ ಮಾಡಿಕೊಳ್ಳುತ್ತಾರೆ. ನಂತರ ಮೊದಲೇ ತಯಾರಿಸಲಾಗಿರುವ ಮರದ ಅಚ್ಚಿನಲ್ಲಿ ಸಗಣಿಯನ್ನು ಒತ್ತಿ ಕರಡು ಶಿಲ್ಪವನ್ನು ರಚಿಸಿಕೊಂಡು ನಂತರ ಮತ್ತೆ ಕೈಯಿಂದ ತಿದ್ದಿ-ತೀಡಿ ಶಿಲ್ಪವನ್ನು ಪೂರ್ಣಗೊಳಿಸಲಾಗುತ್ತದೆ. ಇಂಥ ನೂರಾರು ಗೊಂಬೆಗಳನ್ನು ತಯಾರಿಸಿಕೊಂಡು ಅವನ್ನೆಲ್ಲ ಬಿಸಿಲಿನಲ್ಲಿ ಒಂದು ವಾರ ಕಾಲ ಒಣಗಿಸಲಾಗುತ್ತದೆ. ಇದು ಮೊದಲ ಹಂತ. ಈ ಶಿಲ್ಪದ ಕೈಕಾಲುಗಳು ನಿಲ್ಲುವಂತೆ ಸಗಣಿಯ ಒಳಗೆ ಕಟ್ಟಿಗೆಯಕಡ್ಡಿಗಳನ್ನು ಮುಳುಗಿಸಲಾಗಿರುತ್ತದೆ. ಇದು ಮೊದಲನೆಯ ಹಂತ.

ಎರಡನೆಯ ಹಂತದಲ್ಲಿ ಈ ಒಣಗಿದ ಗೊಂಬೆ ಶಿಲ್ಪಗಳಿಗೆ ಹುಣಸೆಬೀಜವನ್ನು ಜಜ್ಜಿ-ಬೀಸಿದ ಹಿಟ್ಟಿನೊಂದಿಗೆ ಸಗಣಿ ಮತ್ತು ಅಂಟು ಸೇರಿಸಿ ಹದ ಮಾಡಿಕೊಂಡಿರುವ ಸರಿಯನ್ನು ಬಳೆಯುತ್ತಾರೆ. ನಂತರ ಒಣಗಿಸುತ್ತಾರೆ. ಅಂಟಂಟಾಗಿರುವ ಈ ಸರಿ ಹಸಿ ಹಸಿಯಾಗಿರುವಾಗಲೇ ಹತ್ತಿ ಬಟ್ಟೆಯ ತುಂಡುಗಳನ್ನು ಮೆತ್ತಲಾಗುತ್ತದೆ. ನಂತರ ಈ ಗೊಂಬೆಗಳನ್ನು ಒಂದೆರಡು ದಿನಗಳ ಕಾಲ ಒಣಗಿಸಲಾಗುತ್ತದೆ. ಇದು ಎರಡನೆಯ ಹಂತ. ಬಟ್ಟೆಯ ತುಂಡುಗಳನ್ನು ಮೆತ್ತಿ ಒಣಗಿಸಿದ ನಂತರ ಅವುಗಳ ಮೇಲೆ ಜಾಲಿ ಅಂಟು ಹಾಗೂ ಸೀಮೆಸುಣ್ಣದ ಹುಡಿ ಬೆರೆಸಿದ ಸರಿಯನ್ನು ತಯಾರಿಸಿಕೊಂಡು ಮತ್ತೆ ಆ ಗೊಂಬೆಗಳಿಗೆ ಬಳೆಯಲಾಗುತ್ತದೆ. ಮತ್ತೆ ಒಣಗಿಸಲಾಗುತ್ತದೆ. ಇದು ಮೂರನೆಯ ಹಂತ. ಇನ್ನು ನಾಲ್ಕನೆಯ ಹಂತವೆಂದರೆ ಗೊಂಬೆ ಶಿಲ್ಪಗಳಿಗೆ ಬಣ್ಣ ಬಳೆಯುವುದು. ಮಾರುಕಟ್ಟೆಯಲ್ಲಿ ಸಿಗುವ ಹುಡಿ ಬಣ್ಣವನ್ನು ತಂದು ಅದರಲ್ಲಿ ಅಂಟು ಹಾಗೂ ನೀರನ್ನು ಬೆರೆಸಿ ತಯಾರಿಸಿದ ವಿವಿಧ ಬಣ್ಣಗಳನ್ನು ಗೊಂಬೆಗಳಿಗೆ ಬಳೆಯಲಾಗುವುದು. ಹಳದಿಯು ಮೈಬಣ್ಣವಾದರೆ, ಕೆಂಪು, ಹಸಿರು, ನೀಲಿ, ಜಾಂಬಳಿ ಮುಂತಾದ ಬಣ್ಣಗಳನ್ನು ಬಟ್ಟೆಯಂತೆ ಕಾಣುವ ಹಾಗೆ ವಿನ್ಯಾಸಗೊಳಿಸಲಾಗಿರುತ್ತದೆ. ಆ ಮೇಲೆ ಕಪ್ಪು ಬಣ್ಣದಿಂದ ಗೊಂಬೆಗಳಿಗೆ ಕಣ್ಣು, ಮೂಗು, ಬಾಯಿ, ಕೈಬೆರಳು, ಕಾಲ್ಬೆರಳು, ಕಿವಿ ಮತ್ತು ಆಭರಣಗಳನ್ನು ರೇಖಾತ್ಮಕವಾಗಿ ಬರೆಯಲಾಗುವುದು. ಹೀಗೆ ನಾಲ್ಕನೆ ಹಂತದಲ್ಲಿ ಬಣ್ಣಗಳಿಂದ ಪೂರ್ಣಗೊಂಡ ಶಿಲ್ಪಗಳು ಇನ್ನೊಂದು ಹಂತದಲ್ಲಿ ಹೊಳಪನ್ನು ಪಡೆಯುತ್ತವೆ. ಕೆಂಪು ರಾಳ ಮತ್ತು ಗುಬ್ಬೆ ರಾಳ ಸೇರಿಸಿ

---

೨೦. ಈ ಚಿತ್ರಗಾರರು ಹುಲಿ, ಬಸವಣ್ಣ, ಆನೆ, ಕುದುರೆ, ಗಿಳಿ, ಪಕ್ಷಿ ಶಿಲ್ಪಗಳನ್ನು ಸಗಣಿಯಿಂದ ಮಾಡುತ್ತಾರೆ. ಕೊಪ್ಪಳ ಜಿಲ್ಲೆಯ ಕಿನ್ನಾಳದ ಚಿತ್ರಕಾರರೊಂದಿಗೆ ಇವರ ರಕ್ತ ಸಂಬಂಧವಿದೆ

ತಯಾರಿಸಿಕೊಂಡ ಎಣ್ಣೆಯನ್ನು ಗೊಂಬೆಗಳಿಗೆ ಹಚ್ಚಲಾಗುವುದು. ಈ ಎಣ್ಣೆಯಿಂದ ಗೊಂಬೆ ಶಿಲ್ಪಗಳಿಗೆ ಹೊಳಪು ಬರುವುದಲ್ಲದೆ ಹಚ್ಚಿದ ಬಣ್ಣವೂ ಘಟ್ಟಿಯಾಗಿ ಉಳಿಯುವುದು ಎಂದು ಗೊಂಬೆ ತಯಾರಕರು ಹೇಳುತ್ತಾರೆ. [೨೧]

## ಗೊಂಬೆಗಳ ಮಾರಾಟ ಮತ್ತು ಪ್ರಸಿದ್ಧಿ

ಬನಶಂಕರಿ ಹಾಗೂ ಇಟಗಿ ಜಾತ್ರೆಯಲ್ಲಿ ಈ ಕಿಸಗಾಲು ಗೊಂಬೆಗಳಿಗೆ ಎಲ್ಲಿಲ್ಲದ ಬೇಡಿಕೆ. ಈಗಲೂ ಕೂಡ ಜಾತ್ರೆಯಲ್ಲಿ ಕೇವಲ ಐದು ರೂಪಾಯಿಗಳಿಗೆ ಒಂದರಂತೆ ಮಾರಾಟ ಮಾಡಲಾಗುತ್ತದೆ. ಬನಶಂಕರಿ ಜಾತ್ರೆಯಲ್ಲಿ ಕಾಯಿಪಲ್ಲೆಯಂತೆ ಚಟಪಟನೆ ಮಾರಾಟವಾಗುವ ಈ ಗೊಂಬೆಗಳು ಮಾರಾಟಗಾರರಿಗೆ ಜಾತ್ರೆಯೊಂದರಲ್ಲಿಯೇ ಎಂಟರಿಂದ ಹತ್ತು ಸಾವಿರ ರೂಪಾಯಿಗಳವರೆಗೆ ಆದಾಯ ತಂದು ಕೊಡುತ್ತವೆಯಂತೆ. [೨೨]

ದೀಪಾವಳಿಯಿಂದ ( ಅಕ್ಟೋಬರ್ ತಿಂಗಳು ) ಈ ಗೊಂಬೆಗಳ ರಚನೆ ಆರಂಭ ಮಾಡಿ ಮುಂದೆ ಬನದ ಹುಣ್ಣಿಮೆ ( ಜನೇವರಿ ತಿಂಗಳು ) ವರೆಗೆ ಅಂದರೆ ಬನಶಂಕರಿ ಜಾತ್ರೆ ಆರಂಭವಾಗುವವರೆಗೆ ಈ ಶಿಲ್ಪಗಳನ್ನು ಇವರು ತಯಾರಿಸುತ್ತಾರೆ. ಸುಮಾರು ಐದರಿಂದ ಆರು ಸಾವಿರ ಶಿಲ್ಪಗಳನ್ನು ತಯಾರಿಸುವ ಈ ಚಿತ್ರಗಾರರು ಸ್ವತಃ ಜಾತ್ರೆಯಲ್ಲಿ ಕುಳಿತು ಮಾರಾಟ ಮಾಡುತ್ತಾರೆ. ಜಾತ್ರೆಗೆ ಬಂದವರು ಈ ಗೊಂಬೆಗಳನ್ನು ಖರೀದಿಸಿ ಒಯ್ಯುತ್ತಾರೆ. ಈ ಗೊಂಬೆಗಳೊಂದಿಗೆ ಬಳೆಗಳು, ಒಂದು ಮುತ್ಲಿಯನ್ನು (ಸಣ್ಣ ಮೊರ) ವನ್ನು ಜೊತೆಗೆ ಕೊಡುತ್ತಾರೆ.

ಜಾಲಿಹಾಳದ ಚಿತ್ರಗಾರರದ್ದು ಈಗ ಒಕ್ಕಲುತನವೇ ಮುಖ್ಯ ವೃತ್ತಿಯಾಗಿದೆ. ಆದರೂ ಈ ಶಿಲ್ಪಗಲ ರಚನೆಗೆ ಮತ್ತು ಮಾರಾಟ ತಮ್ಮ ಪೂರ್ವಜರಿಂದ ಬಂದದ್ದು ಎಂಬ ಕಾರಣಕ್ಕೆ ಮುಂದುವರೆಸಿಕೊಂಡು ಬಂದಿರುವುದಾಗಿ ಹೇಳುತ್ತಾರೆ.

**ನಂಬಿಕೆ :** ಕಿಸಗಾಲು ಗೊಂಬೆಗಳನ್ನು ಬನಶಂಕರಿ ಜಾತ್ರೆಗೆ ಬಂದವರು ಖರೀದಿಸಿ ತಮ್ಮೂರಿಗೆ ಒಯ್ಯುತ್ತಾರೆ. ಇದರರ್ಥ ತಾವು ಜಾತ್ರೆಗೆ ಬಂದು ಹೋದುದರ ಕುರುಹು ಎನ್ನುತ್ತಾರೆ. [೨೩] ನನ್ನ ಕ್ಷೇತ್ರ ಕಾಲದಲ್ಲಿ ಕಾರ್ಯದಲ್ಲಿ ಇದರ ನಿರ್ಧಿಷ್ಟ ಕಾರಣ ತಿಳಿದು ಬಂದಿಲ್ಲ. ಏಕೆಂದರೆ, ಪ್ಲಾಸ್ಟಿಕ್ ಯುಗದಲ್ಲೂ ಈ ಸಗಣಿ ಗೊಂಬೆಗಳು ಈ ಸಗಣಿ ಗೊಂಬೆಗಳು ತಮ್ಮ ಸ್ಥಾನ ಉಳಿಸಿಕೊಂಡು ಬಂದಿವೆ. ಆಧುನಿಕ ಪ್ಲಾಸ್ಟಿಕ್ ಗೊಂಬೆಗಳಿಗೆ ಈ ಗೊಂಬೆಗಳಿಗಿರುವ ಮಹತ್ವವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಹೀಗೆ ಊಹಿಸಬಹುದು. ಈ ಗೊಂಬೆಗಳಿಗಿರುವ ಸಂತಾನಾಪೇಕ್ಷಿಗಳು ಒಯ್ಯುತ್ತಾರೆ. ಮನೆಗೆ ಒಯ್ದರೆ ಮಕ್ಕಳಾಗುತ್ತವೆ ಎಂಬ ನಂಬಿಕೆ ಇರಬಹುದೆಂದು ಊಹಿಸಲಾಗಿದೆ. ಏಕೆಂದರೆ ಕಿಸಗಾಲು ಗೊಂಬೆಗಳು ಕಾಲನ್ನು ಅಗಲ ಮಾಡಿ ಪ್ರಸವ

---

೨೧. ಮಾಹಿತಿ : ಚಂದ್ರಶೇಖರ ತೀರ್ಥಪ್ಪ ಚಿತ್ರಗಾರ, ಸಾ. ಜಾಲಿಹಾಳ

೨೨. ಶಂಕ್ರೆಮ್ಮ ಯಮನಪ್ಪ ಚಿತ್ರಗಾರ : ಸಾ. ಜಾಲಿಹಾಳ

೨೩. ಮಾಹಿತಿ ನೀಡಿದರು : ಆನಂದ ಪೂಜಾರ, ಸಾ. ಬಾದಾಮಿ

ಭಂಗಿಯಲ್ಲಿ ಕುಳಿತ ಶಿಲ್ಪಗಳಾಗಿವೆಯಲ್ಲದೆ ಪ್ರತಿಯೊಂದು ಗೊಂಬೆಯೂ ಕೂಸನ್ನು ಹೊಂದಿರುತ್ತದೆ.

ಮಕ್ಕಳು ಆಡುವದಕ್ಕಾಗಿ ಈ ಗೊಂಬೆಗಳನ್ನು ಖರೀದಿಸಿ ಒಯ್ಯುತ್ತಾರೆಂದೂ ಕೆಲವರು ಹೇಳುತ್ತಾರೆ.[೨೪] ಮಕ್ಕಳಾಟಿಕೆಗೆ ಕೊಡದ ಗೊಂಬೆಗಳೂ ಇಲ್ಲಿರುತ್ತವೆ. ಹೀಗಾಗಿ ಕೊಡದ ಗೊಂಬೆಗಳೂ ಇಲ್ಲಿರುತ್ತವೆ. ಹೀಗಾಗಿ, ಕೊಡದ ಗೊಂಬೆಗಳಲ್ಲದೆ ಕೆಲವು ಪ್ರಾಣಿ, ಪಕ್ಷಿ, ಶಿಲ್ಪಗಳನ್ನು ಮಕ್ಕಳಾಟಕ್ಕೂ, ಕಿಸಗಾಲು ಗೊಂಬೆಗಳನ್ನು ಸಂತಾನಪೇಕ್ಷಿಗಳು ಒಯ್ಯುತ್ತಾರೆಂದು ಊಹಿಸಬಹುದಾಗಿದೆ. ಮಕ್ಕಳಲ್ಲಿ ತಾಯ್ತನದ ಅರಿವು ಮೂಡಿಸಲು ಕಿಸಗಾಲು ಗೊಂಬೆಗಳನ್ನು ಖರೀದಿಸುವರು ಎಂದು ಡಾ. ಆರ್.ಎಂ. ಹಡಪದರವರು ಹೇಳುತ್ತಾರೆ.[೨೫]

### ಆ. ದೊಡ್ಡವರ ಆಟದಲ್ಲಿನ ಶಿಲ್ಪಗಳು

ದೊಡ್ಡವರು ಆಡುವ ಆಟಗಳು ಹಲವಾರು ಬಗೆಯಲ್ಲಿವೆ. ಆದರೆ ಈ ಜನಪದ ಆಟಗಳಲ್ಲಿ ಬಳಸಲ್ಪಡುವ ಶಿಲ್ಪಗಳು ಕಲಾತ್ಮಕ ದೃಷ್ಟಿಯಿಂದ ಗಮನಾರ್ಹವಾದವುಗಳಲ್ಲ. ಬದಲಾಗಿ ಅವುಗಳ ಹಿಂದಿರುವ ಪೌರಾಣಿಕ, ಐತಿಹಾಸಿಕ ಮತ್ತು ಜನಪದೀಯ ಕಥೆ, ಐತಿಹ್ಯಗಳ ಹಿನ್ನೆಲೆಯಲ್ಲಿ ಮುಖ್ಯವಾಗುತ್ತವೆ. ಈ ಹಿನ್ನೆಲೆಯಲ್ಲಿ ಮುಖ್ಯವಾಗುವದೆಂದರೆ ಜನಪದರು ಆಡುವ ಬಟ್ಟೆಯ ಚೆಂಡಿನ ಶಿಲ್ಪಗಳು.

**ಬಟ್ಟೆಯ ಚೆಂಡಿನ ಶಿಲ್ಪಗಳು :** ನಮ್ಮ ಗ್ರಾಮೀಣರು, ಯುಗಾದಿ ಹಬ್ಬದಲ್ಲಿ ಚೆಂಡಾಟ, ಕೋಲಾಟ, ಬುಗುರಿ ಆಟಗಳನ್ನು ಆಡುತ್ತಾರೆ. ಯುಗಾದಿ ದಿನ ಬೇವ ಕುಡ್ದು, ಚೆಂಡಾಡಬೇಕು ಎಂಬ ಮಾತುಂಟು. ಈ ಸಂಪ್ರದಾಯದಂತೆ ಜನಪದರು ಚೆಂಡಾಟವನ್ನು ಆಡುತ್ತ ಬಂದಿದ್ದಾರೆ.

**ಚೆಂಡಿನ ರಚನೆ :** ಒಂದು ಹಿಡಿ ಗಾತ್ರಕ್ಕೆ ಮಿಕ್ಕುವಷ್ಟು ದೊಡ್ಡದಾಗಿರುವ ಈ ಚೆಂಡಿನ ರಚನೆ ವಿಶೇಷವಾದದ್ದು. ಒಣ ಹುಣಸೆ ಹಣ್ಣನ್ನು ಚೆನ್ನಾಗಿ ಕುಟ್ಟಿ, ಗುಂಡಗೆ ಮುದ್ದೆ ಮಾಡಿ ಅದರ ಮೇಲೆ ಬಟ್ಟೆಯನ್ನು ಒಂದು ಹಿಡಿ ಗಾತ್ರಕ್ಕೆ ಮಿಕ್ಕುವಷ್ಟರ ವರೆಗೆ ಬಿಗಿಯಾಗಿ ಸುತ್ತಿ ಚೆಂಡನ್ನು ತಯಾರಿಸುತ್ತಾರೆ.

**ಆಟದ ವಿಧಾನ :** ಊರ ಮಧ್ಯೆ ಇಲ್ಲವೆ ಹೊರ ಬಯಲಿನಲ್ಲಿ, ವಿಶಾಲ ಸ್ಥಳದಲ್ಲಿ ಅಂದು ಊರವರೆಲ್ಲ ಸೇರಿರುತ್ತಾರೆ. ಅದರಲ್ಲಿ ಕೆಲವರು ಎರಡು ತಂಡಗಳನ್ನು ಮಾಡಿಕೊಂಡು ಎದುರು ಬದಿರಾಗಿ ಚೆಂಡಿನಾಟವನ್ನು ಆಡುತ್ತಾರೆ. ಮಹಿಳೆಯರೂ, ಮಕ್ಕಳೂ ಸಹಿತ ಈ ಆಟ ನೋಡಲು ನೆರೆದಿರುತ್ತಾರೆ. ಬಿಜಾಪುರ, ಬೆಳಗಾವಿ, ಗುಲಬರ್ಗಾ ಜಿಲ್ಲೆಗಳಲ್ಲಿ ಈ ಚೆಂಡಿನಾಟ ಸಾಮಾನ್ಯವಾಗಿದೆ. ಈ ಚೆಂಡು ಶಿಲ್ಪ ಹೇಗಾಗುತ್ತದೆಂಬುದರ ಬಗ್ಗೆ ಒಂದು ದೃಷ್ಟಾಂತವಿದೆ. ಚಾಮುಂಡೇಶ್ವರಿಯು ಚೆಂಡ-ಮುಂಡರನ್ನು

---

೨೪. ಯ.ಹ. ಚಂದ್ರಗಿರಿ : ವಿಶ್ರಾಂತ ಶಿಕ್ಷಕರು, ಸಾ. ಜಾಲಿಹಾಳ

೨೫. ಡಾ. ಆರ್.ಎಂ. ಹಡಪದ : ಖ್ಯಾತ ಚಿತ್ರಕಲಾವಿದರು, ಬೆಂಗಳೂರು

ಮರ್ಧಿಸಿ, ಅವರ ರುಂಡಗಳನ್ನು ಚೆಂಡಾಡಿದಳಂತೆ.[೨೬] ಅದರ ಪ್ರತೀಕವೇ ಈ ಚೆಂಡಾಟವೆಂದು ಹೇಳುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೊಳಲಿಯ ರಾಜ ರಾಜೇಶ್ವರಿ ದೇವಾಲಯದ ಉತ್ಸವದಲ್ಲಿ ತೆಂಗಿನ ನಾರನ್ನು ಗೋಲಾಕಾರ ಮಾಡಿ ಅದಕ್ಕೆ ಚರ್ಮದ ಹೊದಿಕೆಯನ್ನು ರಚಿಸಿ ಚೆಂಡನ್ನು ತಯಾರಿಸುತ್ತಾರೆ.

ಇಂಥ ಅನೇಕ ಜನಪದ ಆಟಗಳು ಗ್ರಾಮೀಣರ ಬದುಕಿನೊಂದಿಗೆ ಬೆರೆತುಕೊಂಡಿವೆ. ಮನೋರಂಜನೆಗೆ, ಶಾರೀರಿಕ ಸಂವರ್ಧನೆ ಎರಡಕ್ಕೂ ಇವು ಸಹಾಯಕವಾಗಿವೆ. ಈ ಆಟಗಳಲ್ಲಿ ಕೆಲವು ನಿತ್ಯ, ಕೆಲವು ಹಬ್ಬ-ಹರಿದಿನಗಳಂತಹ ವಿಶೇಷ ಸಂದರ್ಭಗಳಲ್ಲಿ ಜರುಗುತ್ತವೆ. ಹೆಂಗಸರ ಆಟಗಳು, ಮಕ್ಕಳ ಆಟಗಳು ಎಂದು ಮುಂತಾಗಿ ವಿಂಗಡಿಸಿಕೊಳ್ಳಬಹುದು. ಈ ಚೆಂಡಿನ ಆಟ ದೊಡ್ಡವರ ಆಟವಾಗಿದೆ.

ಹೀಗೆ ಪ್ರಯೋಜನದ ದೃಷ್ಟಿ ಮನರಂಜನೆಯ ಉದ್ದೇಶಗಳ ಹಿನ್ನೆಲೆಯಲ್ಲಿ ಬೆಳೆದು ಬಂದ ಸಂಕೀರ್ಣ ಮಾಧ್ಯಮದ ಸೌಂದರ್ಯಮೂಲ ಜನಪದ ಶಿಲ್ಪಕಲೆಯು ಗಮನ ಸೆಳೆಯುವಂತಹುದಾಗಿದೆ. ಬೆದರು ಗೊಂಬೆಗಳು, ಆಣೀ-ಪೀಣೀ ಶಿಲ್ಪಗಳು, ಕಾಗದದ ಚೂರುಗಳಿಂದ ರಚಿಸಿಸಲ್ಪಡುವ ಹಲವಾರು ಶಿಲ್ಪಗಳಲ್ಲಿ ಪ್ರಯೋಜನದ ದೃಷ್ಟಿಯಿದ್ದರೂ ಜನಪದರ ಸೌಂದರ್ಯ ದೃಷ್ಟಿಯೂ ಕಾಣಿಸುತ್ತದೆ. ಒಂದೊಂದು ಶಿಲ್ಪ ಆಯಾ ಸಂದರ್ಭ ಸನ್ನಿವೇಶಗಳಿಂದ ನೀಡುವ ದೃಶ್ಯಾನುಭವದಲ್ಲಿ ಕಲಾತ್ಮಕ ಅಂಶಗಳು ಅಡಗಿರುವುದರಿಂದ ವಿಶೇಷ ಅನುಭವ ನೀಡುವಂತಹುಗಳಾಗಿರುತ್ತವೆ. ಹಾಗೆಯೇ ತೊಗಲು ಗೊಂಬೆ ಶಿಲ್ಪಗಳು, ಯಕ್ಷಗಾನ ವೇಷಗಳಲ್ಲಿನ ಶಿಲ್ಪಗಳು, ಗಾರುಡಿ ಗೊಂಬೆ ಶಿಲ್ಪಗಳಂತಹುಗಳಲ್ಲಿ ನಮ್ಮ ಜನಪದರು ಕಲಾವಂತಿಕೆಯನ್ನು ಮೆರೆದಿದ್ದಾರೆ. ಕೆಲಸದಿಂದ ಆಯಾಸಗೊಂಡ ಮನಸ್ಸಿಗೆ ಬಿಡುವಿನ ವೇಳೆಯಲ್ಲಿ ಇಂತಹ ಶಿಲ್ಪಗಳಿಂದ ಮನೋರಂಜನೆಯನ್ನು ಪಡೆದಿದ್ದಾರೆ. ಅಲ್ಲದೆ ಹಬ್ಬ ಹರಿದಿನಗಳಂತಹ ಸಂದರ್ಭಗಳಲ್ಲಿ ಮಕ್ಕಳಾದಿಯಾಗಿ ದೊಡ್ಡವರೂ ಆಡುವ ಆಟಗಳಲ್ಲಿ ಮನೋರಂಜನೆ ಪಡೆಯುವ ಹಿನ್ನೆಲೆಯಲ್ಲಿ ಕಿಸಗಾಲು ಗೊಂಬೆಗಳು, ಚೆಂಡು ಮುಂತಾದ ಶಿಲ್ಪಗಳು ಗಮನಾರ್ಹವಾಗಿವೆ.

## ೨. ಸಂಕೀರ್ಣ ಮಾಧ್ಯಮದ ಧರ್ಮ ಮೂಲ ಜನಪದ ಶಿಲ್ಪಕಲೆ[೨೭]

ಜನಪದರ ದಿನನಿತ್ಯದ ಬದುಕು ದೇವರ ಸ್ತುತಿಯೊಂದಿಗೇ ಆರಂಭವಾಗುತ್ತದೆ. ಅವರ ದೈನಂದಿನ ಹಲವಾರು ಚಟುವಟಿಕೆಗಳು ಒಂದಿಲ್ಲಾ ಒಂದು ಬಗೆಯಲ್ಲಿ ದೇವರ ಸಂಬಂಧವನ್ನೇ ಪಡೆದುಕೊಂಡಿರುತ್ತವೆ. ಬದುಕಿನಲ್ಲಿ ಬಂದೆರಗುವ ಕಷ್ಟಗಳನ್ನು ದೇವರು ಪರಿಹರಿಸಿ ಸುಖಃ ಸಂತೋಷಗಳನ್ನು ನೀಡುವನು ಎಂದು ಅವರು ನಂಬುತ್ತಾರೆ. ಅಂತೆಯೇ ಹಬ್ಬ ಹರಿದಿನಗಳಂತಹ ಹಲವಾರು ಸಂದರ್ಭಗಳಲ್ಲಿ ವಿವಿಧ ರೀತಿಯ ಶಿಲ್ಪಗಳನ್ನು ರಚಿಸಿ ಪೂಜಿಸುವರು.

---

೨೬. ಕನ್ನಡ ಜಾನಪದ ಕೋಶ
೨೭. ವಿವರಗಳಿಗೆ ನೋಡಿ : ಇದೇ ಮಹಾಪ್ರಬಂಧದ ಅಧ್ಯಾಯ-ನಾಲ್ಕು, ಮರದ ಮಾಧ್ಯಮದ ಜನಪದ ಶಿಲ್ಪಕಲೆ - ಪುಟ -೬

ಈ ಧರ್ಮ ಮೂಲದ ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಗಳು ಹೆಚ್ಚಾಗಿ ಧಾರ್ಮಿಕ ಹಾಗೂ ತಾಂತ್ರಿಕ ಹಿನ್ನೆಲೆಯಲ್ಲಿ ಬೆಳೆದು ಬಂದುದರಿಂದ ಈ ಶಿಲ್ಪಗಳನ್ನು ೧. ಧಾರ್ಮಿಕ ಹಿನ್ನೆಲೆಯ ಜನಪದ ಶಿಲ್ಪಕಲೆ, ೨. ತಾಂತ್ರಿಕ ಹಿನ್ನೆಲೆಯ ಜನಪದ ಶಿಲ್ಪಕಲೆ ಎಂದು ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ.

**೧. ಧಾರ್ಮಿಕ ಹಿನ್ನೆಲೆಯ ಜನಪದ ಶಿಲ್ಪಕಲೆ :** ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಗಳು ಧಾರ್ಮಿಕ ಹಿನ್ನೆಲೆಯಲ್ಲಿ ಬೆಳೆದು ಬಂದಿವೆ. ಉತ್ತರ ಕರ್ನಾಟಕದ ಬಹು ಪಾಲು ಕಲೆಗಳು ಮತಧರ್ಮಗಳ ನಿಮಿತ್ತವಾಗಿಯೇ ಬೆಳೆದು ಬಂದಿರುವಂತೆ ಧಾರ್ಮಿಕಾಚರಣೆಗಳ ಸಂದರ್ಭಗಳಲ್ಲಿ ಅವುಗಳ ಜೊತೆ ಜೊತೆಯಲ್ಲೇ ಜನಪದರ ಸಂಕೀರ್ಣ ಮಾಧ್ಯಮದ ಶಿಲ್ಪಗಳೂ ಪೋಷಿತಗೊಂಡಿವೆ. ಅಂಥ ಕೆಲವು ಶಿಲ್ಪಗಳನ್ನು ಕೆಳಗಿನಂತೆ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

೧.೧ ಹಬ್ಬ ಹರಿದಿನಗಳಲ್ಲಿ ಹುಟ್ಟಿಕೊಳ್ಳುವ ಶಿಲ್ಪಗಳು
೧.೨ ದೇವರ ಉತ್ಸವಗಳಲ್ಲಿ ಹುಟ್ಟಿಕೊಳ್ಳುವ ಶಿಲ್ಪಗಳು

**೧.೧ ಹಬ್ಬ ಹರಿದಿನಗಳಲ್ಲಿ ಹುಟ್ಟಿಕೊಳ್ಳುವ ಶಿಲ್ಪಗಳು :** ಹಬ್ಬ ಹರಿದಿನಗಳೆಂದರೆ ನಮ್ಮ ಜನಪದರಿಗೆ ಎಲ್ಲಿಲ್ಲದ ಸಂಭ್ರಮ. ಹಬ್ಬ ಹರಿದಿನಗಳಲ್ಲಿ ನಮ್ಮ ಜನಪದರು ಅನೇಕ ಬಗೆಯ ಕಲೆಗಳನ್ನು ಹುಟ್ಟು ಹಾಕಿ ಅವುಗಳನ್ನು ಪುನರಾವರ್ತಿಸುವುದರ ಮೂಲಕ ಬದುಕಿಸಿಕೊಂಡು ಬಂದಿದ್ದಾರೆ. ಈ ಕಲೆಗಳಲ್ಲಿ ಸಂಕೀರ್ಣ ಮಾಧ್ಯಮದಲ್ಲಿ ರಚನೆಗೊಳ್ಳುವ ಅನೇಕ ಶಿಲ್ಪಗಳನ್ನು ನಾವು ಕಾಣಬಹುದು. ಪ್ರಾತಿನಿಧಿಕವಾಗಿ ಕೆಲವನ್ನು ಹೆಸರಿಸಿ ಅಧ್ಯಯನ ಮಾಡಬಹುದಾಗಿದೆ. ಅ. ಕಾಮಣ್ಣ ಶಿಲ್ಪಗಳು, ಆ. ಬೂದಗಾಮುನ ಶಿಲ್ಪಗಳು, ಇ. ಸಗಣಿಯ ಬೂಧನ ಶಿಲ್ಪಗಳು, ಈ. ಹಟ್ಟಿ ಹಬ್ಬದ ಪಾಂಡವರ ಶಿಲ್ಪಗಳು, ಉ. ತುಳಸಿ ಶಿಲ್ಪಗಳು, ಊ. ಸೀಗಮ್ಮನ ಶಿಲ್ಪಗಳು ಮುಖ್ಯವಾಗುತ್ತವೆ, ಋ. ಉಸುಗಿನ ಶಿವಲಿಂಗ ಶಿಲ್ಪಗಳು.

**ಅ. ಕಾಮಣ್ಣನ ಶಿಲ್ಪಗಳು :** ಭಾರತದ ಬಹುತೇಕ ಎಲ್ಲ ಭಾಗಗಳಲ್ಲೂ ಹೋಳಿ ಹಬ್ಬ ಆಚರಿಸಲ್ಪಡುತ್ತದೆ. ಹೋಳಿ ಹಬ್ಬ ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. [೨೮] ವಸಂತೋತ್ಸವ, ಬಸಂತ ಹಬ್ಬ, ವಸಂತನ ಹಬ್ಬ ಹೀಗೆ ಹಲವಾರು ಹೆಸರುಗಳಿಂದ ಕರೆಯಲ್ಪಡುವ ಈ ಹಬ್ಬಕ್ಕೆ ಪೌರಾಣಿಕ ಹಾಗೂ ಐತಿಹಾಸಿಕ ಪರಂಪರೆಯಿದೆ. ಈ ಹಬ್ಬದಂದು ನಮ್ಮ ಜನಪದರು ಒಬ್ಬರಿಗೊಬ್ಬರು ಬಣ್ಣ ಎರಚಿ, ಹಾಡು ಹೇಳಿ ಸಂತಸ ಪಡುತ್ತಾರೆ. ಹೋಳಿ ಹಬ್ಬವನ್ನು ಉತ್ತರ ಭಾರತದಲ್ಲಿ ಹೋಲೀಕಾ ದಹನವೆಂದು ಕರೆಯುತ್ತಾರೆ. ಕರ್ನಾಟಕದ ಅದರಲ್ಲೂ ಉತ್ತರ ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿಯಂತೂ ಈ ಹಬ್ಬ ವಿಶಿಷ್ಟವಾಗಿ ಆಚರಿಸಲ್ಪಡುತ್ತದೆ.

---

೨೮. ಜನಪದ : ಮಾರ್ಚ -೨೦೦೧ : ಉಮಾಶಂಕರ ಬ. ಹಿರೇಮಠ, ಪುಟ -೨೮

[illegible]

[illegible]

[illegible]

[illegible]

[illegible]

ಪಾಲ್ಗುಣ ಚೈತ್ರ ಪೌರ್ಣಿಮೆಯನ್ನು ಹೋಳಿ ಹುಣ್ಣಿಮೆ ಎಂದೇ ಜನಪದರು ಕರೆಯುತ್ತಾರೆ. ಅಂದು ರಾತ್ರಿ ಊರಿನ ಚೌಕಗಳಲ್ಲಿ, ಜನನಿಭಿಡ ಸ್ಥಳ ಅಥವಾ ಕೂಟಗಳಲ್ಲಿ ಕಾಮ ಮತ್ತು ರತಿಯರ ಶಿಲ್ಪಗಳನ್ನು ಮಾಡಿ ಕುಳ್ಳಿರಿಸಿರುತ್ತಾರೆ. ಶಾಮಿಯಾನ ಹಾಕಿಸಿ ಅದರಲ್ಲಿ ಮಂಚ, ಅದರ ಮೇಲೆ ಕಾಮ ಹಾಗೂ ರತಿಯರ ಶಿಲ್ಪಗಳನ್ನು ಕುಳ್ಳಿರಿಸಲಾಗಿರುತ್ತದೆ. ಈ ಸುಂದರ ಕಾಮ ರತಿ ಶಿಲ್ಪಗಳಿಗೆ ದೃಷ್ಟಿ ತಾಕದಿರಲೆಂದೋ ಅಥವಾ ನಮ್ಮಲ್ಲಿಯ ವಿಕೃತ ಕಾಮದಿಂದ ಮುಕ್ತಿ ಪಡೆಯಲೆಂದೋ ಇನ್ನೊಂದು ಶಿಲ್ಪವನ್ನು ರಚಿಸುವುದಿದೆ. ಅದನ್ನೇ ಬೂದುಗಾಮೆಂದು ಕರೆಯಲಾಗುತ್ತದೆ. ಹುಣ್ಣಿಮೆಯ ರಾತ್ರಿಯೇ ಈ ಬೂದುಗಾಮನನ್ನು ಸುತ್ತಲೂ ಕುರುಳು (ಬೆರಣಿ) ಹಾಗೂ ಕಟ್ಟಿಗೆಗಳನ್ನು ಒಟ್ಟಿ ಸುಟ್ಟು ಹಾಕುತ್ತಾರೆ.

ಈ ಬೂದುಗಾಮನನ್ನು ಸುಟ್ಟು ಆ ಬೆಂಕಿಯನ್ನು ಮನೆಗೆ ತಂದು ಅದರಲ್ಲಿ ಕಡಲೆ ಸುಟ್ಟು ತಿನ್ನುತ್ತಾರೆ. ಅದೇ ಬೆಂಕಿಯಿಂದ ಒಲೆ ಹೊತ್ತಿಸುತ್ತಾರೆ. ಕೆಲವೆಡೆ ಸುಟ್ಟ ಆ ಬೂದಿಯನ್ನು ರೈತರು ತಂತಮ್ಮ ಹೊಲಗಳಿಗೆ ಒಯ್ದು ಚೆಲ್ಲುತ್ತಾರೆ. ಇದರಿಂದ ಬೆಳೆಗಳು ಸಮೃದ್ಧವಾಗಿ ಬೆಳೆಯುತ್ತವೆ ಎಂಬ ನಂಬಿಕೆಯಿದೆ. ಕಾಮನನ್ನು ಸುಟ್ಟ ಮರು ದಿವಸ ಬಣ್ಣ ಆಡುತ್ತಾರೆ. ಅಂದೇ ಹೆಣಗಳ ಸೋಗು ಹಾಕಿ ಆಡುವ ಪದ್ಧತಿ ಅನೇಕ ಊರುಗಳಲ್ಲಿ ಇಂದೂ ಜೀವಂತವಾಗಿದೆ.

ಬೂದಗಾಮನನ್ನು ರಚಿಸಿ ಆಚರಿಸುವ ಪದ್ಧತಿ ಬಾಗಲಕೋಟ ಜಿಲ್ಲೆಯ ಗುಳೇದಗುಡ್ಡ ಮತ್ತಿತರ ಕಡೆಗಳಲ್ಲಿ ವಿಶೇಷವಾಗಿ ಕಾಣಬಹುದು. ಗುಳೇದಗುಡ್ಡದಲ್ಲಿ[೨೯] ಬೃಹತ್ತಾದ ಬೂದಗಾಮನ ಶಿಲ್ಪವನ್ನು ರಚಿಸಿ ಸುಡಲಾಗುತ್ತದೆ. ಹಾಗೇ ಶಿರಗಾಪುರದಲ್ಲಿ[೩೦] ಕಾಮನನ್ನು ವಿಶೇಷ ರೀತಿಯಲ್ಲಿ ರಚನೆ ಮಾಡಿ ಪ್ರತಿ ವರ್ಷವೂ ಆಚರಣೆ ಮಾಡುತ್ತ ಬರಲಾಗಿದೆ. ಪ್ರತಿ ವರ್ಷ ಹೋಳಿ ಹುಣ್ಣಿಮೆಯಿಂದ ಮೂರು ದಿವಸ ಜಾತ್ರೆ ನಡೆಯುತ್ತದೆ. ಈ ಜಾತ್ರೆ ಶಿರಗಾಪುರದ ಕಾಮಣ್ಣನ ಜಾತ್ರೆ ಎಂದೇ ಪ್ರಖ್ಯಾತಿ ಪಡೆದಿದೆ. ಇಲ್ಲಿ ರಂಗಪಂಚಮಿಯ ರಂಗಿನಾಟವನ್ನು ಆಡುತ್ತಾರೆ. ಸಾರ್ವಜನಿಕರೆಲ್ಲ ಸೇರಿ ಹೆಣ್ಣು ಗಂಡೆಂಬ ಬೇಧ ಭಾವವಿಲ್ಲದೆ ಭಾರೀ ವಿಜೃಂಭಣೆಯಿಂದ ಮಧುಮಹೋತ್ಸವವನ್ನು ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಕುಸ್ತಿ, ಬಯಲಾಟ, ನಾಟಕ, ಜಾನಪದ ನೃತ್ಯ, ಕಾಮನ ಹಾಡುಗಳು ಹೀಗೆ ಮನೋರಂಜನಾ ಕಾರ್ಯಕ್ರಮಗಳು ನಡೆಯುತ್ತವೆ. ಜಾತ್ರೆಯಲ್ಲಿ ನಾನಾ ನಮೂನೆಯ ಅಂಗಡಿ, ಮೋಜಿನಾಟಗಳು ನಡೆದಿರುತ್ತವೆ.

ಅಂದು ಊರಿನ ಜನರೆಲ್ಲರೂ ಸೇರಿ ಕಾಮಣ್ಣನನ್ನು ತಯಾರಿಸಿ ಹುಣ್ಣಿಮೆಯ ದಿನ ಬಡಿಗನೋರ್ವನ ಮನೆಗೆ ಹೋಗಿ ಅಲ್ಲಿ ಕಾಣ್ಣನಿಗೆ ಶಿರಧಾರಣೆ ಮಾಡುತ್ತಾರೆ. ಅಲ್ಲಿಂದ ಉತ್ಸವ ಪ್ರಾರಂಭವಾಗುತ್ತದೆ. ನಂತರ ದೊಡ್ಡ ಓಣಿಗಲಲ್ಲಿ, ಬೀದಿಗಳಲ್ಲಿ ಈ ಮದನನ ಶಿಲ್ಪವನ್ನು ಭಾರೀ ಮೆರವಣಿಗೆಯೊಂದಿಗೆ ತಂದು ದೊಡ್ಡ ಹಂದರವನ್ನು ಹಾಕಲಾಗಿರುವಲ್ಲಿ ಈ ಕಾಮಣ್ಣನ ಶಿಲ್ಪವನ್ನು

---

೨೯. ಗುಳೇದಗುಡ್ಡ : ತಾ. ಬಾದಾಮಿ, ಜಿ. ಬಾಗಲಕೋಟ

೩೦. ಶಿರಗಾಪುರ : ತಾ. ಬೈಲಹೊಂಗಲ, ಜಿ. ಬೆಳಗಾವಿ

ಪ್ರತಿಷ್ಠಾಪಿಸುತ್ತಾರೆ. ಅದೇ ದಿವಸ ಊರಿನ ಕೆಲವು ಜನ ಕಾಮಣ್ಣನ ಗಣಿಯನ್ನು (ನೀಟಾಗಿ ಇರುವ ಗಿಡ) ಕಡಿದು ತರುತ್ತಾರೆ. ಕಾಮಣ್ಣನ ಗಣಿ ತರಲು ಬೂರಣಿಕೆ ಗುಡ್ಡಕ್ಕೆ ತೆರಳಿ, ಗಣಿಯನ್ನು ಕಡಿದುಕೊಂಡು ಬರುತ್ತಾರೆ. ಎರಡನೇ ದಿನ ಕಾಮಣ್ಣನಲ್ಲಿ ಬೇಡಿಕೊಂಡವರು, ಹರಕೆ ಹೊತ್ತವರು ತಮ್ಮ ಹರಕೆಗಲನ್ನು ಸಲ್ಲಿಸುತ್ತಾರೆ. ನಂತರ ಈ ಕಾಮನಿಗೆ ರತಿಯ ಭಾವಚಿತ್ರವಿರುವ ಪಟದೊಂದಿಗೆ ಸಾಂಪ್ರದಾಯಿಕವಾಗಿ ವಿವಾಹವನ್ನು ನೆರವೇರಿಸುತ್ತಾರೆ.

**ವಿಸರ್ಜನೆ :** ಮೂರನೇ ದಿವಸ ಮುಂಜಾನೆ ಕಾಮನನ್ನು ಸ್ಮಶಾನಕ್ಕೆ ತರಲಾಗುತ್ತದೆ. ಅಲ್ಲಿ ಹೊಸದಾಗಿ ತಂದ ಗಣಿಯನ್ನು ನಿಲ್ಲಿಸಲಾಗುತ್ತದೆ. ಈ ಸ್ಮಶಾನದಲ್ಲಿ ಕಾಮದಹನಕ್ಕಾಗಿ ಭಾರೀ ಜನ ಸೇರಿರುತ್ತಾರೆ. ಅಲ್ಲಿ ಕಾಮನೊಂದಿಗೆ ರತಿಯನ್ನು ಕುಳ್ಳಿರಿಸಿ ವಿಧಿವತ್ತಾಗಿ ಅಗ್ನಿ ಸ್ಪರ್ಶ ಮಾಡುತ್ತಾರೆ. ಆಗ ಅಲ್ಲಿಯ ಜಾತ್ರೆ ಕೊನೆಗೊಳ್ಳುತ್ತದೆ. ಒಟ್ಟು ಮೂರು ದಿನ ಆಚರಿಸುವ ಈ ಜಾತ್ರೆ ಹೇಗೆ ಪ್ರಾರಂಭವಾಯಿತು? ಏಕೆ ಪ್ರಾರಂಭವಾಯಿತು ? ಎಂಬುದು ತಿಳಿದು ಬರುವುದಿಲ್ಲ. ಸಾಂಪ್ರದಾಯಿಕವಾಗಿ ಜನಪದರು ಈ ಕಾಮನ ಜಾತ್ರೆಯನ್ನು ಪ್ರತಿ ವರ್ಷ ಆಚರಿಸುತ್ತ ಬಂದಿದ್ದಾರೆ. [೩೧]

ಹಿಂದೆ ಒಂದು ಊರಿಗೆ ಒಂದೇ ಕಾಮನ ಶಿಲ್ಪವನ್ನಿಟ್ಟು ಆಚರಿಸುವ ಸಂಪ್ರದಾಯವಿತ್ತು. ಆದರೆ ಈಚೆಗೆ ಒಂದು ಊರಿನಲ್ಲಿ ಹಲವಾರು ಕಾಮನ ಶಿಲ್ಪಗಲನ್ನಿಟ್ಟು ಆಚರಿಸುವುದು ರೂಢಿಗೆ ಬಂದಿದೆ. ಈ ಬಗೆಯ ಕಾಮನ ಶಿಲ್ಪಗಲನ್ನು ಹಲವು ಬಗೆಯಲ್ಲಿ ವಿಂಗಡಿಸಬಹುದು. ❄ ಊರಿನ ಕಾಮ, ❄ ಓಣಿಯ ಕಾಮ, ❄ ಸರಕಾರಿ ಕಾಮ, ❄ ದೈವದ ಕಾಮ, ❄ ಮೋಜಿನ ಕಾಮ, ❄ ಕರೀ ಕಾಮ, ❄ ವೈಯಕ್ತಿಕ ಕಾಮ, ❄ ಮಾದರ ಕಾಮ, ❄ ಬ್ರಾಹ್ಮಣರ ಕಾಮ ಹೀಗೆ ಈ ವಿವಿಧ ಕಾಮಗಳಿಗೆ ಊರಿನ ಕಾಮ ತಂದೆ ಎಂದು ಜನಪದರು ನಂಬುತ್ತಾರೆ.

ಇವುಗಳಲ್ಲಿ ಊರಿನ ಕಾಮಗೂ, ದೈವದ ಕಾಮಗೂ ವ್ಯತ್ಯಾಸವಿಲ್ಲ. ಕೆಲವೆಡೆ ಈ ಕಾಮಗಳಿಗೆ ಗುಡಿಗಳಿವೆ. [೩೨] ಎಂಬುದು ಕುತೂಹಲದ ಸಂಗತಿ.

ಕಾಮನು ಬ್ರಾಹ್ಮಣ ಜಾತಿಯವನಾಗಿದ್ದು, ಆತ ಮಾದರ ಜಾತಿಯವಳಾದ ರತಿದೇವಿಯನ್ನು ಪ್ರೀತಿಸಿದನಂತೆ. ನಂತರ ಆತ ರೋಗದಿಂದ ಸತ್ತನಂತೆ. ಹಾಗಾಗಿ ಈಗಲೂ ಹರಿಜನ ಕೇರಿಯಿಂದಲೇ ಕಾಮನನ್ನು ಸುಡಲು ಬೆಂಕಿ ತರುವುದಿದೆ. [೩೩] ಈ ಹಿನ್ನೆಲೆಯಲ್ಲೇ ಮಾದರ ಕಾಮ, ಬ್ರಾಹ್ಮಣರ ಕಾಮಣ್ಣರೂ ಅಸ್ತಿತ್ವಕ್ಕೆ ಬಂದಿರಬಹುದು.

**ಆ. ಬೂದಗಾಮನ ಶಿಲ್ಪಗಳು :** ಹೋಳಿ ಹುಣ್ಣಿಮೆಯಲ್ಲಿ ಅಗ್ನಿ ಸ್ಪರ್ಶ ಮಾಡಿ ದಹನ

---

೩೧. ಸಂಯುಕ್ತ ಕರ್ನಾಟಕ, ದಿನಪತ್ರಿಕೆ : ಶಿರಗಾಪುರದ ವಸಂತೋತ್ಸವ : ಯು.ಆರ್. ಕುಲಕರ್ಣಿ, ಪುಟ -೩, ದಿನಾಂಕ -೮, ೧೯೯೮
೩೨. ಧಾರವಾಡ ಜಿಲ್ಲೆಯ ನವಲಗುಂದದಲ್ಲಿ ಕಾಮನ ಗುಡಿಯಿದೆ.
೩೩. ವೈ.ಎಫ್. ಸೈದಾಪುರ, ಹೋಳಿಹಬ್ಬ : ಒಂದು ಸಾಸ್ಕೃತಿಕ ಅಧ್ಯಯನ (ಅಪ್ರಕಟಿತ ಕಿರು ಪ್ರಬಂಧ)



ಬೂದಗಾಮನ ಶಿಲ್ಪ ( ಗುಳೇದಗುಡ್ಡ)

ಮಾಡಲಾಗುವ ಕಾಮಣ್ಣ ಶಿಲ್ಪವನ್ನು ಬೂದಗಾಮ ಎಂದೂ ಕರೆಯಲಾಗುತ್ತದೆ. ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ, ಕಲಾದಗಿ ಮತ್ತಿತರ ಕಡೆಗೆ ಬೂದಗಾಮನನ್ನು ವಿಶೇಷವಾಗಿ ತಯಾರಿಸಲಾಗುತ್ತದೆ. ಮಾನವ ಗಾತ್ರದಷ್ಟು ಅಥವಾ ಅದಕ್ಕೂ ಒಂದೆರಡು ಪಟ್ಟು ಇಲ್ಲವೆ ನಾಲ್ಕಾರು ಪಟ್ಟು ಎತ್ತರವಾಗಿ ರಚಿಸಲಾಗಿರುತ್ತದೆ. ಗುಳೇದಗುಡ್ಡದ ಭಾಗದಲ್ಲಿ ಚಿತ್ರಗಾರರು, ಜಿನಗಾರರು, ಬಡಿಗೇರರು ಈ ಶಿಲ್ಪಗಳನ್ನು ರಚಿಸುತ್ತಾರೆ. ಇವುಗಳ ರಚನೆಯಲ್ಲಿ ಊರಲ್ಲಿನ ಕೆಲವರು ಸಹಾಯಕರೂ ಆಗಿರುತ್ತಾರೆ. ಗುಳೇದಗುಡ್ಡದಲ್ಲಿ ರಚಿಸಲಾಗುವ ಬೂದಗಾಮು ಶಿಲ್ಪ ಸುಮಾರು ಹದಿನೈದರಿಂದ ಇಪ್ಪತ್ತು ಎತ್ತರವಾಗಿರುತ್ತದೆ. ಹಾಗೂ ಸುಮಾರು ಹದಿನೈದು ಅಡಿ ಅಗಲವಾಗಿರುತ್ತದೆ. ಕಟ್ಟಿಗೆಯ ಉದ್ದವಾದ ತುಂಡುಗಳಿಂದ ಕೈ ಮತ್ತು ಕಾಲುಗಳನ್ನು ಮಾಡಿರುತ್ತಾರೆ. ಎಡಕ್ಕೂ, ಬಲಕ್ಕೂ ಎರಡೂ ಕೈಗಳನ್ನು ನೇರವಾಗಿ ಚಾಚಿದಂತಿದ್ದು, ಎಡಕ್ಕೂ ಬಲಕ್ಕೂ ಅಗಲವಾಗಿ ಚಾಚಿದಂತೆ ರಚಿಸಲಾಗಿರುತ್ತದೆ. ಈ ಕಟ್ಟಿಗೆಯ ಕೈ ಕಾಲು, ದೇಹಗಳಿಗೆ ಕಾಗದ, ಅರಿವೆ, ನಾರು, ಚಿಂದಿ ಮುಂತಾದವುಗಳಿಂದ ಸುತ್ತಿ ಹೊಲಿದು ಸಿದ್ಧಪಡಿಸಲಾಗಿರುತ್ತದೆ. ಮುಖಕ್ಕೆ ಮಡಕೆ ಇಲ್ಲವೆ ಬಕೇಟು ಇನ್ನಾವುದೋ ವಸ್ತುವನ್ನು ತಲೆಯ ಹಾಗೆ ಕಾಣುವಂತೆ ಬೋರಲಾಗಿ ಸಿಕ್ಕಿಸಿ, ಅದಕ್ಕೆ ಕಣ್ಣು, ಮೂಗು ಬರೆದು ಕೊರಳಲ್ಲಿ ಹೂವಿನ ಹಾರ ಹಾಕಲಾಗಿರುತ್ತದೆ. ಇಂಥ ಶಿಲ್ಪವನ್ನು ಬೀದಿಯೊಂದರ ಅಕ್ಕಪಕ್ಕದ ಕಟ್ಟಡ ಇಲ್ಲವೆ ಕಂಬಗಳನ್ನು ಆಧಾರವಾಗಿಸಿಟ್ಟುಕೊಂಡು ಕಟ್ಟಿ ನಿಲ್ಲಿಸಲಾಗಿರುತ್ತದೆ. ಬಟ್ಟೆಯಿಂದ ಉದ್ದವಾದ ಚೀಲವನ್ನು ಹೊಲಿದು ಅದರಲ್ಲಿ ಚಿಂದಿ ಅರಿವೆ ಇಲ್ಲವೆ ಅರಳೆ ಇತ್ಯಾದಿಗಳನ್ನು ತುಂಬಿ ಹೊಲಿದು ಕಾಮನ ಶಿಲ್ಪಕ್ಕೆ ಶಿಶ್ನವನ್ನು ಮಾಡಿರುತ್ತಾರೆ. ಈ ಬೂದಗಾಮ ಒಂದು ರೀತಿಯಲ್ಲಿ ಶಿಶ್ನವನ್ನು ಪ್ರದರ್ಶಿಸುವಂತೆ ಬೆತ್ತಲೆಗೊಳಿಸಿದ ಅಣಕವಾಗಿರುತ್ತದೆ. ಅನಂತರ ಊರವರೆಲ್ಲರೂ ಕೇಕೆ ಹಾಕಿ ಶಿಲ್ಪಕ್ಕೆ ಅಗ್ನಿಸ್ಪರ್ಶ ಮಾಡಿ ದಹನ ಮಾಡುತ್ತಾರೆ.

ದೇವಿನಹಾಳ[೩೪]ದಲ್ಲಿ ಹೋಳಿಯನ್ನು ವಿಶಿಷ್ಟ ರೀತಿಯಲ್ಲಿ ಆಚರಿಸುತ್ತಾರೆ. ಕಾಮದಹನದ ದಿವಸ ಕಾಮ ಹಾಗೂ ರತಿಯ ಶಿಲ್ಪಗಳನ್ನು ವಿಶಿಷ್ಟವಾಗಿ ರಚಿಸಿರುತ್ತಾರೆ. ಬಂಡಿಯೊಂದನ್ನು (ಚಕ್ಕಡಿ) ಹುಲ್ಲಿನಿಂದ ಆವರಿಸಿ ಆನೆಯಂತೆ ರಚಿಸಲಾಗುತ್ತದೆ. ಈ ಹುಲ್ಲಿನ ಆನೆಯ ಮೇಲೆ ಅಂಬಾರಿ ನಿರ್ಮಿಸುತ್ತಾರೆ. ಈ ಅಂಬಾರಿಯಲ್ಲಿ ಹುಲ್ಲಿನಿಂದಲೇ ನಿರ್ಮಿಸಲಾದ ಕಾಮಣ್ಣನ ಶಿಲ್ಪವನ್ನು ಪ್ರತಿಷ್ಠಾಪಿಸುತ್ತಾರೆ. ಕೋಟು, ಹ್ಯಾಟು, ಹೂವಿನ ಹಾರ ಹಾಕಿ, ಶೃಂಗಾರ ಮಾಡಿರುತ್ತಾರೆ. ಇದೇ ರೀತಿಯಲ್ಲಿ ಇನ್ನೊಂದು ಬಂಡಿಯನ್ನೂ ಶೃಂಗರಿಸಿ ಅದರಲ್ಲಿ ಭೀಮಣ್ಣನ ಮೂರ್ತಿಶಿಲ್ಪವನ್ನು ಹುಲ್ಲಿನಿಂದಲೇ ರಚಿಸಿ ಕೂಡ್ರಿಸಿರುತ್ತಾರೆ. ಹೀಗೆ ರಚಿಸಲಾದ ಬೃಹತ್ ಗಾತ್ರದ ಶಿಲ್ಪಗಳ ಸಮ್ಮುಖದಲ್ಲಿ ಊರವರೆಲ್ಲ ಸೇರಿ ರಾತ್ರಯಿಡೀ ಹಾಡು, ಕೋಲಾಟಗಳನ್ನು ಪ್ರದರ್ಶಿಸುತ್ತಾರೆ. ಅನಂತರ ಊರ ಗೌಡರಿಂದ [೩೫] ನಸುಗಿನ ಜಾವದಲ್ಲಿ ಕಾಮಣ್ಣ ಕುಳಿತ ಕುಳ್ಳಿನ ರಾಶಿಗೆ ಅಗ್ನಿಸ್ಪರ್ಶ ಮಾಡಿಸಲಾಗುತ್ತದೆ.

---

೩೪. ದೇವಿನಹಾಳ : ತಾ. ಜಿ. ಬಾಗಲಕೋಟ

೩೫. ಸಂಯುಕ್ತ ಕರ್ನಾಟಕ : ಪುಟ -೨, ೨೧-೩-೧೯೯೯

[illegible]

ಕುಳ್ಳು, ಕಟ್ಟಿಗೆಗಳನ್ನು ಒಟ್ಟಿ ಸುಟ್ಟುಬಿಡಲಾಗುವ ಈ ಕಾಮನ ಶಿಲ್ಪವನ್ನು ವೈವಿಧ್ಯಮಯವಾಗಿ ರಚಿಸಲಾಗಿರುತ್ತದೆ. ದೊಡ್ಡ ಕೋಲನ್ನು ನಿಲ್ಲಿಸಿ ಹುಲ್ಲು, ಹರಿದ ಅರಿವೆ, ಇತ್ಯಾದಿಗಳನ್ನು ಕಟ್ಟಿ ಬಟ್ಟೆ ತೊಡಿಸಿರುತ್ತಾರೆ. ಕೆರೂರ [೩೬] ಗ್ರಾಮದಲ್ಲಿ ಕಾಮಣ್ಣನನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಇಲ್ಲಿ ಹುಬ್ಬಳ್ಳಿಯಿಂದ ಕಾಮಣ್ಣನ ಶಿಲ್ಪವನ್ನು ಖರೀದಿಸಿ ತರಲಾಗುತ್ತದೆ. ಈ ಶಿಲ್ಪವು ಕಟ್ಟಿಗೆ ಇಲ್ಲವೆ ಸಗಣಿ, ಸುಣ್ಣ, ಕಿಟ್ಟ ಇಂತಹ ಮಿಶ್ರ ಮಾಧ್ಯಮಗಳಿಂದ ರಚಿಸಲ್ಪಟ್ಟದ್ದಾಗಿರುತ್ತದೆ. ಇದರ ಮೇಲೆ ವರ್ಣದಿಂದ ಅಲಂಕಾರ ಮಾಡಿರುತ್ತಾರೆ. ಇನ್ನೂ ವಿಶೇಷವೆಂದರೆ, ಕಾಮಣ್ಣನ ಆಚರಣೆಯ ಸಂದರ್ಭದಲ್ಲಿ ಅಶ್ಲೀಲ ಹಾಡುಗಳನ್ನು ಹೇಳುವುದು ಉತ್ತರ ಕರ್ನಾಟಕದಲ್ಲಿ ತೀರ ಸಾಮಾನ್ಯ. ಆದರೆ ಕೆರೂರಲ್ಲಿ ಅಶ್ಲೀಲವಲ್ಲದ ಸಾಂಪ್ರದಾಯಿಕ ಹಾಡು, ಆಚರಣೆ, ಕುಣಿತಗಳಿವೆ. [೩೭] ಎಂಬುದು ಆಶ್ಚರ್ಯದ ಸಂಗತಿ.

ಕಾಮ ಅಥವಾ ಕಾಮದೇವನ ಪೂಜೆ ಹಲವು ನಾಗರೀಕತೆಗಳಲ್ಲಿ ಪ್ರಾಚೀನ ಕಾಲದಿಂದಲೂ ಪ್ರಚಲಿತದಲ್ಲಿದೆ. ಆದರೆ ಕಾಮನ ಶಿಲ್ಪದಹನ ಹಿಂದೂ ಧರ್ಮವನ್ನು ಹೊರತುಪಡಿಸಿ ಬೇರಾವ ನಾಗರೀಕತೆಯಲ್ಲೂ ಹಬ್ಬವಾಗಿ ಆಚರಿಸಲ್ಪಡುವುದಿಲ್ಲ.[೩೮] ಹಿಂದೂಧರ್ಮದಲ್ಲಿ ಕಾಮ ನಾಲ್ಕು ಪುರುಷಾರ್ಥಗಳಲ್ಲಿ ಒಂದು ಎಂದು ಸಾರಲಾಗಿದೆ. ಕಾಮವು ಬೆಂಕಿಯಂತೆ. ಅದು ಬೆಂಕಿಯಾಗದೇ ಬೆಳಕಾಗಿರಬೇಕು. ಲೈಂಗಿಕ ಚಟುವಟಿಕೆ ಸ್ವೇಚ್ಛೆಯಾಗಬಾರದು. ತನ್ನ ಸಂಪೂರ್ಣ ಶಕ್ತಿಯನ್ನು ಸ್ವಾದೀನ ಮಾಡಿಕೊಳ್ಳಲು ಬುದ್ಧಿಶಕ್ತಿಗೆ ಲೈಂಗಿಕ ಗ್ರಂಥಿಗಳ ಪ್ರಚೋಧನೆ, ಲೈಂಗಿಕ ಹಸಿವಿನ ತಾತ್ಕಾಲಿಕ ದಮನ ಎರಡೂ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲೇ ಕಾಮದೇವನ ಪೂಜೆ ಹಲವು ನಾಗರೀಕತೆಗಳಲ್ಲಿ ಕಾಣುತ್ತದೆ. ಆದರೆ ಕಾಮದಹನ ಹಿಂದೂ ಸಂಸ್ಕೃತಿಯನ್ನು ಹೊರತುಪಡಿಸಿ ಬೇರಾವ ಸಂಸ್ಕೃತಿಯಲ್ಲೂ ಕಾಣಬರುವುದಿಲ್ಲ.

ನಮ್ಮ ಪುರಾಣಗಳಲ್ಲಿ ಬರುವ ಕಾಮ ದಹನದ ಕತೆ ಜನಪದ ಹಬ್ಬವಾಗಿಯೂ ಆಚರಣೆಗೆ ಬಂದುದು ಸ್ವಾರಸ್ಯಕರವಾಗಿದೆ. ಹಣೆಗಣ್ಣಿನಿಂದ ಮನ್ಮಥನನ್ನು ಸುಟ್ಟ ಶಿವನು ಪಾರ್ವತಿಯ ಪ್ರೇಮಕ್ಕೆ, ಸಂತೋಷದಿಂದ ವಶನಾದನೆಂಬ ಕಥೆ ಹಿಂದೂಗಳಲ್ಲಿ ಜನಜನಿತ. ನಮ್ಮ ಜನಪದ ಸಾಹಿತ್ಯದಲ್ಲೂ ಹಾಗೂ ಹೋಳಿ ಹುಣ್ಣಿಮೆಯ ಸಂದರ್ಭದಲ್ಲೂ ಇದನ್ನು ಸಾದರ ಪಡಿಸಿಸಲಾಗುತ್ತದೆ.

ಜೀವನವನ್ನೇ ಸುಡುವ ಉರಿಯಾಗಬಲ್ಲ ಕಾಮವನ್ನು ಪ್ರೇಮ ಮಾರ್ಪಡಿಸುವ ಪ್ರಯತ್ನ ಸಾವಿರಾರು ವರ್ಷಗಳಿಂದ ಜಗತ್ತಿನ ನಾಗರೀಕತೆಗಳಲ್ಲಿ ನಡೆದಿದೆ. ಕಾಮಾಸಕ್ತಿ ಅದೆಷ್ಟು ಪ್ರಭಲವೆಂದು ಕಂಡಾಗಿನಿಂದ ನಾಗರಿಕ ಮನುಷ್ಯ ಅದರ ವಿಷಯದಲ್ಲಿ ಹೆದರಿದ್ದಾನೆ, ಬೆರಗಾಗಿದ್ದಾನೆ. ಪ್ರಕೃತಿಯ ವಿಕೋಪ-ಪ್ರಕೋಪಗಳಿಗೆ ಹೆದರಿ ಅವುಗಳನ್ನು ದೇವರನ್ನಾಗಿ ಪೂಜಿಸಿದಂತೆ, ಕಾಮವನ್ನೂ ದೇವರನ್ನಾಗಿಸಿ

---

೩೬. ಕೆರೂರು : ತಾ. ಬಾದಾಮಿ, ಜಿ. ಬಾಗಲಕೋಟ

೩೭. ವಕ್ತೃ : ಡಾ. ಯಾದಪ್ಪ ಪರದೇಸಿ, ಸಾ. ಕೆರೂರು

೩೮. ಸಂಯುಕ್ತ ಕರ್ನಾಟಕ ದಿನಪತ್ರಿಕೆ : ಸಾಪ್ತಾಹಿಕ ಸೌರಭ, ೪-೩-೨೦೦೧, ಕಾಮ ದಹನ ನಡೆದು ಬಂದ ದಾರಿ, ಎಂ.ವಿ. ಶರ್ಮಾ, ತದ್ದಲಸೆ, ಪುಟ -೧

ಪೂಜಿಸಿದನು. ಈ ಮನುಷ್ಯ ಪ್ರಕೃತಿಯು ಲೈಂಗಿಕಾಸಕ್ತಿಗೆ ಬಹಳ ಮಹತ್ವವನ್ನು ನೀಡಿದೆ. ಏಕೆಂದರೆ ಮಾನವ ಸಂತತಿ ಅಳಿಯದೇ ಶಾಶ್ವತವಾಗಿ ಮುಂದುವರಿಯಲು ಇದೊಂದೇ ಸಾಧನೋಪಾಯವಾಗಿದೆ. ಹೀಗಾಗಿ ಸಂಭೋಗ, ಸಂತಾನಗಳು ಮಹತ್ವ ಪಡೆದವು.

ಕಾಮನ ಹಬ್ಬದ ಕಾಲದಲ್ಲಿ ಹಲವು ಕಡೆ ಅಶ್ಲೀಲ ಹಾಡುಗಳನ್ನು ಹಾಡುವುದು ಸಾಮಾನ್ಯ. ಪ್ರಾಚೀನ ಗ್ರೀಸಿನಲ್ಲಿ ಡೈಯೋನೀಸಿಸ್ ದೇವತೆಯ ಹಬ್ಬದ ಕಾಲದಲ್ಲಿ ಬೃಹದಾಕಾರದ ಶಿಶ್ನಗಳನ್ನು ರಚಿಸಿ ಮೆರವಣಿಗೆ ಮಾಡುತ್ತಿದ್ದರಂತೆ. ಕೆಲವರು ದೊಡ್ಡ ದೊಡ್ಡ ಕೃತಕ ಶಿಶ್ನಗಳನ್ನು ರಚಿಸಿ ಸೊಂಟಕ್ಕೆ ಕಟ್ಟಿಕೊಂಡು ಪ್ರದರ್ಶಿಸುತ್ತಿದ್ದರಂತೆ. [೩೯]

**ನಂಬಿಕೆಗಳು :** ಕಾಮನ ಶಿಲ್ಪವನ್ನು ಸುಟ್ಟ ಬೂದಿಯು ಯಾವ ದಿಕ್ಕಿನಲ್ಲಿ ಹಾರುವುದೋ ಆ ದಿಕ್ಕಿನಲ್ಲಿ ಮಳೆ ಸಮೃದ್ಧಿಯಾಗುವದೆಂತಲೂ, ಕಾಮ ಸುಟ್ಟ ಮರುದಿನವೇ ಮಳೆಯಾದಲ್ಲಿ ಬೂದಿಯು ಭೂಮಿಯೊಳಗೆ ಬೆರೆತು ರೋಗ-ರುಜಿನಾದಿಗಳು ಬಾರಲಾರವೆಂತಲೂ, ಬೆಳೆಗಳು ಸಮೃದ್ಧಿಯಿಂದ ಇರುವುವೆಂತಲೂ, ಜನರು ಸುಖದಿಂದ ಇರುವುರೆಂತಲೂ ಭಾವಿಸಲಾಗುತ್ತದೆ. ಕೆಲವೆಡೆ ರೈತರು ಕಾಮನನ್ನು ಸುಟ್ಟ ಬೂದಿಯನ್ನು ತಂದು ಬೀಜಗಳೊಂದಿಗೆ ಸೇರಿಸುವುದಲ್ಲದೆ, ಕಾಮನ ಕರಿಯನ್ನು ತಮ್ಮ ಉಗ್ರಾಣದಲ್ಲಿ ಕಾಳುಗಳ ಜೊತೆಗೆ ಕೂಡಿಸುವರು. ಇದರಿಂದ ಕಾಳುಗಳು ಸಮೃದ್ಧಿಯಾಗುವವೆಂದು ಬಗೆವರು.

ಊರಿಗೆ ಯಾವುದೇ ಹಾವಳಿಯಾಗಬಾರದೆಂಬ ಆಶಯ ಈ ಹೋಳಿ ಹಬ್ಬದ ಆಚರಣೆಯ ಹಿಂದೆ ಇದೆ. ಬಣ್ಣವನ್ನು ಪರಸ್ಪರರಿಗೆ ಎರಚಿ ಸಂತಸಪಡುವುದು, ಬಗೆ ಬಗೆಯ ಕಾಮನ ಶಿಲ್ಪಗಳನ್ನು ಮಾಡಿ ಸುಡುವುದು ಇತ್ಯಾದಿಗಳು ಜರುಗುತ್ತವೆ. ಆದರೆ ಈ ಆಚರಣೆಗಳಿಗಿಂತ, ಅದರ ಅರ್ಥ, ಅರಿವು ಆಗಬೇಕಾದುದು ಇಂದಿನ ಅಗತ್ಯವಾಗಿದೆ.

**ಇ. ಸಗಣಿಯ ಬೂಧನ ಶಿಲ್ಪಗಳು :** ಸಗಣಿಯಿಂದ ಮಾಡಲಾಗುವ ಈ ಬೂಧ ಶಿಲ್ಪವನ್ನು ಬೂದ, ಬೂದಯ್ಯ, ಬೂದಪ್ಪ, ಬುದ್ದಪ್ಪ ಎಂದು ಕರೆಯುತ್ತಾರೆ. ಬುದ್ದಪ್ಪ ಎಂದರೆ ಬುದ್ಧಿವಂತ ಎಂದು ಅರ್ಥವಿದೆ. [೪೦] ಭೂತವೇ ಬೂದ, ಬೂದುಗ ಆಗಿರಬೇಕೆಂದೂ ಹೇಳಲಾಗುತ್ತದೆ. [೪೧]

**ರಚನೆ :** ಸಾಮಾನ್ಯವಾಗಿ ಈ ಬೂಧನನ್ನು ಉತ್ತರಕರ್ನಾಟಕದಲ್ಲಿ ರಾಶಿಯ ಕಣದಲ್ಲಿ ಈ ಬೂಧನನ್ನು ಸಗಣಿಯಿಂದ ಮಾಡಲಾಗುತ್ತದೆ. ಸಂಜೆಗೆ ಆರಂಭವಾದ ಹಂತಿಯು ಬೆಳಗಿನ ಜಾವ ಮುಗಿಯುವ ಹೊತ್ತಿನಲ್ಲಿ ಈ ಶಿಲ್ಪವು ರಚನೆಗೊಳ್ಳುತ್ತದೆ. ಹಂತಿಯು ಮುಗಿಯುತ್ತ ಬಂದಂತೆ ಕೊನೆ

---

೩೯. ಸಂಯುಕ್ತ ಕರ್ನಾಟಕ ದಿನಪತ್ರಿಕೆ: ಸಾಪ್ತಾಹಿಕ ಸೌರಭ, ೪-೩-೨೦೦೧, ಕಾಮ ದಹನ ನಡೆದು ಬಂದ ದಾರಿ, ಎಂ.ವಿ. ಶರ್ಮಾ, ತದ್ದಲಸೆ, ಪುಟ -೧

೪೦. ಡಾ. ವೀರೇಶ ಬಡಿಗೇರ್ : ರಾಶಿ ಬುತ್ತಿ, ಪುಟ -೨೩

೪೧. ಡಾ. ಎ.ವಿ. ಪಾಟೀಲ: ಉತ್ತರ ಕರ್ನಾಟಕದ ಜಾನಪದ ವಿಧಿಕ್ರಿಯೆಗಳು (ಅಪ್ರಕಟಿತ), ಪುಟ -೧೫೧

ಎತ್ತಿನ ಸಗಣಿಯನ್ನು ಹಿಡಿದುಕೊಂಡು ಈ ಶಿಲ್ಪವನ್ನು ತಯಾರಿಸುತ್ತಾರೆ. ಈ ಶಿಲ್ಪದ ರಚನೆ ಅಂಥದೇನೂ ಕಲಾ ಕೌಶಲ್ಯದಿಂದ ಕೂಡಿದುದಲ್ಲ. ಸ್ವಲ್ಪ ಬೂದಿಯನ್ನು ಈ ಸಗಣಿಯೊಂದಿಗೆ ಬೆರೆಸಿ, ಹದ ಮಾಡಿಕೊಂಡು, ಗೋಲಾಕಾರದ, ಉದ್ದವಾದ (ಲಿಂಗಾಕಾರ) ಉಂಡೆಯಂತೆ ತಯಾರಿಸಲಾಗಿರುತ್ತದೆ. ತಳದಲ್ಲಿ ಅಗಲವಾಗಿದ್ದು, ಮೇಲಕ್ಕೆ ಹೋದಂತೆ ಗೋಪುರದಂತೆ ಸಣ್ಣದಾಗುತ್ತ ಹೋಗುತ್ತದೆ. ಇದರ ಎತ್ತರ ಸುಮಾರು ನಾಲ್ಕರಿಂದ ಆರು ಅಂಗುಲದವರೆಗೂ ಇರುತ್ತದೆ. ಇದರ ತುದಿಯಲ್ಲಿ ಹಂತಿ ಕಟ್ಟಿದ ಎತ್ತುಗಳ ಬಾಲದಿಂದ ಎರಡು ಜವೆಗಳನ್ನು ಚುಚ್ಚಲಾಗಿರುತ್ತದೆ. ಕುಂಕುಮ, ವಿಭೂತಿ ಹಚ್ಚಿ ಪೂಜೆ ಮಾಡಲಾಗಿರುತ್ತದೆ. ಈ ಬೂದ ಶಿಲ್ಪವು ರಾಶಿ ಮುಗಿಯುವವರೆಗೂ ಕಣದಲ್ಲಿ ಇದ್ದು ಮಹತ್ವದ ಪಾತ್ರ ವಹಿಸುತ್ತದೆ. ಬೂದ ತಯಾರಾದ ಮೇಲೆ ಬೂದ ಮತ್ತು ರಾಗೋಲನ್ನು ಒಬ್ಬನು ಹಿಡಿದುಕೊಂಡರೆ ಇನ್ನೊಬ್ಬನು ಸೆಳ್ಳು (ಉತ್ತರಾಣಿ ಕಡ್ಡಿಯಿಂದ ಮಾಡಿದ ಬರಿಗೆ) ಮತ್ತು ನೀರನ್ನು ಹಿಡಿದುಕೊಂಡು ಕಣದ ಸುತ್ತ ಹುಲ್ಲುಲಿಗೋ ಎನ್ನುತ್ತ ಐದು ಸುತ್ತು ಸುತ್ತುವರು. ಹೀಗೆ ಸುತ್ತುವಾಗ ಸೆಳ್ಳು ಮತ್ತು ನೀರು ಹಾಕುತ್ತ ಹುಲ್ಲುಲಿಗೋ ಅನ್ನುವಾಗ ಅದನ್ನು ಕಣದ ಸುತ್ತ ಸಿಂಪಡಿಸುತ್ತ ಹೋಗುತ್ತಾರೆ. ರಾಶಿ ಮುಗಿಯುವವರೆಗೆ ಈ ಬೂಧಶಿಲ್ಪ ಕಣದಲ್ಲಿಯೇ ಪ್ರತಿಷ್ಠಾಪಿತವಾಗಿರುತ್ತದೆ.[೪೨] ಈ ಶಿಲ್ಪವನ್ನು ಹಿಂದೆ ವಿನಾಯಕ, ಬೆನಕ ಎಂದೂ ಕರೆಯುತ್ತಿದ್ದರು. ರಾಶಿ ತುಂಬುವ ಸಂದರ್ಭದಲ್ಲಿ ಈ ಶಿಲ್ಪವನ್ನು ರಚಿಸಿ, ಪೂಜೆ ಮಾಡಿ, ರಾಶಿ ಹುಲುಸಾಗಲಿ ಎಂದು ಪ್ರಾರ್ಥಿಸುವ ಪದ್ಧತಿಯಿದೆ. ಆಕಾರ, ಆರಾಧರಣೆ, ಉತ್ತರ ಕರ್ನಾಟಕ ಮತ್ತು ಮಲೆನಾಡು ಪ್ರದೇಶಗಳಲ್ಲಿ ಒಂದೇ ಆಗಿದೆ. ಆದರೆ ಹೆಸರು ಮಾತ್ರ ಬೇರೆಯಾಗಿ ಕಂಡುಬರುತ್ತದೆ. ಈ ಎರಡೂ ಪ್ರದೇಶಗಳಲ್ಲೂ ಬೂಧ ಹುಲುಸಿನ ದೇವತೆಯಾಗಿಯೇ ಗುರುತಿಸಲ್ಪಡುವ ವಿಶಿಷ್ಠ ಶಿಲ್ಪವಾಗಿರುತ್ತದೆ.

ಈ ಬೂದ ಅಲ್ಲಮನ ಅವತಾರವೆಂದು ಬಿ.ಎಸ್. ಗದ್ದಿಗಿಮಠರು[೪೩] ಹೇಳುತ್ತಾರೆ. ಅವರ ಪ್ರಕಾರ ಅಲ್ಲಮ ಪ್ರಭುದೇವರೇ ಕಣದಲ್ಲಿ ಪೂಜೆಗೊಳ್ಳುವ ಬುದ್ಧಿವಂತ ಲಿಂಗ, ಈಗ ಅದು ಬೂಧ ಎಂದು ಕಣದಲ್ಲಿ ಕರೆಯಲ್ಪಡುತ್ತದೆ. ಬುದ್ಧಿವಂತಯ್ಯ, ಬುದ್ದಯ್ಯ ಎಂಬ ಹೆಸರುಗಳು ವೀರಶೈವರಲ್ಲಿ ಹೆಚ್ಚಾಗಿ ಈಗಲೂ ಕಂಡು ಬರುವವು. ಮಹಾ ಜ್ಞಾನಿಯಾದ ಅಲ್ಲಮ ಪ್ರಭುದೇವನಿಗೆ ವೀರಶೈವರಲ್ಲಿ ಮೊದಲನೆಯ ಸ್ಥಾನವುಂಟು. ಒಕ್ಕಲಿಗರಾದ ವೀರಶೈವರೂ ತಮ್ಮ ಕಾರ್ಯದಲ್ಲಿ ಅಲ್ಲಮ ಪ್ರಭುದೇವಗೆ ಪ್ರಮುಖ ಸ್ಥಾನವನ್ನಿತ್ತು, ಕಣದಲ್ಲಿ ಬುದ್ಧಿವಂತ ಲಿಂಗನೆಂದು ಪೂಜೆ ಮಾಡಿದ್ದಾರೆ. ಈ ಬುದ್ಧಿವಂತ ಲಿಂಗವೇ, ಬೆಳವಲದ ಎರೆಯಲ್ಲಿ ಸುಗ್ಗಿಯ ಲಿಂಗಯ್ಯನಾಗಿದ್ದಾನೆ. ಬೆಳವಲದ ಮಸಾರಿಯಲ್ಲಿ ಒಕ್ಕಲಿಗರು ಈ ಬುದ್ಧಿವಂತ ಲಿಂಗನಿಗೆ ಬುದ್ಧಯ್ಯನೆಂದೂ, ಕಣದಲ್ಲಿ ಪೂಜಿಸುವರು. ಇದೇ ಹೆಸರು ಕಣದಲ್ಲಿ ಈಗ ಬೂದನೆಂದು ಉಳಿದಿದೆ ಎನ್ನುತ್ತಾರೆ.

---

೪೨. ಡಾ. ಎಂ.ಎಂ. ಕಲಬುರ್ಗಿ : ಮಾರ್ಗ, ಸಂಪುಟ -೨, ಪುಟ -೪೧೩

೪೩. ಡಾ. ಬಿ.ಎಸ್. ಗದ್ದಿಗೆಮಠ : ಕನ್ನಡ ಜನಪದ ಗೀತೆಗಳು, ಪುಟ -೧೪

ಬುದ್ಧಯ್ಯ ಬೂದಯ್ಯ, ಎದ್ದು ತೂರಿದ ಮೆದವ
ಬಿದ್ದ ರಾಸೆಲ್ಲ ವಚನಗಳೊ । ಅಲ್ಲಮಗ
ಹುದ್ದೆ ಕಲ್ಯಾಣ ಗದ್ದುಗೆಯೊ ॥

ಇಲ್ಲಿ ಬುದ್ಧಯ್ಯನೇ ಬೂದಯ್ಯನು. ಅವನೆ ಅಲ್ಲಮನು. ಕಲ್ಯಾಣ ಗದ್ದಿಗೆಯೆಂಬುದು ಶಿವಾನುಭವ ಮಂಟಪದ ಸಿಂಹಾಸನ ವನ್ನು ಸೂಚಿಸುವುದು. ಈ ಸಿಂಹಾಸನ ಹುದ್ದೆಯನ್ನು ಪಡೆದವನೇ ಅಲಮಪ್ರಭುದೇವರೆಂಬ ಐತಿಹಾಸಿಕ ಸಂಗತಿಯನ್ನು ಈ ಪದ್ಯ ಒಳಗೊಂಡಿದೆಯೆಂದು ಉದಾಹರಣೆ ನೀಡಿದ್ದಾರೆ.

ಸುಗ್ಗಿಯ ಲಿಂಗಯ್ಯ, ಸಗ್ಗದ ದೊರೆಯಾದ
ಬಗ್ಗಿ ಶಿವಗಣ ಕೈಮುಗಿದೊ । ಒಕ್ಕಲಿಗ
ಉಗ್ಗಡಿಸಿ ರಾಸಿ- ಒಕ್ಯಾನೊ ॥

ಎಂಬ ಪದ್ಯದಲ್ಲಿ ಒಕ್ಕಲಿಗರು ಅಲ್ಲಮ ಪ್ರಭುದೇವರನ್ನು ತಮ್ಮ ಸುಗ್ಗಿಯ ಕಣದಲ್ಲಿ ಬುದ್ಧಿವಂತ ಲಿಂಗನೆಂದು (ಬೂಧ) ತಿಳಿದು ಪೂಜಿಸುವರೆಂದು ಹೇಳುತ್ತಾರೆ. ಈ ಬೂದ ಅಲ್ಲಮನ ಅವತಾರವೆಂಬುದನ್ನು ಒಪ್ಪದ ಡಾ. ಎಂ.ಎಂ. ಕಲಬುರ್ಗಿಯವರು ಬೂದಗೂ ಮತ್ತು ಅಲ್ಲಮಗೂ ಸಂಬಂಧವಿರಲಾರದು ಎನ್ನುತ್ತಾರೆ.[೪೪] ಅವರ ಪ್ರಕಾರ ಬೂದ ಒಂದು ತಾಮಸ ದೇವರು. ಅದೇನೇ ಇದ್ದರೂ ಬೂದ ಇಂದು ಮಾಯವಾಗಿದ್ದಾನೆ.

**ನಂಬಿಕೆ :** ರಾಶಿಯ ಕಣದಲ್ಲಿ ಹುಟ್ಟಿಕೊಳ್ಳುವ ಈ ಸಗಣಿಯ ತೀರ ತಾತ್ಕಾಲಿಕವಾಗಿ ಪೂಜೆಗೊಳ್ಳುವ ಒಂದು ದೇವತೆ. ರಾಶಿಯ ಸಮೃದ್ಧವಾಗಿ ಬೆಳೆಯಲಿ ಎಂಬುದರ ಸಂಕೇತವಾಗಿ ರೈತರು ಈ ಶಿಲ್ಪವನ್ನು ರಚಿಸಿ ಪೂಜಿಸುತ್ತಾರೆಂಬುದಾಗಿ ಜನಪದರ ಈಗಿನ ನಂಬಿಕೆ. ಹೀಗಾಗಿ ಬೂದ ಒಂದು ಸಮೃದ್ಧಿಯ ಸಂಕೇತವೆಂದು ಹೇಳಬಹುದು.

**ವಿಸರ್ಜನೆ :** ರಾಶಿಯು ಮುಗಿದ ಮೇಲೆ ಈ ಶಿಲ್ಪವನ್ನು ಹೊಲದಲ್ಲಿರುವ ಬನ್ನಿಯ ಮರದ ಬುಡದಲ್ಲಿ ಇಲ್ಲವೆ, ಕಟ್ಟೆ, ಒಡ್ಡುಗಳ ಮೇಲೆ ಇಡುತ್ತಾರೆ. ಕ್ರಮೇಣ ಅದು ವಾತಾವರಣದಲ್ಲಿ ಕರಗಿ ಮಣ್ಣಲ್ಲಿ ಮಣ್ಣಾಗಿ ಹೋಗುತ್ತದೆ.

### ಈ. ಹಟ್ಟಿ ಹಬ್ಬದ ಪಾಂಡವರ ಶಿಲ್ಪಗಳು

ದೀಪಾವಳಿಯನ್ನು ಉತ್ತರ ಕರ್ನಾಟಕದ ಕೆಲವೆಡೆ ಹಟ್ಟಿ ಹಬ್ಬವೆಂದು ಕರೆಯುತ್ತಾರೆ. ಹೆಂಗಸರು ಈ ಹಬ್ಬವನ್ನು ನೀರು ತುಂಬುವ ಹಬ್ಬವೆಂದೂ ಕರೆಯುವುದು ರೂಢಿಯಲ್ಲಿದೆ. ಜನಪದರಿಗೆ ಈ ಹಟ್ಟಿ ಹಬ್ಬದ ಸಂಪ್ರದಾಯಿಕ ಆಚರಣೆ ತುಂಬ ಮಹತ್ವದ್ದಾಗಿದೆ. ಈ ಹಬ್ಬದ ಸಂದರ್ಭದಲ್ಲಿ ಹೆಂಗಸರು ದನಗಳ

---

೪೪. ಡಾ. ಬಿ.ಎಸ್. ಗದ್ದಿಗೆಮಠ : ಕನ್ನಡ ಜನಪದ ಗೀತೆಗಳು, ಪುಟ -೧೪

ಸಗಣಿಯಿಂದ ಶಿಲ್ಪಗಳನ್ನು ಮಾಡಿ, ಪೂಜಿಸಿ, ಆಚರಿಸುವ ಸಂಪ್ರದಾಯ ಹಿಂದಿನಿಂದ ನಡೆದು ಬಂದ ಕ್ರಿಯೆಯಾಗಿದೆ. ಈ ಶಿಲ್ಪಗಳನ್ನು ಪಾಂಡವರು ಎಂದೇ ಹೇಳಲಾಗುತ್ತದೆ.

**ರಚನೆ :** ಅಶ್ವೀನದ ಚತುರ್ದಸಿಯಿಂದ ಪ್ರಾರಂಭಿಸಿ ಅಮವಾಸ್ಯೆ ಕಾರ್ತಿಕ ಶುದ್ಧ ಪ್ರತಿಪದೆಯವರೆಗೆ ಅಂದರೆ ಒಟ್ಟು ಮೂರು ದಿವಸ ಪಾಂಡವರ ಶಿಲ್ಪಗಳನ್ನು ಮಾಡಿ ಪೂಜಿಸುತ್ತಾರೆ. ಸಗಣಿಯಿಂದ ಗುಪ್ಪೆಯಾಕೃತಿಯಲ್ಲಿ ನೂರಾರು ಶಿಲ್ಪಗಳನ್ನು ಹೆಣ್ಣು ಮಕ್ಕಳು ರಚಿಸುತ್ತಾರೆ. ಅಂದು ಮನೆಯಲ್ಲಿ ಈ ಹಬ್ಬಕ್ಕೆಂದು ಸಗಣಿಯನ್ನು ಮೊದಲೇ ಸಂಗ್ರಹಿಸಿ ಇಟ್ಟುಕೊಳ್ಳಲಾಗಿರುತ್ತದೆ. ಈ ಸಗಣಿಯಿಂದ ಅನೇಕ ತರಹದ ಶಿಲ್ಪಗಳು ಸೃಷ್ಟಿಗೊಳ್ಳುತ್ತವೆ. ಬಾವಿ, ಕೋಟೆ, ಬೀಸುವ ಕಲ್ಲು, ಮನೆ, ಪ್ರಾಣಿ, ಪಕ್ಷಿಗಳು ಆಕಾರ ಪಡೆಯುತ್ತವೆ. ಮನುಷ್ಯರ ಆಕೃತಿಯ ಶಿಲ್ಪಗಳೂ ರೂಪ ತಳೆಯುತ್ತವೆ. ಈ ಶಿಲ್ಪಗಳ ತಲೆಯ ಮೇಲೆ ಉತ್ತರಾಣಿ ಕಡ್ಡಿ, ಅವರೆ ಹೂವು, ಹಾಗೂ ಹೊನ್ನಾವರೆ ಹೂವುಗಳನ್ನು ಇಡುತ್ತಾರೆ. ಮನೆ ಅಥವಾ ಕೊಟ್ಟಿಗೆಯ ಒಂದು ಭಾಗದಲ್ಲಿ ವೃತ್ತಾಕಾರವಾಗಿ ಇಲ್ಲವೆ, ಚೌಕ ಅಥವಾ ಆಯತಾಕಾರವಾಗಿ ಸಗಣಿಯಿಂದ ಸಾರಿಸಿದ ನೆಲದ ಮೇಲೆ ಒಂದು ನೂರ ಒಂದು ಇಂತಹ ಗುಪ್ಪೆಯಾಕೃತಿಯ ಶಿಲ್ಪಗಳನ್ನು ಇಡಲಾಗುತ್ತದೆ. ಇವುಗಳ ಮಧ್ಯೆ ಒಂದು ಸ್ವಲ್ಪ ದೊಡ್ಡದಾದ ಸಗಣಿಯ ಇಂತಹುದೇ ಗುಪ್ಪೆಯಾಕೃತಿಯ ಶಿಲ್ಪವನ್ನು ಮಾಡಿ ಪ್ರತಿಷ್ಠಾಪಿಸಲಾಗುತ್ತದೆ. ಈ ದೊಡ್ಡ ಗುಪ್ಪೆಯಾಕೃತಿಯ ಸಗಣಿ ಶಿಲ್ಪಕ್ಕೆ ಗಾಂಧಾರಿ ಎಂದೂ ಉಳಿದ ನೂರೊಂದು ಶಿಲ್ಪಗಳನ್ನು ಕೌರವರೆಂದೂ, ಇನ್ನುಳಿದವುಗಳು ಪಾಂಡವರೆಂದೂ ಅವುಗಳಲ್ಲಿ ಒಂದು ಶಿಲ್ಪವು ಕರ್ಣನೆಂದೂ ಹೇಳುತ್ತಾರೆ.

ಇನ್ನೂ ಕೆಲವೆಡೆ ನೂರಾರು ಸಣ್ಣ ಶಿಲ್ಪಗಳ ಮಧ್ಯೆ ಪ್ರತಿಷ್ಠಾಪಿತವಾಗುವ ಶಿಲ್ಪಕ್ಕೆ ಹಟ್ಟೆವ್ವ ಎಂದೂ, ಉಳಿದವುಗಳನ್ನು ಗುರ್ಚಿಗಳೆಂದೂ ಕರೆಯುವರು.[೪೫] ಪ್ರಾದೇಶಿಕವಾಗಿ ಈ ಹಬ್ಬದ ಸಗಣಿ ಶಿಲ್ಪಗಳ ರಚನೆ ಮತ್ತು ಆಚರಣೆಲ್ಲಿ ವೈವಿಧ್ಯತೆಗಳು ಕಂಡು ಬರುತ್ತವೆ. ಈ ಹಟ್ಟೆವ್ವನನ್ನು ಕೆಲವೆಡೆ ಲಕ್ಕವ್ವ ಎಂದೂ ಕರೆಯುವುದು ಇದೆ.

ಈ ಆಚರಣೆಯ ಸಂದರ್ಭದಲ್ಲಿಯೇ ಅಂದು ಪಾಂಡವರ ಹೆಜ್ಜೆಯ ಗುರುತುಗಳು ಎಂದು ಕಾವಿಯ ಬಣ್ಣದ ಮಣ್ಣಿನ ಮೇಲೆ ಸುಣ್ಣದಿಂದ ಹೆಜ್ಜೆಯ ಚಿತ್ರಗಳನ್ನು ಮನೆಯ ಎಲ್ಲ ಕೊಠಡಿಗಳಲ್ಲಿ ಹಾಗೂ ಹಟ್ಟಿಯ ಹೊರಗೆ ಎಲ್ಲೆಲ್ಲೂ ಇಂತಹ ಹೆಜ್ಜೆ ಗುರುತುಗಳನ್ನು ಚಿತ್ರಿಸುತ್ತಾರೆ. ಈ ಮೂರ್ತಿ ಶಿಲ್ಪಗಳಿಗೆ ಹೊಸ ಬೆಳೆಯ ಧಾನ್ಯಗಳಿಂದ ಅಡುಗೆ ಮಾಡಿ ಪೂಜೆ ಸಲ್ಲಿಸಿ, ನೈವೇಧ್ಯೆ ಮಾಡುವ ಸಂಪ್ರದಾಯವಿದೆ.

**ವಿಸರ್ಜನೆ :** ಹಬ್ಬದ ಆಚರಣೆಯಾದ ಮೇಲೆ ಮರುದಿವಸ ಈ ಎಲ್ಲ ಸಗಣಿಯ ಶಿಲ್ಪಗಳನ್ನು ಮನೆಯ ಮಾಳಿಗೆಯ ಕುಂಬಿಗಳ ಮೇಲೆ ಇಡುತ್ತಾರೆ. ಊರಲ್ಲಿ ಎಲ್ಲರೂ ತಂತಮ್ಮ ಮನೆಯ ಮಾಳಿಗೆ,

೪೫. ಡಾ. ಎಂ.ಎಂ. ಕಲಬುರ್ಗಿ : ಮಾರ್ಗ, ಸಂಪುಟ -೨, ಪುಟ -೪೮೪



ಸಗಣಿಯ ಶಿಲ್ಪಗಳು ( ರಜಪೂತ ಸಂಪ್ರದಾಯ )

ಕುಂಬಿಗಳ ಮೇಲೆ ಸಾಲು ಸಾಲಾಗಿ ಹೀಗೆ ಇಡುವುದರಿಂದ ಊರಿನ ಎಲ್ಲರ ಮನೆಯ ಕುಂಬಿಗಳು ತುಂಬಾ ಅಲಂಕಾರಯುತವಾಗಿ ಶೋಭಿಸುತ್ತವೆ. ಇದನ್ನು ಪಾಂಡವರ ಸಿಂಹಾಸನಾರೋಹಣದ ಸಂಕೇತವೆಂದೂ ಕೆಲವರು ಹೇಳುತ್ತಾರೆ.

ಕೆಲವು ಭಾಗದಲ್ಲಿ ಅಕ್ಕನ ತದಿಗೆಯ ದಿನ ಇಲ್ಲವೆ ಕಡೆ ಪಂಚಮಿಯ ದಿನ ಈ ಎಲ್ಲ ಗುಪ್ಪೆಯಾಕೃತಿಯ ಶಿಲ್ಪಗಳನ್ನು ಕೂಡಿಸಿಯಾದ ಸಗಣಿಯ ಶೇಖರಣೆಯಿಂದ ಮಾಳಿಗೆ ಮೇಲೆ ಒಂದು ಭಗದಲ್ಲಿ ಅಲ್ಲೀಕೇರಿಯನ್ನು ನಿರ್ಮಿಸುವ ವಾಸ್ತು ವಿನ್ಯಾಸದಂತಹ ರಚನೆಯ ಕಾರ್ಯಕ್ರಮ ನಡೆಯುತ್ತದೆ. ಸಗಣಿಯ ಸಂಗ್ರಹ ಹೆಚ್ಚಿಗೆ ಇದ್ದಷ್ಟು ಅಲ್ಲೀಕೇರಿ ತುಂಬ ದೊಡ್ಡದಾಗಿ, ಚೆನ್ನಾಗಿ ಆಗುತ್ತದೆ ಎನ್ನುತ್ತಾರೆ. ಕಟ್ಟೆಯೊಂದರ ಮೇಲೆ ಒಂದರ ಮೇಲೊಂದರಂತೆ ಶಿಖರದ ಹಾಗೆ ರಚನೆಯೂ ಆಗುತ್ತದೆ. ಈ ವಾಸ್ತುವಿನ ತಳವಿನ್ಯಾಸವು ವತ್ತುಳಾಕಾರವನ್ನು ಹೊಂದಿರುತ್ತದೆ. ಇಲ್ಲಿ ಕಲ್ಲೊಂದನ್ನು ಇಟ್ಟು ಇಲ್ಲವೆ ಕೆಲವು ವೇಳೆ ಬಸವಣ್ಣನನ್ನು ಮಾಡಿ ಪ್ರತಿಷ್ಠಾಪಿಸಿ ಮಾಳಿಗೆಯ ಮೇಲೆಯೇ ಕುಳಿತು ಊಟ ಮಾಡಿ, ಹರಟೆ, ಆಟ, ಹಾಡು ಇತ್ಯಾದಿ ಮನರಂಜನೆ ಪಡೆದು ಆಚರಣೆಯನ್ನು ಮುಗಿಸುವ ಕಾರ್ಯಕ್ರಮ ನಡೆಯುತ್ತದೆ.

### ಈ. ರಜಪೂತರ ಪಾಡವಾ ಶಿಲ್ಪಗಳು

ರಜಪೂತರ ಸಂಪ್ರದಾಯದಲ್ಲಿ ಮುತ್ತೈದೆಯರು ತಮ್ಮ ಮುತ್ತೈದೆತನ ಉಳಿಸಿಕೊಳ್ಳಲು ಹಲವು ಪೂಜೆಗಳನ್ನು ಮಾಡುತ್ತಾರೆ. ಅವುಗಳಲ್ಲಿ ಸಗಣಿ ಮಾಧ್ಯಮದಿಂದ ರಚಿಸಿದ ಶಿಲ್ಪಗಳ ಪೂಜೆಯೂ ಒಂದಾಗಿದೆ. ಇದೂ ಕೂಡ ಹಟ್ಟಿ ಹಬ್ಬದ ಪಾಂಡವರ ಶಿಲ್ಪಗಳ ರಚನೆ ಹಾಗೂ ಆಚರಣೆಯನ್ನು ಹೋಲುತ್ತದೆ. ರಜಪೂತರು ಇದಕ್ಕೆ ಪಾಡವಾ ಎಂದು ಕರೆಯುತ್ತಾರೆ. ದೀಪಾವಳಿಯಂದೇ ಈ ಸಂಪ್ರದಾಯವನ್ನು ಅವರು ಆಚರಿಸುತ್ತಾರೆ. ಸಗಣಿಯಿಂದ ಚೌಕಾಕಾರದ ಒಂದು ಕೋಟೆಯಂತೆ ವಿನ್ಯಾಸ ಮಾಡಿಕೊಂಡು, ಅದರ ಮಧ್ಯೆ ಒಂದು ಪಾಂಡವರ ಕುರಿತ ಶಿಲ್ಪವನ್ನು ರಚಿಸಿ, ಅದರ ಹೊಟ್ಟೆಯಲ್ಲಿ ಪೊಳ್ಳು ಮಾಡಿ ಅದರಲ್ಲಿ ಮೊಸರು, ತುಪ್ಪ, ಬೆಣ್ಣೆ ಹಾಕಿರುತ್ತಾರೆ. ಜೀವನಕ್ಕೆ ಕೊರತೆಯಾಗದಿರಲೆಂಬುದೇ ಈ ಆಚರಣೆಯ ಹಿನ್ನೆಲೆಯಲ್ಲಿರುವ ನಂಬಿಕೆಯಾಗಿದೆ.

### ಉ. ತುಳಸಿ ಶಿಲ್ಪಗಳು

ಮೂಲತಃ ಒಂದು ಔಷಧಿ ಗುಣವುಳ್ಳ ಸಸ್ಯಜಾತಿಯಾದ ತುಳಸಿಗೆ ಧಾರ್ಮಿಕ ಮಹತ್ವವೂ ಇದೆ. ತುಳಸೀ ಕುರಿತು ಪುರಾಣಗಳಲ್ಲಿಯೂ ಅನೇಕ ರೀತಿಯ ಉಲ್ಲೇಖಗಳಿದ್ದು ತುಳಸಿಯ ಪೂಜೆ, ಸ್ತೋತ್ರಗಳು ಬಳಕೆಯಲ್ಲಿವೆ.

ಸಮುದ್ರಮಥನ ಕಾಲದಲ್ಲಿ ಅಮೃತವು ಬಂದಾಗ ಅದನ್ನು ವಿಷ್ಣುವು ತಗೆದುಕೊಂಡಾಗ ಆನಂದ ಭಾಷ್ಪಗಳು ಅದರಲ್ಲಿ ಬಿದ್ದು ಸಣ್ಣ ಗಿಡ ಹುಟ್ಟಿತು. ಇದಕ್ಕೆ ತುಲನೆಯಿಲ್ಲದಾಗಿ ತುಳಸಿ ಎಂದು ನಾಮಕರಣ ಮಾಡಿದರು. ತುಳಸಿಯನ್ನು ವಿಷ್ಣುವು ಕಾಲಾಂತರದಲ್ಲಿ ಮದುವೆಯಾದನೆಂದು ಪುರಾಣಗಳಲ್ಲಿ ಬರುತ್ತದೆ.

ಒಮ್ಮೆ ಶಿವನು ಇಂದ್ರನ ಮೇಲೆ ಕೋಪಿಸಿದ ಫಲವಾಗಿ ಹುಟ್ಟಿದ ಜಲಂಧರ (ಶಂಖಚೂಡ) ರಾಕ್ಷಸ ರಾಜನು ಶತ್ರುವಾದ ಇಂದ್ರನ ಮೇಲೆ ದಾಳಿಯಿಟ್ಟು ಅಮರಾವತಿಯನ್ನು ಗೆದ್ದನು. ಇಂದ್ರನ ವಿನಂತಿಯ ಮೇರೆಗೆ ಶಿವನು ಹೋರಾಟಕ್ಕೆ ಬಂದರೂ ಏನೂ ಮಾಡಲಾಗಲಿಲ್ಲ. ಏಕೆಂದರೆ ಜಲಂಧರನ ಹೆಂಡತಿಯಾದ ವಿಷ್ಣುಭಕ್ತೆ ಬೃಂದಾದೇವಿಯು ಆಗ ವಿಷ್ಣು ಪೂಜೆಯಲ್ಲಿ ನಿರತಳಾಗಿದ್ದಳು. ಇಂದ್ರಾದಿ ದೇವತೆಗಳು ವಿಷ್ಣುವನ್ನು ಬೇಡಿಕೊಂಡಿದ್ದರಿಂದ ನಿರುಪಾಯನಾದ ವಿಷ್ಣುವು ಬೃಂದೆಯ ಬಳಿಗೆ ಬಂದಾಗ ಧ್ಯಾನದಿಂದ ಎದ್ದಳು. ಅತ್ತ ಶಿವನು ಜಲಂಧರನನ್ನು ಕೊಂದನು. ಸಹಗಮನ ಮಾಡಿದ ಬೃಂದೆಯ ಚಿತಾಭಸ್ಮದಿಂದ ತುಳಸಿಗಿಡ ಹುಟ್ಟಿತು. ಹೀಗೆ ತುಳಸಿಯ ಹುಟ್ಟಿನ ಬಗೆಗೆ ಕಥೆಗಳಿವೆ.

ಕರ್ನಾಟಕದಲ್ಲಿ ಈಗಲೂ ಹಲವರು ತಮ್ಮ ಮನೆಯೆದುರು ಸಂಭ್ರಮದಿಂದ ತುಳಸಿಯ ವಿವಾಹವನ್ನು ನೆರವೇರಿಸುವರು. ಕಾರ್ತಿಕ ಮಾಸದಲ್ಲಿ ತುಳಸಿ ಪೂಜೆಗೆ ವಿಶೇಷ ಮಹತ್ವವಿದೆ.

**ರಚನೆ :** ಸಾಮಾನ್ಯವಾಗಿ ದೇಶಾದ್ಯಾಂತ ತುಳಸಿ ಪೂಜೆ ಕಂಡುಬರುತ್ತದೆ. ಕೆಲವೆಡೆ ತುಳಸಿ ಶಿಲ್ಪರೂಪವನ್ನು ತಳೆದು ಪೂಜೆಗೊಳ್ಳುತ್ತದೆ. ಲೋಹದ ಹಾಳೆಯಲ್ಲಿ ಹೆಣ್ಣು ರೂಪವಿರುವ ತುಳಸಿಯ ಶಿಲ್ಪವನ್ನು ಮಾಡಿರುತ್ತಾರೆ. ಇದನ್ನು ಉಬ್ಬೊತ್ತು ತಂತ್ರದಿಂದ ರಚಿಸಲಾಗಿರುತ್ತದೆ. ಮನೆಯ ಮುಂದೆ ಅಥವಾ ಒಳಗಿನ ಪಡಸಾಲೆ, ಅಂಗಳ ಮುಂತಾದ ಸ್ಥಳಗಳಲ್ಲಿ ಈ ತುಳಸಿ ಕಟ್ಟೆ ಇದ್ದು ಅದರ ಮೇಲೆ ತುಳಸಿಗಿಡ ಬೆಳಸಿರುತ್ತಾರೆ. ಈ ಕಟ್ಟೆ ಮತ್ತು ಗಿಡ ಸೇರಿಯೇ ಪೂಜೆಗೊಳ್ಳಲು ಮುಖವಾಡ ಶಿಲ್ಪವನ್ನಿಡಲಾಗಿರುತ್ತದೆ. ಜೊತೆಗೆ ಹೊಲದಲ್ಲಿ ಬೆಳೆದ ಬೆಳಸುಗಳಾದ ಕಬ್ಬು, ಹುಣಸೆ ಮರದ ಟೊಂಗೆ, ಮಾವಿನ ಎಲೆ, ಚೆಂಡು ಹೂ, ನೆಲ್ಲಿಗಿಡದ ಟೊಂಗೆ ಹಾಗೂ ಮಲ್ಲಿಗೆ ಹೂ ಮುಂತಾದವುಗಳನ್ನು ಇಟ್ಟು ಅಲಂಕರಿಸಲಾಗಿರುತ್ತದೆ. ಈ ಸಂಯೋಜನ ಜನಪದ ಶಿಲ್ಪ ಆಧುನಿಕ ಪ್ರತಿಷ್ಠಾಪನಾ ಶಿಲ್ಪವನ್ನು ಹೋಲುತ್ತದೆ. ಹೀಗಾಗಿ ಈ ಆಧುನಿಕ ಪ್ರತಿಷ್ಠಾಪನಾ ಶಿಲ್ಪದ ಆಚರಣೆಯು ಮೂಲತಃ ಜನಪದ ಪ್ರತಿಷ್ಠಾಪನೀ ಶಿಲ್ಪವಾದ ತುಳಸಿ ಶಿಲ್ಪದಿಂದಲೇ ಪ್ರೇರಣೆ ಪಡೆದಿದ್ದು, ಆಧುನಿಕ ಪ್ರತಿಷ್ಠಾಪನಾ ಶಿಲ್ಪ ರಚನೆಯ ಬೇರುಗಳು ಜನಪದದಲ್ಲಿಯೇ ಕಾಣಬಹುದಾಗಿದೆಯೆಂದರೆ ತಪ್ಪಲ್ಲ.

**ನಂಬಿಕೆ :** ತುಳಸಿಯ ಎದರು ದೀಪ ಹಚ್ಚುವವರು ಪೂರ್ಣಕಾರ್ಯದಿಂದ ವೈಕುಂಠ ಸೇರುತ್ತಾರೆಂದು ನಂಬಿಕೆಯಿದೆ. ತುಳಸಿದಳಯುಕ್ತ ಸ್ನಾನ ಮಾಡುವುದು ಪುಣ್ಯತೀರ್ಥ ಸ್ನಾನಕ್ಕೆ ಸಮಾನ. ಮನೆಯ ಸುತ್ತಲೂ ತುಳಸಿ ಬೆಳೆಸುವುದು ಪುಣ್ಯಕರ. ತುಳಸೀಮಾಲೆ ಧರಿಸಿದರೆ ದುಷ್ಟಶಕ್ತಿ ಸಮೀಪ ಬರಲಾರದು ಎಂಬ ನಂಬಿಕೆಯಿದೆ. ತುಳಸಿ ಕಾಂಡದಿಂದ ಸಾಧಾಮಣಿ, ಗೀರುಮಣಿ ಎಂಬ ತುಳಸಿ ಮಣಿ ತಯಾರಿಸಿ ಜಪಮಾಲೆಯಾಗಿ ಬಳಸುತ್ತಾರೆ, ಕಂಠದಲ್ಲಿ ಧರಿಸುತ್ತಾರೆ.

## ಊ. ಸೀಗಮ್ಮನ ಶಿಲ್ಪಗಳು

ಗೌರಿ ಹುಣ್ಣಿಮೆಯಲ್ಲಿ ಗೌರಮ್ಮನ ಶಿಲ್ಪದ ಪೂಜೆ ಆಚರಣೆ ಮಾಡುವಂತೆ ಸೀಗಿ ಹುಣ್ಣಿಮೆಯಲ್ಲಿ

ಸೀಗಮ್ಮನ ಪೂಜೆ ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಬಿಜಾಪುರ, ಗುಲಬರ್ಗಾ ಜಿಲ್ಲೆಗಳಲ್ಲಿ ಹೆಚ್ಚಾಗಿ ಆಚರಿಸಲಾಗುತ್ತದೆ.

**ರಚನೆ :** ಪೂಜೆಗೆ ಮೊದಲು ಹದಿನೈದು ದಿವಸ ಇರುವಾಗಲೇ, ಮೊದಲ ದಿವಸ ಸಗಣಿಯಿಂದ ಗೋಡೆಯ ಮೇಲೆ ಆಕಾರವೊಂದನ್ನು ಮಾಡಿ, ಅದರ ಮೇಲೆ ಕರಿಯಳ್ಳು ಹೂ, ಅವರೆ ಹೂ ಅಥವಾ ಹೊನ್ನೆ ಹೂಗಳಿಂದ ಅಲಂಕರಿಸಿ ಪೂಜೆ ಮಾಡುತ್ತಾರೆ. ಸಂಜೆಗೆ ಹೆಣ್ಣು ಮಕ್ಕಳೆಲ್ಲ ಸೇರಿ ಹಾಡು ಹೇಳುತ್ತಾರೆ. ಮತ್ತೆ ಮರುದಿವಸ ಮೊದಲಿನ ಆಕಾರವನ್ನು ತೆಗೆದುಹಾಕಿ ಸಗಣಿಯಿಂದ ಮತ್ತೊಂದು ಆಕಾರವನ್ನು ನಿರ್ಮಿಸಿ, ಪೂಜೆ ಮಾಡಿ, ಹಾಡು ಹೇಳುತ್ತಾರೆ. ಮತ್ತೆ ಮರುದಿವಸ ಹೊಸ ಆಕಾರದ ಶಿಲ್ಪವನ್ನು ಮಾಡುತ್ತಾರೆ, ಹಾಡು ಹೇಳುತ್ತಾರೆ. ಹದಿನೈದು ದಿನಗಳ ಕಾಲ ಹೀಗೆ ಮಾಡುತ್ತಾರೆ. ಕೊನೆಯ ದಿನ ಮತ್ತೆ ಸಾರಿಸಿ. ಸುಣ್ಣ ಬಳೆದು ಜಾಜದಿಂದ ಸುಂದರ ಆಕಾರದ ಚಿತ್ರ ಬರೆದು ಪೂಜೆ ಮಾಡಿ, ಹಾಡು ಹೇಳುತ್ತಾರೆ.

ಈ ಹಬ್ಬದಲ್ಲಿ ನಿರ್ಮಿಸಲಾಗುವ ಚಿತ್ರ ಮತ್ತು ಸಗಣಿಯ ಆಕಾರಗಳು ಅವರ ಪರಿಸರಕ್ಕೆ ಹೊಂದುವಂತಹವುಗಳೇ ಆಗಿದ್ದು, ಅಡಕೀಲು, ಪಗಡೆ, ರಾಮನ ಪದ, ತೇರು, ಬಾರಂಭಾವಿ, ಏಳುಸುತ್ತಿನ ಕೋಟೆ, ಏಳು ಮಂದಿ ಅಕ್ಕ-ತಂಗಿಯರು, ಸೂರ್ಯ-ಚಂದ್ರ ಹೀಗೆ ಗುರುತಿಸಲಾಗುವ ಸಗಣಿಯ ಉಬ್ಬು ಶಿಲ್ಪಗಳು ರಚನೆಗೊಂಡು ಆಚರಿಸಲ್ಪಡುತ್ತವೆ.

ಈ ಶಿಲ್ಪಗಳನ್ನು ಪೂಜಿಸುವಾಗ ಅನೇಕ ವಿವಿಧ ಹಾಡುಗಳನ್ನು ಹೇಳುತ್ತಾರೆ. ಒಂದು ಮಾದರಿ

ಒಂದ ಸೇರ ಅಕ್ಕಿ ಸೀಗಮ್ಮಗ ಪೂಜೆ
ಅಕಿನ ತೊಡೆಯ ಮ್ಯಾಗ ಬಾಳಿ ಛತ್ರಕಿ
ಬಂಗಾರ ಹೇರಕೊಂಡ ಅಣ್ಣ ಮಹಾಲಿಂಗ
ದಂಡಿಗೆ ಹೋಗ್ಯಾನ ಆಡಂಬಾ ಕೋಲೆ

**ಮಂಗಳ ಗೌರಿ ಶಿಲ್ಪಗಳು :** ಉತ್ತರ ಕರ್ನಾಟಕದಲ್ಲಿ ಮದುವೆಯಾಗಿರದ ಕನ್ಯೆಯರು ಮತ್ತು ಮದುವೆಯಾಗಿರುವ ಹೆಂಗಸರು ಐದು ವರ್ಷಗಳ ಕಾಲ ಮಾಡುವ ಒಂದು ವ್ರತದಲ್ಲಿ ಮಂಗಳ ಗೌರಿ ಶಿಲ್ಪ ಹುಟ್ಟಿಕೊಳ್ಳುತ್ತವೆ. ಈ ಆಚರಣೆಗೆ ಮಂಗಳ ಗೌರಿ ವ್ರತ ಎಂದು ಕರೆಯುತ್ತಾರೆ.[೪೬] ಶ್ರಾವಣ ಮಾಸದ ಪ್ರತಿ ಮಂಗಳವಾರ ಈ ವ್ರತವನ್ನು ಮಾಡುತ್ತಾರೆ.

**ಶಿಲ್ಪದ ರಚನೆ :** ಮಂಗಳವಾರ ಬೆಳಿಗ್ಗೆ ಬೆಲ್ಲದ ಅಚ್ಚಿನಲ್ಲಿ ಅರಿಷಿಣದ ಗೌರಿಯನ್ನು ಮಾಡಿ ಪ್ರತಿಷ್ಠಾಪಿಸುತ್ತಾರೆ. ಮತ್ತು ಅದರ ಎರಡೂ ಬದಿಗಳಲ್ಲಿ ಐದು ಅಡಕೆ, ಐದು ವೀಳ್ಯೆಯದ ಎಲೆಗಳನ್ನು ಇಡುವರು. ಗೌರಿಯ ಶಿಲ್ಪದ ಎರಡೂ ಪಕ್ಕಗಳಲ್ಲಿ ಕುಬುಸದ ಕಣವನ್ನು ತ್ರಿಕೋನಾಕಾರವಾಗಿ ಮಡಿಸಿ ಇಡುವರು. ಅದರ ಪಕ್ಕಕ್ಕೆ ಒಂದೊಂದು ಕೊಬ್ಬರಿ ಬಟ್ಟನ್ನೂ ಇಡುವರು.

---

೪೬. ಡಾ. ಚಂದ್ರಶೇಖರ ಕಂಬಾರ (ಸಂ): ಕನ್ನಡ ಜಾನಪದ ವಿಶ್ವಕೋಶ, ಸಂಪುಟ -೨, ಪುಟ - ೧೫೮೯

[illegible]

[illegible]

[illegible]

[illegible]

[illegible]

[illegible]

[illegible]

[illegible]

ಹೀಗೆ ಶ್ರಾವಣ ಮಾಸದ ಪ್ರತಿ ಮಂಗಳವಾರವೂ ಪೂಜೆ ಮಾಡಿ ವ್ರತ ಆಚರಿಸುವರು. ಈ ವ್ರತವನ್ನು ಸಾಮಾನ್ಯವಾಗಿ ಬ್ರಾಹ್ಮಣ ಮತ್ತು ಲಿಂಗಾಯತ ಹೆಣ್ಣುಮಕ್ಕಳು ಮಾಡುವರು.

### ಋ. ಉಸುಗಿನ ಶಿವಲಿಂಗ ಶಿಲ್ಪಗಳು

ನಮ್ಮ ಜನಪದರಲ್ಲಿ ವಿಶೇಷವಾಗಿ ಮದುವೆಯಾದ ಮಹಿಳೆಯರು ಉಸುಗಿನ ಲಿಂಗವನ್ನು ಮಾಡಿ ಪೂಜಿಸುವರು.

**ಹಿನ್ನೆಲೆ :** ಪರ್ವತ ರಾಜನ ಮಗಳಾದ ಪಾರ್ವತಿಯು ಹಳ್ಳದ ದಂಡೆಯಲ್ಲಿ ಶಿವಲಿಂಗವನ್ನು ಮಾಡಿ ಪೂಜಿಸುತ್ತಿದ್ದಳಂತೆ. ಈಕೆ ತಂದೆಯ ಮಾತನ್ನು ಕೇಳದೇ ತಂದೆಯ ಕಣ್ತಪ್ಪಿಸಿ ಹದಿನಾರು ಸೋಮವಾರ ವ್ರತ ಹಿಡಿದು ಹಳ್ಳದ ದಂಡೆಗೆ ಹೋಗಿ ಉಸುಕಿನಲ್ಲಿ ಲಿಂಗವನ್ನು ಮಾಡಿ ಹದಿನಾರು ತರಹದ ಹೂ ಏರಿಸಿ, ಹಿಟ್ಟಿನ ಆಭರಣ ಮಾಡಿ ಪೂಜಿಸುವಳು. ಇವಳ ಈ ವ್ರತಕ್ಕೆ ಶಿವನು ಒಲಿಯುವನು. ವ್ರತವನ್ನು ಕೈಗೊಂಡು ಲಿಂಗವನ್ನು ಮಾಡಿ ಪೂಜಿಸಿದ್ದರಿಂದ ಪಾರ್ವತಿಯು ಶಿವನನ್ನು ಪಡೆದು ಮುತ್ತೈದೆಯಾದಳು. ತಾವೂ ಕೂಡ ಶಿವನಂತಹ ಗಂಡನನ್ನು ಪಡೆಯಬೇಕು ಮತ್ತು ತಮ್ಮ ಮುತ್ತೈದೆತನ ಶಾಶ್ವತವಾಗಿರಬೇಕು ಎಂದು ಬಗೆದು ಶಿವಲಿಂಗವನ್ನು ಮಾಡಿ ಪೂಜಿಸುವ ಸಂಪ್ರದಾಯ ಮುಂದುವರೆಸಿಕೊಂಡು ಬಂದಿದ್ದಾರೆ.

**ರಚನೆ :** ಮದುವೆಯಾಗುವ ಮೊದಲು ಹಡತಾಳ ಪೂಜೆಯೆಂದು ಕರೆಯುವ ಒಂದು ಬಗೆಯ ಪೂಜೆಯನ್ನು ಮಾಡಿ ನಂತರ ಹದಿನಾರು ಸೋಮವಾರಗಳ ಕಾಲ ಒಂದು ಮಣೆಯ ಮೇಲೆ ಉಸುಗಿನಿಂದ ಲಿಂಗವನ್ನು ಮಾಡುತ್ತಾರೆ. ಅದರಲ್ಲೇ ಪಕ್ಕದಲ್ಲಿ ನದಿ, ಜೊತೆಗೆ ಸೂರ್ಯ, ಚಂದ್ರ, ನಕ್ಷತ್ರಗಳನ್ನು ಉಬ್ಬುಶಿಲ್ಪದಂತೆ ರಚಿಸುತ್ತಾರೆ. ಪೂಜಾ ಕಾರ್ಯವೆಲ್ಲ ಮುಗಿದ ನಂತರ ಊಟ ಮಾಡುತ್ತಾರೆ.

**ನಂಬಿಕೆ :** ನಮಗೂ ಶಿವನಂತಹ ಒಳ್ಳೆಯ ಗಂಡ ಸಿಗಲಿ ಎಂಬ ಆಶಯ ಇದರ ಹಿಂದೆ ಅಡಗಿದೆ.

## ೧.೨ ದೇವರ ಉತ್ಸವ, ಜಾತ್ರೆಗಳಲ್ಲಿ ಹುಟ್ಟಿಕೊಳ್ಳುವ ಶಿಲ್ಪಗಳು

ಕರ್ನಾಟಕದಲ್ಲಿ ಹಿಂದಿನ ಕಾಲದಿಂದಲೂ ಅನೇಕ ಶಿಷ್ಟ ದೇವತೆಗಳು ಹಾಗೂ ಜನಪದ ದೇವತೆಗಳ ಉತ್ಸವ-ಜಾತ್ರೆಗಳ ಸಂದರ್ಭಗಳಲ್ಲೂ ಧಾರ್ಮಿಕ ಮನೋಧರ್ಮದವರಾದ ನಮ್ಮ ಜನಪದರು ಹಲವು ಜನಪದ ಶಿಲ್ಪಗಳನ್ನು ಸಂಕೀರ್ಣ ಮಾಧ್ಯಮದಲ್ಲಿ ರಚಿಸಿ ಆಚರಣೆಯಲ್ಲಿ ತಂದಿದ್ದಾರೆ. ಅವುಗಳಲ್ಲಿ ಅ. ಕಂಬಿಯ ಶಿಲ್ಪಗಳು ಆ. ದೇವರ ಪಾದಶಿಲ್ಪಗಳು ಇ. ಕರ್ಚಿ ಗೊಂಬೆ ಶಿಲ್ಪಗಳಂಥವು ಮುಖ್ಯವಾಗಿ ಗಮನ ಸೆಳೆಯುವಂತಹವುಗಳಾಗಿವೆ.

**ಅ. ಕಂಬಿ ಶಿಲ್ಪಗಳು :** ಮಲ್ಲಯ್ಯನ ಪ್ರತೀಕಗಳಾದ ಕಂಬಿ (ಕೋಲು) ಮತ್ತು ಕಾವಡಿ (ನೆಲವು)ಗಳನ್ನು ಹಿಡಿದುಕೊಂಡು ಹೊರಟ ಮಲ್ಲಯ್ಯನ ಭಕ್ತರು ಶಿವರಾತ್ರಿ ಹಾಗೂ ಯುಗಾದಿಗಳಲ್ಲಿ ಹಾಡುಗಳನ್ನು ಹೇಳುತ್ತಾರೆ. ಈ ಹಾಡುಗಳು ಮಲ್ಲಯ್ಯ ಮತ್ತು ಆತನ ಭಕ್ತರ ಮಹಿಮೆ, ಪವಾಡಗಳನ್ನು

[illegible]



ಒಳಗೊಂಡಿರುತ್ತವೆ. ಭಕ್ತಾದಿಗಳು ಮಲ್ಲಿಕಾರ್ಜುನನಿಗೆ ಕಟ್ಟಿಕೊಂಡ ತಮ್ಮ ಹರಕೆಗಳನ್ನು ಅಯ್ಯಗಳ ವಶಕ್ಕೆ ಕೊಟ್ಟು ಕಳುಹಿಸುವುದುಂಟು. ಈ ರೀತಿ ಕೊಟ್ಟ ಹರಕೆಗಳ ಜೊತೆಗೆ ಕಂಬಿಯ ಶಿಲ್ಪವನ್ನು ಹೊತ್ತು ಶ್ರೀಶೈಲಕ್ಕೆ ಹೋಗುತ್ತಾರೆ. ಅಯ್ಯಗಳ ಈ ಸೇವೆಗೆ "ಕಂಬಿಯ ಕಾಯಕ" ಎಂದು ಕರೆಯುತ್ತಾರೆ. ಕಾವಡಿ ಅಯ್ಯಗಳು ಎಂಬ ಹೆಸರು ಇವರಿಗಿದೆ. ವರ್ಷಕ್ಕೊಂದು ಸಲ ಶ್ರೀಮಂತರು ತಮ್ಮ ಮನೆಗಳಲ್ಲಿ ಈ ಕಂಬಿಗಳನ್ನು ಇಟ್ಟು ಪೂಜಿಸುವ ಅಯ್ಯಗಳನ್ನು ಆಹ್ವಾನಿಸಿ ಹಣ ಕೊಟ್ಟು ಶ್ರೀಶೈಲಕ್ಕೆ ಕಳುಹಿಸುವ ಪದ್ಧತಿಯಿದೆ. ಶ್ರೀಶೈಲದಿಂದ ಬಂದ ಅಯ್ಯಗಳು ಮಲ್ಲಿಕಾರ್ಜುನನ ಲೀಲೆಗಳನ್ನು ಕೊಂಡಾಡುತ್ತಾರೆ.

ಐತಿಹಾಸಿಕ ವ್ಯಕ್ತಿಗಳೆಂದು ನಂಬಲಾಗಿರುವ ಗೊಲ್ಲಾಳ, ಇಳಿಹಾಳ, ಬೊಮ್ಮಯ್ಯ ಮೊದಲಾದವರ ಕಥೆಗಳಲ್ಲಿ ಕಂಬಿ ಅಯ್ಯಗಳ ಪ್ರಸ್ತಾಪವಿದೆ. ಕಾವಡಿಯನ್ನು ಹೊತ್ತ ಜಂಗಮನ ವರ್ಣನೆ, ಗೊಲ್ಲಾಳನ ಕಥೆಯಲ್ಲಿ ಬರುತ್ತದೆ. ಜನಪದ ಗೀತೆಗಳಲ್ಲಿಯೂ ಕಂಬಿಯ ಉಲ್ಲೇಖ ಸಾಕಷ್ಟು ಕಡೆ ಬರುತ್ತದೆ.[೪೭] ಒಟ್ಟಾರೆ, ಜಾತ್ರೆಯ ಸಮಯದಲ್ಲಿ ದೇವರಿಗೆ ಸಲ್ಲಿಸುವ ಹಲವು ಬಗೆಯ ಸೇವೆಗಳಲ್ಲಿ ಇದೂ ಒಂದಾಗಿದೆ.

**ರಚನೆ :** ಅಡ್ಡೆಯಂತಿರುವ ಒಂದು ಸಾಧನವೇ ಕಂಬಿ. ಕಂಬಿಯ ಎರಡೂ ಕಡೆಗಳಲ್ಲಿ ನೆಲದಲ್ಲಿ ನಿಲ್ಲಲು ಅನುಕೂಲವಾಗುವಂತಹ ಎರಡೆರಡು ಕಾಲುಗಳಿರುತ್ತವೆ. ಹಾಗೂ ಎರಡೂ ಮೇಲ್ತುದಿಗಳಲ್ಲಿ ನಂದಿಯ ಮುಖದ ಶಿಲ್ಪವನ್ನು ಕೆತ್ತಲಾಗಿರುತ್ತದೆ. ಮತ್ತು ಎರಡೂ ತುದಿಗಳಲ್ಲಿ ಹಗ್ಗದ ನೆಲವುಗಳನ್ನು ಕಟ್ಟಿ ಅವುಗಳಲ್ಲಿ ಪಾನಕದ ಹರವಿಗಳನ್ನು ಇಡಲಾಗಿರುತ್ತದೆ. ಕೆಲವು ಭಕ್ತರು ಈ ಹರವಿಯಲ್ಲಿರುವ ಪಾನಕವನ್ನು ಕೇಳಿ ಪಡೆದರೆ, ಮತ್ತೆ ಕೆಲವು ಭಕ್ತರ ದಾಹ ನೀಗಲೆಂದು ಬೆಲ್ಲ ಹಾಗೂ ನೀರನ್ನು ಹಾಕಿ ಕಂಬಿ ಹರವಿಯಲ್ಲಿ ಪಾನಕದ ಪ್ರಮಾಣವನ್ನು ಹೆಚ್ಚಿಸುತ್ತಾರೆ. ಇಲ್ಲವೆ ಪಾನಕದ ಪ್ರಮಾಣವನ್ನು ಯಥಾಸ್ಥಿತಿ ಕಾಪಾಡಿಕೊಂಡು ಬರುತ್ತಾರೆ.[೪೮] ಈ ಕಂಬಿಶಿಲ್ಪದ ಮೇಲೆ ಬಣ್ಣದ ಬಟ್ಟೆಯನ್ನು ಹೊದೆಸಿರುತ್ತಾರೆ. ಇದರ ಬಣ್ಣ ಕ್ಯಾವಿಯಾಗಿರುತ್ತದೆ. ಈ ಕೆಂಬಟ್ಟೆಯ ಮೇಲೆ ಅಲ್ಲಲ್ಲಿ ಬಿಳಿ ಬಟ್ಟೆಯ ಹೂಗಳನ್ನು ಕತ್ತರಿಸಿ ಹಚ್ಚಿ ಹೊಲಿಯಲಾಗಿರುತ್ತದೆ. ಮತ್ತು ಬಟ್ಟೆಯ ಸುತ್ತ ಅಂಚಿಗೆ ಅರಿವೆಯ ಗೊಂಡೆ ಹಚ್ಚಿರುತ್ತಾರೆ.

**ಆ. ದೇವರ ಪಾದ ಶಿಲ್ಪಗಳು :** ಉತ್ತರ ಕರ್ನಾಟಕದ ಅನೇಕ ದೇವಾಲಯಗಳಲ್ಲಿ ದೇವರ ಶಿಲ್ಪದ ಎದುರಿಗೆ ದೇವಾಲಯದ ಹೊರಗಡೆ ಇರುವ ದೀಪಸ್ತಂಭದ ಒಂದು ಮಾಡದಲ್ಲಿ ಇಲ್ಲವೆ ಕಟ್ಟೆಯ ಮೇಲೆ, ಒಂದು ಜೊತೆ ಬೃಹತ್ ಆಕಾರದ ಚರ್ಮದ ಶಿಲ್ಪಗಳನ್ನು ಇಟ್ಟಿರುತ್ತಾರೆ. ಕೆಲವೊಮ್ಮೆ ಇವುಗಳನ್ನು ಒಂದು ಗಿಡಕ್ಕೆ ತೂಗು ಹಾಕಿರುತ್ತಾರೆ. ಇವುಗಳಿಗೆ ಕುಂಕುಮ, ವಿಭೂತಿಗಳನ್ನು ಹಚ್ಚಿ ಪೂಜೆ ಮಾಡಲಾಗಿರುತ್ತದೆ. ಸಾಮಾನ್ಯವಾಗಿ ದೇವರಿಗೆ ಹರಕೆ ಹೊತ್ತವರು ಇಂತಹ ಶಿಲ್ಪಗಳನ್ನು ಮಾಡಿಸಿಟ್ಟಿರುತ್ತಾರೆ.

---

೪೭. ಡಾ. ಚಂದ್ರಶೇಖರ ಕಂಬಾರ (ಸಂ): ಕನ್ನಡ ಜಾನಪದ ವಿಶ್ವಕೋಶ, ಸಂಪುಟ -೧, ಪುಟ - ೨೧೬

೪೮. ..... ಅದೇ .....

**ರಚನೆ :** ಸಾಮಾನ್ಯವಾಗಿ ಈ ಪಾದ ಶಿಲ್ಪಗಳು ಮನುಷ್ಯರು ಮೆಟ್ಟುವ ಪಾದ ಶಿಲ್ಪಗಳಿಗಿಂತ ನಾಲ್ಕಾರು ಪಟ್ಟು ದೊಡ್ಡದಾಗಿರುತ್ತವೆ. ಚರ್ಮದಲ್ಲಿ ಅತ್ಯಂತ ಸುಂದರವಾಗಿ, ಕಲಾತ್ಮಕವಾಗಿ ರಚಿಸಲ್ಪಟ್ಟಿರುತ್ತವೆ. ಚಮ್ಮಾರರೇ ಇವುಗಳನ್ನು ತಯಾರಿಸಿರುತ್ತಾರೆ.

ಇಂಥ ಶಿಲ್ಪಗಳು ಬೇಡಿಕೆಹಾಳದ [೪೯] ಸಿದ್ದೇಶ್ವರ ದೇವಸ್ಥಾನ, ಮಾಣಶಿವಣಗಿಯ [೫೦] ರೇಣುಕಾದೇವಿಯ ಗುಡಿಯಲ್ಲಿ, ಗುಟಗುದ್ದಿ [೫೧]ಯ ದುರ್ಗಮ್ಮನ ದೇವಸ್ಥಾನದಲ್ಲಿ, ಮುದಕವಿ [೫೨] ಬೆಟ್ಟದಲ್ಲಿನ ಬೈಲಪ್ಪನ ದೇವರ ಗುಡಿಯಲ್ಲಿ, ಹಯ್ಯಾಳದ [೫೩] ಲಿಂಗೇಶ್ವರ ದೇವಸ್ಥಾನದಲ್ಲಿ, ಲಕ್ಷ್ಮೀಪುರದ [೫೪] ಆಂಜನೇಯ ದೇವಸ್ಥಾನದಲ್ಲಿ, ಕಕ್ಕೇರಾದ [೫೫] ಸೋಮನಾಥ ದೇವಸ್ಥಾನದಲ್ಲಿಯೂ ಹಾಗೂ ಇನ್ನೂ ಅನೇಕ ದೇವಾಲಯಗಳಲ್ಲಿ ಕಂಡು ಬರುತ್ತವೆ.

**ಚಿಕ್ಕ ಪಾದ ಶಿಲ್ಪಗಳು :** ಹರಿಜನರಲ್ಲಿ ಯಾವುದೇ ಮನೆಯಲ್ಲಿ ಹಿರಿಯ ಸೊಸೆಯಂದಿರು ತಾಳಿಯ ಪಕ್ಕದಲ್ಲಿ ಚರ್ಮದ ಅತ್ಯಂತ ಚಿಕ್ಕ ಪಾದಗಳನ್ನು ಕಟ್ಟಿಕೊಂಡಿರುತ್ತಾರೆ. ಇವು ಉಬ್ಬೊಬ್ಬು ಶಿಲ್ಪಗಳಾಗಿರುತ್ತವೆ. ಇವುಗಳನ್ನು ಎಲ್ಲಮ್ಮನ ಪಾದಗಳೆಂದು ಹೇಳುತ್ತಾರೆ. ಇವಕ್ಕೆ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಪೂಜೆ ಮಾಡುತ್ತಾರೆ.

**ನಂಬಿಕೆ :** ದೇವರಿಗೆ ನಮಸ್ಕರಿಸಲು ಬಂದ ಭಕ್ತಾದಿಗಳಲ್ಲಿ ಅನೇಕರು ಈ ಪಾದ ಶಿಲ್ಪಗಳನ್ನು ತಲೆಗೆ ಬಡಿದುಕೊಳ್ಳುತ್ತಾರೆ. ಹೀಗೆ ಬಡಿದುಕೊಳ್ಳುವುದು ದೇವರ ಆಶೀರ್ವಾದವೆಂದು ತಿಳಿಯುತ್ತಾರೆ. ಮತ್ತು ತಮ್ಮ ಮನದ ಆಕಾಂಕ್ಷೆಗಳು ಈಡೇರುತ್ತವೆ ಎಂದು ನಂಬುತ್ತಾರೆ.

**ಕರ್ಚಿ ಗೊಂಬೆ ಶಿಲ್ಪಗಳು :** ದೇವರ ಉತ್ಸವ, ಜಾತ್ರೆಗಳಲ್ಲಿ ಕರ್ಚಿ ಗೊಂಬೆ ಶಿಲ್ಪಗಳು ನಿರ್ಮಾಣಗೊಳ್ಳುತ್ತವೆ. ಇವು ಒಂದು ಜೊತೆ ಶಿಲ್ಪಗಳಾಗಿರುತ್ತವೆ. ಈ ಶಿಲ್ಪಗಳು ಮನರಂಜನೆಗಾಗಿ ನಿರ್ಮಾಣಗೊಂಡು ಪ್ರದರ್ಶನಗೊಳ್ಳುತ್ತವೆ. ಪ್ರಸಿದ್ಧ ಹಂಪೆಯ ಜಾತ್ರೆಯಲ್ಲಿ ಇಂತಹ ಶಿಲ್ಪಗಳನ್ನು ಪ್ರದರ್ಶಿಸಲಾಗುತ್ತದೆ.

ಸಾಮಾನ್ಯವಾಗಿ ಭಾರತ ಹುಣ್ಣಿಮೆಯ ಉತ್ಸವದಲ್ಲಿ ಮನೋರಂಜನೆಗಾಗಿ ಈ ಕರ್ಚಿ ಗೊಂಬೆ ಶಿಲ್ಪಗಳನ್ನು ಕುಣಿಸುತ್ತಾರೆ. ಗಂಡು-ಹೆಣ್ಣು ಒಂದು ಜೊತೆ ಶಿಲ್ಪಗಳಿರುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿ ಇಂತಹ ಶಿಲ್ಪಗಳು ಉತ್ಸವ ಸಂದರ್ಭಗಳಲ್ಲಿ ಕಾಣಸಿಕೊಳ್ಳುತ್ತವೆ.

---

೪೯. ಬೇಡಿಕಿಹಾಳ : ತಾ. ಚಿಕ್ಕೋಡಿ, ಜಿ. ಬೆಳಗಾವಿ
೫೦. ಮಾಣಶಿವಣಗಿ : ತಾ. ಜೇವರ್ಗಿ, ಜಿ. ಗುಲಬರ್ಗಾ
೫೧. ಗುಟಗುದ್ದಿ : ತಾ. ಹುಕ್ಕೇರಿ, ಜಿ. ಬೆಳಗಾವಿ
೫೨. ಮುದಕವಿ : ತಾ. ರಾಮದುರ್ಗ, ಜಿ. ಬೆಳಗಾವಿ
೫೩. ಹಯ್ಯಾಳ : ತಾ. ಶಹಾಪುರ, ಜಿ. ಗುಲಬರ್ಗಾ
೫೪. ಲಕ್ಷ್ಮೀಪುರ : ತಾ. ಶಹಾಪುರ, ಜಿ. ಗುಲಬರ್ಗಾ
೫೫. ಕಕ್ಕೇರಾ : ತಾ. ಶಹಾಪುರ, ಜಿ. ಗುಲಬರ್ಗಾ

**ರಚನೆ :** ಮುಖವನ್ನು ಕಿಟ್ಟದಿಂದ ತಯಾರಿಸಿರುತ್ತಾರೆ. ಬಿದಿರು, ದೊಡ್ಡ ಅಂಗಿ ತೊಡಿಸಿ ಇದನ್ನು ತಲೆಯ ಮೇಲೆ ಹೊರುವರು.

## ೨. ಸಂಕೀರ್ಣ ಮಾಧ್ಯಮದ ತಾಂತ್ರಿಕ ಜನಪದ ಶಿಲ್ಪಕಲೆ

ಧರ್ಮಮೂಲ ಜನಪದ ಶಿಲ್ಪಕಲೆಯ ಇನ್ನೊಂದು ಪ್ರಮುಖ ಟಿಸಿಲಾಗಿ ತಾಂತ್ರಿಕ ಹಿನ್ನೆಲೆಯ ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪ ಕಲೆ ಬೆಳವಣಿಗೆಯಾಗಿರುವುದು ಕಂಡುಬರುತ್ತದೆ. ಅವುಗಳಲ್ಲಿ ೨.೧ : ದೃಷ್ಟಿಗೊಂಬೆ ಶಿಲ್ಪಗಳು ೨.೨ : ಹಿಟ್ಟಿನ ಶಿಲ್ಪಗಳು ೨.೩ : ಮಾಟ-ಮಂತ್ರಗಳಲ್ಲಿನ ಶಿಲ್ಪಗಳು ೨.೪ : ಮೋಡಿಯಾಟದಲ್ಲಿನ ಶಿಲ್ಪಗಳು ಪ್ರಮುಖವಾಗುತ್ತವೆ.

**೨.೧ ದೃಷ್ಟಿ ಗೊಂಬೆ ಶಿಲ್ಪಗಳು :** ದೆವ್ವಗಳು, ಪಿಶಾಚಿಗಳು ಹಾಗೂ ಕೆಟ್ಟ ಮನುಷ್ಯರ ದೃಷ್ಟಿಗಳು ಸುಂದರವಾಗಿರುವ ಕಟ್ಟಡ, ಮಕ್ಕಳು ಮತ್ತು ವಸ್ತುಗಳ ಮೇಲೆ ಬಿದ್ದರೆ ಕೇಡುಂಟಾಗುವುದು, ಕಳೆಗುಂದುವುದು ಎಂಬುದು ನಮ್ಮ ಜನಪದರ ಹಲವಾರು ನಂಬಿಕೆಗಳಲ್ಲಿ ಇವೂ ಪ್ರಮುಖವಾಗಿವೆ. ಅದಕ್ಕಾಗಿ ಹಲವಾರು ಮನೆಗಳ ಮುಂದೆ ಅದರಲ್ಲೂ ಹೊಸದಾಗಿ ಕಟ್ಟುತ್ತಿರುವ ಮನೆಗಳಿಗೆ ದೃಷ್ಟಿ ತಾಗದಿರಲೆಂದು ಹಲವಾರು ವಿಕಾರಾಕೃತಿಯ ಶಿಲ್ಪಗಳನ್ನು ನೇತು ಹಾಕಿರುವುದನ್ನು ಕಾಣಬಹುದು. ಅವುಗಳಲ್ಲಿ ೧. ಕಪ್ಪು ಬಣ್ಣ ಪ್ರಧಾನ ೨. ಕೆಂಪು ಬಮ್ಮ ಪ್ರಧಾನ ಶಿಲ್ಪಗಳು ಎಂದು ವಿಂಗಡಿಸಬಹುದು.

**೧. ಕಪ್ಪು ಬಣ್ಣ ಪ್ರಧಾನ ಶಿಲ್ಪಗಳು :** ಕರ್ನಾಟಕದಲ್ಲಿ ಅನೇಕ ಮನೆ, ಮಠಗಳನ್ನು ಹೊಸದಾಗಿ ಕಟ್ಟಿದಾಗ ಅವುಗಳಿಗೆ ದೃಷ್ಟಿ ತಾಗದಿರಲೆಂದು ಇಂಥ ಶಿಲ್ಪಗಳನ್ನು ಮನೆಯ ಮುಂದೆ ನೇತು ಹಾಕಿರುತ್ತಾರೆ.

**ರಚನೆ :** ಇವುಗಳನ್ನು ಸಾಮಾನ್ಯವಾಗಿ ಕಪ್ಪು ಬಣ್ಣದ ಅರಿವೆಯಿಂದ ಹೊಲಿದು ಒಳಗೆ ಚಿಂದಿ ಅರಿವೆ ಇಲ್ಲವೆ ಅರಳೆ ತುಂಬಿರುತ್ತಾರೆ. ಬಿಳಿ ಬಣ್ಣದಿಂದ ಕಣ್ಣು, ಮೂಗು, ಬಾಯಿಗಳನ್ನು ಬರೆದಿರುತ್ತಾರೆ.

**೨. ಕೆಂಪು ಪ್ರಧಾನ ಶಿಲ್ಪಗಳು :** ಕೆಲವೆಡೆ ಈ ದೃಷ್ಟಿ ಗೊಂಬೆಗಳನ್ನು ಕೆಂಪು ಬಣ್ಣಗಳಿಂದ ಬಳೆದು ಕಪ್ಪು ಹಾಗೂ ಬಿಳಿ ಬಣ್ಣದಿಂದ ಕಣ್ಣು, ಮೂಗು, ಕಿವಿ, ಬಾಯಿ, ಮೀಸೆಯನ್ನು ಬರೆದಿರುತ್ತಾರೆ. ನೋಡಲು ಉಗ್ರರೂಪದ ಮುಖಭಾವವಿರುತ್ತದೆ.

**೨.೨ ಹಿಟ್ಟಿನ ಶಿಲ್ಪಗಳು :** ಮಹಾನವಮಿಯು ನಮ್ಮ ಗ್ರಾಮೀಣರು ಆಚರಿಸುತ್ತ ಬಂದ ಪ್ರಮುಖ ಹಬ್ಬಗಳಲ್ಲಿ ಒಂದು. ಈ ಹಬ್ಬದಲ್ಲಿ ದೇವಿಯ ಪೂಜೆ ಮಾಡಿ, ಜಗಲಿಯ ಮೇಲೆ ಜೋಳ, ಗೋದಿ, ಜವೆ ಗೋದಿ ಹೀಗೆ ಅನೇಕ ಬೀಜಗಳನ್ನು ತೆಗೆದುಕೊಂಡು ಸಸಿ ಬೆಳೆಸುತ್ತಾರೆ. ಇದಕ್ಕೆ ಸಸಿ ಹಾಕುವುದು ಎನ್ನುತ್ತಾರೆ. ಕೆಲವರು ಐದು ದಿವಸ ಹಾಕಿದ ಸಸಿ ಇಟ್ಟು ಪೂಜಿಸಿದರೆ, ಇನ್ನೂ ಕೆಲವರು ಒಂಭತ್ತು ದಿವಸದ ದೇವರ ಸಸಿ ಹಾಕಿ, ದೀಪವಿಟ್ಟು ಪೂಜೆಗೈಯುತ್ತಾರೆ. ಪೂಜೆಯ ಸಂದರ್ಭಕ್ಕೆ ಪೂಜೆಗೆಂದು ತರಗವೆಂಬ ಗೋದಿಯ ಹಿಟ್ಟಿನಿಂದ ಗುಂಡು ಚಪಾತಿಯ ತರಹ, ಬಳೆಯ ತರಹ, ಹೆಂಗಸರ

[illegible]

[illegible]

[illegible]

[illegible]

[illegible]

[illegible]

ಹೆಳಲಿನ ತರಹ ಹೀಗೆ ವೈವಿಧ್ಯಮಯವಾದ ಆಕಾರದ ಹಿಟ್ಟಿನ ಶಿಲ್ಪಗಳನ್ನು ಮಾಡಿ ಸಸಿಯ ಮೇಲೆ ಕಟ್ಟಿರುತ್ತಾರೆ. ಕೆಲವೆಡೆ ಹಿಟ್ಟಿನಿಂದ ಹುಂಜ, ಬಸವಣ್ಣನ ಶಿಲ್ಪಗಳನ್ನು ಮಾಡುವುದಿದೆ.

**ಗುಪ್ತಾಂಗಗಳ ರೂಪದ ಹಿಟ್ಟಿನ ಶಿಲ್ಪಗಳು :** ನಮ್ಮ ಜನಪದರಲ್ಲಿ ಕೆಲವು ಆಚರಣೆಗಳ ಸಂದರ್ಭಗಳಲ್ಲಿ ಸ್ತ್ರೀ-ಪುರುಷರ ಗುಪ್ತಾಂಗಗಳನ್ನು ಹೋಲುವಂತಹ ಹಿಟ್ಟಿನ ಶಿಲ್ಪಗಳನ್ನು ತಯಾರಿಸುತ್ತಾರೆ. ಕೆಲವೊಮ್ಮೆ ಇವು ತಿಂಡಿ ಅಥವಾ ಮಿಠಾಯಿಗಳಾಗಿರುತ್ತವೆ. ಇವುಗಳನ್ನು ದೇವತೆಗಳಿಗೆ ಸಮರ್ಪಿಸಿ ತಮ್ಮಲ್ಲೇ ವಿತರಣೆ ಮಾಡಿ ತಿನ್ನುತ್ತಾರೆ. [೫೬] ಹೀಗೆ ಮಾಡುವುದರಿಂದ ಹೆಂಗಸಿನ ಗುಪ್ತಾಂಗಕ್ಕೆ ಅಂಟಿಕೊಂಡಿರುವ ದೋಷಗಳು ತೊಲಗುತ್ತವೆಯೆಂಬ ನಂಬಿಕೆಯಿದೆ.

ಹೆಣ್ಣುಮಕ್ಕಳು ಮೈನೆರೆದರೆ ಚಿಗಲಿ ತಂದು ಹೆಂಗಸಿನ ಗುಪ್ತಾಂಗದ ರೂಪ ಮಾಡಿ [೫೭] ಅದರ ದೋಷ ಪರಿಹಾರಾರ್ಥವಾಗಿ ಇತರರಿಗೆ ಹಂಚುವುದಿದೆ.

## ಅರಿಷಿಣ ಗೌರಮ್ಮ ಶಿಲ್ಪ

ಗಣೇಶನ ಹಬ್ಬದ ಹಿಂದಿನ ದಿನವನ್ನು ಗೌರಿ ಹಬ್ಬದ ದಿನವೆಂದು ಕರೆಯಲಾಗುತ್ತದೆ. ಈ ಹಬ್ಬದ ಸಂದರ್ಭದಲ್ಲಿ ಹೆಂಗಸರು, ಅರಿಷಿಣದ ಹಿಟ್ಟಿನಿಂದ ಶಿಲ್ಪವೊಂದನ್ನು ಮಾಡುತ್ತಾರೆ. ಇದನ್ನು ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಅರಿಷಿಣ ಗೌರಮ್ಮನೆಂದೇ ಕರೆಯುತ್ತಾರೆ.

**ರಚನೆ :** ಹಬ್ಬದ ದಿನದಂದು ಬೆಳಿಗ್ಗೆ ಹೆಂಗಸರು ಮಡಿ ಉಟ್ಟು, ಪೂಜಾ ದ್ರವ್ಯಗಳೊಂದಿಗೆ, ವಾದ್ಯ ಸಮೇತರಾಗಿ ಕೆರೆ, ಹಳ್ಳ ಅಥವಾ ಬಾವಿಯ ಸಮೀಪ ಹೋಗಿ ಗಂಗೆಗೆ ಪೂಜೆ ಸಲ್ಲಿಸುತ್ತಾರೆ. ಅಲ್ಲಿಯೇ ಅರಿಷಿಣ ಹಿಟ್ಟಿನಿಂದ ಗೌರಮ್ಮನ ಶಿಲ್ಪವೊಂದನ್ನು ಮಾಡುವರು. ಅದು ಸುಮಾರು ಒಂದೂವರೆ ಅಂಗುಲ ಅಗಲ ಹಾಗೂ ಎರಡು ಅಂಗುಲದಷ್ಟು ಎತ್ತರವಾಗಿರುತ್ತದೆ. ಈ ಶಿಲ್ಪವನ್ನು ವೀಳ್ಯೆದೆಲೆಯ ಮೇಲೆ ಇಟ್ಟು ಪೂಜಿಸುವರು. ಮಾರನೆಯ ದಿನ ಮಣ್ಣಿನ ಗಣೇಶನನ್ನು ತಂದು, ಗೌರಮ್ಮನ ಪಕ್ಕದಲ್ಲಿರಿಸಿ, ಪೂಜೆ ಮಾಡುವರು. [೫೮] ಹಾಡು ಹೇಳುವರು.

**ವಿಸರ್ಜನೆ :** ಮಾರನೆಯ ದಿನ ಈ ಶಿಲ್ಪವನ್ನು ಯಾರೂ ತುಳಿಯದ ಜಾಗದಲ್ಲಿ ಒಯ್ದು ಇಡುವರು. ಇಲ್ಲವೆ ನೀರಿನಲ್ಲಿ ವಿಸರ್ಜನೆ ಮಾಡುವರು. ಈ ಆಚರಣೆ ಬೆಳಗಾಂವ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

---

೫೬. ಮೂಲ. ತಾಪಿ ಧರ್ಮಾರಾವ್ : ಅನು. ಎಸ್.ಆರ್. ಶಾಸ್ತ್ರೀ : ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ, ಪುಟ -೬೫
೫೭. ..... ಅದೇ ....., ಪುಟ -೬೬
೫೮. ಡಾ. ಚಂದ್ರಶೇಖರ ಕಂಬಾರ (ಸಂ): ಕನ್ನಡ ಜಾನಪದ ವಿಶ್ವಕೋಶ, ಪುಟ - ೭೦೪

**೨.೩ ಮಾಟ, ಮಂತ್ರಗಳಲ್ಲಿ ಶಿಲ್ಪಗಳು :** ಮಾಟವು ಅನಾದಿ ಕಾಲದಿಂದಲೂ ಜಗತ್ತಿನ ತುಂಬ ಪ್ರಚಲಿತವಿರುವ ಒಂದು ವಿದ್ಯೆ. ಮನುಷ್ಯನು, ತನಗೆ ಜೀವದ ಬಗ್ಗೆ ಅತಿಯಾದ ಕಾಳಜಿ ಮತ್ತು ಏನೋ ಅಸಾಮಾನ್ಯವಾದುದನ್ನು ಪಡೆಯಬೇಕೆಂಬ ಹುಮ್ಮಸ್ಸಿನಿಂದ ಮಾನವ ಹಾಕಿಕೊಂಡ ಲೆಕ್ಕಾಚಾರದ ಫಲವಾಗಿ ಈ ಮಾಟ ಬಳಕೆಯಲ್ಲಿ ಬಂದಿತೆಂದು ತೋರುತ್ತದೆ[೫೯] ಎಂಬುದಾಗಿ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಬೇಟೆಯಾಡಲು ಹೋಗ ಬಯಸಿದ ಆದಿ ಮಾನವನು ತನಗೆ ಬೇಟೆ ಸಿಗಲಿ ಎಂಬ ಉದ್ದೇಶದಿಂದ ತಾನು ಬೇಟೆಮಾಡಬಯಸಿದ ಪ್ರಾಣಿಯ ಆಕೃತಿಯನ್ನು ಚಿತ್ರದಲ್ಲಿ ಬರೆದೋ, ಕೆಸರಿನಿಂದ ರಚಿಸಿಯೋ ಅಥವಾ ಹಿಟ್ಟಿನಿಂದ ತಯಾರಿಸಿ, ಅದಕ್ಕೆ ಬಾಣದಿಂದ ಚುಚ್ಚಿ, ವಿಜಯದ ಹುಮ್ಮಸ್ಸನ್ನು ತುಂಬಿಕೊಳ್ಳುತ್ತಿದ್ದನು ಎಂಬ ಸಂಗತಿಯಲ್ಲಿ ಮಾಟದ ಅಂಶ ಕಾಣುತ್ತದೆ. ಭಾನಾಮತಿಯಂತಹ ಮಾಟದ ವಿಧಾನಗಳು ಇಂತಹ ಅಂಶಗಳಿಂದಲೇ ಕೂಡಿವೆ ಎಂಬುದು ಗಮನಾರ್ಹ.

ಮಾಟದಲ್ಲಿ ಕಪ್ಪು ಮಾಟ, ಬಿಳಿ ಮಾಟ ಎಂದು ಎರಡು ಬಗೆ.

೧. ಕಪ್ಪು ಮಾಟವು ಬೇರೊಬ್ಬನಿಗೆ ಕೆಟ್ಟದ್ದನ್ನು ಮಾಡುವುದು.

೨. ಬಿಳಿ ಮಾಟವು ಮಾಟ ಮಾಡುವವನ ಅಥವಾ ಬೇರೊಬ್ಬರ ತೊಂದರೆಯನ್ನು ದೂರ ಮಾಡುವುದಕ್ಕೆ ಉಪಯೋಗಿಸುವ ತಂತ್ರವಾಗಿದೆ.[೬೦] ಮಾಟವು ಆದಿ ಮಾನವವನ ಅಧಮ್ಯ ಆಸೆಗಳ ಫಲವಾಗಿ ರೂಪುಗೊಂಡ ಒಂದು ತಂತ್ರವಾಗಿದೆ ಎಂದು ಡಾ. ವೀರಣ್ಣ ದಂಡೆ ಅಭಿಪ್ರಾಯ ಪಡುತ್ತಾರೆ.[೬೧]

ಸ್ವಾಮಿ, ಸಾಧು, ಸನ್ಯಾಸಿ, ಬಾವಾ, ಫಕೀರ ಮತ್ತು ಋಷಿಗಳೆಲ್ಲ ಮಾಯ-ಮಂತ್ರ ಬಲ್ಲವರಾಗಿದ್ದರು. ಇವರೆಲ್ಲ ಎಂಥದೋ ಕಾರಣಕ್ಕಾಗಿ ಪ್ರಾಪಂಚಿಕ ಜೀವನದಲ್ಲಿ ಜಿಗುಪ್ಸೆ, ನಿರಾಸೆ ಹೊಂದಿದವರು. ಅದೇನೇ ಇರಲಿ, ಈ ಸಂದರ್ಭಗಳಲ್ಲಿ ಅನೇಕ ತರಹದ ಶಿಲ್ಪಗಳನ್ನು ರಚಿಸಲಾಗಿರುತ್ತದೆ. ಬೆಕ್ಕು, ಹಾವು, ಹಾವ್ರಾಣಿ, ಓತಿಕಾಟ, ಪ್ರಾಣಿಗಳು, ಬಾಣಂತಿ ತಲೆಬುರುಡೆ, ಹಸ್ತ ಅಲ್ಲದೆ ಅನೇಕ ತರಹದ ಸಸ್ಯ, ವಸ್ತು, ಹಿಟ್ಟು, ಅರಿವೆ ಇತ್ಯಾದಿ ಮಾಧ್ಯಮಗಳಲ್ಲಿ ಹುಟ್ಟಿಕೊಂಡಿರುತ್ತವೆ.

ಪ್ರಕೃತಿಯನ್ನು ಭೂತ, ಪ್ರೇತಾದಿಗಳನ್ನು ರಹಸ್ಯ ರೀತಿಯಲ್ಲಿ ಆಧೀನದಲ್ಲಿಟ್ಟುಕೊಂಡು ಘಟನೆಗಲ ಗತಿಯನ್ನು ಮಾರ್ಪಡಿಸಲಾಗುವುದೆಂಬ ಅಭಿಪ್ರಾಯವುಳ್ಳ ವಿದ್ಯೆಯನ್ನು Magic ಎಂದೂ, ಮಾಟ,ಮಂತ್ರ ಗಾರುಡಿ, ಅಭಿಚಾರ ಇವೆಲ್ಲಾ ಅದರ ಸಂವಾದಿ ಪದಗಳೆಂದೂ ನಿಘಂಟುಗಳಲ್ಲಿ ಹೇಳಲಾಗಿದೆ.[೬೨]

ಕೆಲವೊಂದು ವಿಧಿ-ವಿಧಾನಗಳ ಮೂಲಕ ಪ್ರಕೃತಿಯ ಶಕ್ತಿಯನ್ನು ಅಂಕಿಸಿ ತಮ್ಮ ಅಥವಾ ತಮ್ಮವರ

---

೫೯. ಡಾ. ಎಂ.ಜಿ. ಬಿರಾದಾರ (ಸಂ) : ಕಲಾ ಗಂಗಾ, ೧೯೮೯, ಲೇ. ಡಾ. ವೀರಣ್ಣ ದಂಡೆ : ಜಾನಪದ ಕಲೆಗಳಲ್ಲಿ ಮಾಟ, ಪುಟ -೨೬

೬೦. ..... ಅದೇ ....., ಪುಟ -೨೭

೬೧. ..... ಅದೇ ....., ಪುಟ -೨೬

೬೨. ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಪುರುಷೋತ್ತಮ ಬಿಳಿಮಲೆ(ಸಂ) : ಜಾನಪದ ಕೈಪಿಡಿ, ಪುಟ -೩೮೪

[illegible]

[illegible]

[illegible]

[illegible]

[illegible]

ಒಳಿತಿಗಾಗಿ ಅಥವಾ ತಮಗಾಗದವರ ನಾಶಕ್ಕಾಗಿ ಬಳಸಿಕೊಳ್ಳುವ ತತ್ವ ಮಾಟದಲ್ಲಿ ಕಾಣಿಸಿಕೊಳ್ಳುತ್ತದೆ. ಜಗತ್ತಿನ ಎಲ್ಲೆಡೆಯ ಮಾಟದ ವಿಧಿ-ವಿಧಾನಗಳನ್ನು ಅಭ್ಯಸಿಸಿ ವಿವರಿಸಿದ ಫ್ರೆಜರ್ ಇದರ ಹಿಂದೆ ಇರುವ ಎರಡು ತತ್ವಗಳನ್ನು ಗುರುತಿಸಿದ್ದಾರೆ.[೬೩] ಒಂದು ಸಾದೃಷ್ಯ ನಿಯಮ ( Low of Similarity ), ಇನ್ನೊಂದು ಸಂಪರ್ಕ ನಿಯಮ ( Low of Contagious ).

ಒಬ್ಬ ವ್ಯಕ್ತಿ ತನಗಾಗದವರ ಮೇಲೆ ಮಾಂತ್ರಿ ನೆರವಿನಿಂದ ಮಾತನಾಡಿಸಿದಾಗ ಮಾಂತ್ರಿಕ ಶತೃವಿನ ಸಾಂಕೇತಿಕ ಪ್ರತಿಮೆಯನ್ನು ಮರದಿಂದಲೋ, ಹಿಟ್ಟಿನಿಂದಲೋ ಮಾಡಿ ಅದನ್ನು ಮಂತ್ರಪೂರ್ವಕವಾಗಿ ಮೊಳೆಯಿಂದ, ಸೂಜಿಯಿಂದ ಚುಚ್ಚುವುದು, ಕತ್ತು ಹಿಸುಕುವುದು ಮಾಡಿದಾಗ ಉದ್ದೇಶಿತ ವ್ಯಕ್ತಿಗೆ ಕೆಡುಕಾಗುತ್ತದೆ ಎಂಬ ನಿಲುವಿನಲ್ಲಿ ಸಾದೃಷ್ಯ ನಿಯಮ ಗುರುತಿಸಲಾಗುತ್ತದೆ. ಇದೇ ನಿಯಮವನ್ನು ಹಿತಕಾರಕ ಮಾಟಗಳಲ್ಲೂ ಕಾಣಬಹುದು. ಉದಾ: ಹತ್ತಿಯ ಗೊಂಬೆಯನ್ನು ಮಕ್ಕಳಿಲ್ಲದವಳು, ತಬ್ಬಿ ಮಲಗುವುದು, ಅದಕ್ಕೆ ಮೊಲೆಯೂಡಿಸುವುದು ಮುಂತಾದವು. ಇಲ್ಲೆಲ್ಲ ಸಾದೃಷ್ಯ ನಿಯಮವನ್ನು ಗುರುತಿಸಬಹುದು. ಮಾಟಗಾರ ತಾನು ಮಾಡಬೇಕೆಂದು ಉದ್ದೇಶಿಸಿದ ವ್ಯಕ್ತಿಯ ಸಂಪರ್ಕ ಪಡೆದ ಬಟ್ಟೆ, ಉಗುರು, ಕೂದಲು ಮೊದಲಾದ ಯಾವುದಾದರೂ ವಸ್ತುವಿನ ಮೇಲೆ ಮಾಟ ಮಾಡಿದರೆ, ಅದರ ಪರಿಣಾಮ ಉದ್ದೇಶಿತ ವ್ಯಕ್ತಿಯ ಮೇಲಾಗುತ್ತದೆ ಎಂದು ನಂಬುವುದರಲ್ಲಿ ಸಂಪರ್ಕ ನಿಯಮ ಕಾಣಬಹುದು. ಈ ಬಗೆಯ ಮಾಟವನ್ನು ಸಂಪರ್ಕ ಮಾಟವೆಂದು ಕರೆಯಬಹುದು.[೬೪]

ಮಾಟ ತಾಳುವ ಭಿನ್ನ ರೂಪಗಳಲ್ಲಿ ಮಂತ್ರ, ಯಂತ್ರಗಳೂ ಸೇರುತ್ತವೆ. ( ಇಂಗ್ಲೀಷನಲ್ಲಿ ಇದಕ್ಕೆ Charms ಎನ್ನುತ್ತಾರೆ ) ಗೂಢ ಅಥವಾ ದೈವಿಕ ಶಕ್ತಿಯುಳ್ಳ ರಕ್ಷೆಯೆಂದು ಹೇಳುವ ಶ್ಲೋಕ, ವಾಕ್ಯ, ಶಬ್ಧ, ಕೃತ್ಯ, ವಸ್ತು, ಮಂತ್ರ ಪೀಡ ನಿವಾರಕವಾಗಿ ಧರಿಸುವ ರಕ್ಷೆಯ ತಾಯಿತ ಯಂತ್ರ ಇವು ಅನಿಷ್ಟ ಪರಿಹಾರಾರ್ಥವಾಗಿ ಮಾನವ ಆಚರಿಸುವ ಸಂಪ್ರದಾಯಗಳಲ್ಲಿ ಸೇರುತ್ತವೆ. ಎಳೆ ಕೂಸುಗಳಿಗೆ ಬರುವ ಸಣ್ಣ ಪುಟ್ಟ ಕಾಯಿಲೆಗಳಿಗೆ ವಿಭೂತಿ ಮಂತ್ರಿಸಿ ಕೊಡುವ, ಮಂತ್ರಿಸಿದ ಲೋಹದ ಹಾಳೆಯಿಂದ ಮಾಡಿದ ತಾಯಿತ ಕಟ್ಟುವ ಪದ್ಧತಿ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಕಾಣಬಹುದು. ಈ ತಾಯಿತಗಳ ಮೇಲೆ ಹನುಮಂತ, ವೀರಭದ್ರ ಮುಂತಾದ ಪೀಡನಿವಾರಕ ದೇವತೆಗಳ ಉಬ್ಬೊತ್ತಿನ ಶಿಲ್ಪಗಳಿರುತ್ತವೆ.

**೨.೪ ಮೋಡಿ ಆಟದಲ್ಲಿನ ಶಿಲ್ಪಗಳು :** ಮೋಡಿ ಕಲೆಯು ಕರ್ನಾಟಕದ ಬಹುತೇಕ ಪ್ರದೇಶಗಳಲ್ಲಿ ಕಂಡುಬರುತ್ತದೆ. ಈ ಕಲೆಯು ಯಾವುದೇ ಒಂದು ಕೋಮಿಗೆ ಸೀಮಿತವಾಗಿಲ್ಲ. ಸಾಮಾನ್ಯವಾಗಿ ಕೆಳವರ್ಗದವರಲ್ಲಿ ಈ ಕಲೆಯು ಕಂಡು ಬರುತ್ತದೆ.

ಮೋಡಿಯಲ್ಲಿ ಕೈಚಳಕ ಮತ್ತು ಕಣ್‌ಕಟ್ಟು ಪ್ರಧಾನವಾದುದು. ಇದನ್ನು ಮಾಟ, ಮಂತ್ರ ಎಂದೂ

---

೬೩. ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಪುರುಷೋತ್ತಮ ಬಿಳಿಮಲೆ(ಸಂ) : ಜಾನಪದ ಕೈಪಿಡಿ, ಪುಟ -೩೮೪
೬೪. ..... ಅದೇ .....

[illegible]

[illegible]

[illegible]

[illegible]

[illegible]

[illegible]

ಕರೆಯಲಾಗುತ್ತದೆ. ಇವರನ್ನು ಸಾಮಾನ್ಯವಾಗಿ ಮೋಡಿಕಾರರೆಂದು ಕರೆಯುತ್ತಾರೆ. ಒಂದು ಕಾಲಕ್ಕೆ ಉತ್ತರ ಕರ್ನಾಟಕದಲ್ಲಿ ಸಾಮಾನ್ಯವಾಗಿ ಮೋಡಿ ಪ್ರದರ್ಶಿಸಲಾಗುತ್ತಿತ್ತು. ಈ ಮೋಡಿ ಪ್ರದರ್ಶನ ಎರಡು ಪಕ್ಷಗಳ ಮಧ್ಯೆ ಪರಸ್ಪರ ವಿರುದ್ಧವಾಗಿ, ಸ್ಪರ್ಧಾತ್ಮಕವಾಗಿ ನಡೆಯುತ್ತದೆ. ಕೆಲವೊಮ್ಮೆ ಒಂದೇ ಗುಂಪು ಈ ಪ್ರದರ್ಶನವನ್ನು ನೀಡುತ್ತದೆ. ಮೋಡಿ ಆಟದಲ್ಲಿ ರಾಜಮೋಡಿ ಮತ್ತು ರಣಮೋಡಿ ಎಂದು ಎರಡು ವಿಧಗಳಿವೆ. ಕಾಗದದಲ್ಲಿ ರೂಪಾಯಿ ನೋಟು ಮಾಡುವದು, ಬೇವಿನ ಸೊಪ್ಪನ್ನು ತಿಂದು ಜೇಳು ಉಗುಳುವುದು, ಕಲ್ಲನ್ನು ಸಕ್ಕರೆ ಮಾಡುವುದು ಇತ್ಯಾದಿ ಇದರ ವೈಚಿತ್ರ್ಯಗಳು. ಇದು ಹೆಚ್ಚು ಆಶ್ಚರ್ಯ ಮತ್ತು ಮನೋರಂಜನೆ ನೀಡುವಂತಹದು. ಈ ಕಲೆ ಗುರು ಮುಖೇನ ಇಲ್ಲವೆ, ವಂಶಪಾರಂಪರ್ಯವಾಗಿ ಮುಂದುವರೆಸಿಕೊಂಡು ಬಂದುದಾಗಿದೆ. ಈ ಆಟ ಪ್ರದರ್ಶಿಸುವವರ ಧೈರ್ಯವನ್ನು ಅವಲಂಭಿಸಿರುವುದರಿಂದ ಕೆಲವೊಮ್ಮೆ ಪ್ರಾಣಕ್ಕೂ ಅಪಾಯವಿರುವುದುಂಟು. ಹೀಗಾಗಿ ಕರಕಾರದ ಅನುಮತಿ ಪಡೆದು ಇದನ್ನು ಪ್ರದರ್ಶಿಸಲಾಗುವುದು. ಈ ಮೋಡಿ ಪ್ರದರ್ಶನದ ಸಂದರ್ಭದಲ್ಲಿ ಅನೇಕ ಶಿಲ್ಪಗಳನ್ನು ರಚಿಸಲಾಗುವುದು.

**ರಚನೆ :** ರಣಮೋಡಿ ಪ್ರದರ್ಶನದ ಸಂದರ್ಭದಲ್ಲಿ ಮಂಡಲ ಹಾಕಲಾಗಿರುತ್ತದೆ. ಇದರ ಒಂದು ಕಡೆ ಚಿಕ್ಕದಾದ ಹಸಿರು ಚಪ್ಪರ ಹಾಕಿ ಅದಕ್ಕೆ ತೆರೆ ಕಟ್ಟಿ ಒಂದು ಚೌಡಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿರುತ್ತದೆ. ಇದು ಮಣ್ಣಿನಿಂದ ಮಾಡಿದ ಶಿಲ್ಪವಾಗಿರುತ್ತದೆ. ಅದಕ್ಕೆ ಅರಿಷಿಣ, ಕುಂಕುಮದ ಅರ್ಚನೆ ಮಾಡಿ ಅದಕ್ಕೆ ಪ್ರಾಣ ಪ್ರತಿಷ್ಠೆ ತುಂಬುತ್ತಾರೆ. ಪೂಜೆಯಲ್ಲಿ ಕಣಗಲ ಹೂ, ಹಣ್ಣು, ಕಾಯಿ ಬಳಸುವರು. ಇವುಗಳ ರಚನೆ ಮತ್ತು ಪ್ರದರ್ಶನದಲ್ಲಿ ಪ್ರಾದೇಶಿಕವಾಗಿ ಕೆಲವು ವ್ಯತ್ಯಾಸಗಳೂ ಕಂಡುಬರುತ್ತವೆ.[೬೫]

ಕಣ್ಣು ಕಿತ್ತು ತೋರಿಸುವುದು, ಎರಡು ಅಡಿ ಉದ್ದದ ಕತ್ತಿಯನ್ನು ನುಂಗುವುದು, ಕೆಂಪಗೆ ಕಾದ ಕಬ್ಬಿಣವನ್ನು ನಾಲಿಗೆ ಮೇಲೆ ಇಟ್ಟುಕೊಳ್ಳುವುದು, ತಲೆಯಿಂದ ಮುಂಡವನ್ನು ಬೇರ್ಪಡಿಸಿ ತೋರಿಸುವುದು, ಇತ್ಯಾದಿ ಪ್ರದರ್ಶಿಸುತ್ತಾರೆ. ವಿಸ್ಮಯಗಳ ಪ್ರದರ್ಶನ ಕಲೆ ಈಚೆಗೆ ಮಾಯವಾಗಿದೆ. ರಣಮೋಡಿಗಂತೂ ಸರಕಾರವೇ ನಿರ್ಭಂದ ಹೇರಿದೆ.

ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕಿನ ಕಣಮೇಶ್ವರದಲ್ಲಿ ಪಂಚಾಳ ಜನಾಂಗದವರು ಈ ಮೋಡಿ ಪ್ರದರ್ಶನದಲ್ಲಿ ಅತ್ಯಂತ ಪ್ರಸಿದ್ಧರಾಗಿದ್ದರೆಂದು[೬೬] ಹೇಳುತ್ತಾರೆ. ಈಗ ಅವರೂ ಪ್ರದರ್ಶನವನ್ನು ನೀಡುವುದಿಲ್ಲ. ಹಂಪಿ ಹತ್ತಿರದ ಆನೆಗೊಂದಿ ಪರಿಸರದಲ್ಲಿ ಮೋಡಿಯಾಟ ಈಗಲೂ ಜನಪ್ರೀಯವಾಗಿದೆ. ಇಲ್ಲಿರುವ ಮೋಡಿಯಾಟದವರು ತಾವು ಬಹಳ ಹಿಂದಿನಿಂದಲೂ, ಅಂದರೆ ರಾಜ ಮಹಾರಾಜರ

---

೬೫. ಹಿ.ಚಿ. ಬೋರಲಿಂಗಯ್ಯ (ಸಂ) : ಕರ್ನಾಟಕ ಜಾನಪದ ಕಲೆಗಳ ಕೋಶ, ಪುಟ -೨೩೬

೬೬. ಶಂಕ್ರಪ್ಪ ಬಡಿಗೇರ : ಸಾ. ಕಣಮೇಶ್ವರ

ಕಾಲದಿಂದಲೂ ಈ ಆಟವನ್ನು ಆಡುತ್ತ ಬರುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಾರೆ.[೬೭] ಗೊಲ್ಲರಲ್ಲಿ ಮತ್ತು ಬೇಡರಲ್ಲಿ ಹೆಚ್ಚು ಸಂಖ್ಯೆಯಲ್ಲಿ ಮೋಡಿಕಾರರಿದ್ದಾರೆ. ಗೊಲ್ಲರಲ್ಲಿ ಮೋಡಿಯ ಬಗೆಗೆ ಹಲವು ಕಥೆಗಳೂ[೬೮] ಇವೆ.

ಧಾರ್ಮಿಕ ಹಾಗೂ ತಾಂತ್ರಿಕ ಹಿನ್ನೆಲೆಯಲ್ಲಿ ಬೆಳೆದು ಬಂದ ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಗಳು ವಿಶೇಷವಾಗಿ ಹಬ್ಬ ಹರಿದಿನಗಳು, ದೇವರ ಉತ್ಸವಗಳು ಇತ್ಯಾದಿ ಸಂದರ್ಭಗಳಲ್ಲಿ ರಚನೆಗೊಳ್ಳುವಂತಹವುಗಳಾಗಿವೆ. ಹಟ್ಟಿ ಹಬ್ಬದ ಪಾಂಡವರ ಶಿಲ್ಪಗಳು, ರಜಪೂತರ ಪಾಡವಾ ಶಿಲ್ಪಗಳು, ತುಳಸಿ ಶಿಲ್ಪಗಳು, ಸೀಗಮ್ಮನ ಶಿಲ್ಪಗಳು ಮುಂತಾದವುಗಳೆಲ್ಲ ರಚನೆಗೊಳ್ಳುವುದು ಮುಖ್ಯವಾಗಿ ಸ್ತ್ರೀ ಕೇಂದ್ರಿತವಾಗಿ. ಈ ಶಿಲ್ಪಗಳ ಆಚರಣೆಯ ಹಿಂದೆ ಜನಪದರು ಜೀವನದ ಸಮೃದ್ಧಿಗೆ ಸಂಬಂಧಿಸಿದಂತೆ ಹಲವು ಬಗೆಯ ಫಲಾಪೇಕ್ಷೆ ಇಟ್ಟುಕೊಂಡದ್ದು ಕಂಡುಬರುತ್ತದೆ. ಕಂಬಿಯ ಶಿಲ್ಪಗಳು, ದೇವರ ಪಾದ ಶಿಲ್ಪಗಳು, ಕರ್ಚಿ ಗೊಂಬೆ ಶಿಲ್ಪಗಳು ಜನಪದರ ಭಕ್ತಿ ಭಾವಗಳ ಸಂಕೇತವಾಗಿ ಮುಖ್ಯವಾಗುವುದರೊಂದಿಗೆ ಮನರಂಜನೆಯ ಕೇಂದ್ರವೂ ಆಗಿ ಗಮನ ಸೆಳೆಯುತ್ತವೆ. ದೃಷ್ಟಿ ಗೊಂಬೆ ಶಿಲ್ಪಗಳು, ಮಾಟ ಮಂತ್ರಗಳಲ್ಲಿನ ಶಿಲ್ಪಗಳು ಮುಂತಾದವುಗಳೆಲ್ಲ ಜನಪದರ ವಿವಿಧ ಬಗೆಯ ಆಚರಣೆಗಳಲ್ಲಿ, ವಿವಿಧ ಮಾಧ್ಯಮಗಳಲ್ಲಿ ರಚನೆಗೊಂಡು ಆಚರಣೆ ಮತ್ತು ವಿಧಿ ಕ್ರಿಯೆಗಳನ್ನು ತಿಳಿಸುವದರ ಜೊತೆಗೆ ಜನಪದರ ಸಂಸ್ಕೃತಿಯ ಕುರುಹುಗಳಾಗಿಯೂ ನಿಂತಿವೆ. ಇಂತಹ ಶಿಲ್ಪಗಲ ರಚನೆ, ಅಲಂಕಾರಗಳು ದೃಶ್ಯಾತ್ಮಕವಾಗಿ ಉಂಟು ಮಾಡುವ ಪರಿಣಾಮವೂ ಧಾರ್ಮಿಕ ಭಾವನೆಯನ್ನೂ ಬಲಗೊಳಿಸುವಂತಿರುತ್ತವೆ. ಶಿಲ್ಪಗಳಿಗೆ ಮಾಡಲಾಗುವ ಕುಂಕುಮ, ಅರಿಷಿಣಗಳ ಅಲಂಕಾರಗಳು ಆ ಶಿಲ್ಪಗಲ ಸುತ್ತಲೂ ಒಂದು ಬಗೆಯ ವಿಶಿಷ್ಟ ವಾತಾವರಣದ ಸೃಷ್ಟಿಯಾಗಲು ಕಾರಣವಾಗಿರುತ್ತವೆ.

## ೩. ಸಂಕೀರ್ಣ ಮಾಧ್ಯಮದ ವೃತ್ತಿಮೂಲ ಜನಪದ ಶಿಲ್ಪಕಲೆ

ಮನುಷ್ಯನ ಸಾಂಘಿಕ ಬದುಕಿನ ವಿಕಾಸವಾದಂತೆ ಸಾಮಾಜಿಕ ವ್ಯವಸ್ಥೆ ವೈವಿಧ್ಯಮಯವಾಗಿ ರೂಪಗೊಳ್ಳುತ್ತ ಬಂದಿತು. ಆತನ ಚಟುವಟಿಕೆಗಳು ಹೆಚ್ಚು ಕಲಾತ್ಮಕವಾಗತೊಡಗಿದವು. ಸಮಾಜದಲ್ಲಿನ ಇತರರನ್ನು ಮೆಚ್ಚಿಸುವ, ಒಲಿಸಿಕೊಳ್ಳುವ ಹಂಬಲದಿಂದ ತನ್ನ ಚಟುವಟಿಕೆಗಳಲ್ಲಿ ಸೌಂದರ್ಯವನ್ನು ತುಂಬಿ ಕಲಾತ್ಮಕಗೊಳಿಸಿದನು. ತನ್ನ ಉದರಂಬಣೆಗಾಗಿ ಅವಲಂಭಿಸಿದ ಹಲವಾರು ವೃತ್ತಿಗಳಲ್ಲೂ ಕೂಡ ಕಲೆಯನ್ನು ಬಳಸುವುದರ ಮೂಲಕ ಬೇರೆಯವರನ್ನೂ ಮೆಚ್ಚಿಸಿ, ತನಗೆ ಬೇಕಾದುದನ್ನು ಪಡೆದುಕೊಳ್ಳುತ್ತ ಬಂದನು. ಇಂಥ ಚಟುವಟಿಕೆಗಳನ್ನೇ ವೃತ್ತಿಯಾಗಿಸಿಕೊಂಡನು. ಕರ್ನಾಟಕದಲ್ಲಿ ಈ ಬಗೆಯ ವೃತ್ತಿಯಿಂದಲೇ ಬದುಕುವ ಅನೇಕ ಜನವರ್ಗಗಳವರು ಇದ್ದು ಅನೇಕ ಶಿಲ್ಪಗಳನ್ನು ಬಳಸುತ್ತಾರೆ.

---

೬೭. ವಿವರಗಳಿಗೆ ನೋಡಿ : ಡಾ. ಪುರುಷೋತ್ತಮ ಬಿಳಿಮಲೆ, ಚೆಲುವರಾಜು : ಹಂಪಿ ಜಾನಪದ, ಪುಟ -೧೫೨

೬೮. ..... ಅದೇ .....

[illegible]

[illegible]

[illegible]

[illegible]

ಈ ಬಗೆಯ ಸಂಕೀರ್ಣ ಮಾಧ್ಯಮದ ಶಿಲ್ಪಗಳನ್ನು ೧. ಹೊಟ್ಟೆಪಾಡಿನ ವೃತ್ತಿಯಲ್ಲಿ ಬಳಸುವ ಶಿಲ್ಪಗಳು, ೨. ವೇಷಗಾರರ ವೇಷಗಳಲ್ಲಿ ಬಳಸುವ ಶಿಲ್ಪಗಳು ಎಂದು ವಿಂಗಡಿಸಿ ಅಧ್ಯಯನ ಮಾಡಲಾಗಿದೆ.

**೧. ಹೊಟ್ಟೆಪಾಡಿನ ವೃತ್ತಿಯಲ್ಲಿ ಬಳಸುವ ಶಿಲ್ಪಗಳು :** ಕರ್ನಾಟಕದಲ್ಲಿ ಕೆಲವು ಜನವರ್ಗ ಹೊಟ್ಟೆ ಹೊರೆಯಲು ಹಲವು ವೃತ್ತಿಗಳನ್ನು ಅವಲಂಭಿಸಿದ್ದಾರೆ. ಅವುಗಳಲ್ಲಿ ಹೊಟ್ಟೆ ಹೊರೆಯುವ ನಿಟ್ಟಿನಲ್ಲಿ ಹಲವು ವೃತ್ತಿಗಳವರು ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಗಳನ್ನು ಬಳಸಿಕೊಂಡು ಬದುಕು ಸಾಗಿಸುತ್ತಾರೆ. ಅವುಗಳಲ್ಲಿ ಸುಡುಗಾಡಸಿದ್ಧರ ಆಟಗಳಲ್ಲಿನ ಶಿಲ್ಪಗಳು ಮುಖ್ಯವಾಗುತ್ತೆ.

**ಸುಡುಗಾಡು ಸಿದ್ಧರ ಆಟಗಳಲ್ಲಿನ ಶಿಲ್ಪಗಳು :** ಈ ಕಲೆಯನ್ನು ಪ್ರದರ್ಶಿಸುವ ಜನಾಂಗದವರು ಸುಡುಗಾಡುಗಳಲ್ಲಿದ್ದು ಕೆಲವೊಂದು ವಿದ್ಯೆಯನ್ನು ಸಿದ್ಧಮಾಡಿಕೊಳ್ಳುವುದರಿಂದ ಇವರಿಗೆ ಸುಡುಗಾಡು (ಸ್ಮಶಾನ) ಸಿದ್ಧ ಎಂದು ಹೆಸರು ಬಂದಿದೆ. [೧೯] ಇವರು ತೋರಿಸುವ ಜಾದು ರಾಜ ಮೋಡಿಗೆ ಸೇರಿದ್ದಾಗಿದ್ದು ಇವರು ಹಬ್ಬ, ಜಾತ್ರೆ, ಸಂತೆಗಳ ಸಂದರ್ಭಗಳಲ್ಲಿ ಕಂಡು ಬರುತ್ತಾರೆ. ಇವರ ದೇವರು ಮಲ್ಲಿಕಾರ್ಜುನ.

**ಶಿಲ್ಪಗಳು :** ಸುಡುಗಾಡುಸಿದ್ಧರು ಪ್ರದರ್ಶಿಸುವ ಆಟಗಳಲ್ಲಿ ಸಣ್ಣ ಸಣ್ಣ ಬಸವಣ್ಣ, ಲಿಂಗ ಮುಂತಾದ ಶಿಲ್ಪಗಳಿರುತ್ತವೆ. ಅಲ್ಲದೆ ಮೈತುಂಬ ಕೂದಲು ಇರುವಂತಹ ಮಲ್ಲಾಡ ಗುಬ್ಬಿ ಎಂಬ ಶಿಲ್ಪವನ್ನು ಪ್ರದರ್ಶಿಸುತ್ತ ಅದನ್ನು ಮಾತನಾಡಿಸುತ್ತ ಅಂದರೆ, ಮಲ್ಲಾಡ ಗುಬ್ಬಿ ಚೀವ್ ಎನ್ನುತ್ತಾ ದೇವರ ಹೆಸರು ಹೇಳುತ್ತ ಇರುತ್ತಾರೆ. ಇದನ್ನು ವಿಶಿಷ್ಟ ಪಕ್ಷಿ ಶಿಲ್ಪವೆನ್ನಬಹುದು. ಇದಕ್ಕೆ ಮಲ್ಲಾಡದ ಚೌಡಿ ಎಂದೂ ಹೇಳುತ್ತಾರೆ. [೨೦] ಈ ಸುಡುಗಾಡುಸಿದ್ಧರು ಹಲವಾರು ಬೆರಗುಗೊಳಿಸುವಂತಹ ಪ್ರದರ್ಶನಗಳನ್ನು ನೀಡುತ್ತಾ ಊರೂರು ತಿರುಗುವರು. ಇವರೂ ಈಗ ಅಪರೂಪವಾಗಿದ್ದಾರೆ.

**೨. ವೇಷಗಾರರ ವೇಷಗಳಲ್ಲಿ ಬಳಸುವ ಶಿಲ್ಪಗಳು :** ಹೊಟ್ಟೆ ಹೊರೆಯುವುದಕ್ಕಾಗಿ ಹಲವು ಜಾತಿ-ಜನವರ್ಗಗಳವರು ಕೆಲವು ವೇಷಗಳನ್ನು ಹಾಕಿ ಪ್ರದರ್ಶಿಸುವುದು ನಮ್ಮ ಜನಪದರಲ್ಲಿ ರೂಢಿಯಲ್ಲಿದೆ. ಅಂಥ ವೇಷಗಾರರು ವೇಷಗಳಲ್ಲಿ ಕೆಲವು ಶಿಲ್ಪಗಳು, ಮುಖವಾಡ ಶಿಲ್ಪಗಳೂ ರಚನೆಯಾಗಿರುತ್ತವೆ. ಅಂಥ ಕೆಲವೊಂದು ವೇಷಗಳಲ್ಲಿ ಕರಡಿ ವೇಷವೂ ಒಂದಾಗಿದೆ. ಈ ವೇಷ ಪ್ರದರ್ಶನದಲ್ಲಿ ಮುಖವಾಡವು ಮುಖ್ಯವಾಗಿ ಗಮನಿಸುವಂತಹುದಾಗಿದೆ.

**ಕರಡಿವೇಷದ ಮುಖವಾಡ ಶಿಲ್ಪಗಳು :** ಹಲವು ರೀತಿಯ ವೇಷಗಳನ್ನು ಹಾಕಿ ಜನರನ್ನು ರಂಜಿಸುವ ಅನೇಕ ತರಹದ ಪ್ರದರ್ಶನ ಕಲೆಗಳು ಕರ್ನಾಟಕದಲ್ಲಿ ಬೆಳೆದು ಬಂದಿವೆ. ಇಂಥ ಪ್ರದರ್ಶನ ಕಲೆಗಳ ವೇಷಗಳಲ್ಲಿ ಮುಖವಾಡದಂತಹ ಶಿಲ್ಪಗಳು ರಚನೆಗೊಂಡಿರುತ್ತವೆ. ಉತ್ತರ ಕರ್ನಾಟಕದ

---

೧೯. ಹಿ.ಚಿ. ಬೋರಲಿಂಗಯ್ಯ (ಸಂ) : ಕರ್ನಾಟಕ ಜಾನಪದ ಕಲೆಗಳ ಕೋಶ, ಪುಟ -೨೩೬
೨೦. ..... ಅದೇ .....

ಬೆಳಗಾಂವ, ಧಾರವಾಡ, ಬಿಜಾಪುರ, ಬಾಗಲಕೋಟ, ಹಾವೇರಿ, ಗದಗ ಜಿಲ್ಲೆಗಳಲ್ಲಿ ಕರಡಿ ವೇಷವನ್ನು ಪ್ರದರ್ಶಿಸುವುದು ಒಂದು ಜನಪದ ಕಲೆಯಾಗಿ ಬೆಳೆದು ಬಂದಿದೆ. ಬಾಗಲಕೋಟ ಜಿಲ್ಲೆಯಲ್ಲಿ ಹೋಳಿ ಹುಣ್ಣಿಮೆ, ಗೌರಿ ಹುಣ್ಣಿಮೆ, ಗೌರಿ ಹುಣ್ಣಿಮೆ, ಭಾರತ ಹುಣ್ಣಿಮೆಯ ಬೆಳದಿಂಗಳಲ್ಲಿ ಕರಡಿ ವೇಷ ಹಾಕುತ್ತಾರೆ. ಕೆಲವೆಡೆ ದೀಪಾವಳಿ, ಮೊಹರಂ ಮತ್ತು ಸುಗ್ಗಿಯ ಕಾಲದಲ್ಲಿ ಹಾಕುವುದುಂಟು. ಈ ವೇಷವನ್ನು ಹಾಕುವವರು ಯಾವುದೇ ಜಾತಿಯವರೇ ಆಗಿರಬಹುದು. ಆದರೂ ಸಾಮಾನ್ಯವಾಗಿ ತಳವಾರರು, ಅಂಬಿಗರು, ಕುರುಬರು, ಬೇಡರು, ಹರಿಜನರು ಈ ವೇಷವನ್ನು ಹಾಕುತ್ತಾರೆ. ಈ ವೇಷಗಾರರು ವೇಷ ಪ್ರದರ್ಶಿಸಿಯಾದ ಮೇಲೆ ದವಸ-ಧಾನ್ಯಗಳನ್ನು ನೀಡಿಸಿಕೊಳ್ಳುತ್ತಾರೆ.[೭೧] ಇತ್ತೀಚಿಗೆ ಈ ಕಲೆ ಅಪರೂಪವಾಗುತ್ತಿದೆ.

**ರಚನೆ :** ಹಳೆಯದಾದ ಎಣ್ಣೆ ಮರವನ್ನು ತಂದು ಕುಸಬಿಯನ್ನು ತಂದು ಹುರಿದು, ಅರಿವೆ ಸುಟ್ಟು ಅದರ ಬೂದಿಯೊಂದಿಗೆ ಎಣ್ಣೆ ಬೆರೆಸಿ ಮರಕ್ಕೆ ಹಚ್ಚುತ್ತಾರೆ. ಅದನ್ನು ಕರಡಿಯ ಮುಖದಂತೆ ಮಡಚುತ್ತಾರೆ. ಧರಿಸುವ ವೇಷಗಾರರಿಗೆ ಕಾಣುವಂತೆ ಮರಕ್ಕೆ ಎರಡು ರಂಧ್ರಗಳನ್ನು ಕೊರೆದಿರುತ್ತಾರೆ. ಆ ರಂಧ್ರಗಳೇ ಕರಡಿಯ ಕಣ್ಣುಗಳೂ ಕೂಡ ಆಗಿರುತ್ತವೆ. ಮೂಗಿಗೂ ರಂಧ್ರ ಮಾಡಿ ಸುಣ್ಣದಿಂದ ಕಣ್ಣಿನಂತೆ ಬರೆದಿರುತ್ತಾರೆ. ಅದೇ ಸುಣ್ಣದಿಂದಲೇ ಮೂಗು, ಮೊಗಡ, ಕಿವಿಗಳನ್ನು ಬರೆದಿರುತ್ತಾರೆ.[೭೨]

**ಪ್ರದರ್ಶನ ರೀತಿ :** ಮುಖವಾಡವನ್ನು ವೇಷ ಪ್ರದರ್ಶಿಸುವ ವ್ಯಕ್ತಿ ಮುಖಕ್ಕೆ ಹಾಕಿಕೊಂಡು ಚಿಕ್ಕ ಹಗ್ಗದಿಂದ ತಲೆಗೆ ಕಟ್ಟಿಕೊಂಡಿರುತ್ತಾನೆ. ಕೊರಳಿಗೆ ಗೆಜ್ಜೆಸರವಿರುತ್ತದೆ. ಕರಡಿಯ ಮುಖವಾಡ ಧರಿಸಿದವನ ಸೊಂಟವನ್ನು ಹಿಂದಿನಿಂದ ಬಾಗಿಕೊಂಡು ಹಿಡಿದುಕೊಂಡಿರುತ್ತಾನೆ. ಇವರಿಬ್ಬರ ಬೆನ್ನ ಮೇಲೂ ಕಂಬಳಿಯನ್ನು ಹೊದಿಸಲಾಗಿರುತ್ತದೆ. ಕರಡಿಯ ಮುಖ ಹೊರಗೆ ಕಾಣುತ್ತದೆ. ಹಲಗೆಯ ತಾಳಕ್ಕೆ ತಕ್ಕಂತೆ ಕರಡಿ ವೇಷಗಾರರು ಹೆಜ್ಜೆ ಹಾಕುತ್ತ ಊರಲ್ಲಿ ಅಡ್ಡಾಡುತ್ತಾರೆ. ಚಿಕ್ಕಮಕ್ಕಳನ್ನು ಈ ವೇಷದ ಕರಡಿಯ ಮೇಲೆ ಕೂಡಿಸುವುದು, ಬೋರಲಾಗಿ ಮಲಗಿಸುವುದು ಮಾಡುತ್ತಾರೆ. ಹೀಗೆ ಮಾಡುವುದರಿಂದ ಮಕ್ಕಳಿಗೆ ರೋಗರುಜಿನ, ಭಯ, ಮಾಟ-ಮಂತ್ರಗಳು ತಗಲುವುದಿಲ್ಲವೆಂದು ನಂಬುತ್ತಾರೆ. ನೈಜ ಕರಡಿಯ ಹಾಗೆಯೇ ಆಗಾಗ ಹಡ್ರಕ್, ಹಡ್ರಕ್ ಎಂದು ಧ್ವನಿ ಮಾಡುತ್ತಲಿರುತ್ತಾರೆ.

ಹೀಗೆ ಸಂಕೀರ್ಣ ಮಾಧ್ಯಮದ ವೃತ್ತಿಮೂಲ ಜನಪದ ಶಿಲ್ಪಕಲೆಯು ಹೊಟ್ಟೆ ಹೊರೆಯುವುದಕ್ಕಾಗಿ ಕೆಲವು ಬಿಕ್ಷಾ ಬಿಕ್ಷೆ ಬೇಡುವುದೇ ಇವರ ಉದ್ದೇಶವಾಗಿದ್ದರೂ, ಜನರನ್ನು ಮೆಚ್ಚಿಸಲು ಇಂತಹವರು ಹಲವು ಶಿಲ್ಪಗಳನ್ನು ವಿವಿಧ ವೇಷಗಳನ್ನು ರಚಿಸಿ ಪ್ರದರ್ಶಿಸುವರು. ಈ ರೀತಿಯಲ್ಲಿ ವಿವಿಧ ಬಗೆಯ ವೃತ್ತಿಯ ಸಂಗರ್ಭಗಳಲ್ಲಿ ನಮ್ಮ ಜನಪದರು ಸೃಷ್ಟಿಸಿದ ವಿವಿಧ ಮಾಧ್ಯಮದ ಶಿಲ್ಪಗಳು ಅವರ ವೈವಿಧ್ಯಮಯ ಬದುಕನ್ನು ಪ್ರತಿನಿಧಿಸುತ್ತವೆ. ಅವರ ಬದುಕಿನಲ್ಲಿ ಹಾಸು ಹೊಕ್ಕಾಗಿರುವ ಚಿಂದಿ ಬಟ್ಟೆ, ನಾರು, ಸಗಣಿ,


---

೭೧. ಹಿ.ಚಿ. ಬೋರಲಿಂಗಯ್ಯ (ಸಂ) : ಕರ್ನಾಟಕ ಜಾನಪದ ಕಲೆಗಳ ಕೋಶ, ಪುಟ -೨೪೦

೭೨. ವಿವರಗಳಿಗೆ ನೋಡಿ : ಪ್ರೊ. ಎಸ್.ಕೆ. ರಾಮಚಂದ್ರರಾವ್ : ಕರ್ನಾಟಕದ ಕಲೆಗಳು -೧, ಭೂಮಿಕೆ, ಪುಟ -೩೦-೩೨



ಸಕ್ಕರೆಯ ಮಂಟಪದ ಶಿಲ್ಪ

ನಾರಿನ ಶಿಲ್ಪಗಳು ( ಆಮೆ )






ರಾವಣನ ತಲೆಗಳ ಶಿಲ್ಪ



ಕಾಮನ ಶಿಲ್ಪ ( ಶಿರಗಾಪುರ )




ಕೀಲುಕುದುರೆ ಶಿಲ್ಪ




ಕರಡಿ ವೇಷದ ಶಿಲ್ಪ



ಬೂದ ಶಿಲ್ಪ ( ಸಗಣಿಯದು )



ಹಿಟ್ಟಿನ ಶಿಲ್ಪಗಳು.



ಮೋಡಿಯಾಟದಲ್ಲಿನ ಚೌಡಿಯ ಶಿಲ್ಪ

ಉಸುಗು, ಹಿಟ್ಟು, ಬೆಲ್ಲ, ಸಕ್ಕರೆ ಇಂತಹ ಪ್ರದಾರ್ಥಗಳು ಶಿಲ್ಪಗಳ ರಚನೆಗೆ ಮಾಧ್ಯಮಗಳಾಗಿ ಬಳಕೆಯಾಗಿವೆ. ಕಾಮಣ್ಣ, ಬೂದಗಾಮ ಇಂತಹ ಶಿಲ್ಪಗಳು ಪ್ರದೇಶದಿಂದ ಪ್ರದೇಶಕ್ಕೆ ರೂಪ ಆಕಾರಗಳಲ್ಲಿ ಮಾಧ್ಯಮಗಳಲ್ಲಿ ವೈವಿಧ್ಯತೆಗಲನ್ನು ಪಡೆದವುಗಳಾಗಿದ್ದು ಇಂತಹ ಶಿಲ್ಪಗಳು ಜನ ಸಮೂಹದ ಮೇಲೆ ಬೀರುವ ಪರಿಣಾಮಗಳು ವಿಶಿಷ್ಟ ಬಗೆಯವುಗಳಾಗಿರುತ್ತವೆ. ಊರಿನ ನಿರ್ಧಿಷ್ಟ ಸ್ಥಳಗಳಲ್ಲಿ ಪ್ರತಿ ವರ್ಷವೂ ಇಂತಹ ಶಿಲ್ಪಗಳು ರಚನೆಗೊಳ್ಳುವದರಿಂದ ಅಲ್ಲಿ ಸೇರುವ ಊರಿನ ಜನರೆಲ್ಲ ಹಿಂದಿನ ವರ್ಷದ ಶಿಲ್ಪಗಳಿಗೂ ಪ್ರಸ್ತುತ ವರ್ಷದ ಶಿಲ್ಪಗಳಿಗೂ ರೂಪ ಅಲಂಕಾರ ರಚನೆ ಇತ್ಯಾದಿಗಳ ಹಿನ್ನೆಲೆಯಲ್ಲಿ ಪರಸ್ಪರ ಹೋಲಿಕೆ ವ್ಯತ್ಯಾಸಗಳನ್ನು ಚರ್ಚಿಸುತ್ತಾರೆ. ಮಕ್ಕಳು ಮುದುಕರಾದಿಯಾಗಿ ಊರಿನ ಎಲ್ಲರೂ ಇಂಥ ಶಿಲ್ಪಗಳ ಆಚರಣೆಯಲ್ಲಿ ಪಾಲ್ಗೊಳ್ಳುತ್ತಾರೆ. ಶಿಷ್ಟಪದ ಶಿಲ್ಪ ನಿರ್ಮಿತಿಗೆ ಯಾವ ಪದಾರ್ಥಗಳು ಗಂಭೀರವಾಗಿ ಮಹತ್ವ ಪಡೆಯುವುದಿಲ್ಲವೋ ಅಂಥ ಎಲ್ಲ ಪದಾರ್ಥಗಳು ಜನಪದ ಶಿಲ್ಪಗಳ ನಿರ್ಮಿತಿಯಲ್ಲಿ ಮಹತ್ವ ಪಡೆದಿರುತ್ತವೆ. ಇವಲ್ಲದೆ ಮಹಿಳೆಯರ ಕೇಂದ್ರಿತವಾಗಿ ಮನೆಯಲ್ಲೇ ರಚಿಸಲ್ಪಟ್ಟು ಆಚರಣೆಗೊಳ್ಳುವ ಅರಿಷಿಣ ಗೌರಮ್ಮ, ಹಟ್ಟಿ ಹಬ್ಬದ ಪಾಂಡವರು, ಇಂತಹ ಹಲವಾರು ಶಿಲ್ಪಗಳೂ ಕೂಡ ಆಕಾರದಲ್ಲಿ ಚಿಕ್ಕದಾಗಿದ್ದರೂ ಆಚರಣೆ ದೃಷ್ಟಿಯಿಂದ ವಿಶಾಲ ಹಾಗೂ ಗಮನಾರ್ಹವಾದವುಗಳಾಗಿರುತ್ತವೆ. ಒಟ್ಟಿನಲ್ಲಿ ಸಂಕೀರ್ಣ ಮಾಧ್ಯಮದ ಇಂತಹ ಶಿಲ್ಪಗಳನ್ನು ಬೇರೆ ಬೇರೆ ದೃಷ್ಟಿಕೋಣಗಳಿಂದಲೂ ವಿಭಾಗಿಸಿ, ವಿಂಗಡಿಸಿ ನೋಡಲು ಅವಕಾಶವಿದೆ. ಪ್ರಸ್ತುತ ಅಧ್ಯಯನದಲ್ಲಿ ಈ ಶಿಲ್ಪಗಳು ಜನ್ಮ ತಳೆಯುವ ಮುಖ್ಯ ಸಂದರ್ಭಗಳು, ಸನ್ನಿವೇಶಗಳು, ಹಾಗೂ ಮಾಧ್ಯಮಗಳನ್ನು ಮುಖ್ಯವಾಗಿ ಗಮನದಲ್ಲಿರಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಅಧ್ಯಾಯ : ಎಂಟು

# ಸಮಾರೋಪ

ಜನಪದ ಸಮೂಹವು ಈ ನಾಡಿಗೆ ನೀಡಿದ ಅಪಾರ ಕೊಡುಗೆಗಳಲ್ಲಿ ಜನಪದ ಶಿಲ್ಪಕಲೆಯೂ ಒಂದು ಪ್ರಮುಖ ಭಾಗವಾಗಿದೆ. ಆಯಾ ನಾಡಿನ ಸಂಸ್ಕೃತಿಯ ಸೌರಭಕ್ಕೆ ಮುಖ್ಯ ಜನಪದವೇ ಆಗಿದೆ. ಈ ಆಶಯದ ಹಿನ್ನೆಲೆಯಲ್ಲೇ 'ಕರ್ನಾಟಕ ಜನಪದ ಶಿಲ್ಪಕಲೆ ಮಹಾ ಪ್ರಬಂಧ' ಸಿದ್ಧಗೊಂಡಿದೆ. ಮಾಧ್ಯಮದ ವೈವಿಧ್ಯತೆ ಮತ್ತು ವಿಸ್ತಾರದ ಹಿನ್ನೆಲೆಯಲ್ಲಿ ಏಳು ಅಧ್ಯಾಯಗಳಲ್ಲಿ ವಿಷಯದ ನಿರೂಪಣೆ ಮತ್ತು ವಿಶ್ಲೇಷಣೆ ಮಾಡಲಾಗಿದೆ.

ನಾಗರಿಕರ ಶಿಷ್ಟರೂಪದ ಬದುಕಿನ ಮೊದಲ ಹೆಜ್ಜೆ ಗುರುತುಗಳು ಜನಪದರಲ್ಲಿಯೇ ಇವೆ ಎಂಬುದನ್ನು ಸಮರ್ಥಿಸುತ್ತ ಜನಪದ ಸಂಸ್ಕೃತಿಯಲ್ಲಿ ಶಿಲ್ಪಕಲೆಯು ಪ್ರವೇಶ ಪಡೆದು ಚಿಗುರೊಡೆದ ಬಗೆಯನ್ನು ಮೊದಲ ಅಧ್ಯಾಯದಲ್ಲಿ ವಿವರಿಸಲಾಗಿದೆ. ಮುಂದುವರೆದು ಜನಪದ ಕಲೆಗಳು ಜನಪದ ಬದುಕು ಸಂಸ್ಕೃತಿಗಳ ಚೌಕಟ್ಟಿನಲ್ಲಿಯೇ ರೂಪಗೊಂಡು ಕ್ರಮೇಣ ಧಾರ್ಮಿಕ ಆಚರಣೆಗೊಳಗಾಗಿ ತಮ್ಮ ಅಸ್ಥಿತ್ವವನ್ನು ಕಂಡುಕೊಂಡು ಬೆಳೆದವು. ಹೀಗಾಗಿ ಪ್ರತಿಯೊಂದು ಜನಪದ ಕಲೆಗೂ ಸಂಪ್ರದಾಯದ ಸತ್ವಪೂರ್ಣ ಹಿನ್ನೆಲೆಯಿದೆ ಎಂಬ ಅಂಶಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಇದೇ ಅಧ್ಯಾಯದಲ್ಲಿ ಜನಪದ ಶಿಲ್ಪಕಲೆಯ ಕುರಿತು ಇದುವರೆಗೆ ನಡೆದ ಅಧ್ಯಯನಗಳ ಅವಲೋಕನ ಮಾಡಲಾಗಿದೆ. ಜನಪದರ ಎಷ್ಟೋ ಕಲೆಗಳು ಅವರ ಬದುಕಿನ ಭಾಗವೇ ಆಗಿ ಅಸ್ಪಷ್ಟ ನೆಲೆಯಲ್ಲಿ ಅಸ್ಥಿತ್ವದಲ್ಲಿದ್ದು ಕಾಲಕ್ರಮೇಣ ನಾಗರಿಕ ವರ್ಗದವರ ಸಂಪರ್ಕದಿಂದ ಶಿಷ್ಟರೂಪ ತಾಳಿವೆ. ಹೀಗಾಗಿ ಜನಪದ ಶಿಲ್ಪಕಲೆ ಶಿಷ್ಟಪದರ ಶಿಲ್ಪಕಲೆಗೆ ತಾಯ ತವರು ಎಂಬುದರ ವಿವರಣೆ ನೀಡಲಾಗಿದೆ.

ಜನಪದ ಶಿಲ್ಪಕಲೆ ಹಾಗೂ ಶಿಷ್ಟಪದ ಶಿಲ್ಪಕಲೆಯ ವೈಲಕ್ಷಣಗಳನ್ನು ಎರಡನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಅಲ್ಲದೆ ಅಧ್ಯಯನದ ಅನುಕೂಲತೆಗಾಗಿ ಜನಪದ ಶಿಲ್ಪಕಲೆಯ ವರ್ಗೀಕರಣದ ಅವಶ್ಯಕತೆಯನ್ನು ಹೇಳಿ ಮಾಧ್ಯಮಕ್ಕಣುಗುನವಾಗಿ ವರ್ಗೀಕರಣವನ್ನು ಮಾಡಿ ಅಧ್ಯಯನ ಮಾಡಲಾಗಿದೆ.

ಮೂರನೆಯ ಅಧ್ಯಾಯವಾದ ಮಣ್ಣಿನ ಮಾಧ್ಯಮದ ಜನಪದ ಶಿಲ್ಪಕಲೆಯಲ್ಲಿ ನಮ್ಮ ಜನಪದರಿಗೆ ಹೊನ್ನಿಗಿಂತಲೂ ಮಣ್ಣೇ ಮಿಗಿಲು ಎಂಬ ಮಾತನ್ನು ಉಲ್ಲೇಖಿಸುತ್ತ ಮಣ್ಣಿನ ಮಹತ್ವವನ್ನು ಹಾಗೂ ಈ ಮಣ್ಣಿನಲ್ಲಿ ಜನಪದ ಶಿಲ್ಪಕಲೆ ಅರಳಿ ರೂಪು ಪಡೆದುದನ್ನು ಸೋದಾಹರಣವಾಗಿ ವಿವರಿಸಲಾಗಿದೆ. ಅಲ್ಲದೆ ವೈವಿಧ್ಯಮಯವಾದ ಶಿಲ್ಪಗಳು, ಅವುಗಳ ರಚನೆ, ಶಿಲ್ಪಗಳ ರಚನೆಯ ಹಿಂದಿರುವ ಆಚರಣೆ, ನಂಬಿಕೆ,

ಸಂಪ್ರದಾಯ ಇತ್ಯಾದಿಗಳನ್ನು ವಿವರಿಸಲಾಗಿದೆ. ಜೊತೆಗೆ ನಮ್ಮ ಜನಪದರ ಬದುಕಿನಲ್ಲಿ ಧರ್ಮವು ಮಹತ್ವದ ಪಾತ್ರ ವಹಿಸಿರುವದರಿಂದ ಮಣ್ಣಿನ ಮಾಧ್ಯಮದ ಜನಪದ ಶಿಲ್ಪಕಲೆಯನ್ನು ಧರ್ಮಮೂಲ ಜನಪದ ಶಿಲ್ಪಕಲೆಯೆಂದು ಕರೆದು ಅದರಲ್ಲಿ ಉಪವಿಂಗಡಣೆಗಳನ್ನು ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

ಮರದ ಮಾಧ್ಯಮದ ಜನಪದ ಶಿಲ್ಪಕಲೆಯನ್ನು ಕುರಿತಾದ ನಾಲ್ಕನೆಯ ಅಧ್ಯಾಯದಲ್ಲಿ ಮರದ ಮಾಧ್ಯಮದ ಮಹತ್ವವನ್ನು ಹೇಳುತ್ತ ಈ ಮಾಧ್ಯಮದಲ್ಲಿ ಜನಪದ ಶಿಲ್ಪಗಳು ರಚನೆಯಾದುದನ್ನು ವಿವರಿಸಲಾಗಿದೆ. ಮುಖ್ಯವಾಗಿ ಮರದ ಮಾಧ್ಯಮದಲ್ಲಿ ರಚನೆಗೊಂಡ ಶಿಲ್ಪಗಳು ಸೌಂದರ್ಯ ಪ್ರಜ್ಞೆ, ಧಾರ್ಮಿಕ ಹಿನ್ನೆಲೆ ಹಾಗೂ ವೃತ್ತಿಯ ಹಿನ್ನೆಲೆಯಲ್ಲಿ ಬೆಳೆದು ಬಂದಿವೆ ಎಂಬುದನ್ನು ಹೇಳಿ ಸಮರ್ಥನೆ ಮಾಡಲಾಗಿದೆ. ಜೊತೆಗೆ ಕ್ಷೇತ್ರ ಕಾರ್ಯ ಮಾಡಿ ಸಂಗ್ರಹಿಸಿದ ನೂರಾರು ಶಿಲ್ಪಗಳ ಛಾಯಾ ಚಿತ್ರಗಳನ್ನಿಟ್ಟುಕೊಂಡು ಶಿಲ್ಪಗಳನ್ನು ವಿವಿಧ ಪ್ರಕಾರಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯವು ಶಿಲಾ ಮಾಧ್ಯಮದ ಜನಪದ ಶಿಲ್ಪಕಲೆಯದ್ದಾಗಿದೆ. ಪ್ರಾಚೀನ ಕಾಲದಿಂದಲೂ ಶಿಲ್ಪ ಹಾಗೂ ವಾಸ್ತು ಶಿಲ್ಪ ನಿರ್ಮಾಣದಲ್ಲಿ ಶಿಲೆ ಪ್ರಮುಖ ಮಾಧ್ಯಮವಾಗಿ ಬಳಕೆಯಾಗಿದೆ. ಈ ಮಾಧ್ಯಮದ ಜನಪದ ಶಿಲ್ಪಗಳು ಪ್ರಧಾನವಾಗಿ ಧಾರ್ಮಿಕ ಹಿನ್ನೆಲೆಯಲ್ಲಿ ಬೆಳೆದು ಬಂದುದರಿಂದಾಗಿ ಧರ್ಮಮೂಲದ ಹಿನ್ನೆಲೆಯಲ್ಲಿ ಕಂಡು ಅವುಗಳ ವಿವೇಚನೆ ಮಾಡಿದ್ದನ್ನು ಸಮರ್ಥಿಸಲಾಗಿದೆ. ಅಲ್ಲದೆ ಐತಿಹಾಸಿಕವಾಗಿ ಕಾಲದ ದಾಖಲೆಯಾಗಿಯೂ ಮಹತ್ವದವುಗಳಾಗುವ ವೀರಮರಣ, ಆತ್ಮ ಬಲಿದಾನ, ಮಹಾಸತಿ ಮುಂತಾದ ಸ್ಮಾರಕ ಶಿಲ್ಪಗಳನ್ನು ಇಲ್ಲಿ ವಿವಿಧ ರೀತಿಯಲ್ಲಿ ವಿಂಗಡಿಸಿಕೊಂಡು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ. ಈ ಶಿಲ್ಪಗಳ ಹಿಂದಿರುವ ಅನೇಕ ಆಚರಣೆ, ವಿಧಿ ಕ್ರಿಯೆಗಳನ್ನು ಅಧ್ಯಯನದ ಮಿತಿಯಿಂದಾಗಿ ಇಲ್ಲಿ ವಿವರಿಸಿರುವುದಿಲ್ಲ.

ಆರನೆಯ ಅಧ್ಯಾಯ, ಲೋಹ ಮಾಧ್ಯಮದ ಜನಪದ ಶಿಲ್ಪಕಲೆಯನ್ನು ಕುರಿತಾದುದು. ಇದರಲ್ಲಿ ಲೋಹ ಮಾಧ್ಯಮದ ವಿಶೇಷತೆ, ತಂತ್ರಗಾರಿಕೆ, ಶಿಲ್ಪಗಳ ರಚನಾ ವಿಧಾನ ಮುಂತಾದ ವಿಷಯಗಳ ಚರ್ಚೆ ಮಾಡಲಾಗಿದೆ. ಇದರೊಂದಿಗೆ ಈ ಮಾಧ್ಯಮದ ಜನಪದ ಶಿಲ್ಪಕಲೆಯು ಸೌಂದರ್ಯ, ಧರ್ಮ ಹಾಗೂ ವೃತ್ತಿಯ ಹಿನ್ನೆಲೆಯಲ್ಲಿ ಬೆಳೆದು ಬಂದುದಾಗಿದೆ ಎಂಬುದನ್ನು ಸಮರ್ಥಿಸಲಾಗಿದೆ. ಇವುಗಳನ್ನು ಮತ್ತೆ ಉಪ ವಿಂಗಡಣೆ ಮಾಡಿಕೊಂಡು ಶಿಲ್ಪಗಳ ವಿವಿಧ ಮಗ್ಗುಲುಗಳನ್ನು ತಿಳಿಯಲಾಗಿದೆ.

ಸಾಮಾನ್ಯವಾಗಿ ಶಿಲ್ಪರಚನೆಗೆ ಬಳಕೆಯಾಗುವ ಮಣ್ಣು, ಮರ, ಶಿಲೆ, ಲೋಹ ಮಾಧ್ಯಮಗಳೊಂದಿಗೆ, ಚರ್ಮ, ಕಾಗದ, ಚಿಂದಿ ಬಟ್ಟೆ, ಸಗಣಿ, ನಾರು ಹಿಟ್ಟು ಇಂತಹ ತೀರ ಶಾಶ್ವತವಲ್ಲದಂತಹ ಮಾಧ್ಯಮಗಳಲ್ಲೂ ಜನಪದ ಶಿಲ್ಪಗಳು ರಚನೆಯಾಗಿದ್ದು ಅವುಗಳನ್ನು ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಗಳೆಂದು ಕರೆದು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಜೊತೆಗೆ ಈ

ಮಾಧ್ಯಮದಲ್ಲಿನ ಅನೇಕ ಶಿಲ್ಪಗಳು ಅನೇಕ ಆಧುನಿಕ ಶೈಲಿಯ ಶಿಲ್ಪಗಳಿಗೆ ಮೂಲವಾಗಿವೆ ಎಂಬುದನ್ನು ಸಮರ್ಥಿಸಲಾಗಿದೆ. ಮತ್ತು ಈ ಶಿಲ್ಪಗಳ ಮಾಧ್ಯಮ, ರಚನೆ ಆಚರಣೆ ನಂಬಿಕೆ ಇತ್ಯಾದಿ ಆಯಾಮಗಳಿಂದ ಅವಲೋಕನ ಮಾಡುವುದರೊಂದೆಗೆ ಅವೆಲ್ಲವನ್ನು ಒಟ್ಟಾಗಿ ಸೌಂದರ್ಯಮೂಲ, ಧರ್ಮಮೂಲ ಹಾಗೂ ವೃತ್ತಿಮೂಲದ ಹಿನ್ನೆಲೆಯಲ್ಲೇ ಗಮನಿಸಲಾಗಿದೆ ಎಂಬುದರ ಸಮರ್ಥನೆಯೂ ಈ ಏಳನೆ ಅಧ್ಯಾಯ ಒಳಗೊಂಡಿದೆ.

ಮಣ್ಣು, ಮರ, ಶಿಲೆ, ಲೋಹ ಹಾಗೂ ಸಂಕೀರ್ಣ ಮಾಧ್ಯಮಗಳಲ್ಲಿ ನಮ್ಮ ಜನಪದರಿಂದ ನೂರಾರು ಬಗೆಯ ಶಿಲ್ಪಗಳು ರಚನೆಗೊಂಡು ವೈವಿಧ್ಯಮಯವಾಗಿ ಗಮನ ಸೆಳೆಯುವಂತಹುಗಳಾಗಿವೆ. ಅವು ಜನಪದರ ಆಚರಣೆಯಲ್ಲಿ, ನಂಬಿಕೆಯಲ್ಲಿ ಮರು ಹುಟ್ಟು ಪಡೆಯುತ್ತ ಬೆಳೆದು ಉಳಿದುಕೊಂಡು ಬಂದಿವೆ. ಇಂಥ ಶಿಲ್ಪಗಳ ಅಧ್ಯಯನವೆಂದರೆ ಅವುಗಳನ್ನು ಬದುಕಿದ ನಮ್ಮ ಜನಪದರ ಬದುಕಿನ ಅಧ್ಯಯನವೆಂದೇ ಅರ್ಥ. ಪ್ರಸ್ತುತ ಅಧ್ಯಯನ ಅನೇಕ ಅಪರಿಚಿತ ಜನಪದ ಕಲೆಗಳ ಪರಿಚಯ, ಪ್ರಾದೇಶಿಕ ಶಿಲ್ಪಗಳ ಪರಿಚಯ ಹಾಗೂ ಪ್ರಾದೇಶಿಕ ಹಿನ್ನೆಲೆಯಲ್ಲಿ ಅವುಗಳ ಒಟ್ಟು ಸ್ವರೂಪವನ್ನು ಗುರುತಿಸಲು ಪ್ರಯತ್ನ ಮಾಡಿರುವುದಲ್ಲದೆ, ಸಾಂದರ್ಭಿಕವಾಗಿ ಉತ್ತರ ಕರ್ನಾಟಕೇತರ ಪ್ರದೇಶಗಳಲ್ಲಿ ದೊರೆತ ಮತ್ತು ಅವಶ್ಯವೆನಿಸುವ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಲಾಗಿದೆ.

ದೃಶ್ಯಕಲಾಕ್ಷೇತ್ರದಲ್ಲಿ ಕೈಯಾಡಿಸಿ ಅನುಭವ ಹೊಂದಿರುವ ಕಲಾವಿದರು, ಕಲಾ ಸಂಶೋಧನ ಆಸಕ್ತರು ಈ ಬಗೆಯ ಅಧ್ಯಯನ ಕೈಗೊಳ್ಳಲು ಜನಪದ ದೃಶ್ಯಕಲಾ ಲೋಕದಲ್ಲಿ ಇನ್ನೂ ಸಾಕಷ್ಟು ವಿಷಯಗಳು ಅಡಗಿವೆ. ಅವುಗಳ ಅಧ್ಯಯನದ ಜೊತೆಗೆ ಅವು ದೃಶ್ಯ ಪ್ರಪಂಚದಿಂದ ಮಾಯವಾಗದಂತೆ, ಮರೆತು ಹೋಗದಂತೆ ಅವುಗಳ ಸಂಗ್ರಹದ ಅಗತ್ಯವೂ ಇನ್ನಷ್ಟು ತೀವ್ರಗೊಳ್ಳಬೇಕಿದೆ. ಈ ಹಿನ್ನೆಲೆಯಲ್ಲಿ ಜನಪದ ಶಿಲ್ಪಕಲೆಯ ಕುರಿತ ಈ ಸಂಶೋಧನೆ ಪ್ರಾತಿನಿಧಿಕವಾದ ಅಧ್ಯಯನವಾಗಿದೆ.

ಪ್ರಸ್ತುತ ಅಧ್ಯಯನದಿಂದ ಹಲವು ಹೊಸ ಅಂಶಗಳು ಪಲಿತಗಳಾಗಿ ಹೊರಬಂದಿವೆ.

೧. ವಿವಿಧ ಮಾಧ್ಯಮಗಳಲ್ಲಿ ರೂಪ ತಳೆದು ಸಾವಿರಾರು ವರ್ಷಗಳಿಂದ ಒಂದಿಲ್ಲಾ ಒಂದು ಬಗೆಯಲ್ಲಿ ನಮ್ಮ ಜನಪದರ ಆಚರಣೆ, ನಂಬಿಕೆಗಳ ಹಿನ್ನೆಲೆಯಲ್ಲಿ ಉಳಿದುಕೊಂಡು ಬಂದ ಹಲವಾರು ಜನಪದ ಶಿಲ್ಪಗಳ ಅಧ್ಯಯನವನ್ನು ಅದರಲ್ಲೂ, ದೃಶ್ಯಾತ್ಮಕವಾದ ಅಧ್ಯಯನವನ್ನು ಕೈಗೊಂಡು ಈ ಮೂಲಕ ಇದುವರೆಗೆ ಅಲಕ್ಷಿತವಾಗಿದ್ದ ಈ ಕ್ಷೇತ್ರದ ಅಧ್ಯಯನವನ್ನು ಇಲ್ಲಿ ನಡೆಸಲಾಗಿದೆ.

೨. ಜನಪದ ಶಿಲ್ಪಗಳು ಬೆಳೆದು ಬಂದ ಮಾಧ್ಯಮಗಳು, ಆ ಶಿಲ್ಪಗಳಷ್ಟೇ ವೈವಿಧ್ಯತೆಗಳಿಂದ ಕೂಡಿದವುಗಳಾಗಿವೆ. ಹಾಗಾಗಿ ರಚನೆಗೆ ಸಂಬಂಧಿಸಿದಂತೆ ವಿವಿಧ ಮಾಧ್ಯಮಗಳ ಸಾಧ್ಯತೆಗಳನ್ನು ತಂತ್ರಗಾರಿಕೆಗಳನ್ನು ಮತ್ತು ಅವುಗಳನ್ನು ರಚಿಸುವ ಕಲಾವಿದರನ್ನು ಕುರಿತು ಚರ್ಚೆ ಮಾಡಲಾಗಿದೆ.

೩. ಶಿಷ್ಟ ಶಿಲ್ಪಗಳಂತೆ ಅಧ್ಯಯನಕ್ಕೆ ಗ್ರಾಸವಾಗದೇ ಬಹು ಕಾಲದಿಂದ ಅಲಕ್ಷಿತವಾಗಿಯೇ ಉಳಿದಿದ್ದ ನೂರಾರು ವೈವಿಧ್ಯಮಯ ಜನಪದ ಶಿಲ್ಪಗಳು ಕಲಾತ್ಮಕ ನೆಲೆಯಿಂದಲೂ, ಪ್ರಸ್ತುತವಾದವುಗಳೆಂದು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೪. ಜನಪದ ಶಿಲ್ಪಗಳನ್ನು ಕುರಿತಾದ ತೌಲನಿಕ, ವೈಜ್ಞಾನಿಕ ಅಧ್ಯಯನ ಇನ್ನು ಮುಂದೆ ನಡೆಯಬೇಕಾಗಿದೆ.

೫. ಕಲಾ ಇತಿಹಾಸದಲ್ಲಿ ಹಿಂದಿನಿಂದಲೂ ಕರ್ನಾಟಕದ ಪಾರಂಪರಿಕ ಶಿಷ್ಟ ಶಿಲ್ಪಕಲೆ ಹಾಗೂ ಶಾಸ್ತ್ರೀಯವಾದ ಸಾಂಪ್ರದಾಯಿಕ ಶಿಲ್ಪಕಲೆಯು ಪ್ರಾಮುಖ್ಯತೆ ಪಡೆದು ಜಾಗತಿಕ ಮಟ್ಟದಲ್ಲಿ ಹೆಸರಾಗಿವೆ. ಆಧುನಿಕ ಕಾಲದಲ್ಲಿ ಅದೂ ಜಾಗತೀಕರಣದ ಸಂದರ್ಭದಲ್ಲಿ ಸಮಕಾಲೀನ ಸೃಜನಶೀಲ ಶಿಲ್ಪಕಲೆ ಮಹತ್ವ ಪಡೆಯುತ್ತಿದೆ. ಇಂದು ಭಾರತೀಯ ಸಮಕಾಲೀನ ಕಲೆಯಲ್ಲಿ ನಮ್ಮ ಜನಪದ ಕಲೆಯ ಪ್ರಭಾವವೂ ಸೇರಿಕೊಂಡು ಸೃಷ್ಟಿಯಾಗುತ್ತಿರುವುದು ಸಂತಸದ ಸಂಗತಿ. ನಮ್ಮ ಜನಪದ ಶಿಲ್ಪಕಲೆಯ ಮೂಲ ಸ್ವರೂಪ ತಿಳಿಯಬೇಕೆಂದರೆ ಪ್ರಸ್ತುತ ಅಧ್ಯಯನದ ಮೊರೆ ಹೋಗಲೇಬೇಕಾಗುತ್ತದೆ. ಈ ಹಿನ್ನೆಲೆಯಲ್ಲೂ ಈ ಅಧ್ಯಯನವು ಪ್ರಸ್ತುತವಾಗಿ ತೋರುತ್ತದೆ.

೬. ಮೂಲತಃ ನಮ್ಮ ಜನಪದರಿಗೆ ಪ್ರಕೃತಿಯೇ ಪ್ರೇರಣೆ ನೀಡಿದೆ. ಎಷ್ಟೋ ವೇಳೆ ಪ್ರಕೃತಿ ಸಹಜವಾದ ರೂಪಾಕಾರಗಳೇ ದೇವತಾ ಶಿಲ್ಪಗಳಾಗಿವೆ. ಈ ಪದ್ಧತಿಯು ಆದಿ ಮಾನವನಿಂದ ಆಧುನಿಕ ಮಾನವನವರೆಗೂ ಹರಿದು ಬಂದಿದೆ. ಅದೆಲ್ಲವೂ ಜನಪದವೇ. ಇಂಥ ಆಕಾರಗಳನ್ನು ಹುಡುಕುವಾಗಲೂ ಒಂದು ನಿರ್ಧಿಷ್ಟ ಹಾಗೂ ವಿಶಿಷ್ಟ ಎನ್ನಬಹುದಾದ, ಉಳಿದವೆಲ್ಲಕ್ಕಿಂತ ಭಿನ್ನ ಎನ್ನಬಹುದಾದ ಆಕಾರಗಳನ್ನು ಆತ ಹುಡುಕಿ ತೆಗೆದಿರಬಹುದು ಅಷ್ಟೆ. ಇವತ್ತಿನ ಆಧುನಿಕ ದೃಶ್ಯ ಕಲೆಯಲ್ಲೂ ಇಂಥ ಅಭಿವ್ಯಕ್ತಿಗಳು ಕಂಡುಬರುತ್ತವೆ. ಈ ಎರಡೂ ಬಗೆಯ ಅಭಿವ್ಯಕ್ತಿಗಳಲ್ಲಿ ಉದ್ಧೇಶಗಳು ಮಾತ್ರ ಬೇರೆ ಬೇರೆಯಾಗಿ ಕಂಡು ಬಂದರೂ ಈ ಬಗೆಯ ಜನಪದರ ಅಭಿವ್ಯಕ್ತಿಗಳೇ ಆಧುನಿಕತೆಗೆ ಸ್ಫೂರ್ತಿ ನೀಡಿವೆ ಎನ್ನಬಹುದು.

೭. ಮಣ್ಣು ಸಗಣಿ, ಹಿಟ್ಟು ಇಂಥ ಕೆಲವು ಮಾಧ್ಯಮಗಳಲ್ಲಿ ರಚನೆಯಾಗುವ ಜನಪದ ಶಿಲ್ಪಗಳೆಲ್ಲ ವರ್ಷದ ನಿರ್ಧಿಷ್ಟ ಋತುಮಾನಗಳಲ್ಲಿ ರಚನೆಯಾಗಿ ಆಚರಣೆಗೊಂಡು ವಿಸರ್ಜನೆಗೊಳ್ಳುತ್ತವೆ. ಜನಪದರಲ್ಲಿನ ಈ ಪುನರಾವರ್ತನೆಯ ಕ್ರಮವೇ ಆಧುನಿಕ ಕಲೆಗೂ ಸ್ಫೂರ್ತಿ ನೀಡಿರಲು ಸಾಧ್ಯವಿದೆ.

೮. ವರ್ಷಕ್ಕೊಮ್ಮೆ ರಚಿಸಲ್ಪಟ್ಟು ಆಚರಣೆಗೊಂಡು ವಿಸರ್ಜಿಸಲ್ಪಡುವ ಕಾಮ, ಗುಳ್ಳವ್ವ, ಹುತ್ತಪ್ಪ, ಮಣ್ಣೆತ್ತು, ಗೌರಮ್ಮ ಇಂತಹ ಕೆಲವು ಜನಪದ ಶಿಲ್ಪಗಳಿಗೆ ದೇವಾಲಯಗಳಿಲ್ಲದಿದ್ದರೂ ಮತ್ತು ದೃಶ್ಯಾತ್ಮಕವಾಗಿ ಪ್ರದರ್ಶನಗೊಳ್ಳದಿದ್ದರೂ ಅವು ನಮ್ಮ ಜನಪದ ಸಮೂಹವನ್ನು ಆಕರ್ಷಿಸುವಲ್ಲಿ, ಬೇದ ಭಾವ, ಮರೆಸಿ ಒಗ್ಗೂಡಿಸುವಿಕೆಯಲ್ಲಿ ಮಹತ್ವದ ಪಾತ್ರ ವಹಿಸಿವೆ. ಹೀಗೆ ಜಾತ್ಯಾತೀತವಾಗಿರುವ ನಮ್ಮ ಸಮಾಜದಲ್ಲಿ ಅವುಗಳ ಪ್ರಸ್ತುತತೆ ಒಂದಿಲ್ಲಾ ಒಂದುಬಗೆಯಲ್ಲಿ ಅಗತ್ಯವೆನಿಸುತ್ತದೆ ಎಂಬುವುದು ಪ್ರಸ್ತುತ ಈ ಪ್ರಬಂಧದಿಂದ ಮನವರಿಕೆಯಾಗುತ್ತದೆ.

೯. ಜನಪದರು ರಚಿಸಿರುವ ಹಲವಾರು ಶಿಲ್ಪಗಳು ಅಮೂರ್ತ ರೂಪದಲ್ಲಿ ಮತ್ತು ಸಾಂಕೇತಿಕವಾಗಿ ರಚಿಸಿರುವುದನ್ನು ಕಾಣಬಹುದು. ಶಿವಲಿಂಗ, ಸಗಣಿಯ ಬೂದ ಇಂಥ ಹಲವಾರು ಶಿಲ್ಪಗಳನ್ನು ಉದಾಹರಿಸಬಹುದು. ಇಂದಿನ ಸಮಕಾಲೀನ ಶಿಲ್ಪಗಳ ರಚನೆಗೆ ಜನಪದರ ಇಂಥ ಅಮೂರ್ತ ಶಿಲ್ಪಗಳ ರಚನೆಗಳೇ ಸ್ಫೂರ್ತಿ ನೀಡಿರಲು ಸಾಧ್ಯವಿದೆ.

೧೦. ಬೂದಗಾವು, ಲಜ್ಜಾಗೌರಿ, ಜೋಕುಮಾರ ಇಂಥ ಜನಪದ ಶಿಲ್ಪಗಳಲ್ಲಿ ನಗ್ನತೆ ಮಡಿವಂತಿಕೆಯಿಲ್ಲದೆ ಸಹಜವೆಂಬಂತೆ ಅಭಿವ್ಯಕ್ತಗೊಂಡಿರುತ್ತವೆ. ಈ ಬಗೆಯ ಸಹಜತೆ ಆಧುನಿಕ ಶಿಲ್ಪದಲ್ಲೂ ಕಂಡು ಬರುತ್ತವೆ.

೧೧. ಇತ್ತೀಚಿನ ಸ್ಥಳ ಪುರಾಣಗಳು, ನೆಲಾಕೃತಿಗಳಂತಹ ಬಯಲು ಅಭಿವ್ಯಕ್ತಿಗಳು ಜನಪದರ ಸಮೂಹ ಶಿಲ್ಪಗಳ ಪ್ರದರ್ಶನಗಳಿಂದಲೇ ಸ್ಫೂರ್ತಿ ಪಡೆದಿರುವ ಸಾಧ್ಯತೆಗಳಿವೆ.

೧೨. ಜನಪದರ ಕೆಲವು ಶಿಲ್ಪಗಳು ಕಲಾತ್ಮಕವಾಗಿರದಿದ್ದರೂ ಸುತ್ತಲಿನ ವಾತಾವರಣ ಮತ್ತು ಸಂದರ್ಭಗಳಿಂದ ಸ್ವಯಂ ಕಲಾತ್ಮಕ ಸ್ವರೂಪವನ್ನು ಪಡೆದವುಗಳಾಗಿರುತ್ತವೆ.

ಹೀಗೆ ಒಟ್ಟಾರೆ ಈ ಅಧ್ಯಯನವು ದೃಶ್ಯಕಲೆಯ ದೃಷ್ಟಿಯಿಂದ ಕೂಡಿದ ಅಧ್ಯಯನವಾಗಿದ್ದರೂ ಜನಪದದ ಅಂಶಗಳನ್ನು ಸಾಂದರ್ಭಿಕವಾಗಿ ಬಳಸಿಕೊಂಡು ಅಧ್ಯಯನ ನಡೆಸಲಾಗಿದೆ.

ಅನುಬಂಧ - ೧

# ಜನಪದ ಶಿಲ್ಪಗಳ ಛಾಯಾಚಿತ್ರಗಳು

## I. ಮಣ್ಣಿನ ಮಾಧ್ಯಮ

### ಅ. ಛಾಯಾಚಿತ್ರಗಳು

ಜೋಕುಮಾರನ ಶಿಲ್ಪ (ಬಾದಾಮಿ)
ಜೋಕುಮಾರನ ಶಿಲ್ಪ (ಬೀದರ ಜಿಲ್ಲೆ)
ಸಿರಿಯಾಳ ಶೆಟ್ಟಿಯ ಶಿಲ್ಪ (ಬೀದರ ಜಿಲ್ಲೆ)
ಬಣ್ಣದಿಂದ ಅಲಂಕೃತಗೊಂಡಿರುವ ಮಣ್ಣೆತ್ತು ಶಿಲ್ಪಗಳು (ಗುಲಬರ್ಗಾ)
ಮಣ್ಣೆತ್ತುಗಳು (ಬಿಜಾಪುರ)
ಬೆಣ್ಣೆ ತಿನ್ನುತ್ತಿರುವ ಬಾಲಕನ ಬೀದಿ ಶಿಲ್ಪ (ಸೌಂದತ್ತಿ)
ಗಣೇಶನ ಶಿಲ್ಪ (ಸೌಂದತ್ತಿ)
ನಂದಿಯ ಶಿಲ್ಪ (ಸೌಂದತ್ತಿ)
ಹನುಮಂತನ ಶಿಲ್ಪ (ಸೌಂದತ್ತಿ)

### ಆ. ಮಣ್ಣಿನ ಮಾಧ್ಯಮ/ರೇಖಾ ಚಿತ್ರಗಳು

ಗುಳ್ಳವ್ವನ ಶಿಲ್ಪ
ಗೊಗ್ಗಪ್ಪನ ಶಿಲ್ಪ
ಗಾಣದ ದೀಪ
ಆನೆ ಮತ್ತು ಮಾವುತನ ಶಿಲ್ಪ
ಗಜಲಕ್ಷ್ಮೀಯರ ಶಿಲ್ಪ
ತೋಪು ಹೊತ್ತ ಆನೆಯ ಶಿಲ್ಪ
ತೋಪು ಹೊತ್ತ ಆನೆ ಮತ್ತು ಪಂಜುಗಂಬದ ಶಿಲ್ಪ
ಪಂಜುಗಂಬದ ಶಿಲ್ಪ
ಹುತ್ತಪ್ಪನ ಶಿಲ್ಪಗಳು
ನಾಗ ನಾಗಿಣಿಯರ ಶಿಲ್ಪಗಳು

## II. ಮರದ ಮಾಧ್ಯಮ

ವಿಭೂತಿ ಬುಟ್ಟಿಯ ಶಿಲ್ಪ (ನವಲಗುಂದ)
ವಿಭೂತಿ ಬುಟ್ಟಿಯ ಶಿಲ್ಪ (ಗುಲಬರ್ಗಾ)
ವಿಭೂತಿ ಬುಟ್ಟಿಯ ಶಿಲ್ಪ (ಕೀರಣಗಿ)
ವಿಭೂತಿ ಬುಟ್ಟಿಯ ಶಿಲ್ಪ (ಪರಹತಾಬಾದ)
ಮರದ ಕೆತ್ತನೆಯ ಶಿಲ್ಪಗಳು (ಗುಲಬರ್ಗಾ)
ಜೋಡು ಕುದುರೆ ಶಿಲ್ಪಗಳು (ಗುಲಬರ್ಗಾ)
ಚೆಂದಾಳ ಗೊಂಬೆ ಶಿಲ್ಪಗಳು (ಗುಲಬರ್ಗಾ)

ದ್ಯಾಮವ್ವನ ಶಿಲ್ಪ (ಮುಷ್ಠಿಗೇರಿ)
ಕಿನ್ನಾಳ ಶಿಲ್ಪಗಳು (ಬಣ್ಣ ಕಾಣುವ ಮೊದಲು)
ದ್ಯಾಮವ್ವನ ಶಿಲ್ಪ (ಅರಳಗುಂಡಗಿ)
ಕರಿಯವ್ವನ ಶಿಲ್ಪ (ಜಾಲಿಹಾಳ)
ದ್ಯಾಮವ್ವನ ಶಿಲ್ಪ (ಮಾಗಣಗೇರಿ)
ದ್ಯಾಮವ್ವನ ಶಿಲ್ಪ (ಅಮರಗೋಳ)
ದ್ಯಾಮವ್ವನ ಶಿಲ್ಪ (ಕೆರೂರ)
ಕರೆಮ್ಮನ ಶಿಲ್ಪ (ಮುಷ್ಠಿಗೇರಿ)
ಮರಗಮ್ಮನ ಶಿಲ್ಪ (ಹೊನ್ನ ಕೀರಣಗಿ)
ಗೌರಮ್ಮನ ಶಿಲ್ಪ (ಗುಲಬರ್ಗಾ)
ಗಾಳೆಮ್ಮನ ಶಿಲ್ಪ (ಹೊಸಪೇಟೆ)
ದುರಗಮ್ಮನ ಶಿಲ್ಪ (ರಾಮದುರ್ಗ)
ದುರಗಮ್ಮನ ಶಿಲ್ಪ (ಕಲಘಟಗಿ)
ತೊಟ್ಟಿಲ ಗೌರಮ್ಮನ ಶಿಲ್ಪ (ರಾಯಚೂರು)
ಶಿವಗೌರಿ ಶಿಲ್ಪ (ರಾಯಚೂರು)
ಚೆಂಗ್ಳೆವ್ವನ ಶಿಲ್ಪ (ಹೊಳೆ ಹಡಗಲಿ)
ಲಿಂಗಪೂಜಾ ನಿರತ ಚೆಂಗ್ಳೆವ್ವನ ಶಿಲ್ಪ (ಜಾಲಿಹಾಳ)
ಚೆಂಗ್ಳೆವ್ವನ ಶಿಲ್ಪ (ಹೊಳೆ ಹಡಗಲಿ)
ಅಮೋಘಸಿದ್ಧನ ಶಿಲ್ಪ (ಖೈನೂರ)
ನಿಜಲಿಂಗಮ್ಮನ ಶಿಲ್ಪಗಳು (ಕಾಮಲಾಪುರ)
ನಂದಿಯ ಶಿಲ್ಪ (ಕಿನ್ನಾಳ)
ಹುಲಿ ವಾಹನ ಶಿಲ್ಪ (ಕ.ವಿ. ಹಂಪಿ)
ಕಾಮ-ರತಿ ಶಿಲ್ಪಗಳು (ಗದಗ)
ಶ್ರೀ ರಾಮಲಿಂಗ ಕಾಮ (ನವಲಗುಂದ)
ಪೋತರಾಜನ ಮುಖವಾಡ ಶಿಲ್ಪ (ಸುರೇಬಾನ)
ನಿಜಲಿಂಗಮ್ಮನ ಶಿಲ್ಪ (ಕಾಮಲಾಪುರ)
ಹುಲಿಗೆಮ್ಮನ ಶಿಲ್ಪ (ಕಾಮಲಾಪುರ)
ಪೆಟ್ಟಿಗೆ-ದುರಗಮ್ಮ ಮತ್ತು ಪೋತರಾಜನ ಮುಖವಾಡ ಶಿಲ್ಪಗಳು (ಕಲಘಟಗಿ)
ಚೌಡಮ್ಮನ ಶಿಲ್ಪ (ಮಾಗಣಗೇರಿ)
ಚೌಡಮ್ಮನ ಶಿಲ್ಪ (ಅರಳಗುಂಡಗಿ)
ದ್ವಾರಪಾಲಕನ ಶಿಲ್ಪ (ಕಿನ್ನಾಳ)
ಕಿನ್ನಾಳ ಶಿಲ್ಪಗಳು
ಮಕ್ಕಳಾಟಿಕೆಯ ಶಿಲ್ಪಗಳು (ಕಿನ್ನಾಳ)
ಸಂಕೀರ್ಣ ಶಿಲ್ಪಗಳು (ಕಿನ್ನಾಳ)
ತೊಟ್ಟಿಲ ಶಿಲ್ಪ
ವಿವಿಧ ಶಿಲ್ಪಗಳ ರಚನೆಯಲ್ಲಿ ಕಲಾವಿದೆ (ಕಿನ್ನಾಳ)
ಸೀಗಮ್ಮನ ಶಿಲ್ಪಗಳು (ಸಿಂದಗಿ)

ಶಂಕರಲಿಂಗನ ತೇರು ಶಿಲ್ಪ (ಜೇರಟಗಿ)
ಬನಶಂಕರಿ ತೇರು ಶಿಲ್ಪ (ಬಾದಾಮಿ)
ಕಂಬಗಳಿಂದಾವೃತವಾದ ಬಳ್ಳೇಶ್ವರನ ತೇರು ಶಿಲ್ಪ (ಬಳ್ಳಾರಿ)
ಗ್ರಾಮ ದೇವತೆಯ ಕಿನ್ನಾಳ ತೇರು ಶಿಲ್ಪ (ಮರಿಯಮ್ಮನ ಹಳ್ಳಿ)

## III. ಶಿಲಾ ಮಾಧ್ಯಮ

### ಅ. ಛಾಯಾಚಿತ್ರಗಳು

ವೀರಭದ್ರನ ಶಿಲ್ಪಗಳು (ಬನಶಂಕರಿ, ಬಾದಾಮಿ)
ವೀರಭದ್ರನ ಶಿಲ್ಪ (ಕಾಮಲಾಪುರ ಮ್ಯೂಸಿಯಂ)
ವೀರಭದ್ರನ ಶಿಲ್ಪ (ಹೊನ್ನ ಕೀರಣಗಿ)
ವೀರಭದ್ರನ ಶಿಲ್ಪ (ಚೊಳಚಗುಡ್ಡ)
ಶಿವನ ಶಿಲ್ಪ (ಸಿದ್ಧನಕೊಳ್ಳ)
ದ್ವಾರಪಾಲಕನ ಶಿಲ್ಪ (ಮಂಗಳಗುಡ್ಡ)
ಲಜ್ಜಾಗೌರಿ ಶಿಲ್ಪ (ಹುಲಿಗೆಮ್ಮನ ಕೊಳ್ಳ)
ಲಜ್ಜಾಗೌರಿ ಶಿಲ್ಪ (ಸಿದ್ಧನಕೊಳ್ಳ)
ಮಂಗಳಮ್ಮನ ಶಿಲ್ಪ (ಮಂಗಳಗುಡ್ಡ)
ವರ್ಣಾಲಂಕೃತ ನಂದಿಯ ಶಿಲ್ಪ (ಕಾಮಲಾಪುರ)
ನಂದಿಯ ಶಿಲ್ಪ (ಪಟ್ಟದಕಲ್ಲು)
ಹನುಮಂತನ ಶಿಲ್ಪ (ಖೈನೂರ)
ಹನುಮಂತನ ಶಿಲ್ಪ (ಹೊಸಪೇಟೆ)
ಹನುಮಂತನ ಶಿಲ್ಪ (ಕ.ವಿ. ಹಂಪಿ)
ನಾಗರಾಜನ ಶಿಲ್ಪ (ಬನಶಂಕರಿ ದೇವಾಲಯ, ಬಾದಾಮಿ)
ನಾಗರ ಶಿಲ್ಪಗಳ ಸಮೂಹ (ಬೇಲೂರು)
ಮಾಸ್ತಿ ಶಿಲ್ಪ (ಸಹಗಮನ)
ಮಾಸ್ತಿ ಶಿಲ್ಪ (ಕಾಮಲಾಪುರ ವಸ್ತು ಸಂಗ್ರಹಾಲಯ)
ವೀರ ಮಾಸ್ತಿ ಶಿಲ್ಪ (ಕೆರೆಹಳ್ಳಿ)
ವೀರ ಮಾಸ್ತಿ ಶಿಲ್ಪ (ಕೆರೆಹಳ್ಳಿ)
ವೀರ ಮರಣ ಶಿಲ್ಪ (ಕ.ವಿ. ಹಂಪಿ)
ವೀರ ಮರಣ ಶಿಲ್ಪ (ಕಾಳಗಿ)
ವೀರ ಮರಣ ಶಿಲ್ಪ (ಮಸಕಿ)
ವೀರ ಮರಣ ಶಿಲ್ಪ (ಬಾದಾಮಿ ಮ್ಯೂಸಿಯಂ)
ವೀರ ಮರಣ ಶಿಲ್ಪ (ಆನೆಯೊಡನೆ ಹೋರಾಟ, ಕಾಮಲಾಪುರ)
ಇತ್ತೀಚಿನ ವೀರ ಮರಣ ಶಿಲ್ಪ (ಚೊಳಚಗುಡ್ಡ)

ಆ. ಶಿಲಾ ಮಾಧ್ಯಮದ ರೇಖಾ ಚಿತ್ರಗಳು

ಮಾಸ್ತಿ ಶಿಲ್ಪ (ಸಹಗಮನ)
ಮಾಸ್ತಿ ಶಿಲ್ಪ (ಹಿರೇಕೊಣತಿ)
ಮಾಸ್ತಿ ಶಿಲ್ಪ (ಕ.ವಿ. ಹಂಪಿ)
ಪೂರ್ಣಸತಿ ಶಿಲ್ಪಗಳು
ವೀರ ಮರಣ ಶಿಲ್ಪ (ಆನೆಗೆ ಬಲಿಯಾದುದು, ಧಾರವಾಡ)
ಹರಕೆಯ ಬಲಿದಾನ ಶಿಲ್ಪ (ಸೂರ್ಯಗ್ರಹಣದ ಸಂದರ್ಭ, ಧಾರವಾಡ)
ವೀರ ಮರಣ ಶಿಲ್ಪ (ಹುಲಿಯ ಜೊತೆ ಹೋರಾಟ, ನಿಜಗಲ್ಲು)
ವೀರ ಮರಣ ಶಿಲ್ಪ (ಹುಲಿ ಬೇಟೆ, ಹಾಲಳ್ಳಿ)
ವೀರ ಮರಣ ಶಿಲ್ಪ (ಹಾವಿನೊಂದಿಗೆ ಹೋರಾಟ)
ವೀರ ಮರಣ ಶಿಲ್ಪ ([illegible] ಪೆಣ್ಬುಯ್ಯಲ್, ಅಬ್ಬಲೂರು)
ಗೋಸಾಸ ಶಿಲ್ಪ (ಆನೆಗೊಂದಿ)

## IV. ಲೋಹ ಮಾಧ್ಯಮ

ಗೊಲ್ಲಾಳನ ಶಿಲ್ಪಗಳು (ಖೈನೂರ)
ಲೋಹ ಶಿಲ್ಪ (ಬೇಲೂರು)
ಮಲ್ಲಯ್ಯ ಮತ್ತಿತರ ಶಿಲ್ಪಗಳು (ದೇವರ ಹಿಪ್ಪರಗಿ)
ವೀರಭದ್ರನ ಶಿಲ್ಪಗಳು
ವೀರಭದ್ರನ ವಿವಿಧ ಭಂಗಿಗಳ ರೇಖಾಚಿತ್ರಗಳು
ಚಾಂಗದೇವರ ಶಿಲ್ಪಗಳು (ಯಮನೂರ)
ತೊಟ್ಟಿಲ ಗೌರಮ್ಮನ ಶಿಲ್ಪ (ಬಾದಾಮಿ)
ಧೂಪಾರತಿಯಲ್ಲಿ ಗಜಲಕ್ಷ್ಮೀ ಶಿಲ್ಪ
ದೀಪ ಸ್ಥಂಭದಲ್ಲಿ ಆನೆ ಮತ್ತು ಆಮೆಯ ಶಿಲ್ಪಗಳು (ಕೊಲ್ಲೂರು)
ಲೋಹದ ಹಾಳೆಯ ಕುದುರೆ ಶಿಲ್ಪ
ನಂದಿಯ ಶಿಲ್ಪ (ಕೊಟ್ಟೂರು)
ಲೋಹದ ಹಾಳೆಯ ಹನುಮಂತ ಮತ್ತು ಗರುಡನ ಶಿಲ್ಪಗಳು ( ಬೇಲೂರು)
ವೀರಭದ್ರನ ತೇರುಶಿಲ್ಪ (ಹೊನ್ನ ಕೀರಣಗಿ)
ತೇರು ಶಿಲ್ಪ (ಕೂಡ್ಲಿ)

ಆ. ಲೋಹ ಮಾಧ್ಯಮ;ರೇಖಾ ಚಿತ್ರಗಳು

ಆಭರಣಗಳಲ್ಲಿನ ಶಿಲ್ಪಗಳು
ಅಡಕೊತ್ತುಗಳಲ್ಲಿನ ಶಿಲ್ಪಗಳು
ವೀರಭದ್ರನ ಶಿಲ್ಪ
ನಂದಿಯ ಶಿಲ್ಪ

## V. ಸಂಕೀರ್ಣ ಮಾಧ್ಯಮ

### ಅ. ಛಾಯಾಚಿತ್ರಗಳು

ಆಣೇ ಪೀಣಿ ಶಿಲ್ಪ (ಬನ್ನಟ್ಟಿ)
ಬೆದರು ಗೊಂಬೆ ಶಿಲ್ಪ (ಬಿಜಾಪುರ)
ದುಲಹನ್ ಕಿ ಡೋಲಿ ಶಿಲ್ಪಗಳು (ಬೀದರ)
ಯಕ್ಷಗಾನ ವೇಷಗಳಲ್ಲಿನ ಶಿಲ್ಪಗಳು
ಕಿಸಗಾಲು ಗೊಂಬೆಗಳ ರಾಶಿ (ಜಾಲಿಹಾಳ)
ಸಗಣಿಗೊಂಬೆ ಶಿಲ್ಪಗಳ ಮಾರಾಟ (ಬನಶಂಕರಿ ಜಾತ್ರೆ, ಬಾದಾಮಿ)
ಕಿಸಗಾಲು ಗೊಂಬೆ ಶಿಲ್ಪ
ಕೂಸಿನ ಗೊಂಬೆ ಶಿಲ್ಪ (ಕಿನ್ನಾಳ)
ಕೊಡದ ಗೊಂಬೆ ಶಿಲ್ಪ (ಕಿನ್ನಾಳ)
ಬೂದಗಾಮನ ಶಿಲ್ಪ (ಗುಳೇದಗುಡ್ಡ)
ಸಗಣಿಯ ಶಿಲ್ಪಗಳು (ರಜಪೂತ ಸಂಪ್ರದಾಯ)
ಕರ್ಚಿಗೊಂಬೆ ಶಿಲ್ಪ (ಹಂಪಿ)
ಬೆದರು ಶಿಲ್ಪ (ಜೋಳದ ಹೊಲ, ಹುಡುಗಿ)
ಬೆದರು ಶಿಲ್ಪ (ಕಲ್ಲಂಗಡಿ ತೋಟ, ಐಹೊಳೆ)
ನಾರಿನ ಶಿಲ್ಪಗಳು (ಆಮೆಗಳು)
ಬೆಂಡಿನ ಶಿಲ್ಪಗಳು (ಚಕ್ಕಡಿ)
ಕಂಬಿ ಶಿಲ್ಪ (ಇಂಗಳೇಶ್ವರ)
ಸಕ್ಕರೆ ಮಂಟಪದ ಶಿಲ್ಪ (ಗುಲಬರ್ಗಾ)
ಕಿರೀಟ (ಯಕ್ಷಗಾನ ವೇಷ)

### ಆ. ಸಂಕೀರ್ಣ ಮಾಧ್ಯಮ ರೇಖಾ ಚಿತ್ರಗಳು

ರಾವಣನ ತಲೆಗಳ ಶಿಲ್ಪ
ಕಾಮನ ಶಿಲ್ಪ (ಶಿರಗಾಪುರ)
ಕೀಲು ಕುದುರೆ ಶಿಲ್ಪ
ಕರಡಿ ವೇಷದ ಶಿಲ್ಪ
ಬೂದ ಶಿಲ್ಪ
ಹಿಟ್ಟಿನ ಶಿಲ್ಪ
ಮೋಡಿ ಆಟದಲ್ಲಿನ ಚೌಡಿಯ ಶಿಲ್ಪ

## ಅನುಬಂಧ - ೨

# ಸಂಕ್ಷೇಪಗಳು

| | | |
|---|---|---|
| ಕ.ವಿ.ಹಂ. | - | ಕನ್ನಡ ವಿಶ್ವವಿದ್ಯಾಲಯ, ಹಂಪಿ |
| ಕ.ವಿ.ವಿ. | - | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಕ.ಸಾ.ಪ. | - | ಕನ್ನಡ ಸಾಹಿತ್ಯ ಪರಿಷತ್ತು |
| ಮೈ.ವಿ.ವಿ. | - | ಮೈಸೂರು ವಿಶ್ವವಿದ್ಯಾಲಯ, ಮೈಸೂರು |
| ಗು.ವಿ.ಗು. | - | ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ |
| ಕ್ರಿ.ಪೂ. | - | ಕ್ರಿಸ್ತ ಪೂರ್ವ |
| ಪು. | - | ಪುಟ |
| ಹೈ.ಕ. | - | ಹೈದರಾಬಾದ್ ಕರ್ನಾಟಕ |
| E.I. | - | Epigraphia India |
| E.C. | - | Epigraphia Carnatica |
| I.A. | - | Indian Antiquary |
| P. | - | Page |
| S.I.I. | - | South Indian Inscription |
| K.L.K.A. | - | Karnataka Lalit Kala Academy |

## ಅನುಬಂಧ - ೩

# ಕ್ಷೇತ್ರಕಾರ್ಯ ಮಾಡಿದ ಪ್ರಮುಖ ಸ್ಥಳಗಳು

| ಅ.ನಂ. | ಊರು | ತಾಲೂಕು | ಜಿಲ್ಲೆ |
|---|---|---|---|
| ೧ | ಬೀದರ | ಬೀದರ | ಬೀದರ |
| ೨ | ಹುಡುಗಿ | ಹುಮನಾಬಾದ | ಬೀದರ |
| ೩ | ಹುಮನಾಬಾದ | ಹುಮನಾಬಾದ | ಬೀದರ |
| ೪ | ಚಿಟಗುಪ್ಪಾ | ಹುಮನಾಬಾದ | ಬೀದರ |
| ೫ | ಮುಡುಬಿ | ಬಸವಕಲ್ಯಾಣ | ಬೀದರ |
| ೬ | ನಾರಾಯಣಪುರ | ಬಸವಕಲ್ಯಾಣ | ಬೀದರ |
| ೭ | ಗುಲಬರ್ಗಾ | ಗುಲಬರ್ಗಾ | ಗುಲಬರ್ಗಾ |
| ೮ | ಪರಹತಾಬಾದ | ಗುಲಬರ್ಗಾ | ಗುಲಬರ್ಗಾ |
| ೯ | ಹೊನ್ನಕೀರಣಗಿ | ಗುಲಬರ್ಗಾ | ಗುಲಬರ್ಗಾ |
| ೧೦ | ಮೈನಾಳ | ಗುಲಬರ್ಗಾ | ಗುಲಬರ್ಗಾ |
| ೧೧ | ನರೋಣ | ಆಳಂದ | ಗುಲಬರ್ಗಾ |
| ೧೨ | ಕಡಗಂಚಿ | ಆಳಂದ | ಗುಲಬರ್ಗಾ |
| ೧೩ | ನಿಂಬರ್ಗಾ | ಆಳಂದ | ಗುಲಬರ್ಗಾ |
| ೧೪ | ಆಳಂದ | ಆಳಂದ | ಗುಲಬರ್ಗಾ |
| ೧೫ | ಜೇವರ್ಗಿ | ಜೇವರ್ಗಿ | ಗುಲಬರ್ಗಾ |
| ೧೬ | ಇಜೇರಿ | ಜೇವರ್ಗಿ | ಗುಲಬರ್ಗಾ |
| ೧೭ | ಯಲಗೋಡ | ಜೇವರ್ಗಿ | ಗುಲಬರ್ಗಾ |
| ೧೮ | ಮಂದೇವಾಲ | ಜೇವರ್ಗಿ | ಗುಲಬರ್ಗಾ |
| ೧೯ | ಮಾಗಣಗೇರಿ | ಜೇವರ್ಗಿ | ಗುಲಬರ್ಗಾ |
| ೨೦ | ಕಲ್ಲೂರ | ಜೇವರ್ಗಿ | ಗುಲಬರ್ಗಾ |
| ೨೧ | ಅರಳಗುಂಡಗಿ | ಜೇವರ್ಗಿ | ಗುಲಬರ್ಗಾ |
| ೨೨ | ಹರವಾಳ | ಜೇವರ್ಗಿ | ಗುಲಬರ್ಗಾ |
| ೨೩ | ಯಡ್ರಾಮಿ | ಜೇವರ್ಗಿ | ಗುಲಬರ್ಗಾ |
| ೨೪ | ಕಣಮೇಶ್ವರ | ಜೇವರ್ಗಿ | ಗುಲಬರ್ಗಾ |
| ೨೫ | ಕುಕನೂರ | ಜೇವರ್ಗಿ | ಗುಲಬರ್ಗಾ |
| ೨೬ | ಮಾಣಶಿವಣಗಿ | ಜೇವರ್ಗಿ | ಗುಲಬರ್ಗಾ |
| ೨೭ | ಮದರಿ | ಜೇವರ್ಗಿ | ಗುಲಬರ್ಗಾ |
| ೨೮ | ಮಳ್ಳಿ | ಜೇವರ್ಗಿ | ಗುಲಬರ್ಗಾ |
| ೨೯ | ರಾಸುಣಗಿ | ಜೇವರ್ಗಿ | ಗುಲಬರ್ಗಾ |
| ೩೦ | ಆಂದೋಲ | ಜೇವರ್ಗಿ | ಗುಲಬರ್ಗಾ |
| ೩೧ | ಗೊಬ್ಬೂರ | ಅಫಜಲಪೂರ | ಗುಲಬರ್ಗಾ |
| ೩೨ | ಆತನೂರ | ಅಫಜಲಪೂರ | ಗುಲಬರ್ಗಾ |
| ೩೩ | ಶಿರವಾಳ | ಅಫಜಲಪೂರ | ಗುಲಬರ್ಗಾ |
| ೩೪ | ಕರಕಮುಕ್ಲಿ | ಅಫಜಲಪೂರ | ಗುಲಬರ್ಗಾ |
| ೩೫ | ಘತ್ತರಗಿ | ಅಫಜಲಪೂರ | ಗುಲಬರ್ಗಾ |
| ೩೬ | ಹಲ್ಯಾಳ | ಅಫಜಲಪೂರ | ಗುಲಬರ್ಗಾ |
| ೩೭ | ಮಾಶಾಳ | ಅಫಜಲಪೂರ | ಗುಲಬರ್ಗಾ |
| ೩೮ | ಬಂದರವಾಡ | ಅಫಜಲಪೂರ | ಗುಲಬರ್ಗಾ |
| ೩೯ | ಹಿರೇಮಣ್ಣೂರ | ಅಫಜಲಪೂರ | ಗುಲಬರ್ಗಾ |

| | | | |
|---|---|---|---|
| ೪೦ | ಸಗರ | ಶಹಾಪೂರ | ಗುಲಬರ್ಗಾ |
| ೪೧ | ಶಹಾಪೂರ | ಶಹಾಪೂರ | ಗುಲಬರ್ಗಾ |
| ೪೨ | ಚಟ್ನಳ್ಳಿ | ಶಹಾಪೂರ | ಗುಲಬರ್ಗಾ |
| ೪೩ | ಆಲ್ದಾಳ | ಶಹಾಪೂರ | ಗುಲಬರ್ಗಾ |
| ೪೪ | ಹಯ್ಯಾಳ | ಶಹಾಪೂರ | ಗುಲಬರ್ಗಾ |
| ೪೫ | ಲಕ್ಷ್ಮೀಪುರ | ಶಹಾಪೂರ | ಗುಲಬರ್ಗಾ |
| ೪೬ | ಸುರಪೂರ | ಸುರಪೂರ | ಗುಲಬರ್ಗಾ |
| ೪೭ | ಯಾಳಗಿ | ಸುರಪೂರ | ಗುಲಬರ್ಗಾ |
| ೪೮ | ನಗನೂರ | ಸುರಪೂರ | ಗುಲಬರ್ಗಾ |
| ೪೯ | ಕಕ್ಕೇರಾ | ಸುರಪೂರ | ಗುಲಬರ್ಗಾ |
| ೫೦ | ಸನ್ನತಿ | ಚಿತ್ತಾಪೂರ | ಗುಲಬರ್ಗಾ |
| ೫೧ | ಸೂಗೂರ | ಚಿತ್ತಾಪೂರ | ಗುಲಬರ್ಗಾ |
| ೫೨ | ಹದನೂರ | ಚಿತ್ತಾಪೂರ | ಗುಲಬರ್ಗಾ |
| ೫೩ | ವಾಡಿ | ಚಿತ್ತಾಪೂರ | ಗುಲಬರ್ಗಾ |
| ೫೪ | ನಾಲವಾರ | ಚಿತ್ತಾಪೂರ | ಗುಲಬರ್ಗಾ |
| ೫೫ | ಚಿತ್ತಾಪೂರ | ಚಿತ್ತಾಪೂರ | ಗುಲಬರ್ಗಾ |
| ೫೬ | ಅಲ್ಲೂರ | ಚಿತ್ತಾಪೂರ | ಗುಲಬರ್ಗಾ |
| ೫೭ | ಕೊಡಬೂರ | ಚಿತ್ತಾಪೂರ | ಗುಲಬರ್ಗಾ |
| ೫೮ | ಅರಕೇರಿ | ಯಾದಗೀರ | ಗುಲಬರ್ಗಾ |
| ೫೯ | ನಿಡಗುಂದಿ | ಚಿಂಚೋಳಿ | ಗುಲಬರ್ಗಾ |
| ೬೦ | ಖೈನೂರ | ಸಿಂದಗಿ | ಬಿಜಾಪುರ |
| ೬೧ | ಗೋಲಗೇರಿ | ಸಿಂದಗಿ | ಬಿಜಾಪುರ |
| ೬೨ | ಕುಮ್ಮಸಿಗಿ | ಸಿಂದಗಿ | ಬಿಜಾಪುರ |
| ೬೩ | ಸಿಂದಗಿ | ಸಿಂದಗಿ | ಬಿಜಾಪುರ |
| ೬೪ | ಆಲಮೇಲ | ಸಿಂದಗಿ | ಬಿಜಾಪುರ |
| ೬೫ | ಚಿಕ್ಕಸಿಂದಗಿ | ಸಿಂದಗಿ | ಬಿಜಾಪುರ |
| ೬೬ | ಮುರಡಿ | ಸಿಂದಗಿ | ಬಿಜಾಪುರ |
| ೬೭ | ಸುಂಗಠಾಣ | ಸಿಂದಗಿ | ಬಿಜಾಪುರ |
| ೬೮ | ಯಂಕಂಚಿ | ಸಿಂದಗಿ | ಬಿಜಾಪುರ |
| ೬೯ | ಬ್ಯಾಕೋಡ | ಸಿಂದಗಿ | ಬಿಜಾಪುರ |
| ೭೦ | ಬನ್ನೆಟ್ಟಿ | ಸಿಂದಗಿ | ಬಿಜಾಪುರ |
| ೭೧ | ಕನ್ನೊಳ್ಳಿ | ಸಿಂದಗಿ | ಬಿಜಾಪುರ |
| ೭೨ | ಮನ್ನಾಪೂರ | ಸಿಂದಗಿ | ಬಿಜಾಪುರ |
| ೭೩ | ಬಳಗಾನೂರ | ಸಿಂದಗಿ | ಬಿಜಾಪುರ |
| ೭೪ | ಕೊಂಡಗೂಳಿ | ಸಿಂದಗಿ | ಬಿಜಾಪುರ |
| ೭೫ | ಬಂದಾಳ | ಸಿಂದಗಿ | ಬಿಜಾಪುರ |
| ೭೬ | ಬೊಮ್ಮನಜೋಗಿ | ಸಿಂದಗಿ | ಬಿಜಾಪುರ |
| ೭೭ | ಯರಗಲ್ಲ | ಸಿಂದಗಿ | ಬಿಜಾಪುರ |
| ೭೮ | ಬಗಲೂರ | ಸಿಂದಗಿ | ಬಿಜಾಪುರ |
| ೭೯ | ಇಂಡಿ | ಇಂಡಿ | ಬಿಜಾಪುರ |
| ೮೦ | ಸಾಲೋಟಗಿ | ಇಂಡಿ | ಬಿಜಾಪುರ |
| ೮೧ | ಅತರ್ಗಾ | ಇಂಡಿ | ಬಿಜಾಪುರ |
| ೮೨ | ಸಿರಕನಹಳ್ಳಿ | ಇಂಡಿ | ಬಿಜಾಪುರ |
| ೮೩ | ತಾಂಬಾ | ಇಂಡಿ | ಬಿಜಾಪುರ |
| ೮೪ | ಲೋಣಿ | ಇಂಡಿ | ಬಿಜಾಪುರ |
| ೮೫ | ಹೊರ್ತಿ | ಇಂಡಿ | ಬಿಜಾಪುರ |
| ೮೬ | ಹಂಜಗಿ | ಇಂಡಿ | ಬಿಜಾಪುರ |

| | | | |
|---|---|---|---|
| ೮೭ | ಚಿಕ್ಕಬೇವನೂರ | ಇಂಡಿ | ಬಿಜಾಪುರ |
| ೮೮ | ಹಲಸಂಗಿ | ಇಂಡಿ | ಬಿಜಾಪುರ |
| ೮೯ | ದೇವರ ಹಿಪ್ಪರಗಿ | ಸಿಂದಗಿ | ಬಿಜಾಪುರ |
| ೯೦ | ಐನಾಪುರ | ಬಿಜಾಪುರ | ಬಿಜಾಪುರ |
| ೯೧ | ಆಹೇರಿ | ಬಿಜಾಪುರ | ಬಿಜಾಪುರ |
| ೯೨ | ಬಿಜ್ಜರಗಿ | ಬಿಜಾಪುರ | ಬಿಜಾಪುರ |
| ೯೩ | ತಾಳಿಕೋಟೆ | ಬಿಜಾಪುರ | ಬಿಜಾಪುರ |
| ೯೪ | ಬಸವನಬಾಗೇವಾಡಿ | ಬ.ಬಾಗೇವಾಡಿ | ಬಿಜಾಪುರ |
| ೯೫ | ಮನಗೂಳಿ | ಬ.ಬಾಗೇವಾಡಿ | ಬಿಜಾಪುರ |
| ೯೬ | ನಂದಿಹಳ್ಳಿ | ಬ.ಬಾಗೇವಾಡಿ | ಬಿಜಾಪುರ |
| ೯೭ | ವಡವಡಗಿ | ಬ.ಬಾಗೇವಾಡಿ | ಬಿಜಾಪುರ |
| ೯೮ | ನಿಡಗುಂದಿ | ಬ.ಬಾಗೇವಾಡಿ | ಬಿಜಾಪುರ |
| ೯೯ | ಇಂಗಳೇಶ್ವರ | ಬ.ಬಾಗೇವಾಡಿ | ಬಿಜಾಪುರ |
| ೧೦೦ | ತಂಬಗಿ | ಬ.ಬಾಗೇವಾಡಿ | ಬಿಜಾಪುರ |
| ೧೦೧ | ಮುತ್ತಗಿ | ಬ.ಬಾಗೇವಾಡಿ | ಬಿಜಾಪುರ |
| ೧೦೨ | ಮುದ್ದೇಬಿಹಾಳ | ಮುದ್ದೇಬಿಹಾಳ | ಬಿಜಾಪುರ |
| ೧೦೩ | ಸರೂರ | ಮುದ್ದೇಬಿಹಾಳ | ಬಿಜಾಪುರ |
| ೧೦೪ | ಲಿಂಗದಹಳ್ಳಿ | ಮುದ್ದೇಬಿಹಾಳ | ಬಿಜಾಪುರ |
| ೧೦೫ | ಕೊಣ್ಣೂರ | ಮುದ್ದೇಬಿಹಾಳ | ಬಿಜಾಪುರ |
| ೧೦೬ | ಬಂಟನೂರ | ಮುದ್ದೇಬಿಹಾಳ | ಬಿಜಾಪುರ |
| ೧೦೭ | ಬಾಗಲಕೋಟ | ಬಾಗಲಕೋಟ | ಬಾಗಲಕೋಟ |
| ೧೦೮ | ಬೀಳಗಿ | ಬಾಗಲಕೋಟ | ಬಾಗಲಕೋಟ |
| ೧೦೯ | ಸೀಗಿಕೇರಿ | ಬಾಗಲಕೋಟ | ಬಾಗಲಕೋಟ |
| ೧೧೦ | ಬೆನಕಟ್ಟಿ | ಬಾಗಲಕೋಟ | ಬಾಗಲಕೋಟ |
| ೧೧೧ | ನೀರಲಕೇರಿ | ಬಾಗಲಕೋಟ | ಬಾಗಲಕೋಟ |
| ೧೧೨ | ಮಂಟೂರ | ಬೀಳಗಿ | ಬಾಗಲಕೋಟ |
| ೧೧೩ | ತೆಗ್ಗಿ | ಬೀಳಗಿ | ಬಾಗಲಕೋಟ |
| ೧೧೪ | ಸಿದ್ದಾಪೂರ | ಬೀಳಗಿ | ಬಾಗಲಕೋಟ |
| ೧೧೫ | ಮುಧೋಳ | ಮುಧೋಳ | ಬಾಗಲಕೋಟ |
| ೧೧೬ | ಲೋಕಾಪುರ | ಮುಧೋಳ | ಬಾಗಲಕೋಟ |
| ೧೧೭ | ಯಡಹಳ್ಳಿ | ಮುಧೋಳ | ಬಾಗಲಕೋಟ |
| ೧೧೮ | ಕಸಬಾ ಜಂಬಗಿ | ಮುಧೋಳ | ಬಾಗಲಕೋಟ |
| ೧೧೯ | ಕಡ್ಲಿಮಟ್ಟಿ | ಬಾಗಲಕೋಟ | ಬಾಗಲಕೋಟ |
| ೧೨೦ | ಜಮಖಂಡಿ | ಜಮಖಂಡಿ | ಬಾಗಲಕೋಟ |
| ೧೨೧ | ಹುಲ್ಯಾಳ | ಜಮಖಂಡಿ | ಬಾಗಲಕೋಟ |
| ೧೨೨ | ಬನಹಟ್ಟಿ | ಜಮಖಂಡಿ | ಬಾಗಲಕೋಟ |
| ೧೨೩ | ತೇರದಾಳ | ಜಮಖಂಡಿ | ಬಾಗಲಕೋಟ |
| ೧೨೪ | ಚಿಕ್ಕ ಪಡಸಲಗಿ | ಜಮಖಂಡಿ | ಬಾಗಲಕೋಟ |
| ೧೨೫ | ಬಾದಾಮಿ | ಬಾದಾಮಿ | ಬಾಗಲಕೋಟ |
| ೧೨೬ | ಬೇಲೂರ | ಬಾದಾಮಿ | ಬಾಗಲಕೋಟ |
| ೧೨೭ | ಢಾಣಕ ಶಿರೂರ | ಬಾದಾಮಿ | ಬಾಗಲಕೋಟ |
| ೧೨೮ | ಚೊಳಚಗುಡ್ಡ | ಬಾದಾಮಿ | ಬಾಗಲಕೋಟ |
| ೧೨೯ | ಜಾಲಿಹಾಳ | ಬಾದಾಮಿ | ಬಾಗಲಕೋಟ |
| ೧೩೦ | ಮುಷ್ಟಿಗೇರಿ | ಬಾದಾಮಿ | ಬಾಗಲಕೋಟ |
| ೧೩೧ | ಕೆರೂರು | ಬಾದಾಮಿ | ಬಾಗಲಕೋಟ |
| ೧೩೨ | ನಾಗರಾಳ | ಬಾದಾಮಿ | ಬಾಗಲಕೋಟ |
| ೧೩೩ | ಮಂಗಳಗುಡ್ಡ | ಬಾದಾಮಿ | ಬಾಗಲಕೋಟ |

| | | | |
|---|---|---|---|
| ೧೩೪ | ಗುಳೇದಗುಡ್ಡ | ಬಾದಾಮಿ | ಬಾಗಲಕೋಟ |
| ೧೩೫ | ಹೊಸಮಹಾಕೂಟ | ಬಾದಾಮಿ | ಬಾಗಲಕೋಟ |
| ೧೩೬ | ಹುಲಿಗೆಮ್ಮನ ಕೊಳ್ಳ | ಬಾದಾಮಿ | ಬಾಗಲಕೋಟ |
| ೧೩೭ | ಸಿದ್ಧನಕೊಳ್ಳ | ಬಾದಾಮಿ | ಬಾಗಲಕೋಟ |
| ೧೩೮ | ಗುಡೂರ | ಬಾದಾಮಿ | ಬಾಗಲಕೋಟ |
| ೧೩೯ | ಲಕ್ಮಾಪೂರ | ಬಾದಾಮಿ | ಬಾಗಲಕೋಟ |
| ೧೪೦ | ಇಳಕಲ್ಲ | ಹುನಗುಂದ | ಬಾಗಲಕೋಟ |
| ೧೪೧ | ಕರಡಿ | ಹುನಗುಂದ | ಬಾಗಲಕೋಟ |
| ೧೪೨ | ಕಮತಗಿ | ಹುನಗುಂದ | ಬಾಗಲಕೋಟ |
| ೧೪೩ | ಅಮೀನಗಡ | ಹುನಗುಂದ | ಬಾಗಲಕೋಟ |
| ೧೪೪ | ಐಹೊಳೆ | ಹುನಗುಂದ | ಬಾಗಲಕೋಟ |
| ೧೪೫ | ರಾಮದುರ್ಗ | ರಾಮದುರ್ಗ | ಬೆಳಗಾವಿ |
| ೧೪೬ | ಮುದಕವಿ | ರಾಮದುರ್ಗ | ಬೆಳಗಾವಿ |
| ೧೪೭ | ಉಗರಗೋಳ್ | ರಾಮದುರ್ಗ | ಬೆಳಗಾವಿ |
| ೧೪೮ | ಸೌಂದತ್ತಿ | ಸೌಂದತ್ತಿ | ಬೆಳಗಾವಿ |
| ೧೪೯ | ಸತ್ತಿಗೇರಿ | ಸೌಂದತ್ತಿ | ಬೆಳಗಾವಿ |
| ೧೫೦ | ಹಳ್ಳಿ | ಸೌಂದತ್ತಿ | ಬೆಳಗಾವಿ |
| ೧೫೧ | ಬೈಲಹೊಂಗಲ | ಬೈಲಹೊಂಗಲ | ಬೆಳಗಾವಿ |
| ೧೫೨ | ಕಿತ್ತೂರ | ಬೈಲಹೊಂಗಲ | ಬೆಳಗಾವಿ |
| ೧೫೩ | ವಕ್ಕುಂದ | ಬೈಲಹೊಂಗಲ | ಬೆಳಗಾವಿ |
| ೧೫೪ | ದೊಡ್ಡವಾಡ | ಬೈಲಹೊಂಗಲ | ಬೆಳಗಾವಿ |
| ೧೫೫ | ಗೋಡಗೇರಿ | ಹುಕ್ಕೇರಿ | ಬೆಳಗಾವಿ |
| ೧೫೬ | ಗೋಕಾಕ | ಗೋಕಾಕ | ಬೆಳಗಾವಿ |
| ೧೫೭ | ಅಕ್ಕತಂಗೇರಹಾಳ | ಗೋಕಾಕ | ಬೆಳಗಾವಿ |
| ೧೫೮ | ತಿಗಡಿ | ಗೋಕಾಕ | ಬೆಳಗಾವಿ |
| ೧೫೯ | ರಾಯಭಾಗ | ರಾಯಭಾಗ | ಬೆಳಗಾವಿ |
| ೧೬೦ | ಐನಾಪುರ | ಅಥಣಿ | ಬೆಳಗಾವಿ |
| ೧೬೧ | ಹಳ್ಳಿಹಾಳ | ಅಥಣಿ | ಬೆಳಗಾವಿ |
| ೧೬೨ | ಹಾವೇರಿ | ಹಾವೇರಿ | ಹಾವೇರಿ |
| ೧೬೩ | ಹಾನಗಲ್ಲ | ಹಾವೇರಿ | ಹಾವೇರಿ |
| ೧೬೪ | ರಾಣೆಬೆನ್ನೂರ | ರಾಣೆಬೆನ್ನೂರ | ಹಾವೇರಿ |
| ೧೬೫ | ಹಂಸಭಾವಿ | ರಾಣೆಬೆನ್ನೂರ | ಹಾವೇರಿ |
| ೧೬೬ | ಹಲಗೇರಿ | ರಾಣೆಬೆನ್ನೂರ | ಹಾವೇರಿ |
| ೧೬೭ | ಹಿರೇಬಿದರಿ | ರಾಣೆಬೆನ್ನೂರ | ಹಾವೇರಿ |
| ೧೬೮ | ಮೋಟೆಬೆನ್ನೂರ | ಬ್ಯಾಡಗಿ | ಹಾವೇರಿ |
| ೧೬೯ | ಕಾಗಿನೆಲೆ | ಬ್ಯಾಡಗಿ | ಹಾವೇರಿ |
| ೧೭೦ | ವೀರಾಪುರ | ಶಿಗ್ಗಾಂವಿ | ಹಾವೇರಿ |
| ೧೭೧ | ಹುಲಸೋಗಿ | ಶಿಗ್ಗಾಂವಿ | ಹಾವೇರಿ |
| ೧೭೨ | ಕಲಕೇರಿ | ಹಿರೇಕೆರೂರ | ಹಾವೇರಿ |
| ೧೭೩ | ಹಿರೇಕೊಣತಿ | ಹಿರೇಕೆರೂರ | ಹಾವೇರಿ |
| ೧೭೪ | ಹಂಸಬಾವಿ | ಹಿರೇಕೆರೂರ | ಹಾವೇರಿ |
| ೧೭೫ | ರಟ್ಟಿಹಳ್ಳಿ | ಹಿರೇಕೆರೂರ | ಹಾವೇರಿ |
| ೧೭೬ | ಅಣಜಿ | ಹಿರೇಕೆರೂರ | ಹಾವೇರಿ |
| ೧೭೭ | ಆಲದಗೇರಿ | ಹಿರೇಕೆರೂರ | ಹಾವೇರಿ |
| ೧೭೮ | ನಿಡುನೇಗಿಲು | ಹಿರೇಕೆರೂರ | ಹಾವೇರಿ |
| ೧೭೯ | ತಿಳವಳ್ಳಿ | ಹಾನಗಲ್ | ಹಾವೇರಿ |
| ೧೮೦ | ಆಲೂರ | ಹಾನಗಲ್ | ಹಾವೇರಿ |

| | | | |
|---|---|---|---|
| ೧೮೧ | ಧಾರವಾಡ | ಧಾರವಾಡ | ಧಾರವಾಡ |
| ೧೮೨ | ನವಲಗುಂದ | ನವಲಗುಂದ | ಧಾರವಾಡ |
| ೧೮೩ | ಯಮನೂರ | ನವಲಗುಂದ | ಧಾರವಾಡ |
| ೧೮೪ | ಹೊಸೂರ | ನವಲಗುಂದ | ಧಾರವಾಡ |
| ೧೮೫ | ಗುಡಗೇರಿ | ಹುಬ್ಬಳ್ಳಿ | ಧಾರವಾಡ |
| ೧೮೬ | ಉಪ್ಪಿನಬೆಟಗೇರಿ | ಧಾರವಾಡ | ಧಾರವಾಡ |
| ೧೮೭ | ವುಡುಕಲ ಕಟ್ಟಿ | ಧಾರವಾಡ | ಧಾರವಾಡ |
| ೧೮೮ | ಅಮ್ಮಿನಭಾವಿ | ಧಾರವಾಡ | ಧಾರವಾಡ |
| ೧೮೯ | ಕುಂದಗೋಳ | ಧಾರವಾಡ | ಧಾರವಾಡ |
| ೧೯೦ | ಹೆಬ್ಬಳ್ಳಿ | ಧಾರವಾಡ | ಧಾರವಾಡ |
| ೧೯೧ | ಕಲಘಟಗಿ | ಕಲಘಟಗಿ | ಧಾರವಾಡ |
| ೧೯೨ | ಕಂದಲಿ | ಕಲಘಟಗಿ | ಧಾರವಾಡ |
| ೧೯೩ | ಮಿಶ್ರಿಕೋಟೆ | ಕಲಘಟಗಿ | ಧಾರವಾಡ |
| ೧೯೪ | ತಡಸ್ | ಕಲಘಟಗಿ | ಧಾರವಾಡ |
| ೧೯೫ | ಅಣ್ಣಿಗೇರಿ | ಗದಗ | ಗದಗ |
| ೧೯೬ | ಗದಗ | ಗದಗ | ಗದಗ |
| ೧೯೭ | ಹೊಳೆ ಆಲೂರ | ರೋಣ | ಗದಗ |
| ೧೯೮ | ಹೊಳೆ ಹಡಗಲಿ | ರೋಣ | ಗದಗ |
| ೧೯೯ | ಗಜೇಂದ್ರಗಡ | ರೋಣ | ಗದಗ |
| ೨೦೦ | ರೋಣ | ರೋಣ | ಗದಗ |
| ೨೦೧ | ನರೇಗಲ್ಲ | ರೋಣ | ಗದಗ |
| ೨೦೨ | ಹುಲಕೋಟಿ | ಗದಗ | ಗದಗ |
| ೨೦೩ | ನರಗುಂದ | ಗದಗ | ಗದಗ |
| ೨೦೪ | ನರಗುಂದ | ನರಗುಂದ | ಗದಗ |
| ೨೦೫ | ಬನ್ನಿಕೊಪ್ಪ | ಮುಂಡರಗಿ | ಗದಗ |
| ೨೦೬ | ಕಲಕೇರಿ | ಮುಂಡರಗಿ | ಗದಗ |
| ೨೦೭ | ಹಾರೂಗೇರಿ | ಮುಂಡರಗಿ | ಗದಗ |
| ೨೦೮ | ಡಂಬಳ | ಮುಂಡರಗಿ | ಗದಗ |
| ೨೦೯ | ಶಿರೂರ | ಮುಂಡರಗಿ | ಗದಗ |
| ೨೧೦ | ಲಕ್ಷ್ಮೇಶ್ವರ | ಶಿರಹಟ್ಟಿ | ಗದಗ |
| ೨೧೧ | ಮುಳಗುಂದ | ಶಿರಹಟ್ಟಿ | ಗದಗ |
| ೨೧೨ | ಕಡಕೋಳ | ಶಿರಹಟ್ಟಿ | ಗದಗ |
| ೨೧೩ | ಮಾಗಡಿ | ಶಿರಹಟ್ಟಿ | ಗದಗ |
| ೨೧೪ | ಕೊಟ್ಟೂರು | ಕೂಡ್ಲಿಗಿ | ಬಳ್ಳಾರಿ |
| ೨೧೫ | ಹೊಸಹಳ್ಳಿ | ಕೂಡ್ಲಿಗಿ | ಬಳ್ಳಾರಿ |
| ೨೧೬ | ಹಗರಿಬೊಮ್ಮನಹಳ್ಳಿ | ಹಗರಿಬೊಮ್ಮನಹಳ್ಳಿ | ಬಳ್ಳಾರಿ |
| ೨೧೭ | ಉಟಗಿ | ಹಗರಿಬೊಮ್ಮನಹಳ್ಳಿ | ಬಳ್ಳಾರಿ |
| ೨೧೮ | ಹರಪನಹಳ್ಳಿ | ಹರಪನಹಳ್ಳಿ | ಬಳ್ಳಾರಿ |
| ೨೧೯ | ದೊರಮಡಿ | ಸಂಡೂರು | ಬಳ್ಳಾರಿ |
| ೨೨೦ | ಸಂಡೂರು | ಸಂಡೂರು | ಬಳ್ಳಾರಿ |
| ೨೨೧ | ಯಶವಂತನಗರ | ಸಂಡೂರು | ಬಳ್ಳಾರಿ |
| ೨೨೨ | ಕೂಡ್ಲಿಗಿ | ಕೂಡ್ಲಿಗಿ | ಬಳ್ಳಾರಿ |
| ೨೨೩ | ಇಟಗಿ | ಹೂವಿನಹಡಗಲಿ | ಬಳ್ಳಾರಿ |
| ೨೨೪ | ಹಿರೇಹಡಗಲಿ | ಹೂವಿನಹಡಗಲಿ | ಬಳ್ಳಾರಿ |
| ೨೨೫ | ಕೊಂಬಳಿ | ಬಳ್ಳಾರಿ | ಬಳ್ಳಾರಿ |
| ೨೨೬ | ಅಂಬಳಿ | ಹಗರಿಬೊಮ್ಮನಹಳ್ಳಿ | ಬಳ್ಳಾರಿ |
| ೨೨೭ | ಮೈಲಾರ | ಹೂವಿನಹಡಗಲಿ | ಬಳ್ಳಾರಿ |

[illegible]

| | | | |
|---|---|---|---|
| ೨೨೮ | ಮೋರಿಗೇರಿ | ಹಗರಿಬೊಮ್ಮನಹಳ್ಳಿ | ಬಳ್ಳಾರಿ |
| ೨೨೯ | ಬುಕ್ಕಸಾಗರ | ಹೊಸಪೇಟೆ | ಬಳ್ಳಾರಿ |
| ೨೩೦ | ತೋರಣಗಲ್ಲ | ಹೊಸಪೇಟೆ | ಬಳ್ಳಾರಿ |
| ೨೩೧ | ಚೋರನೂರ | ಸಂಡೂರು | ಬಳ್ಳಾರಿ |
| ೨೩೨ | ಹೊಸಕೇರಿ | ಹಗರಿಬೊಮ್ಮನಹಳ್ಳಿ | ಬಳ್ಳಾರಿ |
| ೨೩೩ | ನಾಗೇನಹಳ್ಳಿ | ಹೊಸಪೇಟೆ | ಬಳ್ಳಾರಿ |
| ೨೩೪ | ಹೊಳಲು | ಹೂವಿನಹಡಗಲಿ | ಬಳ್ಳಾರಿ |
| ೨೩೫ | ಅಮರದೇವರಗುಡ್ಡ | ಕೂಡ್ಲಿಗಿ | ಬಳ್ಳಾರಿ |
| ೨೩೬ | ರಾಯಚೂರು | ರಾಯಚೂರು | ರಾಯಚೂರು |
| ೨೩೭ | ದೇವದುರ್ಗ | ದೇವದುರ್ಗ | ರಾಯಚೂರು |
| ೨೩೮ | ಜಾಲಹಳ್ಳಿ | ದೇವದುರ್ಗ | ರಾಯಚೂರು |
| ೨೩೯ | ಮುದಗಲ್ಲ | ಲಿಂಗಸುಗೂರು | ರಾಯಚೂರು |
| ೨೪೦ | ಕರಡಕಲ್ಲ | ಲಿಂಗಸುಗೂರು | ರಾಯಚೂರು |
| ೨೪೧ | ಕೊಪ್ಪಳ | ಕೊಪ್ಪಳ | ಕೊಪ್ಪಳ |
| ೨೪೨ | ಕುಷ್ಟಗಿ | ಕುಷ್ಟಗಿ | ಕೊಪ್ಪಳ |
| ೨೪೩ | ಕಿನ್ನಾಳ | ಕೊಪ್ಪಳ | ಕೊಪ್ಪಳ |
| ೨೪೪ | ಹಲಗೇರಿ | ಕೊಪ್ಪಳ | ಕೊಪ್ಪಳ |
| ೨೪೫ | ಆನೆಗೊಂದಿ | ಗಂಗಾವತಿ | ಕೊಪ್ಪಳ |
| ೨೪೬ | ಗಂಗಾವತಿ | ಗಂಗಾವತಿ | ಕೊಪ್ಪಳ |
| ೨೪೭ | ಕೆಸರಟ್ಟಿ | ಗಂಗಾವತಿ | ಕೊಪ್ಪಳ |
| ೨೪೮ | ಕಂಪ್ಲಿ | ಗಂಗಾವತಿ | ಕೊಪ್ಪಳ |
| ೨೪೯ | ಕಲ್ಲೂರ | ಯಲಬುರ್ಗಾ | ಕೊಪ್ಪಳ |
| ೨೫೦ | ಹನುಮಸಾಗರ | ಕುಷ್ಟಗಿ | ಕೊಪ್ಪಳ |

## ಕ್ಷೇತ್ರಕಾರ್ಯ ಮಾಡಿದ ಪ್ರಮುಖ ಸ್ಥಳಗಳು - ನಕ್ಷೆ



## ಅನುಬಂಧ - ೪

# ಗ್ರಂಥಋಣ


೧. **ಅರವತ್ತ ನಾಲ್ಕು ಕಲೆಗಳು :** ಮ. ಶ್ರೀಧರ ಮೂರ್ತಿ,
ಪ್ರಸಾರಾಂಗ, ಬೆಂ.ವಿ.ವಿ. ಬೆಂಗಳೂರು - ೧೯೭೪

೨. **ಆಟಿಕಳೆಂಜ :** ಡಾ. ಅರವಿಂದ ಮಾಲಗಿತ್ತಿ,
ಹೆಯಾಂಶು ಪ್ರಕಾಶನ, ಕಾಟಿಪಳ್ಳ - ೧೯೯೩

೩. **ಆಲೇಖ್ಯ :** ಡಾ. ಅ.ಲ. ನರಸಿಂಹನ್,
ಸಂಯೋಜಿತ, ಬೆಂಗಳೂರು - ೧೯೯೯

೪. **ಆರ್.ಎಂ. ಹಡಪದ :** ಪ್ರೊ. ಎಂ.ಎಚ್. ಕೃಷ್ಣಯ್ಯ,
ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು - ೨೦೦೦

೫. **ಡಾ. ಸೂರ್ಯನಾಥ ಕಾಮತ್ :** ದೇವರ ಕೊಂಡಾರೆಡ್ಡಿ, ಜಗನ್ನಾಥ ಎಸ್.ಎ.(ಸಂ),
ಇತಿಹಾಸ ದರ್ಶನ, - ೭, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು - ೧೯೯೨

೬. **ಎಂ.ಜಿ. ನಾಗರಾಜ :** ಪಿ.ವಿ. ಕೃಷ್ಣಮೂರ್ತಿ (ಸಂ), ಇತಿಹಾಸ ದರ್ಶನ, ೧೨
ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು - ೧೯೯೭

೭. **ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು :** ನಾಯಕ ಎನ್.ಆರ್. ಮತ್ತು ಶಾಂತಿ ನಾಯಕ (ಸಂ) :
ಪ್ರಸಾರಾಂಗ, ಕ.ವಿ.ವಿ. ಧಾರವಾಡ - ೧೯೭೯

೮. **ಐರಾವತ ನೋಂಪಿ :** ಡಾ. ಆರ್.ಸಿ. ಹಿರೇಮಠ (ಸಂ) :
ಪ್ರಸಾರಾಂಗ, ಕ.ವಿ.ವಿ. ಧಾರವಾಡ - ೧೯೭೪

೯. **ಕನ್ನಡ ವಿ.ವಿ. ಶಾಸನ, ಸಂಪುಟ -೧,೨,೩ :** ಡಾ. ದೇವರ ಕೊಂಡಾರೆಡ್ಡಿ,
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೮, ೧೯೯೯, ೨೦೦೦

೧೦. **ಕರ್ನಾಟಕ ದೇವಾಲಯ ಕೋಶ, ಬಳ್ಳಾರಿ ಜಿಲ್ಲೆ :** ಡಾ. ಕೆ.ಎಂ. ಸುರೇಶ, ವಾಸುದೇವ ಬಡಿಗೇರ, ಎಸ್.ವೈ. ಸೋಮಶೇಖರ, ಮಾಡಲಗೇರಿ ಕೊಟ್ರೇಶ್,
ಪ್ರಸಾರಾಂಗ, ಕನ್ನಡ.ವಿ. ಹಂಪಿ - ೧೯೯೯

೧೧. **ಕೃಷಿ ಪದಕೋಶ ಕರ್ನಾಟಕ ವೃತ್ತಿಪದ ಮಂಜರಿ - ೧ :** ಡಾ. ಕೆ.ವಿ. ನಾರಾಯಣ, ಇತರರು,
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೯

೧೨. **ಕರ್ನಾಟಕ ಭಿತ್ತಿಚಿತ್ರ ಪರಂಪರೆ :** ಡಾ. ಅ.ಲ. ನರಸಿಂಹನ್,
ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು - ೧೯೯೮

೧೩. **ಕಲೆ ಮತ್ತು ಹಬ್ಬ :** ಎಸ್.ಕೆ. ಹೂಗಾರ,
ಕನ್ನಡ ಅಧ್ಯಯನ ಪೀಠ, ಕ.ವಿ. ಧಾರವಾಡ - ೧೯೭೭

೧೪. **ಕರ್ನಾಟಕದ ಗ್ರಾಮ ದೇವತೆಗಳು :** ಡಿ. ಲಿಂಗಯ್ಯ,
ಐಬಿಎಚ್. ಪ್ರಕಾಶನ, ಬೆಂಗಳೂರು - ೧೯೮೪

೧೫. **ಕರ್ನಾಟಕದ ಜನಪದ ಗೀತೆಗಳು ಸಾಂಸ್ಕೃತಿಕ ಅಧ್ಯಯನ :** ನಂ. ತಪಸ್ವೀಕುಮಾರ,
ಪ್ರಸಾರಾಂಗ, ಮೈ.ವಿ.ವಿ. ಮೈಸೂರು - ೧೯೮೨

೧೬. **ಕರ್ನಾಟಕ ಕೋಟೆಗಳು -೧ :** ಡಾ. ಚೆನ್ನಬಸಪ್ಪ ಎಸ್. ಪಾಟೀಲ,
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೯

೧೭. **ಕಲೆಯ ದರ್ಶನ :** ಡಾ. ಶಿವರಾಮ ಕಾರಂತ,
ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು - ೧೯೮೨

೧೮. **ಕಲೆ ಎಂದರೇನು ? :** ಲಿಯೋ ಟಾಲ್‌ಸ್ಟಾಯ್, ಅನು. ಸಿ.ಪಿ. ಕೃಷ್ಣಕುಮಾರ್,
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು - ೨೦೦೦

೧೯. **ಕಲಾ ತತ್ವ :** ಡಾ. ದೇ. ಜವರೇಗೌಡ,
ಕುವೆಂಪು ವಿದ್ಯಾವರ್ಧಕ ಟ್ರಸ್ಟ, ಮೈಸೂರು - ೧೯೭೬

೨೦. **ಕುಮಾರವ್ಯಾಸ ಮತ್ತು ಜನಪದ :** ಪ್ರೊ. ಎಂ.ಆರ್. ಲಕ್ಷ್ಮೀದೇವಿ,
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು - ೧೯೯೭

೨೧. **ಕರ್ನಾಟಕದ ಕಲೆಗಳು -೧, ಭೂಮಿಕೆ :** ಪ್ರೊ. ಎಸ್.ಕೆ. ರಾಮಚಂದ್ರರಾವ್,
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - ೧೯೮೧

೨೨. **ಕರ್ನಾಟಕ ಸಾಂಸ್ಕೃತಿಕ ಸಮೀಕ್ಷೆ :** ಡಾ. ಎಚ್. ತಿಪ್ಪೇರುದ್ರಸ್ವಾಮಿ,
ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿ ಪುರಂ, ಮೈಸೂರು - ೧೯೯೭

೨೩. **ಕರ್ನಾಟಕದಲ್ಲಿ ಸತಿ ಪದ್ಧತಿ :** ಡಾ. ಬಿ.ಎಸ್. ಶೇಠೆ,
ಬೆಳಗಾವಿ ವೀರಶೈವ ಅಧ್ಯಯನ ಅಕಾಡೆಮಿ, ನಾಗನೂರು ರುದ್ರಾಕ್ಷಿಮಠ, ಬೆಳಗಾವಿ - ೧೯೯೧

೨೪. **ಕರಕುಶಲ ಕಲೆಗಳು :** ಡಿ. ಗಣೇಶ,
ನಿರ್ದೇಶಕರು, ಪ್ರಸಾರಾಂಗ, ಮೈ.ವಿ.ವಿ. ಮೈಸೂರು - ೧೯೮೨

೨೫. **ಕನ್ನಡ ಜಾನಪದ ಸಾಹಿತ್ಯ :** ಡಾ. ಬೆಟಗೇರಿ ಕೃಷ್ಣಶರ್ಮ,
ಪ್ರಸಾರಾಂಗ, ಕ.ವಿ.ವಿ. ಧಾರವಾಡ - ೧೯೭೬

೨೬. **ಕರ್ನಾಟಕ ಸಂಸ್ಕೃತಿ, ಪರಂಪರೆ ಹಬ್ಬಗಳು (ಭಾಗ-೧) :** ಎಸ್.ಎಸ್. ಹಿರೇಮಠ
ಸಮತಾ ಪ್ರಕಾಶನ, ಹರಪನ ಹಳ್ಳಿ - ೧೯೯೨

೨೭. **ಕನ್ನಡ ಜನಪದ ಕಲೆಗಳು :** ಗೊ.ರು. ಚೆನ್ನಬಸಪ್ಪ,
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - ೧೯೭೭

೨೮. **ಕರಕುಶಲ ಕಲೆಗಳು ; ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ -೨ :** ಕರಿಗೌಡ ಬೀಚನಹಳ್ಳಿ, (ಸಂ)
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೨೦೦೦

೨೯. **ಕರ್ನಾಟಕ ಚರಿತ್ರೆ, - ೧ :** ಪ್ರೊ. ಬಿ. ಷೇಕ್ ಅಲಿ, ಪ್ರೊ. ಅ. ಸುಂದರ,(ಸಂ)
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೭

೩೦. **ಕರ್ನಾಟಕ ಚರಿತ್ರೆ, - ೨ :** ಪ್ರೊ. ಬಿ. ಷೇಕ್ ಅಲಿ, ಪ್ರೊ. ಬಿ. ಸುಂದರರಾವ್,(ಸಂ)
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೭

೩೧. **ಕರ್ನಾಟಕ ಚರಿತ್ರೆ, - ೩ :** ಪ್ರೊ. ಬಿ. ಷೇಕ್ ಅಲಿ, ಪ್ರೊ. ಕೆ. ಎಸ್. ಶಿವಣ್ಣ,
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೭

೩೨. **ಕಲೆಯ ಅರ್ಥ :** ರವೀಂದ್ರನಾಥ ಟ್ಯಾಗೋರ್, ಅನುವಾದ - ಎಚ್.ಎಸ್. ಶ್ರೀಮತಿ,
ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು - ೧೯೮೮

೩೩. **ಕಲಾನುಭವ :** ವಿ. ಸೀತಾರಾಮಯ್ಯ,
ಬೆಂ.ವಿ.ವಿ. ಬೆಂಗಳೂರು - ೧೯೭೬

೩೪. **ಕರ್ನಾಟಕದ ಜನಪದ ಚಿತ್ರಕಲೆ :** ಡಾ. ಎಸ್.ಸಿ. ಪಾಟೀಲ,
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಸಂಸ್ಥಾನಮಠ, ಗದಗ - ೧೯೯೩

೩೫. **ಕರ್ನಾಟಕ ಜನಪದ ಕಲೆಗಳ ಕೋಶ :** ಹಿ.ಚಿ. ಬೋರಲಿಂಗಯ್ಯ,(ಸಂ)
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೬

೩೬. **ಕನ್ನಡ ಶಾಸನಶಿಲ್ಪ :** ಡಾ. ಡಿ.ವಿ. ಪರಮಶಿವಮೂರ್ತಿ,
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೯

೩೭. **ಕಲಾಕೋಶ :** ಪಿ.ಆರ್. ತಿಪ್ಪೇಸ್ವಾಮಿ,(ಸಂ)
ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು - ೧೯೯೪

೩೮. **ಕಲಾ ಪ್ರಪಂಚ :** ಡಾ. ಶಿವರಾಮ ಕಾರಂತ,
ಪ್ರಸಾರಾಂಗ, ಕ.ವಿ.ವಿ. ಧಾರವಾಡ -೧೯೭೮

೩೯. **ಕಳೆ-ಕಲೆ :** ಸೂರ್ಯಸಿಂಹಾಸನಾಧೀಶ್ವರ ಶ್ರೀ ಜ.ಚ.ನಿ. ಗೂಳೂರು,
ಜಗದ್ಗುರು ಶ್ರೀಶೈಲ ನಿಡುಮಾಮಿಡಿ ಪುಸ್ತಕ ಭಂಡಾರ, ಬೆಂಗಳೂರು - ೧೯೭೩

೪೦. **ಕರ್ನಾಟಕದ ಆಧುನಿಕ ಶಿಲ್ಪಕಲೆ :** ಕೆ.ವಿ. ಸುಬ್ರಹ್ಮಣ್ಯಂ,
ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು - ೧೯೯೩

೪೧. **ಕಲಾ ಸಂವೇದನೆಯ ಒಳನೋಟಗಳು :** ಕೆ.ವಿ. ಸುಬ್ರಹ್ಮಣ್ಯಂ,
ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು - ೧೯೯೭

೪೨. **ಕಿರಿಯರ ಕರ್ನಾಟಕ :** ಎಲ್.ಎಸ್. ಶೇಷಗಿರಿರಾವ್,(ಸಂ)
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೪

೪೩. **ಕಲಾವಿದರು ನಡೆದು ಬಂದ ದಾರಿ :** ಗ್ಯವೀಶ ಹಿರೇಮಠ,
ದಿ ಐಡಿಯಲ್ ಫೈನ್ ಆರ್ಟ್ಸ್, ಗುಲಬರ್ಗಾ - ೧೯೮೩

೪೪. **ಕಲಾವಿದನ ನೆನಪುಗಳು :** ಪಿ.ಆರ್. ತಿಪ್ಪೇಸ್ವಾಮಿ,
ಉದಯ ರವಿ ಪ್ರಿಂಟರ್ಸ್, ಮೈಸೂರು - ೧೯೯೬

೪೫. **ಕರ್ನಾಟಕದ ಲಂಬಾಣಿಗಳು, ಒಂದು ಸಾಂಸ್ಕೃತಿಕ ಅಧ್ಯಯನ :** ಪಿ.ಕೆ. ಖಂಡೋಬಾ,
ಪಿಎಚ್.ಡಿ. ಮಹಾಪ್ರಬಂಧ,(ಅಪ್ರಕಟಿತ) ಕ.ವಿ.ವಿ. ಧಾರವಾಡ - ೧೯೯೪

೪೬. **ಗದ್ದಿಗಿಮಠರ ಬರಹಗಳು :** ಡಾ. ಬಿ.ಎಸ್. ಗದ್ದಿಗಿಮಠ,
ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. ಮೈಸೂರು

೪೭. **ಗ್ರಾಮ ದೇವತೆಗಳು :** ಡಾ. ಎಸ್.ಪಿ. ಪಾಟೀಲ,
ಪಿಎಚ್.ಡಿ. ಮಹಾಪ್ರಬಂಧ,(ಅಪ್ರಕಟಿತ) ಕ.ವಿ.ವಿ. ಧಾರವಾಡ

೪೮. **ಗುಡ್ಡಾಪುರದ ದಾನಮ್ಮ :** ಸಿಂ.ಪಿ. ಲಿಂಗಣ್ಣ,
ವೀರಶೈವ ಭಾರತಿ ಪುಸ್ತಕ ಸಂಪದ, ಹುಬ್ಬಳ್ಳಿ - ೧೯೮೩

೪೯. **ಚಾಲುಕ್ಯ ವಾಸ್ತು ಶಿಲ್ಪ ವೈಭವ :** ಡಾ. ಕರವೀರಪ್ರಭು ಕ್ಯಾಲಕೊಂಡ,
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೭

೫೦. **ಚಿತ್ರ ಚಿತ್ತ :** ಚಿ.ಸು. ಕೃಷ್ಣಶೆಟ್ಟಿ,
ಇಳಾ ಪ್ರಕಾಶನ, ಬೆಂಗಳೂರು - ೨೦೦೦

೫೧. **ಚಿತ್ರ, ಶಿಲ್ಪ, ವಾಸ್ತುಕಲೆಗಳು :** ಡಾ. ಶಿವರಾಮ ಕಾರಂತ,
ಕನ್ನಡ ಅಧ್ಯಯನ ಪೀಠ, ವಿಶಾಷ ಉಪನ್ಯಾಸ ಮಾಲೆ - ೩, ಕ.ವಿ.ವಿ. ಧಾರವಾಡ

೫೨. **ಜನಪದ ಆರಾಧನೆ ಮತ್ತು ರಂಗಕಲೆ :** ಡಾ. ಸುಶೀಲಾ ಪಿ. ಉಪಾಧ್ಯಾಯ,
ಪ್ರಾದೇಶಿಕ ಜಾನಪದ ಮತು ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ - ೧೯೮೯

೫೩. **ಜಾನಪದ ವ್ಯಾಸಂಗ :** ಅರವಿಂದ ಮಾಲಗತ್ತಿ,
ಶೈಲ ಪ್ರಕಾಶನ, ಮುದ್ದೇಬಿಹಾಳ - ೧೯೮೫

೫೪. **ಜಾನಪದ ಗೀತೆಗಳು :** ಡಾ. ಕೆ. ಶಿವರಾಮ ಕಾರಂತ,
ಪ್ರಸಾರಾಂಗ, ಮೈ.ವಿ.ವಿ. ಮೈಸೂರು - ೧೯೭೧

೫೫. **ಜಾನಪದ ಬದುಕು :** ಕೆ. ಎಸ್. ಉಪಾಧ್ಯಾಯ,
ಕರ್ನಾಟಕ ಸಂಘ, ಕಿತ್ತೂರು - ೧೯೯೪

೫೬. **ಡಿ. ಜಿ. ಬಡಿಗೇರ :** ಪ್ರೊ. ಅನ್ನದಾನಿ ಹಿರೇಮಠ,
ಕರ್ನಾಟಕ ಲಲಿತ ಲಲಾ ಅಕಾಡೆಮಿ, ಬೆಂಗಳೂರು - ೧೯೮೩

೫೭. **ದೃಶ್ಯಕಲಾ ವಿಮರ್ಶೆ :** ಪ್ರೊ. ವಿ. ಜಿ. ಅಂದಾನಿ (ಸಂ),
ಕರ್ನಾಟಕ ಲಲಿತ ಲಲಾ ಅಕಾಡೆಮಿ, ಬೆಂಗಳೂರು - ೨೦೦೦

೫೮. **ದೇಗುಲ ರಥಶಿಲ್ಪಗಳು :** ಧ್ರುವರಾಜ ನಾ. ಗದಗಕರ,
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೯

೫೯. **ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ :** ತಾಪಿ ಧರ್ಮಾರಾವ್ (ಮೂಲ), ಎಸ್.ಆರ್. ಶಾಸ್ತ್ರಿ(ಅನು),
ನವಕರ್ನಾಟಕ ಪಬ್ಲಿಕೇಶನ್, ಲಿಮಿಟೆಡ್, ಬೆಂಗಳೂರು - ೧೯೮೩

೬೦. **ನಾನು ಧಾರ್ಮಿಕತೆಯನ್ನು ಕಲಿಸುತ್ತೇನೆ, ಧರ್ಮವನ್ನಲ್ಲ :** ಓಶೋ,
ಪಿ.ಎಸ್.ಆರ್. ಕಂಪ್ಯೂಟರ್ಸ್ ಆ್ಯಂಡ್ ಗ್ರಾಫಿಕ್ಸ್, ಪ್ರೈ.ಲಿಮಿಟೆಡ್, ಬೆಂಗಳೂರು - ೧೯೯೪

೬೧. **ಬಸವಣ್ಣನವರ ವಚನಗಳು :** ಡಾ. ಆರ್.ಸಿ. ಹಿರೇಮಠ (ಸಂ),
ಶ್ರೀ ಮುರಘಾಮಠ, ಧಾರವಾಡ - ೧೯೮೮

೬೨. **ಬಳ್ಳಾರಿ ಜಿಲ್ಲೆಯ ಮರದ ವಾಸ್ತು :** ಡಾ. ಸಿ. ಮಹಾದೇವ,
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೨೦೦೦

೬೩. **ಭಾರತದ ಹಬ್ಬ ಹರಿದಿನಗಳು :** ಪ್ರೊ. ಡಿ.ಟಿ. ರಂಗಸ್ವಾಮಿ,
ಸಮಾಜ ಪುಸ್ತಕಾಲಯ, ಧಾರವಾಡ - ೧೯೮೪

೬೪. **ಭಾರತೀಯ ಕಾವ್ಯ ಮೀಮಾಂಸೆ :** ತೀ.ನಂ. ಶ್ರೀಕಂಠಯ್ಯ,
ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ, ಬೆಂಗಳೂರು - ೧೯೫೩

೬೫. **ಬಾದಾಮಿ ಒಂದು ಸಾಂಸ್ಕೃತಿಕ ಅಧ್ಯಯನ :** ಡಾ. ಶೀಲಾಕಾಂತ ಪತ್ತಾರ,
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೨೦೦೦

೬೬. **ಭಾರತೀಯ ವಿದ್ಯೆ :** ಬಿ.ಎಸ್. ರಾಮಕೃಷ್ಣ ರಾವ್ (ಅನು),
ಭಾರತೀಯ ವಿದ್ಯಾಭವನ, ಬೆಂಗಳೂರು - ೧೯೮೭

[illegible]

೬೭. **ಭಾರತೀಯ ಪರಂಪರೆ :** ಜಿ.ಎಸ್. ಶಿವರುದ್ರಪ್ಪ,
ಪ್ರಸಾರಾಂಗ, ಬೆಂ.ವಿ.ವಿ. ಬೆಂಗಳೂರು - ೧೯೭೫

೬೮. **ಭಾರತೀಯ ಕಲೆ :** ಎನ್. ಮರಿಶಾಮಾಚಾರ್
ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು - ೨೦೦೧

೬೯. **ಬಿಜಾಪುರ ಜಿಲ್ಲೆಯ ಜಾತ್ರೆಗಳು, ಒಂದು ಅಧ್ಯಯನ :** ರಾಜೇಸಾಬ ಚಪ್ಪರಬಂದ,
ಪಿಎಚ್.ಡಿ.ಮಹಾಪ್ರಬಂಧ, ಅಪ್ರಕಟಿತ, ಕ.ವಿ.ವಿ. ಧಾರವಾಡ - ೧೯೯೮

೭೦. **ಬಿ.ಕೆ. ಹುಬ್ಬಳ್ಳಿ :** ಡಿ.ಎಸ್. ಚೌಗಲೆ
ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು - ೧೯೯೯

೭೧. **ಮಹಾಸತಿ ಆಚರಣೆ :** ಬಸವರಾಜ ಕಲ್ಗುಡಿ,
ಪ್ರಸಾರಾಂಗ, ಬೆಂ.ವಿ.ವಿ. ಬೆಂಗಳೂರು - ೧೯೮೫

೭೨. **ಮಲೆ ಕರ್ನಾಟಕದ ಅರಸು ಮನೆತನಗಳು :** ರಾಜಾರಾಂ ಹೆಗಡೆ, ಅಶೋಕ ಶೆಟ್ಟರ್ (ಸಂ),
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೨೦೦೧

೭೩. **ಮೂರ್ತಿಶಿಲ್ಪ, ನೆಲೆ ಹಿನ್ನೆಲೆ :** ಎಸ್. ಕೆ. ರಾಮಚಂದ್ರರಾವ್,
ಪ್ರಸಾರಾಂಗ, ಬೆಂ.ವಿ.ವಿ. ಬೆಂಗಳೂರು - ೧೯೭೫

೭೪. **ರತ್ನತ್ರಯರು ಮತ್ತು ಜಾನಪದ :** ಡಾ. ಸರಸ್ವತಿ ವಿಜಯಕುಮಾರ,
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು - ೧೯೯೭

೭೫. **ರಾಶಿ ಬುತ್ತಿ :** ವೀರೇಶ ಬಡಿಗೇರ,
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೬

೭೬. **ವಜ್ರದೀಪ್ತಿ :** ಪ್ರೊ. ಬಿ.ಎಸ್. ಕಣವಿ (ಸಂ),
ವಜ್ರಮಹೋತ್ಸವ ಕೇಂದ್ರೀಯ ಮಂಡಳಿ, ಕರ್ನಾಟಕ ಕಾಲೇಜ, ಧಾರವಾಡ - ೧೯೭೮

೭೭. **ವಾಲೀಕಾರ ಚೆನ್ನಣ್ಣನ ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ :** ಡಾ. ಚೆನ್ನಣ್ಣ ವಾಲೀಕಾರ,
ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲಬರ್ಗಾ - ೧೯೯೮

೭೮. **ವೀರಗಲ್ಲುಗಳು :** ಡಾ. ಬಿ.ಆರ್. ಹಿರೇಮಠ,
ಕ.ವಿ.ವಿ. ಧಾರವಾಡ - ೧೯೭೬

೭೯. **ವಿಶ್ವಕನ್ನಡ, ಸಂಪುಟ - ೩ :** ಎನ್.ಎಸ್. ರಾಮಪ್ರಸಾದ್ (ಸಂ),
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು - ೧೯೮೬

೮೦. **ವಿಜಯನಗರ ಗಾರೆ ಶಿಲ್ಪ :** ಡಾ. ಸಿ. ಮಹದೇವ,
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೨೦೦೦

೮೧. **ವೀರಭದ್ರದೇವರು ; ಒಂದು ಸಾಂಸ್ಕೃತಿಕ ಅಧ್ಯಯನ :** ವಿ. ಜಿ. ಹಿರೇಮಠ,
ಪ್ರಸಾರಾಂಗ, ಕ.ವಿ.ವಿ. ಧಾರವಾಡ - ೧೯೯೪

೮೨. **ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ :** ಡಾ. ಚೆನ್ನಕ್ಕ ಎಲಿಗಾರ,
ಪ್ರಸಾರಾಂಗ, ಕ.ವಿ.ವಿ. ಧಾರವಾಡ - ೧೯೯೦

೮೩. **ಶಿಲ್ಪಾದರ್ಶ, ಸಂಪುಟ - ೧ :** ಜಿ. ಜ್ಞಾನಾನಂದ,
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೨೦೦೦

೮೪. **ಸರ್ವಜ್ಞ ಮತ್ತು ಜಾನಪದ :** ಡಾ. ಜಿ.ವಿ. ದಾಸೇಗೌಡ,
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು - ೧೯೯೭

೮೫. **ಸುವರ್ಣ ಜಾನಪದ, ಸಂಪುಟ -೧,೨ :** ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಹಿ.ಶಿ. ರಾಮಚಂದ್ರೇಗೌಡ, ಡಾ. ಕೃಷ್ಣಮೂರ್ತಿ ಹನೂರು (ಸಂ),
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು - ೧೯೯೭

೮೬. **ಸೌಂದರ್ಯ ಮತ್ತು ಕಲೆ :** ಡಾ. ಕೆ.ಬಿ. ಕೃಷ್ಣಕುಮಾರ ರಾವ್,
ಪ್ರಸಾರಂಗ, ಮೈ.ವಿ.ವಿ. ಮೈಸೂರು - ೧೯೭೧

೮೭. **ಸಂಸ್ಕೃತಿ :** ಡಿ. ವಿ. ಜಿ.
ಕಾವ್ಯಾಲಯ ಪ್ರಕಾಶನ, ಮೈಸೂರು - ೧೯೮೫

೮೮. **ಸೌಂದರ್ಯ ಸಮೀಕ್ಷೆ :** ಜಿ. ಎಸ್. ಶಿವರುದ್ರಪ್ಪ,
ಪ್ರಸಾರಂಗ, ಮೈ.ವಿ.ವಿ. ಮೈಸೂರು - ೧೯೬೦

೮೯. **ಹರಿಹರನ ರಗಳೆಗಳು, ಒಂದು ಸಾಂಸ್ಕೃತಿಕ ಅಧ್ಯಯನ :** ಡಾ. ಸದಾನಂದ ಪಾಟೀಲ,
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಸಂಸ್ಥಾನ ಮಠ, ಗದಗ - ೧೯೯೯

೯೦. **ದೃಶ್ಯಕಲಾ ಮೀಮಾಂಸೆ :** ಶಿವಾನಂದ ಎಚ್. ಬಂಟನೂರ (ಸಂ),
ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು - ೧೯೯೯

೯೧. **ಕನ್ನಡ ಜಾನಪದ ಕೆಲವು ಮುಖಗಳು :** ಟಿ.ಎಸ್. ಸತ್ಯನಾಥ,
ಶಾರದಾ ಪ್ರಕಾಶನ, ಬೆಂಗಳೂರು - ೧೯೮೮

೯೨. **ಕರ್ನಾಟಕದ ಜಾತ್ರೆಗಳು :** ಹಂ.ಪ. ನಾಗರಾಜಯ್ಯ,
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - ೧೯೮೫

೯೩. **ದೇವಾಲಯ ವಾಸ್ತುಶಿಲ್ಪ, ಪರಿಚಯ :** ಕೂ.ಸ. ಅಪರ್ಣ,
ಕನ್ನಡ ವಿ.ವಿ. ಹಂಪಿ - ೧೯೯೯

೯೪. **ಜಾನಪದ ಜೀವಾಳ :** ಮ.ಗು. ಬಿರಾದಾರ,
ಪುಸ್ತಕ ಅಕಾಡೆಮಿ, ಕಲಬುರಗಿ - ೧೯೮೭

೯೫. **ಜಾನಪದ ಗಂಗೋತ್ರಿ :** ಕರೀಂಖಾನ್ ಎಸ್.ಕೆ. (ಸಂ),
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು - ೧೯೮೮

೯೬. **ನಂಬಿಕೆಗಳು :** ಕೃಷ್ಣ ಮಾಸಡಿ,
ಅಕ್ಷರ ಪ್ರಕಾಶನ, ಹೆಗ್ಗೋಡು - ೧೯೮೬

೯೭. **ಸಂಶೋಧನ :** ಲಕ್ಷ್ಮಣ ತೆಲಗಾವಿ,
ಡಾ. ಎಂ. ಚಿದಾನಂದ ಮೂರ್ತಿ ಅಭಿನಂದನ, ಬೆಂಗಳೂರು - ೧೯೯೧

೯೮. **ಬುಡಬುಡಕೆಯವರು :** ನಿಂಗಣ್ಣ ಸಣ್ಣಕ್ಕಿ,
ಐ.ಬಿ.ಎಚ್. ಪ್ರಕಾಶನ, ಬೆಂಗಳೂರು - ೧೯೮೦

೯೯. **ವಿಜಾಪುರ ಜಿಲ್ಲೆಯ ಜಾನಪದ ದರ್ಶನ :** ಸಾ.ಮ. ಹುಂಡೇಕಾರ,
ಜಿಲ್ಲಾ ಸಾಹಿತ್ಯ ಸಂಸ್ಕೃತಿ, ವಿಜಾಪುರ - ೧೯೮೫

೧೦೦. **ಕರ್ನಾಟಕದ ಕರಕುಶಲ ಕಲೆಗಳು :** ಚಂದ್ರಶೇಖರಯ್ಯ ಬಿ. ಎಂ.
ಐ.ಬಿ.ಎಚ್. ಪ್ರಕಾಶನ, ಬೆಂಗಳೂರು - ೧೯೮೩

೧೧೧. ಆನಂದ ಕುಮಾರಸ್ವಾಮಿ : ಕೆ. ಎಸ್. ಶ್ರೀನಿವಾಸಮೂರ್ತಿ,
ಅಕ್ಷರ ಪ್ರಕಾಶನ, ಹೆಗ್ಗೋಡು - ೧೯೯೫

೧೧೨. ಕನ್ನಡ ವಿಶ್ವಕೋಶ (ಸಂಪುಟಗಳು) : ಹಾ. ಮಾ. ನಾಯಕ,
ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. ಮೈಸೂರು - ೧೯೭೪

## ಇಂಗ್ಲೀಷ ಗ್ರಂಥಗಳು

೧೧೩. **Folk Art of Bengal :** Ajitkumar Mukarji,
University of Calcutta - 1939

೧೧೪. **Contemporary Art in India, A Perpective :** Pran Nath Mago,
National Book Trust of India - 2000

೧೧೫. **Hindu Gods and Crafts of Karnataka :** Dr. Madhu Upadhya,
U.B.S. Publication & Distributors Ltd. Gandhi Nagar, Bangalore - 1996

೧೧೬. **Inviting Death - Historical Experiments in Sepulchral Hill :** S. Settar,
Institute of Indian History Publications, K.U. Dharwad - 1986

೧೧೭. **Indian Painting :** Percy Brown,
V.M.C.A. Publishing House, 5 Russell Street, Calcutta - 1960

೧೧೮. **Pursing Death - Philosophy & Practice of Voluntary Termination of Life :** S. Settar,
Institute of Indian History Publications, K.U. Dharwad - 1990

೧೧೯. **Sixty Four Arts in Anxien India :** Anil Baran Ganguly,
The English Book Store, New Delhi - 1962

೧೨೦. **The Karnatak Theatre :** Ranganath H. K.
K.U. Dharwad - 1960

೧೨೧. **The Meaning of Art :** Herbert Read,
Harmonds Worth, Pengun - 1961

೧೨೨. **The Glory of Indian Handycrafts :** Kamaladevi Chattopadhya,
Clarion Books, C-36, Connaught, New Delhi - 1985

೧೨೩. **Sculptural Art of Hampi :** Dr. K. M. Suresh,
Directorate of Archaeology & Museums, Mysore - 1998

೧೨೪. **The Indian Magazine Vol. 12 :** Malavika Mitra (Ed),
New Delhi - 1991

೧೨೫. **Fine Arts in Ancient India :** Ganguli Anibaran,
Abinava, New Delhi - 1979

೧೨೬. **Bidar, Its History & Monuments :** Yazdani G.
Hyderabad - 1947

## ಲೇಖನಗಳು

೧೧೭. **ಪರಂಪರೆಯ ಸೊಗಸಿನ ದೀವಿಗೆಗಳು :** ಎನ್. ಸಿ. ದೇಸಾಯಿ,
( ಸುಧಾ ೧೧ ನವೆಂಬರ್ ೧೯೯೯ )

೧೧೮. **ಗಾರೆ ಗೊಂಬೆಗಳು :** ನಿರಂಜನ ವಾನಳ್ಳಿ,
( ಸುಧಾ ೨೩ ನವೆಂಬರ್ ೧೯೯೭ )

೧೧೯. **ಜನಪದ ದೃಶ್ಯಕಲೆಗಳ ಅಧ್ಯಯನದ ಅಗತ್ಯ ಮತ್ತು ಪ್ರಸ್ತುತತೆ :** ಶಿವಾನಂದ ಎಚ್. ಬಂಟನೂರ,
( ಕಲಾ ವಾರ್ತೆ, ೧೯೯೯ )

೧೨೦. **ಸಮಕಾಲಿನ ಶಿಲ್ಪಕಲೆ, ಮೈವಳಿಕೆ :** ಶಿವಾನಂದ ಎಚ್. ಬಂಟನೂರ,
( ಚಿತ್ರಾಕ್ಷರ, ಸಂಪುಟ -೧, ಸಂಚಿಕೆ - ೨ )

೧೨೧. **ತೊಗಲು ಗೊಂಬೆ ಪ್ರದರ್ಶನ ಕಲೆಯ ಸ್ವಾರಸ್ಯಕರ ಪ್ರಕಾರ :** ಗೊ. ರು. ಚೆನ್ನಬಸಪ್ಪ,
( ಪ್ರಜಾವಾಣಿ ವಿಶೇಷಾಂಕ, ೧೯೮೬ )

೧೨೨. **ಉಡಿಗೆ ತೊಡಿಗೆ ಪೂರ್ವ ಕಥೆ :** ವಿಜಯಾ,
( ಸುಧಾ, ೧೭ ಫೆಬ್ರುವರಿ ೧೯೭೪ )

೧೨೩. **ಕೊಲಾಜ್ ಕಲೆ ; ತೌಲನಿಕ ವಿಶ್ಲೇಷಣೆ :** ಶಿವಾನಂದ ಎಚ್. ಬಂಟನೂರ,
( ಆರ್ಟಗುಲ್, ಮಾರ್ಚ ೨೦೦೦ )

೧೨೪. **ಅಮೋಘಸಿದ್ಧನ ಹೇಳಿಕೆಗಳು :** ಎಸ್. ಸಿ. ಪಾಟೀಲ,
( ಅನುವಾದ ಪದ - ೧೯೮೯ )

೧೨೫. **ರಥ, ಸಾವಿರ ವರ್ಷಗಳ ಇತಿಹಾಸ :** ಪಿ. ಆರ್. ತಿಪ್ಪೇಸ್ವಾಮಿ,
( ಪ್ರಜಾವಾಣಿ ದೀಪಾವಳಿ ವಿಶೇಷಾಂಕ, ೧೯೯೫ )

೧೨೬. **ಒಕ್ಕಲಿಗನ ನಂಬಿಕೆಗಳು :** ವಿ. ಶಿವಾನಂದ,
( ಜಾನಪದ ಜಗತ್ತು, ಸೆಪ್ಟೆಂಬರ್ ೧೯೮೦ )

೧೨೭. **ಜಾನಪದ ಸಾಹಿತ್ಯದಲ್ಲಿ ನಂಬಿಕೆಗಳು :** ಮಲ್ಲಿಕಾರ್ಜುನ ಕಂಬಾರ,
( ಪ್ರಪಂಚ, ೧೬ ಜನೇವರಿ ೧೯೮೩ )

೧೨೮. **ಘತ್ತರಗಿ ಭಾಗಮ್ಮ :** ಮೋಹನರಾಂ,
( ಲಂಕೇಶ ಪತ್ರಿಕೆ, ೧೭ ಎಪ್ರೀಲ್ ೧೯೮೧ )

೧೨೯. **ದುರಗಮುರಗಿಯವರ ಸಂಸ್ಕೃತಿ :** ಗೀತಾ ನಾಗಭೂಷಣ,
ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೩

೧೩೦. **ಪಶುಗಳ ಹಬ್ಬ ಆಣೀ ಪೀಣೀ :** ಶಂಕರ ಬೈಚಬಾಳ,
( ಸಂಯುಕ್ತ ಕರ್ನಾಟಕ, ಅಕ್ಟೋಬರ್ ೧೯೯೭ )

೧೩೧. **ಬುರು ಬುರು ಪೋಚಮ್ಮಗಳು :** ಅರ್ಜುನ ಗೊಳಸಂಗಿ,
( ಸಂಯುಕ್ತ ಕರ್ನಾಟಕ, ೩ ಜನೇವರಿ ೧೯೯೩ )

೧೩೨. **ಕಾರ ಹುಣ್ಣಿಮೆಯ ಓಕುಳಿ :** ಮೋಹನ ಕಳಸದ,
( ಸಂಯುಕ್ತ ಕರ್ನಾಟಕ, ೧೨ ಜೂನ್ ೧೯೯೪ )

## ಅರ್ಥಕೋಶ - ವಿಶ್ವಕೋಶ - ಗೆಜೆಟೀಯರುಗಳು


೧೩೩. ಕನ್ನಡ ಜ್ಞಾನಗಂಗೋತ್ರಿ ಸಂಪುಟಗಳು

೧೩೪. ಕನ್ನಡ ನಿಘಂಟು

೧೩೫. ಕಸ್ತೂರಿ ಕೋಶ

೧೩೬. ಕರ್ನಾಟಕ ಕನ್ನಡ ವಿಶ್ವಕೋಶ

೧೩೭. ಕರ್ನಾಟಕ ರಾಜ್ಯ ಗೆಜೆಟೀಯರ್ - ೧೯೮೬

೧೩೮. ಧಾರವಾಡ ಜಿಲ್ಲಾ ಗೆಜೆಟೀಯರ್ - ೧೯೯೬

೧೩೯. ಬಿಜಾಪುರ ಜಿಲ್ಲಾ ಗೆಜೆಟೀಯರ್ - ೨೦೦೦

೧೪೦. ಗುಲಬರ್ಗಾ ಜಿಲ್ಲಾ ಗೆಜೆಟೀಯರ್ - ೨೦೦೦

೧೪೧. **Encyclopaedia Britanica ( Vol. 26, 14 )**

೧೪೨. **Chamber's Encyclopaedia ( New Edition, Vol. XIII )**

೧೪೩. **Kittel's Kannada English Dictonary**

೧೪೪. **Indian Antiquary Volumes, Engraphiacarnatica Volumes**

೧೪೫. **The New Encyclopaedia Britanica Micropaedia ( Vol. IX )**

೧೪೬. **The Standard Dictonary of Folklore**

೧೪೭. **New Webster's New 20th Century Dictonary**